ಹರಿಹರದೇವ ಕೃತ

ಗಿರಿಜಾಕಲ್ಯಾಣ ಪ್ರಬಂಧಂ

ಸಂಪಾದಕ:

ಡಾ. ಶಿ. ಚೆ. ನಂದೀಮಠ, ಎಂ. ಎ., ಪಿಎಚ್. ಡಿ. (ಲಂಡನ್)

೧೯೬೮

ಟಿ. ಕೆ. ಸುಬ್ರಹ್ಮಣ್ಯ ಭಟ್ಟ.

ಹರಿಹರದೇವ ಕೃತ

ಗಿರಿಜಾ ಕಲ್ಯಾಣ ಪ್ರಬಂಧಂ

ಸಂಪಾದಕ:

ಶಿ. ಚೆ. ನಂದೀಮಠ, ಎಮ್. ಎ., ಪಿಎಚ್.ಡಿ. (ಲಂಡನ್)

೧೯೬೮

ಪ್ರಕಾಶಕರು :
ಡಾ. ಶಿ. ಚೆ. ನಂದೀಮಠ,
ಕರ್ನಾಟಕ ವಿಶ್ವವಿದ್ಯಾಲಯ,
ಧಾರವಾಡ- ೩

*

ಪ್ರತಿಗಳು : ೧೦೦೦

ಬೆಲೆ : ಹನ್ನೆರಡು ರೂಪಾಯಿ

*

ಮುದ್ರಕರು :
ಶ್ರೀ ಪಿ. ಯು. ಕೋರೆ, ಎಂ. ಎ., ಬಿ. ಟಿ.
ಸುಪರಿಂಟೆಂಡೆಂಟ
ತೋಂಟದಾರ್ಯ ಮುದ್ರಣಾಲಯ,
(ಕಿಲ್ಲೆ) ಧಾರವಾಡ-೧

ಟಿ.ಕೆ. ಸುಬ್ರಹ್ಮಣ್ಯ ಭಟ್.

ಅರ್ಪಣೆ

★

ಮಾತೆಯ ಅಡಿದಾವರೆಗೆ

या मामाजन्मविनयत्यतिदुःखमार्गैः
आ संसिद्धैः स्वकलितैर्ललितैर्विलासैः
या मे बुद्धिं सुविदधे सततं धरण्याम्
साम्ब त्वत्पादयुगलं शरणंप्रपद्ये ॥

ನಿವೇದನ

ಭಾರತೀಯ ಭಾಷೆಗಳು ಅತಿ ಪ್ರಾಚೀನವಾದುವೆಂಬುದು ವಿಶ್ವವಿದಿತವಾದ ವಿಷಯ. ಪ್ರತಿಯೊಂದು ಭಾರತೀಯ ಭಾಷೆಯಲ್ಲಿ ಉತ್ತಮವಾದ ಪ್ರಾಚೀನ ಗ್ರಂಥರಾಶಿಯಿದೆ. ಪ್ರಾಚೀನ ಗ್ರಂಥಗಳಲ್ಲಿ ಕೆಲವನ್ನು ಮುದ್ರಿಸಿ ಪ್ರಕಟಿಸಲಾಗಿದೆಯಾದರೂ ಹಲಕೆಲವು ಕಾರಣಗಳ ಮೂಲಕ ಅವು ಅವನ್ನು ರಚಿಸಿದ ಕವಿಗಳ ಮೂಲ ಪಾಠಗಳನ್ನು ಪೂರ್ಣವಾಗಿ ಇಟ್ಟುಕೊಂಡಿವೆಯೆಂದು ಹೇಳಲು ಬರುವುದಿಲ್ಲ. ಅವನ್ನು ಪರಿಷ್ಕರಿಸಿ ಸಾಧ್ಯವಾದ ಮಟ್ಟಿಗೆ ಮೂಲವನ್ನು ಕಂಡು ಹಿಡಿಯುವದು ಅಗತ್ಯವದೆ. ಈ ಮಾತು ನಮ್ಮ ಕನ್ನಡ ಪ್ರಾಚೀನ ಗ್ರಂಥಗಳಿಗೆ ಹೆಚ್ಚಾಗಿ ಅನ್ವಯಿಸುವದು. ಪ್ರಾಚೀನ ಗ್ರಂಥಗಳ ಮೂಲ ಪಾಠವನ್ನು ನಿರ್ಣಯಿಸುವದು ಆ ಗ್ರಂಥಗಳ ಭಾಷೆಯ ಮತ್ತು ಆ ಭಾಷೆಯನ್ನಾಡುವ ಜನತೆಯ ಸಂಸ್ಕೃತಿಯ ದೃಷ್ಟಿಯಿಂದ ಮಹತ್ವವಾದುದು. ಆದುದರಿಂದ ಪ್ರಾಚೀನ ಕನ್ನಡ ಗ್ರಂಥಗಳನ್ನು ಗ್ರಂಥಪರಿಷ್ಕರಣ ಶಾಸ್ತ್ರಕ್ಕನುಸರಿಸಿ, ಪರಿಶೋಧಿಸಿ, ಪ್ರಸಿದ್ಧಿಸುವ ಕಾಲ ಸನ್ನಿಹಿತವಾಗಿದೆ. ಈ ಕಾರ್ಯ ಬಲು ಗುರುತರವಾದುದು. ಆದರೂ ಈ ದಿಶೆಯಲ್ಲಿ ಯತ್ನ ನಡೆಯುವದು ಅಗತ್ಯವಾದುದಾಗಿದೆ. ಈ ಗುರಿಯನ್ನಿಟ್ಟುಕೊಂಡು ಕನ್ನಡದ ಸೀಮಾಪುರುಷರಲ್ಲೊಬ್ಬನಾದ ಹರಿಹರದೇವನ ಗಿರಿಜಾಕಲ್ಯಾಣವನ್ನು ಸಂಪಾದಿಸುವ ಕಾರ್ಯವನ್ನು ಬಹುದಿನಗಳ ಹಿಂದೆ ಕೈಕೊಳ್ಳಲಾಯಿತು. ಆದರೆ ಆಕಸ್ಮಿಕವಾಗಿ ಪ್ರಾಪ್ತವಾದ ಅನಿವಾರಿತ ಅಡೆತಡೆಗಳಿಂದ ಇಟ್ಟುಕೊಂಡ ಧ್ಯೇಯ ಈಡೇರುವ ಲಕ್ಷಣ ತೋರಲಿಲ್ಲ. ಅಲ್ಪಸ್ವಲ್ಪವಾದರೂ ಈ ದಿಶೆಯಲ್ಲಿ ಕ್ರಮಿಸಿದ ಮಾರ್ಗ ಉಳಿಯಲೆಂದು ಈ ಗ್ರಂಥವನ್ನು, ಅಪೂರ್ಣವಾಗಿದೆಯೆಂದು ಗೊತ್ತಿದ್ದರೂ ಪ್ರಸಿದ್ಧಿಸುವ ಸಾಹಸಕ್ಕೊಳಗಾಗಬೇಕಾಯಿತು.

ಹರಿಹರದೇವನು ಶರಣಕವಿ. ತನ್ನ ಜೀವಿತಾವಧಿಯನ್ನೆಲ್ಲ ಶಿವನ ಮತ್ತು ಶಿವಶರಣರ ಮಹಿಮೆಯನ್ನು ಹಾಡುವುದರಲ್ಲಿ ವಿನಿಯೋಗಿಸಿರುವನು. ಕನ್ನಡ ಸಾಹಿತ್ಯಕ್ಕೆ ಅವನಿಂದಾದ ಉಪಕಾರ ಅಪಾರವಾಗಿದೆ. ಸುದೈವದಿಂದ ಅದು ಈಗ ಬೆಳಕಿಗೆ ಬರಹತ್ತಿದೆ. ಅವನ ಮಹತ್ವದ ಕೃತಿಗಳು ಈಗ ಉಪಲಬ್ಧವಾಗಿ ಸಾಹಿತ್ಯ ಕ್ಷೇತ್ರದಲ್ಲಿದ್ದ ಅವನ ಘನತೆ ಸ್ಪಷ್ಟವಾಗುತ್ತಲಿದೆ. ಜನತೆಯಲ್ಲಿ ವಿಶೇಷವಾಗಿ ಕನ್ನಡ ಪಂಡಿತರಲ್ಲಿ ಅವನ ಕೃತಿಗಳನ್ನು ಅಭ್ಯಸಿಸಬೇಕೆಂಬ ಜಿಜ್ಞಾಸೆ ಹೆಚ್ಚುತ್ತಲಿದೆ. ಕನ್ನಡನಾಡಿನ ವಿಶ್ವವಿದ್ಯಾಲಯಗಳಲ್ಲಿ ಉಚ್ಚಪದವಿ ಪರೀಕ್ಷೆಗಳ ವ್ಯಾಸಂಗಕ್ಕಾಗಿ ಅವನ್ನು ಪಠ್ಯಪುಸ್ತಕಗಳೆಂದು ನಿಯಮಿಸುತ್ತಲಿದ್ದಾರೆ. ಇಂತಹ ಸಮಯದಲ್ಲಿ ಅವನ ಕೃತಿಗಳಲ್ಲೊಂದಾದ ಗಿರಿಜಾಕಲ್ಯಾಣ ಮಹಾಪ್ರಬಂಧವನ್ನು ದೊರೆತಷ್ಟು ಕೈಬರೆಹದ ಪ್ರಾಚೀನ ಪ್ರತಿಗಳ ಸಹಾಯದಿಂದ ಸಂಶೋಧಿಸಿ ಪ್ರಸಿದ್ಧಿಸುವ ಬಹು

ಕಾಲದಿಂದ ಮನಸೆಮಾಡಿದ ನಮ್ಮ ಮನೀಷೆಗೆ ಈಗ ಕೆಲಮಟ್ಟಿಗಾದರೂ ಮೂರ್ತ ಸ್ವರೂಪ ಬಂದಿದೆಯೆಂದು ಸಂತೋಷ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ಎಮ್. ಎ. ಪರೀಕ್ಷೆಗಾಗಿ ಈ ಕಾವ್ಯದ ಮೂಲವನ್ನಷ್ಟೇ ಪ್ರಸಿದ್ಧಿಸಲಾಗಿತ್ತು. ಈಗ ಪ್ರಸ್ತಾವನೆ, ಕಠಿಣ ಶಬ್ದಗಳ ಲಘುಕೋಶ ಮೊದಲಾದವುಗಳನ್ನು ಜೋಡಿಸಿ, ಪಾಠಾಂತರಗಳನ್ನು ಸರಿಪಡಿಸಿ, ಮೂಲವನ್ನು ಸಾಧ್ಯವಾದ ಮಟ್ಟಿಗೆ ಸಂಶೋಧಿಸಿ ಮುದ್ರಿಸಲಾಗಿದೆ. ಆದರೂ ಹೆಚ್ಚು ಮಾತೃಕೆಗಳ ಸಹಾಯದಿಂದ ಇದನ್ನು ಇನ್ನೂ ಸರಿಯಾಗಿ ಪರಿಶೋಧಿಸಿ ಕವಿಯ ಮೂಲ ಪಾಠಗಳನ್ನು ನಿರ್ಣಯಿಸಲು ಬಹಳ ಶ್ರಮಪಡಬೇಕಾಗಿದೆ. ನಮ್ಮ ಈ ಪ್ರಯತ್ನ ಈ ದಿಸೆಯಲ್ಲಿ ಮೊದಲನೆಯ ಹೆಜ್ಜೆಯಾಗಿದೆಯೆಂದು ನಿವೇದಿಸುವೆವು.

ಪ್ರಾಚೀನ ಸಾಹಿತ್ಯವನ್ನು ಸಂಶೋಧಿಸಲು ಕೈಬರೆಹದ ಹಳೆಯ ಪ್ರತಿಗಳ ಅವಶ್ಯಕತೆ ವಿಶೇಷವಾಗಿದೆ. ನಾವು ಗಿರಿಜಾಕಲ್ಯಾಣ ಮಹಾಪ್ರಬಂಧವನ್ನು ಸಂಪಾದಿಸುವ ಕಾರ್ಯವನ್ನು ಕೈಕೊಂಡಿರುವದನ್ನು ಕೇಳಿ ಸ್ವಸಂತೋಷದಿಂದ ಅನೇಕ ಮಹನೀಯರು ತಮ್ಮಲ್ಲಿರುವ ಕಾಗದ ಮತ್ತು ತಾಡವೋಲೆಯ ಪ್ರತಿಗಳನ್ನು ಎರವಾಗಿ ಕೊಟ್ಟು ಚಿರಋಣಿಯನ್ನಾಗಿ ಮಾಡಿರುವರು. ಅವರ ಹೆಸರುಗಳನ್ನು ಅವರಿಂದ ದೊರೆತ ಪ್ರತಿಗಳ ಸ್ವರೂಪವನ್ನೂ ಮಾತೃಕೆಗಳ ವರ್ಣನೆಯಲ್ಲಿ ವಿವರಿಸಲಾಗಿದೆ. ಅವರೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಬಹುದಿವಸಗಳಿಂದ ಅಪೂರ್ಣವಸ್ಥೆಯಲ್ಲಿದ್ದ ಈ ಗ್ರಂಥಕ್ಕೆ ಪೂರ್ಣ ಸ್ವರೂಪ ಕೊಡಲು ಒತ್ತಾಯಪಡಿಸಿದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಧಾನ ಪ್ರಾಧ್ಯಾಪಕ ಡಾ. ರುದ್ರಯ್ಯನವರು ಹಿರೇಮಠ ಎಮ್. ಎ., ಪಿಎಚ್.ಡಿ. ಮತ್ತು ಪ್ರಾಧ್ಯಾಪಕ ಡಾ. ಎಮ್. ಎಸ್. ಸುಂಕಾಪೂರ, ಎಮ್. ಎ., ಪಿಎಚ್.ಡಿ. ಅವರಿಗೂ, ಮುದ್ರಣದ ಕರಡು ಪ್ರತಿಯನ್ನು ತಿದ್ದಲು ನೆರವಾದ ನುರಿತ ಶಿಕ್ಷಕ ಶ್ರೀ ಕೆ. ಎಸ್. ಪಾಟೀಲರಿಗೂ, ಮುಖಪುಟದ ನಕ್ಷೆಯನ್ನು ಹಾಗೂ ಪಡಿಯಚ್ಚನ್ನು ಸಿದ್ಧಮಾಡಿಕೊಟ್ಟದ್ದಕ್ಕಾಗಿ ಶ್ರೀಕೃಷ್ಣ ಪೋತದಾರ ಅವರಿಗೂ, ಅದನ್ನು ಮುದ್ರಿಸಿ ಕೊಟ್ಟ ರವೀಂದ್ರ ಮುದ್ರಣಾಲಯದವರಿಗೂ ಪಡಿಯಚ್ಚಿಗೆ ಬೇಕಾಗುವ ಚಿತ್ರಗಳನ್ನೊದಗಿಸಿಕೊಟ್ಟ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯವರಿಗೂ ಮತ್ತು ತಮ್ಮ ಅವಿರತ ಕಾರ್ಯಗಳಲ್ಲಿ ಬಿಡುವು ಮಾಡಿಕೊಂಡು ಮುದ್ರಿಸಿಕೊಟ್ಟ ಧಾರವಾಡ ತೋಂಟದಾರ್ಯ ಮುದ್ರಣಾಲಯದವರಿಗೂ ಋಣಿಯಾಗಿರುವೆವು.

ಧಾರವಾಡ
ಶಕೆ ೧೮೮೦, ಕೀಲಕನಾಮ ಸಂವತ್ಸರ
ಆಷಾಢ ಶುದ್ಧ ಪಂಚಮಿ
ತಾ. ೧–೭–೧೯೬೮

ಶಿ. ಚೆ. ನಂದೀಮಠ

ಪರಿವಿಡಿ

ಪ್ರಸ್ತಾವನೆ

ಹರಿಹರನ ಚರಿತೆ

ಭಾರತೀಯ ಸಾಹಿತ್ಯದಲ್ಲಿ ಹೆಸರಾಂತ ಕವಿಗಳ, ಸಾಹಿತಿಗಳ, ಜ್ಞಾನಿಗಳ, ಧರ್ಮವೇತ್ತೃಗಳ ಬಗೆಗೆ ಹೆಚ್ಚಿಗೆ ವಿಷಯ ದೊರೆಯುವುದಿಲ್ಲ. ಅವರು ತಮ್ಮ ಜೀವನಚರಿತೆಯ ಬಗೆಗೆ ಮೌನವನ್ನು ತಳೆದಿರುವರು. ಅವರ ಘನತೆ ಅವರ ಕೃತಿಗಳಿಂದ ನಿರ್ಣಯಿಸಲಾಗಿದೆ. ಕಾಲಿದಾಸಾದಿ ಮಹಾ ಕವಿಗಳು, ಕಪಿಲ ಕಣಾದ ಶಂಕರಾಚಾರ್ಯರಂತಹ ತತ್ತ್ವಜ್ಞಾನಿಗಳು ತಮ್ಮ ಜನ್ಮಸ್ಥಳ ಕಾಲ ಬಳಗ ಇವುಗಳ ಬಗೆಗೆ ಎಲ್ಲಿಯೂ ಹೇಳಿಕೊಂಡಿಲ್ಲ. ಆದರೆ ಅವರ ಬಗೆಗೆ ಕಥೆಗಳು ರೂಢಿಯಲ್ಲಿವೆ. ಅಂತಹ ಐತಿಹ್ಯಗಳ ಸಹಾಯದಿಂದ ಮತ್ತು ಬೇರೆ ಬೇರೆ ಕಡೆಗೆ ಬರುವ ಸಂದರ್ಭಗಳಿಂದ ಅವರ ಚರಿತೆಯನ್ನು ಕಲ್ಪಿಸಬೇಕಾಗಿದೆ. ಮಹಾಕವಿಯಾದ ಹರಿಹರನು ಈ ನಿಯಮಕ್ಕೆ ಅಪವಾದವಲ್ಲ. ಆತನ ಬಗೆಗೆ ಚರ್ಚೆ ನಡೆಯುತ್ತಲೆ ಇದೆ. ನಂಬಲರ್ಹವಾದ ಹೆಚ್ಚಿನ ಸಂಗತಿಗಳು ಬೆಳಕಿಗೆ ಬರುವವರೆಗೆ ಈ ಚರ್ಚೆ ಸಾಗುವುದು.

ಹರಿಹರನ ಬಗೆಗೆ ಪರಂಪರಾಗತ ಬಂದ ಕೆಲ ಐತಿಹ್ಯಗಳು ಉಪಲಬ್ಧವಿವೆ. ಪದ್ಮರಾಜಪುರಾಣ, ಚೆನ್ನಬಸವಪುರಾಣ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ರಾಘವಾಂಕ ಚರಿತೆ ಮೊದಲಾದ ಗ್ರಂಥಗಳಲ್ಲಿ ಹರಿಹರನ ಜೀವನಕ್ಕೆ ಸಂಬಂಧಿಸಿದ ಕೆಲವು ವಿಷಯಗಳು ದೊರೆಯುವವು. ಅವುಗಳ ಸಹಾಯದಿಂದ ಅವನ ಚರಿತೆಯನ್ನು ಕೆಲಮಟ್ಟಿಗಾದರೂ ಸಂಗ್ರಹಿಸಬಹುದು. ಹರಿಹರನು ಗಿರಿಜಾಕಲ್ಯಾಣದಲ್ಲಿ ಮತ್ತು ರಗಳೆಗಳಲ್ಲಿ ತನ್ನ ಗುರುಪರಂಪರೆಯನ್ನು ಹೇಳಿರುವನು. ರಾಘವಾಂಕನ ಗ್ರಂಥಗಳಲ್ಲಿಯೂ ಈ ವಿಷಯ ಬಂದಿದೆ. ಅದು:—

ತುಂಗಭದ್ರಾತೀರದ ಪಂಪಾಪುರಿಯಲ್ಲಿ ಪರಿಶುದ್ಧವಾದ, ಶಿವನಲ್ಲಿ ಅಚಲನಿಷ್ಠೆಯುಳ್ಳ, ಶೈವಾಗಮ ಸಂಪ್ರದಾಯವನ್ನನುಸರಿಸುವ ಪವಿತ್ರ ಬ್ರಾಹ್ಮಣಕುಟುಂಬದಲ್ಲಿ ಹರಿಹರನು ಜನ್ಮವೆತ್ತಿರುವನು. ತಾಯಿ ಶರ್ವಾಣಿ ತಂದೆ ಮಹಾದೇವ.[೧] ಅವನು ತನ್ನ ಗ್ರಂಥಗಳಲ್ಲಿ ತನ್ನ ಜನನಿ ಜನಕರ ಹೆಸರನ್ನು ಹೇಳಿಲ್ಲ. ಅದಕ್ಕೆ ಕಾರಣವನ್ನು ಹುಡುಕಬೇಕಾಗಿಲ್ಲ. ಶೈವಾಚಾರ್ಯರು ವಿಶೇಷವಾಗಿ ವೀರಶೈವಾಚಾರ್ಯರು ತಮ್ಮ ದೀಕ್ಷಾ ಗುರುವನ್ನೇ ತಂದೆಯೆಂದು ಭಾವಿಸಿ ಗುರುವಂಶವೇ ತಮ್ಮ ವಂಶವೆಂದು ನಂಬುವರು. ಹರಿಹರನು ಪರಮಶೈವಾಚಾರ್ಯನಾದುದರಿಂದ

೧. ರಾ. ಚ. ೧-೩೪.

ತನ್ನ ವಿಪುಲ ಗ್ರಂಥರಾಸಿಯಲ್ಲಿ ತನ್ನ ತಂದೆ ತಾಯಿ ಬಂಧುಬಳಗದವರ ಹೆಸರನ್ನು ಎತ್ತದೆ ಗುರುಪರಂಪರೆಯನ್ನೇ ವಿವರಿಸಿರುವನು. ಅದು ಅತೀವ ಗಣ್ಯವಾದುದು. ಆತನ ಕುಲಗುರು ಹಂಪೆಯ ಶಂಕರದೇವರು.[೧] ಅವರು ಅತಿ ವಿಖ್ಯಾತರು, ಅತಿ ಪಾವನರು, ಶಿವಸಂಭೂತರು, ಪುಣ್ಯಪಾತ್ರರು, ಮುಕ್ತಿದಾತರು. ಶೈವಾಗಮ ಸಿದ್ಧರಪ್ಪ ಈ ಶಂಕರಾಚಾರ್ಯರಿಂದ ದೀಕ್ಷೆಯನ್ನು ಪಡೆದವರು ಕೀರ್ತಿಭರಿತರಾದ ಶ್ರೀ ಮಾದಿರಾಜರು.[೨] ಅವರ ಮನೋದುಗ್ಧಾಬ್ಧಿಚಂದ್ರರೂ, ಶೈವಸುಭಗರೂ, ಸಾಕಾರಸರ್ವೇಶ್ವರರೂ ಸಂತೋಷಾಭರಣರೂ ಆದ ಹಂಪೆಯ ಮಾಯಿದೇವರೆಸೆದಿರ್ದರು.[೩] ಅವರು ಮಹಾಗುರು ವಿದ್ಯಾಗುರು ವಸುಧಾಗುರು ಶೈವಗುರು. ಅವರನ್ನು ಶೈವಸಿದ್ಧರೆಂದು ಕೃಪಾಂಬುಧಿಯೆಂದು ಶಾಂತಮೂರ್ತಿಯೆಂದು ಪರಮಾಗಮಪ್ರಕರನೆಂದು ಶಿವನೆಂದು ಜಗವು ನಂಬಿತ್ತು.[೪] ಗುರುಪದಭಕ್ತ ಉನ್ನತಮಹಿಮ ದೇವಕವಿ ಹಂಪೆಯ ಹರಿದೇವನು ಆ ಮಾಯಿದೇವರ ಕರುಣಂಬಡೆದಿದ್ದನು.[೫] ಗಿರಿಜಾಕಲ್ಯಾಣದಲ್ಲಿ ಹರಿಹರನ ದೀಕ್ಷಾಗುರುವು ಮಾಯಿದೇವರಸರೆಂದು ಹೇಳಿದೆ. ರಾಘವಾಂಕನ ಸೋಮನಾಥ ಚಾರಿತ್ರದಲ್ಲಿ ಹರಿಹರನ ತಂದೆ ಮಹಾದೇವನೆಂದೂ, ಆತನು ಹರಿಹರನ ಗುರುಸಂಪ್ರದಾಯದಲ್ಲಿ ಶಂಕರಪ್ರಭು ಮಾದಿರಾಜರ ತರುವಾಯ ಹೆಸರಿಸಲ್ಪಟ್ಟಿರುವುದರಿಂದ ಮಾಯಿದೇವರಿಗೆ ಮಹಾದೇವರೆಂದು ಹೆಸರಿಸಬೇಕೆಂದು ಅನುಮಾನಿಸಲು ಸಾಧ್ಯವದೆ. ಹರಿಹರನ ತಂದೆಯು ಆತನ ದೀಕ್ಷಾಶಿಕ್ಷಾಗುರುವಾಗಿರುವ ಸಂಭವವದೆ. ಜಾಣನೂ ರಸಿಕನೂ ಸುಜನಪ್ರಾಣನೂ ಕವಿತಾನಿಧಾನನೂ ಅದ ವಿವೇಕಿ ಹರಿಹರದೇವನು ಗಿರಿಜಾಕಲ್ಯಾಣವನ್ನು ಹೇಳಿದನು.[೬] ಕನ್ನಡ ಸಾಹಿತ್ಯದಲ್ಲಿ ಹೆಸರಾಂತ ರಾಘವಾಂಕನು ಆತನ ಸೋದರಳಿಯನೂ ನೆಚ್ಚಿನ ಶಿಷ್ಯನೂ ಆಗಿದ್ದನು.[೭] ಆತನ ಸಮಕಾಲದವನೂ ಆತನ ಬಗೆಗೆ ಪೂಜ್ಯ ಬುದ್ಧಿಯುಳ್ಳವನೂ ಆದ ಕೆರೆಯ ಪದ್ಮರಸನು ನರಸಿಂಹಬಲ್ಲಾಳನಲ್ಲಿ ಮಂತ್ರಿಯಾಗಿದ್ದನು.[೮] ಹರಿಹರದೇವನು ಅದೇ ಅರಸನ ಆಸ್ಥಾನದಲ್ಲಿ ಕರಣಿಕಾಗ್ರಣಿಯಾಗಿದ್ದನು.[೯] ತನ್ನ ಜೀವನದ ಪೂರ್ವಭಾಗವನ್ನು ಅಲ್ಲಿಯೇ ಕಳೆದನೆಂದೂ ಹಂಪೆಯ ವಿರೂಪಾಕ್ಷನಲ್ಲಿದ್ದ ಅವನ ಅಚಲನಿಷ್ಠೆಯನ್ನು ಕಂಡು ಅರಸನು ಅವನಿಗೆ ಹಂಪೆಯಲ್ಲಿಯೇ ವಿರೂಪಾಕ್ಷನ ಸಾನ್ನಿಧ್ಯದಲ್ಲಿರಲು ಅನುಜ್ಞೆಯಿತ್ತನೆಂದೂ ಪ್ರತೀತಿ.[೧೦] ಹೀಗೆ ತನ್ನ ಉಳಿದ ಆಯುಷ್ಯವನ್ನು ಹಂಪೆಯಲ್ಲಿ ಕಳೆದನು. ರುದ್ರಾಣಿ ಮಹಾದೇವರ ಮಗನಾದ ರಾಘವಾಂಕನು ಅವನ ಸೋದರಳಿಯನೆಂದು ಹೇಳು

---

೧. ಗಿ. ಕ. ೧-೩೪. ೨ ಗಿ. ಕ. ೧-೩೬. ೩. ಗಿ. ಕ. ೧-೩೭. ೪. ಗಿ. ಕ. ೧-೩೯ ೫. ಗಿ. ಕ. ೧-೪೦ ೬. ಗಿ. ಕ. ೧-೪೧ ೭ ರಾ. ಚ. ೨-೫೧; ೩-೨೪ ೮. ಪ. ಪು. ರಾ. ಭೈ. ಶಾ. ಕ. ಸೂ. ರ. ೯. ಹ. ದೇ. ಪು. ೧೮-೧೯ ರಾ. ಚ. ೧೪-೪೭ ಪ. ಪು. ೪-೨೩. ೧೦. ರಾ. ಚ. ೧೪-೫೮-೫೯ ಪ. ಪು. ೫-೧೮-೧೯.

ವುದರಿಂದ ರಾಘವಾಂಕನ ತಾಯಿ ರುದ್ರಾಣಿ ಆತನ ಸೋದರಿಯಾಗಿರಬೇಕು.[೧] ಹರಿಹರನು ರಾಘವಾಂಕನ ದೀಕ್ಷಾಗುರು ಮತ್ತು ವಿದ್ಯಾಗುರುವಾಗಿರುವುದರಿಂದ ರಾಘವಾಂಕನು ಹರಿಹರನ ವರಸುತನೆಂದು ಅಭಿಮಾನದಿಂದ ಕರೆದುಕೊಂಡಿರುವನು.[೨] ಶಿವಶರಣರ ಚರಿತೆಗಳನ್ನು ರಗಳೆಯ ರೂಪದಿಂದ ಹಾಡಿದುದರಿಂದ ರಗಳೆಯ ಕವಿಯೆಂದು ಆ ಕಾಲದ ಕೆಲವರು ಆರೋಪಿಸಲು ಗಿರಿಜಾಕಲ್ಯಾಣ ಮಹಾಕಾವ್ಯವನ್ನು ಬರೆದನೆಂದು ಹೇಳಿಕೆ.[೩] ಆತನು ಬರೆದ ವಿಪುಲ ಸಾಹಿತ್ಯದಿಂದ ಆತನು ಬಹುಕಾಲ ಬದುಕಿರಬೇಕೆಂದು ಊಹಿಸಬಹುದು. ಹಂಪೆಯಲ್ಲಿ ವಿರೂಪಾಕ್ಷನ ಸೇವೆ ಮಾಡುತ್ತ ಶಿವಶರಣರ ಚರಿತೆಗಳನ್ನು ರಘಟಾ ರೂಪದಿಂದ ಬರೆಯುತ್ತ ತನ್ನ ಆಯುಷ್ಯವನ್ನು ಕಳೆದನು.

ಹರಿಹರನು ತನ್ನ ರಗಳೆಗಳಲ್ಲಿ ಮತ್ತು ಶತಕಗಳಲ್ಲಿ ತನ್ನ ಜೀವನದ ಮೇಲೆ ಬೆಳಕನ್ನು ಕೆಡಹುವ ವಾಕ್ಯಗಳನ್ನು ಸೇರಿಸಿದ್ದಾನೆಂದು ಕೆಲವರ ಮತ. ಪಿಂಡೋತ್ಪತ್ತಿ ರಗಳೆಯಲ್ಲಿ ಬಂದ "ದೈತೆಯುಂತಂದೊರ್ಬಳಂ ಮದುವೆಯುಂ ಮಾಡಿ" ಎಂಬುದು ಹರಿಹರನು ಲಗ್ನವಾಗಿದ್ದನೆಂಬುದನ್ನೂ ಅವನ ಹೆಂಡತಿ ದೈತ್ಯೆಯಂತಿದ್ದು ಸಾಮಾನ್ಯವಾಗಿ ಆತ ಯೌವನ ಸುಖವನ್ನು ಅನುಭವಿಸಿದ್ದನೆಂಬುದನ್ನೂ, ಜೀವನೋಪಾಯಕ್ಕಾಗಿ ವ್ಯವಹಾರ ಮಾಡಿ ಲಾಭಮಂ ಕಾಣದೆ ಸೇವಕಾವೃತ್ತಿಯಂ ಕೈಕೊಂಡು ನರರ್ಗಾಳಾಗಿ ಮತಿಗೆಟ್ಟು, ಧೃತಿಗುಂದಿ ಮರ್ತ್ಯರಿಗೆ ತೊತ್ತಾಗಿ ನಡುವಿರುಳು ಪೋಗೆನಲು ನಾಲ್ಗಾವುದಂ ಪೋಗಿ, ಅವರು ಹೇಳಿದಂತೆ ಕೇಳಿ, ಮಾಡೆಂದುದನ್ನು ಮಾಡಿ ಬಳಲಿದನೆಂಬುದರಿಂದ ಅವನು ಸೇವಕನಾಗಿದ್ದನೆಂಬುದನ್ನೂ ಬಕುತಿಯನ್ನರಿಯದೆ ಕಾಮ, ಕ್ರೋಧ, ಲೋಭ ಮೋಹ ಮತ್ಸರಾದಿಗಳಿಗೀಡಾಗಿ ಬಳಲಿದನೆಂಬುದನ್ನೂ ಮಾನ, ಧನ, ಸುತರು, ಕುಲ, ಛಲ, ಬಲ, ಜನನಿ, ಜನಕರು ಅಬಲೆ, ಯೌವನ ಇವೆಲ್ಲ ಮಿಂಚು ಮಂಜು ಕನಸು ಮರೀಚಿಕಾಜಲಗಳೆಂದು ಕಂಡುದಿಲ್ಲ; ನಿತ್ಯವೆಂದು ನಿರುತವೆಂದು ಹತ್ತೆ ಸಾರುತಿರ್ದೆನಯ್ಯ—ಎಂಬುದು ಅವನ ಜೀವನಕ್ಕೆ ಅನ್ವಯಿಸುವುದೆಂಬುದನ್ನು ಸೂಚಿಸುವುದೆಂದೂ ಕೆಲವರ ಊಹೆ. ಸಾಮಾನ್ಯವಾಗಿ ಅಧ್ಯಾತ್ಮಿಕ ಸಾಧನೆಯಲ್ಲಿ ಮಗ್ನರಾದ ಮಹಾಪುರುಷರು ಸಂಸಾರದಲ್ಲಿ ತೊಳಲುವ ಮಾನವರ ಕಷ್ಟಗಳನ್ನು ಎತ್ತಿ ತೋರಿಸುವುದು ಸ್ವಾಭಾವಿಕವು. ಸಾಹಿತ್ಯಕ್ಷೇತ್ರದಲ್ಲಿ ಇಂತಹ ಉದಾಹರಣೆಗಳು ಬಹಳುಂಟು. ಉದಾಹರಣೆಗಾಗಿ ಭರ್ತೃಹರಿ, ಸರ್ಪಭೂಷಣ ಶಿವಯೋಗಿ, ಮುಪ್ಪಿನ ಷಡಕ್ಷರಿ ಮೊದಲಾದವರನ್ನು ಇಲ್ಲಿ ಉದಾಹರಿಸಬಹುದು. ಆದುದರಿಂದ ಈ ಊಹೆ ಅಷ್ಟು ಬಲವಾದುದೆಂದು ಅನ್ನಿಸುವುದಿಲ್ಲ.

---

೧. ಪ.ಪು. ೫–೩೫. ಚೆ.ಬ. ಪು. ೬೨–೫೬. ೨. ಸೋ. ಶಾ. ೧–೨೫ ಬ. ಪು. ೧-೧-೧೧ ೩. ರಾ. ಚ. ೧೪.; ಕ. ಕ. ೧೯೨೪ ಪು. ೨೩೨.

ಕಾಲವಿಚಾರ:—

ಭಾರತೀಯ ಸಾಹಿತ್ಯದಲ್ಲಿ ಪ್ರಖ್ಯಾತರಾದ ಬಹುಜನ ಸಾಹಿತಿಗಳ ಜೀವನ ಕಾಲ ಚರ್ಚಾಸ್ಪದವಾಗಿದೆ. ಅತಿಗಣ್ಯರೂ ಸಂಸ್ಕೃತ ಸಾಹಿತ್ಯಕ್ಕೆ ಸೀಮಾಪುರುಷರೂ ಆದ ಕಾಲಿದಾಸ, ಭಾರವಿ, ಭವಭೂತಿ, ಮಾಘ, ದಂಡಿ ಮೊದಲಾದ ಕವಿಗಳ ಕಾಲ ಇನ್ನೂ ನಿಶ್ಚಿತವಾಗಿ ಗೊತ್ತಾಗಿಲ್ಲ. ಕನ್ನಡ ಸಾಹಿತ್ಯದಲ್ಲಿಯೂ ಕೂಡ ನಿಶ್ಚಯವಾಗಿ ಕಾಲ ತಿಳಿಯದ ಸಾಹಿತಿಗಳು ಬಹುಜನರಿರುವರು. ಹರಿಹರನು ಅದಕ್ಕೆ ಅಪವಾದವಾಗಿಲ್ಲ. ಅವನು ತನ್ನ ವಿಪುಲ ಗ್ರಂಥರಾಶಿಯಲ್ಲಿ ಎಲ್ಲಿಯೂ ತನ್ನ ಕಾಲವನ್ನು ಸೂಚಿಸುವ ಮಾತನ್ನೆತ್ತಿಲ್ಲ. ಅವನ ತರುವಾಯ ಬಂದ ಸಾಹಿತಿಗಳು ಅವನ ಬಗೆಗೆ ಇದ್ದ ತಮ್ಮ ಪೂಜ್ಯ ಬುದ್ಧಿಯನ್ನು ವ್ಯಕ್ತಪಡಿಸಲು ತಮ್ಮ ಕೃತಿಗಳಲ್ಲಿ ಅವನನ್ನು ಸ್ಮರಿಸಿ ಅವನ ಬಗೆಗೆ ತಾವು ಕೇಳಿದ ವಿಷಯಗಳನ್ನು ಬರೆದಿಟ್ಟಿರುವರು. ಅಂತಹರಲ್ಲಿ ಪ್ರಮುಖರಾದವರು ಪದ್ಮಣಾಂಕ, ವಿರೂಪಾಕ್ಷಪಂಡಿತ, ಶಾಂತಲಿಂಗದೇಶಿಕ, ಸಿದ್ಧ ಅಥವಾ ಚಿಕ್ಕನಂಜೇಶ ಎಂಬವರು. ಅವರು ತಮ್ಮ ಗ್ರಂಥಗಳಲ್ಲಿ ಹರಿಹರ ಮತ್ತು ಅವನ ಸಮಕಾಲದವರಾದ ರಾಘವಾಂಕ, ಕೆರೆಯ ಪದ್ಮರಸರ ಬಗೆಗೆ ತಮಗೆ ಗೊತ್ತಾದ ಮತ್ತು ಆಗ ಜನರಲ್ಲಿ ರೂಢಿಯಲ್ಲಿದ್ದ ಕೆಲವು ಸಂಗತಿಗಳನ್ನು ಬರೆದಿಟ್ಟಿರುವರು. ಅವು ಅವರ ಕಾಲನಿರ್ಣಯಕ್ಕೆ ಅನುಕೂಲವಾಗಿವೆ. ಅವುಗಳನ್ನು ಮತ್ತು ಕೆಲವು ಇತರ ಆಧಾರಗಳನ್ನು ಅವಲಂಬಿಸಿ ವಿದ್ವಾಂಸರು ಅವರ ಕಾಲವನ್ನು ನಿರ್ಣಯಿಸಲು ಯತ್ನಿಸಿರುವರು. ಅವರಲ್ಲಿ ಕೆಲವರ ನಿರ್ಣಯವನ್ನು ಇಲ್ಲಿ ಕೊಡಲಾಗಿದೆ.

೧. ರೆ. ಕಿಟ್ಟೆಲ್ : ಕ್ರಿ. ಶ. ೧೨೪೦ ಛಂದೋಂಬುಧಿಯ ಉಪೋದ್ಘಾತ ಪು. Liii

೨. ಡಿ. ರಾ. ನರಸಿಂಹಾಚಾರ್ : ,, ೧೧೬೫ ಕವಿಚರಿತೆ ಭಾಗ ೧. ಪು. ೨೨೪ (೧೯೨೪)

೩. ಡಾ. ವೆಂಕಟಸುಬ್ಬಯ್ಯ : ,, ೧೩೦೦ ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ ಪು. ೨೬೦-೨೬೮

೪. ದಿ. ಎ. ಆರ್. ಕೃಷ್ಣಶಾಸ್ತ್ರಿ : ,, ೧೨೮೦ ಹರಿಶ್ಚಂದ್ರಕಾವ್ಯ ಸಂಗ್ರಹ ಪೀಠಿಕೆ ಪು. xlv

೫. ದಿ. ಕೆ. ಜಿ. ಕುಂದಣಗಾರ : ,, ೧೨೧೬ ಹರಿಹರದೇವ ಪು. ೪೯-೬೭
ಮತ್ತು ಪ್ರೊ. ಮಾಳವಾಡ

೬. ಪ್ರೊ. ಡಿ. ಎಲ್. ನರಸಿಂಹಾಚಾರ್ : ,, ೧೨೪೦ ಸಿದ್ಧರಾಮಚರಿತೆ ಮುನ್ನುಡಿ ಪು. xv-xxl

೭. ಶ್ರೀ ಎಚ್. ದೇವೀರಪ್ಪ : ಕ್ರಿ. ಶ. ೧೩೦೦ ಗಿರಿಜಾಕಲ್ಯಾಣ ಮಹಾ ಪ್ರಬಂಧ (ಸಂಗ್ರಹ) ಮುನ್ನುಡಿ ಪು. xlv

೮. ಡಾ. ಆರ್. ಸಿ. ಹಿರೇಮಠ : ,, ೧೨೬೫ ಮಹಾಕವಿ ರಾಘವಾಂಕ (ದ್ವಿ. ಮುದ್ರಣ) ಪು. ೪೪

ಇವರ ಮತದಂತೆ ಹರಿಹರನ ಕಾಲ ಕ್ರಿ. ಶ. ೧೧೬೫ರಿಂದ ೧೩೦೦ ರ ವರೆಗೆ ಸುಮಾರು ೧೩೫ ವರ್ಷಗಳ ಅವಧಿಯಲ್ಲಿ ಹೊಯ್ದಾಡುತ್ತದೆ. ಹರಿಹರನು ದೀರ್ಘಾಯುವಾಗಿದ್ದಿರಬಹುದೆಂಬ ಊಹೆಯನ್ನು ಒಪ್ಪಿದರೆ ಇವರಲ್ಲಿ ಕೆಲವರು ಸೂಚಿಸುವ ಕಾಲ ಗುರಿತಪ್ಪಿಲ್ಲವೆಂದೂ ಬಹುತರ ಅವರ ಊಹೆಗಳಲ್ಲಿ ಕೆಲವು ಹರಿಹರನ ಜೀವಾವಧಿಯಲ್ಲಿ ಅಥವಾ ಸ್ವಲ್ಪ ಹಿಂದುಮುಂದೆ ಬರುವವೆಂದೂ ಊಹಿಸ ಬಹುದು. ಈ ವಿದ್ವಾಂಸರೆಲ್ಲರು ಬಹು ಜಟಿಲವಾದ ಪ್ರಶ್ನೆಗಳನ್ನೆಗುರಿಸಿ ಸಮರ್ಪಕ ವಾಗಿ ಬಿಡಿಸಲು ಯತ್ನಿಸಿರುವರು. ಈ ವಿಷಯದಲ್ಲಿ ಅವರೆಲ್ಲರು ಪಟ್ಟ ಶ್ರಮ ಪ್ರಶಂಸನೀಯವಾಗಿದೆ.

ವೀರಶೈವಗ್ರಂಥಕಾರರ ಒಮ್ಮತದ ಪ್ರಕಾರ, ಅದು ಪರಂಪರಾಗತವಾದುದಿರಲಿ ಅಥವಾ ಐತಿಹಾಸಿಕವಾಗಿರಲಿ, ಹರಿಹರ, ರಾಘವಾಂಕಾದಿಗಳು ಸಮಕಾಲದವರಾಗಿದ್ದ ರೆಂಬುದು ಸ್ಪಷ್ಟವಾಗಿದೆ. ಅವರ ಕಾಲನಿರ್ಣಯಕ್ಕೆ ಅನುಕೂಲವಾದುವೆಂದು ಗಣಿಸ ಲಾದ ಪದ್ಮರಾಜಪುರಾಣ, ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ, ಗುರು ರಾಜಚರಿತೆ, ಚೆನ್ನಬಸವಪುರಾಣ ಮೊದಲಾದುವು ಕೆಲ ವಿಷಯಗಳಲ್ಲಿ ಉಪಯುಕ್ತ ವಾದರೂ ಅವು ಬಿಡಿಸಲಾಗದ ಕೆಲವು ಕಠಿಣ ಪ್ರಶ್ನೆಗಳನ್ನೆತ್ತಲು ಅವಕಾಶವನ್ನುಂಟು ಮಾಡಿಕೊಟ್ಟಿವೆ. ಅಂತಹ ಪ್ರಶ್ನೆಗಳಲ್ಲಿ (೧) ಹರಿಹರನು ಕರಣಿಕನಾಗಿದ್ದ ವೀರ ಅಥವಾ ನರಸಿಂಹಬಲ್ಲಾಳನು ಯಾರು? (೨) ಪದ್ಮರಸನ ಸಂಗಡಿಗರೂ ಸಮ ಕಾಲದವರೂ ಆಗಿರಬಹುದಾದ ಕೆಲವರ ಕಾಲ? (೩) ಪದ್ಮರಸನು ಉದ್ಧಾರ ತೆಗೆದ ಗಣಪತಿ ನೃಪಾಲ ಗುಂಡುಬ್ರಹ್ಮರು ಯಾರು? ಅವರ ಕಾಲ ಯಾವದು? (೪) ರಾಘ ವಾಂಕನ ಹರಿಶ್ಚಂದ್ರಕಾವ್ಯಕ್ಕೆ ಮನ್ನಣೆಕೊಟ್ಟ ದೇವರಾಜನು ಯಾರು? ಈ ಪ್ರಶ್ನೆ ಗಳಿಗೆ ಸಮರ್ಪಕ ಉತ್ತರ ದೊರಕಿ ಇವರೆಲ್ಲರು ಒಂದೇ ಕಾಲದಲ್ಲಿದ್ದರೆಂದು ತೋರಿಸಿದರೆ ಹರಿಹರನ ಕಾಲದ ಮೇಲೆ ಕವಿದ ಮೋಡಗಳು ದೂರಾಗುವವು. ಆದುದರಿಂದ ಇವನ್ನು ಪರಿಶೀಲಿಸುವುದು ಅಗತ್ಯವದೆ.

ವೀರಶೈವಗ್ರಂಥಕಾರರೆಲ್ಲ "ಹರಿಹರನು ದೋರಸಮುದ್ರದ ಹೊಯ್ಸಳದೊರೆ ಬಲ್ಲಾಳನ ಆಸ್ಥಾನದಲ್ಲಿ ಕರಣಿಕನಾಗಿದ್ದನು. ಹಂಪೆಯ ವಿರೂಪಾಕ್ಷದೇವಾಲಯ ದಲ್ಲಿ ಮಧ್ಯಾಹ್ನದ ನೈವೇದ್ಯಕಾಲದಲ್ಲಿ ಆರತಿಯ ಜ್ವಾಲೆಯಿಂದ ಮೇಲ್ಕಟ್ಟು ಉರಿಯುತ್ತಿರಲು ಹರಿಹರನು ಅದನ್ನು ಆರಿಸಿ ಪವಾಡವನ್ನು ಜರುಗಿಸಲು ರಾಜನು

ಅವನನ್ನು ಹಂಪೆಯ ವಿರೂಪಾಕ್ಷನ ಸೇವೆಯಲ್ಲಿಯೇ ಇರು ಎಂದು ಹೇಳಿ ಕರಣಿಕರ ಕೆಲಸದಿಂದ ಮುಕ್ತಮಾಡಿದನು." ಎಂದು ತಿಳಿಸುವರು. ಹೊಯ್ಸಳ ದೊರೆಗಳಿಗೆಲ್ಲ ಸಾಮಾನ್ಯವಾಗಿ ಬಲ್ಲಾಳರೆಂದು ಕರೆಯುವರು. ಅವರಲ್ಲಿ ವೀರಬಲ್ಲಾಳರೆಂಬವರು ನಾಲ್ವರು, ನರಸಿಂಹಬಲ್ಲಾಳರೆಂಬವರು ಮೂವರು ಇದ್ದರೆಂದು ಅವರ ಇತಿಹಾಸದಿಂದ ತಿಳಿಯುವುದು. ಹರಿಹರನು ಕರಣಿಕನಾಗಿದ್ದ ಈ ಹೊಯ್ಸಳದೊರೆ ಬಲ್ಲಾಳನು ಮೊದಲನೆಯ ನರಸಿಂಹ (ಕ್ರಿ. ಶ. ೧೧೫೨ ರಿಂದ ೧೧೭೩) ನಾಗಿರಬೇಕೆಂದು ದಿ. ರಾ. ನರಸಿಂಹಾಚಾರ್ಯರೂ, "ವೀರಶೈವ ಗ್ರಂಥಗಳನ್ನು ನಂಬಿದರೆ ಕೆರೆಯಪದ್ಮರಸ, ರಾಘವಾಂಕ ಹರೀಶ್ವರರು ಈ ೩ನೇ ಬಲ್ಲಾಳನ ಸಭೆಯಲ್ಲಿದ್ದರೆಂದೂ, ಈ ಮೂವರು ಕವಿಗಳು ಕ್ರಿ. ಶ. ಸುಮಾರು ೧೨೦೦ರಲ್ಲಿ ಲೋಕಾಂತರವನ್ನೈದಿದರೆಂದೂ[೧] ಡಾ. ವೆಂಕಟಸುಬ್ಬಯ್ಯನವರೂ ಹೇಳುವರು.

ಹೊಯ್ಸಳವಂಶವು ಶಶಕಪುರದಲ್ಲಿ ಸಳನಿಂದ ಸ್ಥಾಪಿತವಾಗಿ ಆಗ ಕದಂಬ ಗಂಗರವಶದಲ್ಲಿದ್ದ ಮಲೆನಾಡಿನ ಪ್ರದೇಶದಲ್ಲಿ ಒಂದು ಚಿಕ್ಕ ರಾಜ್ಯವನ್ನು ಕಟ್ಟಿಕೊಂಡಿತು. ಈ ವಂಶದ ಮೊದಲನೆಯ ಐತಿಹಾಸಿಕ ಪುರುಷ ನೃಪಕಾಮ ಅಥವಾ ರಾಚಮಲ್ಲಪೆರ್ಮಾಡಿ (ಕ್ರಿ. ಶ. ೧೦೦೬–೧೦೪೭). ಅವನ ವಂಶದ ವಿನಯಾದಿತ್ಯ (ಕ್ರಿ. ಶ. ೧೦೪೭–೧೦೯೮) ನು ತನ್ನ ರಾಜ್ಯವನ್ನು ಬೆಳಸಿ ಚಾಲುಕ್ಯರ ಮಾಂಡಲಿಕತ್ವವನ್ನು ಒಪ್ಪಿ ಚೋಳರೊಡನೆ ಹೋರಾಡಿದನು. ಅವನ ಕಾಲದಲ್ಲಿ ಹೊಯ್ಸಳ ರಾಜ್ಯವು ಬಹಳವಾಗಿ ವಿಸ್ತಾರವಾಯಿತು. ಅವನ ತರುವಾಯ ಪಟ್ಟಕ್ಕೆ ಬಂದ ಎರೆಯಂಗನ ಮಗ ಬಿಟ್ಟಿದೇವ ಅಥವಾ ವಿಷ್ಣುವರ್ಧನ (ಕ್ರಿ. ಶ. ೧೧೦೮–೧೧೫೨) ಅವನ ಮಗ ಮೊದಲನೆಯ ನಾರಸಿಂಹ (ಕ್ರಿ. ಶ. ೧೧೫೨–೧೧೭೩) ಮತ್ತು ಮೊಮ್ಮಗ ಎರಡನೆಯ ವೀರಬಲ್ಲಾಳ (ಕ್ರಿ. ಶ. ೧೧೭೩–೧೨೨೦) ಇವರ ಕಾಲದಲ್ಲಿ ಅದು ದಕ್ಷಿಣಭಾರತದಲ್ಲಿ ಒಂದು ಪ್ರಭಾವಿಯೂ ಬಲಾಢ್ಯವೂ ಆದ ಸ್ವತಂತ್ರ ರಾಜ್ಯವಾಗಿ ಪರಿಣಮಿಸಿತು. ಇದೇ ಅವಧಿಯಲ್ಲಿ ಅತಿ ದೊಡ್ಡ ಮತ್ತು ಬಲಶಾಲಿಯಾದ ಚಾಲುಕ್ಯರ ರಾಜ್ಯ ಮುಳುಗಿ ಆ ರಾಜ್ಯದ ಪ್ರದೇಶವನ್ನು ದೇವಗಿರಿಯ ಯಾದವರೂ, ಕಾಕತೀಯರೂ, ಹೊಯ್ಸಳರೂ ಆಕ್ರಮಿಸಿ ಸ್ವತಂತ್ರವಾದ ತಮ್ಮ ತಮ್ಮ ರಾಜ್ಯಗಳನ್ನು ನಿರ್ಮಿಸಿಕೊಂಡರು. ಹೊಯ್ಸಳರ ರಾಜ್ಯವು ಅಭ್ಯುದಯದ ಶಿಖರಕ್ಕೇರಿತು. ಎರಡನೆಯ ಬಲ್ಲಾಳನ ಮಗ ಎರಡನೆಯ ನಾರಸಿಂಹ (ಕ್ರಿ. ಶ. ೧೨೨೦–೧೨೩೫) ನು ತನ್ನ ಪೂರ್ವಜರು ಕಟ್ಟಿದ ರಾಜ್ಯವನ್ನು ಸಾಗಿಸಿಕೊಂಡು ಹೋಗಿ ಅದರ ಗೌರವವನ್ನು ಕಾಯ್ದುಕೊಂಡನು. ಅವನ ದೃಷ್ಟಿ ಚೋಳರೊಡನೆ ಸಂಬಂಧ ಬೆಳಸಿ ತಮಿಳು ದೇಶದಲ್ಲಿ ಹೊಯ್ಸಳರ ಪ್ರಭಾವವನ್ನು ಬೀರುವುದರ ಕಡೆಗೆ ವಿಶೇಷವಾಗಿತ್ತು. ಆದುದರಿಂದ ಕನ್ನಡನಾಡಿನ ಉತ್ತರಭಾಗದ ತನ್ನ ರಾಜ್ಯವನ್ನು

---

೧. ಕೆ. ಕ. ಚ. ಕಾ. ವಿ. ಪು. ೨೬೬

ವಿಸ್ತರಿಸಲು ಹೆಚ್ಚು ಪ್ರಯತ್ನ ಮಾಡಲಿಲ್ಲ. ಮೇಲಾಗಿ ದೇವಗಿರಿಯ ಯಾದವರು ಮೇಲಿಂದ ಮೇಲೆ ಹೊಯ್ಸಳರಾಜ್ಯವನ್ನೊಳನುಗ್ಗಲು ದಾಳಿ ಮಾಡುತ್ತಿದ್ದುದರಿಂದ ಅವರನ್ನು ತಡೆಯುವುದು ಮುಖ್ಯವಾದ ಕೆಲಸವಾಗಿತ್ತು. ಅವನ ಮಗನಾದ ಸೋಮೇಶ್ವರ (ಕ್ರಿ. ಶ. ೧೨೩೪ - ೧೨೫೪) ನು ತಮಿಳು ದೇಶದಲ್ಲಿರುವ ಕಣನೂರಿನಲ್ಲಿಯೇ ಹೆಚ್ಚಾಗಿ ಇರುತ್ತಿದ್ದುದರಿಂದ ಕನ್ನಡಪ್ರದೇಶವು ಮಾಂಡಲಿಕರ ಮತ್ತು ದಂಡನಾಯಕರ ರಕ್ಷಣೆಗೊಳಪಟ್ಟು, ತನ್ನ ಪ್ರಭಾವವನ್ನು ಕಾಯ್ದು ಕೊಳ್ಳಲು ಸಮರ್ಥವಾಗಲಿಲ್ಲ. ಸೋಮೇಶ್ವರನ ಮಕ್ಕಳಾದ ೩ನೆಯ ನಾರಸಿಂಹ (ಕ್ರಿ. ಶ. ೧೨೫೪-೧೨೯೧) ಮತ್ತು ರಾಮನಾಥ (ಕ್ರಿ. ಶ. ೧೨೫೪-೧೨೯೫) ಇವರು ಬಡಿದಾಡಿ ರಾಜ್ಯವನ್ನು ಹಂಚಿಕೊಂಡು ಒಬ್ಬನು ರಾಜ್ಯದ ಉತ್ತರ ಭಾಗವನ್ನೂ ಮತ್ತೊಬ್ಬನು ದಕ್ಷಿಣ ಭಾಗವನ್ನೂ ಆಳಿದರು. ರಾಮನಾಥನ ಮರಣದ ನಂತರ ಮೂರನೆಯ ಬಲ್ಲಾಳ (ಕ್ರಿ. ಶ. ೧೨೯೧-೧೩೪೩) ನು ಹೊಯ್ಸಳರಾಜ್ಯವನ್ನು ಒಂದುಗೂಡಿಸಿ ಇಡೀ ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಆದರೂ ಅವನ ಕಾಲದಲ್ಲಿ ಎಡರುಗಳ ಪರಂಪರೆ ಪ್ರಾಪ್ತವಾಗಿ, ಉತ್ತರದಿಂದ ದಾಳಿ ಮಾಡುತ್ತಿರುವ ಮಹಮ್ಮದೀಯರ ಒತ್ತಡದಿಂದ, ನೆರೆಹೊರೆಯ ರಾಜ್ಯಗಳಾದ ಕಾಕತೀಯರ, ಯಾದವರ ವಿರೋಧದಿಂದ ಹೊಯ್ಸಳ ರಾಜ್ಯವು ಕುಸಿದು ವೀರಬಲ್ಲಾಳನೊಡನೆ ಅಸ್ತಂಗತವಾಯಿತು. ಈ ಹಿನ್ನೆಲೆಯಲ್ಲಿ ಹರಿಹರ, ರಾಘವಾಂಕ, ಕೆರೆಯ ಪದ್ಮರಸರು ಸುಮಾರಾಗಿ ಇದ್ದ ಕಾಲವನ್ನು ಕಂಡುಹಿಡಿಯಬೇಕಾಗಿದೆ. ಹರಿಹರನ ಜೀವಿತಾವಧಿಯಲ್ಲಿ ಕನ್ನಡನಾಡು ವಿಶೇಷವಾಗಿ ಅವನು ವಾಸಿಸುತ್ತಿದ್ದ ಪ್ರದೇಶವು ಸುಖಮಯವಾಗಿತ್ತು. ಅಲ್ಲಿ ಶಾಂತಿ ನೆಲಸಿ ರಾಜಕೀಯ ವಿಪ್ಲವಗಳು ಇದ್ದಿಲ್ಲ. ಜನತೆಯ ಜೀವನ ಸರಳವಾಗಿ ಸಾಗಿತ್ತು. ಪರಕೀಯರ ದಾಳಿಗಾಗಲಿ ರಾಜಮನೆತನಗಳ ಪತನಕ್ಕಾಗಲಿ ಅದು ತುತ್ತಾಗಿದ್ದಿಲ್ಲವೆಂಬ ಭಾವನೆ ಹರಿಹರನ ಗ್ರಂಥಗಳ ಅಭ್ಯಾಸದಿಂದ ಮೂಡುವುದು.

ಹರಿಹರನು ಹುಟ್ಟಿಬೆಳೆದು, ತನ್ನ ಜೀವನದ ಬಹುಭಾಗವನ್ನು ಕಳೆದ ಊರು ಹಂಪೆ. ಆ ಕಾಲದ ಹಂಪೆ ಮತ್ತು ಅದರ ಸುತ್ತುಮುತ್ತಲಿನ ಪ್ರದೇಶದ ಕಲ್ಪನೆ ಅವನ ಗ್ರಂಥಗಳಿಂದ ಸ್ಪಷ್ಟವಾಗಿ ದೊರೆಯುವುದು. ಆಗ ಹಂಪೆಯ ಸುತ್ತಲು ದಟ್ಟಡವಿ ಹಬ್ಬಿತ್ತೆಂದೂ, ಅದು ಹಿಂಸ್ರಪಶುಗಳಿಗೆ ಆಶ್ರಯಸ್ಥಾನವಾಗಿತ್ತೆಂದೂ ಗಿರಿಜಾಕಲ್ಯಾಣ ಮತ್ತು ರಗಳೆಗಳಿಂದ ತಿಳಿಯುವುದು. ಕ್ರಿ. ಶ. ೧೩೩೬ರಲ್ಲಿ ಸ್ಥಾಪಿತವಾದ ವಿಜಯನಗರದ ರಾಜ್ಯ, ಕ್ರಿ. ಶ. ೧೩೧೪ ರಲ್ಲಿ ಸಂಭವಿಸಿದ ಮಲಿಕ ನಾಯಬ (ಕಾಫರ)ನ ದಾಳಿ, ಮುಸಲ್ಮಾನರೊಡನೆ ಆದ ಕಂಪಿಲರಾಯನ ಹೋರಾಟ, ಆನೆಗೊಂದಿಯ ಪತನ, ಅದರಿಂದ ಆ ಪ್ರದೇಶದಲ್ಲಿ ಆದ ಹಾಹಾಕಾರ ಇವುಗಳ ಉಲ್ಲೇಖವಾಗಲಿ ಅಥವಾ ಪರ್ಯಾಯದಿಂದ ಅವುಗಳ ಸೂಚನೆಯಾಗಲಿ ಎಲ್ಲಿಯೂ

ಅವನ ಗ್ರಂಥಗಳಲ್ಲಿ ಕಂಡುಬರುವುದಿಲ್ಲ. ಆದುದರಿಂದ ಅವನು ಕ್ರಿ. ಶ. ೧೩೧೪ಕ್ಕೂ ಮೊದಲು ಇರಬಹುದು. ಆಗ ಹಂಪೆಯ ಪ್ರದೇಶದಲ್ಲಿ ಶಾಂತಿಸುಖನೆಲಿಸಿದ್ದವೆಂದೂ, ಹೊಯ್ಸಳ ಕಾಕತೀಯ ಯಾದವ ಮೊದಲಾದ ಪ್ರಭುತ್ವಕ್ಕೊಳಪಟ್ಟ ಪ್ರದೇಶಗಳಲ್ಲಿ ಜನಸಂಪರ್ಕ, ಪ್ರವಾಸ ಮೊದಲಾದವು ಯಾವ ತೊಂದರೆಯೂ ಇಲ್ಲದೆ ಸಾಗಿದ್ದವೆಂಬುದೂ ರಾಘವಾಂಕಾದಿಗಳು ಕೈಕೊಂಡ ಹಳೇಬೀಡು, ಓರಂಗಲ್ಲು ಮೊದಲಾದ ಪ್ರದೇಶಗಳ ಪ್ರವಾಸದಿಂದ ಊಹಿಸಬಹುದು. ಅವರ ಗ್ರಂಥಗಳ ಆಳವಾದ ಅಭ್ಯಾಸದಿಂದ ಅವರಿದ್ದ ಕಾಲ ಧರ್ಮ, ಸಾಹಿತ್ಯ, ಸಮಾಜ ವ್ಯವಸ್ಥೆಗಳ ಕ್ರಾಂತಿಕಾಲವೆಂದು ಕಂಡುಬರುವದು. ಅದು ದೇಶದಲ್ಲಿ ಶಾಂತಿಸುಖಗಳು ನೆಲೆಸಿದಾಗ ಸಾಧ್ಯ. ಮೂರನೆಯ ಬಲ್ಲಾಳ ರಾಜನಾಗಿದ್ದರೂ ಪರಕೀಯರ ದಾಳಿ, ರಾಜ್ಯದಲ್ಲಿಯ ಅವ್ಯವಸ್ಥೆ ಕನ್ನಡ ತಮಿಳು ದೇಶಗಳಲ್ಲಿ ವಿಸ್ತಾರವಾಗಿ ಬೆಳೆದ ರಾಜ್ಯದ ಮೇಲಿನ ಶಿಥಿಲವಾದ ಹಿಡಿತ ಮೊದಲಾದ ಆಂತರಿಕ ಮತ್ತು ಬಾಹ್ಯಕಾರಣಗಳಿಂದ ಹೊಯ್ಸಳ ರಾಜ್ಯವು ತತ್ತರಿಸುತ್ತಿತ್ತು. ಇಂತಹ ಅಸ್ಥಿರವಾದ ಕಾಲದಲ್ಲಿ ಸಾಹಿತ್ಯಸಂಸ್ಕೃತಿಗಳ ಬೆಳವಣಿಗೆಗೆ ಆತಂಕವುಂಟಾಗಿ ಸ್ವತಂತ್ರ ಮತ್ತು ಪ್ರಗತಿಪರ ವಿಚಾರಗಳಿಗೆ ಆಸ್ಪದ ದೊರೆಯುವದು ದುರ್ಲಭ. ಆದುದರಿಂದ ಹರಿಹರಾದಿಗಳು ಹೊಯ್ಸಳರಾಜ್ಯದ ಅವನತಿಯಕಾಲದಲ್ಲಿರದೆ ಅದರ ಅಭ್ಯುದಯ ಕಾಲದಲ್ಲಿದ್ದಿರಬೇಕೆಂದು ಊಹಿಸಬಹುದು. ಅವರು ಮೂರನೆಯ ಬಲ್ಲಾಳನ ಕಾಲದಲ್ಲಿ ಇರದೆ ಎರಡನೆಯ ಬಲ್ಲಾಳನ ಕಾಲದಲ್ಲಿರುವ ಸಂಭವ ಹೆಚ್ಚು. ಅದನ್ನು ಮುಂದಿನ ಪ್ರಮಾಣಗಳು ಸ್ಪಷ್ಟಪಡಿಸುವವು.

ಪದ್ಮರಸರು ತ್ರಿಭುವನ ತಾತನೊಡನೆ ವಾದಿಸಲು ನರಸಿಂಹಬಲ್ಲಾಳನ ಸಭೆಗೆ ಹೋದಾಗ ಅವರೊಡನೆ ಉಭಯಕವಿಶಂಭಭೇರುಂಡ ಕವೀಂದ್ರ ರಾಘವಾಂಕ; ಹುಲಿಗೆರೆಯ ಮಾಯಿದೇವ ಪುರಾಣ ಭಟ್ಟ, ಸಕಲಜನಸೇವ್ಯದೊರಾಂಬುಧಿಯ ರಾಮಣ್ಣ, ಸುಕರ ಗುರುಭಕ್ತ ಕಾಮಣ್ಣ, ಅತಿತಿಮಿರಕುಲಸಪ್ತಾಶ್ವ ವಿಶ್ವಣ್ಣ, ಅತಿರಸಿಕಕರ್ಣಾಭರಣ ಬುಧವರ, ಪದವಾಕ್ಯಪ್ರಮಾಣಜ್ಞ ದೇವರಸ ಪಂಡಿತ, ಅನೇಕ ಕಲಾವಿದ ಹಂಪೆಯರಾಮಿತಂದೆ, ಜಗದಾರಾಧ್ಯನಾಗಿದೇವೋತ್ತಮ, ಅಪ್ಪ ಭಾಷಾಕವೀಶ್ವರ ಶಿವದಾಸ, ಶೈವವಿರುದ್ಧಮತದಾವ ದಾವರಸ ಮೊದಲಾದ ಅನುಪಮಿತ ಶೈವವಿದ್ವಜ್ಜನರಿದ್ದರೆಂದು ಪದ್ಮಣಾಂಕನು ಹೇಳುವನು.[1] ಪದ್ಮಣಾಂಕನ ಈ ಹೇಳಿಕೆಯಿಂದ ಇವರೆಲ್ಲರು ಪದ್ಮರಸರ ಜತೆಗಾರರೂ; ಆದುದರಿಂದ ಅವರ ಸಮಕಾಲದವರೂ ಆಗುವರು. ಪದ್ಮರಸರಮಗ ಕುಮಾರ ಪದ್ಮರಸರೂ ಈ ವಾದದಲ್ಲಿ ಭಾಗ ತಗೆದುಕೊಂಡಿದ್ದರೆಂದು ಪದ್ಮಣಾಂಕ ಹೇಳುವನು.[2] ಪದ್ಮರಾಜರು ಸಂಸ್ಕೃತದಲ್ಲಿ ಬರೆದ ಸಾನಂದ ಚರಿತೆಯನ್ನು ಆವರ ಅನುಜ್ಞೆಯ ಪ್ರಕಾರ

---

೧ ಪ. ಪು. ಸಂ. ೯. ಪದ್ಯಗಳು ೨೯–೩೦. ೨ ಪ. ಪು. ಸಂ. ೯ ಪದ್ಯ ೨೮

ಕುಮಾರ ಪದ್ಮರಸರು ಕನ್ನಡದಲ್ಲಿ ರಚಿಸಿರುವರು.[೧] ಅದರಲ್ಲಿ ಈ ಎಲ್ಲ ಶೈವ ವಿದ್ವಜ್ಜನರು ಸಭೆಗೆ ಹೋಗಿದ್ದರೆಂದೂ ಪದ್ಮರಸರು ವಾದದಲ್ಲಿ ಜಯಶಾಲಿಗಳಾಗಲು ಇವರಲ್ಲಿ ಕೆಲವರು ಅವರನ್ನು ಸ್ತುತಿಸಿದರೆಂದೂ ಆ ಪದ್ಯಗಳು ಸಾನಂದ ಚರಿತೆಯಲ್ಲಿ ಉದಾಹೃತವಾಗಿವೆಯೆಂದೂ ಈಗ ಉಪಲಬ್ಧವಿದ್ದ ಕೈಬರೆಹದ ಸಾನಂದ ಚರಿತೆಯಿಂದ ತಿಳಿಯುವದು ಆದುದರಿಂದ ಇವರಲ್ಲಿ ಯಾರೊಬ್ಬರ ಕಾಲ ನಿಶ್ಚಿತವಾಗಿ ಗೊತ್ತಾದರೆ ಉಳಿದವರ ಕಾಲವನ್ನೂ ಸ್ವಲ್ಪ ಹೆಚ್ಚುಕಡಿಮೆಯಾಗಿ ನಿರ್ಣಯಿಸಬಹುದು.

ಹಾಸನ ಜಿಲ್ಲೆಯ ಬೇಲೂರ ತಾಲೂಕ ಗಿರಿಸಿದ್ದಾಪೂರ ಗ್ರಾಮದ ಸಿದ್ಧೇಶ್ವರ ವೀರಭದ್ರ ದೇವಾಲಯಗಳ ಬಳಿ ಬಿದ್ದಿರುವ ನಂ ೨೪೪ನೆಯ ಶಿಲಾಶಾಸನದಲ್ಲಿ[೨] ಶಿವರಾತ್ರಿಯ ಮಾಯಿದೇವರಿಗೆ,ಹೊಯ್ಸಳ ವೀರನರಸಿಂಹನು ರಾಜ್ಯವಾಳುವಾಗ ಕ್ರಿ.ಶ. ೧೨೮೫ ರಲ್ಲಿ ಮಹಾಜನಗಳು ದತ್ತಿಗಳನ್ನು ಬಿಟ್ಟಿರುವರೆಂದು ಹೇಳಿದೆ. ಶಿವರಾತ್ರಿಯ ಮಾಯಿದೇವರು ಮತ್ತು ಇದೇ ಶಾಸನದಲ್ಲಿ ಹೆಸರಿಸಿದ ಹುಲಿಗೆಜ಼ಿಯ ಪುರಾಣದ ಮಾಯಿದೇವ ಪಂಡಿತ ಇವರ ಸಂಬಂಧ ಸ್ಫಷ್ಟವಾಗಿಲ್ಲ. ಸಂಬಂಧ ತಿಳಿಸುವ ಭಾಗ ಶಾಸನದಲ್ಲಿ ಲುಪ್ತವಾಗಿದೆ. ಶ್ರೀ ದೇವೀರಪ್ಪನವರೂ[೩] ಡಾ ಆರ್. ಸಿ. ಹಿರೇಮಠರೂ[೪] ಶಿವರಾತ್ರಿಯಮಾಯಿದೇವರು ಹುಲಿಗೆಜ಼ಿಯ ಪುರಾಣದ ಮಾಯಿದೇವರ ಶಿಷ್ಯರೆಂದೂ ಅವರೇ ಪದ್ಮರಾಜಪುರಾಣದಲ್ಲಿ ಹೇಳಿದ ಹುಲಿಗೆಜ಼ಿಯ ಮಾಯಿದೇವ ಪುರಾಣಭಟ್ಟರಿರಬೇಕೆಂದೂ ಊಹಿಸುವರು. ಅವರ ಊಹೆ ನಿಜವೆಂದು ನಂಬಿದರೂ ಕೂಡ ಹರಿಹರನ ಕಾಲ ೧೩೦೦ ಆಗದು. ಈ ಶಾಸನದಲ್ಲಿದ್ದ ಹುಲಿಗೆಜ಼ಿಯ ಪುರಾಣದ ಮಾಯಿದೇವ ಭಟ್ಟರು ಶಿವರಾತ್ರಿಯ ಮಾಯಿದೇವರ ಗುರುಗಳಾಗಲಿ ಗುರುವಿನ ಗುರುಗಳಾಗಲಿ ಆಗಿರಬಹುದು. ಅವರ ಹೆಸರು ಶಾಸನದಲ್ಲಿ ಉಕ್ತವಾಗಿದೆಯಾದುದರಿಂದ ಅವರು ಅತಿ ಪೂಜ್ಯವ್ಯಕ್ತಿಗಳೂ, ಶಿವರಾತ್ರಿಯ ಮಾಯಿದೇವರ ಗೌರವವನ್ನು ವರ್ಧಿಸುವವರೂ ಆಗಿದ್ದರೆಂದು ಊಹಿಸಬಹುದು. ಅವರು ಬಹುತರ ಶಾಸನದ ಕಾಲಕ್ಕೂ ಮೊದಲು ಶಿವಾಧೀನರಾಗಿರಬಹುದು. ಇಲ್ಲದಿದ್ದರೆ ಮಹಾಜನರು

---

೧ ಪ. ಪು. ಸಂ. ೧೨ ಪ. ೫೬.

೨. ಶಕ ವರುಷಂ ೧೨೦೭ ನೆಯ ಪಾರ್ತ್ಥಿವ ಸಂವತ್ಸರ ಭಾದ್ರಪದ ಬಹುಳ ೧೦ ಆದಿವಾರದಂದು। ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀ ಹೊಯಸಣರಾಯ ಭುಜಬಳ ಪ್ರತಾಪ ಚಕ್ರವರ್ತಿ ಶ್ರೀ ವೀರನಾರಸಿಂಹದೇವರಸರು ದೋರಸಮುದ್ರ ನಗರಿಯಲು ಸುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಿರ್ದ ಸಮಯದಲು ಶ್ರೀ ಮದನಾದಿಯಗ್ರಹಾರಂ ಶ್ರೀ ಪ್ರಾಭಂಜನಪುರ...ದ ಶ್ರೀಮದಶೇಷ ಮಹಾಜನಂಗಳು ಶ್ರೀಮತು ಹುಲಿಗೆಜ್ರಿಯ ಶ್ರೀ ರಾಮನಾಥ...ಕ್ಷೇತ್ರವಾಸಿಗಳುಮಪ್ಪ ಪುರಾಣದ ಮಾಯಿದೇವ ಪಂಡಿತರ...ಸಕಳ ನಯಸಂಪನ್ನರುಮಪ್ಪ ಶಿವರಾತ್ರಿಯ ಮಾಯಿದೇವರಿಗೆ...ಮಾದೇವಿಯ ಹಳ್ಳಿಯ ಪ್ರವಿಷ್ಟ ಮೂಂಡೆಯ...ಭಟ್ಟರು.

೩. ಗಿ. ಕ. ಪ. ಉ, ಪು. xi-xiii   ೪. ಸೋ. ಚ. ಉ, ಪು. vii

ಈ ಶಾಸನದಲ್ಲಿಯು ದತ್ತಿಗಳನ್ನು ಅವರ ಹೆಸರಿನಲ್ಲಿ ಬಿಡುತ್ತಿದ್ದರು. ಶಿವರಾತ್ರಿಯ ಮಾಯಿದೇವರು ಶಿಷ್ಯರಾಗಿದ್ದರೆ, ಅವರಿಗೂ ಪುರಾಣದ ಮಾಯಿದೇವರಿಗೂ ಒಂದು ತಲೆ, ಪ್ರಶಿಷ್ಯರಾಗಿದ್ದರೆ ಎರಡು ತಲೆಗಳ ಅಂತರವಾಗುವುದು. ಶಿವರಾತ್ರಿಯ ಮಾಯಿದೇವರು ಪುರಾಣದ ಮಾಯಿದೇವರ ವಂಶದವರಾಗಿದ್ದರೆ ಬಹುತರ ಅವರು ಅವರ ಪೌತ್ರರಾಗಿರುವ ಸಂಭವ ಹೆಚ್ಚಾಗಿದೆ. ಮಗನಿಗೆ ಅಜ್ಜನ ಹೆಸರಿಡುವುದು ಸಂಪ್ರದಾಯ. ಮಾಯಿದೇವ ಈ ಹೆಸರು ಇಬ್ಬರಿಗೂ ಸಾಮಾನ್ಯವಾಗಿರುವುದರಿಂದ ಅವರು ಒಂದೇ ಕುಟುಂಬದವರಾಗಿದ್ದರೆ, ಶಿವರಾತ್ರೆಯ ಮಾಯಿದೇವರು ಪುರಾಣದ ಮಾಯಿದೇವರಿಗೆ ಮೊಮ್ಮಗನಾಗುವರು. ಇದು ನಿಜವಾದರೆ ಇವರಿಬ್ಬರಲ್ಲಿ ಎರಡು ತಲೆ ಅಂತರ ಅಂದರೆ ಸುಮಾರು ೪೦-೫೦ ವರ್ಷಗಳ ಅಂತರವೆಂದು ತಿಳಿಯಬಹುದು. ಇದನ್ನು ಒಪ್ಪಿಕೊಂಡರೆ ಹುಲಿಗೆಱೆಯ ಪುರಾಣದ ಮಾಯಿದೇವಭಟ್ಟರು ೩ನೆಯ ನರಸಿಂಹನ ಕಾಲದಲ್ಲಿ ಇದ್ದಿರಲಾರರು. ಅದಕ್ಕೂ ಹಿಂದೆ ಇದ್ದಿರಬೇಕು.

ಇದೇ ಶಾಸನದ ಉತ್ತರಾರ್ಧದಲ್ಲಿ ಗೋಪೆಯ ಶಿವದೇವನ ಮಗ ಶಿವಶರಣನು ಶಿವರಾತ್ರೆಯ ಮಾಯಿದೇವರಿಗೆ ಹೂದೋಟವೊಂದನ್ನು ಕೊಂಡು ತಾರಣ ಸಂವತ್ಸರ ಫಾಲ್ಗುಣ ಶುದ್ಧ ಅಷ್ಟಮಿ ಬೃಹಸ್ಪತಿವಾರ (ಕ್ರಿ. ಶ. ೧೨೮೫ ಫೆಬ್ರುವರಿ ೨೩) ದಂದು ದಾನಕೊಟ್ಟಂತೆ ಹೇಳಿದೆ. ಶ್ರೀ ದೇವೀರಪ್ಪನವರು[೧] ಶಿವಶರಣನ ತಂದೆ ಗೋಪೆಯ ಶಿವದೇವರು ಚೌಡದಾನಪುರದ ಶಾಸನಗಳಲ್ಲಿ ಹೊಗಳಲ್ಪಟ್ಟ ಶಿವದೇವರಿಬೇಕೆಂದು ಹೇಳುವರು.[೨] ಆದರೆ ಈ ಇಬ್ಬರು ಶಿವದೇವರು ಬೇರೆಬೇರೆಯಾಗಿರಬೇಕು. ಚೌಡದಾನಪುರ ಶಾಸನದ ಶಿವದೇವರು ಬ್ರಹ್ಮಚಾರಿಯಿರಬೇಕು. ಆ ಶಾಸನದಲ್ಲಿ "ಲಿಂಗವನಪ್ಪುವ ಕೈಗಳಿಂದ ಅಂಗನೆಯುರನಪ್ಪೆಂ" ಎಂದು ಪ್ರತಿಜ್ಞೆ ಮಾಡಿರುವುದರಿಂದ ಶಿವಶರಣನು ಚೌಡದಾನಪುರದ ಶಿವದೇವರ (ಔರಸ) ಪುತ್ರನಾಗಿರಲಾರ; ಅವನು ಮತ್ತೊರ್ವ ಗೋಪೆಯ ಶಿವದೇವರ ಪುತ್ರನಾಗಿರಬಹುದು. ಒಂದು ವೇಳೆ ಶಾಸನದಲ್ಲಿ ಪುತ್ರ ಶಬ್ದವನ್ನು ಶಿಷ್ಯ ಎಂಬರ್ಥದಲ್ಲಿ ಉಪಯೋಗಿಸಿದೆಯೆಂದೂ ಶಿವಶರಣನು ಚೌಡದಾನಪುರದ ಶಾಸನಗಳಲ್ಲಿರುವ ಶಿವದೇವರ ಶಿಷ್ಯನಾಗಿದ್ದನೆಂದೂ ಗ್ರಹಿಸಿದರೂ ಸಹ ಹುಲಿಗೆಱೆ ಮಾಯಿದೇವನ ಕಾಲ ಶಾಸನದ ಕಾಲವಾಗದು : ಚೌಡದಾನಪುರದ ಒಂದು ಶಿಲಾಲೇಖನದಲ್ಲಿ "ಶಕವರ್ಷ ೧೧೪೮ ಪಾರ್ಥಿವ ಸಂವತ್ಸರ ಭಾದ್ರಪದ ಶು. ೧೫ ಸೋಮವಾರ ಚಂದ್ರೋಪರಾಗ ಪುಣ್ಯತಿಥಿಯ ಮಧ್ಯಾಹ್ನ ಸಮಯದೊಳು ಬಂದು ಮುಕ್ತಿ ಕ್ಷೇತ್ರವನ್ನು ಪೊಕ್ಕು" ಎಂದಿದೆಯಾದುದರಿಂದ ಶಿವದೇವರ ಸಂಬಂಧ ಮುಕ್ತಿಕ್ಷೇತ್ರದೊಡನೆ ಕ್ರಿ. ಶ. ೧೨೨೬ರಿಂದ ಆರಂಭವಾಗುವುದು. ಮಾವನೂರು ಶಾಸನದ ಶಿವಶರಣ ಇವರ ಶಿಷ್ಯನಾಗಿದ್ದರೂ ಅವನ ಕಾಲ ಕ್ರಿ. ಶ. ೧೨೨೬ ರಿಂದ ೧೨೮೬ ರ ಅವಧಿಯಲ್ಲಿ ಇರಬಹುದು.

---

೧. ಗಿ. ಕ. ಪ್ರ. ಉ, ಪು. xii ೨. ಗಿ. ಕ. ಪ. ಉ. ಪು. xii ಅಡಿಟಿಪ್ಪಣಿ.

ಹಾಸನ ಜಿಲ್ಲೆಯ ಹೊನ್ನಾಳಿ ತಾಲೂಕ ಮಾವನೂರ ಮಲ್ಲೇಶ್ವರ ದೇವಸ್ಥಾನ ದಲ್ಲಿದ್ದ ಶಿಲಾಶಾಸನ ನಂ ೧೧೨ರಲ್ಲಿ ವರ್ಣಿಸಲ್ಪಟ್ಟ ದೇವರಸನು ಪದ್ಮರಸರ ಸಂಗಡ ರಾಜಸಭೆಗೆ ಹೋದ ಪದವಾಕ್ಯ ಪ್ರಮಾಣಜ್ಞ ದೇವರಸಪಂಡಿತನಿರ ಬೇಕೆಂದೂ ಅವನು ಶಾಸನದ ಕಾಲ ಕ್ರಿ. ಶ. ೧೧೮೨ರಲ್ಲಿದ್ದಿರಬೇಕೆಂದೂ ಶ್ರೀ ದೇವೀರಪ್ಪನವರು ಸೂಚಿಸುವರು.[೧] ಈ ಶಾಸನದ ಮಾವನೂರ ದೇವರಸ ಅಪ್ಪಯ್ಯರಸರ ವರ್ಣನೆಯಿಂದ ಅವರು ಬಲು ದೊಡ್ಡ ಶಿವಶರಣರಿದ್ದಿರ ಬೇಕೆಂಬುದು ಸ್ಪಷ್ಟವಾಗಿದೆ. ಆದರೆ ಅದರಲ್ಲಿ ದೇವರಸರು ಪದವಾಕ್ಯಪ್ರಮಾಣಜ್ಞ ರಾದ ಪಂಡಿತರಿದ್ದರೆಂಬ ಭಾವನೆ ಮೂಡುವದಿಲ್ಲ. ಪದ್ಮರಸರ ಸಂಗಡ ಹೋದ ಪದವಾಕ್ಯಪ್ರಮಾಣಜ್ಞ ದೇವರಸ ಪಂಡಿತರು ಬೇರೆಯವರಾಗಿರಬಹುದು. ಒಂದು ವೇಳೆ ಮಾವನೂರ ದೇವರಸರೇ ಪದ್ಮಣಾಂಕ ಪುರಾಣ ಮತ್ತು ಸಾನಂದ ಚರಿತೆ ಯಲ್ಲಿ ಬಂದ ದೇವರಸರೆಂದು ಗ್ರಹಿಸಿದರೂ ಅವರು ಶಾಸನದ ಕಾಲವಾದ ಕ್ರಿ. ಶ. ೧೧೮೨ ರಲ್ಲಿ ಬದುಕಿರಲಿಲ್ಲ. "ಪರಮಮಹೇಶ್ವರರುಮಪ್ಪ ಮಾವನೂರ ಹಿರಿಯೊಡೆ ಯರೆನಿಪ ದೇವರಸೈಯಗಳ ಹೆಸರಲಿ ಅವರ ತಮ್ಮಂದಿರಾವ ಚಿಕ್ಕವೊಡೆಯರೆನಿವ ಅಪ್ಪರಸೈಯ್ಯಂಗಳು ಮಾವನೂರಲ್ಲಿ ಪ್ರತಿಷ್ಠೆಯ ಮಾಡಿದ ದೇವೇಶ್ವರ ದೇವರು ಅಪ್ಪರಸೈಯ್ಯಂಗಳ ಅರಸಿಯರಪ್ಪ ದೇವೌವೆಯರು ಆ ಅಪ್ಪರಸೈಯಂಗಳ ಹೆಸರಲಿ ಮಾವನೂರಲ್ಲಿ ಪ್ರತಿಷ್ಠೆಯಂ ಮಾಡಿದ ಅಪ್ಪೇಶ್ವರ ದೇವರು ಇಂತೀ ದೇವೇಶ್ವರ ದೇವರ ಅಪ್ಪೇಶ್ವರ ದೇವರ ಶ್ರೀಕಾರ್ಯ ಅಮೃತಪಡಿ ಅಂಗಭೋಗರಂಗಭೋಗ ಪಂಚಪರ್ವ ಗುರುಪರ್ವ ಖಂಡಸ್ಫುಟಿತ ಜೀರ್ಣೋದ್ಧಾರಕವೂ ಆ ಪರಿಚಾರಕ ಜೀವಿತ ವರ್ಗಕ್ಕವೂ ಆಚಂದ್ರಾರ್ಕತಾರಂಬರಂ ಸಲುವಾಗಿ ಕೊಟ್ಟದತ್ತಿ." ಶಾಸನದ ಕಾಲ ವಾದ ಶಕವರ್ಷ ೧೨೦೪ ವಿಷುಸಂವತ್ಸರ ಮಾಘ ಬಹುಳ ಆದಿತ್ಯವಾರ ಶಿವರಾತ್ರಿ (ಕ್ರಿ. ಶ. ೧೨೮೨) ಯ ಅವಧಿಯಲ್ಲಿ ಮಾವನೂರ ದೇವರಸ ಅಪ್ಪರಸರು ಶಿವಾಧೀನ ರಾಗಿ, ಅವರ ಹೆಸರಿನಿಂದ ದೇವತಾ ಪ್ರತಿಷ್ಠೆಯಾಗಿ, ಹೊಯ್ಸಳ ಚಕ್ರವರ್ತಿಯಿಂದ ದತ್ತಿಯನ್ನು ಪಡೆಯಲಾಗಿತ್ತು. ಅದಕ್ಕೂ ಮೊದಲು ಎಷ್ಟು ವರ್ಷಗಳ ಹಿಂದೆ ದೇವರಸರು ತೀರಿಕೊಂಡಿದ್ದರೆಂಬುದು ತಿಳಿಯುವುದಿಲ್ಲ. ಶಾಸನದ ಕಾಲಕ್ಕೆ ಅಪ್ಪರಸಯ್ಯಗಳ ಅರಸಿ ದೇವವ್ವೆಯರೂ ವೃದ್ಧರಾಗಿರಬೇಕೆಂದು ತೋರುವದು. ಅವರು ತಮಗೆ ದೊರೆತ ಮಾನ್ಯವನ್ನು ತಮ್ಮ ಉದರದ ಪುತ್ರಿ ಪಾರ್ವತಿದೇವಿಯ ರಿಗೆ ಸ್ಥಾನಪಟ್ಟವಂಕಟ್ಟಿ ಧರ್ಮಾಧಿಪತಿಯಾಗಿ ದೇವಕಾರ್ಯವನ್ನೂ ಮಾನ್ಯವನ್ನೂ ನಡಿಸಿಕೊಂಡುಹೋಗಬೇಕೆಂದು ವಿಧಿಸಿರುವರು. ಈ ಎಲ್ಲ ಸಂಗತಿಗಳನ್ನು ವಿಮರ್ಶಿಸಿದರೆ ದೇವರಸರು ತೀರಿಕೊಂಡು ಬಹುವರ್ಷಗಳಾಗಿರಬಹುದು. ಮೂರ ನೆಯ ನರಸಿಂಹನು ಪಟ್ಟಕ್ಕೆ ಬರುವುದಕ್ಕಿಂತ ಮೊದಲೇ ತೀರಿಕೊಂಡಿರಬಹುದು.

---

೧. ಗಿ. ಶ. ಪ್ರ. ಉ. ಪು. xii-xiii

ಮೇಲೆ ಕಾಣಿಸಿದ ಹಾಸನ ಜಿಲ್ಲೆಯ ಬೇಲೂರ ತಾಲೂಕ ನಂ ೨೪೪ ಮತ್ತು ಅದೇ ಜಿಲ್ಲೆಯ ಹೊನ್ನಾಳಿ ತಾಲೂಕ ನಂ. ೧೧೨ ಈ ಎರಡು ಶಾಸನ ಹುಲಿಗೆರೆಯ ಪುರಾಣದ ಮಾಯಿದೇವಭಟ್ಟ, ಮಾವನೂರ ದೇವರಸ ಇವರು ಪದ್ಮರಾಜ ಪುರಾಣೋಕ್ತ ಹುಲಿಗೆರೆಯ ಮಾಯಿದೇವ ಪುರಾಣ ಭಟ್ಟ, ಪದವಾಕ್ಯ ಪ್ರಮಾಣಜ್ಞ ದೇವರಸಪಂಡಿತರೆಂದು ಸಿದ್ಧವಾದರೆ ವೀರಶೈವಗ್ರಂಥಕಾರರು ಹೇಳುವ ವಿಷಯ ಗಳಲ್ಲಿ ಐತಿಹಾಸಿಕ ಸತ್ಯತೆಯಿದೆ; ಅವು ಕಾಲ್ಪನಿಕವಲ್ಲವೆಂಬುದು ಸಿದ್ಧವಾಗುವುದು. ಅದರಿಂದ ವೀರಶೈವ ಸಾಹಿತ್ಯಕ್ಕೆ ಉಪಕಾರವಾಗುವುದು. ಈ ಎರಡೂ ಶಾಸನಗಳು ಮೂರನೆಯ ನರಸಿಂಹ (೧೨೫೪–೧೨೯೬) ನ ಕಾಲದಲ್ಲಿ ಹುಟ್ಟಿದ್ದರೂ ಶಾಸನೋಕ್ತ ಶರಣರು ಅವನ ಕಾಲಕ್ಕಿಂತಲೂ ಮೊದಲಿನವರಾಗಿ ಬಹಳ ಪೂಜ್ಯರೂ ಕೀರ್ತಿಶಾಲಿ ಗಳೂ ಆಗಿದ್ದಿರಬೇಕೆಂದು ತರ್ಕಮಾಡಲವಕಾಶವಿದೆ.

ಶಿವನು ವಿಧವೆಯೊರ್ವಳ ಕಷ್ಟಾರ್ಜಿತ ಧನವನ್ನು ಅಪಹರಿಸಿ ತಂದು ಪದ್ಮರಸರಿಗೆ ಕೊಟ್ಟಂತೆ ಆ ವಿಧವೆ ಪದ್ಮರಸರಿಗೆ ದೂರಿಕೊಂಡಾಗ ಅವರು ಅದನ್ನು ಅವಳಿಗೆ ತೋರಿಸಿ, ಅದು ಅವಳ ಧನವೆಂದು ಕಂಡುಬಂದಾಗ “ವಿತ್ತನಾಥಾಪ್ತನೂ ಸುವರ್ಣಾದ್ರಿವಾಸನೂ ಆದ ಶಿವನು ಗಣಪತಿ ನೃಪಾಲನರಮನೆಯ ವಿತ್ತವನ್ನು ಕೊಂಡರೆ ಕೊಳ್ಳಲಿ ಬಡವೆಯ ತುತ್ತನ್ನೇಕೆ ಅಪಹರಿಸಿದನು.” “ಧನದವರು ಅಟ್ಟಿ ಬಂದೊಡೆ ಆನೇಂ ಗುಂಡಬೊಮ್ಮಯ್ಯನೇ ಕಾಯ್ವರೆ?”[೧] ಎಂದು ಉದ್ಗಾರ ತೆಗೆದಂತೆ ಪದ್ಮರಾಜಪುರಾಣದಲ್ಲಿದೆ. ಪದ್ಮರಸರು ಹೀಗೆ ನುಡಿಯಬೇಕಾದರೆ ಅವರ ಕಾಲದಲ್ಲಿ ಗಣಪತಿನೃಪಾಲನು ವಿಪುಲಧನವುಳ್ಳವನಾಗಿದ್ದನು. ಒಮ್ಮೆ ಅವನ ಭಂಡಾರದಲ್ಲಿ ಕಳವಾಗಿ ನಿರಪರಾಧಿಗಳಾದ, ಆದರೂ ಶರಣಾಗತರಕ್ಷಕರಾದ ಗುಂಡ ಬೊಮ್ಮರು ಶೂಲಕ್ಕೇರಿದರೆಂಬುದು ಜನಜನಿತವಾಗಿರಬೇಕು. ಚೆನ್ನಬಸವ ಪುರಾಣದಲ್ಲಿ[೨] “ಕಾಕತೀಯ ಗಣಪತಿ ಮಹಾರಾಜನ ಭಂಡಾರವ ಹಣವನ್ನು ಶಿವನು ಕದ್ದು ಓಡಿ ಹೋಗುವಾಗ ಕಾವಲುಗಾರರು ಬೆನ್ನಟ್ಟಲು ಅವನು ಗುಂಡಬ್ರಹ್ಮನ ಮೊರೆಹೊಕ್ಕನು. ಅವರು ಅವನನ್ನು ಮರೆಮಾಡಿ ಆ ಅಪ ರಾಧಕ್ಕಾಗಿ ತಾವೇ ಶೂಲವನ್ನೇರಿದರು. ಬಿಜ್ಜಳನ ವಧೆಮಾಡಿದ ಮೊಲ್ಲಿ ಬೊಮ್ಮರು ಗುಂಡಬೊಮ್ಮರಾಗಿ ಹುಟ್ಟಿ ಶೂಲವನ್ನೇರಿ ತಾವು ಗೈದ ಕರ್ಮಫಲವನ್ನು ಭೋಗಿಸಿ ಕೈಲಾಸವನ್ನು ಸೇರಿದರು.” ಎಂದು ಹೇಳಿದೆ. ಪದ್ಮರಸರು ನುಡಿದ ಗಣಪತಿನೃಪಾಲ ಕಾಕತಿಯ ಗಣಪತಿ-ಮಹಾರಾಜ. ಗುಂಡಬ್ರಹ್ಮರು ಶೂಲವನ್ನೇರಿ ದುದು ಅವನ ಕಾಲದಲ್ಲಿ. ಕಾಕತಿಯ ಗಣಪತಿಮಹಾರಾಜ ಕ್ರಿ. ಶ. ೧೧೯೯ರಿಂದ ೧೨೬೦ರ ವರೆಗೆ ಸುಮಾರು ಅರವತ್ತು ವರ್ಷ ರಾಜ್ಯವಾಳಿದನು. ಅವನು

೧. ಪ. ಪು. ಸಂ. ೧೩ ಪ. ೭. ೨. ಚೆ. ಬ. ಪು. ಸಂ. ೬೨ ಪದ್ಯ ೨೭ ಪ. ಪು. ಸಂ. ೧೩ ಪ. ೯

ಶೈವಪಕ್ಷಪಾತಿ, ಪರಮಶಿವಭಕ್ತನೆಂದು ಶೈವಗ್ರಂಥಗಳಲ್ಲಿ ಸ್ತುತಿಸಲ್ಪಟ್ಟ ಕರಿಕಾಲ ಚೋಳನ ವಂಶದಲ್ಲಿ ಹುಟ್ಟಿದವನು. ಘನಶೈವಾಚಾರ್ಯನಾದ ಲಕ್ಷಾಧ್ಯಾಯೀ ಸಂತಾನದ ಗೋಲಕೀಮಠದ ಪೀಠಾಧಿಕಾರಿ ವಿಶ್ವೇಶ್ವರಶಂಭುವಿನಿಂದ ಶೈವದೀಕ್ಷೆ ಪಡೆದವನು. ಅವನ ಪೂರ್ವಜರೂ, ಸಂತತಿಯವರೂ, ಶೈವಧರ್ಮಾನುಯಾಯಿಗಳೂ ಶೈವಧರ್ಮದ ಕಟ್ಟಾಭಿಮಾನಿಗಳೂ ಎಂದು ಕೀರ್ತಿಪಡೆದಿರುವರು. ಆ ಕಾಲದ ಶೈವರೆಲ್ಲ ಕಾಕತೀಯ ನರಪತಿಗಳನ್ನು ಶೈವಧರ್ಮೋದ್ಧಾರಕರೆಂದು ಗಣಿಸುತ್ತಿದ್ದರು. ಆದುದರಿಂದ ಪದ್ಮರಸರು ಗಣಪತಿ ನರಪಾಲನ ಹೆಸರನ್ನು ಹೇಳಿರಬಹುದು. ಕಲಚುರಿಬಿಜ್ಜಳನ ಅಂತ್ಯ ಕ್ರಿ. ಶ. ೧೧೬೭ರಲ್ಲಿ ಆಗಿದೆ. ಮೊಲ್ಲಿಬೊಮ್ಮರೂ ಅದೇ ಕಾಲದಲ್ಲಿ ತೀರಿಕೊಂಡಿರುವರು. ಅವರ ಪುನರ್ಜನ್ಮ ಅವರು ಗುಂಡ ಬೊಮ್ಮರಾಗಿ ಹುಟ್ಟಿದುದು ಕ್ರಿ. ಶ. ೧೧೬೮–೬೯ ಎಂದು ಇಟ್ಟುಕೊಂಡರೆ ಗಣಪತಿ ಮಹಾರಾಜನು ಕಾಕತೀಯ ಸಿಂಹಾಸನವನ್ನೇರಿದಾಗ ಅವರು ಸುಮಾರು ೩೦ ವರ್ಷದವರಿರಬೇಕು. ಅವರು ಶೂಲಕ್ಕೇರಿದುದು ಕ್ರಿ. ಶ. ೧೨೧೦ ರ ಸುಮಾರಕ್ಕೆ. ಆಗ ಅವರಿಗೆ ಸು. ೪೦ ವರ್ಷಗಳಾಗುವವು ಎಂದು ಗ್ರಹಿಸಿದರೆ ಪದ್ಮರಸರು ಆಮೇಲೆ ಈ ಮಾತನ್ನು ಹೇಳಿರಬಹುದು. ಆದುದರಿಂದ ಪದ್ಮರಸರು ಮೂರನೆಯ ನರಸಿಂಹನ ಕಾಲದಲ್ಲಿರಲಾರರು.

ರಾಘವಾಂಕನು ಓರಂಗಲ್ಲಿಗೆ ಹೋಗಿ ಪ್ರತಾಪರುದ್ರನ ಸಭೆಯಲ್ಲಿ ತನ್ನ ಮೀಸಲಕವಿತೆಯನ್ನೋದಿ ಪರವಾದಿಗಳನ್ನು ಗೆದ್ದಂತೆ ರಾಘವಾಂಕ ಚರಿತೆಯಲ್ಲಿದೆ.[೧] ಈ ವಿಷಯ ವೀರಶೈವ ಗ್ರಂಥಗಳಲ್ಲಿ ಬಂದಿವೆ.[೨] ಈ ಪ್ರತಾಪರುದ್ರನು, ರುದ್ರಾಂಬೆಯ ಮಗಳಾದ ಮುಮ್ಮಡಾಂಬೆಯ ಮಗ ಮತ್ತು ರುದ್ರಾಂಬೆಯಿಂದ ಮಗನಾಗಿ ಸ್ವೀಕೃತನಾದವನು ಈತನು ಕ್ರಿ. ಶ. ೧೨೯೫–೧೩೨೬ರ ವರೆಗೆ ರಾಜ್ಯವಾಳಿ, ಮುಸಲ್ಮಾನರ ಸೈನ್ಯದೊಡನೆ ಕಾದಿ, ಸೋತು ಬಂದಿಯಾಗಿ ದಿಲ್ಲಿಗೆ ಹೋಗುವಾಗ ಮಾರ್ಗದಲ್ಲಿ ಮೃತನಾದವನು. ಇವನ ಕಾಲದಲ್ಲಿಯೇ ರಾಘವಾಂಕನು ಓರಂಗಲ್ಲಿಗೆ ಹೋಗಿದ್ದನೆಂದು ಕೆಲವರ ಮತ. ಅದು ಸರಿ ಕಾಣುವುದಿಲ್ಲ. ಗಣಪತಿ ಮಹಾರಾಜನ ೬೦ ವರುಷದ ದೀರ್ಘಾವಧಿಯ ರಾಜ್ಯಾಡಳಿತೆಯಲ್ಲಿ ಅವನ ಹಿರಿಯ ಮಗಳಾದ ರುದ್ರಾಂಬೆ, ರುದ್ರದೇವನೆಂಬ ಹೆಸರಿನಿಂದ ತಂದೆಯ ರಾಜ್ಯಾಡಳಿತೆಯನ್ನು ಯುವರಾಜಳಾಗಿ ನಡೆಸುತ್ತಿದ್ದಳು. ರಾಜ್ಯಾಡಳಿತೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಳು. ತಂದೆಯ ತರುವಾಯ ರುದ್ರದೇವನೆಂಬ ಹೆಸರಿನಿಂದ ತಂದೆಯ ಸಿಂಹಾಸನವನ್ನೇರಿ ಕ್ರಿ. ಶ. ೧೨೬೦ ರಿಂದ ೧೨೯೫ರ ವರೆಗೆ ರಾಜ್ಯವಾಳಿದಳು. ರಾಘವಾಂಕನು, ಗಣಪತಿ ಮಹಾರಾಜನ ಕಾಲದಲ್ಲಿ,

---

೧. ರಾ. ಚ. ಸಂ. ೧೮ ಪ. ೮೧. ೨. ಪ. ಪು. ಸಂ ೫. ಪ. ೪೫; ಚೆ. ಬ. ಪು. ಸಂ. ೬೨. ಪ. ೫೬; ಭೈ. ಕಾ. ಕ. ರ. ಭಾಗ ೧ ಪು. ೨೨೬ ಪ. ೪೪

ರುದ್ರಾಂಬೆ, ಯುವರಾಜ ಪದವಿಯಿಂದ ರಾಜಪ್ರತಿನಿಧಿಯಾಗಿ ಓರಂಗಲ್ಲಿನಲ್ಲಿದ್ದಾಗ ಅಲ್ಲಿಗೆ ಹೋಗಿರಬಹುದು. ಅದು ಅವನ ಕಡೆಯ ಕಾಲದಲ್ಲಿ. ಏಕೆಂದರೆ ಪರವಾದಿಗಳು ತಮ್ಮ ರೂಪವನ್ನು ಮರೆಮಾಡಿ ಜಂಗಮರೂಪದಿಂದ ಬಂದು, ಅವನು ಹಂಪೆಗೆ ಬರುವಾಗ, ದಾರಿಯಲ್ಲಿ ಅವನನ್ನು ಇರಿದಂತೆಯೂ, ಆತನು ಹಂಪೆಗೆ ಬಂದು, ತನಗೆ ಸಮಾಧಿ ದೀಕ್ಷೆಯನ್ನು ಕೊಡಬೇಕೆಂದು ಹರಿಹರನಿಗೆ ಪ್ರಾರ್ಥಿಸಿದಂತೆಯೂ, ಹರಿಹರನು ಅವನನ್ನು ಪದ್ಮರಸರ ಕಡೆಗೆ ಕಳಿಸಿದಂತೆಯೂ, ಪದ್ಮರಸರಿಂದ ಸಮಾಧಿ ದೀಕ್ಷೆಯನ್ನು ಪಡೆದು ಬೇಲೂರಲ್ಲಿ ಐಕ್ಯವಾದಂತೆಯೂ ತಿಳಿಯುವುದು.[೧] ಆದುದರಿಂದ ರಾಘವಾಂಕನು ಕಾಕತೀಯ ಗಣಪತಿ ಸಿಂಹಾಸನದ ಮೇಲಿದ್ದಾಗ ಓರಂಗಲ್ಲಿಗೆ ಹೋಗಿ ಮೀಸಲು ಕವಿತೆಯನ್ನು ಓದಿ, ಪರವಾದಿಗಳನ್ನು ಗೆದ್ದು, ರಾಜಪ್ರತಿನಿಧಿ ಯುವರಾಜ ರುದ್ರದೇವ (ರುದ್ರಾಂಬೆ) ನಿಂದ ಮನ್ನಣೆ ಪಡೆದನೆಂದು ಭಾವಿಸಬಹುದು ಈ ಸಂಗತಿ ಗಣಪತಿಮಹಾರಾಜನ ಕಾಲದಲ್ಲಿ ನಡೆದಿರಬಹುದಾದುದರಿಂದ ರಾಘವಾಂಕನು ಮೂರನೆಯ ಬಲ್ಲಾಳ (ಕ್ರಿ. ಶ. ೧೨೫೪–೧೨೯೨) ನ ಕಾಲದಲ್ಲಿರದೆ ಅದಕ್ಕೂ ಮೊದಲು ಇದ್ದಿರಬಹುದು.

ಸಕಳೇಶಮಾದರಸರ ವಿಷಯವು ಭೀಮಕವಿಯ ಬಸವಪುರಾಣ(ಕ್ರಿ ಶ ೧೩೬೯) ಪದ್ಮರಾಜಪುರಾಣ, ಚೆನ್ನಬಸವಪುರಾಣ (ಕ್ರಿ. ಶ. ೧೫೮೫) ಕಂಚಿಯ ಶಂಕರಾರಾಧ್ಯರ (ಸಂಸ್ಕೃತ) ಬಸವೇಶವಿಜಯ (ಕ್ರಿ. ಶ ೧೩೨೦) ಮೊದಲಾದ ವೀರಶೈವ ಗ್ರಂಥಗಳಲ್ಲಿ ವರ್ಣಿತವಾಗಿದೆ. ಅವರು ಪದ್ಮರಸರ ತಂದೆಯಾದ ಮಾದರಸರ ತಂದೆ, ಪರ್ವತ ಮಲ್ಲಿಕಾರ್ಜುನಯೋಗಿಯ ಮಗ, ತಂದೆಯ ಆಜ್ಞೆಯ ಪ್ರಕಾರ ಬಸವಾದಿ ಪ್ರಮಥರ ಸಂಗಡ ಕಲ್ಯಾಣದಲ್ಲಿ ಕೆಲಕಾಲವಿದ್ದರು ಅಲ್ಲಿ ತಮ್ಮ ಶಿಷ್ಯನಾದ ಚಿಕ್ಕಮಾದಣ್ಣನಿಗೆ ಪ್ರಾಣದಾನ ಮಾಡಿದರು. ಬಸವಾದ್ಯರು ಐಕ್ಯವಾಗಲು ಗೋಪೆಯ ಶಿವದೇವನೆಂಬ ವೀರವ್ರತಿಯು ಪುರಕ್ಕೈದಿ, ಅವನಿಗೆ ಬಸವಾದ್ಯರ ಐಕ್ಯವನ್ನರುಹಿ ಅವನನ್ನು ಪ್ರಾಣಲಿಂಗದೊಳಗೆ ಅಡಗಿಸಿದರು. ಅಲ್ಲಿಂದ ಶ್ರೀಶೈಲಕ್ಕೆ ಹೋಗಿ ಅಲ್ಲಿ ಐಕ್ಯರಾದರು.[೨] ಇಲ್ಲಿ ಹೇಳಿದ ವೀರವ್ರತಿ ಗೋಪೆಯ ಶಿವದೇವ, ಚೌಡದಾನಪುರದ ಶಾಸನಗಳಲ್ಲಿ ಸ್ತುತಿಸಲ್ಪಟ್ಟ ಗೋಪೆಯ ಶಿವದೇವನಿರಬೇಕೆಂದು ಡಾ. ಆರ್. ಸಿ. ಹಿರೇಮಠರ ನಂಬುಗೆ. ಚೌಡದಾನಪುರದ ಶಾಸನಗಳು ಶಿವದೇವರ ಜೀವಿತಾವಧಿಯಲ್ಲಿ ಲಿಖಿತವಾಗಿವೆಯೆಂದು ಗ್ರಹಿಸಿದರೆ ಆ ಶಿವದೇವರು ಸಕಳೇಶಮಾದರಸರು ದರ್ಶನವಿತ್ತ ಗೋಪೆಯ ಶಿವದೇವರಾಗಲಾರರೆಂದು ಅನ್ನಿಸುವದು. ಚೌಡದಾನಪುರದ ಶಾಸನೋಕ್ತ ಅವಧಿ ಶಾ. ಶ ೧೧೪೮ ರಿಂದ ೧೨೦೮ (ಕ್ರಿ. ಶ. ೧೨೨೬ ರಿಂದ ೧೨೮೬)ರ ವರೆಗೆ ಸುಮಾರು ೬೦ ವರ್ಷ.

---

೧. ರಾ. ಚ. ಸ. ೧೯ ಪ. ೨೮-೨೯. ಚೆ. ಬ. ಪು. ಸಂ. ೬೨ ಪ. ೫೬

೨. ಪ. ಪು. ಸಂ. ೨ ಪ. ೨೮-೪೧

ವೀರವ್ರತಿ ಗೋಪಿಯ ಶಿವದೇವರು ಬಸವಾದ್ಯರ ಐಕ್ಯವನ್ನು ಕೇಳಿ ಪ್ರಾಣಲಿಂಗದಲ್ಲಿ ಅಡಗಿದರೆಂದು ಪದ್ಮಣಾಂಕನು ಹೇಳುವನು. ಬಸವಾದ್ಯರು ಕ್ರಿ. ಶ ೧೧೬೭-೮ರಲ್ಲಿ ಐಕ್ಯರಾದರು. ಅವರ ಐಕ್ಯದ ಸುದ್ದಿ ಚೌಡದಾನಪುರಕ್ಕೆ ತಲುಪಲು ಸುಮಾರು ನೂರಿಪ್ಪತ್ತು ವರ್ಷಗಳಷ್ಟು ದೀರ್ಘಕಾಲ ಬೇಕಾಗದು. ಸಕಳೇಶಮಾದರಸರೂ, ಕಲ್ಯಾಣದ ಕ್ರಾಂತಿಯಾದೊಡನೆ ಉಳಿದ ಶರಣರೊಡನೆ ಕಲ್ಯಾಣವನ್ನು ತ್ಯಜಿಸಿ ಶ್ರೀಶೈಲಕ್ಕೆ ಹೋಗುವ ಸಮಯದಲ್ಲಿ ಗೋಪಿಯ ಶಿವದೇವರ ಊರಿಗೆ ಹೋಗಿದ್ದ ರಾದುದರಿಂದ ಗೋಪಿಯ ಶಿವದೇವರೂ, ಸಕಳೇಶ ಮಾದರಸರೂ, ಬಸವಾದ್ಯರ ಸಮಕಾಲದವರಾಗಿರಬೇಕು. ಇವರು ಶಾಸನೋಕ್ತ ಚೌಡದಾನಪುರದ ಶಿವದೇವ ರಿಂದ ಬೇರೆಯಾಗಿರಬೇಕು. ಏಕೆಂದರೆ ಚೌಡದಾನಪುರದ ಒಂದು ಶಾಸನದಲ್ಲಿ ಅವರು ಶಕವರ್ಷ ೧೧೪೮ (ಕ್ರಿ. ಶ. ೧೨೨೬) ರಲ್ಲಿ ಮುಕ್ತಿಕ್ಷೇತ್ರ (ಚೌಡದಾನಪುರ) ವನ್ನು ಪ್ರವೇಶಿಸಿದರೆಂದಿದೆ. ಚೌಡದಾನಪುರದ ಮತ್ತೊಂದು ಶಾಸನದಲ್ಲಿ ರಾಯ ರಾಜಗುರು ಮಹಾವೀರವ್ರತಿ ನೂರೆಂಟು ನವವ್ರತ ನಿಷ್ಠರಹ ಗೋಪಿಯ ಸಿದ್ಧ ಶಿವದೇವರ ಪ್ರಾಣಲಿಂಗ ಮುಕ್ತೇಶ್ವರ ದೇವರ ಹೆಸರಿದೆ. ಅವರ ಕಾಲ ರಾಮಚಂದ್ರದೇವರ ೨೪ನೆಯ ಖರಸಂವತ್ಸರ ಪುಷ್ಯ ಬಹುಳ ೧೫ ಆದಿವಾರ, ಅರ್ಧೋದಯ ಸೂರ್ಯಗ್ರಹಣ ಅಂದರೆ ಶಕವರ್ಷ ೧೨೧೩ (ಕ್ರಿ. ಶ. ೧೨೯೨). ಈ ಶಾಸನೋಕ್ತ ಶಿವದೇವರು ಹಾಸನಜಿಲ್ಲೆಯ ಬೇಲೂರ ತಾಲೂಕಿನ ಶಾಸನ ನಂ, ೨೪೪ ರಲ್ಲಿ ಉಕ್ತರಾದ ಮತ್ತು ಶಿವರಾತ್ರಿಯ ಮಾಯಿದೇವರಿಗೆ ದಾನ ಕೊಟ್ಟ ಶಿವಶರಣನ ತಂದೆಯಾಗಿರಬಹುದೇ ಎಂದು ಸಂಶಯ. ಅವರು ಕ್ರಿ. ಶ. ೧೩ನೆಯ ಶತಮಾನದ ಉತ್ತರಾರ್ಧದಲ್ಲಿ ಜೀವಿಸಿರಬಹುದು. ಸಕಳೇಶ ಮಾದರಸರು ಪದ್ಮರಾಜರ ಅಜ್ಜಂದಿರಾದುದರಿಂದ ಅವರು ಪದ್ಮರಾಜರಿಂದ ಸುಮಾರು ಎರಡು ತಲೆಮಾರ ಅಂದರೆ ನಲವತ್ತು ವರ್ಷ ಮೊದಲು ಇದ್ದಿರಬಹುದು. ಅವರ ಜೀವಿತಾವಧಿ ಬಹಳ ದೂರವಾದರೆ ಹನ್ನೆರಡನೆಯ ಶತಮಾನದ ಉತ್ತರಾರ್ಧ. ಕ್ರಿ. ಶ. ೧೨೦೦ ರೊಳಗಾಗಿ ಅವರೂ ಐಕ್ಯರಾಗಿರಬೇಕು. ಆದುದರಿಂದ ಶಾಸನೋಕ್ತ (ಗೋಪಿಯ) ಶಿವದೇವರು ಸಕಳೇಶ ಮಾದರಸರ ಸಮಕಾಲದವರು ಆಗಲಾರರು.

ಪೊಳಾಲ್ವದಂಡನಾಥನು ಎರಡನೆಯ ನರಸಿಂಹ (ಕ್ರಿ. ಶ. ೧೨೨೦-೧೨೩೪) ನ ಆಳಿಕೆಯಲ್ಲಿ ಹರಿಹರೇಶ್ವರ ಗುಡಿಯನ್ನು ಕಟ್ಟಿಸಿದನೆಂದು ತಿಳಿಯುವದು. ಹರಿ ಹರನು ದ್ವಾರಸಮುದ್ರದಿಂದ ಹಂಪೆಗೆ ಹೋಗುವಾಗ ದಾರಿಯಲ್ಲಿ ಹತ್ತಿದ ಗುಹಾರಣ್ಯಕ್ಷೇತ್ರದಲ್ಲಿದ್ದ ಹರಿಹರಲಿಂಗದಾಲಯಕ್ಕೆ ಬಂದು, ಆ ದೇಗುಲದಲ್ಲಿದ್ದ ಬ್ರಹ್ಮರಾಕ್ಷಸನ ಉಪದ್ರವನ್ನು ತಪ್ಪಿಸಿದನೆಂದು ರಾಘವಾಂಕ ಚರಿತೆ, ಪದ್ಮರಾಜ ಪುರಾಣಗಳಲ್ಲಿ ಹೇಳಿದೆ.[೧] ಹರಿಹರನ ಈ ಪವಾಡ ಪೋಲಾಳ್ವದಂಡನಾಥನು ಹರಿಹರ

೧. ಪ. ಪು. ಸಂ. ೫ ಪದ್ಯ ೨೧-೨೩

ದೇವಾಲಯವನ್ನು ಹೊಸದಾಗಿ ಕಟ್ಟಿಸುವುದಕ್ಕಿಂತ ಮೊದಲು ಆಗಿರಬೇಕು. ಹರಿಹರಕ್ಷೇತ್ರ ಪ್ರಾಚೀನವಾದುದು. ಕ್ರಿ. ಶ. ಏಳನೆಯ ಶತಮಾನದ ಅಂತ್ಯದಲ್ಲಿ ಹುಟ್ಟಿದ ವಿನಯಾದಿತ್ಯನ ಒಂದು ಶಾಸನವು ಹರಿಹರದಿಂದ ಕೊಡಲ್ಪಟ್ಟಿದೆ.[೧] ಪೋಲಾಳ್ವದಂಡನಾಥನು ಹರಿಹರೇಶ್ವರ ದೇವಾಲಯವನ್ನು ಕಟ್ಟಿಸುವುದಕ್ಕಿಂತ ಮೊದಲು ನೂರಾರು ವರ್ಷ ಹರಿಹರೇಶ್ವರನ ಉಲ್ಲೇಖ ದೊರೆಯುವದು. ಚಾಲುಕ್ಯ ಕಲಚುರಿ ನರಪತಿಗಳ ಶಾಸನಗಳು ಹರಿಹರ ದೇವಾಲಯದಲ್ಲಿ ಅವೆ.[೨] ಪೋಲಾಳ್ವ ದಂಡನಾಥನಿಗಿಂತ ಮೊದಲು ಹರಿಹರ ದೇವಾಲಯವನ್ನು ಕಟ್ಟಿಸಲು ಹೆಮ್ಮಾಡಿ ರಾಯನು ನಿಶ್ಚೈಸಿದ್ದನೆಂದೂ ಅವನ ಕನಸಿನಲ್ಲಿ ದೇವರು ಬಂದು ಮುಂದೆ ನನ್ನ ಭಕ್ತನು ಈ ಕೆಲಸವನ್ನು ಮಾಡುವನೆಂದು ಹೇಳಿ ಗುಡಿ ಕಟ್ಟಿಸುವದನ್ನು ನಿಲ್ಲಿಸಿದ ನೆಂದೂ ಹರಿಹರ ದೇವಾಲಯದ ಒಂದು ಶಿಲಾಶಾಸನದಲ್ಲಿದೆ.[೩] ಆದುದರಿಂದ ಹರಿಹರ ಕ್ಷೇತ್ರವು ಗುಹಾರಣ್ಯ ಕ್ಷೇತ್ರವೆಂಬ ಹೆಸರಿನಿಂದ ಬಲು ಪ್ರಾಚೀನ ಕಾಲದಿಂದ ಹೆಸರಾಗಿದೆ. ಪೋಲಾಳ್ವದಂಡನಾಥನು ದೇವಗಿರಿಯ ಯಾದವ ನೃಪತಿ ಸಿಂಹಣ (ಕ್ರಿ. ಶ. ೧೨೧೦–೧೨೪೭) ನ ಮೊಮ್ಮಗ ಕೃಷ್ಣನ ಸೈನ್ಯವನ್ನು ಕ್ರಿ. ಶ. ೧೨೨೪ರಲ್ಲಿ ಸೋಲಿಸಿ, ಅದನ್ನು ತುಂಗಭದ್ರೆಯ ಆಚೆಗೆ ಅಟ್ಟಿ, ಅದ್ಭುತ ವಿಜಯವನ್ನು ಸಂಪಾದಿಸಿ, ಹೊಯ್ಸಳ ರಾಜ್ಯವನ್ನು ರಕ್ಷಿಸಿದ ಸ್ಮಾರಕಕ್ಕಾಗಿ ಹರಿಹರ ದೇವಸ್ಥಾನವನ್ನು ಕಟ್ಟಿಸಿದನೆಂದು ಅಲ್ಲಿಯ ಒಂದು ಶಾಸನದಲ್ಲಿ ಹೇಳಿದೆ.[೪] ಈ ಶಾಸನದ ಕಾಲ ಶಾ. ಶ. ೧೦೪೬ (ಕ್ರಿ. ಶ. ೧೨೨೪). ಈ ಶಾಸನ ದಲ್ಲಿಯೇ ಪೋಲಾಳ್ವದಂಡನಾಥನು ಹರಿಯ ಚಾರಿತ್ರವೆಂಬ ಗ್ರಂಥವನ್ನು ಷಟ್ಪದಿ ಯಲ್ಲಿ ಬರೆದಿರುವನೆಂದಿದೆ. ಷಟ್ಪದಿಯಲ್ಲಿ ಗ್ರಂಥ ಬರೆದವರಲ್ಲಿ ರಾಘವಾಂಕನೇ ಮೊದಲನೆಯವನೆಂದು ಪ್ರತೀತಿ. ಅವನು ಪೋಲಾಳ್ವದಂಡನಾಥನಿಗಿಂತ ಮೊದಲು ಷಟ್ಪದಿಯಲ್ಲಿ ಗ್ರಂಥ ರಚಿಸಲು ಆರಂಭಿಸಿರಬೇಕು. ಅದು ಕ್ರಿ. ಶ. ೧೨೨೪ಕ್ಕೆ ಮೊದಲಿರಬೇಕು. ಪೋಲಾಳ್ವದಂಡನಾಥನು ರಾಘವಾಂಕನಿಗಿಂತ ಮೊದಲಿನವ ನಾಗಿದ್ದರೆ ಷಟ್ಪದಿಗ್ರಂಥಕಾರರಲ್ಲಿ ಅವನೇ ಮೊದಲನೆಯವನಾಗುತ್ತಿದ್ದನು. ಅವನು ಎರಡನೆಯ ಬಲ್ಲಾಳ, ಎರಡನೆಯ ನರಸಿಂಹ, ಸೋಮೇಶ್ವರರ ಆಳಿಕೆಯಲ್ಲಿ ಮಹಾಪ್ರಧಾನ ದಂಡನಾಯಕನಾಗಿದ್ದನು.

ರಾಘವಾಂಕನು ಹಂಪೆಯ ದೇವರಾಜನ ಸಭೆಯಲ್ಲಿ ಹರಿಶ್ಚಂದ್ರ ಕಾವ್ಯ ವನ್ನೋದಿ ಕವಿ ಶರಭಭೇರುಂಡನೆಂಬ ಪಾದದ ಪೆಂಡೆಯನ್ನು ಪಡೆದನೆಂದು

---

೧ Harihar plates dated 14th year of Vinayaditya Satyas'raya i. e. 694 A. D. : E. C. Vol. XI. Dg. 66.

೨ E. C. Vol. XI. Dg. 35, 39, 41 and 42.

೩ E. C. Vol. XI. Dg. 25.

೪ E. C. Vol XI. Dg No. 25 Davanageri No. 25

ರಾಘವಾಂಕ ಚರಿತೆಯಲ್ಲಿ ಹೇಳಿದೆ.[೧] ಈ ದೇವರಾಜನು ಯಾರೆಂಬುದು ಗೊತ್ತಾಗುವುದಿಲ್ಲ. ಹರಿಹರ ರಾಘವಾಂಕರ ಕಾಲದಲ್ಲಿ ಹಂಪೆಯಲ್ಲಿ ದೇವರಾಜನೆಂಬ ಭೂಪಾಲನಿದ್ದ ಬಗೆಗೆ ಆಧಾರಗಳು ದೊರೆಯುವುದಿಲ್ಲ. ಬ್ರಾವುನ್ನರವರ ಹೇಳಿಕೆಯ ಪ್ರಕಾರ. ಕಿಟೆಲ್ಲರವರು ಹಂಪೆಯಲ್ಲಿ ಕ್ರಿ. ಶ. ೧೨೮೬ ರಿಂದ ೧೩೨೮ರ ವರೆಗೆ ಒಬ್ಬ ದೇವರಾಯನು ಆಳುತ್ತಿದ್ದನೆಂದು ಬರೆದಿರುವರು.[೨] ಇದಕ್ಕೆ ಇತಿಹಾಸದ ಬೆಂಬಲ ವಿಲ್ಲೆಂದು ದಿ. ರಾ. ನರಸಿಂಹಾಚಾರ್ಯರು ಹೇಳುವರು.[೩] ಕಂಪಿಲರಾಯನಿಗೆ ಕಂಪಿಲದೇವರಾಯನೆಂಬ ಹೆಸರಿತ್ತೆಂದೂ ಅವನೇ ಸಿದ್ಧನಂಜೇಶನು ಹೇಳುವ ದೇವರಾಜನಿರಬೇಕೆಂದೂ ಕೆಲ ಪಂಡಿತರ ಹೇಳಿಕೆ.[೪] ಕಂಪಿಲರಾಯನು ಆನೆಗೊಂದಿಯಲ್ಲಿ ಅಥವಾ ಕಮ್ಮಟದುರ್ಗದಲ್ಲಿ ರಾಜ್ಯವಾಳುತ್ತಿದ್ದನು. ಅವನು ಬಹಾವುದ್ದೀನನಿಗೆ ಆಶ್ರಯ ಕೊಟ್ಟುದುದರಿಂದ ಅಲ್ಲಾವುದ್ದೀನ ಖಿಲಜಿಯ ದಂಡನಾಯಕ ಮಲಿಕ ಕಾಫರನು ಕ್ರಿ. ಶ. ೧೩೧೪ರಲ್ಲಿ ಇವನನ್ನು ಯುದ್ಧದಲ್ಲಿ ಸೋಲಿಸಿ ಆನೆಗೊಂದಿಯನ್ನು ಕೈವಶಮಾಡಿಕೊಂಡನು. ರಾಘವಾಂಕನಿಗೆ ಮರ್ಯಾದೆ ದೊರಕಿದುದು ಹಂಪೆಯಲ್ಲಿ ಆನೆಗೊಂದಿಯಲ್ಲಿ ಅಲ್ಲ. ಆದುದರಿಂದ ಕಂಪಿಲರಾಯನು ಸಿದ್ಧನಂಜೇಶನು ಹೇಳುವ ದೇವರಾಜನಾಗಲಾರ.

ಹರಿಹರನು ತನ್ನ ರಗಳೆಗಳಲ್ಲಿ ಹಂಪೆಯ ವಿರೂಪಾಕ್ಷನನ್ನು ಹಂಪೆಯರಸ ದೇವರಾಜ ಎಂದು ಮೇಲಿಂದ ಮೇಲೆ ಸಂಬೋಧಿಸುವನು. ಹಂಪೆಯ ಸುತ್ತಲಿನ ಪ್ರದೇಶಕ್ಕೆ ಒಡೆಯ ಹಂಪೆಯ ವಿರೂಪಾಕ್ಷನೆಂದೇ ಆ ಕಾಲದಲ್ಲಿ ತಿಳುವಳಿಕೆಯಿತ್ತು. ವಿಜಯನಗರ ರಾಜ್ಯಸ್ಥಾಪಕರೂ, ಪ್ರಭುಗಳೂ ಆದ ಸಂಗಮವಂಶದವರು ತಾವು ರಾಜರೆಂದು ತಿಳಿಯುತ್ತಿದ್ದಿಲ್ಲ. ತಾವು ಆಳುವ ರಾಜ್ಯಕ್ಕೆ ಹಂಪೆಯ ವಿರೂಪಾಕ್ಷನೇ ರಾಜನೆಂದೂ ತಾವು ಅವನ ಪ್ರತಿನಿಧಿಗಳೆಂದೂ ಸಾರುತ್ತಿದ್ದರು. ತಮ್ಮ ರಾಜ ಮುದ್ರೆಯಲ್ಲಿ "ಶ್ರೀ ವಿರೂಪಾಕ್ಷ" ಎಂಬ ಸಂಕೇತವನ್ನಿಟ್ಟುಕೊಂಡಿದ್ದರು. ಹರಿಹರಾದಿಗಳ ಕಾಲದಲ್ಲಿ ಹಂಪೆಯರಸನು ವಿರೂಪಾಕ್ಷನೆಂದೇ ಗ್ರಹಿಕೆಯಿತ್ತು. ದೇವಾಲಯದ ವ್ಯವಸ್ಥಾಪಕರು ಸಭೆ ಮಾಡಿ ದೇವರಾಜನಾದ ಶ್ರೀ ವಿರೂಪಾಕ್ಷನ ಹೆಸರಿನಿಂದ ರಾಘವಾಂಕನನ್ನು ಅವನ ಕವಿತಾ ಪ್ರೌಢಿಮೆಗಾಗಿ ಮನ್ನಿಸಿರಬಹುದು. ಮುಂದಿನವನಾದ ಸಿದ್ಧನಂಜೇಶನು ದೇವರಾಜನೆಂಬ ವ್ಯಕ್ತಿಯಿಂದ ರಾಘವಾಂಕನಿಗೆ ಗೌರವ ದೊರೆಯಿತೆಂದು ನಂಬಿರಬಹುದು.

---

೧. ರಾ. ಚ. ಸ. ೩ ಪ. ೧೪.

೨. ಛಂದೋಂಬುಧಿ ಉಪೋದ್ಘಾತ ಪುಟ Liii

೩. ಕ. ಕ. ಭಾಗ ೧, ಪುಟ ೨೨೧

೪. ೧. ಕ. ಮ, ಪ್ರ. ಉಪೋದ್ಘಾತ ಪುಟ xiv ಮತ್ತು xv ಅಡಿಟಿಪ್ಪಣಿ

ಹಂಪೆ ಅಥವಾ ಪಂಪಾಕ್ಷೇತ್ರ ಬಲು ಪುರಾತನವಾದ ಕ್ಷೇತ್ರ. ಬಾದಾಮಿ ಚಾಲುಕ್ಯವಂಶದ ವಿನಯಾದಿತ್ಯ ಸತ್ಯಾಶ್ರಯ (ಕ್ರಿ. ಶ. ೬೮೦ ರಿಂದ ೬೯೬) ನು ದಾನಬಿಟ್ಟು ಪಂಪಾತೀರ್ಥದಿಂದ ಬರಿಸಿದ ತಾಮ್ರಪಟವು ಉಪಲಬ್ಧವದೆ[೧] ಇದರಲ್ಲಿರುವ ಮಿತಿ ಶಕ ೬೧೨ (ಕ್ರಿ. ಶ. ೬೯೦). ಈ ಶಾಸನವು ಹಂಪೆಯ ಪ್ರಾಚೀನತ್ವವನ್ನೂ ಅದು ಕ್ರಿ. ಶ. ಏಳನೆಯ ಶತಕದಲ್ಲಿ ಪವಿತ್ರವಾದ ಕ್ಷೇತ್ರವಾಗಿತ್ತೆಂಬುದನ್ನೂ ಸಾರುವುದು. ರಾಮಾಯಣದಲ್ಲಿ ಪಂಪಾಸರೋವರದ ಮತ್ತು ಋಷ್ಯಮೂಕ ಪರ್ವತದ ವರ್ಣನೆಗಳಿವೆ. ಹಂಪೆಯ ವಿರೂಪಾಕ್ಷದೇವರ ಉತ್ತರದಿಕ್ಕಿನ ದುರ್ಗಗುಡಿಯ ಹತ್ತರವಿದ್ದ ಶಾಸನದಲ್ಲಿ ಆಗ ಕುಂತಲದೇಶವನ್ನಾಳುತ್ತಿದ್ದ ಕುಱುಗೋಡ ಇಮ್ಮಡಿ ರಾಜಮಲ್ಲನ ಮಗ ಕಲಿದೇವ (?) ವಿರೂಪಾಕ್ಷನ ಪೂಜಾ ಕಾರ್ಯಕ್ಕಾಗಿ ಹಂಪೆಯಲ್ಲಿ ಭೂಮಿಯನ್ನು ದಾನವಾಗಿ ಕೊಟ್ಟಂತೆ ಹೇಳಿದೆ. ಈ ಶಾಸನದ ಕಾಲ ಶಕವರ್ಷ ೧೧೨೧ (ಕ್ರಿ. ಶ. ೧೧೯೯).[೨] ಈ ಶಾಸನದಿಂದ ಕ್ರಿ. ಶ. ೧೨೦೦ ರ ಸುಮಾರಕ್ಕೆ ಕುರುಗೋಡ ಇಮ್ಮಡಿ ರಾಚಮಲ್ಲನ ಅಧಿಕಾರಕ್ಕೆ ಹಂಪೆಯು ಒಳಗಾಗಿತ್ತೆಂದು ಊಹಿಸಬಹುದು. ಈತನು ಪರಮ ಶಿವಭಕ್ತ. ಭಕ್ತರನ್ನು ಪಿರಿದು ಮನ್ನಿಸುವವನು. ಕುಮಾರ ಪದ್ಮರಸನು ಸಾನಂದ ಚರಿತೆಯಲ್ಲಿ ಕುರುಗೋಡು ನೃಪ ರಾಚಮಲ್ಲನು ಶಿವನ ಓಲಗದಲ್ಲಿದ್ದ ಶರಣರಲ್ಲಿ ಒಬ್ಬನೆಂದು ಹೇಳುತ್ತಾನೆ. ಈತನು ಪದ್ಮರಸ, ರಾಘವಾಂಕಾದಿಗಳ ಸಮಕಾಲದವನಿರಬೇಕು. ಹಂಪೆಯು ಇವನ ಆಧಿಪತ್ಯಕ್ಕೊಳಪಟ್ಟಿತ್ತಾದುದರಿಂದ ಇವನೇ ರಾಘವಾಂಕನಿಗೆ ಮನ್ನಣೆ ಮಾಡಿರಬಹುದೇ ಎಂದು ಸಂಶಯ. ಇವನು ಪರಮ ಶಿವಭಕ್ತನೆಂದು ಕೀರ್ತಿ ಪಡೆದು ಶಿವನಲ್ಲಿ ಐಕ್ಯನಾಗಿರುವುದರಿಂದ ಇವನಿಗೆ ದೇವರಾಜನೆಂದು ಕರೆದಿರಬಹುದೇ ಎಂಬ ಶಕೆ.[೩] ಆತನು ಹಂಪೆಗೆ ಬಂದಾಗ ಸಭೆ ಮಾಡಿ ರಾಘವಾಂಕನನ್ನು ಮನ್ನಿಸಿರಬಹುದು. ಕುಱುಗೋಡ ಇಮ್ಮಡಿ ರಾಚಮಲ್ಲನಿಂದ ರಾಘವಾಂಕನಿಗೆ ಗೌರವ ದೊರೆತುದು ನಿಜವಿದ್ದರೆ ರಾಘವಾಂಕನು ಇಮ್ಮಡಿ ರಾಚಮಲ್ಲನ ಸಮಕಾಲದವನೆಂದು ಒಪ್ಪಿಕೊಳ್ಳಬೇಕಾಗುವದು. ಇಮ್ಮಡಿ ರಾಚಮಲ್ಲನ ಕಾಲ ಕ್ರಿ. ಶ. ೧೧೮೦ ರಿಂದ ೧೨೦೦ ರ ವರೆಗೆ.

ಹಂಪೆಯಲ್ಲಿಯೇ ಇನ್ನೊಂದು ಶಿಲಾಲೇಖವು ದೊರೆತಿರುವುದು. ಅದು ವಿರೂಪಾಕ್ಷದೇವಾಲಯದ ದಕ್ಷಿಣ ದ್ವಾರದ ಬಳಿಯಲ್ಲಿದೆ. ಅದು ಸೋಮೇಶ್ವರ ದೇವರಸರು ಶಕವರ್ಷ ೧೧೫೮ ದುರ್ಮುಖಿ ಸಂವತ್ಸರದಲ್ಲಿ ಬಿಟ್ಟ ಶಾಸನ. ದೇವರಿಗೆ

---

೧ Indian Antiquary Vol. VI. P. 86.

೨ Topographical list of Inscriptions. Vol. I. P. 304. Inscription No. 332. by V. Rangacharya.

೩ E. I. XIV. 265-284.

ಪ್ರತಿದಿವಸ ಬೇಕಾಗುವ ಸಾಮಾನುಗಳನ್ನು ಹೇಳಿ ಅವುಗಳಗಾಗಿ ೧೮೧ ಪಣ (ಆಗಿನ ಕಾಲದ ನಾಣ್ಯ) ಗಳನ್ನು ವಿರೂಪಾಕ್ಷದೇವರಿಗೆ ಅರ್ಪಿಸಲಾಗಿದೆ.[೧] ಈ ಶಾಸನದ ಕಾಲ ಕ್ರಿ. ಶ. ೧೨೩೭ ಇದರಲ್ಲಿ ಹೇಳಿದ ಸೋಮೇಶ್ವರ ದೇವರಸನು ಯಾರೆಂಬುದು ಸ್ಪಷ್ಟವಾಗಿಲ್ಲ. ಈತನು ಹೊಯ್ಸಳ ಎರಡನೆಯ ನಾರಸಿಂಹನ ಮಗನಾದ ಸೋಮೇಶ್ವರನೆಂಬವನು[೨], ಆತನು ಕ್ರಿ. ಶ. ೧೨೩೪ ರಲ್ಲಿ ಹೊಯ್ಸಳ ರಾಜ್ಯಕ್ಕೆ ಅಧಿಪತಿಯಾಗಿದ್ದನು. ಈ ಆಧಾರದಿಂದ ಹಂಪೆ ಹೊಯ್ಸಳರ ಆಧೀನದಲ್ಲಿತ್ತೆಂಬುದೂ ಹೊಯ್ಸಳ ಚಕ್ರವರ್ತಿಗಳು ವಿರೂಪಾಕ್ಷದೇವಾಲಯದ ವ್ಯವಸ್ಥೆಯ ಬಗೆಗೆ ಆಸ್ಥೆಯನ್ನು ವಹಿಸುತ್ತಿದ್ದರೆಂಬುದೂ ಸ್ಪಷ್ಟವಾಗುವುದು. ಮೂರನೆಯ ವೀರಬಲ್ಲಾಳನ ಮರಣದ ನಂತರ ನಾಲ್ಕನೆಯ ಬಲ್ಲಾಳ ಅಥವಾ ವೀರ ವಿರೂಪಾಕ್ಷನ ಪಟ್ಟಾಭಿಷೇಕ ಹಂಪೆಯಲ್ಲಿ ಕ್ರಿ. ಶ. ೧೩೪೩ರಲ್ಲಿ ಆಗಿರುವುದು. ಹೊಯ್ಸಳರ ಹೆಸರಿನ ಮುಂದೆ ಸಾಮಾನ್ಯವಾಗಿ 'ದೇವರಸ' ಎಂಬ ಪದವಿದೆ. ಉದಾಹರಣೆ— ಬಲ್ಲಾಳದೇವರಸ, ನಾರಸಿಂಹದೇವರಸ, ಸೋಮೇಶ್ವರದೇವರಸ. ಮುಂದಿನ ವೀರಶೈವ ಕವಿಗಳು ಈ 'ದೇವರಸ' ಶಬ್ದವನ್ನು 'ದೇವರಾಜ' ಎಂದು ಮಾರ್ಪಡಿಸಿಕೊಂಡಿರಬಹುದೇ? ಅವರಲ್ಲಿ ಒಬ್ಬರು ಹಂಪೆಯ ನೆಲೆವೀಡಿನಲ್ಲಿದ್ದಾಗ ರಾಘವಾಂಕನಿಗೆ ಕವಿಶರಭಭೇರುಂಡ ಎಂಬ ಪಾದಪೆಂಡೆಯನ್ನು ಕೊಟ್ಟು ಗೌರವಿಸಿರಬಹುದೇ ಎಂದು ತರ್ಕ. ಚಿಕ್ಕ ಮತ್ತು ಅಪ್ರತಿಷ್ಠಿತ ಅಧಿಕಾರಿಗಳಾಗಲಿ, ಮಾಂಡಲಿಕರಾಗಲಿ ಕೊಟ್ಟ ಪದವಿಗಳಿಗೆ ಅಷ್ಟು ಮಹತ್ವ ಬರುವುದಿಲ್ಲ.

ಗಿರಿಜಾಕಲ್ಯಾಣದಲ್ಲಿ[೩] ಮತ್ತು ರಗಳೆಗಳಲ್ಲಿ ಹರಿಹರನು "ಮೂರು ರಾಯರು" ಎಂಬ ಪದವನ್ನೂ, ಅವರು "ಅಶ್ವಪತಿ, ಗಜಪತಿ, ನರಪತಿ"ಗಳೆಂಬುದನ್ನೂ ಮೇಲಿಂದ ಮೇಲೆ ತರುವನು. ಇವರಲ್ಲಿ ಕಲಿಂಗದ ದೊರೆಗಳಿಗೆ ಗಜಪತಿಗಳೆಂದು ಹೆಸರು. ಅಶ್ವಪತಿಗಳು ಯಾರೆಂಬುದು ಸ್ಪಷ್ಟವಾಗಿಲ್ಲ. ಕೆಲವರು ಬಹಮನೀ ಸುಲ್ತಾನರು ಅಶ್ವಪತಿಗಳಾಗಿರಬೇಕೆಂದು ಸೂಚಿಸುವರು. ವಿಜಯನಗರದ ದೊರೆಗಳಿಗೆ ನರಪತಿಗಳೆಂದು ಹೆಸರು. ಆದುದರಿಂದ ಕೆಲವರು ವಿಜಯನಗರದ ರಾಜ್ಯ ಸ್ಥಾಪಿತವಾದ ನಂತರ ಅದರ ಅಧಿಪತಿಗಳಿಗೆ ನರಪತಿಗಳೆಂದು ಹೆಸರು ರೂಢಿಯಲ್ಲಿ

---

೧ Inscription of Ceded District No. 7. quoted in Topographical list of the Inscriptions of the Madras Presidency by V. Rangacharya. Vol. I. P. 304. No. 333.

೨ ಸೋಮೇಶ್ವರನು ಕ್ರಿ. ಶ. ೧೨೩೬ರಲ್ಲಿ ಪಲ್ಲವ ಪಾಂಡ್ಯರನ್ನು ಸೋಲಿಸಿ, ಅವರ ವಿಪುಲಸಂಪತ್ತನ್ನು ಕೈವಶಮಾಡಿಕೊಂಡು ಅದನ್ನು ಹಂಪಿ ಮೊದಲಾದ ಕ್ಷೇತ್ರಗಳಲ್ಲಿ ದೇವರಿಗೆ ದಾನಕೊಟ್ಟನು. (J.D. M. Derrct : The Hoysalas P. 57)

೩ ಗಿ. ಕ. ಆ. ೨ ಪ. ೯೪

ಬಂಪನಂತರ ಹರಿಹರನು ಜೀವಿಸಿದ್ದಿರಬಹುದೆಂದು ಸಾಧಿಸಬಹುದು. ಆದರೆ ಅದು ಸಾಧ್ಯವಿಲ್ಲ. ವಿಜಯನಗರದ ಧೊರೆಗಳಿಗೆ ನರಪತಿಗಳೆಂಬ ಹೆಸರಿದ್ದುದು ನಿಜವಾದರೂ, ಅವರ ಶಾಸನಗಳ ಪ್ರಶಸ್ತಿಯಲ್ಲಿ ಅವರಿಗೆ "ಮೂರು ರಾಯರಗಂಡ" ಎಂಬ ಶಬ್ದವದೆ. ಅದು ಬುಕ್ಕರಾಯನಿಂದ ಕೃಷ್ಣದೇವರಾಯನವರೆಗಿರುವ ಶಾಸನಗಳಲ್ಲಿ ದೊರೆಯುವುದು.[೧] ಕೃಷ್ಣದೇವರಾಯನಿಗೆ "ಮೂರು ರಾಯರ ಗಂಡ" ನಲ್ಲದೆ "ಅಶ್ವಪತಿ ಗಜಪತಿ ವಿಭಾಳ"ನೆಂದೂ ಬಿರುದಿದೆ.

ಕಾಕತೀಯ ಗಣಪತಿ ಪ್ರತಾಪರುದ್ರರ ಶಾಸನಗಳಲ್ಲಿ "ಮೂರು ರಾಯ ಜಗದಾಳ" ಎಂಬ ಶಬ್ದ ಅವರ ಪ್ರಶಸ್ತಿಯಲ್ಲಿ ದೊರೆಯುವದು.[೨] ಕಾಕತೀಯ ರುದ್ರ ಮಹಾದೇವನ ಮಾಂಡಲಿಕ ತ್ರಿಪುರಾರಿದೇವ ಮಹಾರಾಜನ ಅಳುವಲಪಾಡು ಶಾಸನದಲ್ಲಿ ಬಂದ "ಮೂರುರಾಯ ಜಗದಾಳ" ಎಂಬುದು ಒಂದು. ಅದರ ಕಾಲ ಕ್ರಿ. ಶ. ೧೨೬೨. ಆಗ ವಿಜಯನಗರವಾಗಲಿ ಬಹಮನಿ ರಾಜ್ಯವಾಗಲಿ ಅಸ್ತಿತ್ವದಲ್ಲಿ ಬಂದಿದ್ದಿಲ್ಲ. ಆದುದರಿಂದ ಹರಿಹರನು ಉಪಯೋಗಿಸಿದ 'ಮೂವರು ರಾಯರು' 'ಅಶ್ವಪತಿ ಗಜಪತಿ, ನರಪತಿಗಳು' ಬೇರೆಯವರಾಗಿರಬೇಕು. ಅವರು, ಚೇರ, ಚೋಳ, ಪಾಂಡ್ಯರಿರಬಹುದೆಂದು ಗ್ರಹಿಕೆ. ಕ್ರಿ. ಶ. ಏಳನೆಯ ಶತಮಾನದಲ್ಲಿದ್ದ ಚಾಲುಕ್ಯ ಇಮ್ಮಡಿ ಪುಲಿಕೇಶಿಯ ಮಗ ಮೊದಲನೆಯ ವಿಕ್ರಮಾದಿತ್ಯ (ಕ್ರಿ. ಶ. ೬೫೫–೬೬೮) ತ್ರೈರಾಜ್ಯದಲ್ಲಿ ಅಂತರ್ಹಿತವಾದ ತನ್ನ ತಂದೆಯ ರಾಜ್ಯವನ್ನು ಸ್ವಪ್ರಯತ್ನದಿಂದ ತಿರುಗಿ ಪಡೆದನೆಂದು ಆತನ ಶಾಸನಗಳಲ್ಲಿ ಉಕ್ತವಾಗಿದೆ. ಕಾಂಚಿಯ ಪಲ್ಲವ ನರಸಿಂಹವರ್ಮನು ಚೋಳ ಚೇರ ಪಾಂಡ್ಯರೊಡನೆ ಸಂಧಿಮಾಡಿಕೊಂಡು ಬಾದಾಮಿಯನ್ನು ಮುತ್ತಿ ಚಾಲುಕ್ಯರ ರಾಜ್ಯವನ್ನು ಸುಮಾರು ಹದಿಮೂರು ವರ್ಷ ಕ್ರಿ. ಶ. ೬೪೨ ರಿಂದ ೬೫೫ರವರೆಗೆ ತನ್ನ ಆಧೀನದಲ್ಲಿಟ್ಟುಕೊಂಡಿದ್ದನು. ವಿಕ್ರಮಾದಿತ್ಯನು ಅವರನ್ನು ಸೋಲಿಸಿ ಬಾದಾಮಿಯಿಂದ ಅವರನ್ನು ಹೊರದೂಡಿ ಅದನ್ನು ಕೈವಶ ಮಾಡಿಕೊಂಡನು. ಈ ಮಹತ್ಕಾರ್ಯವನ್ನು ಅವನ ಮತ್ತು ಅವನ ವಂಶದವರ ಶಾಸನಗಳಲ್ಲಿ ಬಣ್ಣಿಸಲಾಗಿದೆ. ಅಲ್ಲಿ ಉಪಯೋಗಿಸಿದ ಪದಗಳು "ತ್ರೈರಾಜ್ಯ ಪಲ್ಲವಬಲಮವಷ್ಟಭ್ಯ". ಆದರೆ ಅವರು ಕ್ರಿ. ಶ. ೧೨–೧೪ ಶತಕಗಳಲ್ಲಿ ಅಷ್ಟು ತೇಜಸ್ವಿಗಳಾಗಿದ್ದಿಲ್ಲ. ಬಾದಾಮಿಯ ಮತ್ತು ಕಲ್ಯಾಣದ ಚಾಲುಕ್ಯರು ಅವರನ್ನು

---

೧ Linganapadu grant of Devaraya II. dated 1429 A. D. Darsi (25) dated 1525-26. Kanagiri-Gazalvada dated 1374-75 A. D. Nellur Inscriptions by A. Butterworth and V. Venugopal Vol I. Pages 15 and 17.

೨ See Darsi (1) dated 1272-73. Nellur Inscriptions by A. Butterworth and V. Venugopala Vol I. P. 282.

ಹತ್ತಿಕ್ಕಿ ಅದರ ಪ್ರಭಾವವನ್ನು ಕಡಿಮೆ ಮಾಡಿದ್ದರು. ಆದರೂ ಪರಂಪರಾಗತ ವಾಗಿ ರೂಢಿಯಲ್ಲಿದ್ದ ಶಬ್ದವನ್ನು ಹರಿಹರನೂ ಅವನ ಕಾಲದ ರಾಜಮನೆತನಗಳೂ ಬಳಸಿರುವವೆಂದು ಊಹಿಸಬಹುದು.

ವಿಕ್ರಮಾದಿತ್ಯನ ಮತ್ತು ಅವನ ವಂಶದವರ ಶಾಸನಗಳಲ್ಲಿ ಬರುವ ತ್ರೈರಾಜ್ಯ ಪಲ್ಲವರು ಚೋಳ, ಚೇರ, ಪಾಂಡ್ಯರಿಂದೊಡಗೂಡಿದ ಪಲ್ಲವರು. ಆಗ ಅವರು ಅತಿ ಪ್ರಬಲರಾಗಿದ್ದರು. ಅವರಿಗೆ ಕನ್ನಡದಲ್ಲಿ ಮೂವರು ರಾಯರೆಂದು ಕರೆದಿರ ಬಹುದು. ಆದುದರಿಂದ ಈ ಶಬ್ದದ ಉಪಯೋಗ ಹರಿಹರನ ಕಾಲನಿರ್ಣಯಕ್ಕೆ ಸಹಾಯಕವಾಗಲಾರದು.

ಹರಿಹರನವೆಂದು ಸ್ವೀಕೃತವಾದ ರಗಳೆಗಳಲ್ಲಿ ಬಸವರಾಜದೇವರ ರಗಳೆ, ಪ್ರಭುದೇವರ ರಗಳೆ, ಅಕ್ಕಮಹಾದೇವಿಯ ರಗಳೆ, ಹಾವಿನಹಾಳ ಕಲ್ಲಯ್ಯನ ರಗಳೆ, ಏಕಾಂತದ ರಾಮಯ್ಯನ ರಗಳೆ ಮೊದಲಾದುವು ಅಡಕವಾಗಿವೆ. ರಾಘವಾಂಕನ ಸೋಮನಾಥ ಚರಿತೆ, ಸಿದ್ಧರಾಮ ಚರಿತೆಗಳು ಆದಯ್ಯ, ಸೊನ್ನಲಿಗೆಯ ಸಿದ್ಧರಾಮ ಶಿವಯೋಗಿ ಇವರ ಚರಿತೆಗಳನ್ನು ವಿವರಿಸುವವು. ಇವರೆಲ್ಲರು ಕ್ರಿ. ಶ. ೧೨ನೆಯ ಶತಕದಲ್ಲಿದ್ದ ಶಿವಶರಣರು. ಕಲಚುರಿ ಭುಜಬಲಚಕ್ರವರ್ತಿ ಬಿಜ್ಜಳ (ಕ್ರಿ. ಶ. ೧೧೫೬–೧೧೬೭) ನ ಸಮಕಾಲದವರು. ಇವರಲ್ಲಿ ಸಿದ್ಧರಾಮ ಶಿವಯೋಗಿ ಬಿಜ್ಜಳನ ತರುವಾಯ ಕೆಲಕಾಲ[೧] ಹಾವಿನಹಾಳ ಕಲ್ಲಯ್ಯ ಸಿದ್ಧರಾಮ ಶಿವಯೋಗಿಯ ನಂತರ ಕೆಲಕಾಲ[೨] ಇದ್ದರು. ಏಕಾಂತದ ರಾಮಯ್ಯನು ಅಬ್ಬಲೂರಲ್ಲಿ ಪವಾಡ ವನ್ನೆಸಗಿ ಪರವಾದಿಗಳನ್ನು ಭಂಗಿಸಿದ ವೃತ್ತವು ವೀರಶೈವ ಪುರಾಣಗಳಲ್ಲಿ ಮತ್ತು ಅಬ್ಬಲೂರ ಬ್ರಹ್ಮೇಶ್ವರ ಮತ್ತು ಸೋಮೇಶ್ವರ ಗುಡಿಗಳಲ್ಲಿರುವ ಶಿಲಾಲೇಖಗಳಲ್ಲಿ ವರ್ಣಿತವಾಗಿದೆ. ಈ ಶಿಲಾಲೇಖಗಳಲ್ಲಿ ಅವುಗಳನ್ನು ಬರೆದ ಕಾಲ ನಿರ್ದಿಷ್ಟವಾಗಿಲ್ಲ. ಆದರೂ ಕಲಚುರಿ ಚಕ್ರವರ್ತಿ ಬಿಜ್ಜಳ (ಕ್ರಿ. ಶ. ೧೧೫೬–೧೧೬೭), ಚಾಲುಕ್ಯ ನಾಲ್ಕನೆಯ ಸೋಮೇಶ್ವರ (ಕ್ರಿ. ಶ. ೧೧೮೨–೧೧೮೯) ಮತ್ತು ಕದಂಬ ಕಾಮ ದೇವ (ಕ್ರಿ. ಶ. ೧೧೮೨_೧೨೦೩) ಇವರು ರಾಮಯ್ಯನ ಪಾದಪ್ರಕ್ಷಾಲನ ಮಾಡಿ, ಪೂಜಿಸಿ, ಅವನು ಸ್ಥಾಪಿಸಿದ ಸೋಮನಾಥದೇವರಿಗೆ ಭೂಮಿಗಳನ್ನೂ ಊರು ಗಳನ್ನೂ ದಾನ ಕೊಟ್ಟ ವಿಷಯ ಬಂದಿದೆ. ರಾಮಯ್ಯನು ಮಾಡಿದ ಅದ್ಭುತ ಪವಾಡ ಕಲಚುರಿ ಬಿಜ್ಜಳನು ರಾಜ್ಯವಾಳುವಾಗ. ಆದುದರಿಂದ ಏಕಾಂತದ ರಾಮಯ್ಯ ಕ್ರಿ. ಶ. ೧೧೫೬ರಿಂದ ೧೨೦೦ ರ ವರೆಗೆ ಬದುಕಿದ್ದನು. ಅವನ ರಗಳೆಯನ್ನು ಬರೆದ ಹರಿಹರನೂ, ಸಿದ್ಧರಾಮ ಚರಿತೆಯನ್ನು ಬರೆದ ರಾಘವಾಂಕನೂ ಕ್ರಿ. ಶ. ೧೨೦೦ ನಂತರ ಇದ್ದರೆಂದು ಸಿದ್ಧವಾಗುವುದು.

---

೧. ಸಿ. ಪು. ಸಂ. ೯ ಪ. ೫   ೨. ಸಿ. ಪು. ಸಂ. ೯ ಪ. ೫೪–೬೦

ಮಲ್ಲಿಕಾರ್ಜುನನ ಸೂಕ್ತಿಸುಧಾರ್ಣವದಲ್ಲಿ ಗಿರಿಜಾಕಲ್ಯಾಣದಿಂದ ಸುಮಾರು ೨೭ ಪದ್ಯಗಳು ಉದ್ಧೃತವಾಗಿವೆ.[೧] ಅದು ಸಂಕಲಿತ ಗ್ರಂಥವಾದುದರಿಂದ ಇವೆಲ್ಲವನ್ನು ಮುಂದಿನವರು ಸೇರಿಸಿರಬಹುದೆಂಬ ವಾದ ಸರಿಯಾದುದಲ್ಲ. ಅದರಂತೆಯೇ ಕೇಶಿರಾಜನ ಶಬ್ದಮಣಿದರ್ಪಣದಲ್ಲಿ ಬಂದ ಗಿರಿಜಾಕಲ್ಯಾಣದ ಪದ್ಯಗಳು ಆ ಮೇಲೆ ಸೇರಿಸಲ್ಪಟ್ಟಿರಬೇಕೆಂದು ಊಹಿಸುವುದೂ ಸಮಂಜಸವಲ್ಲ. ಕೆಲವು ಪ್ರತಿಗಳಲ್ಲಿ ಈ ಪದ್ಯಗಳಿಲ್ಲವೆನ್ನುವುದು ಬಲವಾದ ಆಧಾರವಲ್ಲ. ಸೂಕ್ತಿಸುಧಾರ್ಣವಕಾರರು ಮತ್ತು ಶಬ್ದಮಣಿದರ್ಪಣಕಾರರು ಅಥವಾ ಅವರ ಸಮೀಪ ಕಾಲದವರು ಬರೆದ ಮೂಲ ಹಸ್ತಪ್ರತಿಗಳು ದೊರೆತು, ಅವುಗಳಲ್ಲಿ ಈ ಪದ್ಯಗಳು ಇಲ್ಲವೆಂದು ಖಚಿತವಾಗುವವರೆಗೆ ಇವು ಪ್ರಕ್ಷಿಪ್ತವೆಂದು ಹೇಳಲುಬಾರದು. ಆದುದರಿಂದ ಅಲ್ಲಿಯವರೆಗೆ ಅವನ್ನು ಗ್ರಂಥಕರ್ತೃಗಳೇ ಸೇರಿಸಿರುವರೆಂದು ಇಟ್ಟುಕೊಳ್ಳುವುದು ಸರಿಯಾದುದು. ಹರಿಹರ, ರಾಘವಾಂಕ, ಕೆರೆಯಪದ್ಮರಸ, ಮಲ್ಲಿಕಾರ್ಜುನ, ಕೇಶಿರಾಜ ಮೊದಲಾದವರು ಹೊಯ್ಸಳ ರಾಜಧಾನಿ ಹಳೇಬಿಡಿನಲ್ಲಿದ್ದವರು. ತಮ್ಮ ಜೀವಮಾನವನ್ನು ಹೊಯ್ಸಳರ ಕಾಲದಲ್ಲಿ ಕಳೆದವರು. ಆದುದರಿಂದ ಹರಿಹರನ ಗ್ರಂಥಗಳ ಪರಿಚಯ ಮಲ್ಲಿಕಾರ್ಜುನ ಕೇಶಿರಾಜರಿಗೆ ಇತ್ತೆಂದೂ ಅವುಗಳಿಂದ ಉದಾಹರಣೆಗಾಗಿ ಪದ್ಯಗಳನ್ನು ಆರಿಸಿಕೊಳ್ಳುವಷ್ಟು ಪ್ರಸಿದ್ಧಿಯನ್ನು ಅವು ಪಡೆದಿದ್ದವೆಂದೂ ಊಹಿಸಬಹುದು. ಮಲ್ಲಿಕಾರ್ಜುನನು ಹೊಯ್ಸಳ ಸೋಮೇಶ್ವರ (ಕ್ರಿ. ಶ. ೧೨೩೪-೫೪) ನ ವಿನೋದಾಕರ್ಣಕ್ಕಾಗಿ ಸೂಕ್ತಿ ಸುಧಾರ್ಣವವನ್ನು ಸಂಕಲಿಸಿದನಾದುದರಿಂದ ಅದು ಸೋಮೇಶ್ವರನ ಕಡೆಯ ಕಾಲ ಕ್ರಿ. ಶ. ೧೨೫೪ ರೊಳಗಾಗಿ ಹುಟ್ಟಿರಬೇಕು. ಮಲ್ಲಿಕಾರ್ಜುನನ ಮಗನಾದ ಕೇಶಿರಾಜನು ವ್ಯಾಕರಣದ ಸೂತ್ರಗಳನ್ನು ವಿವರಿಸುವುದಕ್ಕಾಗಿ ಸೂಕ್ತಿಸುಧಾರ್ಣವದಿಂದ ಪದ್ಯಗಳನ್ನು ಎತ್ತಿಕೊಂಡಿರುವನು. ಗಿರಿಜಾಕಲ್ಯಾಣದಿಂದಲೂ ಪದ್ಯಗಳನ್ನು ತೆಗೆದುಕೊಂಡಿರುವನು. ಇವನ ಕಾಲ ಕ್ರಿ. ಶ. ೧೨೬೦.[೨] ಮಲ್ಲಿಕಾರ್ಜುನನು ಸೂಕ್ತಿಸುಧಾರ್ಣವವನ್ನು ರಚಿಸುವುದಕ್ಕಿಂತ ಕೆಲ ವರ್ಷ ಮೊದಲು ಹರಿಹರನು ಗಿರಿಜಾಕಲ್ಯಾಣವನ್ನು ಬರೆದಿರಬೇಕು.

ಪದ್ಮಣಾಂಕನು ಪದ್ಮರಾಜಪುರಾಣದಲ್ಲಿ ಕೆರೆಯಪದ್ಮರಸ,ಹರಿಹರ ಮೊದಲಾದವರು ನರಸಿಂಹಬಲ್ಲಾಳನ ಕಾಲದಲ್ಲಿದ್ದರೆಂದೂ ಆಗ ಬಿಟ್ಟಿದೇವನು ಯುವರಾಜ (ಪಟ್ಟಾನ್ವಿತ)ನಾಗಿದ್ದನೆಂದೂ ತಿಳಿಸುವನು.[೩] ಈ ನರಸಿಂಹಬಲ್ಲಾಳನು ನರಸಿಂಹನ ಮಗ ಬಲ್ಲಾಳನೆಂದೂ, ಅವನಿಗೆ ಬಿಟ್ಟಿದೇವ ಅಥವಾ ವಿಷ್ಣುವರ್ಧನನೆಂಬ ಮಗ

೧. ಸೂ. ಸು. ಅನುಬಂಧ ೨. ಪುಟ ೪೨೩. ಮೈಸೂರ ಪ್ರಾಚ್ಯ ವಿದ್ಯಾಸಂಸ್ಥೆಯಿಂದ ಪ್ರಕಟಿತವಾದುದು.

೨. ಕ. ಕ. ಚ. ಸಂಪುಟ ೧; ಪುಟ ೩೮೬, ೧೯೨೪

೩. ಪ. ಪು. ಸಂ. ೩ ಪ. ೨೪

ನಿದ್ದನೆಂದೂ, ಅವನು ಯುವರಾಜನಾಗಿದ್ದನೆಂದೂ ಅರ್ಥಮಾಡಬಹುದು. ಮೊದಲನೆಯ ನರಸಿಂಹನ ಮಗ ವೀರಬಲ್ಲಾಳನಿಗೆ ಬಿಟ್ಟಿದೇವನೆಂಬ ಮಗನಿದ್ದನೆಂದೂ, ಅವನ ತರುವಾಯ ರಾಜನಾದ ಎರಡನೆಯ ನರಸಿಂಹನಿಗೆ ವಿಷ್ಣುವರ್ಧನ ಅಥವಾ ಬಿಟ್ಟಿದೇವನೆಂಬ ಮತ್ತೊಂದು ಹೆಸರಿತ್ತೆಂದೂ ಶಾಸನಗಳಲ್ಲಿ ಬಂದಿದೆ.[೧] ಈ ಯುವರಾಜ ನರಸಿಂಗದೇವನು ತಂದೆಯ ರಾಜ್ಯಾಡಳಿತೆಯಲ್ಲಿ ಕ್ರಿ. ಶ. ೧೨೦೫ರಿಂದ ಭಾಗವಹಿಸುತ್ತಿದ್ದನು.[೨] ಪದ್ಮಣಾಂಕನು ಹೇಳುವ ನರಸಿಂಹಬಲ್ಲಾಳನು ೨ನೇಯ ವೀರಬಲ್ಲಾಳ (ಕ್ರಿ. ಶ. ೧೧೭೩–೧೨೨೦)ನಿರಬೇಕು. ಹೊಯ್ಸಳರಲ್ಲಿ ವಿಷ್ಣುವರ್ಧನ (ಕ್ರಿ. ಶ. ೧೧೦೮-೧೧೪೨)ನ ತರುವಾಯ ಅತಿ ಬಲಾಢ್ಯ ಮತ್ತು ಪ್ರಭಾವಿರಾಜನು ಈ ವೀರಬಲ್ಲಾಳನು. ಇವನ ಕಾಲದಲ್ಲಿ ಹೊಯ್ಸಳ ಸಾಮ್ರಾಜ್ಯ ಅಭ್ಯುದಯದ ಶಿಖರಕ್ಕೆ ಮುಟ್ಟಿತ್ತು. ಈತನು ಶೈವ ವೈಷ್ಣವ ಧರ್ಮಗಳೆರಡನ್ನೂ ಪೋಷಿಸುತ್ತಿದ್ದನು.

ಕೊಳನಿಗಣಪತಿದೇವನು ಬರೆದ 'ಶಿವಯೋಗಸಾರವು' ಎಂಬ ಗ್ರಂಥದಲ್ಲಿ ಹನುಮಕೊಂಡದ ಸಮೀಪ ಓರಗಲ್ಲೆಂಬ ನಗರವನ್ನು ಕಾಕತೀಯ ರುದ್ರದೇವ (ಕ್ರಿ. ಶ ೧೧೫೫–೧೧೯೬) ನು ಸ್ಥಾಪಿಸಿದನೆಂದು ಹೇಳಿದೆ[೩]. ಓರಗಲ್ಲು ಕ್ರಿ. ಶ. ೧೨೦೦ಕ್ಕೂ ಮೊದಲು ಪ್ರಸಿದ್ಧಪಟ್ಟಣವೂ ಕಾಕತೀಯರ ರಾಜಧಾನಿಯೂ ಆಗಿತ್ತೆಂಬುದು ಇದರಿಂದ ಸಿದ್ಧವಾಗುವದು.

ಈ ವರೆಗೆ ಚರ್ಚಿಸಿದ ವಿಷಯಗಳಿಂದ ಹರಿಹರ, ರಾಘವಾಂಕ, ಕೆರೆಯ ಪದ್ಮರಸರು ತಮ್ಮ ಜೀವನಯಾತ್ರೆಯನ್ನು ಹೊಯ್ಸಳ ಎರಡನೆಯ ಬಲ್ಲಾಳ (ಕ್ರಿ. ಶ. ೧೧೭೩–೧೨೨೦)ನು ರಾಜ್ಯವಾಳುವಾಗ ಪ್ರಾರಂಭಿಸಿ ಎರಡನೆಯ ನರಸಿಂಹ (ಕ್ರಿ.ಶ. ೧೨೨೦–೧೨೩೪)ನ ಆಳಿಕೆಯ ಕೊನೆಯವರೆಗೆ ಸಾಗಿಸಿಕೊಂಡು ಹೋಗಿರಬಹುದಾದುದರಿಂದ ಅವರು ಕ್ರಿ. ಶ. ಹನ್ನೆರಡನೆಯ ಶತಕದ ಕೊನೆಯ ಭಾಗ ಮತ್ತು ಹದಿಮೂರನೆಯ ಶತಕದ ಪೂರ್ವಭಾಗ ಅಂದರೆ ಕ್ರಿ. ಶ. ೧೧೮೦ ರಿಂದ ೧೨೫೦ ರ ಅವಧಿಯಲ್ಲಿ ಸುಮಾರು ೭೦ ವರ್ಷಗಳ ಮೇಲ್ಪಟ್ಟು ಕ್ರಿಯಾಶೀಲರಾಗಿ ಬದುಕಿರಬಹುದೆಂದು ಊಹಿಸಬಹುದು.

ಹರಿಹರನ ಕೃತಿಗಳು :

ಹರಿಹರನ ಸಾಹಿತ್ಯಸೇವೆ ಅಪಾರವಾದುದು. ಅವನು ರಚಿಸಿದ ಗ್ರಂಥಗಳು ವಿಪುಲವಾಗಿವೆ. ಶರಣರ ಚರಿತೆಗಳನ್ನಾಧರಿಸಿ ಬಹು ಗ್ರಂಥಗಳನ್ನು 'ರಘಟಾ'

---

೧. E. C. vol. Arasikere 40 and 85. Annual Report of Indian Epigraphy 1920. Inscription No. 408.

೨. E. C. vol. XI. Cl. 23. Introduction page 21.

೩ The Early History of Deccan Edited by Dr Yazadani P. 590.

ರೂಪದಿಂದ ಬರೆದಿರುವನು. ಅವುಗಳಿಗೆ ರಗಳೆಗಳೆಂದು ಹೆಸರು. ಈ ಗ್ರಂಥಗಳ ಸಂಖ್ಯೆ ನೂರಕ್ಕೆ ಮೀರಿದೆ. ಹರಿಹರನವೆನ್ನುವ ಸುಮಾರು ೧೨೦ ರಗಳೆಗಳು ಉಪಲಬ್ಧವಿವೆ. ಅವುಗಳಲ್ಲಿ ಕೆಲವು ಮುದ್ರಿತವಾಗಿ ಜನಮಾನ್ಯವಾಗಿವೆ. ಬಸವರಾಜದೇವರ ರಗಳೆ, ಪ್ರಭುದೇವರ ರಗಳೆ, ಅಕ್ಕಮಹಾದೇವಿಯ ರಗಳೆ, ನಂಬಿಯಣ್ಣನ ರಗಳೆ, ಕುಂಬಾರ ಗುಂಡಯ್ಯನ ರಗಳೆ ಮೊದಲಾದುವುಗಳನ್ನು ಉದಾಹರಿಸಬಹುದು. ಇದಲ್ಲದೆ ಗಿರಿಜಾಕಲ್ಯಾಣವೆಂಬ ಚಂಪೂಕಾವ್ಯವನ್ನು ರಚಿಸಿ ಮಹಾಕವಿಯೆಂದು ಸಾರ್ಥಕನಾಮ ಪಡೆದಿರುವನು. ಈತನ ಪಂಪಾಶತಕವು ಹಂಪೆಯ ವಿರೂಪಾಕ್ಷನ ಸ್ತುತಿಪರವಾಗಿದೆ. ಮುಡಿಗೆಯಾಷ್ಟಕವೆಂಬ ಚಿಕ್ಕ ಗ್ರಂಥವೂ ಈತನದೇ ಎಂದು ಸ್ವೀಕೃತವಾಗಿದೆ. ಇದರಲ್ಲಿ ಪಂಪಾವಿರೂಪಾಕ್ಷನೇ ಪರದೈವವೆಂದು ತೋರಿಸಿಕೊಡಲಾಗಿದೆ. ಇವಲ್ಲದೆ ರಕ್ಷಾಶತಕ, ಶಿವಾಕ್ಷರಮಾಲೆ ಎಂಬೆರಡು ಗ್ರಂಥಗಳನ್ನು ರಚಿಸಿರುವನೆಂದು ತಿಳಿಯುತ್ತದೆ. ಹರಿಹರನು ಉದ್ದಾಮ ಗ್ರಂಥಕಾರನಾಗಿದ್ದಾನೆ. ಅದಲ್ಲದೆ ಅನೇಕ ಮಹಾಕವಿಗಳಿಗೆ ಪ್ರೇರಕನಾಗಿದ್ದಾನೆ. ಈತನ ನೆಚ್ಚಿನ ಶಿಷ್ಯನೂ ಸೋದರಳಿಯನೂ ಆದ ರಾಘವಾಂಕನು ಕನ್ನಡ ಸಾಹಿತ್ಯದಲ್ಲಿ ಷಟ್ಪದಿಯ ನಿರ್ಮಾಪಕನೆಂದು ಅಜರಾಮರ ಕೀರ್ತಿಯನ್ನು ಪಡೆದಿರುವನು. ಬಹುಜನ ಕನ್ನಡ ಕವಿಗಳು ಹರಿಹರನನ್ನು ಸ್ಮರಿಸಿದ್ದಾರೆ.

ಗಿರಿಜಾಕಲ್ಯಾಣದ ಕಥಾಸಾರ : ಹಿಮಾಲಯದ ಉತ್ತರಕ್ಕೆ ನಂದನ, ತಟಾಕ, ಕಳಮಾವಳಿ, ಕೈರವರಾಜಿ, ಅಬ್ಜಸಂದೋಹ ಇವುಗಳಿಂದೊಡಗೂಡಿದ ವಿಶಾಲವಾದ ಮತ್ತು ಸುಂದರವಾದ ನಗರಗಳಿಂದಲೂ, ನದಿ ನದಂಗಳಿಂದಲೂ ಕೂಡಿದ ಗಿರಿರಾಜನ ದೇಶವು ಪೃಥ್ವಿಗೆ ಭೂಷಣವೂ ಸುಖಕ್ಕೆ ಆಗರವೂ ಆಗಿತ್ತು. ಅಲ್ಲಿಯ ಭೂಮಿ ಬೆಳೆಯಿಂದ ಕೂಡಿತ್ತು. ಕೊಳಗಳು ಹೂಗಳಿಂದ ತುಂಬಿದ್ದವು ಮರಗಳು ಫಲಗಳ ಭಾರದಿಂದ ಶೋಭಿಸುತ್ತಿದ್ದವು. ಅದು ವಿಪ್ರರ ವೇದಘೋಷಗಳಿಂದಲೂ ಶಿವಜ್ಞಾನಗಾನದಿಂದಲೂ ಪ್ರತಿಧ್ವನಿಗೊಂಡಿತ್ತು. ಅಲ್ಲಿ ಎತ್ತ ನೋಡಿದರೂ ಶಿವನ ಪೂಜೆ ನಡೆಯುತ್ತಿತ್ತು. ಅಲ್ಲಿಯ ಕಲ್ಲುಗಳು ಪರುಷದ ಕಲ್ಲುಗಳು, ಗಿಡಗಳು ಕಲ್ಪತರುಗಳು, ಮಡುಗಳು ಸಿದ್ಧರಸದ ಮಡುಗಳು. ಶಾಲಿವನಗಳಿಂದ ವ್ಯಾಪಿಸಿದ ಭೂಮಿಯು ಹಸಿರುಬಣ್ಣದ ಪಟವನ್ನು ಹೊದಿಸಿದಂತೆ ಶೋಭಿಸುತ್ತಿತ್ತು. ಬಾಳೆಯ ಬನಗಳು ಗೊನೆಗಳಿಂದ, ಕಬ್ಬಿನ ಬೆಳೆಯು ರಸದಿಂದ ತುಂಬಿಕೊಂಡಿದ್ದವು. ಅಲ್ಲಿಯ ಪಾಮರಿಯರು ಸೌಂದರ್ಯವತಿಯರಾಗಿದ್ದರು. ಆ ದೇಶಕ್ಕೆ ಓಷಧಿ ಪ್ರಸ್ತಪುರ'ವೆಂಬುದು ರಾಜಧಾನಿಯಾಗಿತ್ತು. ಅದಕ್ಕೆ ಕೋಟೆ, ಕೊತ್ತಳ ಆಕಾಶವನ್ನು ಮುಟ್ಟುವಂತಹ ಪತಾಕೆಗಳು, ಗೋಪುರಗಳು ಇದ್ದವು. ಅದು ಅಮರಾವತಿಗೆ, ಮಿಥಿಲಿಗೆ ಉದಯನಗರಕ್ಕೆ, ಉಜ್ಜಯಂತಿಗೆ ಗುಣದಿಂದ ಎರಡು ಮೂರು, ನಾಲ್ಕು, ಐದುಪಟ್ಟು ಮಿಗಿಲಾಗಿತ್ತು. ಅಲ್ಲಿ ಸೋಮ, ಸೂರ್ಯ ಬೀದಿಗಳಿದ್ದವು. ಅಲ್ಲಿಯ ಧನಿಕ ವರ್ತಕರು ತಮ್ಮ ಅಂಗಡಿಯ ಮುಂದೆ ವಿಪುಲವಾದ

ಧಾನ್ಯಗಳನ್ನು ಗುಂಪು ಗುಂಪಾಗಿ ಏರಿಸಿಟ್ಟಿದ್ದರು. ಅಲ್ಲಿಯ ಮಾಲೆಗಾರ್ತಿಯರು ನಾನಾ ಪ್ರಕಾರದ ಹೂಗಳಿಂದ ಚಂದಚಂದವಾದ ಮಾಲೆಗಳನ್ನು ರಚಿಸುತ್ತಿದ್ದರು. ಅಲ್ಲಿಯ ರತ್ನ ವ್ಯಾಪಾರಿಗಳ ಅಂಗಡಿಯ ಸಾಲು ನೀರಿಲ್ಲದ ರತ್ನಾಕರದಂತೆ ಕಾಣಿಸುತ್ತಿತ್ತು. ಅಲ್ಲಿ ಕುದುರೆಗಳನ್ನೂ, ಆನೆಗಳನ್ನೂ ಕೊಂಡುಕೊಳ್ಳುವ ಪೇಟೆಗಳಿದ್ದವು. ಅಲ್ಲಿಯ ವೈಶ್ಯರು ಕನಕ-ರತ್ನಗಳನ್ನೂ ನೀಲ-ಪಚ್ಚ-ಪವಳಗಳನ್ನೂ ಮಾರುತ್ತಿದ್ದರು. ಅಲ್ಲಿಯ ಶಿವಾಲಯಗಳು ಮುತ್ತಿನ, ಮಾಣಿಕ್ಯದ, ಪುಷ್ಯರಾಗದ ವೈಡೂರ್ಯದ ಪಚ್ಚದ, ಹವಳದ, ನೀಲದ ಕಳಶಗಳಿಂದ ಶೋಭಿಸುತ್ತಿದ್ದವು. ಆ ಪಟ್ಟಣದ ದೇವಾಲಯಗಳು ಶ್ರುತಿಘೋಷ, ಮಂತ್ರಘೋಷ, ಜಯಘೋಷ ಪರಶಿವನ ವಿಮಲ ಜ್ಞಾನಸಂವಾದ ಘೋಷಗಳಿಂದ ತುಂಬಿದ್ದವು. ಅರಸನಾದ ಗಿರಿರಾಜನು ಶಿವ ಭಕ್ತನೂ, ತೇಜಸ್ವಿಯೂ. ಜಗದ್ದೀಪಕನೂ, ಧೀರನೂ, ಉದಾರನೂ ಎಂದು ಖ್ಯಾತಿಪಡೆದು ಪರರಾಜರಿಂದ ನುತಿಸಲ್ಪಡುತ್ತಿದ್ದನು. ಆತನ ಪುಣ್ಯವಲ್ಲಭೆ ಮೇನಾ ದೇವಿ' ಪರೋಪಕಾರನಿರತಳೂ, ಪತಿವ್ರತೆಯೂ ಗುಣವಿಭೂಷಣೆಯೂ, ಸತ್ಯ ಶೈವಾತುರೆಯೂ, ಶಾಂತೆ, ಮಾನ್ಯೆ ಶುಭಚರಿತಾನ್ವಿತೆಯೂ ಆಗಿದ್ದಳು. ಅವಳು ಪಿತೃಗಳ ಮನದಲ್ಲಿ ಹುಟ್ಟಿದವಳು. ಗಿರಿರಾಜನೂ, ಮೇನೆಯೂ ಸುಖದಿಂದ ಇದ್ದರು. ಅವರಿಗೆ 'ಮೈನಾಕ'ನೆಂಬ ಕುಮಾರನು ಉದಯಿಸಿದನು.

ಹೈಮವತಿ ಶೈಶವ ವರ್ಣನೆ: ಒಡ್ಡೋಲಗದಿಂದ ಎದ್ದಮೇಲೆ ಸ್ನಾನಮಾಡಿ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿ ಸ್ಥಿರಚಿತ್ತನಾಗಿ ಲಿಂಗಪೂಜೆಯನ್ನು ಮಾಡಿ ಪ್ರಸಾದವನ್ನು ಸೇವಿಸುವ ಪರಿಪಾಠವು ಗಿರಿರಾಜನಿಗಿತ್ತು. ಒಂದು ದಿನ ಗಿರಿರಾಜನು ಪ್ರಸಾದ ಸೇವಿಸಿ ವಿಶ್ರಮಿಸಿದಾಗ ಮೇನೆಯು ತನ್ನ ಮನಃಪ್ರಿಯನಿಗೆ ತನ್ನ ಹೆಬ್ಬಯಕೆಯನ್ನು ತಿಳಿಸಲಿಕ್ಕೆ ಆತನಲ್ಲಿಗೆ ಬಂದಳು.

"ನಗುವ, ಅಪ್ಪುವ, ಮೊರೆವ, ಮರಳ್ವ, ಆಡುವ, ಮುದ್ದಿನ ಮಗಳನ್ನು ಪಡೆಯುವ ಇಚ್ಛೆಯಾಗಿದೆ. ಉಗ್ರ ತಪಸ್ಸು ಮಾಡಿ ಅಭವನಿಗೆ ವಧುವೆನಿಪ್ಪವಳನ್ನು ಪಡೆಯುವೆ. ಅದಕ್ಕಾಗಿ ನನ್ನನ್ನು ತಪೋವನಕ್ಕೆ ಕಳಿಸು" ಎಂದು ಕೇಳಿದಳು. ಗಿರಿರಾಜನು ಒಪ್ಪಿ ನಲಿದು ಪರಿಚಾರಕಪಟುಗಳೆನ್ನಿಪ ತರುಣಿಯರನ್ನು ಕೂಡಿಕೊಟ್ಟು ಸಂತಸದಿಂದ ಆಕೆಯನ್ನು ತಪಸ್ಸಿಗೆ ಕಳಿಸಿದನು. ಆಕೆ ಬಂದು ಒಂದು ರಮ್ಯ ಸ್ಥಳವನ್ನು ಆಯ್ದುಕೊಂಡು, ಅಲ್ಲಿ ಉಗ್ರತಪಸ್ಸು ಮಾಡಲಾರಂಭಿಸಿದಳು. ಆಕೆಯ ತಪಸ್ಸಿನ ಪ್ರಭಾವ ಮಹಾದೇವಿಯ ಮೆಲ್ಲಡಿಗಳಿಗೆ ಮುಟ್ಟಿ, ಭವಾನಿ ಮೇನೆಯ ತಪಕ್ಕೆ ಮಿಗೆಮೆಚ್ಚಿ, ಹರನಿಂದ ಬೀಳ್ಕೊಂಡು, ತಂದೆ ಮಾಡುವ ಯಾಗವನ್ನು ನೋಡುವ ನೆವದಿಂದ ಕೈಲಾಸದಿಂದ ಹೊರಮಟ್ಟಳು. ಶಿವನಿಗೆ ಸ್ಥಾನ ಕೊಡದ ಆ ಯಾಗಕ್ಕೆ ಹೋಗಿ ಶಿವನಿಂದೆಯನ್ನು ಕೇಳದೆ, ವಿಮಲಯೋಗದಿಂದ ನಡೆತಂದು "ಸಲೆ ಸತ್ಕುಲಜೆ! ಮೇನೆ! ನಿನ್ನ ಉತ್ಕಟದ ತಪೋನಿಷ್ಠೆಗೆ ಮೆಚ್ಚಿದ್ದೇನೆ. ನಿನ್ನ

ಬಸಿರೊಳ್ ಬರ್ಪೆಂ" ಎಂದು ಆಕೆಯ ಹೃತ್ಕಮಲದ ಬೆಳಗಿನೊಳ್ ಬೆಳಗಾಗಿರ್ದಳು. ಮೇನಾದೇವಿ ಇದನ್ನು ಅರಿತು 'ಸಂತಸಂಬಟ್ಟು ತಪವನ್ನು ಬಿಟ್ಟು ಓಷಧೀಪ್ರಸ್ಥ ನಗರಕ್ಕೆ ಬಂದಳು. ಪುರಜನರು ಸಂತೋಷದಿಂದ ಆಕೆಯನ್ನು ಸ್ವಾಗತಿಸಿದರು. ಆಕೆ ತನ್ನ ನಿಜೇಶನಿಗೆ ಮನೋರಥಸಿದ್ಧಿಯಾದುದನ್ನು ಉಸಿರಿದಳು. ಮೇನೆಯ ಹೃತ್ಕಮಲದ ಬೆಳಗು ಇಳಿತಂದು, ಮಿಕ್ಕ ಶಕ್ತಿ ಸುಖದ ಸಂಗದೊಳ್‌ವಂದಿ, ಸದಮಳ ರೂಪಿಂದಾ ಭವಾನಿಯ ಉಜ್ವಲ ತೇಜವು ಬೆಳೆಯುತಿರ್ದುದು. ನವಮಾಸ ತುಂಬಿದ ಮೇಲೆ ಸುಮುಹೂರ್ತಗಳು ಒಂದುಗೂಡಿ ಕಾದಿರ್ದವು. ಮೇನೆಯ ಗರ್ಭದೊಳಗಿಂದ ಬರುತಿರ್ಪ ಗೌರಿ ಅಲರ್ದ ಸರೋಜದಿಂದಪೊಗೆತರ್ಪ ಲಸತ್ಕಳ ಹಂಸಿಯಂತೆ ಪೂರ್ವದಿಕ್ಕಿನಿಂದ ಬರುತಿರ್ಪ ಮೃಗಾಂಕ ಬಿಂಬದಂತೆ ಒಪ್ಪಿದಳು. ರತಿ, ಅರುಂಧತಿ, ಸಾವಿತ್ರಿ, ಸರಸ್ವತಿ, ಶಚಿ ಇವರೆಲ್ಲರೂ ಪಾರ್ವತಿಯ ಸೇವೆಗೆ ಸಿದ್ಧರಾಗಿದ್ದರು. ಪಾರ್ವತಿ ಶಿವವಂ ನೆರೆನೆಚ್ಚಿ ಕಣ್ ಮುಚ್ಚಿದಳು. ಮೇನಾ ಮಾನಿನಿ ಮತ್ತು ಗಿರಿರಾಜ ಅಂಜಿ ಗುರು ಶೈವಾಚಾರ್ಯರನ್ನು ಕರೆದು ವಿಚಾರಿಸಿದರು. ಅವರು ಅದನ್ನು ಕೇಳಿ ಪರಮ ಶಿವಜ್ಞಾನದಿಂದ ಕಾರಣವನ್ನು ಅರಿತು ಶಿಶುವಿಗೆ ಲಿಂಗದರ್ಶನವನ್ನು ಮಾಡಿಸಬೇಕೆಂದು ಹೇಳಿದರು. ಕೂಸನ್ನು ತೆಗೆದುಕೊಂಡು ಗಿರಿರಾಜನು ದೇವಾರ್ಚನಾನಿಕೇತನಕ್ಕೆ ಬಂದು ಶಿವಲಿಂಗವನ್ನು ತೋರಿಸಿದನು. ಲಿಂಗವನ್ನು ನೋಡಿ ಶಿಶು ಪಾರ್ವತಿ ಕಣ್‌ತೆರೆದು ಕೈಜೋಡಿಸಿದಳು. ಮೊಲೆ ಯುಂಡಳು. ಶಿವಪ್ರಸಾದನವನೀತವಂ ಕೈಕೊಂಡಳು. ಗಿರಿರಾಜನು ಅಜಾತೆಗೆ ಜಾತಕರ್ಮವನ್ನು ಮಾಡಿಸಿದನು. ಅಂಬಿಕೆ ತೊಳತೋಳಗುತೆ ನಳನಳಿಸಿ ಹೊಳೆ ಯುತೆ ಎಸೆದಳು. ಗಿರಿರಾಜನೂ, ಮೇನಾದೇವಿಯೂ, ಪರಿಜನರೂ, ಪುರಜನರೂ, ಧರಾವಲಯವೂ ಪರಮಸುಖದಿಂದ ಇತ್ತು. ಸುವಾಸಿನಿಯರು ಉತ್ಸವದಿಂದ ಶರ್ವಾಣಿ ಯನ್ನು ತೊಟ್ಟಿಲೊಳ್‌ಹಾಕಿ "ಗಿರಿಜಾತೆ"ಯೆಂದು ನಾಮಕರಣಮಾಡಿದರು. ಸಪ್ತರ್ಷಿ ಸ್ತ್ರೀಗಣವೂ ಲಲಿತ, ಬಂಗಾಳ, ಭೈರವೀರಾಗಗಳನ್ನು ಹಾಡಿ, ಅಖಿಲ ಪ್ರಪಂಚವಾಡಿಪ ಶಿಶುವನ್ನು ತೂಗಿದರು. ಪಾರ್ವತಿ ಶೈಶವ ಲೀಲೆಗಳನ್ನೊಳಗೊಂಡು ಬೆಳೆಯುತಿ ರ್ದಳು. ತಂದೆ-ತಾಯಿಗಳು ಅಕ್ಕರೆಯಿಂದ ಆಕೆಗೆ ಸರಿಯಾದ ಅಲಂಕಾರಗಳನ್ನು ತೊಡಿಸಿ ನೋಡಿ ಹರ್ಷಿಸುತ್ತಿದ್ದರು. ಈ ಪ್ರಕಾರ ಸಕಲ ಸೌಂದರ್ಯವನ್ನು ಹೆಚ್ಚಿಸುವ ಬಾಲದುಡಿಗೆವೆರಸು ಲೀಲೆಮಿಕ್ಕು ಮೆಲ್ಲಗೆ ನಲುವಿಂದಾ ಪರಿಪರಿದು ಹೋಗಿ ಹರನ ನಿಲಯದಲ್ಲಿ ನೆಲೆಸಿರುತಿರ್ಪಳು. ತಾಯಿಯ ಮೊಲೆಯನ್ನು ಕೂಡಾ ಲಕ್ಷಿಸದೆ ಅಭವನ ಆಟದಲ್ಲಿ ತಲ್ಲೀನಳಾಗುತ್ತಿದ್ದಳು. ಸರೋವರದಲ್ಲಿ, ಕಮಲ ಗಳಿರುವ ಸ್ಥಳದಲ್ಲಿ, ವನಗಳಲ್ಲಿ, ತಟಾಕದಲ್ಲಿ, ಭವಾನಿ ಹೆಚ್ಚಾದ ಭಕ್ತಿಯಿಂದ ಭರ್ಗ ನನ್ನು ಒಲಿದು ಅರ್ಚಿಸುತ್ತಿದ್ದಳು. ಮಳಲಿನಿಂದ ದಿವ್ಯ ಲಿಂಗವನ್ನು ವಿರಚಿಸಿ ಪೂಜಿಸುತ್ತಿದ್ದಳು. ಆಕೆಯ ಈ ರೀತಿಯನ್ನು ನೋಡಿ ಪರಿಜನರು ಕೌತುಕಗೊಂಡು ತಮ್ಮಲ್ಲಿಯ ಓರ್ವ ಜಾಣೆಯಾದವಳನ್ನು ಗಿರಿರಾಜನಲ್ಲಿಗೆ ಕಳಿಸಿದರು. ಆಕೆ

ಪಾರ್ವತಿಯ ಸ್ಥಿತಿಯನ್ನು ಗಿರಿರಾಜನಿಗೆ ಚಿನ್ನೈಸಿದಳು. ಗಿರಿರಾಜನು ಅಲ್ಲಿಗೆ ಬಂದು ಮಳಲ ಶಿವಲಿಂಗವನ್ನು ಅಗಣಿತ ಪ್ರೇಮದಿಂದ ಮಿಗೆ ಪೂಜಿಸುತಿರ್ದ ಮಗಳನ್ನು ಕಂಡು ಆಕೆಯನ್ನು ಕರೆದುಕೊಂಡು ಪುರಕ್ಕೆ ಬಂದನು. ಮೇನೆಯು ಮಗಳನ್ನು ಅಪ್ಪಿಕೊಂಡು ಪರ್ವತದಲ್ಲಿ, ವನಗಳಲ್ಲಿ, ಕಾಸಾರಗಳಲ್ಲಿ, ನೀನೇಕೆ ಇಂತಿರುವೆ ತಾಯೇ ಎಂದು ಅಪ್ಪಿಕೊಂಡಳು.

ಪಾರ್ವತಿಯ ಯೌವನೋದಯ ವರ್ಣನೆ : ಈ ಪ್ರಕಾರ ನಳನಳಿಸುವ ಶೈಶವದಲ್ಲಿ ಬೆಳೆಯುತಿರ್ಪ ಗಿರಿಜೆಗೆ ಹತ್ತು ವರ್ಷಗಳಾದವು. ಆಕೆಯು ಯೌವನ ವನ್ನು ಇದಿರ್ಗೊಂಡಳು. ಶರ್ವಾಣಿಯ ಸೌಂದರ್ಯವನ್ನು ಯಾವನಾದರೂ ಬಣ್ಣಿಸಲು ಯತ್ನಿಸಿದರೆ, ಅವನು ಶುದ್ಧ ಗಾಂಪ. ಹನ್ನೆರಡು ಭಾರತೀಯರೂ, ನಾಸಿರ ಫಣಿ ರಾಜರೂ, ಆಕೆಯ ಸೌಂದರ್ಯವನ್ನು ಬಣ್ಣಿಸಲಾರರು. ಆಕೆಯ ರೂಪಾತಿಶಯಕ್ಕೆ ಬೆರಗಾಗಿ ಮೇನಾಸತಿಯೂ ಅಚಲಪತಿಯೂ ಆಕೆಗೆ ತಕ್ಕ ವರನು ಯಾರೆಂದು ಚಿಂತಿಸುತ್ತಿದ್ದರು. ಅದೇ ಕಾಲಕ್ಕೆ ನಾರದನು ಬಂದನು. ಆತನನ್ನು ಭದ್ರಾಸನದಲ್ಲಿ ಕೂಡ್ರಿಸಿ, ಚರಣಗಳನ್ನು ತೊಳೆದು, ತೀರ್ಥ ಜಲವನ್ನು ಸ್ವೀಕರಿಸಿದರು. ಋಷಿಯು ಬಂದುದು ತಮ್ಮ ಪುಣ್ಯವೆಂದು ಬಿನ್ನವಿಸುತ್ತಿರುವಾಗ ಗಿರಿಜಾತೆ ಅಲ್ಲಿಗೆ ಬಂದಳು. ಋಷಿಯು ಆಕೆಯನ್ನು ಕಂಡು ಸಾಷ್ಟಾಂಗ ಪ್ರಣಾಮ ಮಾಡಿ ಭೀತಿಯಿಂದ ಕೈಮುಗಿದುಕೊಂಡು ನಿಂತು ತಾಯೇ ಚಂಡಾಂಶುವ್ರಾತತೇಜೋನಿಧಿ ಶರಣೆನುತ ಸ್ತೋತ್ರ ಮಾಡಿದನು. ಆತನ ಸ್ತೋತ್ರವನ್ನು ಕೇಳಿ ಗಿರಿರಾಜನೂ ಮೇನೆಯೂ ಕೌತುಕವನ್ನು ತಾಳಿ "ಎಲೇ ಮುನಿಂದ್ರಾ ನಿಮ್ಮ ಪಾದಗಳನ್ನು ಪೂಜಿಸಿ ಉಚ್ಚಾಸನ ದೊಳ್ ಇರಿಸಿ ಕೃತಾರ್ಥರಾದೆವೆಂದು ತಿಳಿದ ನಮ್ಮ ಈ ಮಗಳಿಗೆ ವಂದನೆಗೆಯ್ವುದು ಅತ್ಯಾಶ್ಚರ್ಯವು" ಎಂದು ನುಡಿದರು. ದಿವ್ಯಜ್ಞಾನಿ ನಾರದ ನಸುನಗುತ್ತ— "ಇವಳು ನೆವದಿಂದ ನಿಮ್ಮ ಪುಣ್ಯೋದರದೊಳಗೆ ಒಗೆದಳು. ಇವಳು ಜಗನ್ಮಾತೆ ನಿಮ್ಮ ಮಗಳೆಂದು ಭ್ರಮಿಸ ಬೇಡಿರಿ. ಆದುದರಿಂದ ಇವಳನ್ನು ಶಿವನಲ್ಲಿಗೆ ಕಳಿಸು ವದು ಉಚಿತ. ಶಿವನು ಈಗ ಹೇಮಕೂಟದಲ್ಲಿ ನಿಜಯೋಗದಲ್ಲಿರ್ಪನು. ನಿಮಗೆ ಈ ವಿಷಯವನ್ನು ತಿಳಿಸಲು ಬಂದೆನು. ಶರ್ವನ ವಧು ಶರ್ವಾಣಿಯು ನಿಮ್ಮ ಮಗ ಳೆಂಬ ಭಾವನೆಯನ್ನು ಬಿಡಿರಿ. ಎಂದು ಅಂದನು "ನಿಮ್ಮ ಬೋಧೆಯಿಂದ ನಮಗೆ ಜ್ಞಾನ ಉಂಟಾಗಿದೆ. ಇವಳನ್ನು ಪಂಪಾ ವಿರೂಪಾಕ್ಷನಿರ್ಪ ನಿವಾಸಕ್ಕೆ ಒಯ್ದು ತೋರಿದಪೆನು" ಎಂದು ಗಿರಿರಾಜನು ಅಂದನು.

ವಿರುಪಾಕ್ಷಪೂಜಾ ವರ್ಣನೆ:

ಗಿರಿರಾಜನು ನಾರದನು ಹೇಳಿದ ಹಿತವಚನವನ್ನು ಅವಧರಿಸಿ, ಜಯವಿಜಯರೆನಿಪ್ಪ ಇರ್ವರನ್ನು ಪಾರ್ವತಿಗೆ ಸಹಾಯಕರನ್ನಾಗಿ ಆರಿಸಿಕೊಂಡು, ಪುಷ್ಪಕ ವಿಮಾನ ವನ್ನು ತರಿಸಿದನು. ತಂದೆಯ ಇಚ್ಛೆಯನ್ನು ಭವಾನಿ ಮನ್ನಿಸಿ, ಆತನ ಸಂಗಡ

ಹೊರಡಲು ಸಿದ್ಧಳಾದಳು. ಮೇನಾದೇವಿ ಬಂದು ಮಗಳನ್ನು ಅಪ್ಪಿಕೊಂಡು "ದೇವಿ! ಹುಲಿ, ಕರಡಿ, ಸಿಂಹ ಮೊದಲಾದ ಪ್ರಾಣಿಗಳಿಂದ ತುಂಬಿದ ಬಿದಿರು ಬೆತ್ತಗಳುಳ್ಳ ಹೇಮಕೂಟದಲ್ಲಿ ಎಚ್ಚರದಿಂದ ಇರು'' ಎಂದು ಬುದ್ಧಿ ಹೇಳಿದಳು. ಪರ್ವತರಾಜನು ಪಾರ್ವತಿಯನ್ನು ಪುಷ್ಪಕದಲ್ಲಿ ಕೂಡ್ರಿಸಿ ತಾನೂ ಕೂಳ್ಳಿರ್ದು ಹಿಂದಿನ ವಿಮಾನಗಳೊಳಗೆ ಜಯ–ವಿಜಯರನ್ನು ಬರಲ್ವೇಳ್ದು ದಕ್ಷಿಣಾಭಿಮುಖ ನಾಗಿ ಹಲವು ದೇಶಗಳನ್ನೂ ಭಾಸುರ ನಗರಗಳನ್ನೂ ತಟಾಕಗಳನ್ನೂ ಕೇದಾರ ಪರ್ವತಗಳನ್ನೂ ನೋಡುತ್ತ, ಅಗಜೆಗೆ ತೋರಿಸುತ್ತ, ತುಂಗಭದ್ರಾ ತೀರಕ್ಕೆ ಬಂದನು. ಅದರ ಸೌಂದರ್ಯವನ್ನು ನೋಡಿ ಸಂತಸಂ ಬಟ್ಟನು. ಅಲ್ಲಿದ್ದ ಹೇಮಕೂಟದಲ್ಲಿ ಶಿವನು ಸಮಾಧಿಯಲ್ಲಿದ್ದನು. ಆತನ ಸಮಾಧಿಗೆ ಭಂಗವಾದೀತೆಂದು ಅಂಜಿ ಕೋಗಿಲೆ, ಮಧುಪ, ಗಿಳಿ ಮೊದಲಾದವುಗಳು ಸಪ್ಪಳ ಮಾಡುತ್ತಿರಲಿಲ್ಲ. ಗಿಡಗಳೂ, ನದಿಗಳೂ ಕೂಡಾ ಗಾಳಿ ಬಿಟ್ಟರೂ ಅಲುಗಾಡುತ್ತಿದ್ದಿಲ್ಲ. ಗಿರಿಮುಖದ್ವಾರದಲ್ಲಿ ನಂದೀಶನು ಭಕ್ತಿಯಿಂದ ಕಾದು ನಿಂತಿರ್ದನು. ಆತನು ಅಗಜೆಯನ್ನು ಸ್ವಾಗತಿಸಿ, ಎರಗಿ, ತಾಯೇ ದೇವಿ ಶಾಂತೆ ಅನಂತ ಗುಣಾಭರಣೇ ಶರಣೆನುತ್ತ ಪೆರಸಾರ್ದನು. ಗಿರಿಸುತೆ ಪುಷ್ಪಕದಿಂದ ಇಳಿದಳು. ಚಂದ್ರಧರನನ್ನು ನೋಡುವ ಭರದಿಂದ ಪರಮೇಶ್ವರಿ ಬರುತಿರ್ದಳು. ಶಿವನು ಕೋಟಿ ಪ್ರಭೆಯನ್ನೂ ಮೀರಿದ ಪ್ರಭಾ ಮಂಡಲದೊಳಗೆ ಪದ್ಮಾಸನನಾಗಿ ತಪೋವೇಷದಿಂದ ಸಮಾಧಿಯಲ್ಲಿದ್ದನು. ಪರ್ವತರಾಜನು ಹರ್ಷದಿಂದ ಪುಳಕಿತನಾಗಿ ಮೈಯಿಕ್ಕಿದನು. ಪಾರ್ವತಿಯನ್ನು ಕರೆದು ತೋರಿಸಿದನು. ಆಕೆ ತನ್ನ ಲಲಾಟದಿಂದ ಶಿವನ ಎಡದುಂಗುಟವನ್ನು ಮುಟ್ಟಿ ಪೊಡಮಟ್ಟಳು. ಪರ್ವತರಾಜನು ಮಗಳಿಗೆ ಎಚ್ಚರದಿಂದಿರಬೇಕೆಂದು ಹೇಳಿ, ಪಾರ್ವತಿಯನ್ನು ಬಿಟ್ಟು ಹೋಗಲಾರದೆ ತಳಮಳಿಸಿ, ಆಕೆಯನ್ನು ಹರಿಸಿ ಹೋದನು. ಪಾರ್ವತಿಯು ಸಖಿಯರಾದ ಜಯ-ವಿಜಯರಿಗೆ ಶಿವನಮಹಿಮೆಯನ್ನು ತಿಳಿಸಿ "ಅವನು ಸಾತ್ವಿಕ ಭಕ್ತಿಗಲ್ಲದೆ ಒಲಿಯನು. ಆತನನ್ನು ಅರ್ಚಿಸುವೆನು. ಸದ ಮಲ ಶಿವಸುಖವನ್ನು ಪಡೆಯುವೆನು.'' ಎಂದು ಹೇಳಿದಳು. ಸಖಿಯರಿಂದೊಡ ಗೂಡಿ ಪುಷ್ಪಗಳನ್ನು ತಿರಿದು ಶಿವನ ಪೂಜೆಗೆ ಮಾಲೆಗಳನ್ನು ಕಟ್ಟಿದಳು. ಸಖಿಯರು ಆಕೆಯನ್ನು ಮಜ್ಜನಕ್ಕೆರೆದು, ತಾವರೆಯ ನೂಲದುಕೂಲವಂ ಉಡಿಸಿ, ಕದಂಬ ಕುಸುಮಮಂ ಮುಡಿಯೊಳ್ ತುರುಹಿ, ಸಿಂಗಾರಂಗೈದರು. ಗಿರಿಜೆ ಶಿವನನ್ನು ಪೂಜಿಸಿ ಪುಷ್ಪಾಂಜಲಿಯನ್ನು ಸಮರ್ಪಿಸಿದಳು, ಚರಣಗಳನ್ನು ತೊಳೆದಳು, ಸರಸಿಜದ ಅಲ ರನ್ನು ಶಿವನ ಮೆಲ್ಲಡಿಗಳಿಗೆ ಸುರಿದಳು. ನವಕುಸುಮಾಭರಣಗಳಿಂದ ಅವನ ಅಂಗ ಗಳನ್ನು ಸಿಂಗರಿಸಿದಳು. ಧೂಪವನ್ನು ಪೊದೆದಿತ್ತಳು. ಆರತಿಯನ್ನು ಎತ್ತಿದಳು. ಭಕ್ತಿಯಿಂದ ಆರೋಗಣೆಯನ್ನು ಇತ್ತಳು. ಈ ಪ್ರಕಾರ ಭಕ್ತಿಯಿಂದ ಶಿವಪೂಜೆ ಮಾಡಿ ಅವನ ಅಡಿಯಿಂದ ಮುಡಿಯವರೆಗೆ ತನ್ನ ದೃಷ್ಟಿಯನ್ನು ಬೀರಿದಳು. ನೆನೆವರ ಮನಕ್ಕೆ ನಿರುಪಾಧಿಕ ಜ್ಯೋತಿಯಂ ತೋರುತಿರ್ದ ರುದ್ರನ ಮನೋಹರ

ಮೂರ್ತಿಯನ್ನು ನೋಡಿ, ನೋಡಿ, ತಣಿಯದೆ, ನವನವ ಕುಸುಮೋತ್ಕರದಿಂದೆ ಅರ್ಚಿಸುತ್ತುಮಿರ್ಪಳು.

ತಾರಕಾಸುರಯುದ್ಧ ವರ್ಣನೆ: ತಾರಕಾಸುರನು ಮೂರು ಲೋಕಗಳನ್ನು ನಿಜಪ್ರತಾಪದಿಂದ ಗೆದ್ದು, ಲೋಕಪಾಲರಿಂದ ಸೇವೆಯನ್ನು ಸ್ವೀಕರಿಸುತ್ತ ಸುರನರೋರಗರಿಗೆ ಮಸ್ತಕ ಶೂಲನಾಗಿ, ಲೋಕಗಳನ್ನು ತಲ್ಲಣಿಸುತ್ತಿದ್ದನು. ಈತನ ಉರವಣೆಯನ್ನು ಸೈರಿಸಲಾರದೆ ನಾಗರು ನರರು ನಿರ್ಜರರು ಕಿನ್ನರರು ಕಿಂಪುರುಷರು ನೆರೆದು ಮೇರುವಿನ ತಪ್ಪಲೊಳಿರುವ ನಾರಾಯಣ ಬ್ರಹ್ಮ ಇಂದ್ರ ಇವರಲ್ಲಿಗೆ ಹೋಗಿ ಮೊರೆಯಿಟ್ಟರು. ವಿಷ್ಣು ಬ್ರಹ್ಮ ಪುರಂದರರು ಆಲೋಚಿಸಿ ತಾರಕನ ಸಂಗಡ ಯುದ್ಧ ಮಾಡುವದು ನಿರರ್ಥಕ. ಬೃಹಸ್ಪತಿಯನ್ನು ಕಳಿಸಿ ಅವನ ಸಂಗಡ ಸಂಧಾನಮಾಡಿಕೊಳ್ಳುವದು ಉಚಿತ ಎಂದು ನಿರ್ಣಯಿಸಿ, ಸುರಗುರುವನ್ನು ಕರೆದು "ಸಾಮದಾನ ಭೇದೋಪಾಯುಗಳಿಂದ ತಾರಕನ ಮನವೊಲಿಸಿ ಸಂಧಿ ಮಾಡಿಕೊಂಡು ಬಾ" ಎಂದು ಹೇಳಿಕಳಿಸಿದರು. ಆತನು ವಿಮಾನದಿಂದ ಬಂದು, ತಾರಕನ ಮನೆಯು ಮುಂದಿಳಿದು, ತಾರಕನನ್ನು ಕಂಡು ಆತನನ್ನು ಬಣ್ಣಿಸಿ, ಸಂಧಿಗೆ ಆತನ ಮನವೊಲಿಸಲು ಯತ್ನಿಸಿದನು. ತಾರಕನು ಬೃಹಸ್ಪತಿಯು ಸವಿಮಾತುಗಳಿಗೆ ಮರುಳಾಗದೆ, ಸಂಧಾನವನ್ನು ತಿರಸ್ಕರಿಸಿದನು. ಬೃಹಸ್ಪತಿಯ ಯತ್ನಗಳೆಲ್ಲಾ ನಿಷ್ಫಲವಾಗಿ, ಸಾಮದಾನಭೇದೋಪಾಯಗಳು ನಡೆಯದೆ, ಚಿಂತೆಯಿಂದ ಮರಳಿದನು. ವಿಷ್ಣು ಬ್ರಹ್ಮೇಂದ್ರರಿಗೆ ತಾರಕನ ಯುದ್ಧೋತ್ಸಾಹವನ್ನು ವಿವರಿಸಿ, ಅವರೆಲ್ಲರೂ ಮುಂದೇನು ಮಾಡಬೇಕೆಂದು ಚಿಂತಿಸುವದರೊಳಗೆ ತಾರಕನು ದಂಡೆತ್ತಿ ಬಂದನೆಂದು ಸುದ್ದಿ ಬಂದಿತು. ದೇವತೆಗಳಿಗೂ ರಾಕ್ಷಸರಿಗೂ ಘನಘೋರ ಯುದ್ಧವಾಯಿತು. ಅದರಲ್ಲಿ ದೇವತೆಗಳು ಸೋತು ಓಡಿಹೋದರು. ರಜತಾದ್ರಿಯ ಗುಹೆಗಳಲ್ಲಿ ಅಡಗಿದರು. ಒಂದು ಏಕಾಂತ ಸ್ಥಳದಲ್ಲಿ ಸಭೆಗೂಡಿ ಆಲೋಚಿಸಿದರು. ತಾರಕನೊಡನೆ ಯುದ್ಧಮಾಡುವದು ಸಾಧ್ಯವಿಲ್ಲವೆಂದೂ ತಾರಕನನ್ನು ಸೋಲಿಸಲು ಯಾರಿಂದಲೂ ಆಗದೆಂದೂ, ಆತನಿಗೆ ಮರಣವಾಗಬೇಕಾದರೆ ಅದು ಶಿವನ ಮಗನಿಂದಲೇ ಆಗಬೇಕೆಂದೂ, ಆದುದರಿಂದ ಹೇಮಕೂಟದಲ್ಲಿ ಸಮಾಧಿಯಲ್ಲಿದ್ದ ಶೂಲಿಯನ್ನೇ ಎಬ್ಬಿಸಿ, ಆತನ ವಿವಾಹವನ್ನು ಗಿರಿಜೆಯೊಡನೆ ಮಾಡಿಸಬೇಕೆಂದೂ, ಅವರ ಮಗನಾದ ಷಣ್ಮುಖನು ಹುಟ್ಟಿದ ಏಳನೆಯ ದಿನಕ್ಕೆ ಅವನಿಂದ ತಾರಕನು ಅಳಿವನೆಂದೂ ಬ್ರಹ್ಮನು ಹೇಳಿದನು. ಎಲ್ಲರೂ ಆಲೋಚಿಸಿ, ಶಿವನ ತಪಸ್ಸನ್ನು ಕೆಡಿಸುವದು ಮನ್ಮಥನಿಂದಲ್ಲದೆ ಬೇರೆ ಯಾರಿಂದಲೂ ಶಕ್ಯವಿಲ್ಲೆಂದು ನಿಶ್ಚೈಸಿ, ಕಾಮನನ್ನು ಕರೆತರಲು ವಾಚಸ್ಪತಿಯನ್ನು ಕಳಿಸಿದರು.

ಮದನ ಪ್ರಯಾಣ : ಗುರುವು ರತೀಶ್ವರನ ರಾಜಧಾನಿಯೊಳ ಪೊಕ್ಕು ಅರಮನೆಯನ್ನು ತಲ್ಪಿ, ಅಲ್ಲಿರುವ ಪೊಸಜವ್ವನೆಯರನ್ನೂ ಅವರ ಸ್ವಭಾವ ಸೌಂದರ್ಯ

ಸೌಕುಮಾರ್ಯಗಳನ್ನು ಕಂಡು, ಮನದೊಳಳಿವುತ್ತ, ದರ್ಪಕನ ಆಸ್ಥಾನವನ್ನು ಹೊಕ್ಕು, ರತೀಶ್ವರನಿಗೆ ಪೆಂಪಿನ ಸೊಂಪಿನಲಂಪಿನ ಸಂಪಿಗೆಯಲರ್ದೊಂಗಲಂ ಕಾಣ್ಕೆಯಿತ್ತು, ಕುಳಿತನು. ಮದನನು ಸುರರ ಕ್ಷೇಮಸಮಾಚಾರವನ್ನು ವಿಚಾರಿಸಿ, ತಾರಕನೊಡನೆ ಆದ ಯುದ್ಧವೇನಾಯಿತು? ನೀನು ಬಂದ ಕಾರ್ಯವೇನೆಂದು ಕೇಳಿದನು. ಸುರಗುರುವು, ನಿನ್ನೊಡನೆ ಅತುಳತರ ಗುಪ್ತ ಕಾರ್ಯ ಸ್ಥಿತಿಯಾಳೋಚನೆಗಳುಂಟು. ಆದುದರಿಂದ ನಿನ್ನನ್ನು ಕೂಡಲೇ ಕರೆದುಕೊಂಡು ಬಾ ಎಂದು ನನ್ನನ್ನು ಕಳಿಸಿರುವನು. ನಡೆ! ಮದನಾ!! ಎಂದು ವಾಚಸ್ಪತಿ ನುಡಿಯಲು, ಕಾಮನು ಸುಖಾಸನದಿಂದೆದ್ದು, ಶಶಿವಸಂತಾದಿಗಳನ್ನು ಬನದಲ್ಲಿರಿಸಿ, ರತಿಯಿಂದೊಡಗೂಡಿ ಬ್ರಹಸ್ಪತಿಯೊಡನೆ ಪುಷ್ಪಕವನ್ನೇರಿ, ಹರಿಯಜರ ಆಸ್ಥಾನನಿಕೇತನದ ಮುಂದೆ ಬಂದಿಳಿದನು. ಒಳಪೊಕ್ಕು ಚಕ್ರಿಗೆ ವಿರಂಚಿಗೆ ವಜ್ರಧರಂಗೆ ನಮಿಸಿ ಕುಳ್ಳಿರೆ, ಗೋವಿಂದನು "ತಾರಕನ ಉಪಟಳದಿಂದ ಉರಗಮರ್ತ್ಯ ನಿರ್ಜರಲೋಕ ಗೋಳಿಡುತ್ತದೆ. ತ್ರಿಪುರಾರಿಗೆ ಪುಟ್ಟಿದ ಕುಮಾರನಿಂದಲ್ಲದೆ ಆತನು ಯಾರಿಂದಲೂ ಸಾಯನು. ಹರನು ಅಧಿಕ ತಪದಲ್ಲಿರುವನು. ಮದನ! ಆ ತಪವನ್ನು ಕೆಡಿಸಿ ಆತನನ್ನು ವರಗಿರಿಸುತೆಯಲ್ಲಿ ನೆರವು. ಈ ಕಾರ್ಯ ಮಾಡಲು ನೀನೇ ಸಮರ್ಥ" ಎಂದು ಹೇಳಿದರು. "ಶೂಲಿಯ ತಪವನ್ನು ಚಲಿಯಿಸು" ಎಂದು ಹೇಳುವುದು ನನಗೆ ಅಹಿತ. ಹರನಲ್ಲಿಗೆ ನನ್ನನ್ನು ಕಳುಪುವರೇ? ತಂದೆ! ನನ್ನ ಗತಿಯೇನಾಗುವದು?"

ಗೋವಿಂದ_ "ಸಕಲ ಜಗಕ್ಕೆ ಸುಖ ಉಂಟಾಗುವದರಿಂದ ನಿನ್ನ ಜೀವನದ ಕಡೆಗೆ ನೋಡಬೇಡ."

ಮದನ– ಸರಿ. ಸಕಲ ಭುವನವು ನನ್ನಿಂದ ಪರಮ ಸುಖದೊಳಿರ್ಪುದು ಗಡ! ನಾನೆಷ್ಟರವನು. ನನ್ನ ಹರಣವು ಘನವೇ! ತೆಗೆ ಇಂದೇ ನನಗೆ ನೂರು ವರ್ಷ ಮುಗಿಯಿತು.'' ಎಂದು ಒಡಂಬಟ್ಟು, ಬೀಳ್ಕೊಂಡು, ಶೂಲಿಯ ತಪವನ್ನು ಕೆಡಿಸಲು ಸನ್ನದ್ಧನಾದನು. ತನ್ನ ಚತುರಂಗಬಲವನ್ನು ಸಜ್ಜುಗೊಳಿಸಿ ಕಾಮದೇವ ಹೇಮಕೂಟಾಭಿಮುಖನಾಗಿ ನಡೆದನು.

ಕಾಮದಹನ : ಕುಸುಮಕೋದಂಡನ ಕಮನೀಯ ಬಲವು ನಡೆತರಲು ಯತಿಗಳು ಕೊರಗಿದರು. ವಿಯೋಗಿಗಳು ಹರಣಂಗಳೆದರು. ಮುನಿಮುನಿಗಳು ಶರಣೆಂದರು. ಜಿತಕಾಮಗೆ ಮರುಳಾದರು. ಇಂತು ಸಕಳ ಭುವನವನ್ನು ಭಂಗಿಸುವ ಚತುರಂಗಸೇನೆ ಬೊಬ್ಬಿಟ್ಟಬ್ಬರಿಸಿ ಶರ್ವನ ಸಮಾಧಿ ಪರ್ವತವನ್ನು ಪತ್ತಿ ಬಿಡದೆ ಸುತ್ತಿತು. ಕಾಪಿನ ನಂದೀಶ್ವರನು " ಹರನ ಸಮಾಧಿಗೆ ಭಂಗತರುವ ಈ ವಿರೋಧ ವೃತ್ತಿ ಯಾರದು? ಈ ಭೀಕರ ರವವು ಯಾರದು? ಈ ಮರುಳ್ತನವು ಯಾರದು?" ಎಂದು ಕೋಪದಿಂದ ಮದನಸೇನೆಯನ್ನು ನೋಡಿದಾಕ್ಷಣ ದಿವಸೇಂದ್ರನ ಮುಂದಣ ತಮಃ ಪಟಲದಂತೆ ಆ ಚತುರಂಗ ಬಲವು ಮಾಯವಾಯಿತು. ಅದನ್ನು

ನೋಡಿ ಮದನನು ತನ್ನೊಳಗೆ ಈ ಗಣೇಶನಿಂದಲೇ ನನ್ನ ಸೇನೆ ಈ ಪರಿಯಾಯಿತು. ಇನ್ನು ಮೃಡನನ್ನು ಎಸೆದಡೆ ಏನೇನಾಗುವದೋ ಎಂದು ಸಂತಾಪದಿಂದ ಚಿಂತೆಗೊಳಗಾದನು. ಅದೇ ಕಾಲಕ್ಕೆ ಗಿರಿಜೆ ಪುಷ್ಪಕಾರೂಢೆಯಾಗಿ ಚಂದ್ರಾಭರಣನ ಅರ್ಚನೆಗಾಗಿ ಬಂದಳು. ಅವಳನ್ನು ಕಂಡು ಕಾಮನು ಅತಿ ಮುದವನ್ನು ತಾಳಿ, ಸಾಷ್ಟಾಂಗ ಪ್ರಣಾಮ ಮಾಡಿ ತಾನು ಬಂದ ಕಾರಣವನ್ನು ಅವಳಿಗೆ ಅರುಹಿದನು. ಪಾರ್ವತಿ ತನ್ನ ಅಭಿಷ್ಟವೂ ಅದೇ ಎಂದು ಅವನಿಗೆ "ಶ್ರೀನಂದನಾ! ನೀನಂಜದಿರು. ನಾನಿರುವೆನು. ನಿನಗೆ ಸಹಾಯ ಮಾಡುವೆನು" ಎಂದು ಭರವಸೆಯನ್ನು ಕೊಡಲು ಕಾಮನು ತನಗಾದ ಪರಿಭವವನ್ನು ಮರೆತು, ಪಾರ್ವತಿಯ ಪುಷ್ಪಕದ ಮರೆಯಲ್ಲಿ ನಂದೀಶನ ಕಣ್ಣು ತಪ್ಪಿಸಿ ನಡೆತಂದನು. ಪಾರ್ವತಿಯು ಶಿವನ ಪೂಜೆಗಾಗಿ ಪುಷ್ಪೋಪಚಯಕ್ಕೆ ಹೊರಟಳು. ಕಾಮನು ಮತಂಗ ಪರ್ವತವನ್ನೇರಿ, ಮಹೇಶನ ವಾಮಭಾಗದಲ್ಲಿ ನಿಂತು, ಪುಷ್ಪಶರಗಳನ್ನು ಎಸೆಯಲು ಸಿದ್ಧನಾದನು. ತನ್ನ ಬಾಣಗಳಲ್ಲಿ ಮೋಹನ ಶರವೆಂಬ ಬಾಣದಿಂದ ಶಿವನನ್ನು ಹೊಡೆದನು. ಆ ಬಾಣ ಶಿವನಿಗೆ ತಗುಲದೇ ಮರಳಿ ಬಂದಿತು. ಆ ಮೇಲೆ ಸಂತಾಪನವೆಂಬ ಬಾಣವನ್ನು ಬಿಟ್ಟನು. ಅದೂ ಶಿವನನ್ನು ಮುಟ್ಟಲಾರದೆ ಮರಳಿ ಬಂದಿತು. ವಶೀಕರಣವೆಂಬ ಮತ್ತೊಂದು ಬಾಣವನ್ನು ಬಿಟ್ಟನು. ಅದೂ ತಿರುಗಿ ಬಂದಿತು. ಈ ಪ್ರಕಾರ ತನ್ನ ಬಾಣಗಳು ವ್ಯರ್ಥವಾದುದನ್ನು ಕಂಡು ಮದನನು ಬೆರಗಾಗಿರ್ದನು. ನೋಡಲು ಬಂದು ಗಗನದಲ್ಲಿ ನಿಂತ ಹರಿಯಜರಿಗೆ ನಾರದನು ಇವನ್ನು ವರ್ಣಿಸಿ ಹೇಳಿದನು. ಅದೇ ಕಾಲಕ್ಕೆ ಗಿರಿಜೆ, ತನ್ನ ಸಖಿಯರಿಂದೊಡಗೂಡಿ, ಪುಷ್ಪಗಳನ್ನು ತೆಗೆದುಕೊಂಡು, ಶಿವಪೂಜೆಗೆಂದು ಬಂದಳು. ಶಿವನ ಪೂಜೆಯನ್ನು ಪ್ರಾರಂಭಿಸಿದಳು. ಶಿವನಿಗೆ ಹೊಸ ಹೊಸ ಪುಷ್ಪಗಳನ್ನು ಜಡೆಯಲ್ಲಿ ಭುಜದಲ್ಲಿ, ಕೈಗಳಲ್ಲಿ, ಪಾದಗಳಲ್ಲಿ ಧರಿಸಿದಳು. ಪಾರ್ವತಿಯು ಶಿವಪೂಜೆಯನ್ನು ಮಾಡುವಾಗ ಮದನನು ಧೈರ್ಯವನ್ನು ತಂದುಕೊಂಡು "ಇನ್ನಂಜೆನು, ನನಗೆ ಉನ್ನತ ಬಲವಾಯಿತು." ಎಂದು ಪಂಚಬಾಣಗಳನ್ನು ತೆಗೆದು ಬಿಲ್ಲಿಗೆ ಹೂಡಿ ಎಸೆದನು. ಅವು ಶಿವನಿಗೆ ತಾಗಿದವು. ಶಿವನ ಚಿತ್ತ ಚಂಚಲಿಸಿತು. ಅವನ ಸಮಾಧಿ ಇಳಿದು ಮೈಯಿಕ್ಕಿರ್ದ ಗಿರಿಜಾತೆಯಂ ಕಂಡು "ಈ ಮಾನಿನಿ ಏಕೆ ಇಲ್ಲಿ? ನನ್ನ ಸಮಾಧಿ ಭಂಗ ಏಕೆ ಆಯಿತು?" ಎಂದು ವಾಮಭಾಗಕ್ಕೆ ತನ್ನ ಉರಿಗಣ್ಣನ್ನು ಹೋರಳಿಸಿದನು. ಅಲ್ಲಿ ನಿಂತಿರ್ದ ಕಾಮನಿಗೆ ಅದು ತಗಲಿ ಕಾಮನು ಸುಟ್ಟು ಬೂದಿಯಾದನು. ಆಕಾಶದಲ್ಲಿ ನಿಂತಿರ್ದ ಹರಿಯಜಸುರರು ಹಾ! ಹಾ! ಭೀಕರವೆಂದು ಶೋಕಿಸಿದರು. ಶಿವನು ಸಿಟ್ಟಿಗೆದ್ದು, ಬೆಂದ ಕಾಮನನ್ನು ತುಳಿದನು. ಮುಂದೆ ಇರ್ದ ಗಿರಿಜೆಯನ್ನೂ ನೋಡದೆ, ನುಡಿಸದೆ, ಅಂತರ್ಧಾನನಾದನು. ಕಾಮನ ಹೆಂಡತಿ ರತಿ, ಅತಿ ಶೋಕವು ಆವರಿಸಿ ಕರಗಿ ಕೊರಗಿದಳು. ಮನ್ಮಥನನ್ನು ನೆನೆ ನೆನೆದು ಸೈರಿಸಲಾರದೆ ಮತ್ತೆ ಮತ್ತೆ ಶೋಕಂಗೈದಳು. ಪಾರ್ವತಿಯು ಆಕೆಯನ್ನು ಕಂಡು ಮನಕರಗಿ ಸಂತೈಸಿದಳು. ನಿನ್ನ ವಲ್ಲಭನನ್ನು

ಈಶ್ವರನಿಂದ ಪಡೆದು ನಿನಗೆ ಪರಮ ಹರ್ಷವನ್ನು ಮಾಡುವೆನೆಂದು ಅಭಯವಚನ ವನ್ನು ಕೊಟ್ಟಳು. ರತಿಯು ಭವಾನಿಯ ಉಜ್ವಲ ವಚನದಿಂದ ದುಃಖವನ್ನು ಮರೆತಳು. ಇತ್ತ ಗಿರಿಜೆ, ಶಿವನು ಅಲ್ಲಿ ಇರದೇ ಹೋದ ಪರಿಯನ್ನು ಚಿಂತಿಸಿ, ಮನದಲ್ಲಿ ಮುನಿದು, ಜಯ-ವಿಜಯರಿಗೆ "ನಾನು, ಶಿವನೇ ನನ್ನ ಗತಿ, ಮತಿ, ಪತಿ ಯೆಂದು ನಂಬಿ ತಂದೆ ತಾಯಿಗಳನ್ನು ಬಿಟ್ಟು, ಈತನಲ್ಲಿಗೆ ಬಂದರೆ, ನನ್ನನ್ನು ಉಗ್ರನು ಮಾತನಾಡಿಸದೇ ರಜತಗಿರಿಗೆ ಹೋದನು. ನಿಶ್ಕೃಪಾತ್ಮನು. ಇನ್ನು ನಾನಿದ್ದಲ್ಲಿಗೇ ಆತನು ಬರುವಂತೆ ಮಾಡುವೆನು." ಎಂದು ಛಲದಿಂದ ಅಂದಳು.

ಪಾರ್ವತಿ ತಪೋವರ್ಣನೆ : ಪಾರ್ವತಿಯು ಜಗವು ಬೆರಗಾಗುವಂತೆ ನಿಶ್ಚಲ ಮನದಿಂದ ಉಗ್ರ ತಪವನ್ನು ಕೈಕೊಂಡಳು. ನಗಾಗ್ರದಲ್ಲಿ ಒಂದು ಸ್ಥಾನವನ್ನು ಹುಡಿಕಿ ತಪಸ್ಸಿಗೆ ಸಿದ್ಧಳಾದಳು. ಆಕೆಯ ಸಖಿಯರು ತಪಸ್ಸಿಗೆ ಒಪ್ಪುವಂತೆ ಆಕೆಗೆ ಒಲ್ಕಲವನ್ನು ಉಡಿಸಿ, ಜಡೆಯನ್ನು ರಚಿಸಿ, ಭಸಿತವನ್ನು ಪೂಸಿ, ರುದ್ರಾಕ್ಷಿಗಳನ್ನು ತೊಡಿಸಿದರು. ಬೇಸಿಗೆಯಲ್ಲಿ,ಪಂಚಾಗ್ನಿಗಳ ಮಧ್ಯದಲ್ಲಿ, ಉಗ್ರತಪದೊಳ್ ನಿಂದಳು. ಗಿರಿಜೆಯ ತಪಸ್ಸನ್ನು ಕಂಡು ಮೃಗತತಿಗಳು ಸುಳಿಯವು, ಪಕ್ಷಿಗಳು ಎರಗವು. ಗಾಳಿಯು ಬೀಸದು ಖೇಚರರು ಅತ್ತ ಕಡೆಗೆ ಬರರು. ಅಂಬಿಕೆಯ ತಪವು ಅದ್ಭುತವೂ ಅಸಮಾನವೂ ಆಗಿತ್ತು. ಬೇಸಿಗೆಯ ಬಿಸಿಲು ದಾವಾನಲದಂತೆ ತರು, ಗಿರಿ, ಪರ್ವತವನ್ನೆಲ್ಲಾ ವ್ಯಾಪಿಸಿತ್ತು. ನಿದಾಘವೂ ಅತ್ಯುಗ್ರವಾಗಿತ್ತು. ಆರ್ಯೆ ಇದಕ್ಕೆ ಅಂಜದೆ ಗಂಗಾಧರನನ್ನು ಶಶಿಧರನನ್ನು ನೆನೆಯುತ್ತ ಬೇಸಿಗೆಯನ್ನು ಕಳೆ ದಳು. ಮಳೆಗಾಲವು ಬಂದಿತು. ಗಿರಿಸುತೆ, ಅನುಪಮ ಶೈವ ಪ್ರತಾಪ ತೇಜೋನಿಧಿ, ಘನವಟವಿಟಪ ಛಾಯೆಯೊಳ್ ಪ್ರೀತಿಯಿಂದ ನಿಂದಳು. ಕಾರ್ಮೋಡಗಳು ಅಂಬರ ದಲ್ಲಿ ಕರಿಯಂತೆ ತೋರಿದವು. ಅಂಬುಧಾರಾನೀಕವು ಸುರಧನುವಿಂದೆ ಬಹುವಿಧ ಶರಗಳು ಅವನಿಗೆ ಬೀಳುವಂತೆ ಇರ್ದುವು. ಘನಸಮಯ ನೃಪಾಲಕ ಭೂವನಿತೆ ಇವರ ಪ್ರಾಣಿಗ್ರಹಣದ ಕಾಲದಲ್ಲಿ, ಮುತ್ತಿನ ಶೇಸೆಗಳನ್ನು ಗಗನಾಂಗನೆ ಸೂಸಿದಂತೆ ಆಲಿಕಲ್‌ಗಳ್ ಬಿದ್ದವು. ಹಗಲೂ ರಾತ್ರಿಯೂ ಬಿಟ್ಟುಬಿಡದೆ ಜೀರ್‍ರೆಂದು ತೆರಪು ಗುಡದೆ ಮಳೆ ಸುರಿಯಿತು. ಪಾರ್ವತಿಯು ಮುಗಿಲ್‌ಗಳ ಭೀಕರ ಆಕಾರಕ್ಕೂ, ಮಿಂಚುಗಳ ಸಂಚರಕ್ಕೂ ಮೊಳಗುವ ಮಹಾಧ್ವನಿಗೂ, ಸಿಡಿಲ ಸಡಗರಕ್ಕೂ, ತೆರ್ ಮಳೆಯ ಧಾರೆಗೂ, ಆಲಿಕಲ್ ಕರ್ಕಶಕ್ಕೂ, ಸೀಕರದ ಸೀತಕ್ಕೂ, ಬಿರುಗಾಳಿಯ ಗಾಸಿಗೂ, ಪೆರ್ ಮೋಡದ ಕಳ್‌ತಲೆಗೂ ಕೋಡದೇ, ಕೊಂಕದೆ, ದಾಡದೇ, ಬೀಳ್‌ಕದೆ ಬೆಚ್ಚದೆ, ಬೆದರದೆ, ಕೆಲನಂ ಸಾರದೆ, ಸಹಾಯಮಂ ಪಾರದೆ, ಮಹಾವಟವೃಕ್ಷದ ಕೆಳಗೆ ವಿಪುಳ ತಪದಿಂದ ಇದ್ದಳು. ಮಳೆಗಾಲವು ಹೋಗಿ ಶರತ್‌ಕಾಲವು ಪ್ರಾಪ್ತ ವಾಯಿತು. ಜಲಧರದೊಳಗಿಂದ ಶಶಿಕಲೆ ಪೊರಮಡುವಂತೆ ಆ ವಿಶಾಲವಾದ ಆಲದ ಮರದಿಂದ ಭವಾನಿ ಪೊರಮಟ್ಟು ಸೀತಂ ಮಾನದಿರ್ಪ ತಣ್ಣೆಳಲೊಳ್ ಕಂಪಿಡುವ ಲತಾಗೇಹಂಗಳ ನಡುವಣ ಕಾಸಾರ ತಟದೊಳ್ ಅಂಬಿಕೆ ನಿಂದಳು. ಹಿಮವು

ಒತ್ತರಿಸಿ ಭುವನ ಜನವನು ನಡುಗಿಸಿತು. ಸುತ್ತುತ್ತ ಸುಗಿವುತ್ತ, ಮುತ್ತುತ್ತ ಮುಂದುಗೆಡಿಸಿತು. ರವಿ ತೇಜಗುಂದಿದನು. ಈ ತೆರದಿಂದ ಹಬ್ಬಿದ ಸೀತದೊಳಗೆ ಅಗಜಾತೆ ಕೆರೆಗಳಲ್ಲಿ ಘನಾಚಳ ನೈತಂಬದಲ್ಲಿ ತಪದಿಂದ ನಿಂದಳ್. ಇಂತಹ ನಿರುಪಮಾನ ತಪಃ ಪ್ರಭಾವವು ವಿರುಪಾಕ್ಷನ ಕರಣಂಗಳೊಳ್ ಬೆಳೆಸಿ ಬೆರೆಯೆ ಪುರಹರನು ಎಚ್ಚತ್ತು ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ ಇನ್ನಿರಬಾರದೆಂದು ತನ್ನೊಳ್ ಬಗೆದು ಗಿರಿಜೆಯ ಮನವನ್ನು ಒರೆದು ನೋಡುವ ಭರದಿಂದ ಬಂದನು.

ವಿರುಪಾಕ್ಷ ಪ್ರತ್ಯಕ್ಷಕರಣ : ತನ್ನ ಸ್ವಾಭಾವಿಕವಾದ ಪಂಚಮುಖ, ದಶಭುಜ ಮುಂತಾದವುಗಳನ್ನು ಅಡಗಿಸಿ ವಟುವೇಷದಿಂದ ಒಪ್ಪಿರ್ದನು. ಗಿರಿಸುತೆ ಯನ್ನು ಕಾಣುವವರೆಗೆ ತಾನು ವರಪರಮ ಬ್ರಹ್ಮಚರ್ಯದಿಂದ ಇದ್ದ ರೀತಿಯನ್ನು ತೋರಿಸುವದಕ್ಕೇನೋ ಎಂಬಂತೆ ವರವಟು ವೇಷವನ್ನು ತಳೆದು ಹೇಮಕೂಟದ ಹೈಮವತಿಯಿರ್ಪ ತಪೋವನಕ್ಕೆ ಬಂದನು. ಆಗ ಇನ್ನೂ ವಸಂತ ಋತುವು ಬರದೇ ಇದ್ದರೂ ವಸಂತ ಋತುವಿನ ಲಕ್ಷಣಗಳೆಲ್ಲಾ ಪ್ರಾಪ್ತವಾದವು. ಶಶಿಮೌಳಿ ತಪೋವನವನ್ನು ಹೊಕ್ಕು ಮೆಲ್ಲನೆ ಬರುತ್ತಾ ಮಾರ್ಗದ ಶ್ರಮವನ್ನು ಕಳೆಯುವ ನೆವದಿಂದ ಒಂದು ಹೊಸ ಮಾವಿನ ಗಿಡದ ಕೆಳಗೆ ಕುಳಿತನು. ಸಹಚರಿಯರಾದ ಜಯ-ವಿಜಯರು ಹಣೆಯಲ್ಲಿ ವಿಭೂತಿಯನ್ನು ಧರಿಸಿದ ವಿಪ್ರನಾದ ಈ ಅತಿಥಿಯನ್ನು ಕಂಡು ಆದರಿಸಿ ಚರಣಗಳನ್ನು ತೊಳೆದು, ಎಳೆವಾಳೆಯ ಸುಳಿಯೆಲೆಯಲ್ಲಿ ಕಂದ, ಮೂಲ, ಜಂಬು, ಆಮ್ರ, ಕದಳೀ ಫಲಗಳನ್ನು ಇಟ್ಟು "ಅತಿಥಿಯೇ ಬಳಲಿರುವಿರಿ. ಈ ಫಲಗಳಿಂದ ನಿಮ್ಮ ಹಸಿವೆಯನ್ನು ನೀಗಿರಿ" ಎಂದು ಹೇಳಿದರು. ಅತಿಥಿಯು "ಈ ಲಲನೆಯು ಯಾರು ? ಯಾರ ಸಲುವಾಗಿ ತಪಸ್ಸು ಮಾಡುವಳು ? " ಜಯ-ವಿಜಯರು "ಇವರ ಚಿಂತೆ ನಿನಗೇಕೆ? ನಿಮ್ಮ ದಣಿವನ್ನೂ, ಹಸಿವನ್ನೂ, ಮೊದಲು ಕಳೆದುಕೊಳ್ಳಿರಿ." ನಸುನಗುತ ವಿಪ್ರ "ಕೇಳಿದರೆ "ತಪ್ಪೇ? ಈ ಪೊಸಕನ್ನೆ ತಪಸ್ಸುಮಾಡುವದನ್ನು ಸಹಿಸಬಹುದೇ ? ತಪಬಿಡಿಸುವವರು ಯಾರೂ ಇಲ್ಲವೇ ? ಸಹಾಯ ಸಂಪದವು ಇಲ್ಲವೇ ?" ಎಂದು ಅನ್ನಲು, ಗಿರಿಜೆ ಮನದಲ್ಲಿ ಮುನಿ ಯುತ್ತ, ಜಪವನ್ನು ಬಿಟ್ಟು, ಜಪಮಾಲೆಯನ್ನು ಒಂದು ಕೈಯಲ್ಲಿ ಹಿಡಿದು, ಮೆಲ್ಲನೇ ಕಣ್ಣ್ ತೆರೆದು ಆ ವಟುವನ್ನು ನೋಡಿದಳು. ಆಗ ಆಕೆಗೆ ಹರ್ಷವಾಯಿತು. ವಿಪ್ರನು ಪುನಃ ಗಿರಜೆಗೆ ಅಂದನು! "ಈ ಸುಕುಮಾರತೆ! ಈ ನವ ಯೌವನ! ಈ ಭಾಸುರತೆ! ಸುಖದಿಂದ ಇರುವದನ್ನು ಬಿಟ್ಟು ತಪಸ್ಸನ್ನು ಏಕೆ ಮಾಡುವೆ? ನಿನ್ನನ್ನು ಕೊರಗಿಸುವ ದುಷ್ಟನನ್ನು ನನಗೆ ಹೇಳು? ಬಿಸಿಲೆನ್ನದೆ, ಮಳೆಯೆನ್ನದೆ, ಚಳಿಯೆನ್ನದೆ, ಹಸಿವು, ನೀರಡಿಕೆ, ನಿದ್ದೆ ಇವೆಲ್ಲವುಗಳನ್ನು ಮರೆತು, ಈ ಭೂಮಿ ಬೆರಗುವಡೆಯುವಂತೆ ತಪ ಮಾಡುವದುಂಟೇ ? ಯಾರನ್ನು ಕುರಿತು ತಪಸ್ಸು ಮಾಡುವೆ ? ಹೇಳಿದರೆ ದೋಷವೇ ? ಕೇಳಿದರೆ ದೋಷವೇ ?" ಎಂದು ಕಪಟ

ವಟುವು ಕೇಳಲು, ಪಾರ್ವತಿಯು ಚಿಂತೆಯನ್ನು ತಾಳಿ, ದ್ವಿಜನು ಕೇಳುತ್ತಿರುವನು. ಅವನಿಗೆ ಹೇಳಬಹುದೋ ಅಥವಾ ಹೇಳಬಾರದೋ ಎಂದು ಉಬ್ಬಸದಿಂದ ಮೆಲ್ಲನೆ ನುಡಿದಳು. "ಧೂರ್ತವಿಪ್ರಾ ! ಒಳ್ಳೆ ಆತುರತೆಯಿಂದ ಕೇಳುತ್ತಿರುವಿ. ಕಾರುಣ್ಯಾಬ್ಧಿಯಾದ ಶೂಲಿಗೆ ಕರುಣ ಹುಟ್ಟಬಹುದೆಂದು ತಪಸ್ಸು ಮಾಡುತ್ತಿರುವೆ." ಅದನ್ನು ಕೇಳಿ ವಿಪ್ರನು ಅಟ್ಟಹಾಸದಿಂದ ನಕ್ಕು "ಹೋ ಕಾಮಹರ ! ಮುಕ್ಕಣ್ಣ ! ಅಖಿಲ ಶಾಸ್ತ್ರ ಕ್ರಮನ್ನೂ ಮೀರಿದವ ! ಪಿತೃವನದಲ್ಲಿ ಇರುವವ ! ಅಂತಹನಲ್ಲಿ ಎಂತು ಚಿತ್ತವನ್ನಿಟ್ಟೆ ಲತಾಂಗಿ ? ಅವನಿಗೂ ನಿನಗೂ ಬಹಳ ಅಂತರವಿದೆ. ನೀನು ಇನಿಯಳು. ಆತನು ವಿಷಮನು. ನೀನು ಅತಿ ಮೃದು. ಆತನು ಕಠಿಣ ಗುಣಾಶ್ರಯ. ನೀನು ಅಬಲೆ. ಆತನು ಉಗ್ರ. ನೀನು ಭೀರು. ಆತ ಸರ್ಪಭೂಷಣ. ಇಂಥವನ ಮೇಲೆ ಮನಸ್ಸು ಹೇಗೆ ಮಾಡಿದೆ ? " ಎಂದು ವಿಪ್ರನು ನುಡಿದನು. ಭವಾನಿ ಈ ಶಿವನಿಂದೆ ಕೇಳಿ ಸಿಟ್ಟಾಗಿ "ಶಿವನ ನಿಂದೆಯನ್ನು ಕೇಳುವ ಪಾಪ ಬಂದಿತಲ್ಲಾ ! ಘೋರ ತಪದಲ್ಲಿ ಕೋಪಿಸಬಾರದು. ತಪ ಕೆಡುವದು. ಪತಿನಿಂದೆಯನ್ನು ಸಹಿಸಬಾರದು." ಎಂದು ಚಿಂತಿಸಿ ತನಗುಂಟಾದ ಕೋಪವನ್ನು ತಡೆಯದೆ ಭಸಿತದಿಂದ ವಿಪ್ರನನ್ನು ಹೊಡೆದಳು. ವಿಪ್ರನ ಕಪಟ ವಟು ವೇಷವು ಹೋಯಿತು. ಶಿವನಾದರೇನು ? ಪುಸಿದಿಟ್ಟಕ್ಕೆ ನಿಲ್ಲುವದೇ ಜಗದಲ್ಲಿ ? ಶಿವನು ತನ್ನ ನಿಜರೂಪವನ್ನು ತೋರಿಸಿದನು. ಆಕಾಶದಿಂದ ಪೂ-ಮಳೆ ಸುರಿಯಿತು.

ಪಾರ್ವತಿ-ಪರಮೇಶ್ವರರ ವಿವಾಹ : ಶಿವನ ನಿಜರೂಪವನ್ನು ಕಂಡು ಪಾರ್ವತಿ ತಲೆಬಾಗಿದಳು. ಅನುರಾಗವೇರಿ ಪುಳಕಿತಳಾದಳು. ಶಿವನು ಅಪರ್ಣೆಯ ಹಸ್ತವನ್ನು ಹಿಡಿದನು. ತಂದೆಯಾದ ಗಿರೀಶ್ವರನಲ್ಲಿ ಬೇಡಿ, ವಿವಾಹವನ್ನು ಏರ್ಪಡಿಸಬೇಕೆಂದು ಗಿರಿಜೆ ಪ್ರಾರ್ಥಿಸಿದಳು. ಶಿವನು ಅದಕ್ಕೆ ಒಪ್ಪಿದನು. ಅದೇ ಕಾಲಕ್ಕೆ ರತಿ ಬಂದು ಸಮಸ್ಕರಿಸಿದಳು. "ಅವಳಿಗೆ ಕೋಪಾಗ್ನಿಯಿಂದ ಬೆಂದು ಬೂದಿಯಾದ ಅವಳ ಪತಿ ಕಾಮನನ್ನು ನಿಮ್ಮಿಂದ ಪಡೆದುಕೊಡುವೆನೆಂದು ವಚನಕೊಟ್ಟಿರುವೆನು." ಎಂದು ಪಾರ್ವತಿ ಬಿನ್ನೈಸಿದಳು. ಶಿವನು ನಸುನಕ್ಕು "ನೆನೆದಾಗ ಕಾಮನು ಅನಂಗನಾಗಿ ರತಿಗೆ ಸುಖ-ಸಂಪದಕೊಡುತ್ತಿರಲಿ" ಎಂದು ನುಡಿದು, ಕೈಲಾಸಕ್ಕೆ ಬಿಜಯಂಗೈದನು. ಇತ್ತ ಪಾರ್ವತಿ ಜಯ-ವಿಜಯರಿಂದೊಡಗೂಡಿ ಪುಷ್ಪಕವನ್ನೇರಿ ಓಷಧಿಪ್ರಸ್ತಪುರಕ್ಕೆ ಆಗಮಿಸಿದಳು. ಗಿರಿರಾಜನು ಸಂತೋಷದ ಈ ಸುದ್ದಿಯನ್ನು ಕೇಳಿ, ಪಟ್ಟಣವನ್ನು ಸಿಂಗರಿಸಿ, ಸಂಭ್ರಮದಿಂದ ಮಗಳನ್ನು ಸ್ವಾಗತಿಸಿದನು. ಮೇನೆಯು, ಮಗಳು ತಪಸ್ಸಿನಿಂದ ಕೃಶಳಾದುದನ್ನು ಕಂಡು ಮರುಗಿದಳು. ಅತ್ತ ಕೈಲಾಸದಲ್ಲಿದ್ದ ಶಿವನು ಸಪ್ತರ್ಷಿಗಳನ್ನು ಬರಮಾಡಿಕೊಂಡು ಪಾರ್ವತಿಯನ್ನು ಬೇಡಲು ಗಿರಿರಾಜನಲ್ಲಿಗೆ ಅವರನ್ನು ಕಳಸಿದನು. ಅವರು ಬಂದು ಚಂದ್ರಮೌಳಿಗೆ, ಅಜಾತಂಗೆ, ಭುವನೈಕ ಭಾಗ್ಯವತಿ ಪಾರ್ವತಿಯಂ ಬೇಡಲು ಬಂದೆವು.

ಶಿವೆಯನ್ನು ಕೊಡು. ಗಿರಿರಾಜಾ !! ಎಂದು ಕೇಳಿದರು. ಪರ್ವತರಾಜನು ಸಪ್ತರ್ಷಿಗಳ ಚರಣಕ್ಕೆರಗಿ "ಕೊಟ್ಟೆಂ ಕೊಟ್ಟೆಂ ಎರಡಿಲ್ಲ" ಎಂದು ಸತ್ಯವಚನವನ್ನು ನುಡಿದು, ಅವರನ್ನು ಹರುಷದಿಂ ಕಳುಹಿ, ವಿವಾಹಮಂಟಪರಚನೆಗೆ ಸಿದ್ಧನಾದನು. ನಿರ್ಜರ ಲೋಕದ ವಿಶ್ವಕರ್ಮನನ್ನು ಕರಿಸಿ, ಮಂಟಪವನ್ನು ಅವನಿಂದ ರಚಿಸಿದನು. ಅಂಬಿಕೆಯನ್ನು ಸುವಾಸಿನಿಯರು ಸಿಂಗರಿಸಿದರು. ಅತ್ತ ಕೈಲಾಸಾದ್ರಿಯಲ್ಲಿ ನಂದೀಶ್ವರನು ಶಿವನನ್ನು ಮಣಿಕಿರೀಟ, ಮಾಣಿಕ್ಯಾವತಂಸ, ತೋರಹಾರ, ಬಾಹುಪೂರ, ರತ್ನಕಂಕಣಗಳಿಂದ ಅಲಂಕರಿಸಿ, ನಿರ್ಮಳೋತ್ತರಿಯಮಂ ಪೊದೆಯಿಸಿ, ದಿವ್ಯದುಕೂಲಮನುಡಿಸಿ, ಸಿಂಗರಿಸಿದನು. ಆತನ ದಿವ್ಯ ಕಾಂತಿಯನ್ನು ಕಂಡು ನೋಡಲಾರದೆ ಪೊಗಳುತ್ತಿರ್ದನು. ಹೊಸಮದುವಣಿಗ, ಪಂಪಾವಿರೂಪಾಕ್ಷನು ವೃಷಭಾರೂಢನಾಗಿ, ಪ್ರಮಥ ಗಣಂಗಳಿಂದೊಡಗೂಡಿ, ವಿವಾಹ ಮಂಟಪವನ್ನು ಪ್ರವೇಶಿಸಿದನು. ಮೈಯಿಕ್ಕಿ ನಿಂದ ಮೇನಾದೇವಿಗೂ ಗಿರಿರಾಜನಿಗೂ ಕಾರುಣ್ಯಮಂ ಇತ್ತು, ಸುಮುಹೂರ್ತ ಪತ್ರೆಸಾರ್ದಂತೆ ಸಾರ್ದನು. ವಿವಾಹಮಂಟಪದಲ್ಲಿ ಪಾರ್ವತಿ ಪರಮೇಶ್ವರರಿಗೆ ಕ್ರಮಾನುಸಾರ ಅಕ್ಷತಾರೋಪಣವಾಯಿತು. ಲಾಜ್ಯಾಹುತಿ, ಪೂರ್ಣಾಹುತಿ ಕೊಟ್ಟು, ಹೋಮಸಮಾಪ್ತಿ, ನಂತರ ಸಪ್ತಪದಿ, ಮೊದಲಾದ ಎಲ್ಲ ವಿಧಿಗಳನ್ನು ನೆರವೇರಿಸಿ, ಮದುವೆಗೆ ಬಂದ ಗಣಂಗಳು, ಹರಿವಿರಿಂಚಿ, ಪುರಂದರಾದಿ ಸಮಸ್ತ ಸುರಸಮೂಹವನ್ನು ಅಮೃತಾನ್ನದಿಂದ ತೃಪ್ತಿಪಡಿಸಿ, ಶಿವನು ಪಾರ್ವತಿಯಿಂದೊಡಗೂಡಿ ಕೈಲಾಸಕ್ಕೆ ನಡೆತಂದನು.

> ಹರಿಸಂ ಮಿಗೆ ಕೈಲಾಸದ
> ಪುರದೊಳಗೊಪ್ಪಿರ್ದನಭವನದ್ವಯರೂಪಂ
> ವರಶರಣಾಳಿಗೆ ಬೇಡಿದ
> ವರಮಂ ಕರುಣಿಸುತೆ ಹಂಪೆಯ ವಿರೂಪಾಕ್ಷಂ ||

ಪಾತ್ರ ನಿರೂಪಣೆ

ಪಾರ್ವತಿ:— ಪಾರ್ವತಿ, ಪರಮೇಶ್ವರ, ಹಿಮವಂತ, ಮೇನಾದೇವಿ, ಮದನ ರತಿ, ನಾರದ, ತಾರಕ, ಜಯವಿಜಯರು ಗಿರಿಜಾಕಲ್ಯಾಣದಲ್ಲಿ ಬಂದ ವ್ಯಕ್ತಿಗಳು. ಅವರಲ್ಲಿ ಪಾರ್ವತಿಯ ಪಾತ್ರ ಪ್ರಧಾನವಾದುದು. ಅವಳೇ ಕಥಾನಾಯಿಕೆ. ಮೇನೆ ಉಗ್ರತಪದಿಂದ ಅಭವಂಗೆ ವಧುವೆನಿಪ ಪಾರ್ವತಿಯನ್ನು ಪಡೆದಳು. ಹುಟ್ಟುವಾಗಳೇ ಗಿರಿಜೆ ಶಿವಭಕ್ತಿಸಂಪನ್ನೆ, ಶಿವಲಿಂಗೇಕ್ಷಣ ಲೋಲುಪೆ, ಶಿವಪ್ರಸಾದ ಚಿತ್ತೆ, ಶಿವೋತ್ಸವೆ, ಶಿವಪುಣ್ಯಾಂಬೋನಿಧಿ. ಪುಣ್ಯದ ಜೀವದಂತೆ, ಶಿವಜ್ಞಾನದ ದೇಹದಂತೆ, ನಿರುಪಾಧಿಕ ಜ್ಯೋತಿಯಂತೆ, ಜಗನ್ಮಾತೆಯಪ್ಪ ಹೇಮವತಿ, ಶೈಶವ ಲೀಲೆಯನ್ನೊಳಗೊಂಡು ಬೆಳೆಯುತಿರ್ದಳು. ಅವಳ ಬಾಲಲೀಲೆ ಶಿವಲೀಲೆಯಾಗಿ ಹಸಿವು, ತೃಷೆ

ಗಳನ್ನು ಅರಿಯದೆ ಹಗಲೂ ರಾತ್ರಿ ಶಿವನನ್ನು ಧ್ಯಾನಿಸುತ್ತಿದ್ದಳು. ಯೌವನದ ಚಿಹ್ನಗಳು ತೋರಹತ್ತಿದವು. ನಾರದಮುನಿಯು ಆಗಮನದಿಂದ ಪಾರ್ವತಿಯು ಶಿವನರ್ಧಾಂಗಿಯಾದ ಸತಿಯೆಂದೂ ದಕ್ಷನಯಜ್ಞದಲ್ಲಿ ದೇಹತ್ಯಾಗಮಾಡಿ ಹಿಮವಂತ ಮೇನೆಯರಿಗೆ ಮಗಳಾಗಿ ಜನಿನಿಸಿರುವಳೆಂದೂ ತಿಳಿಯುವದು. ಹೇಮಕೂಟದಲ್ಲಿ ನಿಜಯೋಗದಲ್ಲಿರುವ ಹರನಲ್ಲಿಗೆ ಅವಳನ್ನು ಪರ್ವತರಾಜನು ಕರೆದೊಯ್ಯುವನು.

ಪಾರ್ವತಿ, ಶಿವನು ಸಾತ್ವಿಕ ಭಕ್ತಿಗೆ ಒಲಿಯುವನೆಂದು ನಂಬಿ ಅವನನ್ನು ಬಹುವಿಧದಿಂದ ಅರ್ಚಿಸುವಳು. ಶಿವನ ಸಮಾಧಿ ಚಲಿಸಲಿಲ್ಲ. ದೇವತೆಗಳ ಹಿತಕ್ಕಾಗಿ ಶಿವನ ಸಮಾಧಿ ಭಂಗಮಾಡಲು ಬಂದ ಮದನ ಶಿವನ ಕೋಪಾಗ್ನಿಯಿಂದ ಸುಟ್ಟು ಬೂದಿಯಾದನು. ರತಿಗಾದ ದುಃಖವು ಪಾರ್ವತಿಯ ಅಂತಃಕರಣವನ್ನು ತಟ್ಟಿ, ಅವಳ ಬಗೆಗೆ ಕರುಣೆ ಹುಟ್ಟಿಸಿತು. ಗಿರಿಜೆ, ರತಿಯನ್ನು ಸಂತೈಸಿ ಅವಳ ಪತಿಯನ್ನು ದೊರಕಿಸಿ ಕೊಡುವದಾಗಿ ಆಶ್ವಾಸನ ಕೊಡುವಳು. ಶಿವನ ನಡತೆಯ ಬಗೆಗೆ ಅವಳಿಗೆ ಕೋಪವುಂಟಾಗುವದು. ಪ್ರೀತಿಯ ತಾಯ್ತಂದೆಗಳನ್ನು ಬಿಟ್ಟು, ಶಿವನಿದ್ದಲ್ಲಿಗೆ ಬಂದು, ಅವನನ್ನು ನಾನಾವಿಧದಿಂದ ಪೂಜಿಸಿದರೂ ಉಗ್ರನಿಗೆ ಕರುಣೆ ಬರಲಿಲ್ಲ. ತಿರುಗಿ ನೋಡದೆ, ಮಾತನಾಡಿಸದೆ, ಅಂತರ್ಧಾನನಾದನು. ಇನ್ನು ಮೇಲೆ, ನಾನಿದ್ದಲ್ಲಿಗೆ ತಾನೇ ಬರುವಂತೆ ಮಾಡುವೆನೆಂದು ಛಲ ಹಿಡಿದು, ಉಗ್ರ ತಪಸ್ಸನ್ನು ಕೈಕೊಳ್ಳುವಳು. ಅವಳ ತಪೋಜ್ವಾಲೆ ವಿಶ್ವವನ್ನು ವ್ಯಾಪಿಸಿ ಕಂಪಿಸುವದು. ರಜತಗಿರಿಯಲ್ಲಿದ್ದ ಮೃಡನ ಚಿತ್ತವನ್ನು ಚಲಿಸಿ, ಅವನನ್ನು ಪಾರ್ವತಿಯಿದ್ದಲ್ಲಿಗೆ ಎಳೆದು ತರುವದು. ವಟುವೇಷದಿಂದ ಬಂದ ಅಭವನು, ಮಹಾದೇವಿಯ ಮನಸ್ಸನ್ನು ಪರೀಕ್ಷಿಸಲೋಸುಗ ಶಿವನಿಂದೆಯನ್ನು ಮಾಡಲು, ಉಗ್ರ ಕೋಪವನ್ನು ತಡೆಯಲಾರದೆ ವಿಭೂತಿಯಿಂದ ಹೊಡೆಯುತ್ತಾಳೆ. ಶಿವನ ನಿಜರೂಪ ಹೊರಬರುವದು.

ಹರಿಹರನು ಪಾರ್ವತಿಯನ್ನು ಚಿತ್ರಿಸುವಲ್ಲಿ ತನ್ನ ಕಲ್ಪನಾ ಶಕ್ತಿಯನ್ನೂ, ಪ್ರತಿಭೆಯನ್ನೂ, ತಪಸ್ಸನ್ನೂ, ಪೂರ್ಣವಾಗಿ ಮುಡುಪಾಗಿಟ್ಟಿರುವನು. ಅವಳು ಮೇನೆ ಪರ್ವತರಾಜರಲ್ಲಿ ಜನಿಸಿದ್ದರೂ ಜಗನ್ಮಾತೆ, ಶಿವನರ್ಧಾಂಗಿ ಎಂದು ಹೆಜ್ಜೆ ಹೆಜ್ಜೆಗೂ ದೃಢಪಡಿಸುತ್ತಾನೆ. ಅವಳ ಜನನದಲ್ಲಿ, ತಪದಲ್ಲಿ, ವಿವಾಹದಲ್ಲಿ ಸಕಲ ಲೋಕದ ಕಲ್ಯಾಣ ಅಡಗಿದೆ, ಬ್ರಹ್ಮ, ವಿಷ್ಣು ಇಂದ್ರಾದಿ ದೇವತೆಗಳ ಸುಖಶಾಂತಿ ನೆಲಸಿದೆಯೆಂಬುದನ್ನು ತೋರಿಸಿಕೊಡುತ್ತಾನೆ. ತನ್ನ ಶ್ರದ್ಧೆ, ಭಕ್ತಿ, ಕವಿತಾ ಸಾಮರ್ಥ್ಯ, ಪೂಜಾಫಲಗಳನ್ನು ಈ ಒಂದು ವ್ಯಕ್ತಿಗಾಗಿ ಧಾರೆಯೆರೆದಿರುವನು. ಶಿವಪೂಜೆ, ಶಿವಧ್ಯಾನ, ಶಿವಸ್ತೋತ್ರಗಳೇ ಅವನ ಜೀವನದ ಗುರಿಯಾಗಿದ್ದಂತೆ ಪಾರ್ವತಿ ಹುಟ್ಟುವಾಗಲೇ ಶಿವನ ಚಿಂತೆ, ಶಿವಲಿಂಗವನ್ನು ನೋಡುವ ತವಕ, ಅವಳು

ಬೆಳೆದುದು ಶಿವಜ್ಞಾನದ ದೇಹದಂತೆ, ನಿರೂಪಾಧಿಕ ಜ್ಯೋತಿಯಂತೆ, ಪರಮಾತ್ಮನ ಪರಿಣಾಮದಂತೆ. ಅವಳ ಸ್ವಭಾವ ಕೋಮಲ ಮತ್ತು ಪ್ರೇಮಳ. ಆದರೂ ಧೀರೋದ್ಧಾತೆ. ಹತಾಶನಾದ ಮನ್ಮಥನಿಗೆ ಧೈರ್ಯವಿತ್ತು ಪ್ರೋತ್ಸಾಹಿಸುವಳು. ರತಿಯನ್ನು ಅಭಯ ವಚನಗಳಿಂದ ಸಂತಯಿಸುವಳು. ಅನಿರ್ದಲ್ಲಿಗೆ ಉಗ್ರನನೀಶನಂ ವಿಪುಳ ನಿಶ್ಚಳನಂ ಛಲದಿಂದ ತಂದಪೆನೆಂದು ಉಗ್ರ ತಪೋಭಿಮುಖಿಯಾಗಿ ಹೊರಡುವದರಲ್ಲಿ ಅವಳ ಧೀರತ್ವ ನಿಚ್ಚಳವಾಗಿ ಕಾಣುವದು. ವಿಶ್ವವನ್ನೇ ತಲ್ಲಣಿಸುವ ಅವಳ ಉಗ್ರ ತಪಸ್ಸಿನಲ್ಲಿ ಅವಳ ಚಿತ್ತಸ್ಥೈರ್ಯ, ಧೈರ್ಯ, ಶಿವನನ್ನು ಒಲಿಸೇ ತೀರುವೆನೆಂಬ ಹಟ ಸ್ಫುಟವಾಗಿವೆ. ಪಾರ್ವತಿಯನ್ನು ಈ ಪ್ರಕಾರ ಚಿತ್ರಿಸುವಲ್ಲಿ ಹರಿಹರನ ಮನೋಭಾವವನ್ನು ಕಾಣಬಹುದು. ಅವನ ದೃಢಭಕ್ತಿ, ಕರುಣಾರ್ದ್ರ ವಾದರೂ ಅಚಲ ಮನಸ್ಸು, ದೃಢನಿಷ್ಠೆ, ತನ್ನ ಗುರಿಯನ್ನು ಮುಟ್ಟಿಯೇ ತೀರ ಬೇಕೆಂಬ ಹವ್ಯಾಸ, ಕೈಕೊಂಡ ಕಾರ್ಯವನ್ನು ಸಾಧಿಸಬೇಕೆಂಬ ಛಲ, ಇವೆಲ್ಲ ವನ್ನು ಪಾರ್ವತಿಯ ಸ್ವಭಾವ ಚಿತ್ರದಲ್ಲಿ ತುಂಬಿರುವನು. ಪಾರ್ವತಿಯು ಶಾಂತ ಮತ್ತು ಸಹನ ಸ್ವಭಾವದವಳಾದರೂ, ಶಿವನಿಂದೆಯನ್ನು ಕೇಳಿ, ತಪಸ್ಸಿನಲ್ಲಿ ಕೋಪಿಸ ಬಾರದೆಂಬ ವಿಚಾರ ಬಂದರೂ, ಕೈಗೆ ಸಿಕ್ಕ ವಸ್ತುವಿನಿಂದ- ಸುದೈವದಿಂದ ಅದು ವಿಭೂತಿಯಾಗಿತ್ತು- ವಟುವನ್ನು ಹೊಡೆದ ಚಿತ್ರ ಬಲು ಆಕರ್ಷಕವಾಗಿದೆ. ಅವಳು ಆಗ ತಳೆದ ಉಗ್ರತ್ವದ ಮುಂದೆ ಶಿವನ ಪುಸಿ ವೇಷ ಕರಗಿ ನಿಜರೂಪ ತೋರಿಬರು ವದು. ಮೃಡನು ಒಲಿದೀಕ್ಷಿಸುತೆ, ನಿಲಲಾರದರ್ಪಣೆಯ ಪುಣ್ಯಹಸ್ತವಂ ಪಿಡಿದು ತನ್ನ ನಿವಾಸವಾದ ಕೈಲಾಸಕ್ಕೆ ನಡೆ! ಎನಲು "ದೇವ, ಗಿರೀಶ್ವರನಲ್ಲಿ ಎನ್ನನಾವರ ದೊಳೆ ಬೇಡಿ ಊರ್ಜಿತ ವಿವಾಹ ಮದಚ್ಚರಿಯಪ್ಪ ಮಾಳ್ಕೆಯಂ ಕರುಣಿಪುದು" ಎಂದು ಕವಿಯು ಪಾರ್ವತಿಯನ್ನು ಸಂಪ್ರದಾಯ ಶರಣೆಯನ್ನಾಗಿ ಮಾಡಿರುವನು. ಹರಿಹರನು ಬಹು ವಿಷಯಗಳಲ್ಲಿ ಸ್ವಾತಂತ್ರ್ಯವನ್ನು ಪ್ರದರ್ಶಿಸಿದರೂ ಇಲ್ಲಿ ಪಾರ್ವತಿಯನ್ನು ಸಾಂಪ್ರದಾಯ ಶರಣೆಯನ್ನಾಗಿ ಮಾಡಿರುವದು, ಅವನು ಪೂರ್ಣವಾಗಿ ಸಾಂಪ್ರದಾಯವನ್ನು ಹರಿದೊಗೆದ ವ್ಯಕ್ತಿಯಲ್ಲವೆಂಬುದು ಸ್ಪಷ್ಟ ವಾಗುವದು.

ಆತನ ಕಾವ್ಯಸ್ಫೂರ್ತಿಗೆ ನೆಲೆಯಾದ ಪಾರ್ವತಿ ಲೋಕಮಾತೆ, ಮಹಾದೇವಿ ಗಿರಿಜಾತೆಯಾದರೂ ಸತಿ, ಛಲದಲಲನೆ, ಬಲ್ಪಿನ ಭಾವಕಿ, ಶಿವನರ್ಧಾಂಗಿ, ಆದರ್ಶಪತ್ನಿ, ಜಗಕ್ಕೆ ಉಪಾಸ್ಯದೇವತೆ. ಅವಳು ಪರಶಿವನನ್ನು ಒಲಿಸಿಕೊಂಡುದು ಕಾಮಿನಿಯಂತಲ್ಲ. ಕಾಮನನ್ನು ಜಯಿಸಿದ ಪರಿಶುದ್ಧ ಮನಸ್ಸಿನಿಂದ ಕಾಮಾರಿ ಯನ್ನು ಒಲಿಸಿಕೊಂಡಳು. ಕಾವ್ಯವೆಲ್ಲ ಗಿರಿಜೆಯನ್ನೇ ಸುತ್ತಿಕೊಂಡಿದೆ. ಹರಿಹರನಿಗೆ ಪಾರ್ವತಿಯನ್ನು ಎಷ್ಟು ಬಣ್ಣಿಸಿದರೂ ತೃಪ್ತಿಯಿಲ್ಲ.

ಈಶ್ವರ: ಹರಿಹರನು, ಪಂಪಾವಿರೂಕ್ಷನೇ ಹಿಮವತ್ ಶಿಖರದಲ್ಲಿ ವಾಸಿಸುವ ಶಿವನು ಎಂದು ನಂಬಿ ಚಿತ್ರಿಸಿರುವನು. ವಿರುಪಾಕ್ಷನ ಪ್ರಭಾಮಂಡಲವು ವಿದ್ಯುತ್ ಪ್ರಭವ ಪ್ರಭೆಯೋ, ಸಂಪೂರ್ಣ ಚಂದ್ರಾಂಶು ಪದವೋ, ಸೂರ್ಯಕೋಟಿ ರುಚಿರ ಪ್ರದ್ಯೋತವೋ, ಎಂಬಂತೆ ತೋರುತ್ತಿತ್ತು. ಅದರಲ್ಲಿ ಪದ್ಮಾಸನಾರೂಢನಾಗಿ ಧ್ಯಾನದಲ್ಲಿ ಮಗ್ನನಾಗಿ ವಿರೂಪಾಕ್ಷ (ಶಿವ) ನಿದ್ದನು. ಅವನು ಭಿನ್ನಾಭಿನ್ನ ಜ್ಞಾನಮಯನು. ತನ್ನ ತೇಜದಲ್ಲಿ ಮನಸ್ಸನ್ನು ಮುಳುಗಿಸಿ ಅಚಲನಾದವನು. ಅಭವನು, ಅದ್ವಯನು, ಸದಮಳನು, ಪರತತ್ವದ ನಿಧಾನನು, ಆನಂದಮಯನು. ಅವನನ್ನು ಅರಿಯಲು ಮುನಿಗಳು ತಪಸ್ಸು ಮಾಡುತ್ತಿರುವರು. ಅವರಿಗೆ ಅವನು ನಿಲುಕಲಿಲ್ಲ. ವೇದಶಾಸ್ತ್ರಗಳು ಆತನನ್ನು ಅರಿಯವು. ಹರಿಹರನು ಶಿವನನ್ನು ಸಕಲ ಮತ್ತು ನಿಷ್ಕಲ ರೂಪದಲ್ಲಿ ಕಾಣುವನು. ಗಿರಿಜೆಗೆ ಕಂಡ ಶಿವನು ಸಕಲನು, ವಿಪುಳ ವಿಭ್ರಮನು, ತಪೋಮಯನು, ವಿಳಾಸನಿಧಿ, ವೈರಾಗ್ಯಯುಕ್ತ, ಭಸಿತಕಾಯ, ಸೌಂದರ್ಯರೂಪ, ಜ್ಞಾನಪ್ರದೀಪ, ಸ್ವಯಂಪ್ರಕಾಶ, ಭಕ್ತರ ಬಯಕೆಯ ನಿಧಿ, ಪದ್ಮಾಸನ, ಭಾಸುರಭರಿತವಪು, ಧ್ಯಾನಮುದ್ರೆಯುಳ್ಳದ್ದವ, ರುದ್ರಾಕ್ಷಮಾಲೆಯನ್ನು ಅಂಗುಲಿಯಲ್ಲಿ ಧರಿಸಿದವ, ಲಲಿತಾಸ್ಯ, ಸ್ನಿಗ್ಧಗಂಡ, ಮುಕುಳಿತ ನಯನ, ಪಿಂಗಲ ವರ್ಣದ ಜಟಾಜೂಟ, ತಾಪಸವೇಷಧಾರಿ. ಅವನ ರೂಪು ಅತೀವ ಆಕರ್ಷಕವಾದುದು. ಅವನು ಸಾತ್ವಿಕ ಭಕ್ತಿಗೆ ಒಲಿಯುವನೆಂದು ನಂಬಿ ಪಾರ್ವತಿ ಅವನನ್ನು ಅರ್ಚಿಸುವಳು. ಆದರೂ ಅವನನ್ನು ಒಲಿಸಲು ಸಮರ್ಥಳಾಗಲಿಲ್ಲ. ಮನ್ಮಥನನ್ನು ದಹಿಸಿ, ಮುಳಿದು, ತುಳಿದು, ಸ್ಮರಭಸ್ಮಾಮಯವನಾಗಿ ಅಂತರ್ಧಾನವಾಗುವಾಗ ಉಗ್ರನಾದನು. ಪಾರ್ವತಿಯನ್ನು ಈಕ್ಷಿಸದೆ, ನುಡಿಸದೆ, ಸೋಂಕದೆ ಹೊರಟುಹೋದನು. ಅವಳ ಛಲಕ್ಕೆ, ಕಠೋರವಾದ ಸಾತ್ವಿಕ ತಪಕ್ಕೆ, ಸೋತು, ವಟುವೇಷದಿಂದ ಬಂದು, ಅವಳೊಡನೆ ವಾದಿಸಿ, ಶಿವನಿಂದೆಯನ್ನು ಮಾಡಲು ಪೆಟ್ಟು ತಿಂದು, ನಿಜರೂಪ ದೋರುವನು. ಶಿವನ ರೂಪವನ್ನು ಚಿತ್ರಿಸುವಲ್ಲಿ ಹರಿಹರನ ಶ್ರದ್ಧಾ, ಭಕ್ತಿ, ನಿಷ್ಠೆ, ಒಡೆದು ಕಾಣುವವು. ವಟುವೇಷದಿಂದ ಬಂದ ಶಿವನ ವಾದಸರಣಿ ದಿಟ್ಟತನದ್ದೂ ಮಾರ್ಮಿಕವೂ ಆಕರ್ಷಕವೂ ಪಾರ್ವತಿಯ ಮನಸ್ಸಿನ ಆಳವನ್ನು ನಿಷ್ಕರ್ಷಿಸುವಂತಹದೂ ಆಗಿದೆ. ವಟುವನ್ನು ಕಂಡ ಪಾರ್ವತಿಯ ಅಂತರಾತ್ಮ ಆತನು ಶಿವನಿರಬೇಕೆಂದು ಸೂಚಿಸಿತು. ಆಕೆಯ ಚಿತ್ತ ಪ್ರಸನ್ನವಾಯಿತು. ಇಂದುಗೆ ಮೇಘವು ಕವಿದರೂ ಅಂದು ಈ ಲೋಕಕ್ಕೆ ತಣ್ಪು ತಪ್ಪದ ತೆರದಿಂದ ಅಗಜೆಗೆ ಆ ಕಪಟ ವಟುವನ್ನು ಕಂಡು ಹರ್ಷಸುಖವಾಯಿತು. ಆ ಕಪಟ ವಟುರೂಪದ ಶಿವನು, ಗಿರಿಸುತೆಯ ಮಧುರ ದೃಷ್ಟಿಗಳು ತಾಗಲು, ನಿಲಲಾರದೆ ಎದ್ದು ಪುಲಕಿತನಾದನು. ಇಲ್ಲಿ ರಸಿಕಚಕ್ರವರ್ತಿಯಾದ ಹರಿಹರನ ಸಾತ್ವಿಕ ಶೃಂಗಾರ ರಸದ ಪ್ರಭಾವ ಎದ್ದು ಕಾಣುವದು. ವರವಟುವಿನ ಮಾತುಗಳಲ್ಲಿ ಹಾಸ್ಯ ಕರುಣಾರಸಗಳು ಒಡಮೂಡಿವೆ.

ಹರಿಹರನು ಚಿತ್ರಿಸಿದ ಶಿವನ ಚಿತ್ರ ಸನ್ನಿವೇಶಕ್ಕೆ ಸರಿಯಾಗಿ ಸ್ವಾಭಾವಿಕವೂ ಆಕರ್ಷಕವೂ ಆಗಿದೆ.

ಪರ್ವತರಾಜ: ಹರಿಹರನ ಪರ್ವತರಾಜ ಪರಮೇಶ್ವರಾಂಘ್ರಿಸರಸಿಜ ಮಧುವ್ರತ, ದಿಗಂತ ಕೀರ್ತಿಯುತ, ಜಗದ್ದೀಪಕ, ಅತ್ಯುದಾರ, ಅತಿಧೀರ, ಮಹಿಮಾಂಬುರಾಶಿ, ಪ್ರಚಂಡಭುಜ. ಅವನ ಸಭೆಯಲ್ಲಿ ಉಪಸ್ಥಿತರಾಗಿದ್ದ ರಾಜರು ಕವಿಯ ಕಾಲದಲ್ಲಿ ಸಾಮಾನ್ಯವಾಗಿ ಪ್ರಸಿದ್ಧವಾದ ಆಂಧ್ರ, ಕಳಿಂಗ, ವಂಗ, ಕೇರಳ, ಚೋಳ, ಲಾಳ, ಮಗಧ, ಪಾಂಡ್ಯ, ಮಾಳವ, ಗೌಡ ಮೊದಲಾದ ನಾಡುಗಳ ಅರಸರು. ಹಿಮವಂತನು ಶಿವಭಕ್ತನು. ಮಜ್ಜನಮಾಡಿ ಲಲಾಟಕ್ಕೆ ಭಸ್ಮವನ್ನು, ಕಂಠದಲ್ಲಿ ರುದ್ರಾಕ್ಷಿಮಾಲೆಯನ್ನು ಧರಿಸಿ, ಸ್ಥಿರಚಿತ್ತನಾಗಿ, ಲಿಂಗಪೂಜೆಯನ್ನು ಮಾಡಿ ಪ್ರಸಾದ ಸೇವಿಸುತ್ತಿದ್ದನು. ಮೇನಾದೇವಿ ಆತನ ವಲ್ಲಭೆ. ಅವಳು ಪುತ್ರಿಯನ್ನು ಪಡೆಯಲು ಹಂಬಲಿಸಿದಾಗ ಆಕೆಯನ್ನು ಸಂತೈಸಿ ತಪಸ್ಸಿಗೆ ಅಣಿಮಾಡಿಕೊಡುವನು. ಗಿರಿಜೆ ಜನ್ಮವೆತ್ತಿ, ಶಿವಲಿಂಗಲೋಲುಪೆಯಾಗಿ, ಕಣ್ಮುಚ್ಚಿದಾಗ ಗುರ ಶೈವಾಚಾರ್ಯರ ಆದೇಶದಂತೆ ಅವಳನ್ನು ದೇವಾರ್ಚನಾನಿಕೇತನಕ್ಕೆ ಒಯ್ದು, ಶಿವಲಿಂಗವನ್ನು ತೋರಿಸುವನು. ಮಗಳನ್ನು ಪ್ರೀತಿಯಿಂದ, ಭಕ್ತಿಯಿಂದ ಸಲಹುವನು. ನಾರದನ ಆದೇಶದ ಮೇರೆಗೆ ಅವಳನ್ನು ಹೇಮಕೂಟದಲ್ಲಿ ಸಮಾಧಿಯಲ್ಲಿದ್ದ ಶಿವನೆಡೆಗೆ ಕರೆತರುವಾಗ, ಅವಳನ್ನು ಅಲ್ಲಿ ಬಿಟ್ಟು ಹೋಗುವಾಗ, ಅವನಿಗಾದ ಕಳವಳವು, ಮಗಳ ಮೇಲಿನ ಮೋಹವನ್ನು ಪ್ರದರ್ಶಿಸುವದು. ಪರ್ವತರಾಜನ ಚಿತ್ರವು ಅತಿ ಪ್ರೇಮಳ ಸ್ವಭಾವದ ತಂದೆಯನ್ನು ತೋರಿಸುವದು.

ಮೇನಾದೇವಿ:—ಸಾಮಾನ್ಯವಾಗಿ ಹೆಣ್ಣುಮಕ್ಕಳಲ್ಲಿ, ಓರ್ವಳಾದರೂ ಮಗಳಿರಬೇಕೆಂಬ ಅಪೇಕ್ಷೆ ಇರುವುದು ಸ್ವಾಭಾವಿಕವಾದುದು. ಮೇನೆಗೆ ಮೈನಾಕನೆಂಬ ಮಗನಿದ್ದರೂ ಮಗಳು ಬೇಕೆಂಬ ಅಪೇಕ್ಷೆ ಸ್ಪಷ್ಟವಾಗಿ ಮೂಡಿದೆ. ಅದಕ್ಕಾಗಿ ತಪಸ್ಸು ಮಾಡುವಳು ಅವಳು ಪಿತೃಗಳ ಮನದಲ್ಲಿ ಹುಟ್ಟಿದವಳು. ಸಕಲ ಗುಣಾಲಂಕೃತೆ, ತನ್ನ ತಪಸ್ಸಿನ ಫಲವಾಗಿ ದಾಕ್ಷಾಯಣಿ ಮಗಳಾಗಿ ಬಂದ ಕಾರಣ, ಮಗಳ ಬೆಳವಣಿಗೆಯನ್ನು ನೋಡಿ ಅವಳಿಗೆ ಹಿಡಿಸಲಾರದಷ್ಟು ಆನಂದ. ಶಿವನರ್ಧಾಂಗಿ, ಸತಿಯೇ ತನ್ನ ಮಗಳೆಂಬುದನ್ನು ಮರೆತು, ಮಗಳು ಪ್ರಾಪ್ತ ವಯಸ್ಕಳಾಗಲು ಸಾಮಾನ್ಯ ತಾಯಂದಿರಂತೆ ಅವಳಿಗೆ ವರನ ಚಿಂತೆ. ಪಾರ್ವತಿ ತಪಸ್ಸಿಗೆ ಹೊರಟಾಗ ಅವಳಿಗೆ ಆದ ಕಳವಳ, ಮಗಳು ಅಡವಿಯಲ್ಲಿ ಹೇಗಿರುವಳೋ ಎಂಬ ಚಿಂತೆ. ಇವು ಅವಳ ಮಗಳ ಮೇಲಿನ ಪ್ರೇಮ, ವಾತ್ಸಲ್ಯ, ಕಾತರತೆಯನ್ನು ತೋರಿಸುವವು. ಮೇನೆಯು ಆದರ್ಶ ಪತ್ನಿ, ಉದಾತ್ತಶೀಲೆ, ಸಾತ್ವಿಕ ಸತಿ, ತಪಸ್ವಿನಿ, ಮಮತೆಯ ಮಾತೆ, ಪರ್ವತರಾಜನ ಸಂಸಾರ ಅವಳಿಂದ ಪೂರ್ಣ ಸುಖಮಯವಾಗಿತ್ತು.

ನಾರದ: ಹರಿಹರನ ನಾರದ ಗುರುಮೂರ್ತಿ, ಶೈವನಿಧಿ, ಶಂಕರಮೂರ್ತಿ. ತರಳೆಯಾದ ಪಾರ್ವತಿಯನ್ನು ಕಂಡಾಕ್ಷಣವೇ ಭೀತಿ, ವಿಭವ, ರೋಮಾಂಚನದ ಪೊದಕೆ, ಇವುಗಳನ್ನು ತಾಳ್ದು, ತಾಯೇ! ಚಂಡಾಂಶುಪ್ರಾತೆ! ತೇಜೋನಿಧಿ! ಶರಣೆನುತ ಸ್ತೋತ್ರ ಮಾಡುವನು. ಪಾರ್ವತಿ, ಪರಮೇಶ್ವರನ ಅರ್ಧಾಂಗಿ, ಮೇನೆಯು ತಪಕ್ಕೆ ಮೆಚ್ಚಿ, ಮಹಾದೇವಿ ನಿಮ್ಮ ಮಗಳಾಗಿರುವಳು. ನವರತ್ನಕ್ಕೆ ಅಬ್ಧಿ, ಚಿಂತಾಮಣಿಗೆ ಮರಡಿ, ಮುತ್ತಿಂಗೆ ಸಿಂಪಿ, ಕಾರಣವಾದಂತೆ ನೀವು ಮಹಾದೇವಿಯ ಜನನಕ್ಕೆ ಕಾರಣರಾಗಿರುವಿರೆಂದು ಮೇನೆ ಪರ್ವತರಾಜರನ್ನು ಎಚ್ಚರಿಸುವನು. ದೇವತೆಗಳ ಹಿತಕ್ಕಾಗಿ ಪಾರ್ವತಿ ಪರಮೇಶ್ವರರ ವಿವಾಹವನ್ನು ಮಾಡಿಸುವದು ಅವನ ಉದ್ದೇಶ. ಅದಕ್ಕಾಗಿ ಅವನು ಗಿರಿಜೆಯನ್ನು ಶಿವನಿದ್ದಲ್ಲಿಗೆ ಕಳಿಸಿರೆಂದು ಆದೇಶ ನೀಡುವನು. ಗಿರಿಜಾಕಲ್ಯಾಣದ ನಾರದ ಸಾಮಾನ್ಯವಾಗಿ ಸಾಹಿತ್ಯದಲ್ಲಿ ಬರುವ ನಾರದನಿಂದ ಭಿನ್ನನಾದವನು. ಸಾಹಿತ್ಯದಲ್ಲಿ ಬರುವ ನಾರದ ಹೋದ ಹೋದಲ್ಲಿ ಕಲಹವನ್ನು ಎಬ್ಬಿಸುವದು ವಾಡಿಕೆ. ಆದರೆ ಈ ನಾರದ ಶಿವೋಪಾಸಕ, ಲೋಕಹಿತ ಸಾಧಕ.

ಮದನ: ತಾರಕನಿಂದ ಪರಾಭವವನ್ನು ಹೊಂದಿ, ಪರ್ವತದ ಗುಹೆಗಳಲ್ಲಿ ಅವಿತುಕೊಂಡಿರುವ ದೇವತೆಗಳು ರಕ್ಕಸನ ಬಾಧೆಗೆ ಪರಿಹಾರವನ್ನು ಆಲೋಚಿಸುತ್ತಿದ್ದರು. ಶಿವನ ಸುತನಿಂದಲ್ಲದೆ ಯಾರಿಂದಲೂ ತಾರಕನು ನಾಶಹೊಂದಲಾರನೆಂದು ತಿಳಿದು, ಅವರು ಪಾರ್ವತಿ ಪರಮೇಶ್ವರರ ವಿವಾಹವನ್ನು ಏರ್ಪಡಿಸುವ ಮಾರ್ಗವನ್ನು ಹುಡುಕುತ್ತಿದ್ದರು. ಈ ಕಾರ್ಯ ಮದನನಿಂದಲೇ ಸಾಧ್ಯವೆಂದು ಕಂಡುಹಿಡಿದು, ಅವನನ್ನು ಕರೆತರಲು ಬೃಹಸ್ಪತಿಯನ್ನು ಕಳಿಸುವರು. ಅವನು ಮದನನ್ನು ಗುಪ್ತ ಕಾರ್ಯಾಲೋಚನೆ ಇದೆಯೆಂದು ಹೇಳಿ ಕರೆತರುವನು. ಮದನನ ತಂದೆಯಾದ ಗೋವಿಂದನು "ಅತ್ಯಧಿಕ ತಪಸ್ಸಿನಲ್ಲಿದ್ದ ಹರನ ಸಮಾಧಿಯನ್ನು ಚಲಿಸಿ, ಗಿರಿಸುತೆಯಲ್ಲಿ ನೆರಪುಂ ಈ ಕಾರ್ಯ ಸಾಧಿಸಲು ನೀನೇ ಸಮರ್ಥ" ಎಂದು ಉಬ್ಬಿಸುವನು. ಮದನನು "ಅದು ನನ್ನಿಂದಾಗದು. ಹರನು ಸಾಮಾನ್ಯನೇ ಶೂಲಿಯ ತಪವನ್ನು ಕೆಡಿಸುವದರಿಂದ ನನಗೆ ಗಂಡಾಂತರ ಪ್ರಾಪ್ತವಾಗುವದು. ಹೆರರ ಮಕ್ಕಳನ್ನು ನೂಕಿ, ನೆಲೆಯೆರಿಯುವ ಈ ನಿಮ್ಮ ಧೋರಣೆ ಸಾಕು. ಸೂರ್ಯನ ಮುಂದೆ ಕತ್ತಲೆಯನ್ನೂ, ಸಿಂಹದ ಮುಂದೆ ಆನೆಯನ್ನು, ಸಿಡಿಲಿನ ಮುಂದೆ ಸರ್ಪವನ್ನು ಅಟ್ಟುವಂತೆ, ನೀವು ನನ್ನನ್ನು ಹರನಲ್ಲಿಗೆ ಕಳಿಸುವಿರಿ. ಇದು ಉಚಿತವೇ?" ಎಂದು ದೈನ್ಯದಿಂದ ಬೇಡಿಕೊಂಡನು. ಮುಕುಂದನು "ಬಹಳ ಮಾತುಗಳಿಂದೇನು ನಿನ್ನಿಂದ ಸಕಲ ಜಗವು ಸುಖದಿಂದಿರುವುದಾದರೆ ನಿನ್ನ ಜೀವವನ್ನಾದರೂ ಲಕ್ಷಿಸಬಾರದು." ಎಂದು ತಿಳಿಸಲು, ಮದನನು ಒಪ್ಪಿ, ಉತ್ಸಾಹಭರಿತನಾಗಿ "ಸಕಲ ಭುವನವು ನನ್ನಿಂದ ಪರಮ ಸುಖದಲ್ಲಿರುವದಾದರೆ ನನ್ನ ಜೀವವನ್ನು ಅರ್ಪಿಸಲು ಸಿದ್ಧನಿರುವೆನು. ಅದು ಹೆಚ್ಚಿನದೇ? ನಾನೇತರವನು? ನನಗೆ ಈ ಹೊತ್ತೇ ನೂರು ವರುಷ ತುಂಬಿತು." ಎಂದು ನಿಶ್ಚೈಸಿ ಕಾರ್ಯೋನ್ಮುಖನಾದನು. ಅವನು

ಪಾರ್ವತಿಯ ಸಹಾಯವನ್ನು ಪಡೆದು, ಶಿವನ ಸಮಾಧಿಭಂಗಮಾಡಿ,ಹರನ ಹಣೆಗಣ್ಣಿನುರಿಗೆ ಆಹುತಿಯಾಗುವನು. ಪ್ರಾಣವನ್ನು ಕೊಟ್ಟಾದರೂ ಲೋಕಹಿತವನ್ನು ಸಾಧಿಸಬೇಕೆಂಬ ಉದಾತ್ತ ತತ್ವವನ್ನು ಹರಿಹರನು ಮದನನ ಉದಾಹರಣೆಯಿಂದ ಪ್ರತಿಪಾದಿಸಿರುವನು. ಹರಿಹರನು ಚಿತ್ರಿಸಿದ ಮದನದರ್ಪಕ, ಆತ್ಮವಿಶ್ವಾಸಿ, ಸುಖಲೋಲುಪ, ಆದರೂ ಹಿರಿಯರ ಆಜ್ಞೆಯನ್ನು ಮೀರದವ, ಲೋಕಹಿತಕ್ಕಾಗಿ ತನ್ನನ್ನೇ ಧಾರೆ ಎರೆದವ. ಅವನನ್ನು ನೋಡಿ ನಮಗೆ ಮರುಕ ಹುಟ್ಟುವದು.

ರತಿ : ಮದನನ ಆದರ್ಶಪತ್ನಿ. ಸ್ವಲ್ಪವೂ ಕೂಡ ಆತನನ್ನು ಬಿಟ್ಟಿರದವಳು. ತನ್ನ ಪತಿ ಮನ್ಮಥ ಸುಟ್ಟು ಬೂದಿಯಾದಮೇಲೆ,ಅವಳ ಪ್ರಲಾಪ, ಕಲ್ಲೆದೆಯವರನ್ನು ಕರಗಿಸುವದು. ಕಾಲಿದಾಸನ ಕುಮಾರ ಸಂಭವದಲ್ಲಿರುವ ರತಿ ಪ್ರಲಾಪಕ್ಕೆ ಹರಿಹರನ ಗಿರಿಜಾಕಲ್ಯಾಣದ ರತಿಯ ಆಲಾಪವನ್ನು ಹೋಲಿಸಿ ನೋಡಿದರೆ, ಶೋಕರಸವನ್ನು ಚಿತ್ರಿಸುವಲ್ಲಿ ಹರಿಹರನು ಸಂಸ್ಕೃತ ಕವಿಗಳಿಗೆ ಕಡಿಮೆಯವನಲ್ಲವೆಂಬುದು ಸ್ಪಷ್ಟವಾಗುವದು. ಪಾರ್ವತಿಯ ಕರುಣೆಯಿಂದ ರತಿ ತನ್ನ ಪತಿಯನ್ನು ಪಡೆಯುವಳು.

ಬೃಹಸ್ಪತಿ : ಬೃಹಸ್ಪತಿ ದೇವಗುರು, ಮೇಧಾವಿ, ನೀತಿಶಾಸ್ತ್ರದಲ್ಲಿ ಬಲ್ಲಿದ. ದೇವತೆಗಳು ದೌತ್ಯಕ್ಕಾಗಿ ಅವನನ್ನು ತಾರಕನಲ್ಲಿಗೆ ಕಳುಹಿಸುವರು. ಸಾಮ, ದಾನ, ಭೇದೋಪಾಯಗಳಿಂದ ತಾರಕನ ಮನ ಒಲಿಸಲು ಯತ್ನಿಸಿ ವಿಫಲನಾಗುವನು. ಮದನನಲ್ಲಿಗೂ ಅವನೇ ದೂತನಾಗಿ ಹೋಗುವನು. ದೇವಗುರುವಾದ ಈತನು ಮದನನ ಆಸ್ಥಾನದಲ್ಲಿದ್ದ ಲಲನೆಯರ ಸೌಂದರ್ಯ, ಸೌಕುಮಾರ್ಯಗಳನ್ನು ಕಂಡು ಮನದೊಳ್ ಅಳವುತ್ತ, ಬುದ್ಧಿಯೊಳ್ ಬೆದರುತ್ತ, ಚಿತ್ತದೊಳ್ ಕಾತರಂ ಪಡುತ್ತ ಇದ್ದನು. ಪುರಾಣಗಳಲ್ಲಿ ಬೃಹಸ್ಪತಿಯ ಸ್ಥಾನ ಉಚ್ಚತಮವಾದುದು. ಹರಿಹರನು ಆತನನ್ನು ದೇವತೆಗಳ ಕೈಗೊಂಬೆಯಾಗಿ ಮಾಡಿರುವನು. ಆತನ ದೌತ್ಯ ಯಶಸ್ವಿಯಾಗಿಲ್ಲ. ಆತನ ಚಿತ್ರ ಸಣ್ಣ ವ್ಯಕ್ತಿಯ ಚಿತ್ರದಂತಿದೆ.

ತಾರಕ: ತಾರಕ ತನ್ನ ತಪೋಬಲದಿಂದ ಬ್ರಹ್ಮನನ್ನು ಮೆಚ್ಚಿಸಿ, ಅತುಲ ಸಾಮರ್ಥ್ಯವನ್ನು ಪಡೆದವನು. ಧೀರ, ಜಗತ್ರಯವನ್ನು ತನ್ನ ಪ್ರತಾಪದಿಂದ ಕಕ್ಕುಳಂಗುದಿಸುವ ವಿಕ್ರಮಶೀಲ. ದೇವತೆಗಳು ಆತನೊಡನೆ ಕಾದಿ, ಅವನನ್ನು ಸೋಲಿಸುವದು ಅಸಾಧ್ಯವೆಂದು ಭಾವಿಸಿ, ಸಾಮ, ದಾನ, ಭೇದೋಪಾಯಗಳಿಂದ ಒಲಿಸಿಕೊಳ್ಳಲು ಯತ್ನಿಸಿದರು. ಸಾಧ್ಯವಾಗಲಿಲ್ಲ. ಆತನಾಡುವ ಮಾತುಗಳು, ಆತನ ಆತ್ಮವಿಶ್ವಾಸವನ್ನೂ ದೇವತೆಗಳ ನಿರ್ವೀರ್ಯತ್ವವನ್ನೂ ಪ್ರದರ್ಶಿಸುವವು. ದೇವತೆಗಳಿಂದ ತನಗೆ ಸೋಲು ಆಗಲಾರದೆಂಬುದು ಅವನಿಗೆ ಗೊತ್ತಿದೆ. ಆದುದರಿಂದ ಸಂಧಾನಕ್ಕೆ ಒಪ್ಪಿಕೊಳ್ಳಲಿಲ್ಲ. ಅವನನ್ನು ನಿಗ್ರಹಿಸುವದಕ್ಕಾಗಿ, ಪಾರ್ವತಿ ಪರಮೇಶ್ವರರ

ವಿವಾಹ, ಕುಮಾರನ ಜನ್ಮ, ಇವು ಅಗತ್ಯವಾದುವು. ಹರಿಹರನು ತಾರಕನನ್ನು ಆತ್ಮ ವಿಶ್ವಾಸಿಯಾದ ಧೀರ, ವೀರ, ಹಟಮಾರಿ, ದೇವತೆಗಳ ಪರಮ ವೈರಿಯೆಂದು ಚಿತ್ರಿಸಿರುವನು.

ಜಯ ವಿಜಯರು : ಇವರು ಪಾರ್ವತಿಯ ಸಹಚರಿಯರು. ನೆರಳನಂತೆ ಗಿರಿಜೆಯನ್ನು ಅನುಸರಿಸಿರುವವರು. ಪರಮೇಶ್ವರನ ಪೂಜೆಗಾಗಿ ಪಾರ್ವತಿ ಹೇಮ ಕೂಟಕ್ಕೆ ಹೊರಟಾಗ ಅವರು ಅವಳನ್ನು ಹಿಂಬಾಲಿಸುವರು. ಅಲ್ಲಿ ಪಾರ್ವತಿಯ ಸೇವೆಯನ್ನು ಎಲ್ಲ ರೀತಿಯಿಂದಲೂ ಮಾಡುವರು. ಗಿರಿಜೆ ಕಠೋರ ತಪಸ್ಸನ್ನು ಕೈಕೊಂಡಾಗ ಅವಳಿಗೆ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಡುವರು. ಶಿವನು ವಟುವೇಷದಿಂದ ಬಂದಾಗ ಅವನನ್ನು ಸ್ವಾಗತಿಸಿ ಉಪಚರಿಸುವವರೂ ಅವನೊಡನೆ ಸಂಭಾಷಣೆ ಮಾಡುವವರೂ ಇವರೇ. ಇವರು ಪಾರ್ವತಿಯ ಸಖಿಯರೂ, ಸೇವಕರೂ, ಆಪ್ತರೂ ಆಗಿ ನಿಷ್ಠೆಯಿಂದ ಭಕ್ತಿಯಿಂದ ಸೇವೆ ಸಲ್ಲಿಸುವರು.

ಹರಿಹರನು ಚಿತ್ರಿಸಿದ ವ್ಯಕ್ತಿಗಳು ಸ್ವಾಭಾವಿಕವೂ, ಆಕರ್ಷಕವೂ ಆಗಿವೆ. ಅವು ಅವನ ಸ್ವಂತ ಕಲ್ಪನೆಯವಾಗದಿದ್ದರೂ ಅವುಗಳಲ್ಲಿ ಜೀವಕಳೆಯನ್ನು ತುಂಬಿ ಅವನ್ನು ಮನೋಹರವಾಗಿ ಆಕರ್ಷಕವಾಗಿ ಮಾಡಿರುವನು. ಇಲ್ಲಿ ಆತನ ಪ್ರತಿಭೆ ಸ್ಪಷ್ಟವಾಗಿ ಒಡಮೂಡಿದೆ. ನಿರೂಪಣಾಶಕ್ತಿ ಸ್ಫುಟವಾಗಿದೆ.

ಗಿರಿಜಾಕಲ್ಯಾಣದ ಮೂಲ : ತಾರಕಾಸುರನು ಬ್ರಹ್ಮನ ವರದ ಬಲದಿಂದ ದೇವತೆಗಳನ್ನು ಬಾಧಿಸಿದುದೂ, ದೇವತೆಗಳು ಶಿವಪಾರ್ವತಿಯರ ವಿವಾಹವನ್ನು ಜರುಗಿಸಿದುದೂ, ಶಿವಪಾರ್ವತಿಯರಿಗೆ ಕುಮಾರನುದಯಿಸಿ ತಾರಕನನ್ನು ಸಂಹರಿಸಿದುದೂ, ರಾಮಾಯಣ, ಮಹಾಭಾರತ, ಶಿವ-ಸೌರ-ಮತ್ಸ್ಯ-ಬ್ರಹ್ಮ-ಸ್ಕಾಂದಪುರಾಣಗಳಲ್ಲಿ ಬಂದಿದೆ. ಹರಿಹರನ ಗಿರಿಜಾಕಲ್ಯಾಣದಲ್ಲಿ ಕಥೆ ಪಾರ್ವತಿಯ ವಿವಾಹದ ವರೆಗಿದೆ. ತಾರಕನ ಉಪಟಳವನ್ನು ತಾಳದೆ, ಆತನನ್ನು ಸಂಹರಿಸಲು ಸಮರ್ಥನಾದ ಕುಮಾರನನ್ನು ಪಡೆಯಲು, ಪಾರ್ವತಿ ಪರಮೇಶ್ವರರ ವಿವಾಹಕ್ಕಾಗಿ, ದೇವತೆಗಳು ಆತುರರಾಗಿದ್ದರು. ಪಾರ್ವತಿಯ ತಪಸ್ಸು ಅವರಿಗೆ ಅನುಕೂಲವಾಯಿತು. ಗಿರಿಜೆಯ ಕಲ್ಯಾಣವಾಯಿತು. ಹರಿಹರನು ಕಥೆಯನ್ನು ಮುಂದೆ ಸಾಗಿಸುವದಿಲ್ಲ. ತಪ್ಪದೆ ಕುಮಾರಸಂಭವ, ತಾರಕನವಧೆ, ಆಗುವದೆಂದು ಭರವಸೆ. ಈ ಗಿರಿಜಾ ಕಲ್ಯಾಣದ ಕಥೆಗೂ ಶಿವಪುರಾಣ, ಸ್ಕಾಂದ ಪುರಾಣಗಳಲ್ಲಿ ಬಂದ ಪಾರ್ವತಿಯ ವಿವಾಹದ ಕಥೆಗಳಿಗೂ ಹೋಲಿಕೆಯಿದೆ. ಪುರಾಣಗಳ ಕಾಲ ನಿಶ್ಚಯವಾಗಿ ಗೊತ್ತಾಗುವುದಿಲ್ಲ. ಕೆಲ ವಿದ್ವಾಂಸರು "ಪುರಾಣಗಳು ಬಲು ಪುರಾತನವು ಅಲ್ಲ. ಕಾಲಿದಾಸನ ನಂತರ ಬರೆದುವಾಗಿವೆ. ಪುರಾಣಗಳಲ್ಲಿ ಬಂದ ಗಿರಿಜೆಯ ವಿವಾಹದ ಕಥೆ ಕಾಲಿದಾಸನ ಕಥೆಯನ್ನೇ ಅನುಸರಿಸಿರಬೇಕು" ಎಂದು ಹೇಳುವರು.

ಪಾರ್ವತಿ ಪರಮೇಶ್ವರರ ವಿವಾಹ, ಕುಮಾರನ ಜನ್ಮ, ತಾರಕನ ವಧೆ, ಇವು ಪುರಾತನ ವಿಷಯಗಳು. ಮಹಾಭಾರತ, ರಾಮಾಯಣಗಳು, ಕಾಲಿದಾಸನಿಗಿಂತ ಮೊದಲಿದ್ದ ಗ್ರಂಥಗಳು. ಕಾಲಿದಾಸನ ಕಾಲದಲ್ಲಿ ಈ ಕಥೆ ಜನಪ್ರಿಯವಾಗಿತ್ತೆಂಬುದು ಆತನ ಕುಮಾರಸಂಭವ, ಮೇಘದೂತ, ಮೊದಲಾದ ಗ್ರಂಥಗಳ ಮೇಲಿಂದ ಸ್ಪಷ್ಟ ವಾಗುವದು. ಮೇಘದೂತದಲ್ಲಿ ಸ್ಕಂದನ ಸಂಬಂಧ ಬರುವದು. ,ಕುಮಾರಸಂಭವ ವಂತೂ ಕುಮಾರನ ಉತ್ಪತ್ತಿಯನ್ನು ವಿವರಿಸುವ ಕಾವ್ಯ. ಅದರಲ್ಲಿ ಗಿರಿಜೆಯ ವಿವಾಹ ಮೊದಲಿನ ಎಂಟು ಸರ್ಗಗಳಲ್ಲಿ ಬಂದಿದೆ. ಗಿರಿಜಾಕಲ್ಯಾಣದಲ್ಲಿರುವ ಕಥೆಗೂ ಕಾಲಿದಾಸನ ಕುಮಾರ ಸಂಭವದ ಕಥೆಗೂ ಬಹಳ ಹೋಲಿಕೆಯಿದೆ. ಹರಿಹರನು ಕಾಲಿದಾಸನ ಕುಮಾರಸಂಭವವನ್ನು ಆಧಾರವಾಗಿಟ್ಟುಕೊಂಡು ಗಿರಿಜಾ ಕಲ್ಯಾಣವನ್ನು ರಚಿಸಿರಬಹುದೇ? ಎಂದು ಸಂದೇಹ. ಸ್ಕಾಂದ ಮತ್ತು ಶಿವಪುರಾಣ ಗಳಲ್ಲಿಯೂ ಗಿರಿಜೆಯ ವಿವಾಹವು ವರ್ಣಿತವಾಗಿದೆ. ಶಿವನ ಪಂಚವಿಂಶತಿ ಲೀಲೆಗಳಲ್ಲಿ "ವೈವಾಹಿಕಲೀಲೆ" ಎಂಬುದೊಂದು. ಹರಿಹರನು ತನ್ನ ಈ ಕಥೆಯನ್ನು ಇವೆಲ್ಲವುಗ ಳಿಂದ ತೆಗೆದುಕೊಂಡಿದ್ದರೂ ಇಂಥದೇ ಗ್ರಂಥಕ್ಕೆ ಋಣಿಯಾಗಿರುವನೆಂದು ಹೇಳಲು ಬರುವದಿಲ್ಲ. ಪಾತ್ರಗಳ ರಚನೆಯಲ್ಲಿ ತನ್ನ ಪ್ರತಿಭೆಯನ್ನು ಉಪಯೋಗಿಸಿ ಅವನು ಹೆಚ್ಚು ಆಕರ್ಷಕವಾಗುವಂತೆ ಮಾಡಿರುವನು. ಕಥೆಗೆ ಮೆರಗು ಕೊಟ್ಟಿರುವನು. ಭಾರತೀಯ ಸಾಹಿತ್ಯದಲ್ಲಿ ಉತ್ತಮ ಕಾವ್ಯವೆಂದು ಸ್ವೀಕೃತವಾದ ಕುಮಾರಸಂಭವದ ಕಥೆಗೂ ಗಿರಿಜಾಕಲ್ಯಾಣದ ಕಥೆಗೂ ಕೆಲವು ವ್ಯತ್ಯಾಸಗಳು ಅವೆ. ಅವು "ಪುತ್ರಿ ಯನ್ನು ಪಡೆಯುವ ಮೇನೆಯ ಅಪೇಕ್ಷೆ, ಅದಕ್ಕಾಗಿ ಆಕೆಯ ತಪಸ್ಸು, ಪಾರ್ವತಿಯ ಜನನ, ಲಿಂಗದರ್ಶನ, ಬಾಲಲೀಲೆ, ನಾರದನು ಚಿಕ್ಕಮಗುವಾದ ಪಾರ್ವತಿಯನ್ನು ಕಂಡು ಆಕೆಗೆ ನಮಸ್ಕರಿಸಿ, ಅವಳು ಪರಮೇಶ್ವರನ ಅರ್ಧಾಂಗಿಯಾಗುವಳೆಂದೂ ಸತಿಯೇ ಪಾರ್ವತಿಯಾಗಿ ಹುಟ್ಟಿಬಂದಿರುವಳೆಂದೂ, ಗಿರಿರಾಜ ಮೇನೆಯರಿಗೆ ತಿಳಿಸಿ ಅವಳನ್ನು ತಪಸ್ಸಿಗಾಗಿ ಕಳಿಸಿಕೊಡಿರೆಂದು ಸಲಹೆ ನೀಡುವದು, ಪರ್ವತರಾಜನು ಶಿವನನ್ನು ಒಲಿಸುವದಕ್ಕಾಗಿ ಹಿಮಾಲಯದಲ್ಲಿರುವ ಓಷಧಿಪ್ರಸ್ಥಪುರದಿಂದ ಹಂಪೆಗೆ ಪುಷ್ಪಕವಿಮಾನದಲ್ಲಿ ಮಗಳನ್ನು ಕರೆತರುವದು, ಶಿವನು ಹಂಪೆಯ ಹೇಮ ಕೂಟದಲ್ಲಿ ಸಮಾಧಿಯಲ್ಲಿರುವದು, ಇವೆಲ್ಲ ಕಾಲಿದಾಸನ ಕುಮಾರ ಸಂಭವದಲ್ಲಿ ಬರುವದಿಲ್ಲ. ಮನ್ಮಥನ ದಹನ, ಪಾರ್ವತಿಯ ಉಗ್ರತಪಸ್ಸು, ಶಿವನು ವಟುವೇಷ ದಿಂದ ಬಂದು ಆಕೆಯನ್ನು ಸಿಟ್ಟಿಗೆಬ್ಬಿಸುವುದು, ಪಾರ್ವತಿಯು ಶಿವನಿಂದೆಯನ್ನು ಕೇಳದೆ ವಿಭೂತಿಯಿಂದ ಹೊಡೆಯಲು ಶಿವನ ವಟುವೇಷ ಮಾಯವಾಗಿ ನಿಜರೂಪ ತೋರುವುದು, ಇವೆಲ್ಲ ಹಂಪೆಯಲ್ಲಿ ಆದ ಘಟನೆಗಳು, ಕುಮಾರಸಂಭವದಲ್ಲಿ ಬರುವುದಿಲ್ಲ. ಹರಿಹರನ ಮಾತೃಭೂಮಿಯ ಪ್ರೀತಿ ಮತ್ತು ಪ್ರತಿಭೆ ಇವೆಲ್ಲವನ್ನು ಕಥೆಯಲ್ಲಿ ಸೇರ್ಪಡಿಸಲು ಕಾರಣವಾಗಿವೆ. ಕುಮಾರಸಂಭವದ ಏಳು ಸ್ವರ್ಗಗಳಲ್ಲಿ ಕಾಲಿದಾಸನು ವರ್ಣಿಸಿದ ಕಥಾಭಾಗವನ್ನು ಅವನು ಗಿರಿಜಾಕಲ್ಯಾಣದ ಹತ್ತು ಆಶ್ವಾಸ

ಗಳಲ್ಲಿ ಹೇಳಿದಿರುವನು. ಹರಿಹರನಿಗೆ ಕಾಲಿದಾಸನ ಮುಂದಿನ ಕಥೆ ಬೇಕಾಗಿಲ್ಲ. ಕಾಲಿದಾಸನಿಗೆ ತಾರಕನ ವಧೆಗಾಗಿ ಕುಮಾರಸಂಭವ ಬೇಕಾಗಿದೆ. ಅದೇ ಅವನು ಕುಮಾರ ಸಂಭವ ಕಾವ್ಯಬರೆದ ಉದ್ದೇಶ. ಕಾಲಿದಾಸನ ಶಿವನು ಹಿಮವತ್ಪರ್ವತದ ಪ್ರಸ್ಥದಲ್ಲಿದ್ದವನು. ಹರಿಹರನ ಶಿವನು ಹೇಮಕೂಟಸ್ಥನಾದ ಹಂಪೆಯ ವಿರೂಪಾಕ್ಷನು. ಹರಿಹರನಿಗೆ ಗಿರಿಜೆಯ ಕಲ್ಯಾಣ ಅಷ್ಟೇ ಬೇಕಾದುದು. ಕಾಲಿದಾಸನು ಎಂಟನೆಯ ಸರ್ಗದಲ್ಲಿ ತಂದ ನವಪರಿಣಿತರಾದ ಪಾರ್ವತಿ ಪರಮೇಶ್ವರರ ಕೇಳಿಯನ್ನು ಹರಿಹರನು ವರ್ಣಿಸುವ ಗೊಡವೆಗೆ ಹೋಗಿಲ್ಲ. ಅವರ ವಿವಾಹದ ಫಲ ಕುಮಾರನ ಸಂಭವ, ಕುಮಾರನ ಸಂಭವದಿಂದ ತಾರಕನ ವಧೆ, ಇವೆಲ್ಲವೂ ತಾವಾಗಿಯೇ ಘಟಿಸುವ ವಿಷಯಗಳು,ಆದುದರಿಂದ ಹರಿಹರನು ತನ್ನ ಕಾವ್ಯವನ್ನು ಗಿರಿಜೆಯ ಕಲ್ಯಾಣದವರೆಗೆ ತಂದು ಕೈಬಿಟ್ಟಿರುವನು. ಗಿರಿಜಾಕಲ್ಯಾಣವೆಂದೇ ಅದಕ್ಕೆ ಹೆಸರಿಟ್ಟಿರುವನು. ಶಿವನ ಪಂಚವಿಂಶತಿ ಲೀಲೆಗಳಲ್ಲಿರುವ ವೈವಾಹಿಕ ಲೀಲೆಯನ್ನಷ್ಟೇ ಬಣ್ಣಿಸಬೇಕೆಂದು ಆತನ ಅಪೇಕ್ಷೆಯಿರಬಹುದು. ಅದಕ್ಕಾಗಿ ಕುಮಾರನ ಸಂಭವ, ತಾರಕನ ವಧೆಗಳನ್ನು ತರದೇ ಇದ್ದಿರಬಹುದು.

ಕುಮಾರಸಂಭವ ಮತ್ತು ಗಿರಿಜಾ ಕಲ್ಯಾಣ ಇವನ್ನು ಮುಂದೆ ಇಟ್ಟುಕೊಂಡು ನೋಡಿದರೆ ವಿಷಯಗಳು ಮಾತ್ರ ಸಾಮಾನ್ಯವಾಗಿವೆ. ಆದರೆ ಅವುಗಳ ನಿರೂಪಣೆಯಲ್ಲಿ ಹೋಲಿಕೆಯಿಲ್ಲ. ಕಾಲಿದಾಸನ ಮೊದಲನೆಯ ಒಂದೇ ಸರ್ಗದಲ್ಲಿ ಸಂಗ್ರಹಿಸಿದ ಹಿಮಾಲಯದ ವರ್ಣನೆ, ಹಿಮವಂತ ಮೇನೆಯರ ಮದುವೆ, ಮೈನಾಕನ ಜನನ, ಅವನು ನಾಗಕನ್ಯೆಯನ್ನು ವರಿಸಿ ಸಮುದ್ರದಲ್ಲಿ ಅಡಗುವದು, ಪಾರ್ವತಿಯ ಜನನ, ಶಿವನ ಉಗ್ರ ತಪಸ್ಸು, ಪಾರ್ವತಿಯು ಪ್ರತಿದಿವಸ ಮಾಡುವ ಗಿರೀಶನ ಪೂಜೆ, ಇವೆಲ್ಲವುಗಳನ್ನು ಹರಿಹರನು ನಾಲ್ಕು ಸಂಧಿಗಳಲ್ಲಿ ವಿಸ್ತರಿಸಿರುವನು. ಕುಮಾರ ಸಂಭವದಲ್ಲಿ ಇಂದ್ರ ಮೊದಲಾದ ದೇವತೆಗಳ ಪರವಾಗಿ ತಾರಕನ ಪೀಡೆಯನ್ನೂ ಅವನಿಂದ ದೇವತೆಗಳಿಗಾದ ಕಷ್ಟನಷ್ಟಗಳನ್ನೂ ವಿವರಿಸಿ ಅವನ ಬಾಧೆಯನ್ನು ತಪ್ಪಿಸಬೇಕೆಂದು ಬೃಹಸ್ಪತಿಯು ಬ್ರಹ್ಮನನ್ನು ಪ್ರಾರ್ಥಿಸುವನು. ತನ್ನ ವರದ ಪ್ರಭಾವದಿಂದ ತಾರಕನು ಇಷ್ಟು ಬಲಿಷ್ಠನಾಗಿರುವನು. ಅವನ ಸಂಹಾರ ಶಿವನ ಪುತ್ರನಿಂದಲೇ ಸಾಧ್ಯ. ಆದುದರಿಂದ ಶಿವಪಾರ್ವತಿಯರ ವಿವಾಹವಾಗುವಂತೆ ಯತ್ನಿಸಿರಿ ಎಂದು ಬ್ರಹ್ಮನು ಅವರಿಗೆ ಉಪದೇಶಿಸುವನು. ಈ ವಿಷಯ ಗಿರಿಜಾ ಕಲ್ಯಾಣದಲ್ಲಿ ಬಂದಿಲ್ಲ. ಶಿವನ ಸಮಾಧಿಯನ್ನು ಚಲಿಸಲು ಮದನನಿಗೆ ಹೇಳುವವನು ಕುಮಾರಸಂಭವದಲ್ಲಿ ಇಂದ್ರನು. ಗಿರಿಜಾಕಲ್ಯಾಣದಲ್ಲಿ ಗೋವಿಂದನು. ಕುಮಾರಸಂಭವದ ಎಂಟೂ ಸರ್ಗಗಳಲ್ಲಿ ತಾರಕನೊಡನೆ ಆದ ದೇವವತೆಗಳ ಯುದ್ಧ ಬಂದಿಲ್ಲ. ಗಿರಿಜಾಕಲ್ಯಾಣದ ಆರನೆಯಾಶ್ವಾಸದಲ್ಲಿ ದೇವತೆಗಳು ತಾರಕನೊಡನೆ ಯುದ್ಧಮಾಡಿ, ಸೋತು, ಬ್ರಹ್ಮ, ವಿಷ್ಣು, ಇಂದ್ರ ಮೊದಲಾದ ದೇವತೆಗಳು

ಕಲಿತು, ಉಪಾಯವನ್ನು ಹುಡುಕಿ ಶಿವನೆಡೆಗೆ ಮದನನನ್ನು ಕಳಿಸುವರು. ದೇವತೆಗಳ ದೌತ್ಯವನ್ನು ವಹಿಸಿ ಬೃಹಸ್ಪತಿಯು ತಾರಕನೆಡೆಗೆ ಹೋಗಿ ನಿಷ್ಫಲ ನಾಗುವನು. ಹೀಗೆ ಕೆಲವು ವಿಷಯಗಳಲ್ಲಿ ವ್ಯತ್ಯಾಸವಿದ್ದರೂ ಹರಿಹರನ ಮೇಲೆ ಕಾಲಿದಾಸನ ಪ್ರಭಾವ ಬಿದ್ದಿದೆಯೆಂಬುದು ನಿಚ್ಚಳವಾಗಿ ಕಾಣುವದು. ಕುಮಾರ ಸಂಭವದ ಮೊದಲನೆಯ ಪದ್ಯವಾದ

ಅಸ್ತ್ಯುತ್ತರಸ್ಯಾಂ ದಿಶಿ ದೇವತಾತ್ಮಾ ಹಿಮಾಲಯೋನಾಮ ನಗಾಧಿರಾಜಃ |
ಪೂರ್ವಾಪರೌ ತೋಯನಿಧೀವಗಾಹ್ಯ ಸ್ಥಿತಃ ಪೃಥಿವ್ಯಾ ಇವ ಮಾನದಂಡಃ ||
ಕುಮಾರಸಂಭವ ೧-೧

ಎಂಬ ಪದ್ಯದರಲ್ಲಿರುವ ಭಾವ ಸಾಮ್ಯವನ್ನು

ಆ ವಿಸ್ತಾರಗಭೀರವಾರಿನಿಧಿಯಿಂದಂ ಪಶ್ಚಿಮಾಂಭೋಧಿಗಂ
ತೀವಿರ್ದೊಪ್ಪುವುದಾತ್ತಗಹ್ವರಗುಹಾಸಂತಾನಪರ್ಯಂತಗೋ
ತ್ರಾವಾಸೋಜ್ಜ್ವಲಗಂಡ ಶೈಲಶಿಖರಪ್ರೋದ್ಭೂತಭೂಜಾತಪ-
ತ್ರಾವೇಶೋನ್ನತಭೀಮರೂಪಧರದೇವಾಗಮ್ಯ ಹೈಮಾಚಳಂ ||
ಗಿ. ಕ. ೧-೪೮

ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ ||
ಗಿ. ಕ. ೧-೫೦

ಈ ಪದ್ಯಗಳೊಡನೆ ಹೋಲಿಸಿ ನೋಡಬಹುದು.

ಹೀಗೆ ಕೆಲವು ವಿಷಯಗಳ ನಿರೂಪಣೆಯಲ್ಲಿ ವ್ಯತ್ಯಾಸವಿದೆಯಾದರೂ ಹರಿಹರನು ಕಾಲಿದಾಸನಿಂದ ಗಿರಿಜಾಕಲ್ಯಾಣದ ವಸ್ತುವನ್ನು ಎತ್ತಿಕೊಂಡಿರಬಹುದಾದರೂ ಅದ ರಲ್ಲಿ ಮಾರ್ಪಾಟ ಮಾಡಿ ಆಕರ್ಷಕವಾಗುವಂತೆ ಮಾಡಿರುವನು. ಭಾರತದಲ್ಲಿ ಬಹಳ ಪ್ರಾಚೀನ ಕಾಲದಿಂದ ಕುಮಾರ ಅಥವಾ ಕಾರ್ತಿಕೇಯನ ಪ್ರಭಾವ ಆ ಕಾಲದ ಜನ ತೆಯ ಮೇಲೆ ವಿಶೇಷವಾಗಿದ್ದಿತು. ಬಾದಾಮಿ ಚಾಲುಕ್ಯರ ಶಾಸನಗಳ ಪ್ರಾರಂಭದಲ್ಲಿ "ಕಾರ್ತಿಕೇಯ ಪರಿರಕ್ಷಣ ಪ್ರಾಪ್ತ ಕಲ್ಯಾಣ ಪರಂಪರಾಣಾಮ್" "ಸಪ್ತಮಾತೃ ಭಿರಭಿವರ್ಧಿತಾನಾಮ್" ಎಂದು ಚಾಲುಕ್ಯ ಚಕ್ರವರ್ತಿಗಳು ಹೇಳಿಕೊಂಡಿರು ವುದರಿಂದ ಕಾರ್ತಿಕೇಯನೇ ಅವರ ಪೂಜ್ಯದೇವತೆಯಾಗಿದ್ದನು. ಕಾರ್ತಿಕೇಯ ಮತ್ತು ಸಪ್ತ ಮಾತೃಗಳು, ಉಮಾಮಹೇಶ್ವರರ ವಿಗ್ರಹಗಳು, ಚಾಲುಕ್ಯರ ಕಾಲದಲ್ಲಿ ಕಟ್ಟಿಸಿದ ಗುಡಿಗಳಲ್ಲಿ ವಿಪುಲವಾಗಿ ದೊರೆಯುವವು. ಈಗಲೂ ದಕ್ಷಿಣ ಭಾರತದ ಪ್ರದೇಶಗಳಾದ ಮಹಾರಾಷ್ಟ್ರ, ಕರ್ನಾಟಕ, ಮದ್ರಾಸಗಳಲ್ಲಿ ಖಂಡೋಬಾ, ಕುಮಾರಸ್ವಾಮಿ, ಸುಬ್ರಹ್ಮಣ್ಯ ಎಂಬ ಹೆಸರಿನಿಂದ ಕುಮಾರ ಕಾರ್ತಿಕೇ ಯನು ಜನತೆಯ ಮನದಲ್ಲಿ ನೆಲಸಿರುವನು. ಆದುದರಿಂದ ಕಾಲಿದಾಸನೂ ಪೌರಾಣಿಕರೂ ಹರಿಹರನೂ ಕುಮಾರಸಂಭವದ ಕಥೆಯಿಂದ ಆಕರ್ಷಿಸಲ್ಪಟ್ಟು

ಅದನ್ನು ಕಾವ್ಯಮಯವಾಗಿ ಬರೆದಿರುವರು. ಇತ್ತೀಚಿನವನಾದ ಹರಿಹರನು ಪೂರ್ವದ ಕಾಲಿದಾಸನ ಕುಮಾರಸಂಭವ ಶಿವಪುರಾಣಗಳಿಂದ ಕಥಾವಸ್ತುವನ್ನು ತೆಗೆದುಕೊಂಡರೂ ಅದನ್ನು ನಿರೂಪಿಸುವದರಲ್ಲಿ ಅವನ ಧ್ಯೇಯವೇ ಬೇರೆ. ಪಾರ್ವತಿಯ ಸಂಕಲ್ಪ, ಅದನ್ನು ಸಾಧಿಸುವದರಲ್ಲಿದ್ದ ಆಕೆಯ ದೃಢನಿಶ್ಚಯ, ಆಕೆ ಪಟ್ಟ ಅಪಾರ ಕಷ್ಟ, ಆಕೆಯ ಸಂಕಲ್ಪಸಿದ್ಧಿ, ಮೊದಲಾದವುಗಳನ್ನೂ ಶಿವ ಶಿವೆಯರ ಮಹಿಮೆಯನ್ನೂ ಬಣ್ಣಿಸುವದೇ ಅವನ ಧ್ಯೇಯ. ಅದಕ್ಕನುಸರಿಸಿ ಹೊಸ ಹೊಸ ಸನ್ನಿವೇಶಗಳನ್ನು ತಂದು, ಈ ಕೃತಿಯನ್ನು ಹೊಸದಾಗಿ ಮತ್ತು ಆಕರ್ಷಕವಾಗಿ ರಚಿಸಿರುವನು. ತನ್ನ ವೈಶಿಷ್ಟ್ಯವನ್ನು ಪ್ರತಿಯೊಂದು ಸಂದರ್ಭದಲ್ಲಿ ತೋರಿಸಿರುವನು. ಹರಿಹರನೇ ಧೈರ್ಯದಿಂದ ಆತ್ಮವಿಶ್ವಾಸದಿಂದ

"ಕಾವ್ಯಂ ತಾನಿದುನವರಸ| ಸೇವ್ಯಂ ಗಿರಿಜಾಧಿನಾಥನುರುತರಕರ್ಣ ||
ಶ್ರಾವ್ಯಂ ವಸುಧಾತಳದೊಳ್| ನವ್ಯಂ ಭೂತೇಶಭಕ್ತಜನತಾ ಭಾವ್ಯಂ ||"
ಗಿ. ಕ. ೧-೧೪

ಎಂದು ಹೇಳುವಂತೆ ಈ ಕಾವ್ಯವು ವಸುಧಾತಳದಲ್ಲಿ ನವ್ಯವಾಗಿದೆ.

ಮಹಾಕಾವ್ಯದ ಲಕ್ಷಣ: ಗಿರಿಜಾಕಲ್ಯಾಣ ಮಹಾಕಾವ್ಯ: ಸಾಹಿತ್ಯ ದರ್ಪಣಕಾರ ವಿಶ್ವನಾಥನು, ಕಾವ್ಯಾದರ್ಶಕಾರ ಮಹಾಕವಿ ದಂಡಿ, ಸೂಕ್ತಿಸುಧಾರ್ಣವದ ಸಂಕಲನಕಾರ ಮಲ್ಲಿಕಾರ್ಜುನ, ಇವರು ಮಹಾಕಾವ್ಯದ ಲಕ್ಷಣಗಳನ್ನು ವಿವರಿಸಿರುವರು* ಅವುಗಳಲ್ಲಿ ಮುಖ್ಯವಾದುವು:

೧. ಮಹಾಕಾವ್ಯವು ಸರ್ಗಬಂಧವಾಗಿರಬೇಕು. ೨. ಒಬ್ಬನೇ ನಾಯಕನಿರಬೇಕು. ಅವನು ದೇವ, ಸದ್ವಂಶದವ, ಕ್ಷತ್ರಿಯ, ಧೀರೋದತ್ತಗುಣಾನ್ವಿತನಾಗಿರಬೇಕು. ೩. ಶೃಂಗಾರ, ವೀರ, ಶಾಂತರಸಗಳಲ್ಲಿ ಒಂದು ಮುಖ್ಯಾಂಗವಾಗಿರಬೇಕು. ಇಲ್ಲವೆ ಅವೆಲ್ಲವೂ ಅದರಲ್ಲಿರಬೇಕು. ೪. ಇತಿಹಾಸಕ್ಕೆ ಸಂಬಂಧಿಸಿದ ಇಲ್ಲವೆ ಸಜ್ಜನಾಶ್ರಯವಾದ ವಸ್ತುವಿರಬೇಕು. ೫ ಆದಿಯಲ್ಲಿ ನಮಸ್ಕ್ರಿಯಾ, ಆಶೀರ್ವಾದ, ವಸ್ತುನಿರ್ದೇಶ, ಖಲರನಿಂದೆ, ಸಜ್ಜನರ ಗುಣವರ್ಣನೆಗಳಿರಬೇಕು. ೬. ಪ್ರತಿಸರ್ಗದಲ್ಲಿ ಒಂದೇ ವೃತ್ತದ ಪದ್ಯಗಳು, ಸರ್ಗಾಂತ್ಯದಲ್ಲಿ ಬೇರೆ ವೃತ್ತದ ಪದ್ಯ ಇರಬೇಕು. ಅಥವಾ ಪ್ರತಿ ಸರ್ಗದಲ್ಲಿ ನಾನಾವೃತ್ತದ ಪದ್ಯಗಳೂ ಇರಬಹುದು. ೭ ಸರ್ಗಗಳು ಎಂಟಕ್ಕಿಂತ ಹೆಚ್ಚಿಗಿರಬೇಕು. ಅವು ಅತಿ ಸಣ್ಣವೂ ಅತಿ ದೊಡ್ಡವೂ ಆಗಿರಬಾರದು. ಸರ್ಗದ ಅಂತ್ಯದಲ್ಲಿ ಮುಂದಿನ ಸರ್ಗದ ಸೂಚನೆಯಿರಬೇಕು. ೮. ಸಂಧ್ಯಾ, ಸೂರ್ಯ, ಚಂದ್ರ, ರಾತ್ರಿ, ಪ್ರದೋಷ, ಪ್ರಾತಃಕಾಲ, ಮಧ್ಯಾಹ್ನ ಮೃಗಯಾ, ಶೈಲ, ವನ, ಋತು, ಸಾಗರ, ಸಂಭೋಗ, ವಿಪ್ರಲಂಭ, ಮುನಿ,

* ಪರಿಶಿಷ್ಟ ೧ ನೋಡಿ

ಸ್ವರ್ಗ, ಪುರ, ಅಧ್ವರ, ರಣ, ಪ್ರಯಾಣ, ಪುತ್ರೋದಯ ಮೊದಲಾದವುಗಳ ವರ್ಣನೆಯಿರಬೇಕು. ೯. ಕವಿಯ ವೃತ್ತ ಮತ್ತು ನಾಮನಿರ್ದೇಶ, ನಾಯಕನ, ಇತರರ, ಕಾವ್ಯದ, ನಾಮನಿರ್ದೇಶ, ಪ್ರತಿಸರ್ಗದ ವಿಷಯಕ್ಕನುಸರಿಸಿ ಅದರ ನಾಮನಿರ್ದೇಶ ಇವುಗಳಿರಬೇಕು. ಇವುಗಳಲ್ಲಿ ಯಾವದನ್ನಾದರೂ ಬಿಟ್ಟರೆ ಅದು ಮಹಾ ಕಾವ್ಯವಾಗಲಾರದು. ಗಿರಿಜಾಕಲ್ಯಾಣವು ಈ ಎಲ್ಲ ಲಕ್ಷಣಗಳನ್ನೊಳಗೊಂಡಿದೆ. ಅದು ಸರ್ಗ (ಸಂಧಿ)ಬಂಧವಾಗಿದೆ. ಕಥೆಯು ಐತಿಹಾಸಿಕವಾಗಿದೆ. ಪುರಾಣ ಮಹಾಭಾರತ ರಾಮಾಯಣಗಳು ಇತಿಹಾಸಗಳೆಂದು ಪ್ರತೀತಿ. ಕಥಾನಾಯಕನಾದ ಶಿವನು ದೇವತಾ ಪುರುಷನು. ಈ ಕಾವ್ಯದ ಅಂಗವಾಗಿ ಶೃಂಗಾರ, ವೀರ, ಶಾಂತರಸಗಳು ಬಂದಿವೆ. ಹರಿಹರನು ಶಿವನ ಭಕ್ತ. ಎತ್ತ ನೋಡಿದರೂ ಶಿವ ಮತ್ತು ಆತನ ಸ್ವರೂಪ ಆತನಿಗೆ ಕಾಣುವವು. ಏನು ಕೇಳಿದರೂ ಅದು ಶಿವನ ಸ್ತುತಿ. ಶಿವನಿಗೆ ಸಂಬಂಧಿಸದೇ ಇರುವದು ಅವನಿಗೆ ಬೇಡ. ಆದ್ದರಿಂದ ಆತನ ಕಾವ್ಯಗಳಲ್ಲಿ ಶಿವಭಕ್ತಿ ರಸವು ತುಂಬಿತುಳುಕುತ್ತಿದೆ. ಮೂಲ ಗ್ರಂಥಾದಿಯಲ್ಲಿ ಪಂಪಾವಿರೂಪಾಕ್ಷನ ಸ್ತುತಿಯಿದೆ. ಮೊದಲನೆಯ ಸಂಧಿಯಲ್ಲಿ ವಸ್ತುನಿರ್ದೇಶ, ಕುಕವಿನಿಂದೆ, ಹರಿಹರನ ಗುರುಪರಂಪರೆ, ಹಿಮಾಚಲದ ವರ್ಣನೆಗಳಿವೆ. ಪ್ರತಿಸಂಧಿಯಲ್ಲಿ ಬೇರೆ ಬೇರೆ ವೃತ್ತಗಳೂ ಕಂದಗಳೂ ತುಂಬಿವೆ. ಮೂಲ ಗ್ರಂಥದಲ್ಲಿ ಹತ್ತು ಸಂಧಿಗಳಿವೆ. ಶೈಲ, ವನ, ಋತು, ಪ್ರಯಾಣ ಮೃಗಯಾ ಮೊದಲಾದವುಗಳ ವರ್ಣನೆ ತುಂಬಿದೆ. ಆದುದರಿಂದ. ಗಿರಿಜಾಕಲ್ಯಾಣವು ಕನ್ನಡ ಸಾಹಿತ್ಯದಲ್ಲಿ ಉತ್ತಮ ತರದ ಕಾವ್ಯವೆಂದೂ ಮಹಾಕಾವ್ಯದ ಲಕ್ಷಣಗಳನ್ನೆಲ್ಲ ಒಳಗೊಂಡಿದೆಯೆಂದೂ ವಿದ್ವಾಂಸರಿಂದ ಮನ್ನಣೆ ಪಡೆದಿದೆ.

ಮೂಲ ಗಿರಿಜಾಕಲ್ಯಾಣದ ನಾಲ್ಕನೆಯ ಸಂಧಿಯಲ್ಲಿ ಪರ್ವತರಾಜನು ನಾರದನನ್ನು ಕರಕೊಂಡು ಚಂದ್ರಿಕಾ ವಿಹಾರ ಮಾಡಿದ ವಿಷಯವನ್ನು ಕವಿಯು ಕಾವ್ಯಲಕ್ಷಣಗಳನ್ನೆಲ್ಲ ಪೂರ್ತಿಮಾಡುವದಕ್ಕಾಗಿಯೇ ಸೇರಿಸಿರಬೇಕು. ಇಲ್ಲದಿದ್ದರೆ ಹರಿಹರನಂತಹ ವಿರಕ್ತನು ನಾರದನಂತಹ ಋಷಿಯನ್ನು ವಿಷಯಭೋಗಿಗಳಿಗೆ ಆಕರ್ಷಕವಾದ ಸ್ಥಳಗಳೆಡೆಗೆ ತರುತ್ತಿರಲಿಲ್ಲ. ವಿಮರ್ಶಕರು ಇದೊಂದು ಹರಿಹರನ ಅನೌಚಿತ್ಯವೆಂದು ಹೇಳುವರು. ಕಾವ್ಯಲಕ್ಷಣದ ಕಟ್ಟಳೆಗಳಿಗೆ ಬದ್ಧನಾದ ಕವಿಯು "ಎಲ್ಲ ಲಕ್ಷಣಗಳನ್ನು ಪೂರ್ಣಮಾಡಬೇಕು. ಇಲ್ಲದಿದ್ದರೆ ತನ್ನ ಕೃತಿ ಕಾವ್ಯವಾಗಲಾರದು" ಎಂಬ ಹವ್ಯಾಸದಿಂದ ಹೀಗೆ ಮಾಡಿರಬೇಕು. ಪದ್ಮರಾಜ ಪುರಾಣದಲ್ಲಿಯೂ ಪದ್ಮಣಾಂಕನು ಪದ್ಮರಸರನ್ನು ವಸಂತಋತುವಿನಲ್ಲಿ ವನವಿಹಾರಕ್ಕೆ ಕೊಂಡೊಯ್ದಿರುವನು. ಆದರೆ ಹರಿಹರನು ನಾರದನನ್ನು ಪರ್ವತರಾಜನೊಡನೆ ರಾತ್ರಿ ವಿಹಾರಕ್ಕೆ ಕರೆದೊಯ್ಯದೆ ಬಿಟ್ಟುಹೋಗಿದ್ದರೆ ಕಾವ್ಯಕ್ಕೆ ಚ್ಯುತಿ ಬರುತ್ತಿರಲಿಲ್ಲ.

ಗಿರಿಜಾಕಲ್ಯಾಣವು ಚಂಪೂಕಾವ್ಯವು:— ದಂಡಿಯು ತನ್ನ ಕಾವ್ಯದರ್ಶದಲ್ಲಿ "ಗದ್ಯಪದ್ಯಮಯಂ ಕಾವ್ಯಂ ಚಂಪೂರಿತ್ಯಭಿಧೀಯತೇ" ಎಂದು ಚಂಪೂಕಾವ್ಯದ ವ್ಯಾಖ್ಯೆಯನ್ನು ಕೊಟ್ಟಿರುವನು. ಸಂಸ್ಕೃತ ಶಬ್ದಗಳ ಪ್ರಾಚುರ್ಯ, ದೀರ್ಘ ಸಮಾಸಗಳ ಬಳಕೆ, ನಿಬಿಡವಾದ ವಾಕ್ಯರಚನೆ, ಹಳಗನ್ನಡ ಶಬ್ದಗಳ ಶುದ್ಧರೂಪ ಪ್ರಯೋಗ, ಶಾರ್ದೂಲ, ಮತ್ತೇಭ, ಸ್ರಗ್ಧರಾ ಮೊದಲಾದ ಗಂಭೀರವೃತ್ತಗಳ ವಿಪುಲ ಪ್ರಯೋಗ, ಇವು ಚಂಪೂಕಾವ್ಯಗಳ ಸಾಮಾನ್ಯ ಸ್ವರೂಪವು. ಪೂರ್ವದ ಪಂಪರನ್ನಾದಿ ಕನ್ನಡ ಕವಿಗಳು ಚಂಪೂ ಕಾವ್ಯಗಳನ್ನು ರಚಿಸಿರುವರು. ಅವರ ಕಾವ್ಯಗಳು ಸಂಸ್ಕೃತದಲ್ಲಿರುವ ಮಹಾಕಾವ್ಯಗಳನ್ನು ಮಾದರಿಯಾಗಿಟ್ಟುಕೊಂಡು ರಚಿತವಾಗಿವೆ. ಅವುಗಳಲ್ಲಿ ಕ್ಲಿಷ್ಟತೆ, ಪಾಂಡಿತ್ಯ, ಅಲಂಕಾರ, ಕವಿಸಮಯ, ಸಂಸ್ಕೃತ ದೀರ್ಘಸಮಾಸ, ಸಂಸ್ಕೃತ ಶಬ್ದಗಳ ಪ್ರಾಚುರ್ಯ, ಮೊದಲಾದ ಲಕ್ಷಣಗಳು ಎದ್ದು ಕಾಣುವವು. ಆ ಕಾಲದಲ್ಲಿ ಅಂತಹ ಕಾವ್ಯಗಳಿಗೆ ಪಂಡಿತ ಮಂಡಲಿಯಲ್ಲಿ ಗೌರವದ ಸ್ಥಾನವಿತ್ತು. ಆಗಿನ ಕಾಲದ ಪಂಡಿತರಿಗೆ ಅಂತಹ ಕಾವ್ಯಗಳೇ ಬೇಕಾಗಿದ್ದವು. ಕವಿಗಳ ಯೋಗ್ಯತೆಯನ್ನು ಅವರು ಬರೆದ ಕಾವ್ಯಗಳ ಕ್ಲಿಷ್ಟತೆಯ ಮೇಲಿಂದ ಅಳೆಯುತ್ತಿದ್ದರು. ಜನಸಾಮಾನ್ಯರ ಕಡೆಗೆ ಅವರ ದೃಷ್ಟಿಯಿದ್ದಿಲ್ಲ. ಹರಿಹರನ ಗಿರಿಜಾಕಲ್ಯಾಣವು ಗದ್ಯಪದ್ಯಮಯವಾಗಿದೆ. ಶಾರ್ದೂಲ, ಮತ್ತೇಭ, ಸ್ರಗ್ಧರಾ, ಮೊದಲಾದ ಗಂಭೀರವೃತ್ತಗಳು ಅದರಲ್ಲಿ ವಿಪುಲವಾಗಿವೆ. ಹಳಗನ್ನಡ ಶಬ್ದಗಳ ಶುದ್ಧರೂಪವನ್ನು ಉಪಯೋಗಿಸಲಾಗಿದೆ. ಆದರೆ ಅದು ಹಿಂದಣ ಚಂಪೂಕಾವ್ಯಗಳಷ್ಟು ಕ್ಲಿಷ್ಟವಾಗಿಲ್ಲ. ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಉಪಯೋಗಿಸಿದ್ದರೂ ಅವು ಸುಲಭವಾಗಿ ಕನ್ನಡ ಶಬ್ದಗಳೊಡನೆ ಬೆರೆತುಕೊಂಡಿರುವವು. ಅವುಗಳ ಉಪಯೋಗ ಯಥೋಚಿತವಾಗಿದೆ. ಸಂಸ್ಕೃತ ಗಂಭೀರವೃತ್ತಗಳಿದ್ದರೂ ಕಂದಗಳು ವಿಪುಲವಾಗಿವೆ. ವೃತ್ತಗಳೂ ಕಂದಗಳೂ ಚಂಪೂಕಾವ್ಯದಲ್ಲಿ ಒಂದಕ್ಕೆ ಮೂರು ಪ್ರಮಾಣದಂತೆ ಸಾಮಾನ್ಯವಾಗಿ ಇರುವವು. ಗಿರಿಜಾಕಲ್ಯಾಣದಲ್ಲಿ ವೃತ್ತ ಕಂದಗಳು ಇದೇ ಪ್ರಮಾಣದಲ್ಲಿ ಬಂದಿವೆ (ಪರಿಶಿಷ್ಟ ಎರಡನ್ನು ನೋಡಿರಿ). ದೀರ್ಘ ಸಮಾಸಗಳನ್ನು ಬಹಳವಾಗಿ ಉಪಯೋಗಿಸಿಲ್ಲ. ವಾಕ್ಯಗಳು ಬಿಡಿಬಿಡಿಯಾಗಿವೆ. ಮಾತಾಡುವ ಸರಣಿಯನ್ನು ಹೋಲುತ್ತವೆ. ವರ್ಣನೆಗಳು ವಿಪುಲವಾಗಿದ್ದರೂ ಕಾವ್ಯದ ಆಕರ್ಷಕ ಶಕ್ತಿಯನ್ನು ಕಡಿಮೆಮಾಡಿಲ್ಲ. ಹರಿಹರನ ಗಿರಿಜಾಕಲ್ಯಾಣವು ಸಾಮಾನ್ಯ ಜನರಿಗೆ ಒಗ್ಗುವಂತಹ ಚಂಪೂಕಾವ್ಯವು.

ಹರಿಹರನ ಶೈಲಿ : ಕಾವ್ಯದ ಕಥಾವಸ್ತುವನ್ನು ಹೃದಯಂಗಮವಾಗಿ ರಮಣೀಯವಾಗಿ, ಚಿತ್ತಾಕರ್ಷಕವಾಗಿ ಹೇಳುವ ರೀತಿಗೆ ಸಾಮಾನ್ಯವಾಗಿ ಶೈಲಿಯೆಂದು ಕರೆಯುವರು. ಲಾಕ್ಷಣಿಕರು ಇದಕ್ಕೆ ರೀತಿಯೆನ್ನುವರು. ಕಾವ್ಯಕ್ಕೆ ರೀತಿಯು ಅತಿ ಮಹತ್ವವಾದುದು. ಲಾಕ್ಷಣಿಕರಲ್ಲಿ ಒಂದು ಪಂಥವು ರೀತಿಯನ್ನೇ ಕಾವ್ಯದ

ಜೀವಾಳವೆಂದು ಪ್ರತಿಪಾದಿಸುವರು. "ರೀತಿರಾತ್ಮಾ ಕಾವ್ಯಸ್ಯ" ಎಂದು ಅವರು ಕಾವ್ಯದ ಲಕ್ಷಣವನ್ನು ವಿವರಿಸುವರು. ಉತ್ತಮ ರೀತಿಯ ಕಾವ್ಯವನ್ನು ಓದುವದರಿಂದ ಅಥವಾ ಕೇಳುವದರಿಂದ ಆನಂದ, ಆಲ್ಹಾದ, ತನ್ಮಯತೆಯುಂಟಾಗುವದು. ಕಾವ್ಯ ಬರೆಯುವಾಗ ಉಂಟಾದ ಕವಿಯ ಭಾವವನ್ನು ಕಾವ್ಯವನ್ನು ಓದುವವನು ಅಥವಾ ಕೇಳುವವನು ಅನುಭವಿಸಿ, ಹಾಗೆಯೆ ತನ್ಮಯತೆಯನ್ನು ಹೊಂದಿದರೆ, ಅಂತಹ ಕೃತಿ ಉತ್ತಮ ಕಾವ್ಯವೆನ್ನಬೇಕು. ಅಂತಹ ಕಾವ್ಯದ ಪ್ರತಿಯೊಂದು ಶಬ್ದದಲ್ಲಿ ಜೀವಕಳೆಯಿರುವದು. ಅದು ಓದುವವನ ಮನದಲ್ಲಿ ಬಿಂಬಿಸಿ, ಕವಿಯು ಅನುಭವಿಸಿದ ಭಾವಗಳನ್ನು ಅವನಲ್ಲಿ ಮೂಡಿಸುವದು. ಇಂತಹ ಕವಿಕೃತಿಯಲ್ಲಿ ಶಬ್ದಗಳು ರಸಭಾವಗಳನ್ನು ಹೆಚ್ಚಿಸುವವು. ಇಂತಹ ಶಬ್ದಗಳ ಸಂಯೋಗ ಉತ್ತಮ ಶೈಲಿ. ರಸಪುಷ್ಟಿಯನ್ನು ಅದೇಕೆ, ನೂತನ ಸೃಷ್ಟಿಯನ್ನು ನಿರ್ಮಿಸಲು ಸಮರ್ಥವಾದ ಶಕ್ತಿ ಈ ಶೈಲಿಯಲ್ಲಿ ಅಡಗಿದೆ.

ಉತ್ತಮ ಶೈಲಿಯಲ್ಲಿಯ ಎಲ್ಲ ಗುಣಗಳು ಹರಿಹರನ ಶೈಲಿಯಲ್ಲಿ ಅವೆ. ಪ್ರತಿಯೊಬ್ಬ ಕವಿಯು ತನ್ನದೇ ಆದ ವಿಶಿಷ್ಟ ಶೈಲಿಯನ್ನು ನಿರ್ಮಿಸಿಕೊಂಡು ಕೃತಿಯನ್ನು ರಚಿಸಿರುವನು. ಹರಿಹರನಿಗೂ ಆತನದೇ ಆದ ವಿಶಿಷ್ಟ ಶೈಲಿಯಿದೆ. ಹರಿಹರನು ಘನವಿದ್ವಾಂಸನು. ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಪ್ರಭುತ್ವವುಳ್ಳವನು. ತಮಿಳನ್ನೂ ಬಲ್ಲವನು. ಸರಿಯಾದ ಅರ್ಥಭಾವಗಳಿಗನುಸರಿಸಿ, ಶಬ್ದಗಳು ಹೊಂದಿಕೊಂಡು, ಗಂಭೀರ ಪ್ರವಾಹದಂತೆ ಸುಲಭವಾಗಿ, ಅಡೆತಡೆಗಳಿಲ್ಲದೆ ಅವನ ಕೃತಿಗಳಲ್ಲಿ ಸಾಗುವವು. ಅವು ಪ್ರೌಢವೂ, ಗಂಭೀರವೂ, ಅರ್ಥಭಾವಗಳನ್ನು ಪೋಷಿಸುವವೂ, ಆಗಿರುವುವಲ್ಲದೆ ನಿರರ್ಗಲವಾಗಿ ಓಡುವವು. ಅಲ್ಲಲ್ಲಿ ಶಬ್ದಾಲಂಕಾರ ಅರ್ಥಾಲಂಕಾರಗಳನ್ನು ಮಿತವಾಗಿ, ಅನುರೂಪವಾಗಿ, ಔಚಿತ್ಯಪೂರ್ಣವಾಗಿ ಕವಿಯು ಉಪಯೋಗಿಸಿರುವನು. ಯಮಕ, ಪ್ರಾಸ, ಶ್ಲೇಷ, ಉಪಮಾ, ರೂಪಕ, ಸ್ವಭಾವೋಕ್ತಿ, ವಕ್ರೋಕ್ತಿ, ಅರ್ಥಾಂತರನ್ಯಾಸ ಮೊದಲಾದವು ಸಹಜ ಮತ್ತು ಮನೋಹರವಾಗಿ ಬಂದಿವೆ. ಕಥಾವಸ್ತುವಿಗೆ ಅವು ಪೋಷಕವಾಗಿ, ಕಾವ್ಯವನ್ನು ಹೆಚ್ಚು ಆಕರ್ಷಕವಾಗಿ ಮಾಡಿರುವವು. ಹರಿಹರನೇ ತನ್ನ ಕಾವ್ಯದ ಗುಣಗಳನ್ನು

"ಅತುಳತರಾರ್ಥಮರ್ಥದನುವೃತ್ತಿಪದಂ ಪದದಿಚ್ಛೆ ಬಂಧಮೂ- |
ರ್ಜಿತಪದಬಂಧ ಸಂಧಿ ನವರೀತಿ ಸುರೀತಿ ಗುಣಂ ಸದೃಕ್ಕಲಂ- ||
ಕೃತಿ ಸದಲಂಕೃತಿ ಪ್ರತಿಮಮೊಪ್ಪುವ ಭಾವಮನೂನಭಾವದು- |
ನ್ನತರಸಮೆಂದು ಸತ್ಕವಿಗಳಾಲಿಸೆ ಪೇಳ್ದಪೆನೀ ಪ್ರಬಂಧಮಂ ||

ಗಿ. ಕ. ೧–೧೧

ಎಂಬ ಪದ್ಯದಲ್ಲಿ ತಿಳಿಸಿರುವನು. ಈ ಎಲ್ಲ ಗುಣಗಳು ಗಿರಿಜಾಕಲ್ಯಾಣದಲ್ಲಿ ಬಂದಿವೆಯೆಂದು ಆತನ ನಂಬುಗೆ. ಇವಲ್ಲದೆ ಪೂರ್ವದ ಅತಿ ಪ್ರಸಿದ್ಧ ಸಂಸ್ಕೃತ ಕವಿ

ಗಳಾದ ಬಾಣ, ಮಯೂರ, ಕಾಲಿದಾಸ ಉದ್ಭಟಾದಿಗಳ ವಿಶಿಷ್ಟ ಕಾವ್ಯಗುಣಗಳಾದ ಮೃದೂಕ್ತಿ, ರೇಖೆ, ರಸವೃತ್ತಿ, ಗಭೀರತೆಗಳು ಕ್ರಮವಾಗಿ ತನ್ನ ಕಾವ್ಯದಲ್ಲಿ ನೆಲಸಿರಲೆಂದು ಅವನ ಆಸೆ. (೧.೮) ಇವರೆಲ್ಲರು ಸಂಸ್ಕೃತ ಕವಿಗಳು, ವೀರಶೈವ ಕವಿಗಳಿಂದ ಸ್ತುತಿಸಲ್ಪಟ್ಟವರು. ಹಲಾಯುಧ, ಕೇಶಿರಾಜ, ಉದ್ಭಟ, ಮಲ್ಹಣ ಇವರ ಚರಿತೆ ವೀರಶೈವ ಸಾಹಿತ್ಯದಲ್ಲಿ ವಿಪುಲವಾಗಿ ದೊರೆಯುವದು. ಇವರೆಲ್ಲರು ಶಿವನ ಕೃಪೆಗೆ ಪಾತ್ರರಾದ ಶೈವ ಕವಿಗಳು. ಪಾಂಡಿತ್ಯವೂ ಲೋಕಾನುಭವವೂ ಪ್ರತಿಭೆಯೂ ಅವನ ಶೈಲಿಯಲ್ಲಿ ಪ್ರತಿಬಿಂಬಿತವಾಗಿವೆ.

ತನ್ನ ಕಾವ್ಯವು ನವ್ಯವೂ ಅಖಿಳ ಜನರಿಂದ ಸೇವ್ಯವೂ ಆಗಿದೆಯೆಂದು ಅವನ ವಿಶ್ವಾಸ. ಗಿರಿಜಾಕಲ್ಯಾಣವು ಚಂಪೂಕಾವ್ಯಗಳ ಶೈಲಿಯ ಸಾಮಾನ್ಯ ಸ್ವರೂಪವನ್ನು ಅನುಸರಿಸಿದೆಯಾದರೂ ಅದು ಅಷ್ಟು ಕ್ಲಿಷ್ಟವಾಗಿಲ್ಲ. ಸುಲಭ ಬಿಡಿಬಿಡಿಯಾದ ಕನ್ನಡ ಶಬ್ದಗಳಿಂದೊಡಗೂಡಿದೆ. ವಿಸ್ತಾರವಾದ ವರ್ಣನೆಗಳೂ ಪುನರುಕ್ತಿಗಳೂ ಅಲ್ಲಲ್ಲಿ ಬರುವದುಂಟು. ಬಾಣನಲ್ಲಿಯೂ ಇವು ಕಂಡುಬರುವವು. ಆದರೂ ಅವನು ಸಂಸ್ಕೃತ ಸಾಹಿತ್ಯದಲ್ಲಿ ಅತ್ಯುಚ್ಚಸ್ಥಾನವನ್ನು ಪಡೆದಿರುವನು. ಗಿರಿಜಾಕಲ್ಯಾಣವನ್ನು ಮಹಾಕಾವ್ಯವನ್ನಾಗಿ ಮಾಡಬೇಕಾದರೆ ಅದರ ಕಥೆಯನ್ನು ವಿಸ್ತರಿಸುವದೂ ಅದಕ್ಕಾಗಿ ವಿಪುಲ ವರ್ಣನೆಗಳನ್ನು ಸೇರಿಸುವದೂ ಅವನ ದೃಷ್ಟಿಯಲ್ಲಿ ಅಗತ್ಯವಾದುವು. ಹಿಮವತ್ಪರ್ವತದ ತಪ್ಪಲಲ್ಲಿರುವ ತಪೋವನ, ತಪಸ್ವಿಗಳ ಜೀವನ, ಬೇಟೆ, ಶಬರ ಶಬರಿಯರು, ಹಂಪೆ, ಹೇಮಕೂಟ, ವಿರೂಪಾಕ್ಷನ ಪೂಜಾ, ಚಳಿ ಮಳೆ ಬೇಸಿಗೆ, ಪಾರ್ವತಿಯ ಕಠೋರ ತಪಸ್ಸು, ಇವುಗಳ ವರ್ಣನೆಗಳು ವಿಪುಲವಾಗಿ ಬಂದಿವೆ. ಸ್ವಾಭಾವಿಕವಾಗಿವೆ. ಕವಿಯ ಪ್ರತಿಭೆಯನ್ನಿವು ಪ್ರದರ್ಶಿಸುವವು. ವಾಚಕರ ಮನದಲ್ಲಿ ಮೂಡಿಸುವವು. ರಸಾಭಿವೃದ್ಧಿಗೆ ಸರಿಯಾದ ಪದಗಳನ್ನು ಛಂದಸ್ಸುಗಳನ್ನು ಮತ್ತು ನಿಚ್ಚಳವಾದ ಚಿತ್ರಗಳನ್ನು ಇಲ್ಲಿಯ ವರ್ಣನೆಗಳಲ್ಲಿ ಕಾಣಬಹುದು. ಉದಾಹರಣೆಗಾಗಿ ಕಾಡಹಂದಿ(೧-೧೦೦)ಮಾವಿನ ಹಣ್ಣು ಸವಿಯುವ ಗಿಳಿ (೨-೩೯) ಮಲ್ಲಿಗೆಯ ಮಕರಂದವನ್ನು ಹೀರುವ ಮಧುಕರ (೨-೬೩), ಮಸಕದ ಶಶಕ(೧-೮೬),ಪುಳಿಂದ ನಾಯಕಿಯರ ಯೌವನಕ್ಕೆ ಜಲಪೂರಿತ ಹಸ್ತದಿಂದೆ ಅರ್ಘ್ಯಕೊಡುವಂತಿರ್ದ ಹಸ್ತಿಕದಂಬ (೧-೧೨೧), ಹಂದಿ ತನ್ನ ಕುನ್ನಿಯನ್ನು ಕೊಂದುದಕ್ಕಾಗಿ ಪುಳಿಂದನ ಛಲ (೧-೧೦೯) ಮೊದಲಾದವುಗಳ ವರ್ಣನೆಗಳನ್ನು ನೋಡಬಹುದು.

ಕವಿಯು ವರ್ಣನೆಗಳಲ್ಲಿ ಬಹುತರ ಶೃಂಗಾರ, ವೀರ, ರೌದ್ರ, ಹಾಸ್ಯ ಮೊದಲಾದ ಎಲ್ಲ ರಸಗಳನ್ನು ತಂದಿರುವನಾದರೂ ಆತನ ಕಾವ್ಯದಲ್ಲಿ ಪ್ರಧಾನವಾಗಿರುವವು ಶಾಂತ ಕರುಣಾರಸಗಳು. ಇವು ಎದ್ದು ಕಾಣುವವು. ಹರಿಹರನೇ ಹೇಳಕೊಳ್ಳುವಂತೆ ಈ ಕಾವ್ಯವು ನವರಸ (ಒಂಬತ್ತು ರಸ) ಸೇವ್ಯವಾದುದಾಗಿದ್ದರೂ ನವ (ನೂತನವಾದ ಶಿವಭಕ್ತಿ) ರಸದಿಂದ ಕೂಡಿರುವುದರಿಂದ ನವ್ಯ (ಹೊಸದು) ವಾದುದಾಗಿದೆ.

(೧-೧೪). ಕವಿಯ ಶಿವಭಕ್ತಿಯ ಪರಾಕಾಷ್ಠತೆ ಇದರಲ್ಲಿ ವ್ಯಕ್ತವಾಗಿದೆ. ಆತನ ಕೃತಿಗಳಲ್ಲಿ ಭಕ್ತಿರಸವು ತುಂಬಿ ಉಕ್ಕೇರುತ್ತಿದೆ. ಭಕ್ತಿಯ ಆವೇಶದಲ್ಲಿ ಮೈಮರೆತು ತನ್ಮಯನಾಗುವವನು. ಅವುಗಳಲ್ಲಿ ಪ್ರಸನ್ನತೆ ಮಾಧುರ್ಯ ಓಜಸ್ಸು ನೆಲಸಿವೆ.

ಶೃಂಗಾರರಸವು ವಿಶೇಷವಾಗಿ ಗಿರಿಜಾಕಲ್ಯಾಣದಲ್ಲಿ ಕೆಲಮಟ್ಟಿಗೆ ದೊಡ್ಡ ಪ್ರಮಾಣದಲ್ಲಿ ಬಂದಿದೆಯೆಂಬುದನ್ನು ಪರ್ವತರಾಜನ ರಾತ್ರಿವಿಹಾರ ವರ್ಣನೆಯಲ್ಲಿಯೂ, ದೇಶ ಪುರ ವರ್ಣನೆಯಲ್ಲಿಯೂ, ಮದನನ ಆಸ್ಥಾನದ ವರ್ಣನೆಯಲ್ಲಿಯೂ ಕಾಣಬಹುದು. ಆದರೂ ಅದು ಮಿತಿಮೀರದೆ ಹಿಡಿತದಲ್ಲಿದೆ. ಶೃಂಗಾರರಸವನ್ನು ನಿರೂಪಿಸುವದರಲ್ಲಿ ಅವನಿಗಿದ್ದ ಪ್ರಭುತ್ವದಿಂದ ರಸಿಕಚಕ್ರಿಯೆಂಬ ಪದವಿಗೆ ಅವನು ಅರ್ಹನಾಗಿರುವನು.

ಗಿರಿಜಾಕಲ್ಯಾಣ, ಬಸವರಾಜದೇವರ ರಗಳೆ ಮೊದಲಾದ ಗ್ರಂಥಗಳಲ್ಲಿ ಬಂದ ಗದ್ಯಗಳ ಶೈಲಿ, ಸಂಸ್ಕೃತದಲ್ಲಿ ಅದ್ವಿತೀಯ ಗದ್ಯ ಗ್ರಂಥಕಾರನಾದ ಬಾಣನ ಶೈಲಿಯನ್ನು ಬಹುಮಟ್ಟಿಗೆ ಹೋಲುವದು. ಸಂಸ್ಕೃತ ಸಾಹಿತ್ಯದಲ್ಲಿ ಬಾಣನಿಗಿದ್ದ ಕೀರ್ತಿ ಕನ್ನಡ ಸಾಹಿತ್ಯದಲ್ಲಿ ಹರಿಹರನಿಗೆ ಸಲ್ಲತಕ್ಕದ್ದೆಂದು ಹೇಳದರೆ ಅತಿಶಯೋಕ್ತಿಯಾಗಲಾರದು.

ಈ ಕಾವ್ಯದಲ್ಲಿ ಉಪಯೋಗಿಸಿದ ಛಂದಸ್ಸು ರಸಭಾವಗಳಿಗೆ ಅನುಸರಿಸಿಯಿದೆಯೆಂದು ಮೇಲೆ ಸೂಚಿಸಲಾಗಿದೆ. ವೃತ್ತಗಳು ಸಾಕಷ್ಟು ಅವೆ. ಆದರೂ ಕಂದಗಳು ವಿಪುಲವಾಗಿವೆ. ಕಂದಗಳ ರಚನೆಯಲ್ಲಿ ಹರಿಹರನನ್ನು ಸರಿಗಟ್ಟುವವರು ವಿರಳ.

ಕಂದಂಗಳವ್ಯುತಲತಿಕಾ | ಕಂದಂಗಳನೂನವಾಕ್ಯವಿಲಸನ್ನಾ |
ಕಂದಂಗಳ್ ತನಿರಸದು | ಕ್ಕಂದಂಗಳ್ ಸೊಗಯಿಸಿರ್ಪುವೀ ಕೃತಿಯೊಳ್||
(೧-೧೨)

ಎಂದು ತಾನೇ ಒಡನುಡಿದಿರುವನು. ಅದು ಸ್ವಾಭಿಮಾನದ್ಯೋತಕವಾದರೂ ಸಂಪೂರ್ಣ ಸತ್ಯವಾದುದು.

ಹರಿಹರನಿಗಿಂತ ಮೊದಲು, ಬಹುತರ ಅವನ ಕಾಲದಲ್ಲಿಯೂ ಕಾವ್ಯಗಳ ಶೈಲಿಯಲ್ಲಿ ಕ್ಲಿಷ್ಟತೆ, ಪಾಂಡಿತ್ಯ, ಸುಲಭವಾಗಿ ತಿಳದುಕೊಳ್ಳಲು ಬಾರದ ಕವಿಸಮಯ, ಅಲಂಕಾರ, ದೀರ್ಘಸಮಾಸ ಮೊದಲಾದವುಗಳು ವಿಶೇಷವಾಗಿದ್ದರೆ ಅದು ಶ್ರೇಷ್ಠವಾದ ಕಾವ್ಯವೆಂದು ಕಲ್ಪನೆಯಿತ್ತು. ಅಂತಹ ಕಾವ್ಯಗಳಿಗೆ ಪಂಡಿತ ಮಂಡಲಿಯಲ್ಲಿ ಗೌರವವಿತ್ತು. ಆಗಿನ ಕಾಲದ ಪಂಡಿತರಿಗೆ ಅವೇ ಬೇಕಾಗಿದ್ದವು. ಕವಿಯ ಮತ್ತು ಕಾವ್ಯದ ಗೌರವಸ್ಥಾನ ಕಾವ್ಯದ ಕ್ಲಿಷ್ಟತೆಯನ್ನವಲಂಬಿಸಿತ್ತು. ಆಗಿನ ಕಾಲದ ಪಂಡಿತರ ದೃಷ್ಟಿ ಜನಸಾಮಾನ್ಯರ ಕಡೆಗಿದ್ದಿಲ್ಲ. ಸಾಮಾನ್ಯ

ಜನರಿಗೆ ತಿಳಿಯುವಂತೆ ಕೃತಿ ರಚಿಸಿದರೆ ಅದಕ್ಕೆ ಮನ್ನಣೆಯಿದ್ದಿಲ್ಲ. ಸಾಮಾನ್ಯರಿಗೂ ಶಿವನ ಮಹಿಮೆ, ಶಿವಶರಣರ ಜೀವನಕ್ರಮ ಗೊತ್ತಾಗಲೆಂದು ಸುಲಭವಾದ ರಗಳೆಯ ಛಂದಸ್ಸಿನಲ್ಲಿ ಅವನು ಕಾವ್ಯಗಳನ್ನು ಬರೆದನು. ಅವನ ಕವಿತಾಸಾಮರ್ಥ್ಯ ಸ್ಪಷ್ಟವಾಗಿ ಕಾಣುವದು ಅವನ ರಗಳೆಗಳಲ್ಲಿ. ಅವನು ಮಹಾ ಕವಿಯೆಂಬ ಕೀರ್ತಿ ಅವನ ರಗಳೆಗಳನ್ನವಲಂಬಿಸಿದೆ. ಅವನ ಅಗಾಧವಾದ ಕವಿತಾ ಶಕ್ತಿ ಅವುಗಳಲ್ಲಿ ಒಡಮೂಡಿದೆ. ರಗಳೆಗಳಲ್ಲಿ ಶೈಲಿ ಸ್ವಾಭಾವಿಕವಾಗಿದೆ, ಪ್ರಯತ್ನ ರಹಿತವಾಗಿದೆ, ಕೌಶಲ್ಯ ಎದ್ದು ಕಾಣುತ್ತದೆ. ಅದು ಚಿತ್ರಮವಾಗಿದೆ. ಸನ್ನಿವೇಶ ನಿರೂಪಣೆಯಲ್ಲಿ ಚಿತ್ತಾಕರ್ಷಕವಾಗಿದೆ. ಕವಿಗೆ ಪಾಂಡಿತ್ಯವನ್ನು ಪ್ರದರ್ಶಿಸಬೇಕೆಂಬ ಹಂಬಲವಿಲ್ಲ. ಕವಿಯ ಸ್ವತಂತ್ರಮನೋವೃತ್ತಿ ನಿಚ್ಚಳವಾಗಿ ಅದರಲ್ಲಿ ಮೂಡಿದೆ. ಆದರೂ ಆಗಿನ ಪಂಡಿತರಿಗೆ ಅವು ಮೆಚ್ಚುಗೆಯಾಗಿರಲಿಲ್ಲವೆಂದು ತೋರುತ್ತದೆ. ಅದಕ್ಕಾಗಿ ಅವನನ್ನು ರಗಳೆಯ ಕವಿಯೆಂದು ಕರೆದರಂತೆ. ಮಹಾಕಾವ್ಯವನ್ನು ರಚಿಸುವ ಪ್ರತಿಭೆ ಮತ್ತು ಶಕ್ತಿ ತನ್ನಲ್ಲಿವೆಯೆಂದು ತೋರಿಸಿಕೊಡಲು ಈ ಕಾವ್ಯವನ್ನು ರಚಿಸಿದನೆಂದು ಒಂದು ಐತಿಹ್ಯ. ಈ ಕಾವ್ಯರಚನೆಯಲ್ಲಿ ಅವನು ಪೂರ್ವದ ಮಹಾಕಾವ್ಯಗಳ ಸೀಮೆಯನ್ನು ಮೀರಿ ಹೊಸ ಮಾರ್ಗವನ್ನು ನಿರ್ಮಿಸಿ ಕೊಂಡಿರುವನು. ಅದು ಕಾವ್ಯಗಳನ್ನು ಸಾಮಾನ್ಯರಿಗೂ ತಿಳಿಯುವಂತಹ ಆಕರ್ಷಕವಾದ, ಆದರೂ ಸುಲಭವಾದ ಶೈಲಿಯಲ್ಲಿ ರಚಿಸಬೇಕೆಂಬುದು. ಅವನ ಈ ಧ್ಯೇಯದಲ್ಲಿ ಪೂರ್ಣ ಯಶಸ್ಸು ದೊರೆತಿದೆ. ಆಗ ಮತ್ತು ಈಗ ಪಂಡಿತರು ಅದನ್ನು ಮೆಚ್ಚುವರು. ಆದುದರಿಂದ ಅವನು ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಯನ್ನುಂಟುಮಾಡಿ ಅದಕ್ಕೊಂದು ಹೊಸ ದಿಶೆಯನ್ನು ತೋರಿಸಿಕೊಟ್ಟ ಮಹಾಕವಿ.

ಹರಿಹರನ ವೈಶಿಷ್ಟ್ಯ : ಹರಿಹರನ ವಿಪುಲ ಸಾಹಿತ್ಯದಲ್ಲಿ ಅವನವೇ ಆದ ಕೆಲವು ವಿಶಿಷ್ಟತೆಗಳು ಸ್ಪಷ್ಟವಾಗಿ ಮೂಡಿರುವವು. ಅವು ಅವನ ಔನ್ನತ್ಯವನ್ನು ಸೂಚಿಸುವವು. ಕವಿಗಳು ಸಾಮಾನ್ಯವಾಗಿ ರಾಜರು ಮಾಂಡಲಿಕರು ಧನಿಕರು ಮೊದಲಾದ ಸತ್ತಾಧಾರಿಗಳನ್ನು ಆಶ್ರಯಿಸಿ, ಅವರಿಂದ ಪೋಷಿಸಲ್ಪಟ್ಟು, ಅವರನ್ನು ಬಣ್ಣಿಸಿ, ಗ್ರಂಥಗಳನ್ನು ರಚಿಸುವುದು ಸಾಹಿತ್ಯಕ್ಷೇತ್ರದಲ್ಲಿ ಸಾಮಾನ್ಯವಾಗಿ ರೂಢಿ ಯಲ್ಲಿ ಬಂದಿವೆ. ಆದರೆ ಶಿವಶರಣರು ಈ ನಿಯಮಕ್ಕೆ ಅಪವಾದ. ಅವರು ತಮ್ಮ ಇಷ್ಟದೈವವಾದ ಶಿವನನ್ನೇ ಅವಲಂಬಿಸಿ, ತಮ್ಮ ಜೀವನಯಾತ್ರೆಯನ್ನು ಸಾಗಿಸು ವರು. ರಾಜಮಹಾರಾಜರು ಎಂತಹ ಉನ್ನತ ಸ್ಥಾನದಲ್ಲಿದ್ದರೂ ಎಂತಹ ಉದಾರಿ ಗಳಾಗಿದ್ದರೂ ಅವರನ್ನು ಆಶ್ರಯಿಸಿ ಹೊಗಳಿ ಕೃತಿಗಳನ್ನು ರಚಿಸಲಾರರು ಇದು ಶಿವಶರಣರ ವೈಶಿಷ್ಟ್ಯ. ಶಿವಕವಿಯಾದ ಹರಿಹರನು ಈ ನಿಯಮಕ್ಕೆ ಹೊರಗಾದವ ನಲ್ಲ. ಅವನು ಹೊಯ್ಸಳರ ರಾಜಧಾನಿಯನ್ನೂ ಅಲ್ಲಿಯ ತನ್ನ ಜೀವನೋಪಾಯದ

ಸ್ಥಾನವನ್ನೂ ತ್ಯಜಿಸಿ, ಪಂಪಾವಿರೂಪಾಕ್ಷನ ಸಾನ್ನಿಧ್ಯದಲ್ಲಿ ತನ್ನ ಆಯುಷ್ಯವನ್ನೆಲ್ಲ ಕಳೆದನು. ತನ್ನ ಜೀವಿತಾವಧಿಯನ್ನೆಲ್ಲ ಶಿವನ ಮತ್ತು ಶಿವಶರಣರ ಸ್ತುತಿರೂಪವಾದ ಚರಿತ್ರೆಗಳನ್ನು ಹಾಡುವುದರಲ್ಲಿ, ವಿರೂಪಾಕ್ಷನ ಪೂಜೆಯಲ್ಲಿ ವಿನಿಯೋಗಿಸಿದನು. ತನ್ನ ವರಪುತ್ರನಾದ ಹಂಪೆಯ ರಾಘವಾಂಕನು ಹರಿಶ್ಚಂದ್ರ ಕಾವ್ಯವನ್ನು ರಚಿಸಿ ರಾಜಮನ್ನಣೆಯನ್ನು ಪಡೆದುದು ಅವನಿಗೆ ಸೇರಲಿಲ್ಲ.

ಹರಿಹರನು ಶಿವಾನುಭಾವಿ. ಅವನು ವಿರೂಪಾಕ್ಷನ ಸಾನ್ನಿಧ್ಯದಲ್ಲಿ ಆಜನ್ಮ ತಪಸ್ಸುಮಾಡಿ ಶಿವಸಾಕ್ಷಾತ್ಕಾರವನ್ನು ಪಡೆದವನು. ಅವನ ತಪಸ್ಸಾಧನೆಯ ಪ್ರತ್ಯಕ್ಷ ಫಲವು ಅವನು ರಚಿಸಿದ ಕೃತಿಗಳು. ಅವನ ಈ ಎಲ್ಲ ಕೃತಿಗಳಲ್ಲಿ ಹೆಜ್ಜೆಹೆಜ್ಜೆಗೂ ಕಾವ್ಯದ ಗುರಿ ಶಿವಸಾಕ್ಷಾತ್ಕಾರವೆಂಬುದನ್ನು ಸಾರಿದ್ದಾನೆ. ಈ ತತ್ತ್ವ ಅವನ ಗ್ರಂಥಗಳಲ್ಲೆಲ್ಲ ಪ್ರತಿಪಾದಿತವಾಗಿದೆ. ಅವನು ಕೃತಿಗಳನ್ನು ರಚಿಸಿದುದು ಕೃತಿಗಾಗಿ ಅಲ್ಲ; ಶಿವಸಾಕ್ಷಾತ್ಕಾರಕ್ಕಾಗಿ, ಶಿವಶರಣರನ್ನು ಮನವಾರೆ ಹೊಗಳುವದಕ್ಕಾಗಿ. ಇದು ಅವನು ಶಿವಶರಣರ ಕಥೆಗಳನ್ನು ಬರೆಯುದರ ಧ್ಯೇಯ. ಶಿವಶರಣರು, ಸಮಾಜದ ಯಾವದೇ ವರ್ಗಕ್ಕೆ ಸೇರಿದವರಾಗಿದ್ದರೂ ಶಿವನಲ್ಲಿ ನಿಷ್ಠೆಯನ್ನಿಟ್ಟು, ಪರಿಶುದ್ಧವಾದ ಜೀವನವನ್ನು ಸಾಧಿಸಿ, ಎಂತಹ ಕಷ್ಟ ಬಂದರೂ ಹಿಡಿದ ವ್ರತಗಳನ್ನು ಬಿಡದೆ, ಉಚ್ಚ ನೀಚವೆಂಬ ಭೇದಭಾವವಿಲ್ಲದೆ, ವಿವಿಧ ಕಾಯಕಗಳನ್ನು ಕೈಕೊಂಡು, ಅವುಗಳ ಮೂಲಕ ಶಿವೈಕ್ಯವನ್ನು ಸಾಧಿಸಿದ ಮಹಾತ್ಮರು, ಶಿವಾನುಭಾವಿಗಳು. ಅವನ ದೃಷ್ಟಿಯಲ್ಲಿ ಅವರು ಶಿವಸ್ವರೂಪರು. ಶಿವನ ಸಾಕ್ಷಾತ್ಕಾರ ಪಡೆದವರು. ಅವರ ಕಥೆ ಶಿವಕಥೆ. ಸಮಾಜದಲ್ಲಿ ಸಾಮಾನ್ಯರಂತೆ ಕಾಣುವ, ಸಾಮಾನ್ಯ ವ್ಯಕ್ತಿಗಳೆಂದು ಪರಿಗಣಿತರಾದ ಈ ಶರಣರ ಚರಿತೆಗಳಿಗೆ ಕನ್ನಡ ಸಾಹಿತ್ಯದಲ್ಲಿ ಕಾವ್ಯವಸ್ತುವಿನ ಸ್ವರೂಪ ಕೊಟ್ಟ ಆದಿಕವಿ ಹರಿಹರದೇವನು.

ಹರಿಹರನು ಶಿವನಲ್ಲಿ ಉತ್ಕಟವಾದ ಭಕ್ತಿಯುಳ್ಳವನು. ಅವನ ಭಕ್ತಿ ನೆಲೆಯಿಲ್ಲದಷ್ಟು ಆಳವಾದುದು. ಅವನ ದೃಷ್ಟಿ ಶಿವನ ದರ್ಶನದಲ್ಲಿ ಮಗ್ನವಾಗಿದೆ. ಎತ್ತ ನೋಡಿದರೂ ಅವನಿಗೆ ಶಿವನೇ ಕಾಣಿಸುತ್ತಾನೆ. ಅವನ ಕಿವಿಗೆ ಕೇಳುವದು ಶಿವಸ್ತುತಿಯಲ್ಲದೆ ಬೇರೊಂದಿಲ್ಲ. ಅವನಿಗೆ ಜಗತ್ತು ಶಿವಮಯ. ಶಿವನಲ್ಲಿಯೇ ಅವನ ತನುಮನ ಮುಳುಗಿ ಹೋಗಿವೆ. ಶಿವನಲ್ಲದೆ ಅನ್ಯವಸ್ತು ಅವನ ಜೀವನದಲ್ಲಿ ಇಲ್ಲ. ಅದು ಅವನಿಗೆ ಬೇಕಾಗಿಲ್ಲ. ವಿಶ್ವವೆಲ್ಲ ಶಿವಮಯವಾಗಿತ್ತು ಅವನಿಗೆ. ಅವನ ಕೃತಿಗಳಲ್ಲಿ ಚೊಕ್ಕ ಶಿವಭಕ್ತಿ ಚಿಮ್ಮುತ್ತಲಿರುವದು. ಪಂಪಾಶತಕದ ಪದ್ಯಗಳಲ್ಲಿ, ಗಿರಿಜಾಕಲ್ಯಾಣದ ವಿರೂಪಾಕ್ಷನ ಪೂಜೆಯಲ್ಲಿ, ರಗಳೆಗಳ ಕಥಾನಾಯಕರ ಚರಿತೆಯಲ್ಲಿ ಅದನ್ನು ಪ್ರತಿಬಿಂಬಿಸಿರುವನು. ತನ್ನ ಹೃದಯದಲ್ಲಿ ತುಂಬಿದ ಶಿವಭಕ್ತಿಯನ್ನು ಅತಿ ದೊಡ್ಡ ಪ್ರವಾಹವಾಗಿ ಹರಿಸಿರುವನು. ಪಂಪಾವಿರೂಪಾಕ್ಷನ ಸಾನ್ನಿಧ್ಯದಲ್ಲಿ ತನ್ನ ದೈನಂದಿನ ಕ್ರಮವನ್ನು ಹೇಗೆ ಏರ್ಪಡಿಸಿಕೊಂಡಿರಬಹುದೆಂಬುದರ

ಚಿತ್ರವನ್ನು ಬಸವರಾಜದೇವರ ರಗಳೆಯಲ್ಲಿ ನಿರೂಪಿಸಿದ ಬಸವಣ್ಣನವರ ದಿನಚರಿಯಲ್ಲಿ ಕಾಣಬಹುದು. ನಸುಕು ಹರಿಯುವದಕ್ಕಿಂತ ಮೊದಲು ಎದ್ದು, ಇಷ್ಟದೈವವಾದ ವಿರೂಪಾಕ್ಷನನ್ನು ಸ್ಮರಿಸಿ, ಶಿವಪೂಜೆಗಾಗಿ ಪತ್ರಿಪುಷ್ಪಗಳನ್ನು ಸಂಗ್ರಹಿಸಿ, ಮಾಲೆಮಾಡಿ, ಹೊಳೆಯಲ್ಲಿ ಮಿಂದು, ವಿರೂಪಾಕ್ಷನ ಸನ್ನಿಧಿಗೆ ಬಂದು, ನಾನಾವಿಧದಿಂದ ಅವನನ್ನು ಪೂಜಿಸಿ, ಪತ್ರಿಪುಷ್ಪಗಳಿಂದ ಅಲಂಕರಿಸಿ, ಶಿವನ ಶಿವಶರಣರ ಮಹಿಮೆಯನ್ನು ಹಾಡುವುದರಲ್ಲಿ ತನ್ನನ್ನೇ ಮರೆತುಬಿಡುತ್ತಿದ್ದನು. ಇದನ್ನೇ ಲಿಂಗಾರ್ಚನೆಯ ರಗಳೆಯಲ್ಲಿ ತಂದಿದ್ದಾನೆ. ಆತನ ಜೀವನ ಶುದ್ಧ, ಪುನೀತ, ಲೌಕಿಕ ವ್ಯವಹಾರದಿಂದ ನಿರ್ವೃತ್ತ. ಆದರೂ ಅವನು ಲೌಕಿಕವನ್ನು ಬಲ್ಲವನು. ತಿರುನೀಲಕಂಠ, ನಂಬಿಯಣ್ಣ ಮೊದಲಾದವರ ರಗಳೆಗಳಲ್ಲಿ ಲೌಕಿಕರಿಂದ ಶರಣರಿಗಾಗುವ ತೊಂದರೆಗಳನ್ನು ತೋರಿಸಿಕೊಟ್ಟಿದ್ದಾನೆ. ಶರಣನು ಮಾನವರಲ್ಲಿ ಬೆರೆತು ಲೌಕಿಕರಂತೆ ಕಂಡರೂ ಅವನು ಅವರಿಂದ ಬೇರೆಯಾಗಿದ್ದಾನೆಂಬುದನ್ನು ಸೂಚಿಸಿದ್ದಾನೆ.

ಶಿವಭಕ್ತಿಯಿಂದ ಅವನ ಹೃದಯ ತುಂಬಿ ಪರಿಪಕ್ವವಾಗಿದೆ; ಸಂಸಾರದಲ್ಲಿ ವಿರತಿ ಹುಟ್ಟಿದೆ. ಪಂಪಾಪತಿಯ ಸಾನ್ನಿಧ್ಯವನ್ನು ಪಡೆದು ಆತ್ಮೋನ್ನತಿಯ ಮಾರ್ಗದಲ್ಲಿ ಬಹುದೂರ ಹೋಗಿದ್ದಾನೆ. ಅವನ ಭಕ್ತಿ ಶುದ್ಧ ಸಾತ್ವಿಕ ಉತ್ಸಾಹಪೂರಿತವಾದುದು. 'ಉತ್ಸಾಹ' ಶಬ್ದವನ್ನು ಅವನು ಒಂದು ವಿಶಿಷ್ಟಾರ್ಥದಲ್ಲಿ ಉಪಯೋಗಿಸಿದ್ದಾನೆ. ಶಿವಶಿವೆಯರ ಶಿವಶರಣರ ವರ್ಣನೆ ಮಾಡುವಾಗ ಅವನಲ್ಲಿ ಉದ್ಭವಿಸಿದ ಭಾವಗಳ ತಾಕಲಾಟ ವಿಪರೀತವಾದುದು. ವಿಷಯವನ್ನು ಮಾರ್ಮಿಕವಾಗಿ ಹೇಳಬೇಕೆಂಬ ಅಭಿಲಾಷೆ. ಇದಕ್ಕೆ ಉತ್ಸಾಹವೆಂದು ಅವನು ಕರೆದಿರುವನು. ಅಭಿಲಾಷೆಗಳ ಈ ತಾಕಲಾಟದಲ್ಲಿ ಗಿರಿಜಾಕಲ್ಯಾಣವನ್ನು "ಪೇಳ್ದಂ ಶಿವಕವಿಹರಿದೇವಂ ಮಹೋತ್ಸಾಹದಿಂದಂ" (೧.೩೩). ಅವನು ಪಾವನೆಯಾದ ತುಂಗಭದ್ರೆಯಲ್ಲಿ ಮಿಂದು, ವಿರೂಪಾಕ್ಷನ ಪೂಜೆಯಲ್ಲಿ ತನುವನ್ನೂ, ಧ್ಯಾನದಲ್ಲಿ ಮನವನ್ನೂ ನಿಲಿಸಿ ಪುನೀತನಾದ ಕವಿಯು. ತನ್ನನ್ನು ಆಶ್ರಯಿಸಿದವರಿಗೆ ಶಿವಜ್ಞಾನವನ್ನು ಬೋಧಿಸಿ, ಶಿವಭಕ್ತರನ್ನಾಗಿ ಮಾಡಿ, ಸೊಂಪಿನ ಪೆಂಪಿನ ಹಂಪೆಯಾಳ್ದನನ್ನು ಪೊಗಳು, ಅರ್ಜಿಸು, ಎಂದು ಉಪದೇಶಿಸುತ್ತಿದ್ದನು. ಆತನ ಭಕ್ತಿ ವಿರೂಪಾಕ್ಷನಲ್ಲಿ ಅಚಲವಾಗಿತ್ತು. ಅವನೊಬ್ಬ ಸಿದ್ಧಪುರುಷ. ವಿರೂಪಾಕ್ಷನ ಸಾಕ್ಷಾತ್ಸುಪುತ್ರ. ಶಿವಕವಿ. ರಸಿಕ ಚಕ್ರವರ್ತಿಯೆಂದು ಕೀರ್ತಿ ಪಡೆದಿದ್ದರೂ ವಿರಕ್ತ. ಅವನು "ಕರ್ಣಾಟಕ ಕಾವ್ಯಲಕ್ಷಣದಿಕ್ಷಾಚಾರ್ಯ ಶಿವಯೋಗ ಚಕ್ರೇಶ್ವರ ಮರ್ತ್ಯಲೋಕದ ಮಹಾದೇವ"ನೆಂದು ರಾಘವಾಂಕನ ನಂಬುಗೆ. "ಮೃದುಮಧುರ ಪದವಿಲಾಸಾಸ್ಪದರಸವಿಸರ ಪ್ರಕಾಶ ಕರ್ನಾಟಕಕವಿತ್ವದೊಳೊರ್ವನೆ ಪೆಸರ್ವಡೆದಗ್ಗದ ಹರಿಹರ"ನೆಂದು ಷಡಕ್ಷರನ ಹೇಳಿಕೆ.

ಸಾಹಿತ್ಯದ ಶಿಖರವನ್ನೇರಿ ಅಜರಾಮರ ಕೀರ್ತಿಯನ್ನು ಸಂಪಾದಿಸಿದ ಪ್ರಾಚೀನ ಸಾಹಿತಿಗಳಲ್ಲಿ ಅತಿ ಸೌಜನ್ಯದಿಂದ ತಮ್ಮ ಪಾಂಡಿತ್ಯವನ್ನು ಮುಚ್ಚಿಡುವವರೂ ಉಂಟು. ಅದನ್ನು ಅರಿತು ಲೋಕದೃಷ್ಟಿಗೆ ತರಲು ಆತುರರಾದವರೂ ಉಂಟು. ಕಾಲಿದಾಸನಂತಹ ವಿಶ್ವವಿಖ್ಯಾತ ಕವಿಯು ರಘುವಂಶ ಮಹಾಕಾವ್ಯವನ್ನು ಬರೆಯುವಾಗ "ಅಲ್ಪಮತಿಯುಳ್ಳ ತಾನೆತ್ತ: ಸೂರ್ಯನಿಂದ ಹುಟ್ಟಿದ ರಘುವಂಶವೆತ್ತ. ಅದನ್ನು ಬರೆಯಲು ಯತ್ನಿಸುವದು ಚಿಕ್ಕದೋಣಿಯಿಂದ ಮಹಾಸಾಗರವನ್ನು ದಾಟಲು ಯತ್ನಿಸುವಂತೆ ಹಾಸ್ಯಾಸ್ಪದವಾಗಿದೆ."[೧] ಎಂದು ಸೌಜನ್ಯದ ಪರಾಕಾಷ್ಠತೆಯನ್ನು ತೋರಿಸುವನು; ಮತ್ತು ತನ್ನ ಅದ್ಭುತವಾದ ಕವಿತಾಶಕ್ತಿಯನ್ನು ಬಚ್ಚಿಡಲು ಯತ್ನಿಸಿರುವನು.

ಇದೇ ರಘುವಂಶದಲ್ಲಿ ಹುಟ್ಟಿದ ರಾಮನ ಉತ್ತರಚರಿತೆಯನ್ನು ನಾಟಕ ರೂಪದಿಂದ ಬರೆದ ಭವಭೂತಿಯು ತನ್ನ ಕವಿತಾಸಾಮರ್ಥ್ಯವನ್ನು ಹೇಳಿಕೊಳ್ಳುವಾಗ "ವಾಗ್ದೇವಿ ತನಗೆ ಮರುಳಾಗಿ ಬೆನ್ನುಹತ್ತಿರುವಳು."[೨] ಎಂದು ಒತ್ತಿಹೇಳುವನು. ಇವನಲ್ಲಿ ತನ್ನ ಹಿರಿಮೆಯನ್ನು ಜನತೆಗೆ ಸಾರಿ ಹೇಳಬೇಕೆಂಬ ಆತುರತೆ ಮಿತಿಮೀರಿದೆ.

ಹರಿಹರನು ಭವಭೂತಿಯ ವರ್ಗಕ್ಕೆ ಸೇರಿದವನು. "ತನ್ನಲ್ಲಿ ಮಹಾಕಾವ್ಯ ರಚಿಸುವ ಶಕ್ತಿಯಿದೆ, ತನ್ನ ಕಾವ್ಯ ಜಗನ್ಮಾನ್ಯವಾದುದು" ಎಂಬ ಆತ್ಮವಿಶ್ವಾಸವು ಅವನಿಗೆ ಇದೆ.

ಸುರತರುವಿನಂತೆ ಸುಜನರ | ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ |
ಕರಕಿರಣದಂತೆ ಹಂಪೆಯ | ಹರಿದೇವನ ಕಾವ್ಯಮುಖಿಳಸೇವ್ಯಂ ||

ಗಿ. ಕ. ೧-೧೬

---

೧. ಕ್ವ ಸೂರ್ಯಪ್ರಭವೋ ವಂಶಃ ಕ್ವ ಚಾಲ್ಪವಿಷಯಾ ಮತಿಃ ।
ತಿತೀರ್ಷುರ್ದುಸ್ತರಂ ಮೋಹಾದುಡುಪೇನಾಸ್ಮಿ ಸಾಗರಂ ॥

ರ. ವ. ೧-೧೨

೨. ಯಂ ಬ್ರಹ್ಮಾಣಮಿಯಂ ದೇವೀ ವಾಗ್ವಶ್ಯೇವಾನುವರ್ತತೇ ।
ಉತ್ತರಂ ರಾಮಚರಿತಂ ತತ್ಪ್ರಣೀತಂ ಪ್ರಯೋಕ್ಷ್ಯತೇ ॥

ಉ. ರಾ. ಚ. ಅಂಕ ೧ ಶ್ಲೋ. ೨

ಆದುದರಿಂದಲೇ ಅವನು ತಾನು

ಜಾಣಂ ರಸಿಕಂ ಸುಜನ | ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ ||
ಘೂಣಂ ವರಗಿರಿಜಾಕಲ್ಯಾಣಮನೊರೆದಂ ವಿವೇಕಿ ಹರೆಹರದೇವಂ ||

ಗಿ. ಕ. ೧

ಎಂದು ತಿಳಿಸಿರುವನು. ಆತ್ಮವಿಶ್ವಾಸವಿಲ್ಲದ ಆವ ಕವಿಯು ಹೀಗೆ ಹೇಳಿಕೊಳ್ಳಬಲ್ಲ? ತಮ್ಮ ಹೆಜ್ಜಳವನ್ನು ಸಾರುವ ಕವಿಗಳು ಕನ್ನಡಸಾಹಿತ್ಯದಲ್ಲಿ ಬಹುಜನರುಂಟು. ಆದರೆ ಅವರೆಲ್ಲರೂ ಹರಿಹರನಷ್ಟು ಉನ್ನತಸ್ಥಾನಕ್ಕೆ ಏರಿದವರಲ್ಲ.

ಗಿರಿಜಾಕಲ್ಯಾಣ ಕಾವ್ಯವು ಅವನು ಹೇಳುವಂತೆ

“ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ
ಗ್ದೇವ್ಯಾವಾಸಂ ವಿವೇಕೋನ್ನತಜಲನಿಧಿಸಂಸಾರವಿಶ್ರಾಮದೇಶಂ
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತು ಪೇಳ್ವಳ್ತಿಯಿಂದಂ
ಕಾವ್ಯಂ ಕಲ್ಪಾಂತಸ್ಥಾಯಿಯೆನಿಪ ನುಡಿಸತ್ಯಂ ಕವೀಶಾಧಿಪತ್ಯಂ”

ಗಿ. ಕ. ೧-೧೬

ಆಗಿರುವದು.

ಇತಿ ಶಿವಂ

ಮಾತೃಕೆಗಳ ವಿವರ

ಕನ್ನಡ ಕವಿಗಳಲ್ಲಿ ಗಣ್ಯ ಸ್ಥಾನವನ್ನು ಪಡೆದ ಹರಿಹರದೇವನ ಗಿರಿಜಾಕಲ್ಯಾಣ ಮಹಾಕಾವ್ಯವನ್ನು ಪರಿಶೋಧಿಸಿ ಮುದ್ರಿಸಲು ಸಹಾಯಕವಾದ ಹಸ್ತಲಿಖಿತ ಪ್ರತಿಗಳ ವಿವರ ಅವುಗಳ ಸಂಕೇತ ಮತ್ತು ಅವುಗಳನ್ನು ದೊರಕಿಸಿಕೊಟ್ಟ ಮಹನೀಯರ ಉಪಕಾರ ಸ್ಮರಣೆ ಮೊದಲಾದವುಗಳನ್ನು ನಿವೇದಿಸಲು ಸಂತೋಷವೆನಿಸುತ್ತದೆ. ಹಸ್ತಲಿಖಿತ ತಾಡವೋಲೆಯ ಮತ್ತು ಇತರ ಪ್ರತಿಗಳನ್ನು ಎರವು ಕೊಟ್ಟ ಮಹನೀಯರಿಗೆ ಋಣಿಯಾಗಿರುವೆನು. ಸುಮಾರು ೧೪ ಪ್ರತಿಗಳ ಸಹಾಯದಿಂದ ಈ ಕಾವ್ಯದ ಪಾಠಾಂತರಗಳನ್ನು ಸಂಗ್ರಹಿಸಲಾಗಿದೆ. ಕೆಲವು ತಾಡವೋಲೆಯ ಪ್ರತಿಗಳು ಬಹಳ ಹಳೆಯವೂ ಉಪಯುಕ್ತವಾದವೂ ಆಗಿವೆ. ಅವುಗಳ ವಿವರ :

ಅಚ್ಚಾದ ಪ್ರತಿಗಳು :

ಬೆ (೧):—

ಇದು ಇಸವಿ ೧೮೮೬ರಲ್ಲಿ ಬೆಂಗಳೂರ ಲಕ್ಷ್ಮೀವಿಲಾಸ ಪ್ರೆಸ್ಸಿನಲ್ಲಿ ಅಚ್ಚಾದುದು. ಆಗ ಸುಲಭ ಬೆಲೆಗೆ ದೊರೆಯುವ ತೆಳುವಾದ ಕಾಗದವನ್ನು ಉಪಯೋಗಿಸಿದ್ದಾರೆ. ಆದರೂ ಉಪಯುಕ್ತವಾಗಿದೆ. ಮುದ್ರಿತ ಪ್ರತಿಗಳಲ್ಲಿ ತೀರ ಹಳೆಯದೆಂದು ಉಪಯೋಗಿಸಿಕೊಳ್ಳಲಾಗಿದೆ. ಇದರ ಸಂಕೇತ "ಬೆ".

ಕಾ (೨):—

ಇದೂ ಮುದ್ರಿತ ಪ್ರತಿ. ಕಾವ್ಯಕಲಾನಿಧಿ ಮಾಲೆಯ ೧೪ನೆಯ ನಂಬರಿನ ಗ್ರಂಥ. ಇಸ್ವಿ ೧೯೦೫ರಲ್ಲಿ ಮೈಸೂರ ಸ್ವಾರ ಮುದ್ರಣಾಲಯದಲ್ಲಿ ಮುದ್ರಿತವಾಗಿವೆ. ಇದರ ಉಪೋದ್ಘಾತದಲ್ಲಿ ಮೂರು ಪ್ರತಿಗಳ ಸಹಾಯದಿಂದ ಈ ಪ್ರತಿಯನ್ನು ಸಿದ್ಧಮಾಡಲಾಗಿದೆಯೆಂದು ತಿಳಿಸಲಾಗಿದೆ. ಅವುಗಳ ವಿವರ ದೊರೆಯುವದಿಲ್ಲ. ಇದು ಮೈಸೂರ ಪ್ರಾಚ್ಯ ಪುಸ್ತಕಾಲಯ ಕ್ರಮಾಂಕ (ಓರಿಯೆಂಟಲ ಲಾಯಬ್ರರಿಯ ನಂಬರ) ೨೫೫ರ ತಾಡವೋಲೆಯ ಪ್ರತಿಗೆ ಸಮೀಪವಾಗಿದೆ. ಅದನ್ನೇ ವಿಶೇಷವಾಗಿ ಹೋಲುವದು. ಅಶುದ್ಧ ಶಬ್ದಗಳನ್ನೂ ವ್ಯಾಕರಣದ ಪ್ರಯೋಗಗಳನ್ನೂ ಅಲ್ಲಲ್ಲಿ ತಿದ್ದಿ ಸರಿಪಡಿಸಲಾಗಿದೆ. ಆಗಿನ ಪ್ರಸಿದ್ಧ ಕನ್ನಡ ಪಂಡಿತರಾದ ಕೈ. ವಾ. ಎನ್. ಆರ್. ಕರಿಬಸವಶಾಸ್ತ್ರಿಗಳೂ ಕಾವ್ಯ ಕಲಾನಿಧಿಯ ಸಂಪಾದಕರಾದ ವೈ. ವಾ. ರಾಮಾನುಜ ಅಯ್ಯಂಗಾರರೂ ಇದನ್ನು ತಿದ್ದಿರುವರು. ಇದು ಬಲು ಉಪಯುಕ್ತವಾಗಿದೆ. ಇದರ ಸಂಕೇತ "ಕಾ".

ಕೋರೀಕಾಗದದ ಪ್ರತಿಗಳು ಎರಡು :

ಸೆ, ಯ (೩–೪):—

ಪರದೇಶದಲ್ಲಿ ಸಿದ್ಧವಾದ ಕಾಗದಗಳು ಭಾರತಕ್ಕೆ ಬರುವದಕ್ಕಿಂತ ಮೊದಲು ಭಾರತದಲ್ಲಿಯೇ ಕೈಯಿಂದ ದಪ್ಪ ಮತ್ತು ಗಟ್ಟಿಮುಟ್ಟಾದ ಕಾಗದಗಳನ್ನು ಹಳೆಯ ಚಿಂದಿಗಳನ್ನು ನೆನಿಸಿ ಕುಟ್ಟಿ ಉತ್ತರ ಕರ್ನಾಟಕದಲ್ಲಿ ಮಾಡುತ್ತಿದ್ದರು. ಇಂಥ ಕಾಗದಗಳಿಗೆ ಕೋರೀಕಾಗದವೆಂದು ಹೆಸರು. ಅವು ತಾಡವೋಲೆಯ ನಂತರ ಉಪಯೋಗಕ್ಕೆ ಬಂದವು. ಅವುಗಳ ಮೇಲೆ ಅರಗಿನಿಂದ ಮಾಡಿದ ಮಸಿಯಿಂದ ಬರೆಯುತ್ತಿದ್ದರು. ಅವು ಸುಮಾರು ನೂರಿನ್ನೂರು ವರ್ಷಗಳ ಹಿಂದಿನವಿರಬಹುದು. ಅಂತಹ ಕಾಗದದ ಮೇಲೆ ಬರೆದ ಎರಡು ಗಿರಿಜಾಕಲ್ಯಾಣದ ಪ್ರತಿಗಳು ದೊರೆತವು. ಅವುಗಳಲ್ಲಿ ಒಂದು ಅಥಣಿಯ ಶೆಟ್ಟರ ಮಠದಲ್ಲಿಯದು. ಇದರ ಸಂಕೇತ "ಸೆ". ಮತ್ತೊಂದು ಯಕ್ಕುಂಡಿಮಠದಲ್ಲಿರುವ ಗ್ರಂಥಭಂಡಾರದ ೫೮೦ (ಅ) ಕಾಗದದ ಪ್ರತಿ. ಮಠದ ಶ್ರೀಗಳವರು ಕೃಪೆಮಾಡಿ ಉಪಯೋಗಿಸಲು ಅನುಮತಿ ಇತ್ತರು. ಇವರ ಸಂಕೇತ "ಯ". ಇವೆರಡು ಪ್ರತಿಗಳು ಈಗ ಉಪಲಬ್ಧವಿಲ್ಲದುದರಿಂದ ಇವುಗಳ ವರ್ಣನೆಯನ್ನು ಕೊಡಲು ಸಾಧ್ಯವಿಲ್ಲ.

ತಾಡವೋಲೆಯ ಪ್ರತಿಗಳು :

ಅ (೫):—

ಇದು ಮೈಸೂರ ಪ್ರಾಚ್ಯ ಪುಸ್ತಕಾಲಯ ಕ್ರಮಾಂಕ (ಓರಿಯಂಟಲ್ ಲಾಯಬ್ರರಿಯ ನಂಬರ) ೨೪೦ ನೆಯ ಪ್ರತಿ. ಇದು ಉತ್ತಮವಾದ ಕೈಬರೆಹವ ಶುದ್ಧ ಪ್ರತಿ. ಪಾಠಾಂತರಗಳು ಉತ್ತಮವಾಗಿವೆ. ಅರ್ಥವನ್ನು ಸ್ಪಷ್ಟಗೊಳಿಸುವವು. ವ್ಯಾಕರಣ ಪ್ರಯೋಗಗಳು ಸರಿಯಾಗಿವೆ. ಕೆಲವು ಕಡೆಗೆ ಹೊಸಗನ್ನಡ ಪ್ರತ್ಯಯಗಳು ಕಂಡುಬರುವವು. ಅಕ್ಷರಗಳು ಸ್ಪಷ್ಟ ಮತ್ತು ಸುಂದರವಾಗಿವೆ. ಪುಟಗಳು (ಓಲೆಗರಿಗಳು)೮೩ ಅವೆ. ಗರಿಯ ಎರಡೂ ಮಗ್ಗಲಿಗೆ ಬರೆಯಲಾಗಿದೆ. ಗರಿಗಳು ಒಂದರಿಂದ ೫೩ ಮತ್ತು ಗರಿಗಳು ೬೨ರಿಂದ ೮೩ ಇವುಗಳನ್ನು ಒಬ್ಬರು, ಗರಿಗಳು ೫೪ ರಿಂದ ೬೧ರ ವರೆಗೆ ಮತ್ತೊಬ್ಬರು ಬರೆದಂತೆ ತೋರುವದು. ಇಲ್ಲವೆ ಎರಡು ಬೇರೆ ಬೇರೆ ಕಟ್ಟುಗಳ ಗರಿಗಳಿಂದ ಈ ಕೈಬರೆಹದ ಪ್ರತಿಯನ್ನು ಮಾಡಿರಬಹುದು. ಗರಿಗಳು ೬೦, ೬೧ ಕಳೆದುಹೋಗಿವೆ. ಗರಿಗಳ ಉದ್ದ ೧೯ತ್ತಿ ಇಂಚುಗಳು. ಅಗಲ ೨ ಇಂಚುಗಳು, ಎರಡೂ ಬದಿಗೆ ಮಾರ್ಜಿನ ೧ ಇಂಚು, ಅಕ್ಷರಗಳಿದ್ದ ಸ್ಥಳ ೧೬ತ್ತಿ ಇಂಚುಗಳು ಉದ್ದ, ೧ಕ್ಕಿ ಇಂಚು ಅಗಲ. ಪ್ರತಿ ಪುಟದಲ್ಲಿ ಒಂಬತ್ತು ಸಾಲುಗಳಿವೆ. ಸಾಲುಗಳಿಗೆ ಅಂಕಿಗಳನ್ನು ಹಾಕಿದ್ದಾರೆ. ಪ್ರತಿ ಸಾಲಿನಲ್ಲಿ ಸುಮಾರು ೮೦ ಅಕ್ಷರಗಳಿವೆ.

ಗ್ರಂಥಾರಂಭದಲ್ಲಿ "ಶ್ರೀ ಗಣೇಶಶಾರದಾಗುರುಬ್ಯೋನ್ನಮಃ ಶ್ರೀ ಪಂಪಾ ವಿರೂಪಾಕ್ಷಾಯ ನಮಃ ಶ್ರೀ ಶೈಲೇಶಾಯ ನಮಃ ಶ್ರೀ ಕಾಶೀ ವಿಶ್ವಪತಯೇ ನಮಃ ಶ್ರೀ ಭೋಗಚಂದ್ರಮೌಳೀಶ್ವರಾಯನಮಃ ಶ್ರೀ ನಂದಾವರದ ಚೌಡೇಶ್ವರಿ ಅಮ್ಮನವರ ದಿವ್ಯ ಚರಣಾರವಿಂದವೇ ಗತಿ. ಶ್ರೀ ಗಿರಿರಾಜಸುತಾಕುಚಕುಂಕು ಮಾಂಕಿತ ದಿವ್ಯ–ವಕ್ಷಸ್ಥಲ–ತ್ರಿಮೂರ್ತ್ಯಾತ್ಮಕ–ಸಾಂಬಶಿವಚರಣಾರವಿಂದಾಭ್ಯಾಮ್ ನಮಃ ಶ್ರೀ ಗಿರಿಜಾಕಲ್ಯಾಣವ ಬರೆವುದಕ್ಕೆ ನಿರ್ವಿಘ್ನಮಸ್ತು ಶುಭಮಸ್ತು ಶೋಭನಮಸ್ತು" ಎಂದೂ ಪ್ರತಿಯೊಂದು ಆಶ್ವಾಸದ ಆರಂಭದಲ್ಲಿ ಮೇಲೆ ಸ್ಮರಿಸಿದ ದೇವರುಗಳ ಹೆಸರುಗಳಲ್ಲಿ ಒಂದೂ ಆಶ್ವಾಸಾಂತದಲ್ಲಿ "ಸದಾಶಿವಾರ್ಪಣ ಮಸ್ತು" ಎಂದೂ ಅದೆ. ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ, "ಇದು ಸಮಸ್ತ – ಸುರನಿಕರ – ಮುಕುಟ–ಮಣಿಗಣ– ಖಚಿತ– ದಿನಕರ–ಕರಾಧಿಕ್ಯಮಾನ–ಮಾಣಿಕ್ಯ – ಪ್ರಭಾಪುಂಜರಂಜಿತ – ಪಂಪಾವಿರೂಪಾಕ್ಷ– ಶ್ರೀ ಪಾದಕಮಲ– ಮಕರಂದ – ಮಧುಕರಾಯಮಾಣ – ಸತ್ಕವೀಶ್ವರ ಹಂಪೆಯ ಹರಿಹರದೇವ ವಿರಚಿತಮಪ್ಪ ಶ್ರೀ ಗಿರಿಜಾಕಲ್ಯಾಣ ಮಹಾಪ್ರಬಂಧದೊಳು" ಎಂಬ ಗದ್ಯವೂ ಅವೆ.

ಈ ಪ್ರತಿಯಲ್ಲಿ ಱ, ೞ ಗಳನ್ನು ಉಪಯೋಗಿಸಿಲ್ಲ. ಈ, ಏ, ಓ (ದೀರ್ಘ ಸ್ವರ) ಗಳ ಚಿನ್ಹವಿದೆ. ಈ ಪ್ರತಿಯನ್ನು ಬರೆದುಕೊಂಡ ಕಾಲವನ್ನು ಕಡೆಯ ಗರಿಯ ಕಡೆಯ ಸಾಲಿನಲ್ಲಿ ಸೂಚಿಸಲಾಗಿದೆ. ಅದು "ಅಸ್ಯ ಶ್ರೀಲಿವಾಹನ ಶಕ ವರ್ಷಂಗಳು ೧೬೮೭ನೆಯ ಪಾರ್ಥಿವನಾಮ ಸಂವತ್ಸರದ ಚೈತ್ರ ಬ|| ೮ ಭಾನುವಾರ ಶುಭಮುಹೂರ್ತ ಶುಭನಕ್ಷತ್ರ ಶುಭಯೋಗ ಶುಭಕರಣದಲ್ಲಿ ಶ್ರೀಮಾನ್ ಮಹಾ ನಾಯಕಾಚಾರ್ಯ...." ಎಂದಿದೆ. ಯಾರು ಯಾರ ಸಲುವಾಗಿ ಪ್ರತಿಮಾಡಿಕೊಂಡ ರೆಂಬುದು ಗೊತ್ತಾಗುವದಿಲ್ಲ. ಸ್ವಾಮಿಕನ್ನು ಪಿಳ್ಳೆಯವರ ಜಂತ್ರಿಯ ಪ್ರಕಾರ ಪ್ರತಿಮಾಡಿಕೊಂಡ ಕಾಲ ಕ್ರಿ. ಶ. ೧೭೬೫ ಎಪ್ರೀಲ ತಿಂಗಳ ೧೩ನೇಯ ತಾರೀಖಗೆ ಸರಿ ಹೋಗುವದು. ಆ ದಿವಸ ಶನಿವಾರವಿರುವದು. ತಿಥಿಯು ರವಿವಾರದವರೆಗೆ ಮುಂದುವರಿದುದರಿಂದ ತಾರೀಖು ೧೪ ರವಿವಾರದಂದು ಪ್ರತಿಮಾಡಿಕೊಳ್ಳುವದು ಮುಗಿದಿರಬೇಕು. ಈ ಪ್ರತಿಯ ಸಂಕೇತ "**ಅ.**"

ಓ (೬):—

ಇದು ಮೈಸೂರ ಪ್ರಾಚ್ಯಪುಸ್ತಕಾಲಯ (ಗವ್ಹರ್ನಮೆಂಟ ಓರಿಯಂಟಲ್ ಲಾಯಬ್ರರಿಯ) ನಂಬರ ೩೩೫ನೆಯ ಪ್ರತಿ. ಬಹಳ ಜೀರ್ಣವಾಗಿದೆ. ಪ್ರತಿ ಗರಿಯ ಉದ್ದ ೧೨ ಇಂಚು, ಅಗಲ ೧ ಇಂಚು. ಮಾರ್ಜಿನ್ ಎರಡೂ ದಂಡೆಗೆ ಅರ್ಧ ಇಂಚು. ಕೆಲವು ಗರಿಗಳು ಚೆನ್ನಾಗಿವೆ. ಬಹುಭಾಗವು ಉಪಯೋಗಮಾಡಿಕೊಳ್ಳಲು ಬಾರದಷ್ಟು ಜೀರ್ಣವಾಗಿದೆ.

ಪ್ರತಿಯೊಂದು ಗರಿಯಲ್ಲಿ ೩ರಿಂದ ೫ರವರೆಗೆ ಸಾಲುಗಳಿವೆ. ಪ್ರತಿಯೊಂದು ಸಾಲಿನಲ್ಲಿ ಸುಮಾರು ೪೦ ಅಕ್ಷರಗಳಿವೆ. ಮೂರು ಸಾಲುಗಳುಳ್ಳ ಗರಿಗಳೂ ಬಹಳವಾಗಿವೆ.

ಆರಂಭದಲ್ಲಿ "ಶ್ರೀ ಗಿರಿಮಲ್ಲಿಕಾರ್ಜುನಲಿಂಗಾಯನಮಃ ಶುಭಮಸ್ತು ಶೋಭನ ಮಸ್ತು ಹಂಪೆಯ ಹರಿದೇವ ವಿರಚಿತಮಪ್ಪ ಗಿರಿಜಾಕಲ್ಯಾಣಕ್ಕೆ ಮಂಗಳಮಸ್ತು" ಎಂದೂ ಆಶ್ವಾಸಗಳ ಅಂತ್ಯದಲ್ಲಿ ಸಾಮಾನ್ಯವಾಗಿರುವ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ "ಇದು ಸಮಸ್ತ ಸುರನಿಕರ....ಗಿರಿಜಾಕಲ್ಯಾಣ ಪ್ರಬಂಧದೊಳ್.... ಆಶ್ವಾಸಂ ಮಂಗಳಮಹಾ ಶ್ರೀ ಶ್ರೀ" ಎಂಬ ಗದ್ಯವೂ ಇವೆ.

ಅನುಸ್ವಾರದ ಮುಂದೆ ಬಂದ ಅಕ್ಷರಗಳು ದ್ವಿತ್ವವಾಗಿ ಬರೆಯಲ್ಪಟ್ಟಿವೆ. ಉದಾ:—ಸಂಕ್ಕುಳ, ಅಂಕ್ಕುರ, ಸಂತ್ತತಂ. ಎ,ಒ ಗಳ ದೀರ್ಗಸೂಚಕ ಚಿಹ್ನವಿಲ್ಲ. 'ಪ'ದ ಬದಲು 'ಹ'ದ ಪ್ರಯೋಗವಿದೆ. ಉದಾ:— ಹವಳ, ಹಿಂಗದೆ, ಹೊಸ. ಪದ್ಯಗಳ ಸಂಖ್ಯೆ ಕಡಿಮೆ ಇದೆ. ಈ ಪ್ರತಿಯ ಸಂಕೇತ "ಓ".

ಕ (೭):—

ಇದು ಮೈಸೂರ ಪ್ರಾಚ್ಯ ಪುಸ್ತಕಾಲಯ ಕ್ರಮಾಂಕ (ಓರಿಯಂಟಲ್ ಲಾಯಬ್ರರಿಯ) ೨೫೫ನೆಯ ನಂಬರಿನ ಪ್ರತಿ. ಈ ಕಟ್ಟಿನಲ್ಲಿದ್ದ ಗರಿಗಳಲ್ಲಿ ೧ ರಿಂದ ೧೪೯ ರ ವರೆಗೆ ಕಾವ್ಯ ಪೂರ್ಣವಾಗಿ ಬರೆಯಲಾಗಿದೆ. ಪ್ರತಿ ಗರಿಯ ಉದ್ದ ೯ ಇಂಚು, ಅಗಲ ಸುಮಾರು ೨ ಇಂಚು, ಮಾರ್ಜಿನ್ ಎರಡೂ ಬದಿಯ ದಂಡೆಯ ಕಡೆಗೆ ಸುಮಾರು ೩/೪ ಇಂಚು. ಪ್ರತಿ ಗರಿಯಲ್ಲಿ ೧೦ ಸಾಲುಗಳಿವೆ. ಅಲ್ಲಲ್ಲಿ ೧೧ ಸಾಲಿನ ಪತ್ರಗಳೂ ಅವೆ. ಪ್ರತಿ ಪತ್ರದ ಪ್ರತಿ ಸಾಲಿಗೆ ಎರಡೂ ಕಡೆಗೆ ಸಾಲುಗಳನ್ನು ತೋರಿಸುವ ಅಂಕಿಗಳಿವೆ. ಪ್ರತಿ ಸಾಲಿನಲ್ಲಿ ಸುಮಾರು ೩೫ ಅಕ್ಷರಗಳಿವೆ. ಅಕ್ಷರಗಳು ಸುಂದರ ಮತ್ತು ಸ್ಪಷ್ಟವಾಗಿವೆ. ಱ, ೞ ಗಳ ಉಪಯೋಗವಿಲ್ಲ. ಇ, ಎ, ಒ ಇವುಗಳ ದೀರ್ಘ ಚಿಹ್ನದ ಉಪಯೋಗ ಸಾಮಾನ್ಯವಾಗಿ ಇಲ್ಲ. ಎಲ್ಲಾದರೊಂದು ಕಡೆಗೆ ಈಕಾರ ಸೂಚಕ ದೀರ್ಘ ಚಿಹ್ನವನ್ನು ಬರೆದಂತಿದೆ. ಬಿಟ್ಟು ಹೋದ ಅಕ್ಷರ ಶಬ್ದಗಳನ್ನು ಸಣ್ಣ ಅಕ್ಷರಗಳಲ್ಲಿ ಮಾರ್ಜನದಲ್ಲಾಗಲೀ ಸಾಲುಗಳ ನಡುವೆಯಾಗಲೀ ಬರೆದಿದೆ. ಪದ್ಯಗಳಿಗೆ ಸಂಖ್ಯೆ ಹಾಕಿಲ್ಲ. ಆದರೆ ಆಶ್ವಾಸಗಳ ಅಂತ್ಯದಲ್ಲಿ ಆಯಾ ಆಶ್ವಾಸಗಳಲ್ಲಿರುವ ಕಂದ, ವೃತ್ತ, ವಚನಗಳ ಒಟ್ಟು ಸಂಖ್ಯೆಯನ್ನೂ ಗ್ರಂಥಾಂತ್ಯದಲ್ಲಿ "ಅಂತೂ ಆಶ್ವಾಸ ೧೦ಕ್ಕೆ ಗದ್ಯ ೧೧ ವೃತ್ತ ೨೬೪ ಕಂದ ೭೧೪ ವಚನ ೩೮೧, ಅಂತೂ ಗದ್ಯ, ವೃತ್ತ, ಕಂದ, ವಚನ ಸಹ ೧೩೭೦ಕ್ಕಂ ಮಂಗಳಮಹಾ" ಎಂದೂ ಅದೆ. ಹೊಸಗನ್ನಡ ಪ್ರಯೋಗಗಳು ಅಲ್ಲಲ್ಲಿ ಬಂದಿರುವವು.

ಗ್ರಂಥಾರಂಭದಲ್ಲಿ "ಶ್ರೀ ಭವಾನಿ ಶಂಕರಾಭ್ಯಾಂನಮಃ ಶುಭಮಸ್ತು ಗಿರಿಜಾ ಕಲ್ಯಾಣ ಪದ್ಯ ಕಾವ್ಯದ ಪುಸ್ತಕಕ್ಕೆ ನಿರ್ವಿಘ್ನಮಸ್ತು" ಎಂದೂ, ಪ್ರಥಮಾಶ್ವಾಸದ ಆರಂಭದಲ್ಲಿ "ಶ್ರೀ ಭವಾನಿಶಂಕರಾಭ್ಯಾನಮಃ ಶ್ರೀ ಸೀತಾರಾಮಾಭ್ಯಾಂ ನಮಃ ಶ್ರೀ ಭಾರತಿ ಸ್ವಯಂಭೂಭ್ಯಾಂ ನಮಃ ಶ್ರೀ ಗಣಾಧಿಪತೆಯೇ ನಮಃ ಶ್ರೀಮದ್ಗುರು ಶಂಕರಾಚಾರ್ಯಾಯ ನಮಃ ಶುಭಮಸ್ತು ನಿರ್ವಿಘ್ನಮಸ್ತು" ಎಂದೂ, ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ, "ಇದು ಸಮಸ್ತ ಸುರನಿಕರ..." ಎಂಬ ಗದ್ಯವೂ ಅವೆ. ಪ್ರತಿ ಆಶ್ವಾಸದ ಅಂತ್ಯದಲ್ಲಿ ಆ ಆಶ್ವಾಸದಲ್ಲಿ ಬಂದ ಗದ್ಯ, ಪದ್ಯ, ಕಂದ, ವಚನ ಇವುಗಳ ಸಂಖ್ಯೆಯನ್ನೂ ಬರೆಯಲಾಗಿದೆ. ೧೦ನೇಯ ಆಶ್ವಾಸದ ಅಂತ್ಯದಲ್ಲಿ ಹತ್ತೂ ಆಶ್ವಾಸಗಳಲ್ಲಿ ಬಂದ ಗದ್ಯ, ಪದ್ಯ, ಕಂದ, ವಚನಗಳ ಸಂಖ್ಯೆಗಳನ್ನು ಕೂಡಿಸಿ ಒಟ್ಟು ಸಂಖ್ಯೆಯನ್ನು ಕೊಡಲಾಗಿದೆ. ಆದರೆ ಅದು ಸರಿಯಾಗಿಲ್ಲ. ಎಣಿಸಿ ನೋಡಿದರೆ ವ್ಯತ್ಯಾಸವಾಗುವದು. ಪ್ರತಿಯೊಂದು ಆಶ್ವಾಸದ ಅಂತ್ಯದಲ್ಲಿ ಕೊಟ್ಟ ಅಂಕಿಗಳನ್ನು ಕೂಡಿಸಿದರೆ ಒಟ್ಟು ಗದ್ಯ ೧೧ ವೃತ್ತ ೩೦೬ ಕಂದ ೭೭೫ ವಚನ ೩೮೧, ಎಲ್ಲಾ ಕೂಡಿಸಿ ೧೪೭೩ ಆಗುವದು.

ಈ ಪ್ರತಿಯಲ್ಲಿ ನಡುನಡುವೆ ಕೆಲಕೆಲವು ಶಬ್ದಗಳೂ ವಾಕ್ಯಗಳೂ ಬಿಟ್ಟು ಹೋಗಿವೆ. ಹಾಗೆ ಲುಪ್ತವಾದ ಕಡೆಗಳಲ್ಲಿ ಸ್ಥಳವನ್ನು ಬಿಟ್ಟಿದ್ದಾರೆ. ಯಾವ ಪ್ರತಿಯನ್ನು ನೋಡಿ ಇದನ್ನು ಬರೆದುಕೊಂಡಿರುವರೊ ಅದರಲ್ಲಿಯೂ ಶಬ್ದಗಳು ವಾಕ್ಯಗಳು ಪದ್ಯಗಳ ಭಾಗಗಳು ಲುಪ್ತವಾಗಿರಬೇಕು. ಪತ್ರ ೧೫೦ರಲ್ಲಿ ಪ್ರತಿಯನ್ನು ಬರೆದುಕೊಂಡ ಕಾಲವನ್ನು ತಿಳಿಸಲಾಗಿದೆ. ಅದು ಈ ಪ್ರತಿಯ ಕಾಲವೊ ಅಥವಾ ಇದರ ಮೂಲ ಪ್ರತಿಯ ಕಾಲವೋ ಎಂಬುದನ್ನು ನಿರ್ಣಯಿಸಲು ಸಾಧ್ಯವಿಲ್ಲ. ಬಹುತರ ಮೂಲ ಪ್ರತಿಯ ಕಾಲವಾಗಿರಬಹುದು. ಅದು ಹೀಗಿದೆ:— "ಶುಭಮಸ್ತು ವೃತ್ತ:—

ದುರ್ಮತಿಬ್ದಾಭ್ರಸ್ಥಿತಸಿತಪಂಚಮ್ಯಾರ್ಕವಾರೇ ಮೃಡಾಣೀ |
ಶರ್ಮತ್ಕಲ್ಯಾಣಕಾವ್ಯಂ ಲಿಖಿಸಿದ ತಿಮ್ಮಾಮಾತ್ಯಸತ್ಪುತ್ರನುದ್ಯ |
ದ್ದರ್ಮ ಶ್ರೀ ವೆಂಕಟಾಖ್ಯಂ ಸುರವಿನುತ ಮಹಾಮೇರುಭುಬ್ಯತ್ಕುಲೇಂದ್ರಂ |
ಧರ್ಮಾಶ್ರಿತರ್ಶಮನ ಪ್ರಭಾವನಭವಭಕ್ತಂ ಬಳಕ್ಕಳ್ಕರಿಂ ||"

ಎಂಬ ಅಶುದ್ಧ ಪದ್ಯವದೆ. ಅದೇ ಪತ್ರದ ಮುಂದಿನ ಎರಡು ಸಾಲುಗಳಲ್ಲಿ "ದುರ್ಮತಿ ಸಂವತ್ಸರದ ಭಾದ್ರಪದ ಶುದ್ಧ ೧೨ ಗುರುವಾರ ಗುಮ್ಮಳಾಪುರದ ಶಾನಭಾಗ ತಿಮ್ಮಣ್ಣನ ಮಗ ವೆಂಕಣ್ಣ ಬರೆದ ಗಿರಿಜಾಕಲ್ಯಾಣ ಪುಸ್ತಕಕ್ಕೆ ಜಯ ಮಂಗಳಮಹಾ" ಎಂದಿದೆ. ಮೇಲಿನ ಪದ್ಯದಲ್ಲಿದ್ದ ಮಿತಿಗೂ ಈ ಗದ್ಯದಲ್ಲಿದ್ದ ಮಿತಿಗೂ ಹೊಂದಿಕೆ ಇಲ್ಲ. ಗದ್ಯದಲ್ಲಿದ್ದ ಮಿತಿಯು ಸ್ವಾಮಿ ಕನ್ನುಪಿಳ್ಳೆಯವರ

ಜಂತ್ರಿಯ ಪ್ರಕಾರ ಶಕ ೧೬೬೩ ದುರ್ಮತಿ ಸಂವತ್ಸರ ಭಾದ್ರಪದ ಶುದ್ಧ ೧೨ ಗುರುವಾರ ಸರಿ ಹೋಗುವದು. ಇದಕ್ಕೆ ಸಮಾನವಾದ ದಿವಸ ಕ್ರಿ. ಶ. ೧೭೪೧ ಸಪ್ಟಂಬರ ೧೦ ಗುರುವಾರ. ಈ ಪ್ರತಿಯ ಸಂಕೇತ, "ಕ".

ಚ (ಅ):—

ಇದು ಮೈಸೂರ ಪ್ರಾಚ್ಯಪುಸ್ತಕಾಲಯ ಕ್ರಮಾಂಕ (ಓರಿಯಂಟಲ್ ಲಾಯಬ್ರರಿಯ ನಂಬರ) ೩೧೪ನೇಯ ಪ್ರತಿ. ಈ ಕಟ್ಟಿನಲ್ಲಿದ್ದ ೫೪ನೇಯ ಗರಿಯಿಂದ ೧೦೭ನೆಯ ಗರಿಯವರೆಗೆ ಗಿರಿಜಾಕಲ್ಯಾಣವು ಬರೆಯಲ್ಪಟ್ಟಿದೆ. ಗರಿ ೯೩, ೯೪ ಕಳೆದುಹೋಗಿದೆ. ಗರಿ ೫೪ ರಿಂದ ೯೨ರ ವರೆಗೆ ಒಂದು ಪ್ರಕಾರದ ಬರೆಹ ಮತ್ತು ಗರಿ ೯೫ ರಿಂದ ೧೦೭ ರ ವರೆಗೆ ಮತ್ತೊಂದು ಪ್ರಕಾರದ ಬರೆಹವಿರುವದರಿಂದ ಎರಡು ಬೇರೆ ಬೇರೆ ತಾಡವೋಲೆಯ ಗ್ರಂಥಗಳೊಳಗಿನ ಗರಿಗಳನ್ನು ಕೂಡಿಸಿ ಈ ಪ್ರತಿಯನ್ನು ಮಾಡಿದಂತೆ ಕಂಡುಬರುವದು. ಈ ಎರಡೂ ಭಾಗಗಳ ಗರಿಗಳು ಸಮಾನವಾಗಿವೆ. ಅವುಗಳ ಉದ್ದ ೧೩ ಇಂಚು. ಅಗಲ ೨ ಇಂಚು. ಮಾರ್ಜನ್ ಎಡಬದಿಗೆ ೧ ಇಂಚು ಬಲಬದಿಗೆ ಅರ್ಧ ಇಂಚು. ಮೊದಲನೆಯ ಭಾಗ (ಗರಿ ೫೪ರಿಂದ ೯೩) ದಲ್ಲಿ ಪ್ರತಿ ಗರಿಯಲ್ಲಿ ಸಾಲುಗಳು ೧೪. ಪ್ರತಿ ಸಾಲಿನಲ್ಲಿ ಸುಮಾರು ೬೬ ಅಕ್ಷರಗಳಿವೆ. ಎರಡನೆಯ ಭಾಗ (ಗರಿ ೯೫ ರಿಂದ ೧೦೭) ದಲ್ಲಿ ಪ್ರತಿ ಗರಿಯಲ್ಲಿ ೧೦ ಸಾಲುಗಳು, ಪ್ರತಿ ಸಾಲಿನಲ್ಲಿ ೬೦ ಅಕ್ಷರಗಳು ಇವೆ.

ಗ್ರಂಥಾರಂಭದಲ್ಲಿ "ಶ್ರೀಗುರು ಸದಾಶಿವ ಸಂಗಮೇಶಾಯ ನಮಃ ಗಿರಿಜಾಕಲ್ಯಾಣವ ಬರೆವುದಕ್ಕೆ ಶುಭಮಸ್ತು ಆಯುರಾರೋಗ್ಯಮಸ್ತು, ಐಶ್ವರ್ಯಮಸ್ತು ನಿರ್ವಿಘ್ನಮಸ್ತು ನಮಃ ಶ್ರೀ ಪಾರ್ವತಿಪತಯೇ ನಮಃ ನಿರಂತರಾಯಸ್ತು" ಎಂದೂ, ಆಶ್ವಾಸಗಳ ಆರಂಭದಲ್ಲಿ "ಶ್ರೀ ಸದಾಶಿವಸಂಗಮೇಶಾಯನಮಃ ಶ್ರೀಕಂಠ ಗುರುವೇ ನಮಃ" ಎಂದೂ ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ "ಇದು ಸಮಸ್ತ ಸುರನಿಕರ ಮುಕುಟ— " ಎಂಬ ಗದ್ಯವೂ ಆವೆ.

ಈ ಪ್ರತಿಯಲ್ಲಿ ಱ ೞ ಗಳ ಪ್ರಯೋಗವಿಲ್ಲ. ಆದರೆ ಅಲ್ಲಲ್ಲಿ ಱ ಕಾರವನ್ನು ಉಪಯೋಗಿಸಲಾಗಿದೆ. ರೇಫ ದ ಹಿಂದಿನ ಅಕ್ಷರವು ದ್ವಿತ್ವವಾಗಿದೆ. ಉದಾ:— ಮಾರ್ಗ್ಗ, ಪಾರ್ವತಿ, ಮುಂದಿರ್ದ್ದ, ಸರ್ಪ್ಪಾಭರಣ. ಇದರಲ್ಲಿ ವ್ಯಾಕರಣ ದೋಷಗಳು ತೀರ ಕಡಿಮೆಯಾಗಿವೆ. ಹಳೆಗನ್ನಡ ಪ್ರಯೋಗಗಳು ಹೆಚ್ಚಾಗಿವೆ. ಅಕ್ಷರಗಳ ಮೇಲಿಂದ ನೋಡಿದರೆ ಈ ಪ್ರತಿಯ ಕೆಲವು ಅಕ್ಷರಗಳಲ್ಲಿ ಪುರಾತನ ಲಕ್ಷಣಗಳಿದ್ದರೂ ಅಷ್ಟು ಪುರಾತನವಲ್ಲವೆಂದು ತೋರುವದು. ಒಂದು ಪುರಾತನ ಪ್ರತಿಯನ್ನು ಮುಂದಿಟ್ಟುಕೊಂಡು ಪ್ರತಿಮಾಡಿಕೊಂಡಿರಬಹುದು. ಇ, ಎ, ಒ, ಇವುಗಳ ದೀರ್ಘ ಚಿಹ್ನದ ಗುರುತುಗಳನ್ನು ತೋರಿಸಿಲ್ಲ.

ಗರಿ ೧೦೭ರಲ್ಲಿ "ಶ್ರೀಮತು ಕಾಳಯುಕ್ತಿ ಸಂವತ್ಸರದ ಮಾಘ ಶುದ್ಧ ಪ್ರತಿಪದೆಯಲ್ಲಿ ಗಿರಿಜಾಕಲ್ಯಾಣವು ಬರೆದು ಸಮಾಪ್ತವಾಯಿತು. ಶ್ರೀ ಗುರುವೇ ಗತಿ ಶ್ರೀಗುರು ಪಾದಾರವಿಂದವೇ ಗತಿ" ಎಂದಿದೆ. ಇಲ್ಲಿ ಶಕವರ್ಷ ಮತ್ತು ವಾರ ಇಲ್ಲದುದರಿಂದ ಕಾಲ ನಿರ್ಣಯಿಸುವದು ಸುಲಭವಲ್ಲ. ಅದರೂ ಸ್ವಾಮಿಕನ್ನು ಪಿಳ್ಳೆಯವರ ಜಂತ್ರಿಯ ಪ್ರಕಾರ ಈ ಮಿತಿಯು ಕಾಲಯುಕ್ತಿ ಸಂವತ್ಸರ ಮಾಘ ಶುದ್ಧ ಪ್ರತಿಪದೆಯು ಶಕ ೧೬೦೧ರಲ್ಲಿ ಅಂದರೆ ಕ್ರಿ. ಶ. ೧೬೭೯ ಜಾನೇವರಿ ೩ಕ್ಕೆ ಸರಿ ಹೋಗುವದು. ಮಾಘಶುದ್ಧ ೧ ತಿಥಿಯು ಗುರುವಾರ ಆರಂಭವಾಗಿ ಶುಕ್ರವಾರ ಮುಗಿಯುವದು. ಈ ಪ್ರತಿಯಲ್ಲಿರುವ ಪುರಾತನ ಚಿಹ್ನಗಳಿಂದ ಇದು ಸುಮಾರು ಇನ್ನೂರು ವರ್ಷ ಹಳೆಯದಿರಬಹುದು. ಈ ಪ್ರತಿಯ ಸಂಕೇತ "ಡ" ಎಂಬುದು.

ಮೇಲಿನ ಅ, ಓ, ಕ, ಡ ಪ್ರತಿಗಳನ್ನು ಮೈಸೂರ ಪ್ರಾಚ್ಯಪುಸ್ತಕಾಲಯದಿಂದ ಎರವು ಪಡೆದು ಆಗ ಅಲ್ಲಿಯ ಮುಖ್ಯಾಧಿಕಾರಿ(ಕ್ಯೂರೇಟರ)ಗಳಾಗಿದ್ದ ಕೈ. ವಾ. ಎಮ್. ಎಸ್. ಬಸವಲಿಂಗಯ್ಯನವರು ಎಮ್. ಎ., ಬಿ. ಎಲ್. ಅವರ ಅನುಮತಿಯಿಂದ ಉಪಯೋಗಿಸಿಕೊಳ್ಳಲಾಯಿತು. ಅವರ ಉಪಕಾರವನ್ನು ಪುನಃ ಪುನಃ ಸ್ಮರಿಸಿ ಅವರಿಗೂ ಪ್ರಾಚ್ಯಪುಸ್ತಕಾಲಯದ ಅಧಿಕಾರಿಗಳಿಗೂ ನನ್ನ ಕೃತಜ್ಞತೆಯನ್ನು ಅರ್ಪಿಸುವೆನು.

ದಾ (೯) :—

ಇದನ್ನು ದಾವಣಗೇರಿಯ, ಈಗ ಧಾರವಾಡದಲ್ಲಿರುವ, ಮಲ್ಲಾಬಾದಿ ವೀರಭದ್ರಪ್ಪನವರು ದಯವಿಟ್ಟು ದೊರಕಿಸಿಕೊಟ್ಟ ಪ್ರತಿ. ಯಾವದೋ ಒಂದು ಕಟ್ಟನಲ್ಲಿರುವ ಓಲೆಯಗರಿಗಳು ೯೩ ರಿಂದು ೧೩೧ರ ವರೆಗೆ ೩೮ ಓಲೆಗರಿಗಳಲ್ಲಿ ಈ ಗಿರಿಜಾಕಲ್ಯಾಣ ಕಾವ್ಯವು ಪೂರ್ಣವಾಗಿ ಬರೆಯಲ್ಪಟ್ಟಿದೆ. ಅಕ್ಷರಗಳು ಬಹಳ ಸುಂದರ ಮತ್ತು ಸ್ಪಷ್ಟವಾಗಿವೆ. ಪ್ರತಿ ಗರಿಯ ಉದ್ದ ೧೮ ಇಂಚು, ಅಗಲ ೨ ಇಂಚು. ಎಡಕ್ಕೆ ಸುಮಾರು ೩ ಇಂಚು, ಬಲಕ್ಕೆ ಸುಮಾರು ಅರ್ಧ ಇಂಚು ಸ್ಥಳ ಬಿಟ್ಟಿದೆ. ಗರಿಗಳ ಮೇಲೂ ಕೆಳಗೂ ಸ್ವಲ್ಪ ಸ್ಥಳವನ್ನು ಬಿಟ್ಟಿರುವದರಿಂವ ಮೇಲಿನ ಮತ್ತು ಕೆಳಗಿನ ಸಾಲುಗಳಲ್ಲಿ ಅಕ್ಷರಗಳು ಹೋಗಿಲ್ಲ. ಪ್ರತಿಯೊಂದು ಓಲೆ ಗರಿಯಲ್ಲಿ ೧೬ ಸಾಲುಗಳಿವೆ. ಪ್ರತಿಯೊಂದು ಸಾಲಿನಲ್ಲಿ ಸುಮಾರು ೧೧೦ ಅಕ್ಷರಗಳಿವೆ.

ಈ ಪ್ರತಿಯಲ್ಲಿ ಹಲವು ಕಡೆ ಪ್ರತಿ ಮಾಡಿದವರ ಹಸ್ತದೋಷಗಳು ಬಹಳವಾಗಿವೆ. ನಡುನಡುವೆ ಕೆಲವು ಶಬ್ದಗಳೂ ವಾಕ್ಯಗಳೂ ಹಾರಿಹೋಗಿವೆ. ಱಕಾರದ ಉಪಯೋಗವಿರುತ್ತದೆ. ೞ ದ ಪ್ರಯೋಗವಿಲ್ಲ. ಹೊಸಗನ್ನಡ ಪ್ರಯೋಗಗಳು ಅಲ್ಲಲ್ಲಿ ಬಂದಿವೆ. ಇ, ಎ, ಒ ಅಕ್ಷರಗಳ ದೀರ್ಘ ಚಿಹ್ನವಿಲ್ಲ.

ಗ್ರಂಥಾದಿಯಲ್ಲಿ "ಶ್ರೀಗುರು ಬಸವಲಿಂಗಾಯ ನಮಃ ಗಿರಿಜಾಕಲ್ಯಾಣ ಬರೆಯುವದಕ್ಕೆ ಶುಭಮಸ್ತು ಶೋಭನಮಸ್ತು" ಎಂದೂ, ಆಶ್ವಾಸಗಳ ಕೊನೆಗೆ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ, "ಇದು ಸಮಸ್ತ ಸುರನಿಕರ ಮುಕುಟ..." ಎಂಬ ಗದ್ಯವೂ ಅವೆ. ಕಂದ ವೃತ್ತಗಳೆಲ್ಲಕ್ಕೂ ಸಂಖ್ಯೆ ಹಾಕಿದೆ. ೧ನೇಯ ಆಶ್ವಾಸದ ಕೊನೆಗೆ, ಅಂತೂ ಆಶ್ವಾಸ ೧ಕ್ಕಂ ಕಂದ ವೃತ್ತ ವಚನಂಗಳು ೧೨೪೭ಕ್ಕಂ ಮಂಗಳಮಹಾ" ಎಂದಿದೆ. ಕೊನೆಗೆ "ಶ್ರೀ ಶ್ರೀ ವಿಕೃತು ಸಂವತ್ಸರದ ಚೌತಿ ಸೋಮವಾರ ಸಮಾಪ್ತ ಮಂಗಳಮಹಾ" ಎಂದಿದೆ. ಸ್ವಾಮಿಕನ್ನುಪಿಳ್ಳೆಯವರ ಜಂತ್ರಿಯ ಪ್ರಕಾರ ವಿಕೃತಿ ಫಾಲ್ಗುಣ ಶುದ್ಧ ೪ ಸೋಮವಾರ ಶಕ ೧೬೯೩ರಲ್ಲಿ ಬರುವದು. ಆದ್ದರಿಂದ ಈ ಪ್ರತಿ ಮಾಡಿಕೊಂಡ ಕಾಲ ಕ್ರಿ. ಶ. ೧೭೭೧ ಫೆಬ್ರವರಿ ೧೮ ಸೋಮವಾರಕ್ಕೆ ಸರಿ ಹೋಗುವದು. ಇದರ ಸಂಕೇತ "ದಾ".


ಮು (೧೦):—

ಈ ಪ್ರತಿಯನ್ನು ಮೈಸೂರಿನ ಓರ್ವ ಮಿತ್ರರು ದೊರಕಿಸಿಕೊಟ್ಟಿರುವರು. ಇದರಲ್ಲಿಯ ೧ ರಿಂದ ೯೧ ಗರಿಗಳಲ್ಲಿ ಗಿರಿಜಾಕಲ್ಯಾಣ ಪೂರ್ಣವಾಗಿ ಬರೆಯಲಾಗಿದೆ. ಗರಿಗಳ ಉದ್ದ ಸುಮಾರು ೧೪ ಇಂಚು. ಅಗಲ ಸುಮಾರು ೨ ಇಂಚು. ಮಾರ್ಜನ್ ಬಲಕ್ಕೆ ಸುಮಾರು ೧½ ಇಂಚು. ಎಡಕ್ಕೆ ಸುಮಾರು ½ ಇಂಚು. ಕೆಲವು ಗರಿಗಳಲ್ಲಿ ೮, ಬಹಳ ಗರಿಗಳಲ್ಲಿ ೯, ಉಳಿದ ಕೆಲವು ಗರಿಗಳಲ್ಲಿ ೧೦ ಸಾಲುಗಳಿವೆ. ಪ್ರತಿಯೊಂದು ಸಾಲಿನಲ್ಲಿ ೮೦ ರಿಂದ ೯೦ ರವರೆಗೆ ಅಕ್ಷರಗಳಿವೆ. ಮಧ್ಯದಲ್ಲಿ ದಾರವನ್ನು ಪೋಣಿಸಲು ಎರಡು ತೂತುಗಳಿವೆ. ಅವುಗಳ ಸುತ್ತಲೂ ಸುಮಾರು ಅರ್ಧ ಇಂಚು ಸ್ಥಳವಿದೆ. ಅಲ್ಲಿ ಅಕ್ಷರಗಳಿಲ್ಲ. ಅಕ್ಷರಗಳು ಉತ್ತಮ ಮತ್ತು ಸ್ಪಷ್ಟವಾಗಿವೆ. ಹಸ್ತದೋಷಗಳು ಬಹಳವಾಗಿಲ್ಲ.


ಗ್ರಂಥಾರಂಭದಲ್ಲಿ "ಶ್ರೀ ಗಣಾಧಿಪತಯೋ ನಮಃ ಶ್ರೀ ನಂಜುಂಡೇಶ್ವರಾಯ ನಮಃ ಶುಭಮಸ್ತು ಗಿರಿಜಾಕಲ್ಯಾಣ ವಚನ"ವೆಂದು ಕಥಾಗರ್ಭ ಗದ್ಯ ಪ್ರಾರಂಭವಾಗುವದು. ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ "ಇದು ಸಮಸ್ತ ಸುರನಿಕರ ಮಕುಟ...." ಎಂಬ ಗದ್ಯವೂ ಅವೆ. ೧ನೇಯ ಆಶ್ವಾಸದ ಕೊನೆಗೆ "ಅಂತೂ ಆಶ್ವಾಸ ೧ಕ್ಕಂ ಗದ್ಯ ಪದ್ಯ ವಚನ ೧೦೧೪ ಕ್ಕಂ ಮಂಗಳಮಹಾ ಶ್ರೀ ಶ್ರೀ" ಎಂದಿದೆ.

ರೆಫದ ಹಿಂದಿನ ಅಕ್ಷರ ದ್ವಿತ್ವವಾಗಿದೆ. ಉದಾ:— ಇರ್ಪ್ಪಲ್ಲಿ, ವಾರ್ಧ್ಧಿ, ನಿರ್ಜ್ಜರ, ಪೆರ್ಬ್ಬುಲಿ ಇತ್ಯಾದಿ. ಇ, ಎ, ಒ ಅಕ್ಷರಗಳ ದೀರ್ಘ ಚಿಹ್ನ ಒಂದೇ ರೀತಿಯಿಂದ ಎಲ್ಲ ಕಡೆಗೂ ತೋರಿಸಿಲ್ಲ. ಕಂದ ವೃತ್ತ ವಚನಗಳಿಗೆ ಸಂಖ್ಯೆಯನ್ನು ಕೊಡಲಾಗಿದೆ. ಆಶ್ವಾಸಾಂತ್ಯದಲ್ಲಿ ಒಟ್ಟು ಸಂಖ್ಯೆಗಳನ್ನು ನಿರ್ದೇಶಿಸಲಾಗಿದೆ.

ತಾಡವೋಲೆಯ ಪ್ರತಿ—ಮ.




೪. ಕಡೆಯ ಪತ್ರ ಮುಂಭಾಗ



೫. ಕಡೆಯ ಪತ್ರ ಹಿಂಭಾಗ

ತಾಡವೋಲೆಯ ಪ್ರತಿ—ಬ.



೬. ಕಡೆಯ ಪತ್ರ.

ಕಡೆಯ ಗರಿಯಲ್ಲಿ:

"ಯಾದೃಶಂ ಪುಸ್ತಕಂ ದೃಷ್ಟ್ವಾ ತಾದೃಶಂ ಲಿಖಿತಂ ಮಯಾ|
ಅಬದ್ಧೋ ವಾ ಸುಬದ್ಧೋ ವಾ ಮಮದೋಷೋ ನ ವಿದ್ಯತೇ|
ಹಸ್ತವೇಗ-ಜಡಬುದ್ಧಿ-ಪೂರ್ವಕಂ ಕೃತಂ ಸಮೀಕ್ಷ್ಯ
ಸಜ್ಜನಾಃ ಕರಕೃತಮಪರಾಧಂ ಕ್ಷಂತುಮರ್ಹಂತು|
ಶ್ರೀ ನಂಜುಂಡೇಶ್ವರಾಯ ನಮಃ
ಸುಭಮಸ್ತು ಆಯುರಾರೋಗ್ಯ ಐಶ್ವರ್ಯಮಸ್ತು"| ಎಂದಿದೆ.

ಕಡೇ ಗರಿ ೪೧ರಲ್ಲಿ ಕಟ್ಟಕಡೆಗೆ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ ೧೫೮೨ ಸಂದ ಶಾರ್ವರಿ ಸಂವತ್ಸರದ ಮಾರ್ಗಶಿರ ಶುದ್ಧ ೧೦ ಸ್ಥಿರವಾರ ಹೊನ್ನರಸಯ್ಯನ ಕುಮಾರ ದೇವಣಪ್ಪರಿಗೆ ಶೇಷಾದ್ರಿಭಟ್ಟರು ಆಯುರಾರೋಗ್ಯ ಐಶ್ವರ್ಯ-ಧನ-ಕನಕ-ವಸ್ತು-ವಾಹನ-ಪುತ್ರ-ಪೌತ್ರ-ಪಾರಂಗತರಾಗಲಿ ಎಂದು ಆಚಂದ್ರಾರ್ಕಪರ್ಯಂತರ ಸ್ಥಿರವಾಗಿ ಇರಲೆಂದು ಗಿರಿಜಾಕಲ್ಯಾಣದ ಪುಸ್ತಕವನ್ನು ಬರೆದುಕೊಟ್ಟರು. ಮಂಗಳಮಹಾ ಶ್ರೀ ಶ್ರೀ ನಂಜುಂಡೇಶ್ವರಾಯ ನಮಃ ಶುಭಮಸ್ತು, ನಿರ್ವಿಘ್ನಮಸ್ತು ಅಯುರಾರೋಗ್ಯಮಸ್ತು, ಐಶ್ವರ್ಯಮಸ್ತು" ಎಂದಿದೆ. ಇಲ್ಲಿ ಹೇಳಿದ ಕಾಲವು ಸ್ವಾಮಿಕನ್ನುಪಿಳ್ಳೆಯವರ ಜಂತ್ರಿಯ ಪ್ರಕಾರ ಕ್ರಿ.ಶ. ೧೬೬೦ ಡಿಸೆಂಬರ ೧ನೇ ತಾರೀಖಿಗೆ ಸರಿಯಾಗುವದು. ಆ ದಿವಸ ಶನಿವಾರ. ಸ್ಥಿರವಾರವೆಂದು ಶನಿವಾರಕ್ಕೆ ಹೆಸರು. ಈ ಪ್ರತಿಯ ಸಂಕೇತ "**ಮ**".

ಗೋ (೧೧):—

ಇದು ಬೆಳಗಾಂವ ಜಿಲ್ಲೆಯ ಗೋಕಾಕ ತಾಲೂಕಿನ ಅರಭಾವಿ ಮಠದ ಪೂಜ್ಯ ಶ್ರೀಗಳವರಿಂದ ಪಡೆದ,ಅವರ ಮಠದ ಗ್ರಂಥಾಲಯದಲ್ಲಿದ್ದ ಪ್ರತಿ. ಈ ಪ್ರತಿಯಿದ್ದ ಕಟ್ಟಿನಲ್ಲಿ ಹಮ್ಮೀರಕಾವ್ಯ, ಶಬರಶಂಕರವಿಲಾಸ, ಭಿಕ್ಷಾಟನ ಚರಿತೆ, ಭಾವಚಿಂತಾರತ್ನ, ಭೈರವೇಶ್ವರ ಕಾವ್ಯ ಮತ್ತು ಗಿರಿಜಾಕಲ್ಯಾಣ ಹೀಗೆ ಆರು ಗ್ರಂಥಗಳಿವೆ. ಕಟ್ಟಿನಲ್ಲಿದ್ದ ಗರಿಗಳ ಸಂಖ್ಯೆ ೨೪೬. ಗಿರಿಜಾಕಲ್ಯಾಣ ಬರೆದ ಗರಿಗಳು ೧೬೮ರಿಂದ ೨೪೬ರವರೆಗೆ. ಓಲಿಯಗರಿಗಳು ೧೪ ಇಂಚ ಉದ್ದ, ೨½ ಇಂಚು ಅಗಲ ಮಾರ್ಜನ್ ಎರಡೂ ಕಡೆ ಸುಮಾರು ಅರ್ಧ ಇಂಚ. ಮಧ್ಯದಲ್ಲಿ ದಾರ ಪೋಣಿಸಲು ಎರಡು ತೂತುಗಳು ಸಮಾರು ಐದು ಇಂಚು ಅಂತರದ ಮೇಲಿವೆ. ಅವುಗಳ ಸುತ್ತಲೂ ಸುಮಾರು ಒಂದು ಇಂಚು ಚಚ್ಚೌಕ ಸ್ಥಳವನ್ನು ಬಿಟ್ಟಿದ್ದಾರೆ. ಅಕ್ಷರಗಳು ಹೋಗಿಲ್ಲ. ಅವು ಕೆಲಮಟ್ಟಿಗೆ ದೊಡ್ಡವಿದ್ದು ಓದಲು ಸುಲಭವಾಗಿವೆ. ಪ್ರತಿ ಪತ್ರದಲ್ಲಿ ೧೦ ಸಾಲುಗಳು. ಪ್ರತಿಯೊಂದು ಸಾಲಿನಲ್ಲಿ ಸುಮಾರು ೬೫ ಅಕ್ಷರಗಳು. ಪ್ರತಿ ಪೂರ್ಣವಾಗಿದೆ. ಚೆನ್ನಾಗಿದೆ. ಕೆಲಮಟ್ಟಿಗೆ ಶುದ್ಧವಾಗಿದೆ.

ಇ, ಎ, ಓಕಾರಗಳ ದೀರ್ಘ ಚಿಹ್ನ ತೋರಿಸಿಲ್ಲ. ರೇಫದ ಹಿಂದಿನ ಅಕ್ಷರ ದ್ವಿತ್ವವಾಗಿದೆ. ಕರ್ಮ್ಮ, ಅರ್ಧ್ಧಾಂಗಿ, ಆಗಿರ್ಪ್ಪ, ಸರ್ವ್ವ, ಪಾರ್ವ್ವತಿ ಇತ್ಯಾದಿ. ಱಕಾರದ ಪ್ರಯೋಗ ಬಹಳವಾಗಿದೆ. ಅಱಿದು, ಮಱಿದು, ಎಱಗಿ, ಎಱಿಸಿ ಇತ್ಯಾದಿ. ಆದರೆ ಅದನ್ನು ಎಲ್ಲ ಕಡೆಗೂ ಸರಿಯಾಗಿ ಉಪಯೋಗಿಸಿಲ್ಲ. 'ವು'ಕಾರಕ್ಕೆ ಬದಲಾಗಿ 'ಉ'ಕಾರವನ್ನು ಬಹಳವಾಗಿ ಉಪಯೋಗಿಸಲಾಗಿದೆ. ಕೆಲವುಕಡೆ ಸಂಧಿಮಾಡಿಲ್ಲ. ಉದಾ:— ಪಲಉ ದಿನಂ, ಕೆಲಉದಿನಂ, ಗರ್ಭಉದಯಿಸಿ. ಇವು ಲಿಪಿಕಾರನ ಹಸ್ತದೋಷದಿಂದ ಸಂಭವಿಸಿರಬಹುದೆಂದು ಊಹಿಸಬಹುದಾದರೂ ೧೬ನೆಯ ಶತಮಾನದಲ್ಲಿ ಬರೆದ ಶಿಲಾಶಾಸನಗಳಲ್ಲಿ ಈ ಪ್ರಯೋಗವದೆ. ಋಕಾರದ ಉಪಯೋಗ ಸರಿಯುಲ್ಲ. ಉದಾ:–ಮತ್ಕೃತಿಗೆ ವೃತ್ತ.

"ಶ್ರೀಗುರು ಬಸವಲಿಂಗಾಯನಮಃ ಶ್ರೀ ಗಿರಿಜಾಕಲ್ಯಾಣದ ಪುಸ್ತಕಕ್ಕೆ ನಿರ್ವಿಘ್ನ ಮಸ್ತು ಕಥಾಗರ್ಭಂ ಗದ್ಯಂ" ಎಂದು ಗ್ರಂಥವು ಪ್ರಾರಂಭವಾಗುವದು. ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ "ಇದು ಸಮಸ್ತಸುರನಿಕರ ಮಕುಟಮಣಿ ಖಚಿತ"... ಎಂಬ ಗದ್ಯವೂ ಅವೆ. ದ್ವಿತೀಯಾಶ್ವಾಸವು "ಶ್ರೀ ಗುರುಭ್ಯೋನ್ನಮಃ" ಎಂದೂ ತೃತೀಯಾಶ್ವಾಸವು "ಗುರು ಲಿಂಗಜಂಗಮದ ಪಾದವೇ ಗತಿ" ಎಂದೂ ಪ್ರಾರಂಭವಾಗುವವು. ಆಮೇಲೆ ಶಿವಸ್ತುತಿರೂಪವಾದ ಪದ್ಯವೂ ಬರುವದು. ಕೆಲವು ಆಶ್ವಾಸಗಳ ಅಂತ್ಯದಲ್ಲಿ ಕಂದವೃತ್ತಗದ್ಯಗಳ ಸಂಖ್ಯೆಯಿದೆ. ಗ್ರಂಥದ ಕಟ್ಟಕಡೆಗೆ "ಅಂತು ಆಶ್ವಾಸ ೧೦ಕ್ಕಂ ಕಂದ ವೃತ್ತದಿಂ ೧೪೫೫ಕ್ಕಂ ಮಂಗಳಮಹಾ ಶ್ರೀ ಶ್ರೀ ಶ್ರೀ ಪಿಂಗಳ ಸಂವತ್ಸರದ ಬಿದಿಗಿಯ ಬುಧವಾರ ಹತ್ತನೆಯ ತಾಸಿನಲ್ಲಿ ಸಂಪೂರ್ಣವಾದ ಗಿರಿಜಾ ಕಲ್ಯಾಣಕ್ಕೆ ಶುಭಮಸ್ತು ಆಯುರಾರೋಗ್ಯ ಅಯಿಶ್ವರ್ಯಮಸ್ತು ನಿರ್ವಿಗ್ನ ಮಂಗಳಮಹಾ॥" ಎಂದಿದೆ. ಪ್ರತಿ ಮಾಡಿಕೊಳ್ಳುವದು ಮುಗಿದ ಮಿತಿಗಳನ್ನು ಹೇಳುವಾಗ ಶಕವರ್ಷವನ್ನಾಗಲಿ, ತಿಂಗಳ ಹೆಸರನ್ನಾಗಲಿ ಹೇಳಿಲ್ಲ ಆದುದರಿಂದ ಅದನ್ನು ನಿರ್ಣೈಸುವದು ಕಠಿಣ. ಆದರೂ ಸ್ವಾಮಿಕನ್ನು ಪಿಳ್ಳೆಯವರ ಜಂತ್ರಿಯ ಪ್ರಕಾರ ಪಿಂಗಳ ಸಂವತ್ಸರ ದ್ವಿತೀಯ ಬುಧವಾರ

(೧) ಶಕ ೧೫೯೯ ಪಿಂಗಳ ಜ್ಯೇಷ್ಠ ಶು. ೨ ಬುಧವಾರ. ಕ್ರಿ. ಶ. ೧೬೭೭ ಮೇ ೨೩ ಬುಧವಾರ. (೨) ಶಕ ೧೫೯೯ ಪಿಂಗಳ ಫಾಲ್ಗುಣ ಶು. ೨ ಬುಧವಾರ. ಕ್ರಿ. ಶ. ೧೬೭೮ ಫೆಬ್ರುವರಿ ೧೩ ಬುಧವಾರ. (೩) ಶಕ ೧೫೩೯ ಪಿಂಗಳ ಫಾಲ್ಗುಣ ಶು. ೨ ಬುಧವಾರ. ಕ್ರಿ. ಶ. ೧೬೧೮ ಮಾರ್ಚ ೧೮ ಬುಧವಾರ ಹೀಗೆ ಬರುವದು.

ಇದೇ ಕಟ್ಟಿನಲ್ಲಿರುವ ಅಕ್ಷರಗಳ ಹೋಲಿಕೆಯಿಂದ ಒಬ್ಬರೇ ಬರೆದಿರ ಬಹುದಾದ ಭೈರವೇಶ್ವರ ಕಾವ್ಯದ ಅಂತ್ಯದಲ್ಲಿ ಪಿಂಗಳ ಸಂವತ್ಸರದ ಶ್ರಾವಣ

ಕೃಷ್ಣಪಕ್ಷ ಸೋಮವಾರ ದ್ವಾದಶಿ ಹತ್ತನೆಯ ತಾಸಿನಲ್ಲಿ ಸಂಪೂರ್ಣವಾದ ಭೈರವೇಶ್ವರದೇವರ ಕಾವ್ಯಕ್ಕೆ ಮಂಗಳಮಹಾ ಶ್ರೀ ಶ್ರೀ ಶ್ರೀ" ಎಂದಿದೆ. ಪಿಂಗಳ ಸಂವತ್ಸರ ಶ್ರಾವಣ ವದ್ಯ ೧೨ ಸೋಮವಾರ ಶಕ ೧೫೩೯ ಅಂದರೆ ಕ್ರಿ. ಶ. ೧೬೧೭ ಆಗಸ್ಟ ೧೮ ಸೋಮವಾರವಾಗುವದು. ಶಕ ೧೫೪೦ ಪಿಂಗಳ ಸಂ| ಶ್ರಾವಣ ಪದ್ಯ ದ್ವಾದಶಿ ಬುಧವಾರವಾಗುವದು. ಮಂಗಳವಾರ ತಿಥಿ ಲೋಪವಾಗಿರುವುದರಿಂದ ಸೋಮವಾರವೆಂದು ಗ್ರಹಿಸಿರಬಹುದು. ಅಂದಮೇಲೆ ಶಕ ೧೫೪೦ ಪಿಂಗಳ ಸಂ| ಜೇಷ್ಠ ಶು ೨ ಬುಧವಾರದ ಮಿತಿಯನ್ನು ಬಿಡಬಹುದು. ಭೈರವೇಶ್ವರ ಕಾವ್ಯ ಮುಗಿದ ಮೇಲೆ ಗಿರಿಜಾಕಲ್ಯಾಣ ಬರೆದುದರಿಂದ, ಆದು ಪೂರ್ಣವಾಗಲು ಕೆಲ ತಿಂಗಳು ಗತಿಸಿರಬಹುದಾದುದರಿಂದ ಶಕ ೧೫೩೯ ಪಿಂಗಳ ಸಂವತ್ಸರದ ಫಾಲ್ಗುಣ ಶು. ೨ ಬುಧವಾರ ಅಥವಾ ಶಕ ೧೫೪೦ ಪಿಂಗಳ ಸಂವತ್ಸರದ ಫಾಲ್ಗುಣ ಶು. ೨ ಬುಧವಾರ, ಈ ಎರಡರಲ್ಲಿ ಒಂದನ್ನು ಈ ಪ್ರತಿ ಮಾಡಿ ಮುಗಿಸಿದ ಮಿತಿಯೆಂದು ಗ್ರಹಿಸಬಹುದು. ಈ ಪ್ರತಿಯ ಸಂಕೇತ "ಗೋ."

ಗ (೧೨):—

ಇದು ನನ್ನ ಸಂಗ್ರಹದಲ್ಲಿದ್ದ ಪ್ರತಿ. ಎಲ್ಲಿಂದ ಬಂದಿದೆಯೆಂಬುದನ್ನು ಈಗ ಹೇಳಲು ಸಾಧ್ಯವಿಲ್ಲ. ಇದರಲ್ಲಿರುವ ಓಲೆಯ ಗರಿಗಳು ೧ರಿಂದ ೭೮ರವರೆಗೆ ಅವೆ. ಗ್ರಂಥ ಪೂರ್ಣವಾಗಿದೆ. ಪ್ರತಿ ಗರಿಯ ಉದ್ದ ೧೫ ಇಂಚು, ಅಗಲ ೨ ೧/೮ ಇಂಚು ಮಾರ್ಜನ್ ಬಲಕ್ಕೆ ಕಾಲು ಇಂಚು, ಎಡಕ್ಕೆ ಒಂದು ಇಂಚು. ಮಧ್ಯದಲ್ಲಿ ದಾರ ಪೋಣಿಸಲು ಸುಮಾರು ೬ ಇಂಚುಗಳ ಅಂತರದ ಮೇಲೆ ಎರಡು ತೂತುಗಳಿವೆ. ಅವುಗಳ ಸುತ್ತಲು ೧/೪ ಇಂಚು ಸ್ಥಳವನ್ನು ಬಿಟ್ಟದೆ. ಪ್ರತಿ ಗರಿಯಲ್ಲಿ ೧೧ ಸಾಲುಗಳಿವೆ. ಪ್ರತಿ ಸಾಲಿನಲ್ಲಿ ಸುಮಾರು ೭೬ ಅಕ್ಷರಗಳಿವೆ.

ಗ್ರಂಥಾರಂಭದಲ್ಲಿ "ಶ್ರೀಗುರು ಬಸವಲಿಂಗಾಯನಮಃ ಶ್ರೀಗುರು ಪಂಪಾವಲ್ಲಭಾಯನಮಃ ಶ್ರೀ ಗಣೇಶಶಾರದಾಯನಮಃ ನಿರ್ವಿಘ್ನಮಸ್ತು ಶುಭಮಸ್ತು ಗಿರಿಜಾಕಲ್ಯಾಣ ಕಥಾಗರ್ಭ''ವೆಂದೂ ಗ್ರಂಥಾಂತ್ಯದಲ್ಲಿ 'ಪರಮಸ್ವಾಮಿ ಜಟಾಧರಂ'' ಎಂಬ ಪದ್ಯವೂ 'ಇದು ಸಮಸ್ತ ಸುರನಿಕರ ಮುಕುಟ...' ಎಂಬ ಗದ್ಯವೂ ಅವೆ. ಅಂತ್ಯದಲ್ಲಿ 'ಅಂತು ಆಶ್ವಾಸ ೧ಕ್ಕಂ ಕಂದ ವೃತ್ತದಿಂ ೧೯೪ಕ್ಕಂ ಮಂಗಳ ಮಹಾ ಶ್ರೀ ಶ್ರೀ' ಎಂದೂ ಅದೆ.

ಇ, ಎ, ಓ ಗಳ ದೀರ್ಘ ಚಿಹ್ನವಿಲ್ಲ. ರೇಫದ ಹಿಂದಿನ ಅಕ್ಷರ ದ್ವಿತ್ವವಾಗಿದೆ. ಉದಾ:— ಗರ್ಭ್ಭ, ಸರ್ವ್ವ. ಱ ದ ಪ್ರಯೋಗವದೆ. ಶಬ್ದಗಳನ್ನು ಅಶುದ್ಧವಾಗಿ ಬರೆಯಲಾಗಿದೆ. ಉದಾ:— ಕಳುಪುಉದೆಂದು ಸಾದ್ರುಪ್ಯ. ವೃತ್ತಗಳ ಹೆಸರುಗಳನ್ನು ಚಂಪಕಮಾಲೆ, ಸ್ರಗ್ಧರೆ ಎಂದು ತಿಳಿಸಲಾಗಿದೆ. ಪ್ರತಿಮಾಡಿಕೊಂಡ ಮಿತಿಯಿಲ್ಲ. ಈ ಪ್ರತಿಯ ಸಂಕೇತ "ಗ."

ಬ (೧೩):—

ಈ ಪ್ರತಿಯೂ ನನ್ನ ಸಂಗ್ರಹದಲ್ಲಿದ್ದುದು. ಇದರಲ್ಲಿರುವ ಓಲೆಗರಿಗಳು ೧ರಿಂದ ೭೯ರ ವರೆಗವೆ. ಕಾವ್ಯ ಪೂರ್ಣವಾಗಿದೆ. ಗರಿಗಳ ಉದ್ದ ೧೬ ಇಂಚು ಅಗಲ ೧⅔ ಇಂಚು. ಮಾರ್ಜಿನ್ ಎರಡೂ ಬದಿಗೆ ಅರ್ಧ ಇಂಚ. ದಾರ ಪೋಣಿಸಲು ಗರಿಗಳ ಮಧ್ಯದಲ್ಲಿ ಎರಡೂ ಬದಿಯಿಂದ ಸುಮಾರು ೪ ಇಂಚು ೪ ಇಂಚು ಅಂತರದ ಮೇಲೆ ಎರಡು ತೂತುಗಳಿರುವವು. ಅವುಗಳ ಸುತ್ತಲೂ ಸುಮಾರು ಅರ್ಧ ಇಂಚಿನಷ್ಟು ಸ್ಥಳವದೆ. ಅಲ್ಲಿ ಅಕ್ಷರಗಳಿಲ್ಲ. ಸಾಮಾನ್ಯವಾಗಿ ಪ್ರತಿಯೊಂದು ಗರಿಯಲ್ಲಿ ಎಂಟು ಸಾಲುಗಳೂ, ಕೆಲವು ಗರಿಗಳಲ್ಲಿ ಒಂಬತ್ತು ಸಾಲುಗಳೂ ಉಂಟು ಪ್ರತಿ ಸಾಲಿನಲ್ಲಿ ೯೦ ರಿಂದ ೯೫ರ ವರೆಗೆ ಅಕ್ಷರಗಳಿವೆ.

ಗ್ರಂಥಾರಂಭದಲ್ಲಿ "ಶ್ರೀ ವಿರೂಪಾಕ್ಷಲಿಂಗಾಯನಮಃ ಶ್ರೀಗುರು ಚೆನ್ನಬಸವೇಶ್ವರಾಯನಮಃ ನಿರ್ವಿಘ್ನಮಸ್ತು ಗಿರಿಜಾಕಲ್ಯಾಣ ಕಥಾಗರ್ಭ ಗದ್ಯ" ಎಂದಿದೆ. ಗದ್ಯ ಮುಗಿದ ಮೇಲೆ "ಶ್ರೀ ಶಿವಾಯನಮಃ ಶ್ರೀ ಮಚ್ಛೈಲೇಂದ್ರ ಪುತ್ರೀ..." ಎಂಬ ಪದ್ಯದಿಂದ ಪ್ರಥಮಾಶ್ವಾಸ ಪ್ರಾರಂಭವಾಗುವದು. ಆಶ್ವಾಸಗಳ ಅಂತ್ಯದಲ್ಲಿ "ಪರಮಸ್ವಾಮಿ ಜಟಾಧರಂ" ಎಂಬ ಪದ್ಯವೂ "ಇದು ಸಮಸ್ತ ಸುರಾಸುರನಿಕರ ಮಕುಟ..." ಎಂಬ ಗದ್ಯವೂ ಅವೆ. ಗ್ರಂಥಾಂತ್ಯದಲ್ಲಿ ಗದ್ಯಪದ್ಯಗಳ ನಂತರ "ಆನ್ತು ಆಶ್ವಾಸ ೧೦ಕ್ಕಂ ಪದ್ಯ ೧೦೦೪ಕ್ಕಂ ಮಂಗಳಮಹಾ ಶ್ರೀ ಶ್ರೀ. ತಪ್ಪಂ ಬರೆದಡೆ ಕಡು ಜಡನಪ್ಪಾತನಿದಂ ಬರೆದನೆಂದು ನುಡಿಯಲುಬೇಡ ತಪ್ಪುಳ್ಳರೆ ತಿರ್ದಿಕೊಂಬುದುತ್ತಮ ಪುರುಷರು" ಎಂದಿದೆ. ಪ್ರತಿಮಾಡಿಕೊಂಡ ಕಾಲ ಹೇಳಿಲ್ಲ. ಹಸ್ತದೋಷಗಳು ಬಹಳವಾಗಿವೆ. ಅಕ್ಷರಗಳು ಅಷ್ಟು ಶುದ್ಧವಾಗಿಲ್ಲ. ವ್ಯಾಕರಣ ದೋಷಗಳವೆ. ಇ, ಎ, ಒ ಕಾರಗಳ ದೀರ್ಘಚಿಹ್ನವಿಲ್ಲ. 'ವ'ದ ಬದಲಾಗಿ 'ಉ' ಕೆಲ ಕಡೆ ಉಪಯೋಗಿಸಲಾಗಿದೆ. ಉದಾ:— ಅವಧರಿಸುಉದೆಂತೊಂದೆಡೆ, 'ವೃತ್ತ' ಶಬ್ದವನ್ನು "ಉ್ರತ್ತ" ಎಂದು 'ವರ್ಣ' ಶಬ್ದವನ್ನು 'ವರ್ನ' ಎಂದು ಬರೆಯಲಾಗಿದೆ. ಇದರ ಸಂಕೇತ "ಬ".

ಕೋ (೧೪):—

ಶ್ರೀ ವೀರಭದ್ರಪ್ಪನವರು ಕೊಪ್ಪಳ ಎಮ್. ಎ; ಬಿ. ಟಿ., ನಿವೃತ್ತ ಮುಖ್ಯಾಧ್ಯಾಪಕರು, ರಾಜಾಲಖಮಗೌಡ ಹಾಯಸ್ಕೂಲ, ಧಾರವಾಡ, ಅವರು ಮೂರು ನಾಲ್ಕು ತಾಡವೋಲೆಗಳಲ್ಲಿ ಬಂದ ಪಾಠಾಂತರಗಳನ್ನು ಸಂಗ್ರಹಿಸಿ, ಕಾವ್ಯಕಲಾನಿಧಿಯ ಮಾಲೆಯಲ್ಲಿ ಪ್ರಸಿದ್ಧವಾದ ಗಿರಿಜಾಕಲ್ಯಾಣದ ಪುಸ್ತಕದಲ್ಲಿ ಬರೆದಿಟ್ಟುಕೊಂಡಿದ್ದರು. ಆದನ್ನು ನನಗೆ ಕೊಟ್ಟು ಬಹಳ ಸಹಾಯ ಮಾಡಿರುವರು. ಅವರಿಗೆ ಋಣಿಯಾಗಿರುವೆನು. ಅವರು ಅವಲಂಬಿಸಿದ ತಾಡವೋಲೆಯ ಪ್ರತಿ

ಗಳಾಗಲಿ, ಅವುಗಳ ವಿವರವಾಗಲಿ ಉಪಲಬ್ಧವಿಲ್ಲ. ಪಾಠಾಂತರಗಳು ಉಪಯುಕ್ತವಾದುವಿರುವುದರಿಂದ ಅವುಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಅಂತಹ ಪಾಠಾಂತರಗಳನ್ನು "ಕೋ" ಎಂಬ ಸಂಕೇತದಿಂದ ಸೂಚಿಸಲಾಗಿದೆ.

ಪರಿಶುದ್ಧವಾದ, ಸರಿಯಾದ ಅರ್ಥವನ್ನು ಕೊಡುವ, ಮೂಲ ಗ್ರಂಥಕ್ಕೆ ಸಮೀಪವಾದ ಅಥವಾ ಬಹುತರವಾಗಿ ಅದನ್ನು ಹೋಲುವ ಗ್ರಂಥವನ್ನು ಸಿದ್ಧ ಮಾಡುವದು ಗ್ರಂಥಸಂಪಾದನೆಯ ಗುರಿಯು. ಸಾವಿರಾರು ವರ್ಷಗಳ ಹಿಂದೆ ರಚಿತವಾದ ಗ್ರಂಥಗಳನ್ನು ಪ್ರತಿಮಾಡಿಕೊಳ್ಳುವಾಗ ಪ್ರತಿಮಾಡಿಕೊಳ್ಳುವವರ ಬುದ್ಧಿಶಕ್ತಿಗನುಸರಿಸಿ ಹಲಕೆಲವು ವಾಕ್ಯಗಳೂ, ಶಬ್ದಗಳೂ,ಪ್ರಯೋಗಗಳೂ ಗುಣದೋಷಗಳೂ ಸೇರಿಕೊಳ್ಳುವ ಸಂಭವವದೆ. ಮೂಲ ಗ್ರಂಥವನ್ನು ಹೆಚ್ಚು ಪರಿಶುದ್ಧ ಮತ್ತು ಆಕರ್ಷಕವಾದುದನ್ನಾಗಿ ಮಾಡಲು ಕೆಲವು ಪಂಡಿತರು ಅದನ್ನು ತಿದ್ದುವುದೂ ಸಾಧ್ಯವದೆ. ಹೀಗೆ ಕಾಲಾಂತರದಲ್ಲಿ ಮೂಲ ಗ್ರಂಥವು ತನ್ನ ಸ್ವರೂಪವನ್ನು ಬದಲಿಸಿ ಇಲ್ಲವೆ ಬಹುಪಾಲ ಅದನ್ನು ಕಳೆದುಕೊಂಡು ಬೇರೆ ಅಥವಾ ವಿಕೃತ ರೂಪವನ್ನು ಧರಿಸಬಹುದು. ಇಂತಹ ಉದಾಹರಣೆಗಳು ವಿಶ್ವಸಾಹಿತ್ಯ ಕ್ಷೇತ್ರದಲ್ಲಿ ವಿಪುಲವಾಗಿ ದೊರೆಯುವವು. ಪ್ರಾಚೀನತಮ ಭಾಷೆಗಳಾದ ಸಂಸ್ಕೃತ, ಗ್ರೀಕ, ಲ್ಯಾಟಿನ್, ಹಿಬ್ರೂ ಮೊದಲಾದವುಗಳಲ್ಲಿರುವ ಗ್ರಂಥಗಳಲ್ಲಿ ಈ ಸ್ಥಿತಿಯು ಕಂಡು ಬರುವದು. ಆಯಾ ಭಾಷೆಗಳಲ್ಲಿ ಪರಿಣತರಾದ ಅರ್ವಾಚೀನ ವಿದ್ವಾಂಸರು ಲಭ್ಯವಿದ್ದ ಸಾಧನಗಳನ್ನು ಸಂಗ್ರಹಿಸಿ ಆಯಾ ಗ್ರಂಥಗಳ ಮೂಲಸ್ವರೂಪವನ್ನು ಕಂಡುಹಿಡಿಯಲು ಬಹು ಶ್ರಮಪಡುತ್ತಿರುವರು. ಈ ದಿಸೆಯಲ್ಲಿ ದುಡಿಯಬೇಕೆಂದು ಮನಸ್ಸುಳ್ಳವರಿಗೆ ದಾರಿತೋರಿಸುವದಕ್ಕಾಗಿ ಕೆಲವು ನಿಯಮಗಳನ್ನು ಹಾಕಿ ಕೊಟ್ಟಿರುವರು. ಇತ್ತಿತ್ತಲಾಗಿ ಅಂತಹ ನಿಯಮಗಳನ್ನೊಳಗೊಂಡ ಗ್ರಂಥಪರಿಷ್ಕರಣ (Textual Criticism)ವೆಂಬ ಶಾಸ್ತ್ರವು ರೂಢಿಯಲ್ಲಿ ಬಂದಿದೆ. ಈ ಶಾಸ್ತ್ರದ ನಿಯಮಗಳಿಗನುಸರಿಸಿ ಸಾಧ್ಯವಾದ ಮಟ್ಟಿಗೆ ಗಿರಿಜಾಕಲ್ಯಾಣ ಮಹಾಕಾವ್ಯವನ್ನು ಸಂಪಾದಿಸಲು ಬೇಕಾದ ಪ್ರತಿಗಳನ್ನು ಸಂಗ್ರಹಿಸಲಾಯಿತು.

ನಮಗೆ ದೊರೆತ ಮುದ್ರಿತ ಮತ್ತು ಕೈಬರೆಹದ ಪ್ರತಿಗಳು ಸರಿಯಾಗಿ ವರ್ಗೀಕರಣ ಮಾಡಲು ಸಾಕಷ್ಟಿಲ್ಲ. ಅವು ಕನ್ನಡನಾಡಿನ ಬೇರೆ ಬೇರೆ ಭಾಗಗಳನ್ನಾಗಲಿ ಅಥವಾ ಭಾಷೆಯ ಬೆಳವಣಿಗೆಯ ಕಾಲವನ್ನಾಗಲಿ ನಿರ್ದೇಶಿಸುವದಿಲ್ಲ. ಪ್ರಸಂಗಾನುಸಾರ ದೊರೆತವುಗಳನ್ನು ಉಪಯೋಗಿಸಿಕೊಳ್ಳಲಾಗಿದೆಯಾದುದರಿಂದ ನಿಶ್ಚಿತವಾದ ಕ್ರಮವನ್ನು ಅನುಸರಿಸಲು ಶಕ್ಯವಾಗಲಿಲ್ಲ. ಅವುಗಳ ಸಂಬಂಧವನ್ನು ಕಂಡು ಹಿಡಿಯುವಷ್ಟು ಸಾಧನವು ಇಲ್ಲ. ಆದುದರಿಂದ ಅವುಗಳಲ್ಲಿ ಯಾವ ಪ್ರತಿಯು ಯಾವ ಪ್ರತಿಗೆ ಋಣಿಯಾಗಿದೆಯೆಂಬುದನ್ನು ಅಥವಾ ಅವುಗಳ ವಂಶಕ್ರಮವನ್ನು


ನಿಶ್ಚಯವಾಗಿ ಹೇಳಲು ಯತ್ನಿಸಿಲ್ಲ. ತಾತ್ಪೂರ್ತಿಕವಾಗಿ ದೊರೆತ ಪ್ರತಿಗಳ ಮೇಲಿಂದ ಅವುಗಳ ಸಂಬಂಧವನ್ನು ಸೂಚಿಸಲಾಗಿದೆ. ಕಾರಣ ನಮಗೆ ತೃಪ್ತಿಯಾಗುವಷ್ಟು ಸಾಧನೆಯು ನಮ್ಮಲ್ಲಿಲ್ಲವೆಂದು ಅನ್ನಿಸಿದೆ.

ಪರಿಷ್ಕರಣಕ್ಕಾಗಿ ಉಪಯೋಗಿಸಿಕೊಂಡ ಹದಿನಾಲ್ಕು ಪ್ರತಿಗಳಲ್ಲಿ **ಬೆ, ಕಾ, ಸೆ, ಯ** ಮತ್ತು **ಕೊ** ಇವು ಈ ಕಾರ್ಯದಲ್ಲಿ ಬಹಳ ಉಪಯೋಗವಾಗಲಾರವು. ಪಾಠಾಂತರಗಳನ್ನು ಸಂಗ್ರಹಿಸುವದಕ್ಕಾಗಿ ಅವುಗಳ ಸಹಾಯ ಪಡೆಯಲಾಗಿದೆ. ಉಳಿದ ತಾಡವೋಲೆಯ ಒಂಬತ್ತು ಪ್ರತಿಗಳೊಳಗೆ ಕಾಲವನ್ನು ನಿರ್ದೇಶಿಸಿದ **ಅ, ಕ, ಡ, ದಾ, ಮ, ಗೋ,** ಆರು ಪ್ರತಿಗಳಲ್ಲಿ **"ಮ"** ಪ್ರತಿಯು ಹಳೆಯದು. ಅದನ್ನು ಪ್ರತಿಮಾಡಿಕೊಳ್ಳುವದು ಕ್ರಿ. ಶ. ೧೬೬೦ ಡಿಸೆಂಬರ ೧ನೆಯ ತಾರೀಖಿಗೆ ಮುಗಿದಿದೆ. **"ಗೋ"** ಪ್ರತಿಯು ಅದಕ್ಕೂ ಮೊದಲು ೪೨ ವರ್ಷ ಹಿಂದಿನದಿರ ಬಹುದಾದರೂ ಅದು ನಿಶ್ಚಿತವಾಗಿಲ್ಲವಾದುದರಿಂದ ಅದಕ್ಕೆ ಮೊದಲನೆಯ ಸ್ಥಾನ ಕೊಟ್ಟಿಲ್ಲ. ಕಾಲಮಾನವನ್ನನುಸರಿಸಿ ಪ್ರತಿಗಳ ಹಿರಿಯತನವನ್ನು ನಿರ್ಣಯಿಸುವದಾದರೆ ಕೆಳಗಿನ ಕ್ರಮವನ್ನು ಒಪ್ಪಿಕೊಳ್ಳಬೇಕಾಗುವದು.

೧.	**ಮ**	ಕಾಲ	ಕ್ರಿ. ಶ.	೧೬೬೦ ಡಿಸೆಂಬರ ೧
೨.	**ಗೋ**	,,	,,	೧೬೭೮ ಫೇಬ್ರುವರಿ ೧೩ ಅಥವಾ ೧೬೧೮ ಮಾರ್ಚ ೧೮ ಬುಧವಾರ
೩.	**ಡ**	,,	,,	೧೬೭೯ ಜಾನೇವರಿ ೩
೪.	**ಕ**	,,	,,	೧೭೪೧ ಸಪ್ಟಂಬರ ೧೦
೫.	**ಅ**	,,	,,	೧೭೬೫ ಎಪ್ರಿಲ ೧೩
೬.	**ದಾ**	,,	,,	೧೭೭೧ ಫೇಬ್ರುವರಿ ೧೮

ಮೇಲಿನ ಕ್ರಮದಿಂದ **ಮ** ಮತ್ತು **ಗೋ** ಪ್ರತಿಗಳು ಪ್ರತಿಮಾಡಿಕೊಂಡ ಕಾಲಕ್ಕನುಸರಿಸಿ ಉಪಲಬ್ಧವಿದ್ದ ಹಳೇ ಪ್ರತಿಗಳು. ಅವುಗಳಲ್ಲಿ ದೊರೆತ ಪಾಠಾಂತರಗಳಿಂದ ಅವುಗಳ ಸಂಬಂಧವು ತಂದೆಮಕ್ಕಳ ಸಂಬಂಧವಿರದೆ ಅಣ್ಣ-ತಮ್ಮಂದಿರ ಸಂಬಂಧವೆಂದು ಗ್ರಹಿಸಬಹುದು. ಇವೆರಡೂ ಪ್ರತಿಗಳು ನಮಗೆ ಉಪಲಬ್ಧವಿಲ್ಲದ ಪ್ರತಿಯಿಂದಾಗಲಿ ಅಥವಾ ಬೇರೆಬೇರೆ ಪ್ರತಿಗಳಿಂದಾಗಲಿ ಬರೆದುಕೊಂಡವಿರಬೇಕು. ಇವೆರಡು ಪ್ರತಿಗಳನ್ನು ಮುಖ್ಯವಾಗಿಟ್ಟುಕೊಂಡು ಎರಡು ಗುಂಪುಗಳನ್ನು ಮಾಡಿದರೆ **'ಮ'** ಗುಂಪಿಗೆ **ಕ, ಓ, ಅ,** ಪ್ರತಿಗಳೂ **'ಗೊ'** ಗುಂಪಿಗೆ **ದಾ, ಡ,** ಬ, ಗ


ಪ್ರತಿಗಳೂ ಸಮಾನವಾಗಿರುವವು. ಆದುದರಿಂದ ನಾವು ತಾತ್ಪೂರ್ತಿಕವಾಗಿ ಕೆಳಗಿನ ಕ್ರಮದಂತೆ ಪ್ರತಿಗಳ ಸಂಬಂಧವನ್ನು ಕಲ್ಪಿಸಬಹುದು.




ಈ ಕ್ರಮ ಪಾಠಾಂತರಗಳನ್ನವಲಂಬಿಸಿದೆ. ಕಾಲವನ್ನು ಸೂಚಿಸದ ಗ, ಬ, ಓ ಪ್ರತಿಗಳನ್ನು ಅವುಗಳ ಲಿಪಿ ಮತ್ತು ಪ್ರಯೋಗಗಳನ್ನವಲಂಬಿಸಿ ಅವುಗಳಿಗಿರಬಹುದಾದ ಕ್ರಮವನ್ನು ಸೂಚಿಸಲಾಗಿದೆ.

गच्छतः स्खलनं वापि भवत्येव प्रमादतः ।
तं सन्तः क्षन्तुमर्हन्ति सदसद्व्यक्तिहेतवः ।
हेम्नः संलक्ष्यते ह्यग्नौ विशुद्धिश्यामिकापि वा ।।


ತಾಡವೋಲೆಯ ಪ್ರತಿ—ಗೋ.



೧. ಮೊದಲನೆಯ ಪತ್ರ



೨. ಕಡೆಯ ಪತ್ರ, ಮುಂಭಾಗ



೩. ಕಡೆಯ ಪತ್ರ, ಹಿಂಬಾಗ

ಟಿ. ಕೆ. ಸುಬ್ರಹ್ಮಣ್ಯ ಭಟ್.

ಗಿರಿಜಾಕಲ್ಯಾಣಂ

॥ ಕಥಾಗರ್ಭಂ ॥

ಸ್ವಸ್ತಿ ಸಮಸ್ತಸಮುದ್ರಮುದ್ರಿತ[೧]ಧರಿತ್ರೀಕಾಂತೆಯ[೧] ನಾಭಿಕಮಲಮಧ್ಯಸ್ಥಿತಕರ್ಣಿಕೆಯಂತಿರ್ಪ ಮೇರುವಿನ ದಕ್ಷಿಣದಿಕ್ಕಿನಲ್ಲಿ [೨]ಮೂಡಣ[೨] ಜಲಧಿಯಿಂ ಪಶ್ಚಿಮವಾರ್ಧಿಪರ್ಯಂತರಂ ಪರ್ವಿದ ಪರ್ವತಾಧೀಶ್ವರಂ ಗಿರಿರಾಜನೆಂಬ ನಾಮದಿಂದೋಷಧಿಪ್ರಸ್ಥವೆಂಬ ಪುರದೊಳಿರ್ದು ಪಿತೃಗಳ ಮನದೊಳ್ ಪುಟ್ಟಿದ ಮೇನಾ-ದೇವಿಯಂ ವಿವಾಹವಾಗಿ ಕೆಲವು ದಿವಸಕ್ಕೆ ಮೈನಾಕನೆಂಬ [೩]ಪುತ್ರನಂ[೩] ಪಡೆದು ಪಲವುದಿನಂ ಸುಖದೊಳಿರುತ್ತುಂ ದಾಕ್ಷಾಯಣಿ ತನ್ನ ಬಸಿಱೊಳ್ ಬರ್ಪ ವರಮಂ ಬಯಸಿ ಮೇನೆ ತಪದೊಳಿರಲಿತ್ತಲ್ [೪]ದಾಕ್ಷಾಯಣಿ ದಕ್ಷಯಾಗಕ್ಕೆ ಬಿಜಯಂಗೆಯ್ದು ನಿಜೇಶನ[೪] ನಿಂದೆಯಂ ಕೇಳಲಾಱದೆ ನಿಜಯೋಗ[೫]ದೊಳ್ ಸಂದು[೫] ಮೇನೆಯ ಘನಪುಣ್ಯೋದರದೊಳ್ ಪೊಕ್ಕು ಕರುಣದಿಂ ಬಂದಪೆನೆಂದು ಬೆಸಸೆ ಮೇನೆಯುಮಱಿದು ಪರಮಹರ್ಷದಿಂ ತಿರುಗಿ ಪುರಮಂ ಪೊಕ್ಕು ಗಿರಿರಾಜನ ಸಂಗಸುಖಮಂ ಸಾರ್ದು ಮಂಗಳಾಕಾರೆಯಾಗಿರೆ ಕೆಲವು ದಿನಕ್ಕೆ ಗರ್ಭಮುದಯಿಸಿ ನವಮಾಸಂ ತೀವಿ ಕನ್ಯಾರತ್ನಮಂ ಪಡೆದು ಜಾತಕರ್ಮಮ[೬]ನನುಕರಿಸಿ[೬] ಪಾರ್ವತಿಯೆಂದು ನಾಮ-ಕರಣಮಂ ಮಾಡಿ ಪರಮಕಾರಣಿಕೆಯೆಂದಱಿಯದೆ ಪುತ್ರಿಯೆಂಬ ಪ್ರೇಮದಿಂ ಮಂದಿವಾಳತನದಿಂ ಸಲಪುತ್ತಿರೆ ಬಾಲಲೀಲೆಯಂ ಕಳೆದು ದಿವ್ಯಕನ್ಯಕೆಯಾಗಿರ್ಪಲ್ಲಿ ಗಿರಿರಾಜಂ ಹರನರಸಿಯೆಂಬುದಂ ಮಱಿದು ಪುತ್ರೀ[೭]ವಿವಾಹಸದೃಶವರಾಪೇಕ್ಷಚಿತ್ತ[೭]ನಾಗಿರ್ಪ ಸಮಯದೊಳ್ ದೇವಲೋಕದಿಂ ನಾರದಮುನಿಯುಳತಂದು ಗಿರಿಜಾತೆಯಂ ಕಂಡು ಚರಣಕ್ಕೆಱಗಿ ಈ [೮]ಮಹಾಮಹಿಮನಿಧಿ[೮]ಯಪ್ಪ ಪಾರ್ವತಿಯಂ

---

೧ ಧರಣೀಕಾಂತಾ (ಕಾ ಕೊ ಕ ಓ); ಧರಿತ್ರೀಕಾಂತಾ (ಮ ಡ). ೨ ಪೂರ್ವ (ಬೆ ಮ). ೩ ಕುಮಾರನಂ (ಅ). ೪ ಭವಾನಿ ದಕ್ಷನ ಯಾಗಕ್ಕೆ ನಡೆತಂದು ಶಿವ (ಮ ಗೊ ಯ ದಾ ಡ); ದಾಕ್ಷಾಯಣಿ ದಕ್ಷಯಾಗಕ್ಕೆ ಬಿಜಯಂಗೆಯ್ದು ಶಿವ (ಕ); ದಾಕ್ಷಾಯಣಿ ದಕ್ಷಯಾಗಕ್ಕೆ ನಡೆತಂದು ಶಿವ (ಸೆ). ೫ ದಿಂ ಬಂದು (ಬ ದಾ ಗೊ ಡ ಯ); ದಿಂ ನಡೆತಂದು (ಅ). ೬ ನಲಂಕರಿಸಿ (ದಾ ಬ ಮ ಡ ಅ ಯ ಗೊ ಕ). ೭ ವಿವಾಹಕ್ಕೆ ಸಾದೃಶ್ಯವರಾಪೇಕ್ಷಿತ ಚಿತ್ತ (ಬ); ವಿವಾಹ ಸಾದೃಶ್ಯವರಾಪೇಕ್ಷಿತ (ಕ ಮ). ೮ ಮಹಿಮಾನಿಧಿ (ಬ); ಮಹಾದೇವಿ (ಮ); ಮಹಾಮಹಿಮಾನಿಧಿ (ಕ).

ನಿಮ್ಮ [೧]ಮಗಳೆಂಬುದಾಸೀನಂ ಬೇಡ[೧] ವಿರೂಪಾಕ್ಷನರ್ಧಾಂಗಿ ಸರ್ವಕಾರಣದಿಂ ಮೇನೆಯ ತಪಸ್ಸಿಂಗೆ ಕರುಣಿಸಿ ನಿಮ್ಮುದರದೊಳ್ ಬಂದಳೀ ಹೈಮವತಿಯಂ ಹೇಮಕೂಟದೊಳ್ ನಿಜಾವಲೋಕನ[೨]ಸಮಾಧಿಷ್ಠ[೨]ನಾಗಿರುತಿರ್ಪ ಸರ್ಪಾಭರಣನಲ್ಲಿಗೆ ಕಳಿಪುವುದೆಂದು ನಾರದಮುನಿ ಪೇಳ್ದು ಪೋಗೆ ನಗಾಧೀಶಂ ಮಿಗೆ ವಿಸ್ಮಿತನಾಗಿ ಪಾರ್ವತಿಯಂ ಪುಷ್ಪಕಮನೇಱಿಸಿ ಜಯೆವಿಜಯೆ[೩]ಯರೆಂಬ[೩] ವಿಳಾಸಿನಿಯರ್ ಸಹಿತಂ ಗಗನಮಾರ್ಗದೊಳೆಯ್ತಂದು ಹೇಮಕೂಟದೊಳಿಳಿದು ಹರನಂ ತೋಱಿ ಗಿರಿರಾಜಂ [೪]ಮರಳ್ದು[೪] ಪೋಗೆ ನಿತ್ಯಪೂಜಾಸಕ್ತೆಯಾಗಿ ಗಿರಿಜೆ ಶಿವಪ್ರಸಾದಮಂ ಬಯಸಿ ಭಕ್ತಿಯಿಂದರ್ಚಿಸುತ್ತು[೫]ಮಿರಲಿತ್ತಲ್[೫] ತಾರಕಾಸುರನ ಬಾಧೆಗಾಱದೆ ಹರಿಬ್ರಹ್ಮೇಂದ್ರಾದಿ ದೇವರ್ಕಳ್ ಕಾದಿ ಸೋಲ್ತು ಮಂತ್ರಾಳೋಚ[೬]ನದೊಳಿರ್ದು[೬] ಸುರಗುರುವಂ ಕಳುಪಿ ಕಾಮನಂ ಕರೆಯಿಸಿ ಹರನ ಚಿತ್ತಮಂ ಚಲಿಯಿಸಿ ಕಡು ತಪಮಂ ಕಿಡಿಸೆಂದು ಪೇಳೆ ಹಸಾದಮೆಂದು ತನ್ನ ಚತುರಂಗಬಲಂಬೆರಸು ಬಂದು ಹೇಮಕೂಟಮಂ ಸುತ್ತಿ ಮುತ್ತೆ ನಂದೀಶ್ವರನ ನಸುಗೋಪದಿಂ ಬಲಮೆಲ್ಲಂ ಮಾಯಮಾಗೆ ನಿತ್ಯಪೂಜೆಗೆ [೭]ಬರ್ಪ ಪಾರ್ವತೀದೇವಿಯರನುಮತಿಯಿಂದವರ ಪುಷ್ಪಕದ ನೆಳಲೊಳಡಗುತ್ತೊಳಗಂ ಪೊಕ್ಕು[೭] ಮತಂಗ ಪರ್ವತಮನೇಱಿ ಪಂಚಮುಖನಂ ಪಂಚಬಾಣದಿಂದಿಸಲೊಡಂ ವಿಷಧರನೆಚ್ಚತ್ತು ಕಣ್ದೆಱೆದು ನೋಡಿ ಮುಂದಿರ್ದ ಪಾರ್ವತಿಯಂ ಕಂಡು ಕೌತುಕಂಗೊಂಡು ತಿರುಗಿನೋಡಿ[೮]ಕಾಮಂಗೆ[೮] ಕೋಪಿಸುವಲ್ಲಿಂ ಮುನ್ನಂ ಭಾಳಲೋಚನಾಗ್ನಿಯಿಂ ಪಂಚಶರನುರಿದು ನಿಲೆ ಪರಿತಂದ ಪದತಳದಿಂ ತುಳಿದು ಸ್ಮರಭಸ್ಮಾವಯವನಾಗಿ ದೇವಿಯರಿರವಂ ನೋಡದೆ ಕಂತುಹರನಂತರ್ಧಾನಕ್ಕೆ ಸಂದುದಂ ಗಿರಿಜೆಯಱಿದು ಶೋಕಿಸುವ ರತಿಗಭಯಮನಿತ್ತು ಭರ್ಗನರಸಿಯುಗ್ರತಪದೊಳ್ ದಿವ್ಯಸಹಸ್ರಾಬ್ದಪರ್ಯಂತರಮಿರೆ ತಪಸ್ತೇಜಂ ಕಪರ್ದಿಯಂ ಮುಟ್ಟೆ ಶಂಕರನಱಿದು ಭೋಂಕನೆ ಬಂದು [೯]ಗಿರಿಜೆಯ ಚಿತ್ತಮಂ ಪರೀಕ್ಷಿಸಿ[೯] ನಿಜರೂಪಮಂ ತೋಱಿ ರತಿದೇವಿಗೆ ಕಾಮನನನಂಗನಂಮಾಡಿ ಕೊಟ್ಟು

---

೧ ಮಗಳೆಂಬುದಾಸೀನಂ ಮಾಡಲ್ಬೇಡ (ಅ); ಮಗಳೆಂಬುದಾಸೆಯುಮಂ ಬೇಡ (ಗ); ಮಗಳೆಂಬುದಾಗಿ ನಂಬಬೇಡ (ಕ). ೨ ಸಮಾಧಿನಿಷ್ಠ (ಬ ಮ). ೩ ಗಳೆಂಬ (ಅ ಕ) ೪ ಮುಗುಳ್ದು (ಬ). ೫ ಮಿರ್ಪನ್ನೆಗಮಿತ್ತಲ್ (ಬೆ); ಮಿತ್ತಲಿರಲತ್ತ (ಬ) ಮಿರಲಿತ್ತ (ಬ ದು). ೬ ನಂಗೆಯ್ದು (ಬ ಅ ಗ). ೭ ಪಾರ್ವತೀ ದೇವಿಯರ್ ಬರುತಿರಲವರನುಮತದಿಂದವರ ನೆಳಲೊಳಡಗುತ್ತೊಳಗಂ ಪೊಕ್ಕುಂ (ಮ ಬ); ಪಾರ್ವತೀದೇವಿಯರ್ ಬರಲನುಮತಿಯಿಂ ಪುಷ್ಪಕದ ನೆಳಲೊಳಡಂಗುತ್ತೊಳಗಂ ಪೊಕ್ಕು (ಕ). ೮. ಕಾಮನಂ (ಬ). ೯ ಗಿರಿಜೆಯಂ ಪರೀಕ್ಷಿಸಿ (ಬ ಅ ಗೊ ಕ ಮ).

ಪಾರ್ವತಿಯುಂ ಗಿರಿರಾಜನಲ್ಲಿಗೆ ಕಳುಪಿ ಕೈಲಾಸಕ್ಕೆ ಬಂದು [೧]ಹರಿಬ್ರಹ್ಮೇಂದ್ರಾದಿ ದೇವಗಣಂಗಳಂ ಸಕಲ ಋಷಿಯರಂ[೧] ಕೂಡಿಕೊಂಡು ಶೂಲಧರಂ[೨]ಶೈಲರಾಜನಲ್ಲಿಗೆ ಬಂದು[೨] [೩]ಪಾರ್ವತಿಯುಂ[೩] ಮಹೋತ್ಸಾಹದಿಂ ವಿವಾಹವಾಗಿ ಕೈಲಾಸಕ್ಕೆ ನಡೆತಂದು ಸುಖದೊಳಿರ್ಪ ಪುಟ್ಟಿದ ಷಡಾನನನಿಂ ತಾರಕಾಸುರನಂ ತೀರ್ಚಿಸಿ ಸಕಲಲೋಕಕ್ಕೆ ಸಂತಸಮನೊಡರ್ಚಿಸಿ ಕಂತುಮದಮರ್ದನಂ ಪಂಪಾವಿರೂಪಾಕ್ಷಂ ಸುಖಸಂಕಥಾವಿನೋದದಿಂ ಸಕಲಭಕ್ತರ್ಗೆ ವರಮಂ ಕರುಣಿಸುತಿರ್ದನೆಂಬ ಗಿರಿಜಾ[೪]ಕಲ್ಯಾಣ[೪]ಕಥಾಕಾವ್ಯಮಂ ಹಂಪೆಯ [೫]ಮಾದರಸದೇವರ[೫] ಕಾರುಣ್ಯದ ಶಿಶುವಪ್ಪ ಹಂಪೆಯ [೬]ಹರಿಹರಂ[೬] ಬಿನ್ನಪಂಗೆಯ್ದನೀ ಪ್ರಬಂಧಮಂ ಸಕಲಭಕ್ತರ್ ಸುಚಿತ್ತದಿಂದವಧರಿಪುದದೆಂತೆಂದೊಡೆ:—

---

೧ ಹರಿಬ್ರಹ್ಮಾದಿ ಸುರನಿಕರಋಷಿಗಳುಂ ದೇವಗಣಂಗಳುಂ (ಮ); ಹರಿಬ್ರಹ್ಮೇಂದ್ರಸುರಾದಿ ಸಕಲ ಋಷಿಕುಲ ದೇವಗಣಂಗಳುಂ (ದಾ); ಶಿವಂ ಹರಿ ಬ್ರಹ್ಮಾದಿ ಸುರಮುನಿನಿಕರಮುಂ (ಅ). ೨ ಗಿರಿರಾಜನಲ್ಲಿಗೆ ಪೋಗಿ (ಅ). ೩ ಪಾರ್ವತಿಯುಂ ಬೇಡಿ (ಬ ಮ ಅ). ೪ ಕಲ್ಯಾಣಮೆಂಬ (ಅ). ೫ ಮಾದರಸರ (ಕ ಕಾ) ೬ ಹರಿಹರದೇವಂ (ಮ ಅ ದಾ ಬ); ಹರಿಹರದೇವರು (ಗ ಸ).

ಕಥಾಪ್ರಾರಂಭ

ಪ್ರಥಮಾಶ್ವಾಸಂ

(ಹೈಮಾಚಲವರ್ಣನಂ)

ಸ್ರಗ್ಧರೆ

ಶ್ರೀಮಚ್ಛೈಲೇಂದ್ರ[೧]ಪುತ್ರೀಗುರುತರ[೧]ಸುರತಕ್ಷೀರವಾರಾಶಿಚಂದ್ರಂ
ವ್ಯೋಮಾರ್ಕೇಂದುಕ್ಷಮಾತ್ಮಾ[೨]ನಲಜಲಪವ[೨]ಮಾನಾಷ್ಟಮೂರ್ತಿಪ್ರಸಿದ್ಧಂ
ಪ್ರೇಮಂಬೆತ್ತೀಗೆ ಸದ್ಭಕ್ತಿಯನೆಮಗಮರಾನೀಕಮಾಣಿಕ್ಯಮೌಳಿ
ಸ್ತೋಮಾಂಘ್ರಿಜ್ಯೋತಿ ಪಂಪಾ[೩]ಪುರದರಸ[೩] ವಿರೂಪಾಕ್ಷನಾನಂದದಿಂದಂ ೧

ಗೌರೀಪಾದಾಂಗುಲೀಕೋರಕಮೆಸೆವ ಕರಂ ಪಲ್ಲವಂ ಪುಷ್ಪ[೪]ವೃಂದಾ[೪]-
ಕಾರಂ ಮಂದಸ್ಮಿತಂ ಶಾಖೆಗಳಮರ್ದ ಭುಜಾನೀಕಮಾಸ್ಯಂ ಫಲಂ ಶ್ರೀ-
ಸಾರಂ ತಾನಾದ ಪಂಪಾಪುರದರಸ ವಿರೂಪಾಕ್ಷ[೫]ಕಲ್ಪಾಂಘ್ರಿಪಂ[೫] ವಿ-
ಸ್ತಾರಂಬೆತ್ತೀಗೆ ಸದ್ಭಕ್ತಿಯನೆಮಗಮೃತಪ್ರಾಯೆಯಂ ಪ್ರೀತಿಯಿಂದಂ ೨

ಶ್ರೀಹೇಮಾದ್ರೀಂದ್ರಚೂಡಸ್ಥಿರಕರಣಸಮಾರೂಢಪದ್ಮಾಸನಸ್ಥಂ
ಕೋಹಂಸೋಹಂ[೬]ಗಳೆಂಬಾ[೬] ಗಜಿಬಜಿಪುಗದಾನಂದಸಂವಿತ್ತು ಕಂದ-
ರ್ಪಾಹಂಕಾರಪ್ರವಿಧ್ವಂಸನಕರನಿಟಿಲಾಕ್ಷಂ ಶಿವಂ ಪಾರ್ವತೀಶಂ
[೭]ಸ್ನೇಹಂ[೭] ಕೆಯ್ಮಿಕ್ಕು ಪಂಪಾಪುರಪತಿ ದಯೆಯಿಂ ನೋಡಿ ರಕ್ಷಿಕ್ಕೆ[೮]ಯೆಮ್ಮಂ[೮] ೩

ಉತ್ಪಲ

ಮಂಗಳಮೂರ್ತಿ ಮಾನಿನಿ ಮಹೋಜ್ವಳೆ ಮಾನ್ಯೆ [೯]ಮಹಾ[೯] ಮಹೇಶನ-
ರ್ಧಾಂಗಿ [೧೦]ಮಹಾ[೧೦]ವಿರಾಜಿತೆ ಮಹಾಶಿವ[೧೧]ಭಕ್ತೆ[೧೧] ಮಹಾಪತಿವ್ರತೋ-
ತ್ತುಂಗೆ ಮಹಾತ್ರಿಲೋಚನೆ ಮಹಾನಿಧಿ ತನ್ನ ವಿವಾಹವರ್ಣನಾ
ಸಂಗತಿಯೆಂದು ಮತ್ಕೃತಿಗೆ ಪಾರ್ವತಿ ಮಾಳ್ಕೆ ಮಹೋತ್ಸವಂಗಳಂ. ೪

---

೧ ಕನ್ಯಾನಿರುಪಮ (ಮ ಸ ಅ ಓ). ೨ ಅನಿಲಜಲತಪ (ಶಾ). ೩ ಪುರದಧಿಪ (ದಾ). ೪ ವೃಂತಾ (ಶಾ ಕ). ೫ ಕಲ್ಪಾಂತಪಂ (ಗ). ೬ ಯೆನಿಪ್ಪಾ (ಅ). ೭ ನೇಹಂ(ಅ). ೮ ನಮ್ಮಂ (ಬ ಮ); ಯೆಂದುಂ (ಕೊ). ೯ ಉಮಾ (ಯ). ೧೦ ಮಹೋ (ಬೆ ಶಾ ಅ ಓ). ೧೧ ಶಕ್ತೆ (ಬೆ ಅ ಬ ಕೆ).

ಸ್ರಗ್ಧರೆ.

ಎನ್ನೀ ಕಾವ್ಯಕ್ಕೆ ನಿರ್ವಿಘ್ನದಿನತುಳನವೀನಾರ್ಥವಾಕ್ಯಪ್ರಸನ್ನೋ-
ತ್ಪನ್ನಾಲಂಕಾರಮಂ [೧]ಮಾಡುಗೆ[೧] ವಿಪುಳಕಪೋಳ[೨]ಸ್ಥಳಾಂತ[೨]ಸ್ಥಳೀಸಂ-
ಭಿನ್ನೋದ್ಯದ್ದಾನಧಾರಾಪ್ರಬಳಪರಿಮಳಾಸಕ್ತಭೃಂಗಾವಳೀಸಂ-
ಪನ್ನಪ್ರೋದ್ಭೂತಝುಂಕಾರಿತರವಮುದಿತಾನಂದವೇಶಂ ಗಣೇಶಂ ೫

ಚಂಪಕ

ಪುಳಕಮನೆಳ್ಪಿಸುತ್ತೆ ಹರನಂ ಪರಿದಪ್ಪುತೆ[೩] ಸಂತಸಂಗಳಂ
ಬಳೆಯಿಸುತುಂ ಭವಾನಿಯ ಪಯೋಧರಮಂ ನಲಿದುಂಡು ವಕ್ತ್ರಮಂ-
ಡಳಮನಲರ್ಚುತುಂ ನಗುವ ಹೊಂಗುವ [೪]ಹಿಗ್ಗುವ[೪] ಪೊಣ್ಮು[೫]ವಣ್ಮುವ[೫]-
ಗ್ಗಳಿಸುವ ಪಾಡುವಾಡುವ ಷಡಾನನನೀ ಕೃತಿಗೀಗೆ ರಾಗಮಂ ೬

ಶಿವನ ಮನೋಹರಂ ಶಿವನ ಪುಣ್ಯಫಲಂ ಶಿವ[೬]ನಾಪ್ತ[೬]ಸಂಕುಳಂ
ಶಿವನ ವಿಲೋಚನಂ ಶಿವನ ಗೋತ್ರ[೭]ಕುಲಂ[೭] ಶಿವನೂರ್ಜಿತೋಜ್ವಲಂ
ಶಿವನ ಸುಖಂ ಸದಾಶಿವನ ಸರ್ವಮುಖಂ ಶಿವಭಕ್ತರೆನ್ನ ಕಾ-
ವ್ಯವನತಿ[೮]ಸಮ್ಮುದಂ[೮] ಬೆರಸಿ [೯]ಪೊರ್ದುಗೆ ತಿರ್ದುಗೆ ತಾಳ್ದಿದಳ್ಕರಿಂ[೯] ೭

ಘನಕವಿತಾವಿಳಾಸದೊಳೆ ಸಂದ ಮಯೂರನ [೧೦]ರೇಖೆ[೧೦] ಕಾಳಿದಾ-
ಸನ ರಸವೃತ್ತಿ ಬಾಣನ ಮೃದೂಕ್ತಿ ಹಲಾಯುಧ[೧೧]ನಂಶು[೧೧] ಕೇಶಿರಾ-
ಜನ ಬಗೆಯುದ್ಭಟಯ್ಯನ ಗಭೀರತೆ ಮಲ್ಲಣನೇಳ್ಗೆ ಭೋಜರಾ-
ಜನ ಜಸಮೆನ್ನ [೧೨]ಕಾವ್ಯರಸದೊಳ್ ನಲವಿಂ[೧೨] ನೆಲಸಿರ್ಕೆ ಸಂತತಂ ೮

---

೧ ಕೂಡುಗೆ (ಕಾ ದಾ ಅ ಗೊ ಗ ಸೆ ಬೆ ಬ). ೨ ಸ್ಥಳಾಂಶ (ಅ). ೩ ವ (ಅ ಬ ದಾ ಗ ಗೊ ಸೆ). ೪ ಹಿಂಗುವ (ಬ). ೫ ಪುಣ್ಮುವ (ಅ). ೬ ನಾತ್ಮ (ಅ). ೭ ಚಯಂ (ಗೊ ಬ); ಬಲಂ (ಕಾ ಕ). ೮ ಸಮ್ಮಪಂ (ಕಾ ಯು ಬೆ). ೯ ತಿರ್ದುಗೆ ಪೊರ್ದುಗೆ ತಾಳ್ವುದಕ್ಕರಂ (ಅ ಗೊಸ); ಪೊರ್ದುಗೆ ತಿರ್ದುಗೆ ತಾಳ್ದುಗಕ್ಕರಂ (ಕ). ೧೦ ಲೇಖೆ (ದಾ). ೧೧ ನಾಶು (ಕಾ ಅ ಗೊ ಕ ಡ ಯು); ನಾಸು (ಸೆ). ೧೨ ಕಾವ್ಯದೊಳನೂನತೆಯಿಂ (ಕೊ ಬೆ).

ಚತುರಚತುರ್ಮುಖನೆಲ್ಲಾ
ಶ್ರುತಿಗಳನೊಲವಿಂದೆ [೧]ಕಲ್ತ[೧] ಶಿವನ ವಿವಾಹೋ-
ನ್ನತಿ[೨]ಯೀ[೨] ಕೃತಿಯೆಂದೆನೆ ಭಾ-
ರತಿಯೆನಗನುಕೂಲೆಯಾಗದಿರಲ[೩]ಣ್ಮು[೩]ವಳೇ ೯

ಕೊಂಡಾಡುಗೆ ಕಲ್ತೋದುಗೆ
ಮುಂಡಾಡುಗೆ ಮುದ್ದಿಸುಗೆ ಮರಲ್ದಪ್ಪುಗೆ ಕೆಯ್‌-
ಕೊಂಡೀ ಕಾವ್ಯಮನಗಜೆಯು
ಗಂಡನಲಂಪಿಂದೆ ಹಂಪೆಯ ವಿರೂಪಾಕ್ಷಂ ೧೦

[೪]ಇಂತು ಬೇಡಿಕೊಳುತಿರ್ಪಲ್ಲಿ[೪]

ಚಂಪಕ

ಅತುಳತರಾರ್ಥಮರ್ಥವನುವೃತ್ತಿ ಪದಂ ಪದದಿಚ್ಛೆ ಬಂಧಮೂ-
ರ್ಜಿತಪದಬಂಧ[೫]ಸಂಧಿ[೫] ನವರೀತಿ ಸುರೀತಿ [೬]ಗುಣಂ[೬] ಸದ್ಯಕ್ಕಲಂ-
ಕೃತಿ ಸದಲಂಕೃತಿ ಪ್ರತಿಮವೊಪ್ಪುವ ಭಾವಮನೂನಭಾವದು-
ನ್ನತರಸಮೆಂದು ಸತ್ಕವಿಗಳಾಲಿಸೆ ಪೇಳ್ದಪೆನೀ ಪ್ರಬಂಧಮಂ ೧೧

ಕಂದಂಗಳಮೃತಲತಿಕಾ
ಕಂದಂಗಳನೂನ[೭]ವಾಕ್ಯ[೭]ಫಲವಿಲಸನ್ಮಾ-
ಕಂದಂಗಳ್ ತನಿರಸದು-
ಕ್ಕಂದಂಗಳ್ ಸೊಗಯಿಸಿರ್ಪುವೀ [೮]ಸತ್ಕೃತಿ[೮]ಯೊಳ್ ೧೨

ಪದ್ಯಂಗಳ್ ನವರಸನಿರ-
ವದ್ಯಂಗಳ್ ಸುಜನ ಸಂಕುಳಕ್ಕೆ [೯]ನಿರಂತಂ[೯]
ಹೃದ್ಯಂಗಳ್ [೧೦]ಧಾರಿಣಿ[೧೦]ಗತಿ-
ಚೋದ್ಯಂಗಳ್ ಮೆಱೆಯುತಿರ್ಪುವೀ ಸತ್ಕೃತಿಯೊಳ್ ೧೩

---

೧ ಕಲ್ತು (ಅ ಜಿ). ೨ ಯಾ (ಕಾ). ೩ ಮ್ಮು (ಅ). ೪ ಎಂದಿಂತು ಬೇಡಿಕೊಳ್ವಲ್ಲಿ (ಕ ಕಾ). ೫ ಡಂಡ (ಬ). ೬ ಗಣಂ (ಕ ಅ ಜಿ). ೭ ಕಾವ್ಯ (ಯ). ೮ ನುತಕೃತಿ (ಕಾ ಬ ಜಿ ಯ ಅ ಕ ಗ ನೆ). ೯ ನಿತಾಂತಂ (ಕಾ). ೧೦ ಧಾರುಣಿ (ಅ).

ಕಾವ್ಯಂ ತಾನಿದು ನವರಸ-
ಸೇವ್ಯಂ ಗಿರಿಜಾಧಿನಾಥನುರುತರಕರ್ಣ-
ಶ್ರಾವ್ಯಂ ವಸುಧಾತಳದೊಳ್
ನವ್ಯಂ ಭೂತೇಶಭಕ್ತಜನತಾ[1]ಭಾವ್ಯಂ[1] ೧೪

ಪೊಸತಿದು ಪಾವನಮಿದು ರಂ-
ಜಿಸುವ ಮಹಾನರ್ಘ್ಯಮಿಂತಿದೆಂಬೀ ಜಸದಿಂ
[2]ರಸವತ್ಕಾವ್ಯಂ ತಾಂ[2] ರಾ-
ಜಸಭೆ ಬ್ರಹ್ಮಸಭೆ ದೇವಸಭೆಗೆಸೆದಿರ್ಕುಂ ೧೫

ಅದುಕಾರಣದಿಂ,

ಸ್ರಗ್ಧರೆ.

ಸೇವ್ಯಂ ಸೌಖ್ಯಂ ಪ್ರಸನ್ನಂ ನವರಸವಿಭವಂ ಪುಣ್ಯಪುಂಜಂ ಶುಭಂ ವಾ-
ಗ್ದೇವ್ಯಾವಾಸಂ ವಿವೇಕೋನ್ನತ[3]ಜನನಿಧಿ[3] ಸಂಸಾರವಿಶ್ರಾಮದೇಶಂ
ದಿವ್ಯಜ್ಞಾನೋಕ್ತಿಮಾರ್ಗಂ ನಿರತಿಶಯಪದಂ ಕೂರ್ತು [4]ಪೇಳ್ವಳ್ತಿಯಿಂದಂ[4]
ಕಾವ್ಯಂ ಕಲ್ಪಾಂತರಸ್ಥಾಯಿಯೆನಿಪ ನುಡಿ ಸತ್ಯಂ ಕವೀಶಾಧಿಪತ್ಯಂ ೧೬

ಸುರತರುವಿನಂತೆ ಸುಜನರ
ಸಿರಿಯಂತೆ ಸರೋಜದಂತೆ ಸುಧೆಯಂತೆ ಸುಧಾ
ಕರಕಿರಣದಂತೆ ಹಂಪೆಯ
ಹರಿದೇವನ ಕಾವ್ಯಮಖಿಳಸೇವ್ಯಂ ನವ್ಯಂ ೧೭

---

೧ ಭವ್ಯಂ (ಕ ಅ). ೨ ರಸವಂ ನವಕಾವ್ಯಂ (ಮ). ೩ ಜಲನಿಧಿ (ಕಾ ಯು ಬಿ).
೪ ಪೇಳ್ದರ್ಥಿಯಿಂದಂ (ಅ).

ಚಂಪಕ

ಪ್ರಿಯವಚದಂತೆ ಪುಣ್ಯತತಿಯಂತೆ ಸುಧಾಕರನಂತೆ ಕೂರ್ತ ಮು-
ಗ್ಧೆಯ ಕಡು[೧]ನೇಹ[೧]ದಂತಮೃತದಂತೆ ವಸಂತಕನಂತೆ ಪುಷ್ಪಮಾ-
ಲೆಯ ಪೊಸಗಂಪಿನಂತೆ ಮಲಯಾನಿಲನಂತೆ ಮರಾಳನಂತೆ ಹಂ-
ಪೆಯ ಹರಿದೇವ[೨]ನುನ್ನತಕೃತಿಪ್ರಸರಂ ಭುವನೈಕಭಾಸುರಂ[೨] ೧೮

[೩]ನೆರೆದು ಕುತರ್ಕದಿಂದರೆದು ಸಣ್ಣಿಸಿ ನುಣ್ಣಿಸಿ[೪]ಯುಂತದಿಂದು[೪] ಪೋ-
ದರ ಕೃತಿಯೊಳ್ ತನ್ನ ಕೃತಿ ಪೊಲ್ಲದಿದೆಣ್ಣೆಗೆ ಬೆಣ್ಣೆ ಸಣ್ಣವೆಂ
ಬರ ನುಡಿ ಬೇಡ ಪೇಳ್ವನತಿಭಾವರಸಾರ್ಥದೊ[೫]ಳಾತ್ತ[೫]ಛಂದವಮಂ
ಪರಸುಖವೃಂದವಮಂ ಸೊಗಯಿಪಂದಮನೀ ಸುಕರಪ್ರಬಂಧಮಂ ೧೯

ನವರಸ[೬]ಮಂತಿ[೬]ಭಾವಾರ್ಥಂ
ನವೀನ ಪದ[೭]ಭ[೭]ರಿತಮಿಂತಿದೆನೆ ಸತ್ಕೃತಿಯುಂ
ತವೆ ಪೇಳ್ವುದು ಪೇಳದೊಡೇಂ
ಕವರ್ವರೆ ಕೋಪಿಪರೆ ನಿಂದಿಪರೆ ದಂಡಿಪರೇ ೨೦

[೮]ಕೇಳಲೊಡಂ[೮] ಕಿವಿ ಸವಿಯೊಳ-
ಗಾಳದೊಡಂ ತನ್ಮನಂ ಮುಳುಂಗದೊಡಂ ಸೌ
ಖ್ಯಾಳಂಬಿಯೆನಿಪ ಚಿತ್ತಂ
ಲೀಲೆಯೊಳವಗಾಹಮಿರದೊಡಮು ಸತ್ಕೃತಿಯೇ ೨೧

---

೧ ಮೋಹ (ಅ).

೨ ನೊಪ್ಪಿರೆ ನಿಮಿರ್ಚಿದ ಕಾವ್ಯವಿಳಾಜನೋತ್ಸವಂ (ಕಾ ಕ ಡ); ನುನ್ನತಕೃತಿ ಪ್ರಸರಂ ಭುವನೈಕ ಪೂಜಿತಂ (ಯ ಬೆ ದಾ ಅ ಬ ಕೊ ಗೊ ಗ ಸೆ).

೩ ನೆರೆಯೆ (ಕಾ).

೪ ಯಂತುಟಿಂತು (ಮ); ಯಂತಡಿಂತು (ಬೆ ಬ ದಾ ಅ ಕೊ)

೫ ಳಾಂತ (ಅ ಗೊ).

೬ ಮುಂ. (ಗೊ ಬ ಅ).

೭ ಚ. (ಮ ಅ ಗೊ ಕೊ)

೮ ಕೇಳದೊಡಂ (ಅ ಕ).

ಅಂತುಮಲ್ಲದೆಯುಂ

ಓದಿದೊಡೆ ಕಲ್ಲವಾಲೆಯು
ನಾದಂ [೧]ಕರ್ಬೊನ್ನ[೧] ಕಡಲೆ ವಾದಿಸೆ ರಸಮಂ
[೨]ಸೋದಿಸೆಯುರ್ಕಿನ[೨] ಪುಡಿಯೆನಿ
ಪಾ ದುಷ್ಕವಿತೆಗಳನೆಣಿಸಲೇಕೀ ಕೃತಿಯೊಳ್ ೨೨

[೩]ಹಱ[೩]ಗವಿಗಳ ಕಬ್ಬಂಗಳ
ಹೊಱಗಳಯುಕ್ಕರದ ಹೊಲಿಗೆ ಬಿರ್ಚಿದೊಡೆಲ್ಲಂ
[೪]ಬಱ[೪] ತಾಱಗೆ ಬೀಱಗವೆ
ತ್ರುಱ ತತ್ರುಱವೆಕ್ಕಸಕ್ಕ[೫]ಮಸ್ತ್ರಂಬ್ಯಸ್ತ್ರಂ[೫] ೨೩

ಚಂಪಕ

ಪೆಳವನ ಕಣ್ಗಳಂಧಕನ ಕಾಲ್ಗಳವಿಂತೊಡಗೂಡಿ ಗಾವುದಂ
ತಳರ್ದೊಡೆ ಬಲ್ಲಿಪಂ ನಡೆದ ಪಾಳ್ಕೆಯೆನಿಪ್ಪುದೆ ಬೇಡ ಮಾಣೆಲೇ
ಅಳಿಗವಿ ನಿನ್ನ ತನ್ನರವಿನೋದಿನ ಕಬ್ಬಮನೋದದಿರ್ ಸುಧಾ
ನಿಳಯದ ಮುಂದೆ ಸತ್ಕೃತಿಯ ಮುಂದೆ [೬]ಸುಖಾಬ್ಧಿಯ[೬]
ಮುಂದದೊರ್ಮೆಯುಂ ೨೪

ಅದು ಘೂಕಂ ದಿವದೊಳ್ ಕಾ
ಣದು ನಿಶ್ಚಯಮಂತೆ ದುರ್ಜನಂ ಕಾಣಂ ಕಾ
ವ್ಯದೊಳತಿರಸಮನಸೂಯಾ
ಸದನಂ ಸುಖದೂರನವನ ಮಾತೇಕಿದಱೊಳ್ ೨೫

ಕ್ಷುದ್ರಂಗೆ ಸಕಲ ಸುಜನೋ-
ಪದ್ರವರೂಪಂಗೆ ಪರರ ಕಾವ್ಯಾರ್ಥಮುಮಂ
ಛಿದ್ರಿಸುವಂಗತಿ ಶಬ್ದದ
ರಿದ್ರಂಗಕ್ಕುಮೆ ನವೀನ ಕಾವ್ಯಾರಂಭಂ ೨೬

---

೧ ಕಬ್ಬುನದ (ಬ ದಾ ಬೆ). ೨ ಸೋಡಿಸೆಯುಂಕ್ಕಿನ (ದಾ); ಸೋದಿಸಲುಕ್ಕಿನ (ಅ).
೩ ಅರಿ (ಅ). ೪ ನೆರೆ (ಅ). ೫ ಮಸ್ತ್ರನ್ಯಸ್ತ್ರಂ (ಕಾ ಗೊ); ನ್ಯಸ್ತ್ರಂನ್ಯಸ್ತ್ರಂ (ಕ).
೬. ಸುದಾಬ್ಧಿಯ (ಗೊ ಸೆ).

ಒಳಗಱಿಯದೆ ಸತ್ಕಾವ್ಯದ
ಕಳೆಯಱಿಯದೆ ಲಘುತರತ್ವದಿಂ ನಾಲ್ಕೆರಡಾ
ಯ್ಕಳಿ ಮಾತನಾಡಿ [೧]ನೆಱೆ[೧] ಹೆ
ಕ್ಕಳ ಮಿಕ್ಕಿದೊಡೊಲ್ವರೇ ಕವೀಂದ್ರಾಭರಣರ್ ೨೭

ಬರೆದಾಹ ಬರೆದೆ ಭಾಪುರೆ
ಬರೆದಕ್ಕಟ ಬರೆದೆ ಲೇಸು ಬರೆದೆಯೆನುತ್ತುಂ
ಬಱಿದೆ ತಲೆ[೨]ತೂಕವದಱಿಂ[೨]
[೩]ಬಱಿದಪ್ಪುದು[೩] ಕಾವ್ಯಮಱಿಯದರ ಜಾಣಿಂಮಂ ೨೮

ಚಂಪಕ

ತನಗೆ ಕವಿತ್ವಮಿಲ್ಲ ಪೆಱರಂ [೪]ಪಳಿ[೪]ದಲ್ಲದೆ[೫]ನಿಲ್ಲ[೫] ನಾತನೊಳ್
ಮುನಿವುದನೀತಿ ಪಂದಿ ಡುಱುಕೆಂದೊಡೆ ತಾಂ ಡುಱುಕೆಂಬುದೇ ಮಹಾ
ವನಕರಿಯುಂ ವಿದಾರಿಸುವ ಸಿಂಹಮುಮಂ[೬]ತಿರೆ[೬] ದೋಷಿಯಪ್ಪ[೭]ದು
ರ್ಜನನ[೭] ಕಟೂಕ್ತಿಗಂಜದೆ ಲಸತ್ಕೃತಿಯುಂ ಸಲೆ ಮಾಳ್ಕೆ ಸಜ್ಜನರ್ ೨೯

ಗೌರೀವರಕರ್ಣಾಲಂ
ಕಾರಂ ರಸಪೂರಮತಿಗಭೀರಂ ಕಾವ್ಯಂ
ನೀರಸರಱಿವಂತೇನಿದು
ತಾರೆಲೆಯೋ ಬೀದಿಮಾಡೆ ನೆರವಿಯು[೮]ತು[೮]ಮುಕೇ ೩೦

ರಸಮಿದು ಭಾವಮಿದರ್ಥಮಿ–
ದು ಸಮಾಸಮಿದುಚಿತಪದಮಿದುತ್ಪ್ರೇಕ್ಷೆಯಿದೆಂ
ದು ಸವಿದು [೯]ಸವಿದು ಕರಂ ನವ[೯]
ರಸದೊಳಗಾಳುತ್ತುಮಿರ್ಪ [೧೦]ರಸಿಕರೆ[೧೦]ಂಬಲ್ಲರ್ ೩೧

---

೧ ಮುಱಿ (ಕಾ ಕ ಯು). ೨ ದೂಗುಪ್ರಾಡಱಿಂ (ಕಾ ಯು ಬೆ). ೩ ಮರಿಪಟ್ಟುದು (ಕ). ೪ ಜಱಿ (ಗೊ). ೫ ಮಾಣ (ದಾ). ೬ ತತಿ (ಕಾ ಬೆ ಯು ಬ ನೆಗೊ ಕ). ೭ ದುರ್ಜನರ (ಕಾ). ೮ ದು (ಯು ಗೊ ದಾ ಕ ಸೆ). ೯ ಭಾವಕರುನವ (ಗೋ). ೧೦ ರಸಿಕರ್ (ಕಾ ಬ ಯು).

ನೋಡುವೊಡೊಂದಕ್ಕರಮದು
ಮಾಡುವೊಡುಚ್ಚರಣೆಗರಿದು ಮೂಱಿಂ ತೆಱನಂ
ಕೂಡೆ ಕವಿತತಿ ವಿಚಾರಿಸ
ಬೇಡದಱಿಂ ಱಳ[೧]ಕುಳಕ್ಷಳಂ[೧]ಗಳನಿದಱೊಳ್ ೩೨

ಮಹಾಸ್ರಗ್ಧರೆ

ಗಿರಿಜಾಕಲ್ಯಾಣಮಿಂತೀ ನುತಕೃತಿಯ ಪೆಸರ್ ಭಾಪುರೇ ಕಾವ್ಯನಾಥಂ
ಗಿರಿಜಾನಾಥಂ ಕಥಾಸಂಗತಿ ವರಗಿರಿಜೋದ್ವಾಹವೀ ಕಾವ್ಯಮಂ [೨]ವಿ
ಸ್ತರದಿಂ[೨] ತಾನೊಲ್ದು ಪೇಳ್ದಂ ಶಿವಕವಿ ಹರಿದೇವಂ ಮಹೋತ್ಸಾಹದಿಂದಂ
ಪರಮಾನಂದಾಬ್ಧಿ ಪಂಪಾಪುರದರಸ ವಿರೂಪಾಕ್ಷಸಾಕ್ಷಾತ್ಸುಪುತ್ರಂ ೩೩

ಆತನ [೩]ಕುಲಗುರು[೩]ವತಿ ವಿ
ಖ್ಯಾತಂ ಘನಪೂತಮಿಂದುಧರಸಂಭೂತಂ
[೪]ನೂತಂ[೪] ಪುಣ್ಯವ್ರಾತಂ
ಪ್ರೀತಿಕರಂ ಭೂತಳಾತಿಶಯ ಸುಖಜಾತಂ ೩೪

ಚಂಪಕ

ಸುರುಚಿರಮೂರ್ತಿ ಸತ್ಯತರಮೂರ್ತಿ ಕೃಪಾಕರಮೂರ್ತಿ ಪುಣ್ಯವಿ
ಸ್ತರಗುರುಮೂರ್ತಿ ಶಾಂತಿಮಯಮೂರ್ತಿ ಸುಧಾಕರಮೂರ್ತಿಯುತ್ತರೋ
ತ್ತರವರಮೂರ್ತಿ ಮುಕ್ತಿಸುಖಮೂರ್ತಿ ಮನೋಹರಮೂರ್ತಿ [೫]ಚಂದ್ರಶೇ
ಖರ ಗುರುಮೂರ್ತಿ ಕೀರ್ತಿಪತಿ ಹಂಪೆಯ ಶಂಕರದೇವರೊಪ್ಪುವರ್[೫] ೩೫

ಶಾರ್ದೂಲ

ಆ ಶೈವಾಗಮಸಿದ್ಧರಪ್ಪ ಪರಮಶ್ರೀ ಶಂಕರಾಚಾರ್ಯರಿಂ
ಪಾಶಚ್ಛೇದಮನಿಂಬುಗೊಂಡು [೬]ಮೆಱೆದಂ[೬] ಶ್ರೀ ಶುದ್ಧ ಪಂಚಾಕ್ಷರೀ
[೭]ವೇಶಂ ಭಕ್ತಿ[೭]ರಸಾರ್ದ್ರಚಿತ್ತಯುತಹೃದ್ರಾಜೀವಸಂಪೂರ್ಣಸಂ
[೮]ಕಾಶಂ ಪ್ರಾಂಜಲ[೮]ಮೂರ್ತಿ ಕೀರ್ತಿಭರಿತಂ ಶ್ರೀಮಾದಿರಾಜಾಹ್ವಯಂ ೩೬

೧ ಕುಳಕ್ಷರ (ದಾ ಬ ಗೊ ಗ). ೨ ಬಿತ್ತರದಿಂ (ಕಾ ಬೆ). ೩ ಗುರುಕುಲ (ಕಾ ದಾ ಗೊ ಕ ನೆ ಯು ಬೆ). ೪ ನೂತನ (ಕಾ ಯು ಬೆ). ೫ ಶಂಭುತಂ|ಕರ ಶಿವಮೂರ್ತಿ ಕೂರ್ತು ನೆಲಸಿರ್ಕೆಯನಾರತಮೊಪ್ಪೆ ಹಂಪೆಯೊಳ್ (ದಾ ಬ ಗ ಕ). ೬ ಮೆಱೆವಂ (ಬ ಬೆ ಮ ಗೊ). ೭ ವೇಶಾನಂದ (ಕಾ ಬ ಬೆ ಯು ಸೆ ದಾ ಗ). ೮ ಕಾಶಪ್ರಜ್ವಲ (ಕಾ ಕ ಬ).

ಇಂತಿಂತೊಪ್ಪುವ ಮಾದಿರಾಜನ ಮನೋದುಗ್ಧಾಬ್ಧಿಚಂದ್ರಂ ಶಿವಂ
ಶಾಂತಂ ಶಾಶ್ವತಮೂರ್ತಿ ಶೈವಸುಭಗಂ ಸಾಕಾರಸರ್ವೇಶ್ವರಂ
ಸಂತೋಷಾಭರಣಂ ಪ್ರಸನ್ನಕರಣಂ ಪ್ರತ್ಯಕ್ಷಪಂಚಾನನಂ
ಸಂತಂ ಹಂಪೆಯ ಮಾಯಿ[1]ದೇವ[1]ನೆಸೆದಿರ್ಪಂ ಶೈವಸಾರೋದಯಂ ೩೭

ಶ್ರೀಗುರು ಪರಗುರು ಘನಮಹಿ
ಮಾಗುರು ಮಾಘುರ್ಯಗುರು ಮಹಾಗುರು ವರವಿ
ದ್ಯಾಗುರು ಸುಖೈಕಗುರು ವಸು
ಧಾಗುರು ಶೈವಗುರು ಶಾಂತಗುರು ಮಾಯಿದೇವಂ ೩೮

ಚಂಪಕ

ಸದಮಳನೆಂಬುದುತ್ತಮಗುಣಾಶ್ರಯನೆಂಬುದು ಶೈವಸಿದ್ಧನೆಂ
ಬುದು ರವಿತೇಜನೆಂಬುದು ಕೃಪಾಂಬುಧಿಯೆಂಬುದು ಶಾಂತಮೂರ್ತಿಯೆಂ
ಬುದು ಪರಮಾಗಮಪ್ರಕರನೆಂಬುದು ಹಂಪೆಯ ಮಾಯಿದೇವನೆಂ
ಬುದು ಶಿವನೆಂಬುದಪ್ರತಿಮನೆಂಬುದು ಸದ್ಗುರುವೆಂಬುದೀಜಗಂ ೩೯

ಧರೆಯೊಳಗಾ ಮಾಯಿದೇವರ
ಸರ [2]ಕರುಣಂ[2]ಬಡೆದು ಮೆಜ[3]ವನುನ್ನತ[3]ಮಹಿಮಂ[3]
ಗುರುಪದಭಕ್ತಂ ಹಂಪೆಯ
ಹರಿದೇವಂ [4]ದೇವಕವಿ ಕಳಾವಿದರರಸಂ[4] ೪೦

ಜಾಣಂ ರಸಿಕಂ ಸುಜನ
ಪ್ರಾಣಂ ಕವಿತಾನಿಧಾನನಧಿಕಂ ಪುಣ್ಯಾ
ಕ್ಷೂಣಂ ವರಗಿರಿಜಾಕ
ಲ್ಯಾಣಮನೊರೆದಂ ವಿವೇಕಿ ಹರಿಹರದೇವಂ ೪೧

---

೧ ಶಾಜ (ಕ). ೨ ವರವುಂ (ಕ ಶಾ ಡ ಸೆ). ೩ ತೇಜಂ (ಶಾ).
೪ ಕವಿಕಳಾವಿಶಾರದರರಸಂ (ಬೆ).

ಸ್ರಗ್ಧರೆ

ಎಂದಿಂತೆಲ್ಲಾ ಕವೀಂದ್ರರ್ ಪೊಗಳೆ ಪರಸೆ ಭಕ್ತವ್ರಜಂ ಸಜ್ಜನರ್ ಸಾ
ನಂದಂ ಮಜ್ಝಯ್ಯ ಭಾಪುನ್ನತಕೃತಿ ಭಲರೇ ಚಿತ್ರಮಾಹಾ ಎನುತ್ತೊ
ಳ್ಪಿಂದಂ ಕೊಂಡಾಡೆ ಲೋಕಂ ಸ್ತುತಿಯಿಸೆ ಪದೆಪಿಂ ಪೇಳ್ದಪೆಂ ರೀತಿಭಾವಂ
ಛಂದೋಲಂಕಾರಸಾರಂ ಪುದಿದಿರೆ ಗಿರಿಜೋದ್ವಾಹಮಂ ಪ್ರೀತಿಯಿಂದಂ ೪೨

ಗಿರಿಜಾಕಲ್ಯಾಣಮನೊ
ಲ್ದೊರೆವೆಂ ಗುರುಕರುಣದಿಂದೆ ರಸಿಕರ್ ಕವಿಗಳ್
ಪಿರಿಯರ್ ಸುಜನರ್ ಭಕ್ತರ್
ಪರಮಾರ್ಥದೆ ಕೇಳ್ವುದೀ ಪ್ರಬಂಧೋನ್ನತಿಯಂ ೪೩

ಎಂತೆನೆ ವಿಶಾಲಧಾತ್ರೀ
ಕಾಂತಾನಾಭೀಸರೋಜಸುರುಚಿರವರಮ
ಧ್ಯಾಂತಃಸ್ಥಿತನುತಕರ್ಣಿಕೆ
ಯಂತಿರ್ಪುದು ಮೇರುಮದರ ಮೂಡಣ ದೆಸೆಯೊಳ್ ೪೪

ಶಿವಶಿವ ಪಂಚಾಶತ್ಕೋ
ಟಿ[1]ವಿಸ್ತೃತಾ[1]ವನಿಗೆ ನೀಲಮೇಖಲೆಯಂತೊ
ಪ್ಪುವುದಾತ್ತಲೋಲಕಲ್ಲೋ
ಲ ವಿವಿಧಸಲಿಲಚರಪೂರಪಾರಾವಾರಂ ೪೫

ಅದೆಂತೆಂದೊಡೆ,

ಮಹಾಸ್ರಗ್ಧರೆ

ವಿಳಸತ್ಕಲ್ಲೋಲಮಾಲಾಪ್ರತಿಹತವಿತತಪ್ರೋಚ್ಚಲಚ್ಛೈಲಕೋಳಾ
ಹಳತೋದ್ಯತ್ಫೇನನಾನಾಕರಿಮಕರಪುಚ್ಛಪ್ರಹಾರಪ್ರತಾಪೋ
ದ್ಗಳಿತಾನಂತಪ್ರರತ್ನಪ್ರಬಲಜಲಚರಾನೀಕಗಂಭೀರಭೀಮೋ
ಜ್ವಳರಾವಪ್ರೋದ್ಭೂತಪ್ರೋನ್ಮಿಳಿತಘುಳುಘುಳುಧ್ವಾನಮಂಭೋನಿಧಾನಂ ೪೬

---

೧ ವಿಶ್ರುತಾ (ಮ ಬ).

ಮತ್ತಮಲ್ಲದೆ,

ಮತ್ತೇಭ

ನೊರೆಯಿಂ ಬುದ್ಬುದದಿಂ ಕಣಾವಳಿಗಳಿಂದಾವರ್ತದಿಂ ತುಂತುಱಿಂ
ತೆರೆಯಿಂ ಪೆರ್ದೆರೆಯಿಂ ತಿಮಿಂಗಿಲುಗಳಸ್ತೋಮಂಗಳಿಂ ಕಚ್ಛಪೋ
ತ್ಕರದಿಂ ನಕ್ರನಿಕಾಯದಿಂ ಮಕರದಿಂ ನೀರಾನೆಯಿಂ ಕಂಬುವಿಂ
ವರರತ್ನವ್ರಜದಿಂ ಪ್ರವಾಳಲತೆಯಿಂದೊಪ್ಪಿತ್ತು ನೀರಾಕರಂ ೪೭

ಶಾರ್ದೂಲ

ಆ ವಿಸ್ತಾರಗಭೀರವಾರಿನಿಧಿಯಿಂದಂ ಪಶ್ಚಿಮಾಂಭೋಧಿಗಂ
ತೀವಿರ್ದೊಪ್ಪುವುದಾತ್ತಗಹ್ವರಗುಹಾಸಂತಾನಪರ್ಯಂತಗೋ
ತ್ರಾವಾಸೋಜ್ಜ್ವಲಗಂಡಶೈಲಶಿಖರಪ್ರೋದ್ಭೂತಭೂಜಾತಪ
ತ್ರಾವೇಶೋನ್ನತಭೀಮರೂಪಧರದೇವಾಗಮ್ಯಹೈಮಾಚಳಂ ೪೮

ಸ್ರಗ್ಧರೆ

ಆರಾಜತ್ಕೌಮುದೀಸಂಗತಶಿಶಿರಶಿಲಾನೀಕನಿರ್ಯದ್ಧಿಮಂ ಸ
ಸ್ಮೇರಾಬ್ಜಾಕ್ಷೀಕರೋತ್ಪಲ್ಲವ[೧]ನಖ[೧]ಕುಸುಮವ್ರಾತಚಂಚದ್ವಸಂತಂ
ಸೂರಾಂಶುಸ್ಪರ್ಶತೀವ್ರಾನಳಕರರವಿಕಾಂತಾತಪೋದ್ಯನ್ನಿದಾಘಂ
ಕ್ರೂರಾಭೀಳದ್ವಿಪಪ್ರೋಚ್ಚಳಿತಮದಜಲಾಸಾರಸಾಂದ್ರಂ ನಗೇಂದ್ರಂ ೪೯

ಅಂತುಮಲ್ಲದೆಯುಂ,

ಉತ್ಪಲ

ಪಾಱುವ ಸೋಗೆ ಸೀಗುರಿ ಚಲಚ್ಚಮರೀಮೃಗವೀಥಿ ಚಾಮರಂ
ಮೀಱಿ ನಿಮಿರ್ಕೆವೆತ್ತ ಕುಜಮೆತ್ತಿದ ಸತ್ತಿಗೆ ಸಿಂಹವಿಷ್ಟರಂ
ತೋಱುವ ಚಂದ್ರಕಾಂತಶಿಲೆಯಾಗೆ ಸಮುನ್ನತರಾಜಲೀಲೆಯಂ
ಬೀಱುತೆ ಪೂರ್ವಪಶ್ಚಿಮಕೆ ಪರ್ವಿದ ಪರ್ವತರಾಜನೊಪ್ಪುಗುಂ ೫೦

---

೧ ನವ (ಗೊ).

ಮತ್ತಮಲ್ಲದೆಯುಂ,

ಚಂಪಕ

ಗಿರಿಶಿಖರಂ [1]ಮುಖಂ ಮಱ[1]ದೊಳೊಪ್ಪುವ ಬೀಳಲೆ ತಜ್ಜಟಾಳಿ ವಿ
ಸ್ತರ[2]ವರ[2]ಗಂಡಶೈಲಮೆ ವಿಕೀರ್ಣಭುಜಾವಳಿ ವಾದ್ಯಸಂಕುಲಂ
[3]ಕರಿಕುಳ[3]ಬೃಂಹಿತಂ ನೆಗಳ್ದ ಸಿಂಹರವಂಗ[4]ಳವಾಗೆ[4] ಸಂತತಂ
ಸ್ಮರರಿಪು ನಾಟ್ಯದೊಳ್ ನೆಲಸಿ ನಿಂದ[5]ವೊಲೊಪ್ಪಿತು[5] ಭೂರಿಭೂಧರಂ ೫೧

ನಳನಳಿಸುತ್ತೆ ಸುತ್ತಿಡಿದು ತೋರ್ಪ ಕದಂಬಕದಂಬದಿಂ ಚಳ
ಜ್ಜಳದಮನೊತ್ತರಿಪ್ಪ ಘನದೀರ್ಘಸುಕೋಮಳವಂಶವಂಶದಿಂ
ಬಳಸಿಗಮೆತ್ತಲುಂ ತುಱುಗಿ ಪರ್ವಿದಗುರ್ವಿನ ಬಿಂಬಬಿಂಬದಿಂ
ದಿಳೆಯೊಳಗೊಪ್ಪುತಿರ್ಪುದು ಹಿಮಾಚಳವಾಶ್ರಿತಗೋತ್ರಗೋತ್ರದಿಂ ೫೨

ಮತ್ತಮಲ್ಲದೆ

ಉರವಣಿಸಿ [6]ನಡೆತರುತ್ತುಂ[6]
ಗಿರಿಶಿಖರಮನೇಱಲಾಱದೆರಡುಂ ದೆಸೆಯೊಳ್
ಬರಲನುವಂ ಕಂಡು ದಿವಾ
ಕರನಂದಿಂ ದಕ್ಷಿಣೋತ್ತರಾಯಣನಾದಂ ೫೩

ಹರಹರ ಗಿರಿಯುದ್ದಮು[7]ನಾರ್
ವಿರಚಿ[7]ಪರಗಚೂಡದಲ್ಲಿ ನಿಂದಿರ್ದು ಸಮಂ
ತಿರೆ ತಾರಗೆಯುಂ ವಿದ್ಯಾ
ಧರಿಯರ್ ಮುತ್ತೆಂದು ತೆಗೆದು ತುಡಲವ್ವಳಿಪರ್ ೫೪

---

೧ ಮುಖಾಂಕುರ (ಓ). ೨ ತರ (ಬ). ೩ ಕರಿಗಳ (ದಾ).
೪ ಳುವಾಗೆ (ಬ). ೫ ವೊಲಿಪ್ಪುದು (ಯ); ವೊಲಿರ್ದುದು (ಬೆ ಸ)
೬ ನೆರೆದ ಮುತ್ತುಂ (ದಾ); ೭ ನಾರೊರೆದ (ಶಾ).

ಗಿರಿಯುದ್ಧಮನೇನಂ ಬಿ-
ತ್ತರಿಪೆನದಂ ಖೇಚರರ್ ಬಿಸಿಲ್ಗಂಜು[1]ತ್ತುಂ
ಭರದೊಳ್[1] ಬಳಲ್ದು ಬಂದಾ-
ಗಿರಿಶಿಖರದ ಮರದ ತುದಿಯ ನೆಳಲಂ ಸಾರ್ವರ್ ೫೫

[2]ಕರಮೆಸೆದುದು ಗಿರಿಶಿಖರಂ[2]
ಪರಮ ಸ್ವಚ್ಛಂದಲೀಲೆ ಪೆರ್ಚಿದ ಗಂಧ-
ರ್ವರ ಗರುಡರ ಸಿದ್ಧರ ಖೇ-
ಚರರ ಮುನೀಶ್ವರರ ಸುರರ ನೆರವಿಗಳಿಂದಂ ೫೬

ಧರೆಯುಱಿಯೆ ಹೊನ್ನ[3]ಮೆಯ್ಯಾಂ-
ತಿರು[3]ತಿರ್ದುಂ ಲಜ್ಜೆಯಿಲ್ಲ ತನಗೆಂದು ಕರಂ
ಸುರುಚಿರ ಧವಳಿಮದಿಂ ಸುರ
ಗಿರಿಯಂ ಹಿಮನಗದ ಚೆಲ್ವು ನಗದೇಕಿರ್ಕುಂ ೫೭

ಇಂತಿಂತು ಮೆಱೆಯುತಿರ್ಪುವ
ನಂತಂ ಘನತೇಜದಿಂದಯೋಗ್ರಾಹ್ಯತೆಯಿಂ-
ದಂ ತಣ್ಪಿಂದಾಹಾ ರವಿ
ಕಾಂತಮುಯುಸ್ಕಾಂತಮಿಂದುಕಾಂತಂ ನಗದೊಳ್ ೫೮

ಉತ್ಪಲ

ಆ ನಗದಲ್ಲಿ ಪುಣ್ಯತತಿಯೋ ಪ್ರಭೆಯೊರ್ಬುಳಿಯೋ ಮಹೇಶ್ವರ-
ಶ್ರೀನಿಧಿಯೋ ಸುಧಾಕರವೊ ಸತ್ಯವೊ ನಿತ್ಯವೊ ಶೈವಪೂರಿತ-
ಸ್ಥಾನವೊ ಶಾಂತಿಯೋ ದಯೆಯೊ ಧರ್ಮವೊ ನಿರ್ಮಳನೀತಿಯೋ ಶಿವ-
ಜ್ಞಾನವೊ ಮುಕ್ತಿಸಂಕುಳವೊ ಪೇಳೆನೆ ತಾಪಸ[4]ವೀಥಿಯೊ[4]ಪ್ಪುಗುಂ ೫೯

ಗುಹೆಗುಹೆಗಳೊಳಗೆ ಬಳಸಿದ-
ಬಹುಗಹ್ವರಗಹ್ವರಂಗಳೊಳ್ [5]ಪರ[5]ಸೌಖ್ಯಾ-
ವಹ ನಿರ್ಝರನಿರ್ಝರದೊಳ-
ಗಹರಹವೊಪ್ಪಿರ್ಪುದಧಿಕ[6]ಮನುಮುನಿವೃಂದಂ[6] ೬೦

---

೧ ತ್ರಂಬರದೊಳಿ (ಯ). ೨ ಗಿರಿಶಿಖರದ ಚಿತ್ತರಮುಂ (ಕ). ೩ ಮೆಯ್ಯಾಗಿರು (ದಾ ಯ). ೪ ಯೂಥವೊ (ಯ). ೫ ನವ (ಬ ದಾ ಕ ಯ). ೬ ಮನುಗಳ್ ಮುನಿಗಳ್ (ಬ ಗೊ).

ಯಮನಿಯಮನಿತ್ಯಕರ್ಮಂ
ಸಮನಿಸೆ ವನಲತೆಯ ಗುಲ್ಮವೃಕ್ಷಾವಳಿ[೧]ಯೊ[೧]ಳ್
ವಿಮಳವ್ರತಿಗಳ್ ಸಲೆಕಂ-
ದಮೂಲಫಲದಿಂದೆ ತಣಿದು ಪರಿಣಮಿಸಿರ್ಪರ್ ೬೧

ಭಾಸ್ಕರಕರಸಮವಿಮಳಮ
ನಸ್ಕರತಿವ್ರತಿಗಳಗ್ರಗಣ್ಯರ್ ಶಮೆ[೨]ಯಿಂ
ತಸ್ಕರರತಿ[೨]ಮುದದಿಂದೆ ನ
ಮಸ್ಕರಿಸುವ ಮುನಿಗಳನಘರಿರ್ಪರ್ ನ-ದೊಳ್ ೬೨

ಗಣ್ಯಾತೀತರ್ ಶಿವಲಾ
ವಣ್ಯದೆ ಸರ್ವಾಂಗಭಸಿತದಿಂ ನರೆಯಿಂ ಕಾ
ರುಣ್ಯದಿನತಿ[೩]ಧವಲಿಮದಿಂ[೩]
ಪುಣ್ಯಂ ಪಣ್ಣಾದ ತೆಱದೆ ತಾಪಸರಿರ್ಪರ್ ೬೩

ಅಂತುಮಲ್ಲದೆ,

ಚಂಪಕ

ಭಸಿತಮನೊಪ್ಪೆ ಪೂಸುವ ಶಿವಾಗಮಮೋದುವ ಶಾಸ್ತ್ರಮಂ ವಿಚಾ
ರಿಸುವ ವಿನೂತನಾಕ್ಷಮಣಿಯಂ ಸರವೇಱಿಪ ನಾರಸೀರೆಯಂ
ಪಸರಿಪ ಕಂದಮೂಲಫಲಮಂ ತರೆ ಪೋಪ ಲಸನ್ಮೃಗಾಜಿನ
ಪ್ರಸರಮನೆಯ್ದೆ ಪೊಲ್ವ ಮುನಿಮುಖ್ಯಕುಮಾರಸಮೂಹಮೊಪ್ಪುಗುಂ ೬೪

ಅಂತವರ ಶಾಂತಿಮಯ ಶೈವತೇಜಸ್ಸಾಮರ್ಥ್ಯಮೆಂತೆಂದೊಡೆ,

ಮೆಯ್ಗೆರೆದು ಮೆಲ್ಲಮೆಲ್ಲನೆ
ಕೆಯ್ಗೊಟ್ಟೊಡನೆಯ್ದಿ ಮತ್ತೆ ತಂದಿರಿಸಿ ಪಗಲ್
ಬಯ್ಗಿರುಳೆನ್ನದೆ ಸಲೆ ಬೆಸ
ಕೆಯ್ಗುಂ ಮುನಿಗಳ್ಗೆ ನಗದ ಮರ್ಕಟನಿಕರಂ ೬೫

---

೧ ಯಾ (ಕಾ). ೨ ಯಿಂ। ತಸ್ಕರಣರ್ (ಬೆ ಯ ಮ). ೩ ಧವಳತೆಯಿಂ (ಕಾ ಕ).

ಓಸರಿಸಿ ಬಿರ್ಜಿ ಪಕ್ಕಮ
ನೋಸರಿಸದೆ ಮುನಿಗ[೧]ಳರ್ಪ[೧] ಹೋಮಸ್ಥಳದೊಳ್
[೨]ಭಾಸುರದಿನಂತು[೨]ಮಿಂತುಂ
ಬೀಸುತ್ತೆಳ್ಚಱಿಸಿ ಕುಡುವುದಾ ಶಿಖಿ ಶಿಖಿಯಂ ೬೬

ಅಂತೆಳ್ಚಱಿಸಿ ಕುಡುತಿರ್ಪನ್ನೆಗಮಲ್ಲಿ

ಮಹಾಸ್ರಗ್ಧರೆ

ಇದು ಭೂಮಿಸ್ಥಾನದಿಂ ಮುಕ್ತಿಗೆ ನಡೆಯಿಪ ನೀಲಾಶ್ಮಸೋಪಾನಮಾಹಾ
ಇದು ಸಂಸಾರಾತಪಶ್ರಾಂತರೊಳತಿಸುಖಮಿಾವಂಬುದಶ್ರೇಣಿ ಮೇಣಿಂ
ತಿದುದುಷ್ಕರ್ಮಾಬ್ಜಷಂಡಂಗಳನುಱೆ ಕೊರಗಿಪ್ಪೊಂದು ನೀಹಾರಮೆಂಬಂ
ದದೆ ಹೋಮಸ್ತೋಮಧೂಮಂ ನೆಗೆದುದು ಮುನಿಗಳ್[೩]ಬೀಳ್ವ[೩]
ಮಂತ್ರಾಗ್ನಿಯಿಂದಂ ೬೭

ಮತ್ತಮೊಂದೆಡೆಯೊಳ್,

ಮತ್ತೇಭ

ಸುಲಿಪಲ್ ಕೆಂಜೆಡೆ ನಾರಸೀರೆಯಜಿನಂ ಯಜ್ಞೋಪವೀತಂ ಕಮಂ
ಡಲುವಾಧಾರಕಮಕ್ಷಮಾಲೆ ಭಸಿತಂ ಸ್ಮೇರಾನನಂ ಕರ್ಣಕುಂ
ಡಲಮೊಪ್ಪುತ್ತಿರೆ ಪುಣ್ಯದಂತೆ ಶುಭದಂತಾನಂದದಂತಚ್ಚ ನಿ
ರ್ಮಲದಂತುಜ್ವಳತೇಜದಂತೆ ಸುಳಿವರ್ ತಚ್ಛೈಲದೊಳ್ ತಾಪಸರ್ ೬೮

ಅಂತವರ ಶಾಂತ್ಯಾ[೪]ಭರಣ[೪]ಶೈವತೇಜಃಪ್ರತಾಪದಿಂದೋರಂತೆ [೫]ಕ್ರೂರ ಮೃಗಂ[೫]ಗಳ್ ನಿಜವೈರಮಂ ಬಿಟ್ಟಿರ್ಪುವದೆಂತೆಂದೊಡೆ,

ಉತ್ಪಲ

ಪುಲ್ಲೆಯ ಕೋಡ ಮೇಲೆ ಪುಲಿಗಳ್ ತಲೆಯಿಟ್ಟು ಕುರಂಗಸಂಕುಳಂ
ಭಿಲ್ಲರ ಬಿಲ್ಲ ಮೇಲೆ ಮೊಗಮಿಟ್ಟು ನವಿಲ್ಗಳ ಮೇಲೆ ಭೀತಿ ತಾ-
ನಿಲ್ಲದೆ ಸರ್ಪವೀಥಿ ಪೆಡೆಯಿಟ್ಟು ಗಜಂ ಶಿರಮಿಟ್ಟು ಸಿಂಗದೊಳ್
ನಿಲ್ಲದೆ ನೋಡುತಿರ್ಪುವು ನಗೇಂದ್ರಮುನೀಂದ್ರರ ಶಾಂತಮೂರ್ತಿಯಂ ೬೯

---

೧ ಒಡನೆ (ಕಾ ಜೆ ಯು ಬ ದಾ). ೨ ಭಾಸಿಪಮೊಲಂತು (ಕಾ). ೩ ಮಾಳ್ಪ (ದಾ ಯು ಡ). ೪ ಚರಣ (ಕಾ ಜೆ ಗೊ). ೫ ಮೃಗವ್ರಜಂ (ಬ ದಾ).

ಮತ್ತಮಾ ತಪಸ್ವಿಗಳ್ ರುದ್ರನಂತೆ ಜಟಾಜೂಟರಂಜಿತಾಬ್ಜರುಂ,[1]ದುರ್ಯೋಧನಂತೆ[1]ಕರ್ಣಾಲಂಕಾರಶೋಭಿತರುಂ, ಕುಬೇರನಂತೆ ವಿಭೂತಿವಿಲಸಿತಗಾತ್ರರುಂ, ಪುಣ್ಯವೃಕ್ಷದಂತೆ ಶಾಖಾವಲಂಬಿತಕರ್ಮ[2]ನಿಷ್ಠರುಂ,[2] ವಲ್ಕಲಾಂತರ್ವಾಸರುಂ, [3]ಕಮಳ[3]ಕ್ಷೇತ್ರದಂತೆ ಪಂಕಜಗುಣೋಪವೀತರುಂ, ಭೂಮಿಜೆಯಂತೆ ಕುಶಲವಾಧಿಷ್ಠಿತರುಂ, ನವಗ್ರಹದಂತೆ ರವಿರಾಜವಕ್ರಸೌಮ್ಯ ಜೀವಕಾವ್ಯಶ್ರೇಷ್ಠರುಂ, ನಕ್ಷತ್ರಮಂಡಲದಂತೆ ಪುಣ್ಯಶ್ರವಣಚಿತ್ರಾನಂದ ಹೃದಯುರುಂ ಮೂಲ[4]ಹಸ್ತ ಸಂಯುಕ್ತರುಂ[4] ವಾರಣಾಸಿಯಂತೆ ದಿವ್ಯಕ್ಷೇತ್ರ ವಾಸಿಗಳುಮೆನಿಸಿರ್ದರಂತುಮಲ್ಲದೆಯುಂ,

ಚಂಪಕ

ತರತರದಿಂದೆ ತೋರ್ಪ [5]ಸರಿಯಿಂ ಸರಿಯಿಂ[5] ಪರಿಪೂಜ್ಜರಂಗಳಿಂ
ತರುಕುಲದಿಂ ಲತಾವಿಸರದಿಂ ಮಡುವಿಂ ಗಿಡುವಿಂ ಗುಹಾಳಿಯಿಂ
ಸರಸಿಗಳಿಂದೆ ಪೆರ್ಮೆಳೆಗಳಿಂ ಕೆಱೆಯಿಂ ತೊಱೆಯಿಂ [6]ನವಂಗಳಿಂ[6]
ಪರಿಪೊನಲಿಂ ಬಿಲಂಗಳಿನರಣ್ಯದಿನಲ್ಲಿಯ ತಳ್ಪಲೊಪ್ಪುಗುಂ ೭೦

ಆ ಶೈಲನಿತಂಬಮಂ ಸುತ್ತಿಮುತ್ತಿದ ಘೋರಗಭೀರಕಾಂತಾರಮಿರ್ಪುದದೆಂತೆಂದೊಡೆ,

ಎಳಸಿ ಗಿರಿಯುಟ್ಟ ಪಟ್ಟಾ
ವಳಿಯೆನಿಕುಂ ತದ್ವನಂ ಲತಾವಳಿ ಪತ್ರಾ
ವಳಿ ಪುಷ್ಪಾವಳಿ ಹಂಸಾ-
ವಳಿ ಸಿಂಹಾವಳಿ ಮೃಗಾವಳಿಯು ಪಕ್ಷಿಗಳಿಂ ೭೧

ಮತ್ತಮಲ್ಲದೆ,

ಮಹಾಸ್ರಗ್ಧರೆ

ಅರನೇಱಿಲ್ ತಾಱೆ ತುಂಬುರ್ [7]ತದುಕಳಿಲೆ[7]ಲವಂ ನೆಲ್ಲಿ ಬಿಲ್ವಾರ್ಜುನಂ ಕ-
ಮ್ಮರನಾಲಂ [8]ಜಾಲ[8]ಬೇಲಂ ಬಿಳಲರಳಿಯೊರಂ ಕಕ್ಕೆ[9]ಹೂರಂ[9]ಬೆಳಲ್ ಮಾ
ಮರುಟಾಳಂ ಹಾರಿವಾಳಂ ತುಡು ತಡಸೊಡಮಂ ಲೊಕ್ಕಿ ಗೊಟ್ಟಕ್ಕಿ ದಿಂಡಂ
ಚಿರ[10]ಬಿಲ್ವಂ[10] ಬ್ರಹ್ಮವೃಕ್ಷಂ ಕಱಿಕೆ ತಱಿಯುದಿಂದೊಪ್ಪುತಿರ್ದತ್ತರಣ್ಯಂ ೭೨

---

೧ ದುರ್ಯೋಧನಾಸ್ಥಾನದಂತೆ (ಕಾ ಕ ಯು). ೨ ಶೋಭಿತರುಂ (ಬ). ೩ ಕಳಮ (ಅ). ೪ ಹಸ್ತರುಂ (ಬ). ೫ ಸರುವಿಂ ದರುವಿಂ (ಕಾ ಕ ಬೆ); ಸರಿವಿಂ ದರಿವಿಂ (ವಾ ಬ). ೬ ವನಂಗಳಿಂ (ಬೆ); ನಗಂಗಳಿಂ (ಅ). ೭ ತದುರಗಿಲೆ (ಯು); ತದುಕಣಿಲೆ (ಅ). ೮ ಜಾಳಿ (ಯು); ಜಾಲಿ (ಅ). ೯ ಬೂರಂ (ಬೆ). ೧೦ ಬಿಲ್ವಂ (ಕಾ).

ಚಂಪಕ

ನರಿ ಶಶಕಂ ವೃಕಂ ಸರಟನೆಯ್ಯಮಿಗಂ ಮರೆವಿಂಡು ಬೆಕ್ಕು ಮುಂ
ಗುರಿ ಮುಸಲಿವ್ರಜಂ ಕರಡಿ ಮಂಡಲಿ ಪೆರ್ಬುಲಿ ಮರ್ಕಟಾಳಿ ಸೂ-
ಕರನಿಕರಂ ಕುರಂಗತತಿಯುಷ್ಟ್ರಚಯಂ ಘನಖಡ್ಗಿ ಸೈರಿಭಂ
ಪುರುಷಮೃಗಂ ಗಜಂ ಶರಭ ಸಿಂಹದಿನೊಪ್ಪುವುದಲ್ಲಿ ಕಾನನಂ ೭೩

ಅರಗಿಳಿ ಪಾರಿವಂ ಕುರರಿ ಲಾವಗೆಯನ್ಯಭೃತಂ ಶರಾರಿ ಹೊಂ
ಗುರು ಚರಣಾಯುಧಂ ಶಕುನಿ [1]ಚಂದನ[1]ವಕ್ಕಿ ಚಕೋರಿ ಟಿಟ್ಟಿಭಂ
ಹರಡೆ[2]ಗವುಂಜು[2]ಜಾವಗೆ ಬಕಂ ಶಿಖಿವಾಯಸಮುಂಚೆಕೊಂಚೆ ತಿ
ತ್ತಿರಿ ಗಿಡುಗಂಗಳೆಂಬ ಖಗವೃಂದದಿನಲ್ಲಿಯರಣ್ಯವೊಪ್ಪುಗುಂ ೭೪

ಮಹಾಸ್ರಗ್ಧರೆ

ಅತಿಘೋರಂ ಧ್ವಾಂತಪೂರಂ ಬಹುತರುಕುಲಸಾರಂ ಸಮುದ್ಯದ್ಗಭೀರಂ
ಪ್ರತಿಶೂನ್ಯಂ[3]ದಾವ[3]ಮಾನ್ಯಂ ಮೃಗವಿತತಿಗನನ್ಯಂ ನದೀವ್ರಾತ[4]ಧನ್ಯಂ[4]
ನುತಜೋದ್ಯಂ ವ್ಯಾಧವೇದ್ಯಂ ದಿನಕರಕಿರಣಾಭೇದ್ಯಮೀ ಭೂಮಿಗಾದ್ಯಂ
[5]ನತ[5]ಪುಣ್ಯಂ ತಾನಗಣ್ಯಂ ಕರಿಜವಿಷಯಗುಣ್ಯಂ [6]ವಿರಾಜಿಪ್ಪರಣ್ಯಂ[6] ೭೫

ಮತ್ತೇಭ

ಹರಿಯಂತಿಂದುವಿನಂತೆ ಕೃಷ್ಣಮೃಗ[7]ಸಂಶ್ಲೇಷಂ[7] ಸುರಾವಾಸದಂ
ತುರಗಾಧೀಶ್ವರನಂತೆ ಕೌಶಿಕವಿಭೋಗಂ ಕಾಮನಂತಬ್ಧಿಯಂ
ತಿರೆ ಚಂಚತ್ಪ್ರತಿಸಂಯುತಾನಿಮಿಷವೃಂದಂ ವ್ಯೋಮದಂತಬ್ಜವಿ
ಷ್ಟರನಂತುಜ್ಜ್ವಳರಾಜಹಂಸವಿಭವಂ ರೌದ್ರಾನನಂ ಕಾನನಂ ೭೬

ಅದು ಸರುವು ದರುವಿನಾಗರ
ಮದು ಭೂಜವ್ರಜದ ತಾಣಮದು ಮೃಗಸಂತಾ
ನದ ನೆಲೆಯದು ಶಬರಾನೀ
ಕದ ಜನ್ಮಸ್ಥಲವೆನಿಪ್ಪುದೊಪ್ಪುವರಣ್ಯಂ ೭೭

---

೧ ಚಂದಣ (ದಾ ಜಿ ಬ'. ೨ ಕವುಂಜು (ದಾ ಬ ಯ ಅ). ೩ ದೇವ (ದಾ).
೪ ಜನ್ಯಂ (ಯ). ೫ ನುತ (ಕಾ). ೬ ವಿರಾಜಿತ್ತರಣ್ಯಂ (ಅ). ೭ ಸಂಶ್ಲಿಷ್ಟಂ (ದಾ ಯ).

ಮತ್ತೇಭ

ಅದಱೊಳ್ ಭೀಕರಕಾಲಕಿಂಕರನಿಭಂ ಭೀಷ್ಮಾನನಂ ರೌದ್ರಸಂ
ಮದನೇತ್ರಂ ಘನ[೧]ಕೃಷ್ಣ[೧]ಕಾಯ[೨]ನಿಕರಂ[೨]ಕಾಠಿನ್ಯಧರ್ಮಂ ಭಯ
ಪ್ರದ ಬಾಣಾವಳಿನಿಷ್ಠುರಧ್ವನಿ[೩]ಚಯಂ[೩] ನಾನಾಮೃಗಾಯುಷ್ಯದಾ
ಪದಲಂಕಾರದಿನೊಪ್ಪಿ ಲುಬ್ಧಕ[೪]ಬಲಂ[೪] ತೀವಿರ್ಪುದಂತಾವಗಂ ೭೮

ಅಂತಿರ್ದ ಪುಳಿಂದಬಲಂ ಬೇಂಟೆಗೆಂದೊರ್ಬುಳಿಗೊಂಡು ಮರ್ಬು ಮಸಗಿದಂತೆ ಸಡಗರಿಸಿ ಸಮಕಟ್ಟಿ ಸನ್ನೆದೋಱೆ,

ಮಹಾಸ್ರಗ್ಧರೆ

ಬಡಿಕೋಲ್[೫]ಕಿಗ್ಗಟ್ಟು[೫] ಹಾಸಂ ಶುನಕವಿತತಿ ಹೇರಿಟ್ಟ ಕೂರಂಬುಗಳ್ ಕೆಯ್
ಪೊಡೆ ಬಿಲ್ ಪುಲ್ದಂಡೆ ಬೆಳ್ಸಾರ್[೬]ಪಟ[೬]ವೆರೆ[೬]ಬಲೆಗಳ್ ಸಾಳುವಂ ಕೂಳೆಗಾಳಂ
ಗಿಡುಗಂ ಬಲ್ವಿಂಡಿಯೊಳ್ ದೀಹದ ಪುಲಿ ನಿಶಿತಾಸ್ತ್ರಂಗಳುಗ್ರತ್ವಮಂ ಸಂ
ಗಡಿಸುತ್ತಿರ್ದೊಪ್ಪೆ ವಿಂಧ್ಯಾಟವಿಗೆ ನಡೆದುದುದ್ಯತ್‌ಕಿರಾತ[೭]ಪ್ರಜಾತಂ[೭] ೭೯

ತಡಿಕೆವಲೆ ಕಣ್ಣಿವಲೆ ನಿ-
ಟ್ಟಡಿಕಿಲ್ವಲೆ ಗೂಂಟವಲೆ ಪೊಣರ್ಚುವ ಬಲೆ ಮುಂ
ಬಿಡುವಲೆ ನಡುವಲೆ ತಡೆವಲೆ
ಸಿಡಿವಲೆ ನಿಡುವಲೆಗಳೊಪ್ಪಿದವು ಲುಬ್ಧಕರೊಳ್ ೮೦

ಆಗಳ್,

ಚಂಪಕ

ಹರಿಣನ ಬೇಂಟೆ ಪೆರ್ಬುಲಿಯ ಬೇಂಟೆ ವರಾಹನ ವೀರಬೇಂಟೆ ಪೆರ್
ಗರಡಿಯ ಬೇಂಟೆ [೮]ಪೆರ್ಮೊರೆಯ[೮]ಬೇಂಟೆ ವಿಹಂಗದ ಮೊತ್ತವೇಂಟೆ [೯]ಸತ್[೯]
ಕರಿಗಳ ಬೇಂಟೆ ಸಿಂಹಶರಭಂಗಳ ಬೇಂಟೆಗಳಾದಿಯಾವ ಭೀ-
ಕರಮೃಗಸಂಘಸಂಹನನ[೧೦]ಮುಣ್ಮಿತು[೧೦] ಪರ್ವಿದರಣ್ಯಮಧ್ಯದೊಳ್ ೮೧

---

೧ ಕಾರ್ಷ್ಣ್ಯ (ಬೆ ದಾ ಬ ಅ). ೨ ನಿಚಯಂ (ಸೆ ಬೆ). ೩ ಭಯಂ (ಬ). ೪ ಕುಲಂ (ಕಾ). ೫ ಕಿರ್ಗಟ್ಟು (ಕಾ). ೬ ವೆಡೆ (ಅ). ೭ ವ್ರಜಾತಂ (ಮ ಗ ಬೆ). ೮ ಹೆಮ್ಮೊರೆಯ (ಕಾ). ೯ ತತ್ (ಕಾ ಬ ದಾ ಬ ಯ). ೧೦ ಮೊಪ್ಪಿತು (ಅ ಬ).

ಮತ್ತೇಭ

ನಡೆಯೆಂಬಬ್ಬರಿಸೆಂಬ ಪರ್ವಿ ಪರಿಯೆಂಬಾರೆಂಬ ಸಾರೆಂಬ ಸಂ-
ಗಡಿಸೆಂ೧ಬಡ್ಡಮಿ೧ರೆಂಬ ೨ಪಾದುರ್ಗ೨ಸರುವಂ ಕಟ್ಟೆಂಬ ಮುಟ್ಟೆಂಬ ೩ಬಂ೩
ದಡಸೆಂಬೊತ್ತರಿಸೆಂಬ ಸುತ್ತಿ ನಿಲಿಸೆಂಬೆಯ್ದೆಂಬ ಮೆಯ್ದೋಱುತುಂ
ಪೊಡೆಯೆಂಬೊಂದು ಪುಳಿಂದವೃಂದನಿನದಂ ಪೊಣ್ಮಿತ್ತು ಕಾಂತಾರದೊಳ್ ೮೨

ಚಂಪಕ

ಇಡು ಮೊಲನಂ ತೆರಳ್ಚ ೪ದಿಸು೪ ಪುಲ್ಲೆಗಳಂ ಬಲೆಯೊಡ್ಡಿ ಖಡ್ಗಿಯಂ
ಪಿಡಿ ಮರೆವಿಂಡನೆಳ್ಚು ಪುಲಿಯಂ ಛಲದಿಂದಿಱಿ ಪಂದಿಯೊತ್ತುಗೊಂ
ಡೊಡೆ ಬಿಡು ನಾಯ್ಗಳಂ ಸಮೆದ ಪೆರ್ಗುಳಿಯೊಳ್ ಕರಿಪೋತಕಂಗಳಂ
ಕೆಡೆಪು ಮರಳ್ಚು ಸಿಂಹಮನೆನಿಪ್ಪ ಘನಧ್ವನಿಯಾಯ್ತರಣ್ಯದೊಳ್ ೮೩

ನಡುಗಿತ್ತು ವಿಹಗತತಿಯುಂ
ಕರ್ಗಡುಗಿತ್ತು ಮೃಗಾಳಿ ತಮ್ಮ ನಿಜಪೋತಕಮಂ
ಮಡಗಿತ್ತು ಗೂಡುಗುಹೆಯೊಳ್
ತೊಡಗಿತ್ತು ಕಿರಾತ ಭೀಕರಧ್ವನಿ ೫ವನದೊಳ್೫

ಆ ೬ಸಂಭ್ರಮ೬ದೊಳೊರ್ವ ಪುಳಿಂದಂ ತನ್ನ ನಚ್ಚಿನ ನಾಯಂ ಮೊಲನ ಸರುವಂ ತೋಱಿ ಕೀಱಿ ಬಿಟ್ಟಾಗಳ್.

ನಡೆನಡೆದು ನಸುಬಳುಂಕಂ
ತ್ತೆಡಬಲನಂ ನೋಡಿ ಕೂಡೆಯಾಘ್ರಾಣಿಸುತುಂ
ಗಿಡುವಿನ ಸರುವಿನ ೭ದಡುವಿನ
ಮಡುವಿನ೭ ಬಳಗೊಂಡು ಶುನಕನಟ್ಟಿತು ಮೊಲನಂ ೮೫

ಅಟ್ಟಿದೊಡೆ ತಿರುಗಿ ಮುರಿಮುರಿ
ದೊಟ್ಟೈಸುತೆ ಕೊಂಕಿ ೮ಪರಿ೮ಯುತೆಡನಂ ಬಲನಂ
೯ತುಬ್ಬಿಸುತೆ೯ ನಿಂದು ನಿಲ್ಲದೆ
ನಿಟ್ಟೋಟದೊಳೋಡಿತೆಸೆವ ೧೦ಮುಸಕದ೧೦ ಶಶಕಂ ೮೬

---

೧ ದೆಂಬಮ(ಅ). ೨ ಸಾದುರ್ಗ (ಶಾ ದಾ ಬ ಅ ಯ ಬೆ). ೩ ಹಿಂ (ಶಾ ಅ ಯ ಬ). ೪ ದೆಸು (ಬ ಮ). ೫ ನಗದೊಳ್ (ಅ ಬ). ೬ ಸಮಯ (ಅ). ೭ ಮಡುವಿನ ಪಡುವಿನ (ದಾ). ೮ ನಡೆ (ಬ ದಾ). ೯ ದಿಟ್ಟಿಸುತೆ (ಶಾ ಬ ಯ ದಾ ಅ ಸೆ). ದಟ್ಟೈಸಿ (ಶ). ೧೦ ಮುಸಕದೆ (ಬ ಯ).

ಬಿಡದೋಡೆ ಕಂಡು ಶಬರಂ
ಕಡುಮುಳಿದ[೧]ಯಟ್ಟಿ ತಿರುಗೆ[೧] ತಿರುಗುತ್ತುಂ ಸಂ-
ಗಡಿಸಿ ಪರಿದುಬುಬಿನುತ್ತುಂ
ಬಡಿಕೋಲಿಂದಿಟ್ಟನಧಿಕ[೨]ಬಲನಾ[೨]ಮೊಲನಂ ೮೭

ಸ್ರಗ್ಧರೆ

ಇಡೆ ತಿರುಗುತ್ತೆ [೩]ಬರ್ಪ[೩]ಬಡಿಕೋಲೊಳೆ ಸಿಲ್ಕುತೆ ಸಿಲ್ಕದಾ ಮೊಲಂ
ಗಿಡುಗಳೊಳೋಡಿ ಪೊಕ್ಕ ಪದದೊಳ್ ಘನರಾಹುವ ಕೋಳ್ಗೆ ಭೀತಿಗೊಂ
ಡುಡುಪತಿ ಬಿಂಬದಿಂದೆ ಸರಿದೋಡಿ ಮುಗಿಲ್ಗಳೊಳೆಯ್ದಿ ಪೊಕ್ಕು ಗಂ
ಡುಡುಗಿ ಸುರುಳ್ದ ತಚ್ಛಶಕನಂ ನೆಱೆ ಪೋಲ್ತುದು ಕಾಡ ಪೆರ್ಮೊಲಂ ೮೮

ಮತ್ತೊಂದೆಡೆಯೊಳ್,

ಮತ್ತೇಭ

ಪಸರಂ ಬೆತ್ತಡೆಯಾದ ನೀಡಡಿ ಪೊದಲ್ದು ಕರ್ಣವಾಕುಂಚಿತಾ
ಸ್ರ ಸಮೋಶೋಚ್ಚಕರಾಗ್ರ[೪]ಮುಸ್ಖಲಿತ[೪]ಚಿತ್ತಂ ಸಂಸ್ಫುಟಾಲೋಕನಂ
ಕುಸಿದಂಗಂ ಮಿಗೆ ದೃಷ್ಟಿಮುಷ್ಟಿಶರಸಂಧಾನಂಗಳೊಂದಾಗೆ ತಾ
ನಿಸಲೊಂದೊಂದು ಕುರಂಗಮಂ [೫]ಶಬರನಿಂತಿರ್ದಂ ಮಹಾರಣ್ಯದೊಳ್[೫] ೮೯

ಕಂಡುದು ಮೃಗಮಲ್ಲಿ ಭಯಂ
ಗೊಂಡುದು ಪೆಪ್ಪಳಿಸುತದಿರುತೋಡಲ್ಕೆ ಕರಂ
ದುಂಡಿಸು[೬]ತಿರ್ದಪುದೆಂ[೬]ದುರು
ಚಂಡಾಸ್ತ್ರದಿನಚಲ ಶಬರನಿಸೆ ಕಾನನದೊಳ್ ೯೦

ಉತ್ಪಲ

ತಿರುಗುವ ತನು ಬೆರ್ಚುವ ಕಣ್
ಪರಿವ ಮನಂ ನಟ್ಟ ಕಿವಿಯುಡಂಗುವ [೭]ಸುಯ್ಯಿಂ[೭]
[೮]ಸರಳಂ[೮]ಮಿಡುಱುತೆ ಹರಿಣಂ
ಸರಳಿಸಿತಯ್ದಾಱನೇಳನೆಂಟೊಂಬ[೯]ತ್ತಂ[೯] ೯೧

---

೧ ಯಟ್ಟೆ ತಿರುಗಿ (ಬ ಯ ಬೆ ದಾ). ೨ ಬಲನಂ (ಕಾ ಬ ಯ ಅ ಕ). ೩ ಮತ್ತೆ (ಬೆ). ೪ ಸಂಸ್ಖಲಿತ (ದಾ). ೫ ಶಬರನೊಪ್ಪಿರ್ದಂ ಮಹಾರಣ್ಯದೊಳ್ (ಕಾ ದಾ ಕ ಗ); ಶಬರನೊಪ್ಪಿರ್ದಂ ಕಾಂತಾರದೊಳ್ (ಬ); ಶಬರನಿಂತೊಪ್ಪಿರ್ದನಾ ಕಾಡಿನೊಳ್ (ಬೆ); ಶಬರನಂತೊಪ್ಪಿರ್ದ ಕಾಂತಾರದೊಳ್ (ಅ ಗೊ ಡ ಸೆ). ೬ ತಿರ್ದುದದೆಂ (ಕಾ ಕ). ೭ ಸುಯ್ಯಲಿಂ (ಬೆ); ಸುಯ್ಲಿಂ (ಕಾ). ೮ ಸರಳಿಂ (ಕೊ). ೯ ತ್ತುಂ (ಕಾ ಯ ಬೆ).

ಆ ಸಮಯದೊಳ್,

[1]ಕುನಿಕುನಿದು[1] ವನದ ಗಿಡುಗಿಡು
ವಿವ ಮಱೆಮಱೆಯಲ್ಲಿ ಸುಳಿದು ಸುಳಿದೋಡುವ[2]ಟ[2]
ಕ್ಕಿನ ಹರಿಣನನತಿಭರದಿಂ
ತನತನಗೆ ಪುಳಿಂದರಟ್ಟಿಮುಟ್ಟುತ್ತೆಚ್ಚರ್ ೯೨

[3]ಸಿಲ್ಕಿ[3]ಶಬರಾಳಿಯೆಚ್ಚ ಸ
ರಲ್ಕಿಕ್ಕಿಱಿಗಿಱಿದು ನಟ್ಟು ಗಱಿದೋಱುತ್ತಂ
ನಾಲ್ಕುಂ ಮೆಯ್ಯೊಳ್ ತೀವಿರೆ
ಸಿಲ್ಕಿದ ಮೃಗಮೆಯ್ಯ ಮಿಗದ ತೆಱನಾಯ್ತಾಗಳ್ ೯೩

ಮತ್ತಂ ಪೆಱತೊಂದೆಡೆಯೊರ್ವ ಕಿರಾತನಾಥನಳವಿಯುಳೋಡುತ್ತಿರ್ಪ ಮೃಗಸಮೂಹಮಂ ಕಂಡು,

ಬಂಡಿಯ ಪುಲಿಯಂ ಮೆಲ್ಲನೆ
ಕೊಂಡಿಳಿಪುತೆ ಸರಿದು ಕೊರಲ ಹಾಸದ ನೇಣಂ
ಕಂಡಳವಿಗೆ ಸಿಲ್ಕಿದ ಮೃಗ
ಮಂಡಲಮನದರ್ಕೆ ತೋಱ[4] ಶಬರಾಧೀಶಂ ೯೪

ಮಹಾಸ್ರಗ್ಧರೆ.

ನಿಮಿರ್ದಂಗಂ ನೀಳ್ದ ಮುಂಗಾಲುಡುಗಿ ನಡೆವ ಪಿಂಗಾಲ್ ಚಲದ್ವಾಲದಂಡಂ
ವಿಮಳೋಚ್ಚಂಡಾಕ್ಷಿ ಸೂಕ್ಷ್ಮಶ್ವಸಿತವದನಮತ್ಯೇಕಚಿತ್ತಂ ನಿರಸ್ತ
ಕ್ರಮಗಾಢಂ ಕೂಡೆ ತನ್ನೊಳ್ ಬಗೆದಳವಿಗೆ ಮುಂಕೊಂಡು ಧೀಂಕಿಟ್ಟುಪಾಯು
ತ್ತಮರುಳ್ತ್ತೋಡುತ್ತೆ ಪೀಳ್ಱುತ್ತಡಸಿ ಕೆಡಪಿತೊಂದೇಣನಂ ಚಿತ್ರಕಾಯಂ ೯೫

ಪೊದಱೊಳಗತ್ಯುನ್ನತತರ
[5]ಮದಾಂಧತಾನಂತಬಲ[5] ವಿಭೂಷಣನಪ್ಪ
ಗ್ಗದ ಪೆರ್ಬುಲಿಯಿರೆ ಶಬರರ್
ಮುದದಿಂದಂ ನೋಡಿ ಕಂಡು ಮತ್ತೊಂದೆಡೆಯೊಳ್ ೯೬

---

೧ ಕುನಿಕುಸಿಗಿ (ಬ). ೨ ತ (ಶಾ). ೩ ಸಿಲ್ಕಿ (ದಾ ಅ ಬೆ). ೪ ತಾಱಿತ್ತೆಕೀ (ಶಾ ಯು). ೫ ಮದದಾಳ್ದುರುನಖದ ಬಲ (ಅ).

ಚಂಪಕ

ವೆಳೆಯೊಳಗಿರ್ದ ಪೆರ್ಬುಲಿಯುನಾರ್ದು ಪುಳಿಂದನಿಕಾಯ[೧]ಮೆಳ್ಬೆ[೧] ಪಿಂ
ಗಳತರಲೋಚನಂ ಬಹಳಸಂಹನನಂ ಪೃಥುಳಾಸ್ಯಗಹ್ವ[೨]ರಂ
ಗ[೨]ಳಿತ ನಿಶಾತದಂಷ್ಟ್ರನತಿ[೩]ತೋಷ[೩]ಮನಂ ಘನಚಿತ್ರಕಾಯಮು
ಜ್ವಲಚರಣಂ ವಿಘೂರ್ಣಿತಗಳಂ ಪೊಱಮಟ್ಟು[೪]ದುದಗ್ರ[೪] ವೃತ್ತಿಯಿಂ ೯೭

ಪೊಱಮಡೆ ಕಂಡು ಗಂಡುಮಿಗೆ ದಂಡೆಯುನಿತ್ತು ಕುಱುತ್ತು ಪತ್ತೆ ಸಾ
ರ್ದುಱದೆ ನಿಲುತ್ತೆ ಸುತ್ತಿದ ಕಿರಾತಕುಲಂ ಮಱುಭಾಪೆನುತ್ತೆ ಬೊ
ಬ್ಬಿಱಿಯೆ ಕುನುಂಗಿ ಕುಕ್ಕುಱಿಸಿ ಸಜ್ಜಿನೆ ಕೀಳ್ತಲಗಿಂ ಕಡಂಗಿ ಕಾ
ಯ್ದಿಱಿದನದೊರ್ವ ಲುಬ್ಧಕನಗುರ್ವಿನ ಪೆರ್ಬುಲಿಯಂ ವನಾಂತದೊಳ್ ೯೮

ಮತ್ತಮೊಂದೆಡೆಯೊಳ್ ಪುಳಿಂದನಾಥರೊಂದಾಗಿ,

ತನತನಗೆ ಹಂದಿವೇಂಟೆಗೆ
ವನಚರ[೫]ರೆಯ್ತಂದು[೫] ನಿಂದು ನೀರ್ದಾಣದೊಳೊ
ಗ್ಗಿನ [೬]ಮರದ[೬] ಮಱೆಯೊಳಿರೆ ಮೆ
ಲ್ಲನೆ ಬಂದತ್ತೊಂದು ಸೊರ್ಕಿದೆಕ್ಕಲನಾಗಳ್ ೯೯

ಶಾರ್ದೂಲ

ಧೀರಂ ಪಿಂಗಳಲೋಚನಂ ನಿಶಿತದಂಷ್ಟ್ರಂ ಭೀಷ್ಮವಕ್ತ್ರಂ ಘನ
ಕ್ರೂರಂ ವಜ್ರಸಮಾನ ರೋಮ[೭]ನಿಚಯಂ[೭] ಸಂಪೂರ್ಣಕಾಯಂ ಸ್ಥಿರಂ
ಶೂರಂ ರೌದ್ರಗಭೀರಚಿತ್ತ[೮]ನತಿಮಾನಿ[೮]ಸ್ವಲ್ಪಪುಚ್ಛಾನ್ವಿತಂ
ಘೋರಾರಣ್ಯಚರಂ ವಿರಾಜಿಸಿದುದದ್ಯದ್ಭೀಕರಂ ಸೂಕರಂ ೧೦೦

ಮಹಾಸ್ರಗ್ಧರೆ.

[೯]ಬರೆ ಕಾಣುತ್ತಲ್ಲಿ[೯] ಭಿಲ್ಲಪ್ರಕರಮಡಸಿ ಕೂರ್ನಾಯ್ಗಳಂ ಬಿಟ್ಟು ಬೊಬ್ಬಿ
ಟ್ಟರರೇ ಕೆಯ್ಕೊಂಡು ನಾಲ್ಕುಂ ದೆಸೆಗೆ ಮುಸಗೆ ಕಂಡೆಕ್ಕಲಂ ದಾಡೆಗುಟ್ಟು
ತ್ತೆರಡುಂ ಕಣ್ಣಿಂ ಸ್ಫುಲಿಂಗಂ ಸುರಿದಪು[೧೦]ವೆನೆ[೧೦] ನೋಡುತ್ತೆ ತೀಡುತ್ತೆ ಕಲ್ಲಿಂ
ದುರದಂಷ್ಟ್ರಾಗ್ರಂಗಳಂ ಭೂಮಿಯು[೧೧]ನುಱದೆ[೧೧] ಬೆಱಂಟುತ್ತೆ
ಮುಂಗಾಲ್ಗಳಿಂದಂ ೧೦೧

೧ ವೆಚ್ಚು (ಕೆ). ೨ ರೋದ್ಗ(ಶಾ ಗೊ ಸೆ ಕ ಡ ಗೆ ಓ). ೩ ರೋಷ (ಶಾ ಬ ಯು ಬೆ ದಾ ಅ ಕ ಗೊ). ೪ ದದುಗ್ರ (ಕೊ). ೫ ರೇಳ್ತಂದು (ಅ). ೬ ಮರನ (ಅ ಬ). ೭ ನಭಯುಂ (ಮ). ೮ ನಸಮಾನಂ (ಶಾ ಕ ಯು ಬೆ). ೯ ಬಱಲುಂ ಕಾಣುತ್ತೆ (ಓ). ೧೦ ದೆನೆ (ಶಾ ಕ). ೧೧ ನಿರದೆ (ಅ).

ನಟ್ಟಡವಿಯೊಳಗೆ ಮುಳಿಸಿಂ
ಮುಟ್ಟುವ ನಾಯ್ಗಳನೆ ತುಂಡಿಸಲ್ಕೆಂದುಱು[1]ಕಿ[1]
ರ್ಗುಟ್ಟುತೆ ಮುಂದಟ್ಟ ಪೆಡಂ
[2]ಮು[2]ಟ್ಟುತೆ ಸೂಕರನಡರ್ದು ಸಾರ್ದುದು ಮೆಳೆಯಂ ೧೦೨

ಕುಪ್ಪಳಿಸಿ ತುರುಗಿ ಪರ್ವಿದ
ಱೊಪ್ಪವನಿರದಂಡುಗೊಂಡು ಪಂದಿಯ ಬಳಿಯೊಳ್
ನೊಪ್ಪು ನೆಗೆದುರ್ಬಿ [3]ಪಾಯುತೆ[3]
ಚಪ್ಪರಿಸುತ್ತುಗಿದು ಬಗಿದು ತೆಗೆದುವು ನಾಯ್ಗಳ್ ೧೦೩

ಮತ್ತಮವಱೊಳಗೊಂದು ಜಾತಿಜಾಯಿಲಂ ಪೋಗದೆ ನಿಂದು,

ಮುಳಿದಟ್ಟಿ ತಿರುಗಿ [4]ನೋಡು[4]
ತ್ತೊಳಪೊಕ್ಕು ಮರಳ್ದು ಮತ್ತೆ ಬೆನ್ನಟ್ಟಿ ಕರಂ
ಕಳಿದು ಪೆಡಂ ಬಾಯ್ದಳಲಿಂ
[5]ಬಳಸುತ್ತಿರೆ[5] ನಿಂದ ಪಂದಿಯಂ ಶುನಕೇಂದ್ರಂ ೧೦೪

ಮಿಕ್ಕುಪುಗಲತ್ತು ಕಿರ್ಚು
ಣ್ಣಿಕ್ಕುತ್ತೊಳಪೊಕ್ಕ ಜಾಯಿಲನ ಬಡ ನಡುವಂ
ಚಕ್ಕನೆ ತುಂಡಿಸಿ ಮಲೆಯುತೆ
ಧಿಕ್ಕರಿಸಿತ್ತತುಳಕೋಪ ನೀಡಂ ಕ್ರೋಡಂ ೧೦೫

ಆಗಳ್,

ಅಳ್ಕಿ ಪುಳಿಂದಂ ಕಾಣುತೆ
ತಳ್ಕೈಸಿಯೆ ಕೊಂಡು ಶುನಕನೆರಡುಂ ಕಡಿಯಂ
ಕಾಳ್ಕಿರ್ಚು ತಗುಳ್ದ ತೆಱದಿಂ
[6]ನಿಳ್ಕೈಸದೆ[6] ನೊಂದು ಬೆಂದು ಬಳಲುತ್ತಿಂದಂ ೧೦೬

---

೧ ಗಿ (ಬ ದಾ ಮೆ ಅ). ೨ ಮೆ (ಕೊ). ೩ ಪೊಯ್ವುತೆ (ಯು). ೪ ಬಳಸು (ಅ ಕ ಯು). ೫ ಬಳಸುತ್ತಂ (ಕೊ). ೬ ನಿಳ್ಕಳಿಸದೆ (ಅ); ನಿಳ್ಕಿಂಸದೆ (ಸೆ).

ಉತ್ಪಲ

ಪಾಸಿನ ಮೇಲೆ ಪಟ್ಟಿರಿಸಿ ಪಾಲೆಱೆದೆನ್ನೊಡ[೧]ಗೂಡಿ[೧] ಬಾಲಿಕಾ
ಭ್ಯಾಸದಿನೆತ್ತಿ ಸತ್ತಿಗೆಯ ತಣ್ನೆಳಲೊಳ್ ಬಳೆವಂತು ಮಾಡಿಯು
ಜ್ಜಾಸನದಲ್ಲಿ [೨]ಕುಳ್ಳಿರಿಸಿ[೨] [೩]ಯೋವಿದ[೩] ಕುನ್ನಿಯ ನೀ ವರಾಹನೀ
ಸಾಸಿಗನೀ ಕಠೋರಮನನೆನ್ನಯೆ ಮುಂದೆ ಸಮಂತು ಕೊಲ್ವುದೇ ೧೦೭

ಒಡನೋಡುತ್ತೊಡವೆಳೆಸು
ತ್ತೊಡನಾಡಿಸಿದೆನ್ನ ಚೆನ್ನ ಕುನ್ನಿಯ ನೀ ಕ
ಕ್ಕಡವಂದಿ ಕೊಂದುದಿನ್ನಿದ
ಱೊಡನಳವೆಂ ಕೊಲ್ಲದುಳಿಯೆನೀ ಸೂಕರನಂ ೧೦೮

ಉತ್ಪಲ

ಎಂದು ಪುಳಿಂದನಾಥ[೪]ನುಳದಾರುತೆ[೪] ಕೊರಲಗಿಂ ಕಱುತ್ತು ಪೆ
ರ್ಬಂದಿಯನೆಯ್ದೆ ತಳ್ತು ಱಿದೊಡುಂಗುಟದಿಂದೆ ಶಿರಂಬರಂ ವರಾ
ಹಂ ದಿಟಮೆತ್ತೆ ಮತ್ತಿಱಿಯೆ ಮತ್ತೆ ಕರಂ ಸೆಳೆದೆತ್ತೆ ನೊಂದು ತಾ
ನೊಂದೆಸೆಯೊಳ್ ವರಾಹಪತಿಯೊಂದೆಸೆಯೊಳ್ ಕೆಡೆದತ್ತರಣ್ಯದೊಳ್ ೧೦೯

ಕೆಡೆದಿರ್ದ ಶಬರನಂ ಕ
ಕ್ಕಡವಂದಿಯನೀಕ್ಷಿಸುತ್ತೆ ಶಬರಸಮೂಹಂ
ಬಿಡೆ ಕೊಂಡು ಕೊನೆದು ಬಲ್ಪಂ
ನುಡಿಯುತ್ತಿರ್ದನ್ನಮಿತ್ತ ಮತ್ತೊಂದೆಡೆಯೊಳ್ ೧೧೦

ಪ್ರಕುಪಿತದಿಂ ತೆಗೆದಿಸೆ ಮ
ಸ್ತಕಮಂ ಕರಿನೊಂದು ತಿರುಗೆ ಪರಿವ ಶರಂ [೫]ಪೇ
ಚಕ[೫]ದಿಂದುರ್ಚೆ ಕರಂ ಲು
ಬ್ಧಕನಂ ತಾಗಿತ್ತು ಮಗಳ್ದು ವನದೊಳ್ ಚಿತ್ರಂ ೧೧೧

ಮತ್ತಮೊಂದೆಡೆಯೊಳ್

---

೧ ನೂಡಿ (ಮ); ನಾಡಿ (ಬ ಅ). ೨ ತಂದಿರಿಸಿ (ಸೆ ಕೊ ಅ). ೩ ಸಾಕಿದ (ಕಾ ಕ ಯ). ೪ ಸಿರದಾರುತೆ (ಅ ಯ); ನುರಿದಾಱುತೆ (ಕಾ). ೫ ಪಿಂಚಕ (ಬ ಸ ಗ ಡ ಮ); ಪಿಂಛಕ (ಬೆ ಓ); ಪಾಛಕ (ಚಿ); ಪೆಂಚಕ (ದಾ).

ಮಹಾಸ್ರಗ್ಧರೆ

[೧]ದರಿಯಂ[೧] ದಂತಾಗ್ರದಿಂದೀಡಿಱಿದು ಕೆಡುಪುತುಂ ಗುಲ್ಮವೃಕ್ಷಂಗಳಂ ತತ್
ಕರದಿಂದಂ ಸುತ್ತಿ ಕಿೞ್ತೆತ್ತುತ್ತೆ ನಿಜವಿಪುಳಚ್ಛಾಯೆಯುಂ ಕುಂಭಿಗೆತ್ತು
ದ್ಧುರಕೋಪಾಟೋಪದಿಂ ಕಂಡೆಱಗುತೆ ಮದಸೌರಭ್ಯಲೋಲುಪ್ತ ಭೃಂಗೋ
ತ್ಕರಮಂ ಕರ್ಣಾಗ್ರದಿಂ ಸೋವುತೆ [೨]ಕರಿಯಿರೆ ನಿಂದೊಂದದಭ್ರಾ[೨]ಭ್ರಕಾಯಂ ೧೧೨

ಉತ್ಪಲ

ಕಂಡು ಕಿರಾತನೊರ್ವನಿಭಮಸ್ತಕಮೌಕ್ತಿಕಲೋಭದಿಂದೆ ಕೋ
ದಂಡಮನಾರ್ಪಿನಿಂ ತೆಗೆದು ಕೂರ್ಪಿನ ಬಾಣದಿನೆಚ್ಚೊಡುರ್ಚಿ ವೇ
ದಂಡಲಲಾಟದಿಂ ಪೆಱಗೆ ಪೇಚಕದೊಳ್ ಮಿಗೆ ಮೂಡೆ ತಲ್ಲಣಂ
ಗೊಂಡುದು ಕುರ್ಗಿಕುಕ್ಕುಱಿಸಿ ಘೀಳಿಡುತಿರ್ದುದು ಬಿಳ್ದು ಭೂಮಿಯೊಳ್ ೧೧೩

ಬೀಳೆ ಪರಿತಂದು ಶಬರಂ
ಸೀಳುತ್ತುಂ ಕುಂಭದೊಳಗಣಲ್ಲಿಯ ಮುಕ್ತಾ
ಜಾಳಕ[೩]ಮನೆ[೩] ಕೊಂಡು ಸುಖಂ
ದಾಳುತ್ತುಂ ಬಂದನಬಲೆಗೀವತಿಭರದಿಂ ೧೧೪

ಅಂತು ಬಂದು,

ಮತ್ತಗಜ ಮಸ್ತಕದ ಪೊಸ
ಮುತ್ತಂ ಬಲ್ಪಿಂದೆ ತಂದೆನೆಂದೊಲವಿಂದಂ
ವೃತ್ತೋತ್ತುಂಗಪಯೋಧರಿ
ಗಿತ್ತಂ ಮತ್ತೊರ್ವ ಶಬರಿ ಮಿಗೆ ನಗೆ [೪]ವನದೊಳ್[೪] ೧೧೫

ಮತ್ತಮೊಂದೆಡೆಯಲ್ಲಿ

ಮತ್ತಮದಲ್ಲದೆ ಘನಸುಖ
ಚಿತ್ತಂ ಚಿತ್ತಜನ[೫]ಪೋಲೆ[೫]ಮನ್ಮಥರಾಗೋ
ನ್ಮತ್ತನದೊರ್ವಂ ಲುಬ್ಧಕ
ನತ್ತಿತ್ತಂ ಶಬರಿಯಿಲ್ಲದೊಂದಡಿಯನಿಡಂ ೧೧೬

---

೧ ಧರೆಯಂ (ಯ). ೨ ಮದಮುಖದಿಂದೊಂದಭ್ರಾ (ಯ); ಕರಿಯಿರೆನಿಂದತ್ತದೊಂದ (ಕ) ಕರಿಯುದೆ ಕಂಡಾಗನಿಂದ (ಅ): ಮದಮುಖದಿಂ ನಿಂದುದೊಂದ (ಕೊ). ೩ ಮಂ (ಶಾ ಯ ಬೆ ದಾ). ೪ ನೊಗದೊಳ್ (ಯ ಮ). ೫ ವೇಳೆ (ಮ ಕ ಬೆ).

ಕೆಲದೊಳ್ [೧]ಪುಳಿಂದಿ[೧]ಯಿರೆ ಪೆ
ರ್ಬುಲಿ ಬಂದೊಡಮಂಜನಕ್ಕನೋಡಂ ನೋಡಂ
ಚಲದಿಂ ಕಾಡಂ ಕಾಡಂ
ಸಲೆ ಪಸಿವಂ ಮಱೆದು ತಣಿದು ಬೇಡಂ ಬೇಡಂ ೧೧೭

ಪೆಱತೊಂದೆಡೆಯೊಳ್ [೨]ಮುತ್ತಿಂ[೨]
ತುಱುಗಿದ ಮಂಡನಚಯಂಗಳಂ ತೊಟ್ಟೊಲವಿಂ
ದೆಱಗಿ ಕುಣಿದಾಡಿಸುತ್ತುಂ
ಮೆಱೆವ ಪುಳಿಂದಿಯರ ನಿಂದ ಮೊತ್ತದೊಳೊರ್ವಳ್ ೧೧೮

ಎಳನವಿಲ ಕಲಾ[೩]ಪಂಗಳ
ನಳವಡೆ[೩]ತಳೆದುಂ ಮದೇಭಮಸ್ತಕಮುಕ್ತಾ
ಫಳವಿಳಸಿತ ಸಾಪತ್ನೀ
[೪]ಕುಳದೊಳ್ ಗರ್ವಿಸುವ ಶಬರಿಯಿರವತಿಚಿತ್ರಂ[೪] ೧೧೯

ನಡೆದು ಗಳಗಳನೆ ಮತ್ತೊಂ
ದೆಡೆಯೊಳ್ ಗಜಿಮೆಯ್ದೆ ಪೊಕ್ಕು ನದಿಯೊಳ್ ಕಡುನೀ
ರಡಸಿ ತೆಗೆದೀಂಟಿ ಜಲಮಂ
ಬಿಡೆ ತಮ್ಮೊಳ್ ತೀವಿಕೊಂಡು ಚೆಲ್ಲುವ [೫]ಪದದೊಳ್[೫] ೧೨೦

ಇಳೆಯೊಳ್ ತಮ್ಮಂ ಕಾದಾ
[೬]ಪುಳಿಂದ ನಾಯಕಿಯ ಯೌವನಕ್ಕ ಘರ್ಮಮನಂ[೬]
ತಳವಡೆ ಕುಡುವಂತಿರ್ದು[೭]ದು[೭]
ಜಳಪೂರಿತಹಸ್ತದಿಂದೆ ಹಸ್ತಿಕದಂಬಂ ೧೨೧

---

೧ ಕಿರಾತೆ (ಬೆ). ೨ ಮುತ್ತಂ (ಅ ಬ). ೩ ಪಂತವೆಯುಳವಡೆ(ಅ); ಸಂತಲೆಯುಳವಡೆ (ಓ). ೪ ಕುಳದೊಳಗುರ್ವಿಸುವ ಶಬರಿಯೇನೊಪ್ಪಿದಳೋ (ಬ); ಕುಳದೊಳ್ ಗರ್ವಿಸುವ ಶಬರಿಯಿರವು ವಿಚಿತ್ರಂ (ಮ ದಾ ಬೆ ಕೊ); ಗರ್ವಿಸುವ ಶಬರಿಯಿರವಿದು ಚಿತ್ರಂ (ಅ ಓ). ೫ ಪಥದೊಳ್ (ಅ ಗ). ೬ ಪುಳಿಂದ ನಾಯಕಿಯರಪ್ಪವರ್ಗರ್ಘ್ಯಮನಂ (ಕಾ ಕ ಬೆ); ಚೆಲುವ ಪುಳಿಂದಿಯರ ಜವ್ವನಕ್ಕೆ ಘರ್ಮ್ಯಮುಮಂ (ಅ ದಾ). ೭ ವು (ದಾ ಕೊ).

ವಿಲಸನ್ಮತ್ತಗಜೇಂದ್ರೋ
ಜ್ವಲ ನಿರ್ಮಳದಂತಮುಸಲಹಸ್ತಸಮೇತಂ
ನಲಿನಲಿದು ಕಿರಾತಸ್ತ್ರೀ
ಕುಲಮೊರ್ಬುಳಿಗೊಂಡು ನಿಂದು [1]ಮತ್ತೊಂದೆಡೆಯೊಳ್[1] ೧೨೨

ಚಂಪಕ

ತಳಿರ್ಗಳ ಸೀರೆಯುಟ್ಟು ಗುರುಗುಂಜಿಯ ಹಾರಮನಾಂತು [2]ಮುಂದೆ[2] [3]ಶೀ
ತಳ[3] ಶಶಿಕಾಂತದಿಂ ಸಮೆದೊರಲ್ಗಳೊಳಂ ಬಿದಿರಕ್ಕಿಯಿಕ್ಕಿ ನಿ
ಚ್ಚಳಮನ ಸುವ್ವಿ ಕಾಡೊಡೆಯ ಸುವ್ವಿ ಮನೋಹರ ಸುವ್ವಿ ಸುವ್ವಿಯುಂ
ದಳವಡೆ ರಾಗದಿಂ ತಳಿಸಿದರ್ ವನದಲ್ಲಿ ಪುಳಿಂದಕಾಂತೆಯರ್ ೧೨೩

ಆದಲ್ಲದೆಯುಂ ಮತ್ತೊಂದೆಡೆಯೊಳ್ ಅತಿಬಳನೊರ್ವ ಪುಳಿಂದನಾಥಂ ಒಡನೆಯ ಬೇಡರ ಮುಂದಾಸುರದಿಂ ಭಾಷೆಗುಡುತ್ತಿರ್ದನದೆಂತೆಂದೊಡೆ,

ಸ್ರಗ್ಧರೆ

ನಿಂದೆಂ ನಿಂದೆಂತುಮೀ ವೀರದ ರದನಿಕರಂ ಬಂದೊಡಂಗೊಂ
ಡಂದಾವಂದಾವನಂತಿರ್ಪ ಸರಪಸರಮಂ ಕಾಣ್ಬನಾ ಮಾತದಿರ್ಕೆ
ನ್ನಂದಂ ನಂದಂ ಕನಲ್ದಿರ್ಪೊಡೆ ಪೊಡೆ ಪುಲಿಯುಂ ಬೇಗದಿಂ ಬೇಗದಿಂದಂ
ಬಂದಂ ಬಂದಂತೆ ಕೊಂದುರ್ಕುವ ಕುವರನವಂ ಸೋಂಕಿರಾತಂ ಕಿರಾತಂ ೧೨೪

ಬಿದಿರಂ ಬಿದಿರಂ ನಡೆನಡೆ
ಯುದೆಯುಂದೆ ಪಿಡಿ ಪಿಡಿಗೆ ಬಂದ ಕರಿಯುಂ ಕರಿಯುಂ
ಪದೆದೆಚ್ಚಂ ಕಲಿಕಲಿ ಪೇ
ಸದೆ ಸದೆದಪನೆಂದು ಬೇಡರೆನೆ ನಲಿದಿಸುವೆಂ ೧೨೫

ಮತ್ತಮೊಂದೆಡೆಯೊಳ್,

[4]ಇನೆಯನೊಡಗೂಡಲಿಂದಿಂ[4]
ಪಿನ ರಮ್ಯಸ್ಥಳಮನಱಸಿ ಬರುತುಂ ನವಯೌ
ವನೆ ಮುಗ್ಧೆ ತುಱುಗಿ ಪರ್ವಿದ
ವನದೊಳಗಣ ಮೆಳೆಗಳೊಳಗ ಪುಗುವನ್ನೆವರಂ ೧೨೬

---

೧ ಪೆಱತೊಂದೆಡೆಯೊಳ್ (ಅ ಗ ದಾ ಕೊ). ೨ ಮುಂತೆ (ಬ ಮ). ೩ ನಿರ್ಮಳ (ದಾ). ೪ ಇನಿಯನನೊಡಗೂಡಲ್ ಪೆಂ (ಅ).

ಬೆಳಗಂ ಕಳ್ತಲಿಸುವ [1]ಮೆಳೆ
ಮೆಳೆಯಂ[1] ಪೊಕ್ಕಲ್ಲಿ ತನ್ನ ಕಣ್ಗಳ ಬೆಳಗಿಂ
[2]ಬೆಳಗಾಗಿರೆ[2] ಬೆಳಗಿಲ್ಲದ
ಮೆಳೆಯಿಲ್ಲೆಂದಬಲೆ ಶಬರಿ ಸೊಬಗಳಿದಿರ್ದಳ್ ೧೨೭

ಇರೆ ಸುಪ್ರೌಢಕಿರಾತಂ
ತರುಣಿಯ ಮುಗ್ಧತೆಗೆ ಮೆಚ್ಚಿ [3]ಮುಗ್ಧೆಯ ಕಣ್ಣಂ[3]
ಬರೆ ಮುಚ್ಚಿ ಇಡಿದ ಕಳ್ತಲೆ
ದೊರೆಕೊಂಡತ್ತೆಂದು ನೆರೆದು ಸುಖಿಯಾಗಿ[4]ರ್ದಂ[4] ೧೨೮

ಮತ್ತಮತಿವಿಸ್ತಾರಮಾದ ಘೋರಾರಣ್ಯಂ ಕಡುನಿಡುದುಗೊಂಡಂ[5]ಬರ ಚುಂಬಿತಮಾಗಿ[5] ನಳನಳಸಿ ಕೊರ್ಬಿ ಬೆಳೆದ ಪೆರ್ಬಿದಿರ ತುದಿ ತಾಗಿ ಪಱಿದ ಕಿಱು ಮುಗಿಲ್ಗಳಿಂದವನೀತಳಕ್ಕಾಲಿಕಲ್ಲೊಕ್ಕು ಚೆಲ್ಲಿದಂತಿರ್ಪ ಮುಕ್ತಾಫಲಗಳಂ ವಂಶ ತಂಡುಲಂಗೆತ್ತು ಸುತ್ತಿ ಬಂದುಂಡುಗುವ ಮುಗ್ಧ ಶಬರಿಯುರಂ ನಗುವ ಕಾಮುಕ ಶಬರಸಂದೋಹದಿಂ, ಮತ್ತಂ ಪೆಱತೊಂದೆಡೆಯೊಳ್ ಪುಲಿಯು ಬೇಂಟೆಯು ಕಾಳೆಗದ ಕೋಳಾಹಳದ ಮಲ್ಲಾಮಲ್ಲಿಯಿನಾದ ಕರನಖರನವವ್ರಣಕಳಂಕಾಂಕಿತಭುಜವಳಯನಾಗಿ ಬಂದ ಪುಳಿಂದನಂ ಕಂಡು ಕಡುಮುಳಿದು ಪ್ರಣಯಕಲಹಂ ಕೆಯ್ಗಣ್ಮಿ ಪಲ್ಲವದಿಂ ಪೊಯ್ದು ಪೊಯ್ದತಿಕೋಪದಿಂದುತ್ಕಂಠೆಯಾದ ನಲ್ಲಳ್ಗೆ ಲಲ್ಲೆಗರೆದು ಬೆರಲಂ ಕರ್ಚಿ ಕಾಲ್ಗೆಱಗಿ ವಿನಯದಿಂ ತಿಳಿಪಿಮುಳಿಸಂ ಕಳಲ್ಚಿ ಕಳ್ತಲಿಪ ಮೆಳೆಗಳೊಳ್ ಉತ್ತಾನಲತೆ ಚಿತ್ರಜಂಗೆತ್ತಿದುಪ್ಪರವಟ್ಟವಾಗೆ ನಿರಂತರಂ ನೆರವ ಕಿರಾತ ಮಿಥುನಂಗಳಿಂ, ಮತ್ತಂ ಸಂಚಿತ ತಿಳಕಿತ ವರ್ಧಕ ಪೋಳಿತವತಿವರ್ತಿತವಧೋನುಬಂಧಿನಿ ಕ್ರೋಧಿನಿ ಗಂಧಚಾರಿಣಿಗಳೆಂಬ ಸಪ್ತಾವಸ್ಥೆಯ ಮದದಿಂ ಮುಂದುಗಾಣದೆ ತನ್ನ ನೆಳಲಂ ಪ್ರತಿಗಜವೆಂದುಱದೆ ಕಱುತ್ತೆಱಗಿ ಬೆಟ್ಟದ [6]ಪೆಟ್ಟಿ[6]ಗಳನೆತ್ತಿಯೆತ್ತಿ ಕೋಪವಾಱದೆ ಮಿಾಱಿ ಬಂದು ನೀಡುಂ ನೋಡಿ ಕೋಡುಂಗಲ್ಲಂ ಪರಿದು ಪಾಯ್ದು ಕೋಡುಡಿಯೆ ನಾಡೆ ನೊಂದು ನೋವಂ ಮಱೆದು ಚಂದ್ರಕಾಂತಶಿಲಾತಲದೊಳ್ ಮಾರ್ಪೊಳೆವ ನಿಜಬಿಂಬಮುಂ ಕಂಡು ಕರಿಣಿಗೆತ್ತಡಿಗಡಿಗೆ ಕರಮನಿಟ್ಟಾರಯ್ದು ಸಾರುತಿರ್ಪ ಮದಾಂಧಗಂಧಸಿಂಧುರಂಗಳಿಂ, ಮತ್ತಮೊಂದೆಡೆಯೊಳ್ ಪಸಿವೆತ್ತು ಮಸಗಿ ಬಂದು ಬಿಲಂಗಳೊಳಗಣಿಱುಂಪೆಗಳಂ ಮೊಗಮಿಟ್ಟೂದಿಯೂದಿ ತಣಿಯದೆ ತವಕದಿಂ

---

೧ ಮೆಳೆಮೆಳೆಯೊಳ್ (ಬ ದಾ ಅ ಬೆ); ಮೆಳೆಯೊಳಗಂ(ಕಾ). ೨ ಬೆಳಗಾಗಿಂ (ದಾ). ೩ ತರಳೇಕ್ಷಣಮುಂ (ಕಾ); ಶಬರಿಯ ಕಣ್ಣಂ (ಬೆ ಕೊ). ೪ ರ್ದರ್ (ದಾ ಗ ಗೊ ಮ). ೫-೫ ಬರಮುಂ ಚುಂಬಿಸಿ (ಕಾ). ೬ ಪೆಂಟೆ (ಕಾ ದಾ).

ನಡೆನಡೆದು ನಳನಳಿಸುವ ಬೆಳಲಮರದ ತಳದೊಳುದಿರ್ದ ಪಕ್ವಫಲಂಗಳನಾಯ್ದು-ಕೊಂಡು ಗಳಗಳನೆ ಪರಿದು ಪಾಸಱೆಯ ಮೇಲಾಸುರದಿಂದೊಡೆದೊಟ್ಟಿ ಜೇನ ಹುಟ್ಟುಗಳನ್ನಿಟ್ಟಿಟ್ಟಲಸದೆ ಕಲಸಿ ತಣಿವಿನಂ ತಿಂದು ತೇಗಿ ತೂಗಿ ಕೆಲೆಕೆಲೆದು ಕುಪ್ಪಿ-ಕುಪ್ಪಿಯುರ್ಬಿ ಕೊರ್ಬಿ ನಲಿದಾಡುವ ಭಲ್ಲೂಕನಿಕಾಯದಿಂ, ಮತ್ತಮೊಂದೆಡೆಯೊಳ್ ಎಳವುಲ್ಗಳಂ ಮೇದು ತಿಳಿನೀರನೀಂಟಿ ನೆಳಲೊಳ್ ಪಟ್ಟಿರ್ದ ಬೆಂಡೇಳ್ವ ಲೋಳೆ ಹಿಂಡಿಲ್ಗಟ್ಟಿ ಮೇವಂ ಮುಗುಳ್ಚಿ ಕಟ್ಟಿದಿರ ಪುಲಿಯಂ ತೊಟ್ಟನೆ ಕಂಡು ಭೋಂಕನೆಳ್ದು-ಮೊಗಮನೆತ್ತಿ ಕಡುಮುಳಿದು ಖಾತಿಗೊಂಡು ಚಲದಿಂ ಮಲೆದು ಘಳಿಲನೆಯ್ದಿ ಪಾಯ್ದು ಪೊಯ್ದು ಕೋಡಿಟ್ಟು ಜಳ್ಳಿಸಿ ಬಿಸುಟ್ಟು ನೊಸಲ ತೀಂಟೆ ತೀಱದೆ ಕೊಣಕಿಟ್ಟು ಮುರಿದು ಪಿರಿದಪ್ಪ ಪುತ್ತಿನೊಳೊತ್ತಿ ಪೋರ್ದ ಮೆತ್ತಿದ ಕರ್ದಮಂ ನಿಟಿಲತಟದೊಳ್ ಪತ್ತಿರ್ದ ಧೂಳಿ ಮೆಯ್ಯೊಳೆ ಮೆಱೆಯೆ [೧]ಪಲವೋತ್ಕರದಿಂ[೧] ಪೊಱಮಟ್ಟ ಕಾಳರಕ್ಕಸರಂತಿರ್ಪ ಕಾಳ್ಕೋಣಂಗಳಿಂ, ಮತ್ತಮೊಂದೆಡೆಯೊಳ್ ಮರದಿಂ ಮರಕ್ಕೆ ತಿರುಗಿ ಪಾಯ್ದೆಳಗೊಂಬನಲ್ಲಾಡಿ ತೂಗಿ ತೊನೆದಳ್ಳಱಿದು ಕುಳ್ಳಿರ್ದ ಕಾಲ್ಗಳಂ ನೀಡಿ [೨]ಬರಿಯಂ[೨] ಬೆರಂಟ ಬಿಸಿಲ್ಗಾಯ್ದು ಪಸಿವೆತ್ತು ಮೇಲಂ ನೋಡಿ ನೀಡಿ ನೆಗೆದು ತಿಣ್ಣಗೊಂಬಿನೊಳ್ ಬಣ್ಣವಳಿಯದ ಪಣ್ಣಂ ತಿಂದು [೩]ತಣ್ಣನೆ ತಣಿದು[೩] ಕಣ್ಣಂ ಬಿಟ್ಟು ಪುರ್ಬಿಕ್ಕಿ ಪಲ್ಗಿಱಿದು ಹುಱುಂದು ಕಿರಾತಕಾಂತೆ-ಯರಂ ಮಿಗೆ ನಗಿಸುತಿರ್ಪ ಮರ್ಕಟಪ್ರಕರದಿಂ, ಮತ್ತಮೊಂದೆಡೆಯೊಳ್ ಚಿತ್ರಜ-ಕೇಳಿಗೆಂದು ಮತ್ತಗಜಂ ಪರಿವ ಕರಿಣಿಯ ಬಳಸಂದು ಬೋಳೈಸಿ ಕರಮಂ ನೆಗೆಪಿ ಕೂಡುವ ಪಿಂಚಕಚುಂಬನಪ್ರಾರಂಭಸಮಯದೊಳ್ ತೊಟ್ಟನೆ ಕಂಠೀರವರವಮಂ [೪]ಕೇಳಲಾಗೆ[೪] ಬೆಳ್ಗಾಗಿ ಬಿಗುರ್ತು ರಾಗಮಳಿದಗಿದು ಸುಗಿದು [೫]ಹಳುಂಗಿ[೫] ಹಮ್ಮ-ದಂಬೋಗಿ ಪರಿದೋಡಿ ಪಿರಿಯ ಗುಹೆಯೊಳಡಗಿ ಬೆಡಂಗಳಿದು ತಡಂಗೆಡೆದಿರ್ಪ ಮಾತಂಗದಂಪತಿಗಳಿಂ, ಮತ್ತಮೊಂದೆಡೆಯೊಳಾರ್ದು ಸಾರ್ದು [೬]ಪರಿತರ್ಪ[೬] ಕಿರಾತನಿಕರದೊಳೊರ್ವಲುಬ್ಧಕಂ ಯಮಕಿಂಕರನಂತೆ ಮುಳಿದು ಪರಿತಂದು ಪಿರಿದಪ್ಪ ಪಕ್ಕಿಗಳ್ ನೆರೆದಿರ್ದ ಶಾಲ್ಮಲಿಯ [೭]ತುದಿಯನದಿರದೆ[೭] ನೋಡಿ ಮಿಱಿದ ಮರನನೇಱಲ್ ಸಾಲದೆ [೮]ಕಾಲಪಾಶದಂತೆ ಮುರಿದು[೮] ಪರಿದು ಪರ್ವಿದ ಪೆರ್ಬಳ್ಳಿಯ-ನಡರ್ದೇಱೆ ಬಿಡದೆ ಬರ್ಪುದಂ ತಡೆಯದೆ ಕಂಡು ನಡನಡಂ ನಡುಗಿ ತಲ್ಲಣಿಸಿ ಮಲ್ಲಳ-ಗೊಂಡು ಪೋಳಲೊಳಗಣ ಬಾಲವಿಹಂಗಂಗಳನೆಱಂಕೆಯೊಳಱುಂಕಿಕೊಂಡು ಪಾಱ-ಲನುವಾಗಿ ತೂಱಲ್ಗೊಂಬಿನೊಳಿರ್ಪ ವಿಹಂಗಸಂಕುಳದಿಂದತಿ ಸೌಂದರ್ಯಮಂ-

---

೧–೧ ಅತ್ಯುಗ್ರದಿಂ ಮುಲ್ಲದೊಳ್ ಮಲೆದು (ಶಾ ಬೆ ಯೆ). ೨–೨ ಬದಿಯಂ (ಗ ಗೊ ಸ ಕೊ ದಾ). ೩–೩ ದಣ್ಣನೆ ದಣಿದು (ಶಾ ಬೆ ಯ). ೪-೪ ಕೇಳಲೊಡನೆ (ಗ ಬ); ಕೇಳ್ದು (ಶಾ ಬೆ). ೫–೫ ಹಣುಗಿ (ಶಾ). ೬–೬ ಕವಿತರ್ಪ (ಅ)., ೭–೭ ತುದಿವರನ (ಅ). ೮–೮ ಪಾಶದಂತೆ ಮೂಲದಿಂ (ದಾ).

ನುರುತರವಿಕ್ರಮಮುಮನುದ್ಯದ್ಭಯಾನಕಮುಮನೂರ್ಜಿತಸಂಪದಮುಮಪಾರಗಭೀರತೆಯುಮ ನಂತಕೌತುಕಮುಮನನೇಕರೌದ್ರರಸಮುಮನೊಳಕೊಂಡಿರ್ಪುದಂತುಮಲ್ಲದೆಯುಂ :

ಶಾರ್ದೂಲ

ಇಂತುದ್ಯನ್ಮೃಗಸಂಘದಿಂ ವನಚರಸ್ತೋಮಂಗಳಿಂ ಭೂಮಿಜಾ-
ನಂತ ಶ್ರೇಣಿಗಳಿಂದರಣ್ಯಕುಲದಿಂದಂ ತಾಪಸವ್ರಾತದಿಂ
ಸಂತಂ ಸುತ್ತಿದ ಸೂಕ್ಷ್ಮಗೋತ್ರಚಯದಿಂ ಗಂಧರ್ವಸಿದ್ಧಾಮರೌ-
ಘಂ ತೀವಿರ್ದ ಮಹಾಗುಹಾವಳಿಗಳಿಂದೊಪ್ಪಿರ್ದುದುದ್ಯನ್ನಗಂ ೧೨೯

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ-
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ-
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನ ವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೩೦

ಗದ್ಯ

ಇದು ಸಮಸ್ತ [1]ಸುರಾಸುರ[1]ಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯಪ್ರಭಾ-
ಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದ-
ಮಧುಕರಾಯಮಾಣ ಸತ್ಕವೀಶ್ವರ ಹಂಪೆಯ ಹರಿಹರದೇವ ವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ಹೈಮಾಚಲವರ್ಣನಂ ಪ್ರಥಮಾಶ್ವಾಸಂ.

೧–೧ ಸುರನಿಕರ (ಪಾ ಅ ಕ ಢ).

ದ್ವಿತೀಯಾಶ್ವಾಸಂ

ಗಿರಿರಾಜದೇಶಪುರಾಸ್ಥಾನವರ್ಣನಂ

ಶ್ರೀಮಚ್ಛರ್ವಂ ಪರಮ-
ಸ್ವಾಮಿ ದಯಾವಾರ್ಧಿ ಭಕ್ತಿಯುಂ ಕುಡುಗೆಮಗು-
ದ್ದಾಮ ಸುರರಾಜರಾಜಂ
ಸೋಮಧರಂ ಕೂರ್ತು ಹಂಪೆಯ ವಿರೂಪಾಕ್ಷಂ ೧

ಉತ್ಪಲ

ಆ ಹಿಮಶೈಲದುತ್ತರವಿಭಾಗದೊಳೊಪ್ಪುವುದಾತ್ತನಂದನ-
ವ್ಯೂಹ ತಟಾಕ ವೀಥಿ ಕಳಮಾ[೧]ವಳಿ[೧] ಕೈರವ[೨]ರಾಜಿಯು[೨]ಬ್ಜ ಸಂ-
ದೋಹ ವಿಶಾಲರಾಜನಗರೀವ್ರಜ ಚಾರುನದೀನದಾಳಿಯು-
ತ್ಸಾಹ[೩]ಸಮಗ್ರದಿಂದ[೩] ಗಿರಿರಾಜನ ದೇಶಮಿಳಾವಿಭೂಷಣಂ ೨

ಚಂಪಕ

ಸೊಗಯಿಪ ದೇಶಮು[೪]ಚ್ಚರಿಯ ದೇಶಮದು[೫]ತ್ತಮ[೪] ದೇಶಮಾರ್ಗೆಯುಂ
ಬಗೆದುದನೀವ ದೇಶಮತಿ[೬]ಮಂಗಳ[೬] ದೇಶಮನೂನದೇಶಮು-
ರ್ವಿಗೆ ಸುಖಮಪ್ಪ ದೇಶಮುದಿ[೭]ತೋದಯ[೭]ದೇಶಮಪಾರಪುಣ್ಯಕಾ-
ರಿಗಳನುಕೂಲದೇಶಮಮೃತೋದಯದೇಶಮದೆಂತು ಬಣ್ಣಿಪೆಂ ೩

ತೀವಿ ಬೆಳೆಯಿಲ್ಲದಿಳೆಯಿ-
ಲ್ಲಾವೆಡೆ ಬೆಳೆಯಿಸದ ವನಮದಿಲ್ಲನವರತಂ
ಪೂವಿಲ್ಲದ ಕೊಳನಿಲ್ಲ ಫ-
ಲಾವಳಿಯಿಲ್ಲ[೮]ದ ಮರಂಗಳಿಲ್ಲ[೮] ನಾಡೊಳ್ ೪

೧–೧ ವನಿ (ಬ ಮ). ೨–೨ ವೃಂದಮು (ಬ). ೩–೩ ಜನಂಗಳಿಂದ (ದಾ ಅ ಕೊ ಗ). ೪–೪ ವಗ್ಗಳ ಸಜೋಧವನುಕ್ರಮ (ಓ). ೫–೫ ನು (ಕಾ ಬ ಬೆ ಯ.) ೬–೬ ಶೆಂಪಿನ (ಬ). ೭–೭ ಶೋದಿತ (ಬ); ತೋಕ್ಷಿತ (ಅ). ೮–೮ ದಿಹ ಭೂಜವಿಲ್ಲಾ (ಓ); ದ ಬನಂಗಳಿಲ್ಲಾ (ಮ.)

ಅಳಿಯಾಸೆ ಪುಷ್ಪವಾಟೀ-
ಸ್ಥಳದೊಳ್ ರಾಜಭಯಮಬ್ಜಸಂಕುಳದೊಳ್ ಸಂ[೧]-
ಚಳತೆ ಪವಮಾನನೊಳ್ ವಿ-
ಹ್ವಳತೆ ರಥಾಂಗದೊಳಮಲ್ಲದಿಲ್ಲಾ ನಾಡೊಳ್ ೫

ಸಕಲಂಕತೆ ಚಂದ್ರಮನೊಳ್
ವಿಕಲಧ್ವನಿ ವಿಹಗದಲ್ಲಿ ಭಂಗಂ ನದಿಯೊಳ್
ಸಕುಟಿಲತೆ ಲತೆಗಳೊಳ್ ಭುವ-
ನಕಂಟ[೨]ಕಂ ಬಿಸದೊಳ[೨]ಲ್ಲದಿಲ್ಲಾ ನಾಡೊಳ್ ೬

ಕರವಿಚ್ಛೇ[೩]ದಂ ಗ್ರಾಮ[೩]ಣಿ-
ಕರಂಗಳೊಳ್ ಬಂಧನಂ ಕುಸುಮಮಾಲಿಕೆಯೊಳ್
ಪರವಶಮೆಂಬುದು ಯೋಗೀಂ-
ದ್ರರೊಳಲ್ಲದೆ ಶೈಲವತಿಯ ದೇಶದೊಳುಂಟೇ ೭

ಆಮಯಮಕ್ಷರಕುಲದೊಳ್
ಸಾಮಂ ವೇದಂಗಳಲ್ಲಿ ಭೀಮಂ ಚಿತ್ರ-
ಸ್ತೋಮದೊಳಂ ಕ್ಷಾಮಂ ಲಲ-
ನಾಮಧ್ಯದೊ[೪]ಳಲ್ಲದಾ ಸುದೇಶದೊಳುಂಟೇ[೪] ೮

ಆ ದೇಶಂ ಸಲೆ ಗಿರಿರಾ-
ಜಾದೇಶಂ [೫]ತೀವಿ ವಿಪ್ರ[೫]ವೇದೋಚ್ಚರಣಾ-
ಣಾದಶಿವ[೬]ವಾಕ್ಯ[೬]ದೊಳ್ ಸಮ-
ನಾದ ಶಿವಜ್ಞಾನಗಾನದಿಂದೆಸೆದಿರ್ಕುಂ ೯

ಗ್ರಾಮಂ [೭]ಜಿತಾಘಕುಲಸಂ[೭]-
ಗ್ರಾಮಂ ಸದನಂ ಸುಖಕ್ಕೆ [೮]ಪಸದನಮೆಸೆವಾ[೮]
ರಾಮಂ [೯]ರಾಮಂ ಜನಕುಲ[೯]-
ಕಾಮಂ ಕಾಮಹರ[೧೦]ಪೂಜೆ[೧೦] ನೋಡಾ ನಾಡೊಳ್ ೧೦

೧-೧ ಚಂ (ಮ). ೨-೨ ಕಂ ಬಿಸಜಕ (ಅ); ಕ ಬಿಸಜದೊಳಿ (ಗೊ). ೩-೩ ದಾರಾಮ (ಓ). ೪-೪ ಳಲ್ಲದಿಲ್ಲವಾ ದೇಶದೊಳುಂ (ಅ). ೫-೫ ಸಕಲಶಾಸ್ತ್ರ (ಶಾ ದೆ ಯ ಕೊ). ೬-೬ ಕಾವ್ಯ (ಕೊ). ೭-೭ ಜಿತಾಘಸಂಕುಲ (ಯ). ೮-೮ ಸದನಮೆನಿಸುವಾ (ಅ). ೯-೯ ಜನಕುಲರಾಮಂ (ಅ). ೧೦-೧೦ ಭಕ್ತಿ (ಅ. ಓ.).

ಕಲ್ಲೆಲ್ಲಂ ಪರುಷಂ ತರು-
ವೆಲ್ಲಂ ಕಲ್ಪತರು ಗುಲ್ಮವೆಲ್ಲೌಷಧಿ ಗೋ-
ವೆಲ್ಲಂ ಸುರಭಿಕುಲಂ ಮಡು-
ವೆಲ್ಲಂ ಸಿದ್ಧರಸಮೆನಿಕುಮಂತಾ ನಾಡೊಳ್ ೧೧

ಆ ವಿಷಯದೊಳೊಪ್ಪುವ ಕಳ-
ಮಾವಳಿ ನಳನಳಿಸಿ ಬೆಳೆದು ಪಸುರೇಱಿ ಲಸದ್-
ಭೂವನಿತೆಗೆ ಧಾತ್ರಂ ಪರಿ-
ಭಾವಿಸಿ ಪೊದೆಯಿಸಿದ ಹರಿತಪಟದಂತಿರ್ಕುಂ ೧೨

ಸೊಂಪಾಗುತ್ತಂಕುರಿಸು-
ತ್ತುಂ ಪಸುರೇಱುತ್ತೆ ಕವಲಿಱಿದು ಪೊಡೆಯೊತ್ತು-
ತ್ತುಂ ಪಾಲೇಱುತ್ತುಂ ನೆಱೆ-
ದಿಂಪಿಂ ನಳನಳಿಸಿ ಶಾಲಿವನಮೆಸೆದಿರ್ಕುಂ ೧೩

ಉಗುವೆಳನೀರಿಂದಂ ಕದ-
ಳಿಗಳಾ ಕದಳಿಗಳ ಪಣ್ಣ ರಸದಿಂ ಪುಂಡ್ರೇ-
ಕ್ಷುಂಗಳಿಕ್ಷುರಸದಿನಾ ಕಳ-
ವೆಗಳಾ ಕಳವೆಗಳ ಕಣಿಶದಿಂ [1]ಗಿಳಿ ಬಳೆಗುಂ[1] ೧೪

ಆ ಕಳಮಕ್ಷೇತ್ರಮಂ ಬಳಸಿ ಬಂದು ತಾಮರಸಾಕ್ಷಿಯರಪ್ಪ ಪಾಮರಿಯರ್ [2]ಸಾದರಂ[2] ಕಾದಿರ್ಪಲ್ಲಿ,

ಚಂಪಕ

ತ್ವರಿತಗತಿಪ್ರಚಾರತೆ ಮರಾಳಲಸದ್ಗತಿ ಸಾರುತೆಳ್ಪಲ-
ಬ್ಬರಿಸುವ ನಾದಮನ್ಯಭೃತನಾದ[3]ಮಡರ್ಚುತಿಡಲ್ಕೆ[3] [4]ಮಚ್ಚು[4] ಮ-
ಚ್ಚರಿಸುವ ತೋಳ್ ಮರುದ್ಧತಲತಾಕುಳಮೆಂದುಱೆ ಪಕ್ಕಿಸೋವ ಪಾ-
ಮರಿಯರ ಝುಂಕೆಗಲ್ಲಿ ಗಿಳಿಯುಂಜದೆ ಬೆರ್ಚದೆ ನಿಲ್ಕುಮಾವಗಂ ೧೫

೧-೧ ದಿಳೆ ಬೆಳೆಗುಂ (ಮ). ೨-೨ ಸಾದರದೆ (ಶಾ ಯು); ಸಾದರದಿಂ (ಕೊ ಬೆ).
೩-೩ ಮುಮುರ್ಚುತಿಡಲ್ಕೆ (ಶಾ ದಾ); ಮುಮುರ್ಚುತಿರಲ್ಕೆ (ಬ ಆ ಬೆ) ೪-೪ ಮೆಚ್ಚು (ದಾ).

ಮತ್ತಮಲ್ಲಿ,

ಮುಡಿ ಮೊಲೆ ನಿತಂಬಭಾರದಿ-
ನಡಿಯಿಡಲಾಱದೆ ಶುಕಾಳಿಯುಂ ಪಾಮರಿಯರ್
ಬಿಡೆ ಸೋವುತ್ತಿರ್ಪರ್ ಸಂ-
ಗಡಮಿರ್ದಲ್ಲಿರ್ದು ಬಱಿಯ ಗಳಬಳದಿಂದಂ ೧೬

ಗಿಳಿಯುಂ ಸೋವೆಳೆಯುಳ ನುಡಿ-
ವಳಿಯಿಂದೆ ವಿಕಾಸವಾದ ಬಾಯ್ದಱೆಗಂಡಂ
ದೆಳಸುತ್ತಿರ್ಪುವು ದಾಡಿಮ-
ಫಳಬೀಜಂಗೆತ್ತು ದಂತಕುಳಮಂ ಗಿಳಿಗಳ್ ೧೭

ಮತ್ತಂ ಪೆಱತೊಂದೆಡೆಯ ಕಳಮಕ್ಷೇತ್ರಮಂ ಕಾದಿರ್ಪ ಕಾಮಿನಿಯರೊಳೊರ್ವ ಪ್ರೌಢಪಾಮರಿ ಪಾಂಥರೊಳಗೆ ಬಳಲ್ದು ಬರ್ಪ ಜವ್ವನಿಗನಂ ಕಂಡು ನಾಡೆ ಮನವೆಳಸಿ ಕೂಡಲೆಂದು,

ಪತ್ತಿತು ಬಿಸಿ[೧]ಲುಱಿ[೧] ಕಾಲಂ
ಮುತ್ತಿತು ನೋವುದಕದಿಚ್ಛೆಯಿಂದಂ ಬೆಳರ್ವಾಯ್
ಬತ್ತಿತ್ತಯ್ಯೋ ಶ್ರಮಮನಿ-
ನಿ[೨]ತ್ತಂ ಕಳೆವ[೩]ವರೆ ಜಾಣರೆ[೩]ನುತುಂ ನುಡಿದಳ್ ೧೮

ಚಂಪಕ

ನುಡಿಯೆ ಬಳಲ್ದ ಪಾಂಥನಿರ್ದೆ ತಣ್ಪಿನ ಸೋನೆಯನಾಂತ ಮಾಳ್ಕೆಯಿಂ
[೪]ಪೊಡಕರಿಸುತ್ತೆ[೪] ಪೆರ್ಚಿ ಮಿಗೆ ಸಾರ್ದು ನಿವಾತಸುಖಸ್ಥಳಕ್ಕೆ ಬಂ-
ದೆಡೆಗುಡದನ್ಯಚಿಂತೆಗೆ ಮನೋಜಸುಖಾರ್ಣವಮಧ್ಯದೊಳ್ ಮನಂ-
ಗುಡುತಮಮರ್ಚುತೀಸುತೆ ಧುಡುಮ್ಮಿಕ್ಕಿಱಿಯುತ್ತಮೆ ಪಾಂಥನೊಪ್ಪಿದಂ ೧೯

ನೆಳಲಾದುದು ಧಮ್ಮಿಲ್ಲಂ
ಪುಳಿನಸ್ಥಳಮಾಯ್ತು ವೃತ್ತಜಘನಭರಂ ಶೀ-
ತಳತರಜಳಮಾದುದು ಕೋ-
ಮಳೆಯಧರಮರೀಚಿ ಪಾಂಥನೇಂ ಬದುಕಿದನೋ ೨೦

೧–೧ ಉರಿ (ಕಾ ಯ ಕೊ). ೨–೨ ಮಿ (ದಾ ಗೋ ಕ ಅ) (ಬ). ೩–೩ ವನೆ ಜಾಣನೆ (ಕಾ). ೪–೪ ಪೊಡರಿಸುವಂತೆ(ಓ).

ಮತ್ತಮಾ ದೇಶದೊಂ[1]ದಱವಟಿಗೆಯಲ್ಲಿ,[1]

ಮಹಾಸ್ರಗ್ಧರೆ

ಕಳಕೇಕೀಕೇಶಪಾಶಂ ಶಶಿನಿಭವದನಂ ಭೃಂಗನೀಲಾಳಕಂ ಸಂ-
ಚಳಿತಪ್ರೋನ್ಮ[2]ತ್ಸ್ಯನೇತ್ರಂ ಘಟ[2]ಕುಚಯುಗಳಂ [3]ಲೇಶ[3]ಮಧ್ಯಂ ಗಭೀರೋ-
ಜ್ಜ್ವಳಶೋಭಾನಾಭಿ ಕುಂಭಸ್ಥಳಸದೃಶನಿತಂಬಂ ಸುರಂಭಾವಿಳಾಸಂ-
[4]ವಳಿ[4]ದೊಪ್ಪಿರ್ದೂರುದಂಡಂ ತನಗೆಸೆ[5]ದಿರೆ ಸಂತಂ[5]ಪ್ರಪಾಕಾಂತೆಯಿರ್ದಳ್ ೨೧

ವರನಾಭಿ ಸುಳಿಗಳಂ ತೋಳ್
ತರಂಗಮಾಲೆಗಳನಂಬಕಂ ಮತ್ಸ್ಯಮನಂ-
ಗರುಚಿ ರುಚಿರಾಂಬುವಂ ಪೋ-
[6]ಲ್ತು[6] ರಮಣಿ ನದಿಯಂದದಿಂ ಪ್ರಪಾಂತದೊಳಿರ್ದಳ್ ೨೨

ಇರೆ ಬಂದ ಪಥಿಕನೊರ್ವಂ
ತರುಣಿಯ ಲಾವಣ್ಯರಸಮನಕ್ಷಿಗಳಿಂದಂ
ಬರೆ ಪೀರ್ದು ದಣಿದು ಬಟ್ಟೆಯ
ಪರಿಶ್ರಮವ್ಯಥೆಯನಱಿಯದಿರ್ದಂ ಸುಖದೊಳ್ ೨೩

ಆ ಪ್ರಪಾಕಾಮಿನಿ ಪಥಿಕರ್ಗೆ ನೀರ್ಗುಡಿಯಲೆಱೆವಲ್ಲಿಯೊರ್ವ ವಿಟಂ ಜಲಪಾನಂಮಾಡುತಂ ತರುಣಿಯ ನಿರತಿಶಯಲಾವಣ್ಯಮಂ ಕಂಡು,

ತೀರ್ದುದು ನೀರ್ ತೀರ್ದುದು ತೃಷೆ
ತೀರ್ದುದು ಕಡುಸೇದೆ [7]ತೀರ್ದೊಡೇಂ[7] ಪಥಿಕಂ ತಾ
ನಿರ್ದಂತಿರ್ದಂ ಸ್ತ್ರೀಮುಖ
ಮಿರ್ದಿರವಂ ನೋಡುವಾಸೆ ತೀಱದೆ ಮನದೊಳ್ ೨೪

ನಡೆ ನುಡಿ ಬಳಲ್ಕೆ ಮುನ್ನಂ
ಕಡುಚೆಲ್ವೆಯ ರೂಪುಗಂಡ ಬಳಿಕಂ [8]ನಡೆಯರ್
ನುಡಿಯರ್ ನೀರಂ ಕುಡಿಯರ್[8]
ನಡೆನೋಡುತ್ತಿರ್ಪರತನುಶಿಥಿಲರ್ ಪಥಿಕರ್ ೨೫

೧–೧ ದು ಪಾನೀಯ ಶಾಲೆಯಲ್ಲಿ (ಶಾ ಯ). ೨-೨ ತ್ತ ನೇತ್ರಂ ಘನ (ಓ) ೩–೩ ಸಿಂಹ (ಗೊ ಯ.) ೪–೪ ಬಳಿ (ಮ ಬ ಬೆ ಕ ಅ ಓ). ೫–೫ ಯೆ ನಿತಾಂತಂ (ಶಾ); ಯೆ ನಿರಂತಂ (ಅ ಬ ಗೊ). ೬–೬ ಲೆ (ಶಾ). ೭–೭ ತೀರ್ದೊಡಂ (ಬ ಯ ಬೆ) ೮-೮ ನೀರು ಕುಡಿಯರ್ ನಡೆಯರ್ (ದಾ ಯ ಅ ಕ ಕೊ).

ಮತ್ತವೊಂದು ಪ್ರಪಾಶಾಲೆಯುಳ್ಳಿ,

ಅಂಬುವನೆಱೆವಾಗಳ್ ಪ್ರತಿ-
ಬಿಂಬಿಸೆ ಕೆಯ್ನೀರೊಳವಳ ವದನಂ ಪಥಿಕಂ
ನಂಬಿ ನಲಿದೀಂಟಿದಂ ಪ್ರತಿ
ಬಿಂಬಾಧರಮಧುರರಸಮನೀಂಟುವ ತೆಱದಿಂ ೧೬

ಮತ್ತಮಾ ದೇಶದಲ್ಲಿ,

ಬಳಸಿಗವೊಪ್ಪಿದುವು ಜಿನುಗಿ
ಗಳಪಿ ಕುಳಿಕೋಡಿ ಕಳ್ತಲಿಸಿ ಮಲೆದುದ್ದಂ
ದಳೆದು ಫಲವಾಗೆ ಪರಿವಡೆ
ದಳಿ ಗಿಳಿ ಮಡು ಗಿಡು ಕರಿ ಗಿರಿ ಚೂತಂ ಗೀತಂ ೧೭

ನಾನಾದೇವಾಯತನಾ
ನೂನವಿಭೋಗಾದಿಸಂಪದಪ್ರದಮೆನಿಸಿ
ರ್ಪಾ ನಾಡಿಂಗೆ ಶಿರೋಮಣಿ
ತಾನೆನಿಕುಂ ಪೆಸರೊಳೋಷಧಿಪ್ರಸ್ಥಪುರಂ ೧೮

ಅದು ಗಿರಿರಾಜನ ರಾಜ್ಯಾ-
ಸ್ಪದರಾಜಿತರಾಜಧಾನಿ ತಾನೆಂದೆನಿಸಿ-
ರ್ಪುದು ಪುರಮಾ ಪುರಮಂ ಸು-
ತ್ತಿದ ಬಹಿರುದ್ಯಾನ[೧]ಚಯು[೧]ಮನಾರ್ ಬಣ್ಣಿಸುವರ್ ೧೯

ಚಂಪಕ

ಕರಮೆಸೆವೀಳೆ ಬಾಳೆ ನವಪೂಗಚಯಂ ಪನಸಾಳಿ ಶಾಳಿ ಭಾ-
ಸುರಸುರಹೊನ್ನೆ ಜಂಬು ಘನನಿಂಬಕುಳಂ ಬಕುಳಂ ಕವುಂಗು ತೆಂ-
ಗುರುತರಮಾತುಳಂಗತತಿ ಚೂತಕುಜಾತಮಶೋಕೆ ಪೂಗೊಳಂ
ಕುರುವಕನತ್ತಮಾಲಕೃತಮಾಲತಮಾಲದಿನೊಪ್ಪುಗುಂ ವನಂ ೨೦

ಮತ್ತೇಭ

ಸಿರಿತಂದಿಕ್ಕಿದಶೋಕೆ ವಾಗ್ವನಿತೆಯಿಟ್ಟಾವ್ರಂ ಶಚೀದೇವಿಯಿ
ಟ್ಟರನೇರಿಲ್ ಮಿಗೆ ರಂಭೆಯಿಟ್ಟ ಕದಳೀಷಂಡಂ ಸುರಸ್ತ್ರೀಯರಿ-
ಟ್ಟರವಿಂದಾಕರಮುರ್ವಶೀವಧು ಸರಾಗಂ ತಂದ ಪೂಗದ್ರುಮಂ
ತರದಿಂದಂ ರತಿಯಿಟ್ಟ ದಾಡಿಮಕುಲಂ ಸಾರ್ವರ್ತುಕೋದ್ಯಾನದೊಳ್ ೨೧

೧–೧ ವನ (ಕೊ).

ಚಂಪಕ

ಸುರುಚಿರಸಾರಪಕ್ವಫಲವಕ್ತ್ರಲಸಚ್ಛುಕಚುಂಬನಂ ಬನಂ
ಪರಮವಿರಕ್ತಸಂತತಿಗಿದೇತಜಿ ಮೋಹನಮೆಂಬಿನಂ ಬನಂ
ಚರಿತದೆ ಸೋಲಿಕುಂ ಶುಕಪಿಕಾಳಿಕುಲಕ್ಕತಿಜೀವನಂ ವನಂ
ಧರೆಗೆ ವಿಚಿತ್ರಭಾಸುರವುದೇಳಿಪುದಗ್ಗದ ಕಾವನಂ ವನಂ ೩೨

ಆ ಸಾರ್ವರ್ತುಕವೆನಿಸಿದುದ್ಯಾನದಲ್ಲಿ,

ಉತ್ಪಲ

ಅಂಕುರದಿಂ ಪ್ರವಾಳ[೧]ಕುಲದಿಂ[೧] ನನೆಯಿಂ ಮುಗುಳಿಂ ಪ್ರಸೂನದಿಂ
ದಂ ಕಿಱುಗಾಯ್ಗಳಿಂ ತೊರೆದ ದೋರೆಗಳಿಂ ತನಿವಣ್ಣಪಙ್ಕ್ತಿಯಿಂ
ದಂ ಕಳಕಂಠಕೂಜಿತದಿನೊಪ್ಪುವ ಷಟ್ಪದವೃಂದಗಾನದಿಂ
ದಂ ಕಡುಕೊರ್ಬಿ ಚಪ್ಪರಿಪ ರಾಜಶುಕಾಳಿಯಿನಾಮ್ರಮೊಪ್ಪುಗುಂ ೩೩

ಮತ್ತಂ,

ಚಂಪಕ

ಇದು ರತಿರಾಜಭದ್ರಗಜವೋ ಇದು ಚೈತ್ರನ ರಾಜಧಾನಿಯೋ
ಇದ್ದ ವನಲಕ್ಷ್ಮಿಗೆತ್ತಿಸಿದ ಪೀಲಿಯ ಸತ್ತಿಗೆಯೋ ವಸಂತನಿಂ
ದಿದು ಶಶಿಯುಳ್ತ್ರಯಿಂ ಸಲಪಿದರ್ವಿ[೨]ದ ಕೊರ್ವಿದ [೨]ಕಲ್ಪವೃಕ್ಷವೋ
ಇದು ಧರೆಯಿಂದೆ ಮೂಡಿದ ನವಾಂಬುದವೋ ಎನೆ ಚೂತಮೊಪ್ಪುಗುಂ ೩೪

ಮತ್ತೇಭ

ತರದಿಂದಂಕುರಮಂಕುರ[೩]ಪ್ರಕರ[೩]ದಿಂದಂ ಪಲ್ಲವಂ ಪಲ್ಲವೋ
ತ್ಕರದಿಂದಂ ಕುಸುಮಂ ಲಸತ್ಕುಸುಮದಿಂ ಚಂಚತ್ಫಲಂ [೪]ತತ್ಫಲೋ
ತ್ಕರದಿಂ[೪] [೫]ಚಾರು[೫]ಶುಕಂ ಶುಕಾವಳಿಗಳಿಂ ಭೃಂಗಾಳಿ ಭೃಂಗಾಳಿಯಿಂ
ಪರಪುಷ್ಟಂ ಪರಪುಷ್ಟಪೋತಕಕುಲಂ ಪೊಣ್ಮಿರ್ಪುದಿವ್ಯಾಪಿನೊಳ್ ೩೫

೧-೧ ಲತೆಯಿಂ (ಕ) ೨-೨ ಯ ಕೊರ್ವಿದ (ದಾ ಗೊ); ಯ ಪರ್ವಿದ (ಬ); ದ ಕೊರ್ವಿದ (ಕ). ೩-೩ ಪ್ರಸರ (ಅ). ೪-೪ ತತ್ಫಲಾ।ಕರದೊಳ್ (ಶು ದಾ); ತತ್ಫಲೋ। ತ್ಕರದೊಳ್ (ಬ). ೫-೫ ರಾಜ (ಗೊ).

ಚಂಪಕ

ಸಲೆ ಸಹಕಾರದಲ್ಲಿ ಕೆಲವಂಕುರವಂ [೧]ಕೆಲವಾ[೧] ಪ್ರಸೂನವಂ
ಕೆಲವು ಫಲಂಗಳಂ ಮಿಸುಪ ಚಂಚುಗಳಂ ನವನಾಸಿಕಂಗಳಂ
ತೊಲಗದೆ ಜಿಹ್ವೆಯಿಂ ಕರ್ದುಕಿ ವಾಸಿಸಿ ಪೀರ್ದುಱಿ ಸೊರ್ಕುತುಂ ಕರಂ
[೨]ನಲಿಯುತೆ ಮಿಾಱಿ[೨] ತೊಂಡುಗೆಡೆಯುತ್ತೆ ಪಿಕಾಳಿಶುಕಾಳಿಯೊಪ್ಪುಗುಂ ೩೬

ಕಾವಂಗೆಂದು ವಸಂತಂ
ಭಾವಿಸಿ [೩]ಸಮೆದಿಟ್ಟ[೩] ನೀಲದರಮನೆಯೆನಿಕುಂ
ಮಾವಿನ ಹೂವಿನ ಕಾವಿನ
ಠಾವಿನ ಮೊದಲಿಂದೆ ತೀವಿದಳಿಗಳ ಬಳಗಂ ೩೭

ಬಿರಿಯಲ್ ಪೊಂಗಿದ ಪಣ್ಗಳ
ಸಿರೆಯುಱದಲ್ಲಿರಿಸಿ ಚಂಚು[೪]ಪುಟದಿಂ[೪] ಸವಿಯಂ
ಬರೆ[೫]ತೆಗೆದು ತಣಿವು ತವಕಮ
ನರಳ್ಚುತ್ತಿರೆ ಮೆಱೆದುದಾ[೫]ಮ್ರದೊಳ್ ಶುಕನಿಕರಂ ೩೮

ಬಿಗಿಯುಪ್ಪಿ ಮೊಗಮನಿಟ್ಟಾ
ಲಿ[೬]ಗಳವು[೬] ನಸುಮುಚ್ಚೆ ಪಕ್ಷಯುಗಮೆಳಲೆ ರಸಂ
ದೆಗೆವ ದನಿ ನಿಮಿರೆ ನಾಲಗೆ
ಜಿಗುರುತ್ತಿರೆ ಸವಿದುದೊಂದು ಗಿಳಿ ತನಿವಣ್ಣಂ ೩೯

ಎಳಸಿ ನೆಗೆತಂದು ಮಿಕ್ಕ
ಗ್ಗಳಸು[೭]ತುಮಿರ್ದಂತಿರಪ್ಪೆ[೭] ಮಧುರರಸಂ ವೆ
ಗ್ಗಳಸೆ ಲವಲವಿಸುತುಂ ಪ
ಣ್ಗಳೊಳಳ್ದ ದದೊಂದು ರಾಜಶುಕನತಿಭರದಿಂ ೪೦

೧-೧ ಕೆಲವುಂ (ಕಾ). ೨-೨ ನಲಿನಲಿದುರ್ವಿ (ಕಾ ಯ). ೩-೩ ತೆಗೆದಿಟ್ಟ (ಅ ಬ). ೪-೪ ಪುಟಮಂ (ಬ ಮ). ೫-೫ ತೆಗೆದು ತಣಿವು ತವಕಮು।ನಳಲ್ಚು ತುರೆ ಮುಱಿವುದಾ (ಕಾ); ಪಾರ್ದು ತಣಿವು ತವಕಮು।ನರಳುತ್ತಿರೆ ಮೆಱೆದುದಾ (ಚ ಗೊ); ತೆಗೆದು ತಣಿವು ತವಕಮು। ನರಳುತ್ತಿರೆ ಮೆಱೆದುವಾ (ಬೆ). ೬-೬ ಗಳಂ (ಕಾ ಬೆ ಯ ದಾ) ೭-೭ ತ್ತೆ ಮಿಟ್ಟನಂತಿರಪ್ಪಿ (ದಾ ಗೊ ಕೊ).

ಮತ್ತಮಲ್ಲದೆ,

ಅರಳೆಲೆ[೧]ಮೇಲಾ[೧]ಡುತ್ತಿರೆ
ಭರದಿಂ ಮಾಂಗಾಯ್ಗಳೊಲೆಯೆ ಕೆಲಬಲದೊಳ್ ನಿಂ
ದರಗಿಳಿಯ ತೊದಳ್ನುಡಿ ಬಿ
ತ್ತರಿಸೆ ವಸಂತನ ಕುಮಾರನೆನಿಸಿತ್ತಾಮ್ರಂ ೪೧

[೨]ಅಂತಂತೆ ನಲಿದು[೨] ನಾಲಗೆ
[೩]ತೀಂತೆ ಮಿಗಲ್ ಕಳಿಕೆಗೆಳಸಿ ಚಂಚುವನಿಟ್ಟೋ[೩]
ರಂತೆ ಸವಿಸವಿದು ಸೊರ್ಕಿ ನಿ
ರಂತಂ ಕರೆದತ್ತು ಮಾವಿನೊಳ್ ಪರಪುಟ್ಟಂ ೪೨

ಅಳಿ [೪]ಗಿಳಿ [೪]ಪಿಕಕುಲರವದಿಂ
ನೆಳಲಿಂ ರೂಪಿಂ ಫಲಂಗಳಿಂ ಪೂವಿಂದಂ
ಬಳಸಿ ತಣಿಪುವುದು ಪೊಸಮಾ
ವೆಳಸಿದ ಪಾಂಥಪ್ರತಾನಪಂಚೇಂದ್ರಿಯಮಂ ೪೩

ತಿಳನೀರಿಂ ತಾವರೆಯಿಂ
ಕಳಹಂಸೆಯಿನೆಸೆವುದಲ್ಲಿ ಸರಸೀಷಂಡಂ
ತಳಿರಿಂ ನನೆಯಿಂ ಪೂವಿಂ
[೫]ಫಳಂಗಳಿಂದೆಸೆವುದಲ್ಲಿ[೫] ಚೂತಕುಜಾತಂ ೪೪

ಪಿಕಕುಲದ ಸೊರ್ಕು ಮಧುಕರ
ನಿಕರದ ಮದವರಗಿಳಿಗಳ ಗರ್ವಂ ನವಚೂ
ತಕುಜಂ ಮಲ್ಲಿಗೆ ದಾಡಿಮ
[೬]ನಿಕಾಯಮ[೬]ಂಕುರದೆ ಪುಷ್ಪದಿಂ ಫಲದಿಂದಂ ೪೫

೧–೧ ಯೊಲೆದಾ (ಅ ಯ). ೨–೨ ಅಂತಂತು (ಕಾ); ಅಂತತಿನಲಿದುಂ (ಅ). ೩–೩ ತೀಂತೆ ಕರಂ ಕಳಿಕೆಗೆಳಸಿ ಚಂಚುವನಿಟ್ಟೋ (ಬ). ತೀಂತೆ ಕರಂ ಮುಸಗಿ ಕಳಿಕೆಗಳ 'ಮೊಗವಿಟ್ಟೋ (ಅ); ತೀಂತೆ ಮುಸಗಿ ಕಳಿಕೆಗಳಸಿ ಚುಂಚುವನಿಟ್ಟೋ (ಕ ಓ). ೪–೪ ಶುಕ (ಕಾ). ೫–೫ ಫಳದಿಂತೆಸುವುದಲ್ಲಿ (ಕಾ). ೬–೬ ನಿಕರಮು (ಅ).

ಮತ್ತಮಲ್ಲದೆಯುಂ,

ಬೇರಿಂದಂ ನೀರುಂಡಾ
ಬೇರಿಂದಗ್ರಂಬರಂ ಫಲಂಗಳನೀವೆಂ
ಧಾರಿಣಿಗೆಂಬಂತಿರೆ ಫಲ
ಪೂರಿತ ಪನಸದ್ರುಮಂಗಳೆಸೆದುವು ಬನದೊಳ್ ೪೬

ನೀರೆಱೆದುಪಕಾರಕ್ಕೆಳ
[೧]ನೀರಂ[೧] ರುಚಿವೆರಸು ತೀವಿ ವನಪಾಲಕರಂ
ಪಾರುತ್ತಿರ್ಪಂತಿರ್ಪುವು
ಸಾರಾಯಫಲಾಳಿ ನಾಳಿಕೇರಂ ಬನದೊಳ್ ೪೭

ವನಲಕ್ಷ್ಮಿಗೆ ಸಕಲವಿಲಾ
ಸಿನಿಯರ್ ಬಳೆದೋಳ್ಗಳಿಂದೆ ಚಾಮರಮಿಕ್ಕಲ್
ತನತನಗೆ ನಿಂದರೆನೆ ತದ್
ವನದೊಳ್ ಪೊಂಬಾಳೆಯಿಂದೆ ಪೂಗಮದೆಸೆಗುಂ ೪೮

ಕುಸುಮಶರಂಗೆ ವಸಂತಂ
ಪೊಸಪೊಂಗಳಸಂಗಳಲ್ಲಿ ಸೌರಭ್ಯಸುಧಾ
ರಸಮಂ ತೀವಿರಿಸಿದವೋ
[೨]ಲಿಸೆವುವು ಫಳಭಾರ[೨]ಮಾತುಳಂಗವ್ರಾತಂ ೪೯

ಬಾಗುತೆ ಬಲಿಯುತೆ ಪೊಳೆದಿನಿ
ದಾಗುತೆ [೩]ದಳವೇಱುತಿಡಿದಿಡಿದು ಹಿಗ್ಗುತೆ ಪ
ಣ್ಣಾ[೩]ಗುತೆ ಕಾಯ್ಗಳ್ ಪೊಱಮಡೆ
[೪]ಬೀಗುತ್ತುಂ ಬೆಳೆದುವಲ್ಲಿ [೪]ಕದಳೀಷಂಡಂ ೫೦

೧-೧ ನೀರಿಂ (ಶಾ ಬೆ ಯು). ೨-೨ ಲಿಸೆದುದು ಫಲಭರಿತ (ಶಾ ಯು); ಲಿಸೆದುವು ಫಲಭಾರ (ದಾ. ಕೊ.) ೩-೩ ದಳವೇಱಿ ಹಿಗ್ಗುತ್ತವೆ ಹೂದಾ (ಅ); ದಳವೇಱು ತಿಡಿಕಿಱಿದು ಪಣ್ಣಾ (ಶಾ ಯು ಬೆ) ೪-೪ ಬೀಗಿ ಬೆಳೆದುವಲ್ಲಿ ಬಸದ (ಅ ಕ).

ಅಂತುಮಲ್ಲದೆಯುಂ,

[೧]ಅಳಿಗಳ ಗಿಳಿಗಳ ಕೋಗಿಲೆ
ಗಳ ಕಳಹಂಸೆಗಳ[೧] ಪಾರಿವಂಗಳ ಕೋಕಂ
ಗಳ ಪುರುಳಿಗಳ ನವಿಲ್ಗಳ
ಕೊಳರ್ವಕ್ಕಿಗಳೆಸೆವ [೨]ಮನದ[೨] ಬಿನದಂ ಬನದೊಳ್ ೫೧

ನಲಿದು ಕೊರಲೆತ್ತಿ [೩]ಕುಕಿಲಿಱ್
ದುಲಿದುಂ[೩] [೪]ಸುಳಿದೆಳಸಿ[೪] ಬಳಸಿ ಬಳಸಂದು ಪಳಂ
ಚಲೆದೊಲೆದು ಪಕ್ಕಮಂ ಬಿ
ರ್ಚಿ ಲಲ್ಲೆ[೫]ಗೆಯ್ದತ್ತು[೫]ಪಾರಿವಂ ಪಾರಿವದೊಳ್ ೫೨

ಚಾರುತರಂ ನಿರ್ಮಲಜಲ
ಪೂರಂ ಸೌರಭ್ಯಮುದಿತಮದಮಧುಕರಘೋಂ
ಕಾರಂ ಹಂಸಕುಲಕ್ರೇಂ
ಕಾರಂ ರಾಜೀವಭರಿತ ನವಕಾಸಾರಂ ೫೩

ಅಂತುಮಲ್ಲದೆಯುಂ.

ಚಂಪಕ

ಸುರರ ನಿವಾಸದಂತನಿಮಿಷಪ್ರಕರಂ ನಭದಂತಿರಬ್ಜಬಂ
ಧುರಮಧುಮಾಸದಂತೆ ಸಿತಪಕ್ಷ[೬]ಯುತಂ[೬] ರಥದಂತೆ ಚಕ್ರವಿ
ಸ್ತರಮುರುಪದ್ಮಜಾಂಡದವೊಲಾತ್ತಲಸದ್ಭುವನಾಶ್ರಯಂ ಧನು
ರ್ಧರರ ಕಳಾಪದಂತೆ ರಮಣೀಯಶಿಳೀಮುಖಸಂಕುಳಂ ಕೊಳಂ ೫೪

೧-೧ ಅಳಿಗಿಳಿಗಳ ಕೋಗಿಲೆಗಳ|ಕಳಹಂಸಾಳಿಗಳ (ಕಾ). ೨ ಮದದ (ಅ); ಮದನ (ಕೊ). ೩-೩ ಕುನಿದು ಕು|ಕಿಲಿಱ್ದು (ಕಾ ಸಿ ಓ); ಕುಕಿಲಿಱ್|ದುಲಿದುರೆ (ಬೆ). ೪-೪ ಸುಳಿಸುಳಿದು (ಬ). ೫-೫ ಗಱ್ದತ್ತು (ಅ). ೬-೬ ಯುಗಂ (ಅ). ‡ ಈಳನೆಯ ಪದ್ಯದ ಮುಂದೆ ದಾ. ಓ. ಪ್ರತಿಗಳಲ್ಲಿ ಪಾವಕ ದಿಕ್ಕಿನಂತೆ ವನದಂತೆ ವಿಜೃಂಭಿತಪುಂಡರೀಕನಿಂ| ದೀವರನಾಭರಮ್ಯಸಭೆಯಂತೆ ರಸಾತಲದಂತನಂತಪ| ದ್ಮಾವಹಮುರ್ವಿಯಂತೆ ನಭದಂತೆ ವಿರಾಜಿಪ ರಾಜಹಂಸವಾ| ಹಾವಳಿಯಂತೆ ಕಾಮಿಜನದಂತೆ ಗುಮುತ್ಕಳಿಕಾಕುಳಂ ಕೊಳಂ॥ ಎಂಬ ಪದ್ಯವಿದೆ.

ನಳಿನದ ಕರ್ಣಿಕೆಯೊತ್ತಿನೊ
ಳಳವಡೆ ಕಣ್ಮುಚ್ಚಿ ಮಗ್ಗುಲಿಕ್ಕಿಯಜಸ್ರಂ
ತಳರದೆ ನಿದ್ರಾಸುಖದಿಂ
ಕಳಹಂಸೆಯ ಮಱಿಗಳಿರ್ಪುವಂತಾ [೧]ಕೊಳನೊಳ್[೧] ೫೫

ಇಂತೊಪ್ಪುವ ಸರೋವರದೊಳೊಂದು ಕಳಹಂಸಂ ಕಾಂತೆಯನಗಲ್ದು,

ಅತಿಭರದಿಂ ನವಕುವಲಯ
ತತಿಯೊಳ್ ಕಾಸಾರದೊಳ್ ಕುಶೇಶಯಚಯದೊಳ್
ಲತೆವನೆಯೊಳ್ ವನದೊಳ್ ಪುಳಿ
ನತಳದೊಳಱಸಿದುದು ಕಾಂತೆಯಂ ಕಳಹಂಸಂ ೫೬

ಪುಳಿನಮನಡಿಗಡಿಗೇಱುತೆ
ಕೊಳನೊಳಗಡಿಗಡಿಗೆ ಪೊಕ್ಕು ಪೊಱಮಡುತೆ ಲತಾ
ವಳಿಗಳೊಳಡಿಗಡಿಗಾಲಿಸು
ತಳವಳಿದಡಿಗಡಿಗೆ ಬಳಲುತಿರ್ದುದು ಹಂಸಂ ೫೭

ಬಱಿದೆ ಗಳಗಳನೆ ನಡೆವುದು
ಪೆಱಸಾರ್ವುದು ಬೆರ್ಚುವುದು ಬಳಲ್ವುದು ಮತ್ತೆ
ಳ್ಚಱೊಳಿರ್ಪುದು ಕಣ್ಗಳನರೆ
ದೆಱೆವುದು ನೆನೆನೆನೆದು ಕಾಂತೆಯಂ ಕಳಹಂಸಂ ೫೮

ಇರೆ ಸಿರಿ [೨]ಬರ್ಪಂದದೆ[೨] ಸುಂ
ದರಿ ಬರೆ ಪರಿತಂದು ಚಂಚುಗೂಡುತೆ ಪಕ್ಷಾಂ
ತರದೊಳ್ ಮುಸುಂಕಿ [೩]ಬಿಬ್ಬಿರ
ಬಿರಿವಂತಪ್ಪಿದುದು[೩]ದೇಹವೊಂದೆಂಬಿನೆಗಂ ೫೯

ಮತ್ತಮೊಂದೆಡೆಯೊಳ್

ಉತ್ಪಲ

ಕಾಮನ ಬಾಣದಿರ್ಕೆವನೆಯೋ ಭ್ರಮರಾಳಿಯ ಸತ್ರಸಾಲೆಯೋ
ಭೂಮಿಯದೊಂದು ಗಂಧಗುಣಮಿರ್ಪೆಡೆಯೋ ವಿಲಸತ್ ಸದಾಗತಿ
ಪ್ರೇಮದೆ ಸೌರಭಂದಳೆದ ತಾಣಮೊ ಪೇಳಮಿದೆಂದು ಕಂಡವರ್
ಕಾಮಿಸೆ ಮಾಲೆಗಾಱರೊಸೆದೋವಿದ ಪೂವಿನ ತೋಂಟಮೊಪ್ಪುಗುಂ ೬೦

೧-೧ ವನದೊಳ್ (ಸೆ) ೨-೨ ಬರ್ಪಂತಿರೆ (ದಾ). ೩-೩ ಬಿಬ್ಬನೆ ಬಿರಿವಂತಪ್ಪಿತ್ತು (ಕ ಕೊ).

ಚಂಪಕ

ಸುರಗಿಯ ಕಂಪು ಸಂಪಗೆಯ ಕಂಪದಿರ್ಗಂತಿಯ ಸೊರ್ಕುಗಂಪು ಪಾ
ದರಿಯಲರ್ಗಂಪು ಪಡ್ಡಳಿಯ ಕಂಪಿರವಂತಿಯ ಕಂಪು ಮೊಲ್ಲೆಯೊಂ
ದುರವಣೆಗಂಪು ಮಲ್ಲಿಗೆಯ ಕಂಪು ಸರೋಜದ ಕಂಪು ನೀಲನೀ
ರರುಹದ ಕಂಪು ಕೇತಕಿಯ ಕಂಪೆಸೆಗುಂ ಸಲೆ ಪುಷ್ಪವಾಟಿಯೊಳ್ ೬೧

ಆ ನವಗಂಧಕ್ಕೆಳಸಿಯ
ನೂನಂ ಮಧುಕರನಿಕಾಯಮೊಲ್ದನವರತಂ
ನಾನಾಮಂಜುಳನಿನದದೊ
ಳಾನಂದಂ ಮಿಕ್ಕು ಕಂಪನೀಂಟುತ್ತಿರ್ಕುಂ ೬೨

ಬಿಗಿಯುಪ್ಪಿ ಪುಷ್ಪರಸಮಂ
ತೆಗೆದೀಂಟಿ ತುಳುಂಕಿ ತೂಱಿ ತೇಂಕಾಡಿ ಮನಂ
ಮಿಗೆ ಸೊರ್ಕಿ ಜಿನುಗಿ ಜೀವಿಸಿ
ಮುಗಮುಗಿಸಿತ್ತೊಂದು ಮಧುಕರಂ ಮಲ್ಲಿಗೆಯೊಳ್ ೬೩

ಅಂತುಮಲ್ಲದೆಯುಂ,

ಧೃತಕಂಟಕಮಾದೊಡಮು
ನ್ನತಿಯಿಂ ಕೇತಕಿಯೊಳೆಱಗಿದುದು ಮಧುಕರನಿಂ
ತತಿರೂಕ್ಷರಾದೊಡಂ ಸ್ನೇ
ಹಿತರಂ ಕಾಯಲ್ಕೆ ಬರ್ಪುದೇ ಧಾರಿಣಿಯೊಳ್ ೬೪

ಅದಲ್ಲದೆಯುಂ,

ಭದ್ರಮೆನಿಸಿರ್ದ ಕುಸುಮಲ
[೧]ಸದ್ರಸ[೧]ಮಂ ಪೀರ್ವ ಪದದೊಳೊಪ್ಪಿತು ಮದನಂ
ಮುದ್ರಿಸಿದಂಬಿನ ಲಾಕ್ಷಾ
ಮುದ್ರೆಯಿದೆಂಬಂತೆ ತೀವಿದಳಿ[೨]ನಿಕುರುಂಬಂ[೨] ೬೫

೧–೧ ಸದ್ರವ (ಕಾ ಅ ಗೊ ಯ). ೨–೨ ಗಳ ಬಳಗಂ (ಅ ಗೊ).

ಅದಲ್ಲದೆಯುಂ,

ನನೆಯುಂ [೧]ಮುಂಡಾಡುತೆ[೧] ಬಲ್
ನನೆಯುಂ ಬಲವಂದು ಮುಗುಳನಾಲಿಂಗಿಸಿ ಕಂ
ಪಿನ ಬಿರಿಮುಗುಳಂ ಚುಂಬಿಸಿ
ಯನುನಯದಿಂದಲರನಲೆದು ತೀವಿದುವಳಿಗಳ್ ೬೬

ಅಂಡಲೆದು ಜಾದಿ[೨]ಯಂ[೨] ಬಂ
ಡುಂಡಳಿಯಂ ಮಿಕ್ಕು ಮಧುಕರಂಗಳ್ [೩]ಭರದಿಂ[೩]
ಬಂಡುಣ್ಬುವೆನೆ ಸುಗಂಧಮ
ಖಂಡಿತಮತಿನುತ[೪]ರಸೋದಯಂ[೪] ಮಾಳತಿಯಾ ೬೭

ಅಂತುಮಲ್ಲದೆಯುಂ

ಆ ವನದ ಕೊಳದ ಪೂಗೊಳ
ನೇವೇಳ್ವೆಂ ಹಂಸೆ ರಾಜಹಂಸೆಗಳಾಹಾ
ತಾವರೆ ಹೊಂದಾವರೆಗಳ್
ಮಾವಿಮ್ಮಾವಳಿ ಮದಾಳಿ ಗಿಳಿಯರಗಿಳಿಗಳ್ ೬೮

ಅಂತುಮಲ್ಲದೆಯುಂ

ತವೆ ಬೆಳೆದ ಪೊಸಪನಸು ಬ
ಕ್ಕೆವಲಸು ನಳನಳಸುವಿಕ್ಷು ಪುಂಡ್ರೇಕ್ಷು ಪಳಂ
ಚುವ ತೆಂಗವು ಚೆಂದೆಂಗೊ
ಪ್ಪುವ ದಾಳಿಂಬಂಗಳೆಲ್ಲ ರಸದಾಳಿಂಬಂ ೬೯

ಚಂಪಕ

ಬನವಿದೆ ನೋಡು ಸರ್ವಸುಖಮಪ್ಪುದು ಕೇಳ್ ನುಡಿಯಿಲ್ಲ ತಣ್ಣೆಲರ್
ಮನದೊಲವಿಂದೆ ತೀಡುತಿದೆ ಚೆಲ್ವು ಮನೋಹರಮಿರ್ಪುದಳ್ಕಜಿಂ
ದನುದಿನಮೆಯ್ದಿ ಕಿಂಪುರುಷಕಿನ್ನರಖೇಚರಭೂಜ[೫]ರಾದಿ[೫] ಮಂ
ಡನಮಿಥುನಂ [೬]ರತೀಶ್ವರ[೬]ಸುಖಾಬ್ಧಿಯೊಳೊಪ್ಪುಗುಮಾ ವನಾಂತದೊಳ್ ೭೦

೧–೧ ಮುದ್ದಾಡಿಸಿ (ಮ ಯ ಗ ದಾ); ಮುಂಡಾಡಿಸಿ (ಕ ಸೆ). ೨–೨ ಯೊಳ್ (ಬ ಯ) ೩–೩ ಪಲವುಂ (ಓ). ೪–೪ ರಜೋಮಯಂ (ಕ). ೫–೫ ರಾತ್ರ (ಕಾ). ೬–೬ ಗಳಂಗಳ (ಬೆ ಬ ಕೊ ಅ).

ಸುರತರುವೊಂದೆ ತತ್ಸುರಭಿಯೊಂದೆ ಸುರಾಪಗೆಯೊಂದೆ ನಿಶ್ಚಯಂ
ಸುರಪುರದಲ್ಲಿ ಇಲ್ಲಿ ಸುಮನಸ್ತರುಗೋಪಶುನಿರ್ಜರಾಪಗೋ
ತ್ಕರಮುಮನಂತಮೆಂದು ಗಿರಿರಾಜಪುರೋಪವನಾಳಿಯಲ್ಲಿ[೧]ಯು
ಪ್ಸರತತಿ ಕಿನ್ನರ[೧]ಪ್ರತತಿ ಕಿಂಪುರುಷವ್ರಜಮಿರ್ಪುದಾವಗಂ ೭೧

ಮತ್ತಮಾ ಪುರದ ಬಹಿರುದ್ಯಾನಂ ನಾನಾಪಿಕಚಂಚುಸಂಚಾರಿತಚೂತಾಂಕುರಪ್ರಕರದಿಂದೊಸರ್ದು ಮಂದಾನಿಲನಿಂ ಸೂಸಿ ಮಂಜು [೨]ಮುಸುಗಿ ಬೀಳ್ವ ಪೊಸರಸದಿಂ[೨] ವಿಕಸಿತಪ್ರಸೂನಕುಲದೊಳ್ ಕೂಡೆ ಬಂಡುಣ್ಬ ಷಟ್ಪದ[೩]ಪದಘಾತ[೩]ದಿಂದುದಿರ್ದ ಪರಾಗಧೂಳಿಯಿಂ ಶುಕತುಂಡವಿದಾರಿತಪಕ್ವಫಲಗಳಿತ[೪]ರಸಾಸಾರದಿಂ[೪] ಪರಿಮಳದ ಕೆಸಱ್ ಮುಸಗಿದ ವನಸ್ಥಳದೊಳ್ ಬಿನದದಿಂ ನಡೆವಲ್ಲಿ ಕಾಲ್ ಜಗುಳ್ದು ಜೋಲ್ದು ಬೀಳ್ವ ಕಳಹಂಸೆಗಳಂ ನಗುವಂತಿರರೆವಿರಿದ[೫]ಪಣ್ಗಳಿಂ[೫] ಕಣ್ಗೊಳಿಪ ದಾಡಿಮದ್ರುಮಂಗಳಿಂ, ಮತ್ತಮೊಂದೆಡೆಯೊಳ್ ಮೀಱ್ ಪಾಱುವ ಪಱಮೆಗಳ ಪಜ್ಜೆವಿಡಿದಱಿಸಿ ಗಂಧವಹನನೊಡಗೂಡಿ ಬಂದೆಳೆದುಯ್ದು ಮಿಸುಗುವ ಕುಸುಮಕರ್ಣಿಕೆಯೊಳ್ ಕಡುಪಿಂ ಕೆಡೆಪಿ ಕೊಲ್ವುದಿದೆಂಬ ಶಂಕೆ ಭೋಂಕನೆ ಪುಟ್ಟಿ ಝುಂಕಾರರವದಿಂ ಪಲ್ಮೊರೆವಂತೆ ಸಲೆ ಮೊರೆದು ಸಂಪಗೆಯ ಕಂಪಿಂಗೆ ಕಂಪಿಸಿ ಮಲ್ಲಳಿಗೊಂಡೊಲ್ಲದೆ ಮೊಗಂದಿರುವಿ ಪರಿತಂದು ಸಾದರದಿಂ ಪೂದೋಂಟದ ಪ್ರಸೂನಕುಲಮನಂಡಲೆದು ಬಂಡುಣ್ಬಲ್ಲಿ ಬಾಯ ಕುಟುಕನೆಳಕುಳಿಗೊಂಡು ತೀಡುವ ಗಂಧವಹನ ಬಳಿವಿಡಿದು ಘಳಿಲನೆಳ್ದು ಪರಿಮಳದ ಪಸಿವಿನುಱವಣೆಯುಡಂಗದೆ ಕಡಂಗಿ ಕಾಯ್ದು ವಸಂತರಾಜಂಗೆ ಪುಯ್ಯಲಿಡುವಂತೆ ನೆರೆನೆರೆದು ಮೊರೆವ ಮಧುಕರಪ್ರಕರದಿಂ, ಮತ್ತಮೊಂದೆಡೆಯೊಳ್ ತೀವಿ ಪೂತ ಸೇವಂತಿಗೆಯ ತೋಂಟದೊಳ್ ಪಾಂಟುವರಿವ ಪರಿಮಳದ ಪನಿನೀರ ಪಳ್ಳಮಂ ದಾಂಟಲಾಱದ ಬಾಲಮರಾಳಂಗಳಂ ಪದ್ಮಪತ್ರದಿನೊಪ್ಪುವ ತೆಪ್ಪದೊಳಿಟ್ಟು ದಾಂಟಿಸುತಿರ್ಪ ರಾಜಹಂಸರಾಜಿಗಳಿಂ, ಮತ್ತಂ ಚಕ್ರವಾಕಚಕ್ರವಳಯಾಗ್ರದೊಳೊಗ್ಗಿನ ಕಮಳದ ಮೊಗ್ಗೆಯ ಗುಂಡಿಗೆಯಂ ತಂಡದೊಳಮರ್ಚಿ ಕೊಳರ್ವಕ್ಕಿಯಂ ಹೂಡಿ ದ್ರಾಕ್ಷಾರಸಪೂರಿತಕಾಸಾರಜಲಮಂ ಕೇತಕೀದಳದ ದೋಣಿಯೊಳ್ ವಸಂತರಾಜಂ ಕತ್ತುರಿಯ ಮಡಿಯೊಳ್ ಕಪ್ಪುರದ ಗಿಡುವಂ ನಟ್ಟು ಱಾಟಳಮನೆತ್ತಿ ಬೆಳೆಯಿಸಿದನೆಂಬಂತಿರ್ದ ಕರ್ಪೂರದ್ರುಮಂಗಳಿಂ, ಮತ್ತಮೊಂದೆಡೆಯೊಳ್ [೬]ಪಸಿದ[೬] ಮಱಿಗಿಳಿಯ ಮೊಗಮಂ ನೋಡಿ ಚಂಚುಗೂಡಿ ಕಿಸಲಯದೆಸಳ ಮಾಣಿಕ್ಯದ ಸಿಂಪಿಂ

೧–೧ ಕಿನ್ನರತತಿಯುಪ್ಸರಃ (ಶಾ). ೨–೨ ಮುಸುಂಕಿದಂತೆ ಬೀಳ್ವ ಪೊಸ ರಸಪ್ರಸರದಿಂ (ದಾ). ೩–೩ ಪದಾಹತ (ಯ); ಪಾದಘಾತ (ಅ). ೪–೪ ನಾನಾರಸದಿಂ (ಅ ಓ). ೫–೫ ಪಣ್ಗಳ ಚೆಲ್ವಿಂ (ಶಾ ಕ). ೬–೬ ಪಡೆದ (ಶಾ ಕ ಯ ಡ)

ಫಳರಸದ ಪಾಲನೆಱೆದು ತಳಿರ ತೊಟ್ಟಿಲೊಳಿಟ್ಟು ಸಣ್ಣ ನನೆಗಳ ನನೆಯಕ್ಕಿಯನಿಕ್ಕಿ ಪಣ್ಣ ಬಾಯಿನ[೧]ಮನಣ್ಣ[೧]ವಳಿಯದೆ ಕೊಟ್ಟು ಚೂತವಲ್ಲಭನೆಂಬ ಪೆಸರಿಟ್ಟು ಮಂದಾನಿಳಂ ತೂಗೆ ಮಧುಕರನಿಕರಂ ಪಾಡೆ ಸಹಕಾರಕುಲದೊಳ್ ಸಂತಸದಿಂ ಸಲಪುತಿರ್ಪ ರಾಜಶುಕಪ್ರಕರದಿಂ, ಮತ್ತಮೊಂದು ಪೂಗೊಳದೊಳ್ ಪೆತ್ತ ಮಱಿ- ದುಂಬಿಯುಂ ಕಂಡು ಮನಂಗೊಂಡು ಪುಂಡರೀಕದೆಸಳ ಬೆಳ್ಳಿಯ ಸಿಂಪಿಂ ಪರಿಮಳದ ರಸಮನೆಱೆದು ಪರಾಗದ ತಿಲಕಮ[೨]ನಿಕ್ಕಿ[೨] ಸೌರಭದ ತುಂತುಱುಂ ತೂಪಿಱಿದೆಸಳ ಸೋಗಿಲ ಹಸುಳೆಯಂ ಝುಂಕಾರರವದಿಂ ಜೋಗುಳಂಬಾಡಿ ತರಂಗದಿಂ ತೂಗಿ ವಸಂತತಿಲಕನೆಂದು ನಾಮಕರಣಮಂ ಮಾಡಿ ಬಾಳುತಿರ್ಪ ಬಾಣಂತಿದುಂಬಿಗಳ ಗೊಂದಣಂಗಳಿಂ, ಮತ್ತಮೊಂದೆಡೆಯೊಳ್ ಚಂದ್ರಕಾಂತ ನಿರ್ಮಿತ ಕೃತಕಾಚಳನಿತಂಬವಿಳಸಿತಲತಾಮಂಟಪವಳಯಸ್ಥಿತಪುಳಿನಸ್ಥಳಕುಸುಮ ತಳ್ಪದೊಳ್ ಕುಸುಮಾಯುಧಸಕಳಸುಖಸಾಮ್ರಾಜ್ಯಭರದಿಂ ನೆರೆವ ಹಂಸಕೀರ- ಪಾರಾವತಂಗಳಂ ನೋಡಿ ನಾಡೆ[೩]ನಲಿದು ಕಾಮ[೩]ಬಾಣಮನಿಕ್ಕಿ ಮೆಟ್ಟಿದಂತೆ ಹೂವಿನ ಹಸೆಯೊಳ್ ಮನಂ ಮುಟ್ಟಿ ಮಾಣದೆ [೪]ನೆರೆದ[೪] ವಿದ್ಯಾಧರಮಿಥುನಂಗಳಿಂ, ಇಂತು ತರುಕುಲದ ತೆಕ್ಕೆಯಿಂ ಗುಲ್ಮಕುಳದಿರ್ಕೆಯಿಂ ನೆಳಲ ತಣ್ಪಿಂದಂಕುರದ ಸೊಂಪಿಂ ಪಲ್ಲವದ ನುಣ್ಪಿಂ ಕುಸುಮಾವಳಿಯ ಕಂಪಿಂ ಪಣ್ಗೊನೆಯ ಬಿಣ್ಪಿಂ ಪಕ್ವಫಲರಸದಿಂಪಿಂ ಕೋಕಿಲಧ್ವಾನದಿಂದಳಿಕುಲದ ಗಾನದಿಂ ಶುಕರವಪ್ರತಾನದಿಂ ಫಲರಸಪಾನದಿಂ ರಾಜಹಂಸಯಾನದಿಂ ಲತಾಮಂಟಪಸ್ಥಾನದಿಂ ಪರಿಕಾಲ ಪರ್ಬಿಂ ಪೂದೋಂಟದ ಕೊರ್ಬಿಂ ವಿಹಂಗಕುಲದುರ್ಬಿಂ ತಮಾಳವನದ ಮರ್ಬಿಂ ವಿದ್ಯಾ- ಧರಿಯರುಬ್ಬಿಂ ಪ್ರಸೂನಕುಲದ ಪರ್ಬಿಂ ಚಕ್ರವಾಕದ ಪೆರ್ಮೆಯಿಂ ಮಂದಾನಿಲನ ಕೂರ್ಮೆಯಿಂ ಇಂತು ಪುರದ ಬಹಿರುದ್ಯಾನಂ ಸಕಲಸೌಂದರ್ಯಮನಧಿಕತರ[೫]ಸುಕುಮಾರತೆಯು[೫]ನುರುತರಭೋಗಮನುನ್ನತಕ್ರೀಡೆಯನತ್ಯುದಾರತೆಯನತಿಪ್ರಸನ್ನ- ತೆಯನೊಳಕೊಂಡಿರ್ಪುದಂತುಮಲ್ಲದೆಯುಂ,

ಮಹಾಸ್ರಗ್ಧರೆ

ಮೊಗಮಬ್ಜಂ ಲೋಚನಂಗಳ್ ಕುವಲಯಮಧರಂ ಬಿಂಬಮಾ ನಾಸಿಕಂ ಸಂ
ಪಗೆ ತೋಳ್ ಶಾಖಾನಿಕಾಯಂ ಘನಕುಚಯುಗಳಂ ಚಕ್ರವಾಕದ್ವಯಂ ನಾ
ಭಿಗಭೀರೋದ್ಯತ್ಸರಂ ತೋಱುವ ತೊಡೆ ಕದಳೀಸ್ತಂಭಮಂಘ್ರಿ ಪ್ರವಾಳಂ
ಸೊಗಸಿಂ ತಾವಾಗೆ ತನ್ನಂದನಮೆ ಘನವನ[೬]ಶ್ರೀಗೆ ರೂಪಾಗಿ[೬] ತೋರ್ಕುಂ ೭೨

೧-೧ ಮಂ ಬಣ್ಣ (ಶಾ). ೨-೨ ನಿಟ್ಟು (ಛ). ೩-೩ ನಲಿದನಂಗ (ದಾ ಅ). ೪-೪ ನೆರೆವ (ಅ) ೫-೫ ಸೌಕುಮಾರ್ಯಮ (ಶಾ). ೬-೬ ಸ್ತ್ರೀಗೆ ರೂಪಾಗೆ (ಶಾ).

ಆ ವನದ ಪುರದ ನಡುವೆ ಸು
ಖಾವಹಮತಿವಿಭ್ರಮಂ ವಿಶಾಲಂ ಸರ್ಪೋ
ರ್ವೀವರಶಸ್ತ್ರಾಭ್ಯಾಸನಿ
ಜಾವಾಸಂ ಸುಭಟಪಟಲಪಟುರವಭರಿತಂ ೭೩

ಹಯಶಿಕ್ಷಕರಿಂ ಗಜಶಿ
ಕ್ಷೆಯ ಭೀಕರ[೧]ದಿಂ[೧] ಸ್ರವಂಗುಡುವ ಜೋದರ ಸಂ
ಚಯದಿಂ ನಯದಿಂ ವೈಹಾ
ಳಿಯ ಬಯಲೊಪ್ಪಿತ್ತು ಪಟ್ಟಣದ [೨]ವನದೆಡೆ[೨]ಯೊಳ್ ೭೪

ಮತ್ತಮಲ್ಲಿ,

ಕರಿಗಳ್ ಬಾಳ್ಗಂಬದೊಳೊ
ಪ್ಪಿರುತಿರ್ದುವು ಸುಳಿವ ನೀಲಮೇಘಾವಳಿಯಂ
ತರದಿಂ ಸೆಱೆಯಿಟ್ಟಂತಾ
ಗಿರಿಪತಿ ಸುರಪತಿಯ ಹಗೆಯ ಹರಿಬದ [೩]ಚಲದೊಳ್[೩] ೭೫

ಸುರಿವ ಮದಂ ಮಳೆ ಗಂಭೀ
ರರವಂ ಮೊಳಗಂಗಮಂಬುದಂ ದಂತಂ ನಿ
ಷ್ಠುರದಿಂದೆಱಗುವ ಸಿಡಿಲಾ-
ಗಿರೆ ಕಾರ್ಗಾಲದವೊಲಿರ್ದುವಲ್ಲಿಯ ಕರಿಗಳ್ ೭೬

ಮತ್ತಮಾ ಪೊಱವೊಳಲ ವೈಹಾಳಿಯ ಬಯಲಿಂದೊಳಗೆ,

ಧರೆಯಂ ಸುತ್ತಿದ ಜಲಧಿಗೆ
ಪುರುಡಿಸಿ ಪುರವಳಯವಿಳಸಿತ[೪]ಪ್ರಾಕಾರಂ
ಪುರಮಂ[೪] ಸುತ್ತಿರ್ದುದು ತತ್
ಪರಿಖಾತ ಜಲೌಘವೌರ್ವವಿಹರಣದೂರಂ ೭೭

೧-೧ ರಿಂ (ಬ ಕೊ) ೨-೨ ಬಯಲೆಡೆ (ಕ ಡ) ೩-೩ ಚಲದಿಂ (ದಾ). ೪-೪ ಪ್ರಾಕಾರಾಂತರಮಂ (ಕಾ ಯ ಬ ಬೆ ದಾ ಅ).

ಹರಿ ಮತ್ಸ್ಯಾಕಾರದೊಳು
ದ್ಧರತಮನಂ ಹತಿಸಲೆಂದು ಪಾತಾಳತಳ
ಕ್ಕಿರದಿಳದ ತಾಣಮೆಂಬಂ
ತಿರೆ ಪುರದಗಳೞ್ದುದತುಳಮತಿಗಂಭೀರಂ †೭೮

ಮತ್ತಮನಂತರದಲ್ಲಿ,

ಚಂಪಕ

ಪಳಿಕಿನ ಕೋಂಟೆ ಬಟ್ಟದೆನೆ ಬೇವಿನ ದಂಡೆ ನಭಕ್ಕೆ ಮಾಱುವ
ಟ್ಟಳೆ ನಿಮಿರ್ದೇಱೆ ಪಾಱುವ ಪತಾಕೆ ವಿರಾಜಿಪ[೧] ಗೊಂಟುಗೊಂಟಿನೊಳ್
ಬಳಸಿದ ಕೊತ್ತಳಂ ಸೊಗಯಿ[೨]ಪಾಳ್ವರಿ[೨] ಡೆಂಕಣಿ ಸಾರಮಾಗಿಯು
ಗ್ಗಳಿಸುವ ಗೋಪುರಂ ಪುಲಿಮೊಗಂ ಮೆಱೆಗುಂ ಪುರದೊಳ್ ನಿರಂತರಂ ೭೯

ನೆಗೆದ ಪತಾಕಾಪಟಕೋ
ಟಿಗಳೊಪ್ಪಿದುವಾವಗಂ ತೊಳಲ್ದು ಬಳಲ್ದಾ
ಖಗನ ತುರಂಗಪ್ರತತಿಗೆ
ಗಗನಾಂಗನೆ ಬೀಸುತಿರ್ಪ [೩]ವೀಜನ[೩]ತತಿವೋಲ್ ೮೦

ಅಂತುಮಲ್ಲದೆಯುಂ,

ಬಗೆವೊಡಮರಾವತಿಗೆ [೪]ಮಿಥಿ
ಳೆಗೆ[೪]ಯುಮುದಯ[೫]ನಗಕ್ಕೆ [೫]ಉಜ್ಜಯಂತಿಗೆ ದಿಟಮಾ
ನಗರಿ ಗುಣೋನ್ನತಿಯಿಂದಂ
ದ್ವಿಗುಣಂ ತ್ರಿಗುಣಂ ಚತುರ್ಗುಣಂ ಪಂಚಗುಣಂ ೮೧

ಪೊಸಸೊದೆ ಕೌಮುದಿಯಂ ಪಸ-
ರಿಸೆ ಕನಕದ ಕಳಶಮಾಳೆ ಪೊಂಬಿಸಿಲಂ ಪೂ[೬]
ರಿಸೆ[೬] ತರತರದಿಂದಂ ರಾ-
ಜಿಸುತಿರ್ಪುವು ಸೋಮಸೂರ್ಯವೀಥಿಗ[೭]ಳದಱೊಳ್[೭] ೮೨

† ಈ ಪದ್ಯವು ಅ, ಓ, ಪ್ರತಿಗಳಲ್ಲಿಲ್ಲ, ೧ ತ (ಕಾ ಯ). ೨-೨ ಪಾಳ್ವರಿ. (ಕಾ ಅ). ೩-೩ ಬಿಜ್ಜಣ (ಅ) ೪-೪ ಮಧುರೆಗೆ (ಬ). ೫-೫ ನಗರಿಗೆ (ದಾ ಬೆ). ೬-೬ ಪೊಣ್ಮಸೆ (ಕಾ). ೭-೭ ಳಾಗಳ್ (ಕ).

ಆ ವೀಥಿಗಳೊಳಗೆ

[1]ನಯದಿಂ ಮಾಱುಗುಡುವ ಕೊ
ಳ್ವ ಯತ್ನಪೂರ್ವಕದೊಳಿರ್ಪ[1] [2]ಘನಧನಿಕರ[2] ಪ
ಜ್ಜ್ರಿಯ ಮುಂದೆ ಸಂದಣಿಸಿ ವಿ
ಕ್ರಯನವಕಳಮಾದಿಧಾನ್ಯರಾಸಿಗಳೆಸೆಗುಂ ೮೩

ಅನಂತರಮಲ್ಲಿ,

ಪರಿಮಳದಾಡುಂಬೊಲನಿದು
ವರವಿಟರ ವಿಶಾಲಲೋಲಲೀಲಾಸ್ಥಲಮಾ
ತುಱಿಸುವ ತುಂಬಿಗಳೌತಣ
ದರಮನೆಯೆನೆ ಪುಷ್ಪವಿಕ್ರಯಸ್ಥಲಮೆಸೆಗುಂ ೮೪

ಭರದಿಂ ಪೂಮಾಲೆಗಳಂ
ತರದಿಂ ಪಿಡಿದೆತ್ತಿ ನಿಂದ ಶಶಿಮುಖಿಯರ್ ಬಂ
ಧುರಶಶಿಕಳೆಗಳನೀವಂ
[3]ತಿರಿರ್ದರಾ[3] ವಿಟಚಕೋರ[4]ಸಂಗತಿ[4]ಗಾಗಳ್ ೮೫

ಮತ್ತೊರ್ವಳ್,

ವರಮಲ್ಲಿಗೆ ಮೊಲ್ಲೆಗ[5]ಳೊಳ್
ಬೆ[5]ರಸಿದ ಮಧುಕರಕದಂಬದಿಂದಂ ನೀಲೋ
ತ್ಕರಮುಂ ಮೌಕ್ತಿಕಮುಂ ಪೋ
ಲ್ತಿರೆ ಮೆಱೆದಳ್ ಮಾಲೆಗಾರ್ತಿ ಮಣಿಗಾರ್ತಿಯವೋಲ್ ೮೬

ಆ ಮಾಲೆಗಾರ್ತಿಯರ ನಡುವೆಯೊರ್ವ ಪಣ್ಯಾಂಗನೆಯಿರೆ ಕಂಡು,

ನಗೆಗಣ್ಗಳ ಕಾಂತಿಯ ಸೆ
ಳ್ಳುಗುರ್ಗಳ ಕಾಂತಿಯ ಕರದ್ವಯದ ಕಾಂತಿಯ ಮಾ
ಲೆಗಳಂ [6]ಹೊಸಹೂವಿನ[6] ಮಾ
ಲೆಗೆತ್ತು ಬಿಲಿಗೊಟ್ಟು ಕೊಂಡು ನಗಿಸಿದನೊರ್ವಂ ೮೭

ಅಂತುಮಲ್ಲದೆ,

೧–೧ ನಿಯತದೊಳಾ ವೀಧಿಗಳೊಳ್|ನಯದಿಂ ಮಾಗೊರ್ಡುವಕೊಳ್ವ (ಅ). ೨–೨ ಶಶಿದಿನಕರ (ಓ). ೩–೩ ತಿರೆಯಿರ್ದುದು (ಬ); ತಿರುತಿರ್ದುದು (ಅ); ತಿರುತಿರ್ದರ್ (ಶಾ ಕ ಬೆ) ೪–೪ ಸಂತತಿ (ಗ). ೫–೫ ಳೊಳ್ವ (ಶಾ). ೬–೬ ಪೊಸಪೂವಿನ (ಬ ಕೊ).

ಉತ್ಪಲ

ಎತ್ತಿದುದೊಂದು ಮಾಲೆ ಪೊಸಪೂವಿನ ಬಿಲ್ಲವೊಲಾಗೆ [1]ಮೀಱಿ[1] ಬೆಂ
ಬತ್ತುವ ನೋಟಮಂಗಜನ ಬಾಣದವೋಲಿರೆ ಕಾಯಕಾಂತಿ ಸೈ
ತೊತ್ತಿದ ಮೌರ್ವಿಯಂತಿರೆಸಲೆಂದು ಯುವೋನ್ಮೃಗವಂ ಕಱುತ್ತು ಕೋ
ಲೆತ್ತುವ ಬೇಂಟೆಕಾರ್ತಿಯರವೋಲೆಸೆದರ್ ಮಿಗೆ ಮಾಲೆಕಾರ್ತಿಯರ್ ೮೮

ಮತ್ತಮಲ್ಲದೆಯುಮಾ ಪುರದಲ್ಲಿ,

ಚಂಪಕ

ಎಸೆಯೆ[2]ಪುರಂಧ್ರಿಯರ್ ಪದೆದು ಸಂಗಡಮಿರ್ದು ಮನೋನುರಾಗದಿಂ
ದಸುವೆಯು ಕಲ್ಗಳಂ ತೊಳೆದು ಚಂದನಮಂ ಪನಿನೀರ್ಗಳಿಂದೆ ಜಾ[3]
ರಿಸಿ ಹಿಮಚೂರ್ಣಮಂ ತಳಿದು [4]ಕಂದುಗಳಂ[4] ಪಿಡಿದೌಂಕಿ ನೂಂಕಿದರ್
ದೆಸೆದೆಸೆಗೆಲ್ಲ [5]ಕಂಪೆಸಗೆ[5] ಗಟ್ಟಿಮುಗುಳ್ಚುತೆ ಗಟ್ಟಿವಳ್ತಿಯರ್ ೮೯

ಸುಳಿಗುರುಳಾಡೆ ತೋಳ್ಗಳೆಡೆಯಾಡೆ ಬೆಮರ್ ಮಿಗೆ ಮೂಡೆ ಸುಯ್ಯೆಲರ್
ಮಿಳಿರೆ ಕುಚಂಗಳೊತ್ತರಿಸೆ ಕಕ್ಷಪುಟಂ ನಸುದೋಱಿ[6] ಮೇಲುದಿಂ-
ಬಳಿಯೆ[6] ಕರಂ ಕರಂ [7]ಕೊರಗೆ[7] ಸೋರ್ಮುಡಿ ಲಂಬಿಸೆ ಕರ್ಣಪೂರಿತೋ
ತ್ಪಳಮೊಲೆದಾಡೆ ಗಟ್ಟಿಗಳನಂದು [8]ಮುಗುಳ್ಚಿದ[8]ರಿಂದುವಕ್ತ್ರೆಯರ್ ೯೦

ಚಂದನಗಂಧಕ್ಕಂ ಮದ
ನೇಂದೀವರಪರಿಮಳಕ್ಕಮೆಱಗುವ ಭೃಂಗೀ
ವೃಂದಮನುಱೆ ಸೋವುತ್ತುಂ
ಮಂದಯಿಸಿ ಮುಗುಳ್ಚೆ ಗಟ್ಟಿವಳ್ತಿಯರೆಸೆಗುಂ ೯೧

ಬೆಳಗಿನ ಬಿಂಬಂಗಳನಂ
ತಳವಡೆ ತರತರದಿನಿಳಿಪಿದಂತಿರ್ದುವು ನಿ
ರ್ಮಳ[9]ಪಾತ್ರಾಕುಲ[9]ದಿಂದಂ
ತೊಳತೊಳಗಿರುತಿರ್ಪ ಕಂಚುಗಾಱರ ಪಸರಂ ೯೨

೧–೧ ಕೂಡೆ (ಕಾ). ೨ ವ (ಬ ಬೆ). ೩ ಸಾ (ಅ); ಭಾ (ಗ). ೪–೪ ಕಂದುಗಳಿಂ (ಕಾ). ೫–೫ ಕಂಪೆಸೆಯೆ (ಅ ಬ). ೬–೬ ಮೇಲುದಂ|ಬಳಿಯೆ (ಮ); ಮೇಲುದಂ | ಬೋಳೆಯೆ (ಬೆ). ೭–೭ ಕೊಸರೆ (ಅ) ೮–೮ ಮುಗುಳ್ಚುವ (ಅ). ೯–೯ ಪಾತ್ರೋತ್ಕರ (ಕಾ).

ಚಾರುತರವಿಮಳಮೌಕ್ತಿಕ
ಹಾರಾದಿಸಮಸ್ತರತ್ನರಾಶಿಗಳಿಂದಂ
ನೀರೋಡಿದ ರತ್ನಾಕರ-
ದೋರನ್ನಮದಾಯ್ತು ರನ್ನವಸರಂ ಪುರದೊಳ್ ‡೯೩

ತೀವಿರ್ಪಶ್ವಾವಳಿಯು ಗ
ಜಾವಳಿಯು ನರಾವಳಿಗಳ ವಿಕ್ರಯದಿಂದಂ
ಭಾವಿಸೆ ದೂಸಿಗವಸರಂ
ಮೂವರ್‌ರಾಯರನೆ ಮಾಱುವಂತೆಸೆದಿರ್ಕುಂ ೯೪

ತನತನಗೆ ಪೊನ್ನ ರಾಸಿಯ
ನನವರತಂ ಮುಂದುಗೊಂಡನೇಕಕುಬೇರರ್
ಜನಿಯಿಸಿ [೧]ನಿಂದಂತಿರ್ಪುದು[೧]
ಕನಕವ್ಯವಹಾರದಿಂದೆ ವೈಶ್ಯಕದಂಬಂ ೯೫

ಮತ್ತಮಾ ಪುರದಲ್ಲಿ,

ನೀಲದ ಪಚ್ಚೆಯ ಪವಳದ
ಶಾಲೆಗಳ ಮರೀಚಿಯುಂ ಪುರಂದರಧನುಗೆ
ತ್ತಾಲೋ[೨]ಕಿಸಿ [೨]ನವನರ್ತನ
ಲೀಲೆಯು[೩]ನೊಳಕೊಳ್ವವಲ್ಲಿ[೩] ಪುರದ ನವಿಲ್ಗಳ್ ೯೬

ಬೆಳಬೆಳಪ ಸುಧಾಧವಳಿತ
ನಿಳಯಂಗಳ ಧವಳಕಾಂತಿಯುಂ ಕೌಮುದಿ[೪]ಗೆ
ತ್ತೆ[೪]ಳಸುತ್ತಿರ್ಪುವು ಪಗಲುಂ
ಬಳಸಿ ಚಕೋರಾಳಿ ಪುರದ ನಿಳಯದೊಳೆಲ್ಲಂ ೯೭

೧-೧ ನಿಂದವೊಲಿರ್ಪುದು (ಅ ಬ). ೨-೨ ಕದೆ (ಬ) ೩-೩ ನೊಡರಿಚುವುದಲ್ಲಿ (ಬ ದಾ) ೪-೪ ಯೆಂದಿದೆ (ಶಾ ಕ) ‡ ೯೩ನೆಯ ಪದ್ಯದ ಮುಂದೆ ದಾ ಬೆ ಗೊ ಸೆ ಪ್ರತಿಗಳಲ್ಲಿ "ಗಿರಿಯೇರಿ ನೀರವೊಕ್ಕರ।ನುರು ಪುಲ್ಲಂ ಕಚ್ಚಿದವರ ಬಿಡುವರ್ ಬುಧರುಂ॥ ಗಿರಿಯೇರಿ ನೀರ ಪೊಕ್ಕುಂ।ಉರುಪುಲ್ಲ ಕಚ್ಚಿದವರ ಬಿಡರುಂ ಪರದರ್॥" ಎಂಬ ಪದ್ಯವಿದೆ.

ಅಂತುಮಲ್ಲದೆ,

ಒದವಿದ ಮುತ್ತಿನ ಮಾಣಿ
ಕ್ಯದ ಗೋಮೇಧಿಕದ ಪುಷ್ಯರಾಗದ ವೈಡೂ
ರ್ಯದ ವಜ್ರದ ಪಚ್ಚೆಯ ಪವ
ಳದ ನೀಲದ ಕಳಶದಿಂ ಶಿವಾಲಯಮೆಸೆಗುಂ ೯೮

ಮಹಾಸ್ರಗ್ಧರೆ

ಶ್ರುತಿಘೋಷಂ ಮಂತ್ರಘೋಷಂ ನತಜನಜಯಘೋಷಂ ಪುರಾಣಪ್ರಘೋಷಂ
ಸ್ಮೃತಿಘೋಷಂ ಗೀತಘೋಷಂ ಪರಶಿವವಿಮಳಜ್ಞಾನಸಂವಾದಘೋಷಂ
ಕೃತಿಘೋಷಂ ಯಜ್ಞಘೋಷಂ ಪರಿಣಯನಮಹೋತ್ಸಾಹವಿಸ್ತಾರಘೋಷಂ
ಸತತಂ [೧]ತೀವಿರ್ಪು[೧]ದಂತಾ ಪುರದೊಳಭವ[೨]ಗೇಹಾವಳೀವಾದ್ಯಘೋಷಂ[೨] ೯೯

ಮತ್ತಮಾ ಪುರದ ರಾಜವೀಥಿಯಲ್ಲಿ,

ಮಹಾಸ್ರಗ್ಧರೆ

ವಿಳಸತ್ಸೇವಾಪುರಂಧ್ರೀನಿಕರಚರಣಮಂಜೀರತನ್ಮ್ಮದ್ರಿ ಕಾಮಂ
ಜುಳನಾದಂ ರಾಜಪುತ್ರಪ್ರಕರಪರಿವೃತಾಶೇಷಗೀತಪ್ರಣಾದಂ
ಜಳಪಾನಾಸಕ್ತಮುಕ್ತದ್ವಿಪಕುಲನಿಗಳವ್ರಾತಸಂಭೂತನೂತ್ನೋ
ಜ್ವಳನಾದಂ ಪೊಣ್ಮುತಿರ್ಕುಂ ನರಪಯುತಕವೀಂದ್ರಾಸ್ಯಸಂಸ್ತೋತ್ರನಾದಂ ೧೦೦

ತಿಂತಿಣಿಪ ನಿಳಯದಿಂ ಜನ
ದಿಂ ತರದಿಂದೆಸೆವ ವೀಧಿಯಿಂ ನೃಪಕುಲದಿಂ
ದಂ [೩]ತರುಣೀತತಿಯಿಂ ತಾ-
ನಿಂ[೩]ತೊಪ್ಪುವುದಿಳೆಯೊಳೋಷಧಿಪ್ರಸ್ಥಪುರಂ ೧೦೧

ಉತ್ಪಲ

ಶ್ರೀ ಪರಮೇಶ್ವರಾಂಘ್ರಿಸರಸೀಜ[೪]ಮಧುವ್ರತ[೪]ನುದ್ಧತೇಜನು
ರ್ವೀಪತಿ ಸರ್ವದಿಗ್ಭರಿತಕೀರ್ತಿಯುತಂ ನತಭೂಭುಜಂ ಜಗ
ದ್ದೀಪಕನತ್ಯುದಾರನತಿ[೫]ಧೀರ[೫]ನತಿಸ್ತುತಿಪಾತ್ರಗೋತ್ರನಂ
ತಾ ಪುರನಾಥನೊಪ್ಪುವ[೬]ನುದಾತ್ತ[೬]ಗುಣಂ ಗಿರಿರಾಜನುರ್ವಿಯೊಳ್ ೧೦೨

೧–೧ ಇಂತಿರ್ಪು (ಅ). ೨–೨ ಗೇಹಾಳೀವಾದ್ಯಪ್ರಘೋಷಂ (ಕೊ). ೩–೩ ತರುಣಿ-ತರುಣತತಿಯಿಂ।ದಿಂ (ಅ) ೪–೪ ದಿವಾಕರ (ಬ ಯ ದಾ ಅ ಕ ಡ ಗ ಓ ಮ) ೫–೫ ವೀರ (ಅ). ೬–೬ ನುದಾರ (ಅ ಬ ಕ ಡ).

ಮತ್ತೇಭ

[1]ಪರ[1]ಭೂಪಾಲವಿಶಾಲಮೌಳಿಮಣಿಸಂಘಾತಪ್ರಭಾಪುಂಜವಿ
ಸ್ತ್ರರ[2]ಪಾದಂ ನತ[2]ಸರ್ವಲೋಕನಭಯಂ ತೀವ್ರಪ್ರತಾಪಂ ಮಹೀ
ಧರರಾಜಂ ಮಹಿಮಾಂಬುರಾಶಿಯುಜಳಂ ಭರ್ಗಪ್ರಿಯಂ ಭೋಗಭಾ
ಸುರನುದ್ದಾಮಗುಣಂ ಪ್ರಚಂಡಭುಜನೊಪ್ಪಿರ್ಪಂ ನಗಾಧೀಶ್ವರಂ ೧೦೩

ಚಂಪಕ

ಎಱಗದ ಭೂಪರಿಲ್ಲ ಬೆಸಕೆಯ್ಯದ ರಾಜಕುಮಾರರಿಲ್ಲ ಕೂ
ರ್ತಱಿಯದ ಪೆಣ್ಗಳಿಲ್ಲ ತಲೆವಾಗದ [3]ಜಾಗಿ[3]ಗಳಿಲ್ಲ ತಳ್ತು ಕು
ಕ್ಕುಱಿಸದ ವೀರರಿಲ್ಲ ನತರಾಗದ ಬಲ್ಲಿದರಿಲ್ಲ [4]ಕೀರ್ತಿಯಿಂ[4]
ತುಱುಗದ ದಿಕ್ತ್ರಾನಮಣ[5]ಮಿಲ್ಲೆನೆ ಬಾಳ್ವನಗಾಧಿನಾಯಕಂ[5] ೧೦೪

ಉತ್ಪಲ

ಆತನ ಪುಣ್ಯವಲ್ಲಭೆ ವಿರಾಜಿತೆ ಪೂಜ್ಯೆ ಪರಾಪರೈಕ ವಿ
ಖ್ಯಾತೆ ಪತಿವ್ರತಾಗುಣವಿಭೂಷಣೆ ಸಲ್ಲಲಿತಾಂಗಿ ಸತ್ಯೆ ಶೈ
ವಾತುರೆ ಶಾಂತೆ ಶಾಶ್ವತೆ ಶುಭಾಚರಣಾನ್ವಿತೆ ಮಾನ್ಯೆ ಸದ್ಗುಣ
ವ್ರಾತೆ ವಿಳಾಸವಿಭ್ರಮಕಳಾನಿಧಿ ಮೇನೆಯೆನಿಪ್ಪಳುರ್ವಿಯೊಳ್ ೧೦೫

ಇಂತು ಪಿತೃಗಳ ಮನದೊಳ್ ಪುಟ್ಟಿದ ಸಕಲಗುಣಾಲಂಕೃತೆಯಪ್ಪ ಮೇನಾದೇವಿ ನಿಜವಲ್ಲಭೆಯಾಗೆ ನಿಶ್ಚಿಂತತೆಯಿಂದಿರ್ದರುಂ ಪರ್ವಿದ ಹರ್ಷಕ್ಕಿಂಬುಗೊಟ್ಟು ನಲಿನಲಿದು ಕೆಲವು ದಿನಂ ಸಮಸುಖದೊಳಿರ್ದುಂ ಮೈನಾಕನೆಂಬ ಕುಮಾರನಂ ಪಡೆದು ಸಕಳಸಾಮ್ರಾಜ್ಯಭರಿತದಿಗ್ವಳಯನಾಗಿ ಅಪ್ರತಿರುತಪ್ರತಾಪ[6]ಭೂಪ[6]ನೆನಿಸಿಯೋಷಧಿಪ್ರಸ್ತಪುರಕ್ಕೆ ಮಲಯಜತಿಲಕದಂತೆ ವಿರಾಜಿಸುವರಮನೆಯ ಸಭಾನಿಳಯದೊಳ್ ಪ್ರಭಾವಳಯಮೆನಿಸಿದ ನವಕನಕಮಣಿಗಣಭಾಸುರನಿವಾಸಭದ್ರಾಸನಮಂ ದುಷ್ಟವಿದ್ವಿಷವಿದ್ರಾವಣನೆನಿಪ್ಪ ಶೈಲರಾಜನವಷ್ಟಂಭಿಸಲೊಡಂ, ಸಿಂಹಾಸನದಿರ್ಕೆಲದೊಳ್ ನಿಂದ ವೀರಲಕ್ಷ್ಮಿ ವಿಜಯಲಕ್ಷ್ಮಿಯರ್ ಸಕಲಭೂಪಾಲರ ಸುಕೃತಬೀಜರಾಜಿಗಳಂ ಜಗದ್ವಿಜಯವಲ್ಲಭೈಕಪಟ್ಟಕ್ಕೆ ವೀರಸೇಸೆಯನಿಕ್ಕುವಂತೆ ಬಿಂಕದಿಂ ಕೊಂಕಿ ನಿಂದು ಕಂಕಣಝುಣಝುಣತ್ಕಾರಂ ಸಭೆಯ ಕಿವಿಗೆ ಸವಿಗಳಂ ಸಾಲಿಡೆ ಸೂಳಱಿದಿಕ್ಕುವ ಚಾಮರಗ್ರಾಹಿಣಿಯರೊಳಂ, [7]ಮತ್ತಮಾಸ್ಥಾನಮೆಂಬ[7] ನೀರ್

೧–೧ ವರ (ಮ ಬ ಕೊ ಸೆ ಓ). ೨–೨ ಪಾದಾನತ (ಮ); ಪಾದೋನ್ನತ (ಅ). ೩–೩ ಭೋಗಿ (ಅ). ೪-೪ ಕೀರ್ತಿಯಂ (ಮ ಬೆ ಬ) ೫–೫ ವಿಲ್ಲದಿಟಂ ಗಿರಿಯೂಥನಾಥನೊಳ್ (ಬ). ೬–೬ ಭೂರಮಣ (ಕಾ ಕ) ೭–೭ ಮತ್ತಮಾಸ್ಥಾನಮೆಂತಿರ್ದುದೆಂದೊಡೆ (ದಾ ಕೊ).

ತೆಗೆದ ರತ್ನಾಕರಮೊಳಲ್ಲಲ್ಲಿ ತರತರಂಬಿಡಿಮು ಗುಡಿಸಿದ ರತ್ನರಾಶಿಗಳೆಂಬಂತೆ ಮಣಿನಿಕರಖಚಿತಮಕುಟಕೋಟಿಗಳ್ ಮೆಱೆಯೆ ಬಹುರತ್ನಕದಂಬಕಾಂತಿ ಮಂಡಳಿಸಿ ಪರಿವೇಷಂಗೊಂಡ ರವಿಮಂಡಲದ ಹಿಂಡುಗಳಂತೆ ತೆಕ್ಕನೆ ತೀವಿ ಕಿಕ್ಕಿಱಿಗಿಱಿದು ಕುಳ್ಳಿರ್ದ ಲಾಳ ಗೌಳ ಚೋಳ ಕೇರಳ ಪಾಂಡ್ಯ ಪಲ್ಲವ ಮಗಧ ಮಾಳವ ವಂಗ ಕಳಿಂಗ ಬಂಗಾಳ ತೆಲುಂಗ ಗುರ್ಜರ ಹಮ್ಮೀರ ನೇಪಾಳರ್ ಮೊದಲಾದ ರಾಜಪುತ್ರರ ಪಙ್ಕ್ತಿಗಳೊಳಂ, ಮತ್ತಮಾ ಶೈಳಪತಿಗೆ ನೆನೆವ ಮನಂ ನುಡಿವ ನಾಲಗೆ ನೋಡುವ ಕಣ್ ಕುಡುವ ಕೆಯ್ ಪಿಡಿವ ಕೆಯ್ದುಗಳೆನಿಸಿ ಸುರಗುರುವಿನ ಬುದ್ಧಿಯೆಲ್ಲಂ ದೇವಲೋಕವಿಲಸಿತಮೆಂದೇಳಿಸಿ ದೈತ್ಯಗುರುವಿನ ಮಂತ್ರಮನಧೋಭುವನವಿಳಸಿತಮೆಂದಧಃಕರಿಸಿ ನಿಜಮಂತ್ರಶಕ್ತಿಯಿಂ ಸರ್ವೋರ್ವೀಧರನಿಕಾಯಮಂ ಕಾಲ್ಗೆಱಗಿಸಿಕೊಳ್ವ ಮಂತ್ರಿಗಳ ಮಂತಣದೊಳಂ, ಮತ್ತಮೊತ್ತರದಿನೆತ್ತಿ ನಡೆವೆಡೆಯೊಳರಿರಾಯರ ಗುಹೆಗಹ್ವರಂ ಬೆಟ್ಟಗಟ್ಟಬಿದಿರ್ಬೆತ್ತದಿಂದೆತ್ತಲುಂ ಮುತ್ತಲರಿದೆನಿಸಿ[೧]ದರಿ[೧]ಬಿರುದಿನ ಗಿರಿದುರ್ಗಂಗಳಂ ವಜ್ರಧರನಂತಡಿಸಿ ಘುಡುಘುಡುಸಿ ಪುಡಿಗುಟ್ಟುವ, ಮತ್ತಂ ಸಕಲತರುನಿಕರದಿಂದಿಡಿದಿಡಿದುರ್ವಿ ಕೊರ್ವಿ ಪರ್ಬಿದ ಮರ್ಬಿಂದಗುರ್ವಿಸುತ್ತ ಪ್ರತಿಹತಮೆನಿಸಿ ದುಷ್ಪ್ರವೇಶಮಾದ ವನದುರ್ಗಂಗಳಂ ದಾವಾನಳನಂತಟ್ಟಿ ಮುಟ್ಟಿ ಸುಟ್ಟುರಿಪುವ, ಮತ್ತಮಲ್ಲದೆಯುಂ ನಾಲ್ಕುಂ ದೆಸೆಗಳೊತ್ತರದಿಂ ಸುತ್ತಿ ಮುತ್ತಿ ನಿಬಿಡತರನಿರ್ಘೋಷ ಪ್ರಭೂಷಣಲೋಲಕಲ್ಲೋಲಮಾಲಾ[೨]ಸಂಘಟ್ಟನಸಮುದ್ಭೂತಸಲಿಲ[೨] ಪೂರ್ಣಮಾದ ಜಲದುರ್ಗಂಗಳಂ ಬಡಬಾನಳನಂತೆ ನಾಡೆ ಪೀರ್ವ, ನಿಜಭುಜಪ್ರತಾಪಂ ರೂಪುಗೊಂಡಂತೆ ತಂಡತಂಡದೊಳ್ ಕುಳ್ಳಿರ್ದ ದಂಡನಾಥಯೂಥದೊಳಂ; ಮತ್ತಂ ನಿಜಮಂದಿರದ ರಸಿಕರ ಗಾಯಕರ ಗೋಷ್ಠಿಯೊಳ್ ಪುಟ್ಟಿದ ರಸಕಾವ್ಯಗಾನಮನುಱೆ ಕೇಳ್ದು ಸವಿವ, ಮುಖಮಂಡಲದ ಲಲಿತಲಾವಣ್ಯಮಂ ಕಮನೀಯಕಾಂತಿಯುಂ ಕನ್ನಡಿಯೊಳ್ ಕಳ್ದು ನೋಳ್ಪ, ಸಖೀಜನಂ ಕಲಿಸಿದ ಸುಖಪ್ರತಿಕೂಲವಚನಮಂ ಮುಖದ ಮುನಿಸುಮಂ ಪ್ರಿಯದರ್ಶನದಿಂ ಮುನ್ನಮೆ ಮಱೆದು ನಲ್ಲನೊಳ್ ಸಲ್ಲೀಲೆಯಿಂ ನೆರೆವ, ಕೇಳೀವನದ ಬಿನದಕ್ಕೆ ಇನಿಯಂ [೩]ಪೋದನಿತು ಬೇಗಮಂ ಸೈರಿಸಲಾಱದೆ[೩] ಪರಿತಂದು ಸೆಜ್ಜೆವನೆಯ ಸಿರಿಮಂಚದೊಳ್ ಕುಳ್ಳಿರ್ದು ಬಳ್ಳಿವರಿವನೇಹಂ ಕುಡಿನಿಮಿರೆ ಸುರತಸಮಯದೊಳಿನಿಯನಾಡಿದ ಸವಿನುಡಿಗಳನುಸಿರ್ದುಸಿರ್ದು ಸವಿಸವಿದಾಲಿಸಿ ಪುಳಕಿಸುತುಂ ಕೆಲಬಲನಂ ನೋಡಿ ಭಿತ್ತಿಯ ಚಿತ್ರಂ ಕಾಣ್ಗುಮೆಂದು ನಾಣ್ಚಿ ನಿಲುತ್ತೆ [೪]ತಡೆದ[೪] ನಲ್ಲನಂ ಕಣ್ಮುಚ್ಚಿ ನೆನೆದು ಮನದ ಕಣ್ಣೊಳ್ ಸನ್ನೆಗೆಯ್ದು ಬುದ್ಧಿಯಿಂ ಬರಿಸಿಯಹಂಕಾರದಿಂ ಪಿಡಿದು ಚಿತ್ತದೊಳ್ ನೆರೆದು ಭಾವರತಿ ಬಲಿದು

೧-೧ ದತಿ (ಕಾ ಯ) ೨-೨ ಸಂಘಟಿತ ಲಲಿತ (ಗೊ). ೩-೩ ಪೋದನಿತುಬ್ಬೆಗಮಂ ಧರಿಯಿಸಲಾಱದೆ (ಮ ಬ). ೪-೪ ನಿಲ್ವ (ಕ).

ಬಂದಂತೆ ಬಗೆದು ಕಣ್ದೆಱೆದು ಕಾಣವೆ ಬಯಲನಪ್ಪಿದ ತೋಳ್ ಬಂಜೆಯಾಗೆ ಬಾಡಿದ ಲತೆಯಂತೆ ಕಂದಿಕುಂದುವ ಪೊೞ್ತು ಮಱೆಯಿಲ್ಲದೆ ಪೊಸಂತಿಲಂ ಪೊಱ-ಮಡಲಱಿಯದೋಲಗಕ್ಕೆ ಪೋಪಲ್ಲಿ ದಾದಿಯ ಸೆರಗಂ ಪಿಡಿದು ನಡೆವಲ್ಲಿ ರಾಜವೀಥಿ-ಯೊಳ್ ಸುೞಿವ ಜವ್ವನಿಗರಂ ಕಂಡು ಪೊಲಂಬುಗೆಟ್ಟ ಪುಲ್ಲೆಯಂತೆ ದೆಸೆದೆಸೆಗೆ ಬೆರ್ಚುಪ, ನುಡಿಸಿದ ವಿಟಂಗೆ ಮೌನಮನುತ್ತರಂಗುಡುವ, ಸದುದೃಷ್ಟಿಯಾಗೆ ಮಿಂಚು [1]ಪೞಂಚಿದಂತೆ[1] ಕಣ್ಮುಚ್ಚುವ, ಎಸೆವ ಸಭೆಯೊಳ್ ನಸುಮುಸುಂಕು ನಾಡೆ ಮೆಱೆಯೆ ಮಱೆಗೊಂಡು ಕುಳ್ಳಿರ್ಪಲ್ಲಿ ರಾಜಪುತ್ರರ್ ನೆವದಿಂ ಸೋಂಕೆ ಭೀತಿಯಿಂ ಬೆಮರ್ವ, ಸಾತ್ವಿಕರಸಂ ಪುಟ್ಟೆ ಸನ್ನೆಯಱಿಯದ ಸರಸವಱಿಯದ ಜಾಣಱಿಯದ ಕೇಣವಱಿಯದ ನಿಲವು ನಿರ್ವಿಕಾರಸುಖಮನೀಯೆ ಕಾಮಸುಖಕ್ಕೆ ಕಣ್ ಬಂದಂತೆ ಸೌಕುಮಾರ್ಯಕ್ಕೆ ಸವಿಯೇಱಿದಂತೆ ಆಲಿಂಗನಕ್ಕೆ ಅವಯವಂ ಬಂದಂತೆ ಚೆಲ್ವಿಂಗೆ ಮೊಲೆಮೂಡಿದಂತಲ್ಲಲ್ಲಿ ಕುಳ್ಳಿರ್ದ ಬಜ್ಜಬಱಿಯಜ್ಜಸುಖದ ಪಜ್ಜಪಸಿಯ ಪೊಜ್ಜಪೊಸಹರೆಯದ ಮುಗ್ಧಾಂಗನೆಯರೊಳಂ; ಮತ್ತಂ ನಿಳಯಾಂಗಣದೊಳ್ ಸುೞಿವ ವಿಟನಂ ನೋಟದೊಳೊಳವುಗಿಸಿ ಕೂಟದೊಳ್ ಕೊಸಱಿ ಬೇಟದೊಳ್ ಬೆಳೆಯಿಸಿ ನೆರೆವ, ಪರಿಮಿತದ ಮೋಡಾಮೋಡಿಯನುಭವದೊಳ್ ವಲ್ಲಭನ ಮನಂ ಪಲ್ಲಟಿಸುವ ಕಾಲಮನಱಿದು ಕಡುಮುಳಿದ ಖಾತಿಮಿಕ್ಕು ಪ್ರಣಯಕಲಹಂ ಕೆಯ್ಗಣ್ಮೆ ಕಂಡಂಜಿ ಕಾಲ್ಗೆಱಗಿದ ಕಾಂತಂಗೆ ಕಾರುಣ್ಯಮಂ ನೀಡಿ ಕೂಡುವ ಸುರತ [2]ಚಂದ್ರೋದಯದೊಳ್[2] ಕಾಮಸುಖಾಬ್ಧಿಯುರ್ಕಿ ಪರಿಯೆ ಗಾಢಾಲಿಂಗನಂ ತೆರಪುಗುಡದಿರೆ ಸರ್ವಾಂಗಮಂ ಪ್ರತ್ಯಂಗದೊಳ್ ಮೇಳಯಿಸಿ ಕುಸುಮಾಯುಧ-ಸುಖತರಂಗಿಣಿಯ ಸುೞಿಯೊಳ್ ಮನಂ ಮುೞುಂಗಿರ್ದ ಸುಖಸಮಯದೊಳರ-ಮನೆಯ ಸೂಳಾಯ್ತರ ಸರವೆತ್ತಿ ಸಾಱುವ ದನಿಯಂ ಭೋಂಕನೆ ಕೇಳ್ದು ಮುಗಿಲ ದನಿಗೇಳ್ದ ಮರಾಳನಂತೆ ಮನಂಗುಂದಿ ಕೂಟದ ಕೇಡಿಂಗೆ ನಾಡೆ ನೊಂದು ಮನದಪ್ಪು ಸಡಿಲದೆ ತನುವಿನಪ್ಪು ಸಡಿಲ್ದು ಸಂಗಸುಖಮಂ ಪಿಂಗಲಾಱದೆ ಕಾಮನ ಬಾಣಕ್ಕೆ ಗುಱಿಯಾಗಿ ಮಱುಗಿ ಮಲ್ಲಳಿಗೊಂಡು ಮೆಲ್ಲನೆೞ್ದು ಮುಂದುಗೆಟ್ಟಂತಂತೆ ಸಿಂಗರಿಸಿ ಸಿಡಿಮಿಡಿಗೊಂಡು ನಡೆತರ್ಪಾಗಳ್ ಮುಡಿಯ ಭಾರಕ್ಕೆ ಕೊರಲ್ ಕೊಂಕೆ ನೆಲೆಮೊಲೆಯ ಬಿಣ್ಪಿಂಗೆ ಬಡನಡು ಬಳ್ಕೆ ನಿತಂಬಭಾರಕ್ಕೆ ಮೆಲ್ಲಡಿ ಮಲ್ಲಳಿಗೊಳುತ್ತಿರೆ ನೇವುರದ ನುಣ್ದನಿಗಾಪಱಿಸುವ ವಿಟರ ನೋಟಮಂ ಜಡಿವಂತೆ ಪಾವಮುದ್ರಿಕೆ ಪೞಂಚೆ ಕಡೆಗಣ್ಗಳ ಕಾಂತಿಯೊಳೆಲ್ವ ನವಯುವ್ವನಿಗರಂ ನಗುವಂತೆ ಸೂಕ್ತಿಯೊಡನೆ ಸೂಸುವ ಸುಲಿಪಲ್ಲ ಬೆಳಗು ಬೀದಿವರಿಯೆ ನಡೆತಂದೊಡ್ಡೋಲ-ಗಮನೊಟ್ಟಯಿಸಿ ಪೊಕ್ಕು ಮಕುಟವರ್ಧನರಂ ಮರುಳ್ಗೊಳಿಸುತುಂ ಮಲೆದು ಕುಳ್ಳಿರ್ದ ಮಧ್ಯಮನಾಯಕಿಯರ ನಿಕರದೊಳಂ; ಮತ್ತಮನುರಾಗಮೇಱಿ

೧-೧ ಸುೞಿದಂತೆ (ಕ). ೨-೨ ಸುಖೋಬ್ಧಿಯೊಳ್ (ಕಾ ಕ).

ಮನಂದಂಮ ಬಂದ ವಿಟರ್ಗನ್ನತಾಸನಮನಿತ್ತು ಮನ್ನಿಸಿ ಮಣಿದು ಸಜ್ಜೆವನೆ-ಗುಯ್ದು ಸಜ್ಜನಸ್ನೇಹದಿಂ ಸಾಗಿಸಿ ನೋಡಿ ಭೋಗದೊಳ್ ಬೋಳಯಿಸಿ ರಾಗದಿಂ ಪೋಳಯಿಸಿ ಮಂದೆವಾಳಂ ಮೆಯ್ಸಂ[೧]ದೊಂದೆರಳ್ ಬಂಧದನುಭವದೊಳ್[೧] ಮಂದಯಿಪ ಸುಖಮನಿತ್ತು ನೆತ್ತದೊಳ್ ಬಿತ್ತರಂ ಬಡೆದು ಚದುರಂಗದೊಳ್ [೨]ಚಾತುರ್ಯಮನಿತ್ತು[೨] ಓದಿನೊಳ್ ಮಾಧುರ್ಯಂಬಡೆದು ಪಾಡಿನೊಳ್ ಪರಿವಡೆದು ನುಡಿಯೊಳ್ ನಯಂಬಡೆದು ವೀಣೆಯೊಳ್ ಜಾಣಂ ಮೆಱೆದು ಉಪಚಾರದೊಳೊ-ಯ್ಯಾರಂಬಡೆದು ಇಚ್ಛೆಯೊಳ್ ಕೆಚ್ಚುಗಟ್ಟಿ ಸಿಂಗರದೊಳ್ ಸೊಬಗುವೆತ್ತು ವಿಳಾಸದೊಳ್ ವಿವೇಕಂಬಡೆದು ನಡೆದು ಬಂದರಮನೆಯಂ ಪುಗುವಾಗಳ್ ಮುಖ-ಮಂಡಲಂ ಚಂದ್ರಮಂಡಲಮನಿಳಿಕೆಗೆಯ್ಯೆ ಪುರ್ವಿನ ಕೊರ್ವು ಕರ್ವುವಿಲ್ಲಂ ಕೀೞ್ಮಾಡೆ ಕಡೆಗಣ್ಣ ಕಾಂತಿ ಕುಸುಮಾಸ್ತ್ರಮಂ ಕೆದಱೆ ಕರ್ಣಾಭರಣಂ ರವಿಕಿರಣ-ಮನನುಕರಿಸೆ ಉಟ್ಟ ಬಿಳಿದು ಬೆಳ್ದಿಂಗಳಂ ಬೀಱೆ ಪಿಡಿದ ಲೀಲಾಬ್ಜಂ ನೂತನಂ-ಬಡೆಯೆ ನೇವುರದ ದನಿ ನೆಲನನುಗ್ಗಡಿಸೆ ಕಂಕಣಝುಣತ್ಕಾರರವಂ ಅರಸು-ಮಕ್ಕಳಂ ಜಡಿಯೆ ವಿಳಾಸದಿಂ ಪೊಕ್ಕುಮೆಯ್ಯೊಳ್ ಪೂಸಿದ ಸಿರಿಗಂಧದ ಕಕ್ಷ-ದೊಳಳವಟ್ಟ ಸಾದಿನ ಕಿವಿಯೊಳ್ ಮಗಮಗಿಪ ಮೃಗಮದದ ಮುಡಿದ ಕದಂಬ-ಪ್ರಸೂನದ ಬೆರಕೆಗಂಪಿಂಗುರವಣಿಸಿ ಮುಸುಱಿ ಮೊರೆದು ಮಂಡಳಿಸಿ ಮೌಳಿ-ಚಳನದೊಳೇೞುತೆಱಗುವ ಮಧುಕರನಿಕರಂ [೩]ಸೌಭಾಗ್ಯ[೩]ಲಕ್ಷ್ಮಿಯುರಿಕ್ಕುವ ನೀಲದ ಸೀಗುರಿಯಂತಿರೆ ತರದಿಂ ಕುಳ್ಳಿರ್ದ ವಿದಗ್ಧವನಿತಾಸಮೂಹದೊಳಂ; ಮತ್ತಂ ಸೊರ್ಕಿನ ಸೊವಡಿಂಗೆಱಗಿ ತುಱುಗಿದ ಪರಮೆಗಳ್ ಕರಿಮುಱಿವೋಗಿ ಧರೆಯ ಮೇಲುದಿರ್ದಲಗ್ರ ಪಲ್ಲವದಿಂ [೪]ಬೀಸಿಕೊಳ್ವ ನೆಗೆದ[೪] ತುಂತುರ್ವನಿಗಳಂ ಮುಗಿಲ ಮೆಯ್ ಪುಗಳೇಳೆ ಪುಷ್ಕರದಿಂ ಪೂತ್ಕರಿಸುವ ಒಳಗುರ್ಕಿ ತೆರೆಮಸಗುವ ಮದ-ಸಮುದ್ರದೊಡನೆ ಕ್ರೋಧವಡಬಾನಳನಂ ಬೆರಸಿ ಸುರಿದಪುದೆಂಬಂತೆ ನೆಗೆವ ಪೊಗೆವೆರಸಿ ಕೀೞ್ಮದಂಬಿಡುವ ಕಣ್ಗಂ ಕೋಡ ಮೊನೆಗನೇಕಕಾಲದೊಳ್ ಬಂದ ರೂಪಂ ಪ್ರತಿಮಾನದೊಳೊಟ್ಟಿಕೊಳ್ವ ಕಟ್ಟಣಕದ ದುಷ್ಟಗಜಮನಗ್ರಪಲ್ಲವಮಂ ಪಿಡಿದೇಱಿ ಭಂಗಿಸುತ್ತುಂ [೫]ಗುಟಕ್ಕಾೞ್ಮಡಿ[೫] ಬಿದುವನಪ್ಪಳಿಸಿ ಚಪ್ಪರಿಸುತ್ತಬ್ಬರಿ-ಸುವ ಕೊರ್ಬುನುಡಿಯೆ ಕೂರಂಕುಸವಾಗೆ ತೋಱಿ ತೊಟ್ಟು ಕೀಱಿ ಬಿಟ್ಟಿಕ್ಕುವ ಬಲ್ಪಿನ ಕಟ್ಟುಬ್ಬಟೆಯ ಬಿರುದಿನಹಾಹೆ ಕಾಲೊಳೊಳಲೆ ಕಡುಪಿಂ ಬಂದು ಪುರುಷ-ಸಿಂಹಂಗಳಂತೆ ತರದಿಂ ಕುಳ್ಳಿರ್ದ ಗಜಾರೋಹಕರ ಗೊಂದಣದೊಳಂ; ಮತ್ತಂ ಮುಂದುರದೊಳ್ ನಟ್ಟ ಕೆಚ್ಚಿನ ಮುಂಡಿಗೆ ಮುಱಿಯೆ ಪಾಳಾಸಂ ಪಱಿಯೆ

೧–೧ ದೊಂದೆರಡು ಚೆಂದದನುಭವದೊಳ್ (ಕಾ ಬೆ ಗೊ ಗ). ೨–೨ ಚಾತುರ್ಯಂ-ಗೊಟ್ಟು (ಕಾ ಯ ಬೆ) ೩–೩ ಸೌರಭ್ಯ (ಕಾ ಕ ಬೆ ಯ). ೪–೪ ಬೀಸಿಕೊಳ್ವನ್ನೆಗಂ ನೆನೆವ (ದಾ). ೫–೫ ಗುಟಮನಲ್ಲಾಡಿ (ಯ ದಾ); ಗುಟದೊಳ್ ಕೀೞ್ಮಾಡಿ (ಅ).

ಪೊಱವಟ್ಟು ನೆರವಿಯನುರವಣಿಸಿ ಪಾಯ್ದು ಬೀದಿವರಿದಾಱಿಗೊಂಡು ಸಿಕ್ಕಿದ ರೂಪಿನ ತಲೆಯೊಳ್ ನಿೞಲ್ ನಿಕ್ಕೆಂದು ತರ್ಗಿ ನುರ್ಗಿ ಕರ್ಬೆಕೊಡಹುವ ನಚ್ಚಿನ ಗೋವಂ ದನಿದೋಱಿ ಕತ್ತರಿವೊನೆಗೊಂಡ ಕಿವಿಯಿಂ ಕೆಕ್ಕಳಿಸುವ ದಿಟ್ಟಿಯಿಂ ಕಂಗನೆ ಕನಲ್ದು ಮುಂಗಾಲಿಂ ನೆಲನಂ ಪೊಯ್ದೆೞ್ದು ಪರಿದೆಯ್ದುವ ಮುಂದೆ ಕಚ್ಚುವ ಹಿಂದೆ ಮೆಟ್ಟುವ ಕೆಲಕೆ ಜಿಮ್ಮುವ ದುಂಡಿಸಿ ನೆಗೆವ ಮಂಡಿಸಿ ನಿಲ್ವ ಮುರಿದಪ್ಪುರಿಸುವ ತರಹರಿಸಿ ಪೊಣ್ಮುವ ಪೊಜಿಕಾಲೊಳ್ ನಡೆವ ೧ಸುಕಳಾಶ್ವಮಂ೧ ಬೇಗದಿಂ ಬೆಂಗೆವಾಯ್ದು ರಾಘೆಯೊಳೌಂಕಿ ವಾಘೆಯೊಳ್ ನಿಲಿಸಿ ಕೆಲಬಲಕ್ಕಿಕ್ಕಿ ಸರಸಬೀದಿಯೋಳೇಱಿ ತೋಱಿ ನಳನಂ ದತ್ತಿಳನನಿಳಿಕೆಗೆಯ್ವ ಬಿರುದಿನ ಬಿಂಕ- ದಂಕವಾಲೆ ಕೆಲಬಲದೊಳಂಕುರಿಸುತ್ತು ಮಿರೆ ನಡೆತಂದು ಸಮುಚಿತಾಸನದೊಳ್ ಕ್ರಮದಿಂ ಕುಳ್ಳಿರ್ದ ಪಟ್ಟಸಹಣಿಯರ ಪರಿವಿಡಿಯೊಳಂ ಮತ್ತಂ ಮಲೆತು ನಿಂದು ಅಖ್ಖಡದೊಳ್ ಪೊಕ್ಕು ಬಾಹಪ್ಪಳಿಸಿ ಬಲ್ಪುದೋಱಿ ಸಿವ ಮಲ್ಲನ- ನುರ್ಬುತ್ತೊತ್ತ್ಯನೊಳಪೊಕ್ಕು ಮಿಕ್ಕು ಪರಿದಿಕ್ಕಿ ಮುರಿವ ಅಡುಪಾಯುವಳವಿಂಗೆ ಕಡಂಗುವ ಮಲ್ಲನನಡಸಿ ತಿವಿದು ಕಡುಪಿಂ ಕೆಡೆಪಿ ಕೊಪ್ಪರದೊಳ್ ಕುಮ್ಮಿ ಮಂಡಿಯೊಳ್ ಮಿದಿದು ಕುದಿದು ಸದೆದು ಸಣ್ಣಿಸುವ ಜೊಕ್ಕೆಯುದಾಸೆಗೆ ಪೊಕ್ಕು ಮಲ್ಲನನಿಕ್ಕಿ ಮೆಟ್ಟಿ ವಜ್ರದ ಬಳ್ಳಿಯಂತೆ ಛಡಿಕೆಯೊಳ್ ಬಿಗಿದು ಜಾಳಿಸಿ ನೂಂಕುವ ನೂಂಕೆ ಪೋಗದೆ ನಿಂದ ಸೆಳೆಹನಂ ಸೆಳೆದು ಕೆಡೆಪಿ ಪಿಡಿದೆತ್ತಿಯೊತ್ತಿ ಕುಸುಬಿ ಕುಸುಕಿಱಿದು ಪೊಸೆದು ಪೂಳ್ವ ಸಾಹಸಿತನಕೆ ಬೆರಸಿದ ಮಲ್ಲನನೊರಸಿ ಬಿಡುವ ಲವಣಿ ಸಾರದೊಳ್ ನುಣ್ಚುವ ಮಲ್ಲನನೌಂಕಿ ಪಿಡಿದು ಸುತ್ತಿ ಮುತ್ತಿ ಸೆಳೆದಿಕ್ಕಿ ಸೀಸಕದೊಳ್ ಪೊಕ್ಕು ಭುಜದೊಳಣೆದುರದೊಳ್ ತೇದು ಉತ್ತಾನಕದೊಳ್ ನಿಂದು ಸಖಾಯರ್ ಝುಣಝುಣರೆನೆ ಬಳಸಿ ಭಂಜಿಸುವ ಐರಾವತಂ ಮಲ್ಲವೇಷದೊಳದಿರಾ- ದೊಡಂ ತೋರಹತ್ತದೊಳಂ ತಿವಿದು ತಿರುಪುವ ಸಂಚಳಿಸುವ ಮುಂಚಿ ಮೇಳವಿಸಿ ಜೊಕ್ಕೆಯುದನುವಾನದೊಳ್ ಡೊಕ್ಕರಿಸಿ ಪಿಡಿವರಿಬಿರುದಿನ ಕಲ್ಲ ಮಾನಸರಂತಿರ್ಪ ಮಲ್ಲರ ನೆರವಿಗಳೊಳಂ; ಮತ್ತಂ ಕಳನೇಱಿದಂಕಮಂ ೨ಗಳೆಯೊಡ್ಡದ೨ ಮುನ್ನಂ ಕುತ್ತಿ ಕೆಡೆಪುವ ತಳ್ತು ಗಂಟಿಕ್ಕಿ ಟೆಂಟಣಿಸುವಂಕಮಂ ಸೆಳೆದು ಕೆಡೆಪುವ ಮುಳಮು ಮೆಟ್ಟುವ ಸುಳಿದು ಸುತ್ತಿ ಬಳಸಿ ಮೊನೆದೋಱುವ ಬಿರುದಿನಂಕಮನುರವಣಿಸಿ ಪತ್ತಿ ಪೊರಳ್ಚಿಕೊಳ್ವ ಬಿನ್ನಣಂದೋರ್ಪ ಗನ್ನದಂಕಮಂ ಬಿಡಿಸಿ ಬೆಂಬತ್ತಿ ಕುತ್ತಿ ೩ಸುರುಳ್ಚಿ೩ವುಬ್ಬಟೆಯ ಬಿರುದಿನುಪ್ಪರವಟ್ಟದುಭಯ೪ಸತ್ತಿಗೆಯ೪ ಪಗಲ ಕೆಯಿದ್ದಾಪಿಗೆಯ ಕಾಲ ಹಾಹೆಯ ಮೊತ್ತದ ಬಾವುಲಿಯ ಮಾಲೆದೊಡರ ಮಾಸಾಳ್ಗಳ ಮಂತಣದೊಳಂ; ಮತ್ತಂ ವಕ್ರೋಕ್ತಿ ಸ್ವಭಾವೋಕ್ತಿ ಪಾಕಲಾಲಿತ್ಯ ಗುಂಪು ಇಂಪು

೧-೧ ವಿಕಳಾಶ್ವಮಂ (ಅ). ೨-೨ ಗಳೆಯೋಸರಿಸದ (ಕಾ ಕ); ಗಳೆದೆಗೆದೊಡ್ಡದ (ಕೊ ಬ). ೩-೩ ಉರುಳ್ಚು (ಕಾ ಬೆ). ೪-೪ ಛತ್ರದ (ಕಾ ಕ).

ರೀತಿ ನೂತನವಾಗೆ ಗದ್ಯಪದ್ಯಕಾವ್ಯಕಳಾಪ್ರೌಢಿ ರೂಢಿವಡೆಯೆ ಮೆಱೆದಿರ್ದ ಸರಸಕವಿಗಳ ಸಂದಣಿಯೊಳಂ; ಮತ್ತಮಾರಭಟಿಯೊಳ್ ದೆಬ್ಬಾಳಂ ಮಿಕ್ಕು ಸಾತ್ವತಿಯೊಳ್ ಪಜ್ಜಳಂಬೆತ್ತು ಭಾರತಿಯೊಳ್ ಕಾಂತಿ ಕೆಯ್ಗಣ್ಮೆ ಆಸ್ಥಾನಮಂ ಕೌತುಕರಸದೊಳ್ ಕರುವಿಟ್ಟಂತಿರಿಸುವ ಸಾಮರ್ಥ್ಯಮನೊಳಕೊಂಡು ಕುಳ್ಳಿರ್ದ ಗಮಕಿಗಳ ತಂಡದೊಳಂ; ಮತ್ತಂ ಶಬ್ದಖಂಡನಮರ್ಥಖಂಡನಮನುಮಾನಖಂಡನಮೆಂಬ ತರ್ಕತಂತ್ರಕೋವಿದರಪ್ಪ ವಾದಿಗಳೊಳಂ; ಮತ್ತಂ ಮಧುರರಸಮೊಸರ್ವ ಪೊಸನುಡಿಗಳಂ ಕೇಳ್ವ ಸಭೆಗೆ ಕರ್ಣರಸಾಯನಮನೀವ ಮಾಧುರ್ಯಗುಣಂ ಮೆಯ್ಯಿಕ್ಕಿರ್ದ ವಾಗ್ಮಿಗಳೊಳಂ; ಮತ್ತ ವಳಿವಕ್ರತೆಯನೀವ ವಹಣಿ ತರಂಗಿಸುವ ತಿರುಪು ಸುಳಿಗೊಳ್ವ ಹೆಂಪು [೧]ಇಂಪಂ[೧] ಕಱೆವ ಸುಧಾರಸಗಾನಂ ನಾನಾರಸದ ಲಹಣಿಯು ರೂಪುವಡೆಯೆ ಪಾಡುವ ಗಾಯಕರೊಳಂ; ಮತ್ತಂ ಸುಗತಿಗಳಂ ಸೂಸುವ ಮದ್ದಳಿಗರಿಂ ರೂಪುರೇಖೆ ರಸಂಬಡೆವ [೨]ನೃತ್ಯನಾಯಕಿಯರಿಂ[೨] ನವೀನಗತಿಯಂ ನೀಡುವ ನರ್ತಕರಿಂ ಭಾವರಸಮನೀವ ಚಿತ್ರಕರಿಂ ಇಂತು ಗಿರಿರಾಜನೊಡ್ಡೋಲಗಮನಂತಗಂಭೀರಮನತುಳಪ್ರತಾಪಮನನುತ್ತರಸೌಂದರ್ಯಮನೂರ್ಜಿತವಿಳಾಸಮನನುಪಮೌದಾರ್ಯಮನೊಳಕೊಂಡಿರ್ದುದಾ ಪ್ರಸ್ತಾವದೊಳ್

ಚಂಪಕ

ನುಡಿಯದಿರಂಧ್ರ ಕೆಯ್ಮುಗಿ ಕಳಿಂಗ ಕುನುಂಗೆಲೆ ವಂಗ ಕೇರಳಂ
ಗೆಡೆಗುಡು ಚೋಳ ಲಾಳ ಪೆಱಸಾರ್ ಪುಗದಿರ್ ಮಗಧೇಶ ಕಾಣ್ಕೆಯಂ
ಪಿಡಿದಿರು ಪಾಂಡ್ಯ ಬಿನ್ನವಿಸು ಮಾಳವ ಗೌಳನೆ ಪಿಂಗೆನುತ್ತಣಂ
ಜಡಿವರಿಳೇಶರಂ ಪಡಿಯಱರ್ ಗಿರಿರಾಜಸಭಾಂತರಾಳದೊಳ್ ೧೦೬

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೦೭

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯಪ್ರಭಾ
ಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದ
ಮಧುಕರಾಯಮಾಣಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ಗಿರಿರಾಜದೇಶಪುರಾಸ್ಥಾನವರ್ಣನಂ ದ್ವಿತೀಯಾಶ್ವಾಸಂ

೧-೧ ಸೊಂಪು (ದಾ). ೨-೨ ನರ್ತನನಾಯಕಿಯರಿಂ (ಕಾ ಕ).

ತೃತೀಯಾಶ್ವಾಸಂ

ಹೈಮವತೀಶೈಶವವರ್ಣನಂ

ಶ್ರೀಗೌರೀಕುಚಯುಗಳಪ
ರಾಗಯುತಾನರ್ಘ್ಯರತ್ನವಿಳಸದ್ವಕ್ಷೋ
ಭಾಗಂ ಸದ್ಭಕ್ತಿಯನೆಮ
ಗೀಗೆ ದಯಾವಾರ್ಧಿ ಹಂಪೆಯ ವಿರೂಪಾಕ್ಷಂ ೧

ಸ್ರಗ್ಧರೆ

ಅಂತಿರ್ಪಾಸ್ಥಾನದೊಳ್ [1]ಭೂಭುಜ[1]ನಿಕರಕಿರೀಟಪ್ರರತ್ನಪ್ರಭೂಶಾ
ನಂತಪ್ರದ್ಯೋತನೂತ್ನೋದಕಜನಿತಪದಾಂಭೋಜನುದ್ಯದ್ಧರಿತ್ರೀ
ಕಾಂತಾವಕ್ಷಃಸ್ಥಲಾಲಿಂಗನ[3]ಭರನಿಜದೋರ್ದಂಡಚಂಡಾಸಿಧಾರಾ
ಶ್ರಾಂತಂ ಪ್ರಾತರ್ಕ್ಯವೈರಿವ್ರಜ[2]ಧರ[2]ನೆನಿಸಿರ್ದಂ ಗಿರಿವ್ರಾತನಾಥಂ ೨

ಇರೆ [4]ಮಾಧ್ಯಂದಿನ[4]ಡಿಂಡಿಮ
ವರನಾದಂ ಕೇಳಲಾಗೆ ಗಿರಿಕುಲರಾಜಂ
ತರದಿಂ ನೆರೆದೋಲಗಮಂ
ಪರೆಯಲ್ವೇಳ್ಕೆಂದು [5]ಪೇಳ್ದ[5] ಸಮನಂತರದೊಳ್ ೩

೧–೧ ಭೂಪತಿ (ಡ). ೨+ ನಿಜ (ಕ) ೩ ಹರ (ಯ) ೪ ಮಧ್ಯಂದಿನ (ಕಾ ಬೆ ಳ ಬ ಯ); ಮಧ್ಯಾಹ್ನದಿ (ಓ) ೫ ನುಡಿದ (ಕಾ ಕ)

ಮಹಾಸ್ರಗ್ಧರೆ.

ಕ್ವಣಿತಾನೇಕಪ್ರಧಾನಾಭರಣ[೧]ಚರ[೧]ಮಹಾಮಾತ್ಯಸಾಮಂತಯೂಥಂ
ಗಣಿಕಾಸಂತಾನನಾನಾನವಮಣಿಗಣವಿಸ್ತೀರ್ಣಮಂಜೀರಮುದ್ರಾ
ರಣಿತಂ ತದ್ವೇತ್ರಹಸ್ತಪ್ರತಿಮುಖರಪ್ರೋದ್ಗತಾಭೀಳಘೋಷಂ
[೨]ಪ್ರಣತಾ[೨]ಸಕ್ತಾವನೀಶ [೩]ಪ್ರಕಟ[೩]ಮಕುಟಯುಕ್ತಂ ಸಭಾವಾಸವಕ್ತ್ರಂ ೪

ಅಂತಿರ್ದಾಸ್ಥಾನಂ ಪರೆಯೆ,

ಮಹಾಸ್ರಗ್ಧರೆ

ಗಿರಿರಾಜಂ ಸಿಂಹ[೪]ಪೀಠೋತ್ಥಿತ[೪]ಕರಭರನಾಗುತ್ತುಮೇಳ್ತಂದು ಸೌಖ್ಯಾ
ಕರರೂಪಂ ಮಜ್ಜನಂ ಮಾಡುತೆ ಭಸಿತಲಲಾಟಂ ಸರುದ್ರಾಕ್ಷಕಂಠಂ
ಸ್ಥಿರಚಿತ್ತಂ ಲಿಂಗಪೂಜಾ[೫]ವಿರಚನ[೫]ಪರಿತುಷ್ಟಂ ಪ್ರಸಾದಪ್ರಮೋದಂ
ಸ್ಮರಬಾಣವ್ರಾತಮಂ ಲೆಕ್ಕಿಸದತಿ[೬]ಸುಖದಿಂ[೬] ಮೇನೆಯುಂ ತಾನುಮಿರ್ದರ್ ೫

ಇಂತು ವಿಮಳಮನದಿಂ ಸಮಸುಖದೊಳಿರ್ಪಲ್ಲಿ,

ಭರದಿಂ ಬಹುಸಂತಾನಾ
ತುರೆ ಸಾಧು ಸುಶೀಲೆ ಲೀಲೆ ಮಿಕ್ಕಾದರದಿಂ
ಗಿರಿರಾಜಂಗೆ [೭]ವಿರಾಜಿಪ[೭]
ವರಜೀವಸಮಾನೆ ಮೇನೆ ನಯದಿಂ ನುಡಿದಳ್ ೬

ಚಂಪಕ

ಮೊಲೆಯುಣುತಳ್ಕಱಿಂ ನಗುವ ನಿಂದಿರುತಪ್ಪುವ [೮]ಪೊಂಗಿ ಹಿಗ್ಗುತುಂ[೮]
ಮಲೆವ ಮರಳ್ವ ಕಣ್ಗಳನಲರ್ಚುವ ಮುಚ್ಚುವ [೯]ನೋಡುತಾಡುತಂ[೯]
ನಲಿನಲಿದುರ್ಬು[೧೦]ತಂ[೧೦]ತೊಲೆಯುತಿಂತೊಲೆವಳ್ತಿಯ ಮುದ್ದಿನೊಪ್ಪದೊಳ್
ನೆಲಸಿದ ಪುತ್ರಿಯಂ ಬಯಸುತಿರ್ಪುದೆನ್ನ ಮನಂ ಮನಃಪ್ರಿಯಾ ೭

೧-೧ ಭರ (ಕಾ ಬೆ ಯ ದಾ ಅ ಗೂ ಡ ಗ ಸೆ). ೨-೨ ಪ್ರಣುತಾ (ಬ) ೩-೩ ಪ್ರಕರ (ಯ ಕೊ). ೪-೪ ಪೀಠಸ್ಥಿತ (ಕಾ ಅ ದಾ) ೫-೫ ವಿರಚಿತ (ಡ) ೬-೬ ಮುದದಿಂ (ಯ); ಭರದಿಂ (ಕ). ೭ ನಿರಾಜಿತ (ಬ ಮ). ೮-೮ ಹೊಂಗಿ ಹಿಗ್ಗುತುಂ (ಮ); ಹಿಂಗಿ ಪೊಂಗುತುಂ (ಬ). ೯-೯ ನೋಡುತುಂ ಕರಂ (ಮ ಓ). ೧೦-೧೦ ವಂ (ಮ).

ಉಗ್ರತಪ[೧]ದಿಂದೆಯತು[೧]ಳಸ
ಮಗ್ರೈಯನಭವಂಗೆ ವಧುವೆನಿಪ್ಪಳನಾನ
ವ್ಯಗ್ರದೆ ಪಡೆವೆಂ ಕುಧರ
ಪ್ರಾಗ್ರನೆ ಕಳಿಪೆಂದು ಮೇನೆ ನುಡಿವವಸರದೊಳ್ ೮

ಗಿರಿರಾಜನೊಡಂಬಟ್ಟಾ
ದರದಿಂದಂ[೨] ಪುಳಕಿಸುತ್ತೆ ಪುಟವೇಳುತ್ತುಂ[೨]
[೩]ಪರಿಜಾರ[೩]ಪಟುಗಳೆನಿಸುವ
ತರುಣಿಯರಂ ಕೂಡಿಕೊಟ್ಟು ಸಂತಸದಿಂದಂ ೯

ಮತ್ತೇಭ

ವರಪುತ್ರೀಸ್ಥಿರಭಾವ[೪]ಕಾವ್ಯ[೪]ವಿಲಸತ್[೫]ಸನ್ಮಾನ್ಯೆಯಂ ಯಾನೆಯಂ[೫]
ತರುಣೀ[೬]ಕುಂತಳ[೬] [೭]ಮಲ್ಲಿಕಾ[೭]ಮಧುಕರೀಸಂತಾನೆಯಂ [೮]ಜ್ಞಾನೆಯಂ[೮]
ಪರಮಾನಂದತಪೋ[೯]ಭರೋತ್ಥಿತ[೯]ಮನಃ[೧೦]ಪ್ರಾಧೀನೆ[೧೦]ಯಂ ಸ್ಥಾನೆಯಂ
ಗಿರಿರಾಜಂ ಕಳಿಪುತ್ತುಮಿರ್ದನತಿಯೋಗಧ್ಯಾನೆಯಂ ಮೇನೆಯಂ ೧೦

ಕಳಿಪೆ ನಡೆತಂದು ರಮ್ಯ
ಸ್ಥಳದೊಳ್ ನಿಂದೇಕಪಾದದಿಂದಂ ಮೇನಾ
ಲಳನೆ ಮಹಾದೇವಿಯ ನಿ
ರ್ಮಳರೂಪಂ ಹೃದಯಕಮಲದೊಳ್ ತಳೆದಿರ್ದಳ್ ೧೧

ಮುಗಿದುವು ನಯನಸರೋಜಂ
ಮಿಗೆಯಲರ್ದುದು ಚಿತ್ತಕೈರವಂ ಮಿಕ್ಕೇಱ
ತ್ತು ಗಭೀರತಪೋ[೧೧]ವಾರಿಧಿ[೧೧]
ಬಗೆಯೊಳಗಾ ಧ್ಯಾನಚಂದ್ರನುದಯಿ[೧೨]ಸುವಾಗಳ್[೧೨] ೧೨

ಇಂತು ತಪೋಬೀಜಂ ಚಿತ್ತಭೂಮಿಯೊಳ್ ಬೇರೂಱಿಯಹಂಕಾರದೊಳಂಕುರಿಸಿ ಬುದ್ಧಿಯೊಳ್ ಪಲ್ಲವಿಸಿ ಮನದೊಳ್ ನಿಮಿರ್ದು ನಿಷ್ಠೆಯೊಳ್ ಕುಡಿವರಿಮು

೧-೧ ದಿಂದಲತು (ಯ). ೨-೨ ಪುಳಕಿಸುತ್ತಲತಿ ಮುದದಿಂದಂ (ಯ). ೩-೩ ಪರಿಚರ್ಯ (ಬ ಮ ಯ ಅ ಗ ಸೆ). ೪-೪ ಭವ್ಯ (ಯ). ೫-೫ ಸನ್ಮೇನೆಯಂ ಮಾನೆಯಂ (ದಾ); ಸನ್ಮಾನೆಯ ಮೇನೆಯಂ (ಅ ಸೆ). ೬-೬ ಸಂಕುಳ (ಗೊ). ೭-೭ ಮಾಲಿಕಾ (ಮ ಯ ಅ ಗೊ). ೮-೮ ಗಾನೆಯಂ (ಅ). ೯-೯ ಭರಾರ್ಥಿತ (ಅ). ೧೦-೧೦ ಪ್ರಾಧಾನೆ (ಮ). ೧೧-೧೧ ಶರನಿಧಿ (ಮ ದಾ); ನೀರಧಿ (ಜ ಯ). ೧೨ ಸಿದಾಗಳ್ (ದಾ ಸೆ).

ಪರಿದು ಪರ್ವಿ ಪುರಹರನರಸಿಯು ಮೆಲ್ಲಡಿಗಳ್ಗೆ ನಿಲ್ಲದೆ ಧೀಂಕಿಡೆ ಭವಾನಿ ಭೋಂಕನೞಿದು ಮೇನೆಯ ತಪಕ್ಕೆ ಮಿಗೆ ಮಚ್ಚಿ ಕರುಣಿಸಿ ಹರನಂ ಬೀಳ್ಕೊಂಡು ತಂದೆ ಮಾಡುವ ಯಾಗಮಂ [೧]ನೋಳ್ಪ ನೆವದಿಂ[೧] ಕೈಲಾಸಮಂ ಪೊಱಮಟ್ಟು ದಕ್ಷನ-ಪುರಕ್ಕಭಿಮುಖಿಯಾಗಿ,

ತ್ರಿಣಯನ ವಿರಹಿತಯಾಗ
ಕ್ಕಣಿಯುರದಿಂ ಪೋಗಿ ಮುಂದೆ ನಿಲೆ ದಕ್ಷಂ[೨]ನಿ
ರ್ಗುಣನಂ[೨] ನಿಂದಿಸೆ ದಾಕ್ಷಾ
ಯಣಿ ಕೇಳದೆ ವಿಮಳಯೋಗದಿಂ ನಡೆತಂದಳ್ ೧೩

ಸುರತರುವಿಂ ಬೀಜಂ[೩] ದಿ
ವ್ಯರತ್ನದಿಂ[೩] ಕಾಂತಿ ಪೂರ್ಣಶಶಿಯಿಂ ಕಿರಣಂ
ವರ ಸುಧೆಯಿಂ ಮಧುರತೆ ಬಂ
ಧುರಕುಸುಮದೆ ಕಂಪು ಬರ್ಪ ತೆಱದಿಂ ಬಂದಳ್ ೧೪

ಬಂದು ನಿಜತಪದ ಮೇನೆಯ
ನಂದೀಕ್ಷಿಸಿ ಶಾಂತರವಿನಿಕಾಯಮರೀಚೀ
ವೃಂದನಿಭಕಮಳವಿಮಳಾ
ನಂದವಿಕಾಶಪ್ರಕಾಶನಿಧಿ[೪]ನಿಂದಿರ್ದಳ್[೪] ೧೫

ಅಂತು ನಿಂದು,

ಉತ್ಕಟದ ತಪೋನಿಷ್ಠೆಗೆ
ಸ[೫]ತ್ಕರುಣಮನಾಂತು ನಿನ್ನ ಬಸಿಱೊಳ್ ಬರ್ಪೆಂ
ಸತ್ಕುಲಜೆಯೆನುತೆ ಮೇನೆಯ
ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿರ್ದಳ್ ‡೧೬

ಇರೆ ಮೇನೆಯುಱಿದು ಹರ್ಷದ
ಶರನಿಧಿಯೊಳ್ ಪೊಕ್ಕು ಲೀಲೆ ಮಿಕ್ಕೋಲಾಡು
ತ್ತರಲುತ್ತೀಸಾಡು[೬]ತ್ತುಂ[೬]
ಪೊರೆಯೇಱುತೆ ಜಪದ ವಿಪುಳ ತಪಮಂ ಬಿಟ್ಟಳ್ ೧೭

೧-೧ ನೋಡುವ ಭರದಿಂ (ಗೊ ಕೊ). ೨-೨ ನಿ।ರ್ಗುಣದಿಂ (ಕ). ೩-೩ ಸುರು। ಚಿರ ರತ್ನದೆ (ಅ). ೪-೪ ನಡೆತಂದಳ್ (ಅ). ೫ ತ (ಕಾ ಜೆ ದಾ ಗೊ). ೬-೬ ತ್ರವೆ (ಅ). ‡ ೧೬ ಪದ್ಯವು ಓ ಪ್ರತಿಯಲ್ಲಿಲ್ಲ.

ಮತ್ತೇಭ

ನಡೆತಂದಳ್ ಗಿರಿರಾಜವಲ್ಲಭೆ ಭವಾನೀಪ್ರೇಮದಿಂ [೧]ರಾಗದಿಂ[೧]
ಬಿಡಮುದ್ಯತ್ಕಲಶಪ್ರಬದ್ಧಲಲನಾಸಂತಾನದಿಂ ಗಾನದಿಂ
ಕಡುಪಿಂ ಪೊಣ್ಮುವ ವಾದ್ಯವಿಪ್ರವದನಪ್ರೋನ್ನಾದದಿಂ ವೇದದಿಂ
ಗುಡಿಗಟ್ಟುತ್ತಿ ದಿರ್ಗೊಳ್ವ ಪೌರಜನತಾಸಂತೋಷದಿಂ ಘೋಷದಿಂ ೧೮

ಉತ್ಪಲ

ಬಂದಗರಾಜರಾಜಗೃಹಮಂ ಪುಗುತುಂ ಪರಮಪ್ರದೀಪೆ ಸಾ
ನಂದೆ ಸರೋಜನೇತ್ರೆ ವರವಕ್ತ್ರೆ ಮನೋಹರೆ ಮಾನ್ಯೆ ಮೇನೆ ಸಾ
ರ್ತಂದು ನಿಜೇಶನಂ ಪ್ರಿಯದೊಳಪ್ಪಿ ಮನೋರಥಸಿದ್ಧಿಯಾದುದಂ
ನಿಂದುಸಿರ್ದಂತರಂಗಬಹಿರಂಗ[೨]ಸುಖಾನ್ವಿತೆ[೨]ಯಾಗುತೊಪ್ಪಿದಳ್ ೧೯

ಇಂತು ತನ್ನ ಬಸಿಱೊಳ್ ಭವಾನಿ ಬರ್ಪ ವರಮಂ ಪಡೆದು ಮೇನಾದೇವಿ ನಾನಾಸುಖದೊಳೊಪ್ಪಿರ್ದು,

ಮುಂದಾ ಸ್ತ್ರೀರತ್ನಮನೊಲ
ವಿಂದಂ ಪಡೆವಪ್ಪೆನೆಂಬುದಂ ಸೂಚಿಸುವಂ
ತೊಂದೆರಡು ದಿನದೊಳತ್ಯಾ
ನಂದದೆ ಕಡುಜಾಣೆ ಮಾಣಿಕಂಗಂಡಿರ್ದಳ್ ೨೦

ಆ ಸಮಯದೊಳ್,

ಎಸೆವ ಬಳಲ್ಕೆಗಮುಷ್ಣಮ
ನುಸಿರ್ವುಸಿರನುರಾಗವೇಱುವಕ್ಷಿದ್ವಿತಯಂ
ಪೊಸಕಂಪನುಗುಳ್ವ ಕಕ್ಷಂ
ನಸು[೩]ಕರಗುವ[೩] ತನು ಮನೋಹರಂ[೪] ಮಾನಿನಿಯಾ[೪] ೨೧

ಸೆಡೆವ ನಡೆ ತೊಡೆಯ ತಡೆಗಾಲ್
ನಡುವಿಂಗತಿಗಾಢಮುಡಿಗೆ [೫]ಬಡ[೫]ತನು ಸೊಂಕಿಂ
ಗೆಡೆಗುಡದ ಮನಂ ಮಾತಂ
[೬]ಮಡ[೬]ಗುವ [೭]ಪರಿ[೭] ಸೊಗಯಿಸಿತ್ತು ಪಂಕಜಮುಖಿಯೊಳ್ ೨೨

೧-೧ ಕಾಮದಿಂ (ಕಾ ಬೆ ದಾ ಅ ಕ ಗೊ ಡ ಸೆ). ೨-೨ ಸುಖೋನ್ನತೆ (ದಾ ಯು). ೩-೩ ಕೊರಗುವ (ಬ ಯ ಬೆ ಕೊ) ೪-೪ ಮೇನಕೆಯಾ (ಬ ಯ ಬೆ ದಾ ಅ ಗೊ ಗ ಸೆ). ೫-೫ ಜಡ (ಯ ದಾ ಸೆ) ೬-೬ ಮುಡು (ಕಾ). ೭-೭ ನುಡಿ (ಬೆ ಬ ಗೊ ಗ ಸೆ); ಮುಡಿ (ಅ).

ಮಾನಿನಿಯಾ ತೆಱದಿಂ ಸಂ
ದಾ ನಾಲ್ಕುಂ ದಿವಸಮಿರ್ದು [೧]ಬಳಿಯಿಂ[೧] ಶುದ್ಧ
ಸ್ನಾನಾಂಗೀಕೃತವಿಮಳ
ಶ್ರೀನಿಧಿ ಮೇನಾಲತಾಂಗಿ[೨] ಕಣ್ಗೆಸೆದಿರ್ದಳ್[೨] ೨೩

ಬೆಳಗಿದ ಮಣಿಮುಕುರದವೋಲ್
[೩]ಜಳದಂಗಳಗಲ್ದ[೩] ಚಂದ್ರಕಳೆವೋಲ್ ಪುಟವಿ
ಟ್ಟಳವಟ್ಟ ಮಿಸುನಿವೋಲ್ ಮಂ
ಗಳನಿರ್ಮಳರುಚಿರರೂಪೆ [೪]ಯೊಪ್ಪುತ್ತಿರ್ದಳ್[೪] ೨೪

ಮಹಾಸ್ರಗ್ಧರೆ

ಸುಲಿಪಲ್ ಬಿಂಬಾಧರಂ ರಾಜಿಪ ನಯನಯುಗಂ ಚಂಪಕಾ[೫]ಮೋದಿತಂ[೫] ನಿ
ರ್ಮಲವಕ್ತ್ರಂ ಶ್ರೀಲಲಾಮಂ ಸುರುಚಿರವರವಕ್ಷೋಜಯುಕ್ತಾಂಗರಾಗಂ
ವಿಲಸಿತ್‌ಕಕ್ಷಾಂತದೊಳ್ ಪೂಸಿದ ಮೃಗಮದಮುದ್ಯದ್ದುಕೂಲಂ ಪ್ರಸೂನೋ
ಜ್ಜ್ವಲಧಮ್ಮಿಲ್ಲಂ ಸರಾಗಂ ಮೆಱೆಯೆ ನಿಜಪತಿಧ್ಯಾನದೊಳ್ ಮೇನೆಯಿರ್ದಳ್ ೨೫

ಇರೆ ಕುಸುಮಮಾಲೆಯಲ್ಲಿಗೆ
ವರಮಧುಕರನೆಯ್ದೆ ಬರ್ಪ ತೆಱದಿಂ ಬಂದಂ
ಗಿರಿರಾಜಂ ಸ್ಮರ[೬]ರಾಗಾ
ತುರಭರಭರಿತಂ ರತಾರ್ಥಿ[೬] ಮೂರ್ತಿವಿಳಾಸಂ ೨೬

ಅಂತು ಬಂದು ಸಜ್ಜನಸ್ನೇಹದಿಂ ಸಜ್ಜೆವನೆಯಂ ಪೊಕ್ಕು ಹಂಸತೂಳತಳ್ಪದ ಮೇಲೆ ಮೇನೆಯುಂ ತಾನುಂ ಕುಳ್ಳಿರ್ದು ಬಳ್ಳಿವರಿವ ನೇಹಂ ಕುಡಿವರಿದು ನಿಮಿರೆ ಸುಖದ ಸೊಂಕು ವಿಕಾಸಮನೆಯ್ದೆ ಸಹಜಾಮೋದಂ ಸೊಗಸನೀಯೆ ನೀಡಾಗದೆ ಗಾಢಾಲಿಂಗನಕ್ಕಾತುರಿಸುವಲ್ಲಿ

ಲವಲವಿಸುವ ನೋಟಂ ಕೆ
ತ್ತುವ ತೋಳ್ ಕಂಪಿಸುವ ಹಸ್ತಮೊಗೆವ ಬೆಮರ್ ಪೊ
ಣ್ಮುವ ಪುಳಕಮುಣ್ಮುವಶ್ರುಗ
ಳವತರಿಸುವ ಗದ್ಗದಂ ಮನೋಹರವಾಗಳ್ ೨೭

೧-೧ ಬಳಿಕಂ (ದಾ ಅ ಸೆ) ೨-೨ ಯೊಪ್ಪುತ್ತಿರ್ದಳ್ (ಬ ದಾ ಅ ಬೆ ಅ ಗೊ ಗ). ೩-೩ ಜಳದಂಗಳನಗಲ್ದ (ಕಾ ದಾ ಬೆ ಸೆ) ೪-೪ ಕಣ್ಗೆಸೆದಿರ್ದಳ್ (ಕಾ ಕ ಅ ಗೊ ಡ ಗ ಸೆ). ೫-೫ ನಾಸಿಕಂ (ದಾ ಕಾ ಅ ಕ ಗ ಸೆ). ೬-೬ ರಾಗಾತುರತರಭರಿತಾಂತರಾರ್ತಿ (ಕಾ ಯು).

ಚಂಪಕ

ಬರೆತೆಗೆದಪ್ಪಿಯಪ್ಪಿ ಮುದದಿಂ ಮೊಗದೊಳ್ ಮೊಗಂ[೧]ಮಿಕ್ಕಿಯಿಕ್ಕಿ[೧] ಸು
ಯ್ಯೆರಲೆಡೆಯಾಡೆ ಜಿಹ್ವೆ ನಲಿದಾಡೆ ಸುಖಂ ಸುಳಿದಾಡೆ ಲೀಲೆ ಮೋ
ಹರಿಸೆ ಗಳಂ ಚಮತ್ಕರಿಸೆ ಗದ್ಗದಮಾಂತಿರೆ ಕಂಪನಂ ಕೊನ
ರ್ತಿರೆ ಪುಳಕಂಗಳೆಳ್ದಿರೆ ಪರಸ್ಪರಮಾರ್ತದೊಳೊಲ್ದು ಕೂಡಿದರ್ ೨೮

ಪ್ರಿಯದಿಂದೆ ಮನಂ ಮನದೊಳ್
ನಯನಂ ನಯನಂಗಳೊಳ್ ಮುಖಂ ಮುಖದೊಳಗಾ
ಸುಯಿ ಸುಯ್ಯೊಳ್ ಕೆಯ್ ಕೆಯ್ಯೊಳ್
ಮೆಯಿ ಮೆಯ್ಯೊಳ್ [೨]ಬೆರಸೆ[೨] ಬೆರಸಿದರ್ ದಂಪತಿಗಳ್ ೨೯

ಅರಲುತಿರೆ ನಯನಕುಮುದಂ
ಪೊರೆಯೇಱುತ್ತಿರೆ ತನುಪ್ರಭಾಕೌಮುದಿ ಕಾ-
ಮರಸಾಬ್ಧಿ ಮಿಕ್ಕು ಮೀಱು
ತ್ತಿರೆ ನೆರೆದರ್ [೩]ಭರಿತ[೩]ಸುರತಚಂದ್ರೋದಯದೊಳ್ ೩೦

ಸುರತಸುಖಂ ತವಿಲಱಿಯದೆ
ಭರದಿಂದಮರ್ದಪ್ಪಿದಪ್ಪು ಸಡಿಲದೆ ತಮ್ಮೊಳ್
ಬೆರಸಿದ ಸುಯ್ ಬಿರ್ಚದೆ ಬೇ
ರ್ಪರಿದ ಮನಂ [೪]ಬೇಱೆ ಪರಿಯದಿರೆ ನೆರೆದಿರ್ದರ್[೪] ೩೧

ಇಂತು ಸಮಾನರಾಗಭೋಗಭರಿತಪರಮಸುಖದಿಂ ಸಂತುಷ್ಟಪುಷ್ಟಹೃದಯರಾಗಿ,

ತಿಳಿದು ಸುರತಾಂತದೊಳ್ ಕ
ಣ್ಗೊಳಿಸುವ ಗಿರಿಪತಿಯುಮೆಸೆವ ಮೇನಾಸತಿಯುಂ
[೫]ಕಳೆಯೋಡಿ[೫]ದಿಂದು ಬೆಳ್ದಂ
ಗಳನಾಂತ ಚಕೋರಿಯೆಂಬಿನಂ ಮೆಱೆದಿರ್ದರ್ ೩೨

೧-೧ ಪ್ರೊಕ್ಕಿಲಿಕ್ಕಿ (ಬ ಮ). ೨-೨ ಬೆರೆದು (ಶಾ). ೩-೩ ಭರದೆ (ಶಾ). ೪-೪ ಬೆರೆ ಪರಿಯದೆ ನೆರೆ ನೆರೆದಿರ್ದರ್ (ಓ); ಬೇಱೆ ನೆನೆಯದಿರೆ ನೆರೆದಿರ್ದರ್ (ಬ ಯ). ೫-೫ ಕಳೆಗೂಡಿ (ಶಾ ಬೆ); ಕಳಮೂಡಿ (ಅ).

ಆ ಸಮಯದೊಳ್

ಪದೆಪಿಂ ಮೇನೆಯ ಹೃತ್ಕಮ
ಲದ ಬೆಳಗಿಳಿತಂದು ಮಿಕ್ಕ ಶಕ್ತಿಸುಖದ[೧] ಸಂ
ಗದೊಳೊಂದಿ ಬಳೆಯುತಿರ್ದುದು
ಸಮಮಳರೂಪಿಂ ಭವಾನಿಯುಜ್ವಳತೇಜಂ ೩೩

ಚಂಪಕ

ತೊಳಪ ಸರೋಜ[೨]ಗರ್ಭದೊಳಗೊಪ್ಪುವ[೨] ಬಾಲಮರಾಳಪಿಂಡಮಂ
ತಳವಡೆ ಶಾರದಾಭ್ರದೊಳಗಿರ್ಪ ಲಸಚ್ಛಶಿಲೇಖೆಯಂತೆಯು
ಜ್ವಳಿಸುವ ಬೀಜದೊಳ್ [೩]ಪೊಳೆವ ಪುಣ್ಯ[೩] ಸುಧಾಲತೆಯಂತೆ ನಾಡೆ ಕಣ್
ಗೊಳಿಪಿತು [೪]ಪುಣ್ಯಗರ್ಭಮತಿಶೈವಸುಖೋದರದಲ್ಲಿ[೪] ಮೇನೆಯಾ ೩೪

ಇಂತೊಪ್ಪುತ್ತುಮಿರ್ದು

ಒಂದೆರಡು ಮೂಱು ನಾಲ್ಕ
ಯ್ದಿಂ[೫]ದಾಱೇಳೆಂಬ ಮಾಸಮಾಗಿರೆ ಗರ್ಭಂ[೫]
ಚೆಂದಂಬಡೆದೊಳಗೆಸೆದಾ
ನಂದದೆ ಬಳೆಯಿತ್ತಗಣ್ಯಪುಣ್ಯೋದರದೊಳ್ ೩೫

ಅಱಿವಿನ ಕಣಿ ಮುಕ್ತಿಯ ಮಣಿ
ಹೆಱಿಸೂಡಿದನಚ್ಚಸೊಗದ [೬]ವೊಳ್[೬] ಬೆಳೆಯುತ್ತುಂ
ತೆಱಿಪು[೭]ಗೊಳುತ್ತಿರೆ[೭] ಮೇನೆಯ
ಹೊಱಗೊಗೆದುದು ಗರ್ಭಸೂಚನಾಸೌಂದರ್ಯಂ ೩೬

೧-೧ ದುರತಸುಖದ (ಯ); ಸುಖಶಕ್ತಿಯ (ಅ). ೨-೨ ಕರ್ಣಿಕೆಯೊಳೊಪ್ಪುವ (ಬ ಯ ಅ). ೩-೩ ಬೆಳೆವಪೂರ್ವ (ಅ). ೪-೪ ಗರ್ಭಮೂರ್ಜಿತ ವಿಶಾಲಸಃಖೋದರದಲ್ಲಿ (ಬೆ ಬ ಸೆ ಯ ದಾ ಅ ಗೊ). ಪುಣ್ಯಗರ್ಭಮತಿಶೈವಸುಖೋದಯಮಲ್ಲಿ (ಕಾ). ೫-೫ ದಾಱೇಳ್ ಮಾಮಾಸಗೆ ತಳ್ತಗರ್ಭಂ (ದಾ). ೬-೬ ಬೆಳೆ (ಓ). ೭-೭ ಗೊಳುತ್ತುಂ (ಕಾ ಡ ಬೆ).

ಅದೆಂತೆಂದೊಡೆ,

[೧]ತಿವಳಿಯುವಿಳತ್ತ[೧]ಮಾದುವು
ನವನಾಭಿ ನಿವಾರಿಸಿತ್ತು ಗುಣ್ಪಂ ಕುಚಮಾಂ
ತುವು [೨]ಕುಡಿ[೨]ಗರ್ಪಂ ನೋಟಂ
ತವೆ ತಳೆದುವು ನಸುಬಳಲ್ಕೆಯಂ [೩]ಮೇನಕೆಯಾ[೩] ೩೭

ನಡೆ ನಾಡೆ ಮಾಂದ್ಯದೊಳ್ ಪುಗೆ
ಮುಡಿ [೪]ಮೂಡೆ[೪] ಕವಲ್ತು ಕದಪು ಕಾಂತಿಯನುಗೆ ಮೆಲ್
ನುಡಿ ನೀಡೆ ಮೃದುಮಧುರಮಂ
ನಡು ನೀಡುಂ ಪೊಂಗೆ ಮೇನೆಗೆಸೆದುದು ಗರ್ಭಂ ೩೮

ಮಿಗೆ ಬಾಸೆ ಬಣ್ಣವೇಱಿತು
ಸೊಗಯಿಸಿದುದು ಮೊಗರಸಂ ತುಳುಂಕಾಡುತ್ತೆ ಮೆಲ್
ನಗೆ ಸೂಸಿತ್ತು ಬಳಲ್ಕೆಯು
ನೊಗೆದುವು [೫]ನವನವ[೫]ಮನೋರಥಂ [೬]ಮೇನಕೆಯಾ[೬] ೩೯

ಇಂತು ತೀವಿದ ಗರ್ಭದಿಂ ಭಾವಭರಿತಪರಮಹರ್ಷಂ ನೆಲೆಗೊಂಡು ನಿಂದು ನಾನಾ ಸುಖದೊಳಿರ್ಪ ಮೇನಾದೇವಿಯಿರವನಂತಃಪುರದೊಳ್ ಕಳಾಪ್ರೌಢೆಯರಪ್ಪ ವಿಳಾಸಿನಿಯರ್ ಗಿರಿರಾಜಂಗೆ ತೋಱುತ್ತುಮಿರ್ದರದೆಂತೆಂದೊಡೆ,

ಚಂಪಕ

ಮುಡಿಯ ಭರಕ್ಕುರೋಜದ ಭರಕ್ಕೆ ನಿತಂಬಭರಕ್ಕೆ ನಾಡೆ ಮೆ
ಲ್ಲಡಿಯಿಡಲೆತ್ತಲಾಱದಿವೆ ಮತ್ತಮದಲ್ಲದೆ ಪುಣ್ಯಗರ್ಭದಿಂ
ಕಡುಪಿರಿದಾದ ಭಾರದೊಳದೆಂತಡಿಯಿಟ್ಟಪಳೆಂತು ನಿಂದಪಳ್
ನುಡಿದಪಳೆಂತು ನೋಡುವಳದೆಂತು ಗಿರೀಶ್ವರ ನೋಡು [೭]ಮೇನೆಯಂ[೭] ೪೦

೧-೧ ತಿವಳಿಯುಂ ಓಸದ್ಧ (ಕಾ). ೨-೨ ತುದಿ (ಕಾ). ೩-೩ ನಾಯಕಿಯಾ (ಮ ಯ); ಮಾನಿನಿಯಾ (ಕ ಡ ಬ). ೪-೪ ಕೂಡೆ (ದಾ). ೫-೫ ಪೊಸಪೊಸ (ದಾ ಬೆ ಕೊ). ೬-೬ ಮೇನಕೆಯೊಳ್ (ಗ). ೭-೭ ಮೇನೆಯಾ (ದಾ ಬೆ).

ಎಂದು ಬಿನ್ನವಿಸುತ್ತಿರೆ ಕೆಲವುಂ ದಿನದೊಳ್,

ಆದುದು ನವಮಾಸಂ ಪು
ಣ್ಯೋದರದೊಳ್ ಪಕ್ವಸಮಯಮುಲರ್ದುದು ಸುಪಥಂ
ವೇದಿಸಿದುದು ಸುಮುಹೂರ್ತಂ
ಕಾದಿರ್ದುವು ಭರದೊಳಿಮಗೆ ತಮಗೆನುತಾಗಳ್ ೪೧

ಆ ಸಮಯದೊಳ್

ಚಂಪಕ

ಅಲರ್ದ ಸರೋಜದಿಂದಮೊಗೆತರ್ಪ ಲಸತ್ಕಳಹಂಸಿಯಂತೆ ನಿ
ರ್ಮಲತರಮೇರುವಿಂದೆ ಪೊಱಪೊಣ್ಮುವ ತನ್ಮಣಿಮಾಲೆಯಂತೆ ನಿ
ಶ್ಚಲಪುರುಹೂತದಿಙ್ಮುಖದಿನೇಳ್ತರುತಿರ್ಪ ಮೃಗಾಂಕಬಿಂಬದಂ
ತಳವಡೆ ಗೌರಿ ಗರ್ಭದೊಳಗಿಂ ಬರುತೊಪ್ಪಿದಳಂದು ಮೇನೆಯಾ ೪೨

ಇಂದಿರೆ ಬಂದಿರೆ ಕೆಲದೊಳ್
ನಿಂದಿರೆಯನಸೂಯೆ ಸಪ್ತಮಾತೃಕೆಯರ್ ತಾ
ವೊಂದಿರೆ ರೋಹಿಣಿ ತಣ್ಪಂ
ತಂದಿರೆ ಗಿರಿಜಾತೆಯೋತು ಪೊಱಮಡುತಿರ್ದಳ್ ೪೩

ತೆರೆಮಸಗೆ ಕಾಂತಿ ನಾಭೀ
ಸರೋಜಮಲ್ಲಾಡೆ ಜೀವಹಂಸಿ ಬೆದಱೆ ಬಂ
ಧುರಕುಚಚಕ್ರಂ ನಡುಗು
ತ್ತಿರೆ ಮೇನೆಯ ಗರ್ಭಸರಸಿಯಂ ಪೊಱಮಟ್ಟಳ್ ೪೪

ರತಿ ನೆಲನಂಗ್ಗಡಿಸೆಯರುಂ
ಧತಿ ಕೆಯ್ಗುಡೆ ಸುಖಮನೆಯ್ದೆ ಸಾವಿತ್ರಿ ಸರ
ಸ್ವತಿ ಪೊಗಳೆ ಶಚಿ ನಲಿಯೆ ಪಾ-
ರ್ವತಿ ಮೇನೆಯ ಗರ್ಭನಿಳಯ[1]ಮಂ [1]ಪೊಱಮಟ್ಟಳ್ ೪೫

---

೧ ದಿಂ (ಯ ಕೊ).

ಇಳೆಯೊಳ್ ಪಾರ್ವತಿ[೧]ಯುದಯಿಸೆ[೧]
ಕಳೆಯೇಱುವನಿಂದು ಜೊನ್ನಮಲರ್ದುದು ಕಾಮಂ
ತಳೆದಂ ನಿಜಭುಜಬಲಮಂ
ಪುಳಕಿತಮಾಯ್ತಿಂದುಧರನ [೨]ವರ[೨]ವಾಮಾಂಗಂ ೪೬

ಚಂಪಕ

ಮದನನ ಕರ್ವುವಿಲ್ಗೆ ಮದವೇಱೆ ವಸಂತನ ಸರ್ವಭಾಗ್ಯ ಸಂ
ಪದ[೩]ದಳ[೩]ವೇಱೆ ಲೋಕನಯನೋತ್ಪಳರಾಜಿ ವಿಕಾಸವೇಱೆ ಪೆ
ರ್ಜೊದವಿದ ಮೇನೆ ತತ್ಪತಿಗಳುತ್ಸವವಾರಿಧಿ[೪]ಯೇಱೆ[೪] ಗೌರಿ ತಾ
ನುದಯಿಸಿದಳ್ ಸುಧಾಂಶುಕಳೆ ಪಶ್ಚಿಮಭಾಗದೆ ಪುಟ್ಟಿದಂದದಿಂ ೪೭

ಜಡೆಮುಡಿ ಇಂದು ಬಾಹುಬಳೆ ಭಾಳವಿಲೋಚನಮಕ್ಷಮಾಲೆಯೊ
ಳ್ಳುಡೆ ನವಕಾಂತಿ ಹಸ್ತಕಟಕಂ ಮೆಱೆಯುತ್ತಿರೆ ಪುಣ್ಯದಂತೆ ಕಂ
ಪಿಡಿವ ಸುರದ್ರುಮ[೫]ಪ್ರಸವ[೫]ದಂತೆ ಪರಾಪರಮುಕ್ತಿಯಂತೆ ಸಂ
ಗಡಿಸಿದ ಕಾಮಧೇನುವಿನವೋಲ್ [೬]ಗಿರಿರಾಜತನೂಜೆಯೊಪ್ಪಿದಳ್[೬] ೪೮

ಇಂತೊಪ್ಪುತ್ತುಮಿರ್ದು,

ಶಿವಲಿಂಗೇಕ್ಷಣಲೋಲುಪೆ
ಶಿವ[೭]ಪ್ರಸಾದಾತ್ತ[೭] ಚಿತ್ತೆ ಶಿವ[೮]ಭಕ್ತೆ[೮] ಶಿವೋ-
ತ್ಸವೆ ಶಿವಪುಣ್ಯಾಂಭೋನಿಧಿ
ಶಿವನಂ ನೆಱೆ[೯]ನಚ್ಚಿ ಮಚ್ಚಿ[೯] ಕಣ್ಮುಚ್ಚಿರ್ದಳ್ ೪೯

[೧೦]ಇರೆ ಮೇನಾಮಾನಿನಿಯುಂ[೧೦]
ಗಿರಿರಾಜನುಮಱಿಯದಂಜಿ ಗುರುಶೈವಾಚಾ
ರ್ಯರ[೧೧]ನಂದು[೧೧] ಕೇಳೆ ಶಿವಶಿವ
ಪರಮಶಿವಜ್ಞಾನದಿಂದ[೧೨]ಮವರಿಂತೆಂದರ್[೧೨] ೫೦

೧–೧ ಜನಿಯಿಸೆ (ಶಾ ಕ). ೨–೨ ನಿಜ (ಡ). ೩–೩ ವಳ (ಅ ಗೊ). ೪–೪ ಮೀಱೆ (ಶಾ ಕ) ೫–೫ ಪ್ರಸರ (ಯು). ೬–೬ ಗಿರಿಜಾವಧುವಾಗಳೊಪ್ಪಿದಳ್ (ಕ ಡ). ೭–೭ ಪ್ರಸಾದಾರ್ದ್ರ (ಯು). ೮–೮ ಶಕ್ತೆ (ಶಾ ಕ). ೯–೯ ನಂಬಿ ನಚ್ಚಿ (ದಾ ಗೊ). ೧೦–೧೦ ಇರುತಿರೆ ಮೇನಾಸತಿಯುಂ (ದಾ ಕೊ); ಇರೆಯುರೆ ಮೇನಾಸತಿಯುಂ (ಬೆ). ೧೧–೧೧ ನಲ್ಲಿ (ಯು); ಕರೆದು (ಶಾ ಕ). ೧೨–೧೨ ಮುಱಿದವರೆಂದರ್ (ಅ).

ಚಂಪಕ

ಅನುನಯದಿಂದೆ ಮುನ್ನಮವನೀತಳದೊಳ್ ಮಿಗೆ ಬಾಣನೆಂಬವಂ
ಜನಿಯಿಸಿ ಕಣ್ಗಳಂ ತೆಱೆಯದಿರ್ದೊಡೆ ಲಿಂಗಮನಂದು ತೋಱೆ ಭೋಂ
ಕನೆ ನಯನಂಗಳಂ ತೆಱೆದು ಕಂಡೊಲವಿಂ ಮೊಲೆಯುಂಡನಂತೆ ಸ
ಜ್ಜನೆ ಗಿರಿಜಾತೆ ಕಣ್ದೆಱೆಯದಿರ್ಪುದು ತಪ್ಪದಿ[೧]ದುತ್ತರೋತ್ತರಂ[೧] ೫೧

ಎನೆ ಗಿರಿರಾಜಂ ದೇವಾ
ರ್ಚನಾನಿಕೇತನಕೆ ಬಂದು ಶಶಿರವಿಶಿಖಿಲೋ
ಚನಶಿವಲಿಂಗಮನುತ್ಸವ
ಜನಿತಮನಂ ತಂದು ಮುಂದೆ ನಿಂದೊಲವಿಂದಂ ೫೨

ಅಮಮ ಪಯೋವಾರ್ಧಿಗೆ ಚಂ
ದ್ರಮನಂ ಪುಣ್ಯಕ್ಕೆ ಮುಕ್ತಿಯಂ ತೋರ್ಪಂತಾ
ವಿಮಳೆಗೆ ಗಿರಿಜೆಗೆ ಶಿವಲಿಂ
ಗಮನಧಿಕಮನಃಪ್ರಮೋದದಿಂ ತೋಱುವುದುಂ ೫೩

[೨]ತೋಱಲೊಡಂ ಕಣ್ದೆಱೆದಳ್[೨]
ಪೇಱಿದಳೆರಡುಂ ಕರಂಗಳಂ ನೊಸಲೊಳ್ ಸೊಂ
ಪೇಱಿದಳಭವನೊಳಗೆ ಬೇ
ರೂಱಿದಳಂಕುರಿಸಿ ಪಲ್ಲವಿಸಿ ಫಲವಾದಳ್ ೫೪

ಆ ಕೆಯ್ಯೊಳ್ ಮೊಲೆಯುಂಡಳ್
[೩]ಸಾಕಾರೆ[೩] ಶಿವಪ್ರಸಾದನವನೀತಮುಮಂ
ಕೆಯ್ಕೊಂಡಳ್ [೪]ಗಿರಿಜಾವಧು[೪]
ಲೋಕೈಕಾರಾಧ್ಯೆ ಮೇನೆಯೊಡನೊಪ್ಪಿರ್ದಳ್ ೫೫

೧–೧ ದುತ್ತವೋತ್ತವಂ (ದಾ). ೨-೨ ತೋಱಲ್ ಮುಸುಂಕ ತೆಱೆದಳ್ (ಕ). ೩–೩ ಸಾಕಾರ (ಕಾ). ೪–೪ ಗಿರಿಪತಿಸುತೆ (ದಾ ಸಿ ಕೊ).

ಆ ಸಮಯದೊಳ್,

ಉತ್ಪಲ

ಮೂಡಿದ ಶೀತದೀಧಿತಿಗೆ ಕಾಲಪಿತಂ ಪ್ರಸವೋತ್ಸವಂಗಳಂ
[೧]ಮಾಡುವ[೧] ಮಾಳ್ಕೆಯಿಂ[೨]ದಮರ[೨]ಭೂರುಹದಿಂ ನೆಗೆದಂಕುರಕ್ಕೆ ಕೊಂ
ಡಾಡಿ ವಸಂತಕಂ ಜನನಕರ್ಮವನೊಪ್ಪಿರೆ ಮಾಡುವಂದದಿಂ
ಮಾಡಿದನಳ್ಕಱಿಂದೆ ಗಿರಿರಾಜನಜಾತೆಗೆ ಜಾತಕರ್ಮಮಂ ೫೬

ಅಂತು ಮಾಡೆ,

ಬೆಳಗುವ ನಯನದ್ಯುತಿಯಿಂ
ಬೆಳಗುವ ಗಂಡಸ್ಥಳಂಗಳಿಂ ಬೆಳಗುವ ಕೋ
ಮಳತನುರುಚಿಯಿಂದಂ ತೊಳ
ತೊಳಗುತೆ ನಳನಳಿಸಿ ಪೊಳೆಯುತಂಬಿಕೆಯೆಸೆದಳ್ ೫೭

ಮಂಗಳಮುಖಿ ಮಾನಿನಿ ಶಿವ
ಲಿಂಗದ [೩]ಸುಖಲತೆ[೩] ಸಮಸ್ತಲಕ್ಷಣಯುತೆ ತಾ
ನಂಗೆಯ್ಯ ಪದ್ಮದಿಂ ಜರ
ಣಂಗಳ ಪದ್ಮಂಗಳಿಂದೆ ಗಿರಿಸುತೆಯೆಸೆದಳ್ ೫೮

ಆ [೪]ಪ್ರಸ್ತಾವ[೪]ದೊಳ್,

[೫]ಜಯಜಯಜಯಜಯತು ಶುಭೋ[೫]
[೬]ದಯೆ ವರನಿಧಿ ಮಾಯೆ ದೇವಿ [೬]ಶರ್ವಾಣಿ ಶಿವ
ಪ್ರಿಯೆ ಶಾಶ್ವತೆ ಶಾಂತೆ ಜಗ
ತ್ರಯಹಿತೆ ಶರಣೆನುತುಮಿರ್ದುದಬಲಾ[೭]ನೀಕಂ[೭] ೫೯

ಎಂಬ ಪುಣ್ಯಕೀರ್ತಿಯಂ ತಳೆದಿರ್ಪ ಸಮಯದೊಳ್ ಸಕಳವಾದ್ಯಂಗಳ ಮಂಗಳಧ್ವನಿಗಳುಂ ಪಿಂಗದೆ ಸುರಿವ ಸುರಕುಜದ ಸುಮನೋವೃಷ್ಟಿಯುಂ ಪುಟ್ಟಿದುದದೆಂತೆಂದೊಡೆ:

೧–೧ ಕೂಡುವ (ಯ). ೨–೨ ದೆ ಸುರ (ಕ ಶಾ). ೩–೩ ನಿಜಸುಖ (ಸೆ). ೪–೪ ಸಮಯದೊಳ್ (ಶಾ ಕ). ೫–೫ ಜಯಜಯಜಯತು ಶುಭೋದಯೆ (ಶಾ ಬೆ ಅ ಸೆ ಓ ಯ ಗೊ ದಾ). ೬–೬ ಜಯವರದೆಯೆ ಮಾಯೆ ದೇವಿ (ಓ); ಜಯತು ಮಹಾಮಾಯೆ ಜಯತು (ಶಾ ಬೆ ಸೆ ಅ). ೭–೭ ನಿಕರಂ (ಓ).

ವರಶಂಖರವಂ ಕಹಳೆಗ
ಳ ರವಂ ಡಿಂಡಿಮರವಂಗಳಾನಕದ ರವಂ
ಕರಡೆಗಳ ರವಂ ನಿಸ್ಸಾ
ಳರವಂ ಭೇರೀರವಂ ಮೃದಂಗರವಂಗಳ್ ೬೦

ಎಳನನೆಗಳ ಮಲ್ಲಿಗೆ ನನೆ
ಗಳ ಬಲ್ಲಿಗೆ ಮುಗುಳ [1]ತಂದಲಾ[1] ಮೊಗ್ಗೆಯ ಪೆ
ರ್ಮಳೆಯಲರ್ಗಳ ಬಿಱುಮಳೆ ಎಸ
ಳ್ಗಳ ಸೋನೆ ಪರಾಗಪರಿಮಳದ ತುಂತುಱುಗಳ್ ೬೧

ಅಂತು ಪುಟ್ಟಿದ ವಾದ್ಯಧ್ವನಿಗಳುಮಂ ಪೂಮಳೆಗಳುಮಂ ಗಿರಿರಾಜಂ ಕಂಡು ಮನಂಗೊಂಡು,

ಚಂಪಕ

ಇಳೆಗತಿಶೀತಳಂ ಮಿಗೆ ಗಿರೀಶ್ವರನುತ್ಸವದಿಂದೆ ತುಪ್ಪದೋ
ಕುಳಿ ನವದುಗ್ಧದೋಕುಳಿ ಹಿಮಪ್ರಜದೋಕುಳಿ ಜೇನತುಪ್ಪದೋ
ಕುಳಿ ದಧಿ[2]ಯೋಕುಳಿ ಪ್ರಸವ[2]ದೋಕುಳಿ ಕತ್ತುರಿಚಂದನಂಗಳೋ
ಕುಳಿ ಪನಿನೀರ್ಗಳೋಕುಳಿಯನಾಡಿದನುಬ್ಬಿದನೊಕ್ಕಲಿಕ್ಕಿದಂ ೬೨

ಅಂತೋಕುಳಿಯನಾಡಿ ನವೀನಶೃಂಗಾರಮಂ ಮಾಡಿ

ಆದರದಿಂ ಗೋದಾನಂ
ಸ್ತ್ರೀದಾನಂ ವಸ್ತ್ರದಾನಮಿಭಕುಲದಾನಂ
ಭೂದಾನಂ ಧನದಾನಂ
ಶ್ರೀದಾನಂಗುಡುತುಮೊಪ್ಪಿದಂ ಗಿರಿರಾಜಂ ೬೩

ಗುಡಿಗಟ್ಟಿತು ನೆಱೆ ಪುರದೊಳ್
ಮುಡುಗಟ್ಟಿತ್ತಚಲನಾಥಸಂತೋಷರಸಂ
[3]ಕುಡಿಯಿಟ್ಟುದು ಧೀಂಕಿಟ್ಟುದು
ಗಡಿಗೆಟ್ಟುದು ಪುಣ್ಯ[3]ಕೀರ್ತಿಲತೆ ಧಾರಿಣಿಯೊಳ್ ೬೪

೧-೧ ತಂಡದಾ (ಯ ಓ ಕೊ). ೨-೨ ಕುಂಕುಮಪ್ರಸರ (ಅ). ೩-೩ ಕುಡಿಯಿಟ್ಟುದು ಧೀಂಕಿಟ್ಟು।ತ್ತಡಿಯಿಟ್ಟತ್ತಾಹ (ಕಾ); ಅಡಿಯಿಟ್ಟುಂ ಧೀಂಕಿಟ್ಟುದು । ಗಡಿಗೆಟ್ಟುದು ಪುಣ್ಯ (ಯ ಗೊ). ಅಡಿಯಿಟ್ಟುದು ಧೀಂಕಿಟ್ಟುದು । ಗಡಿಗೆಟ್ಟುದು ಪುಣ್ಯ (ಅ).

ಎಂಬ[೧] ಯಶಸ್ಸಿಂಗೆ[೧] ತಾವೆ ಭಾಜನರಾಗಿ ಗಿರಿರಾಜನುಂ ಮೇನಾದೇವಿಯುಂ ಪರಿಜನಮುಂ ಪುರಜನಮುಂ ಧರಾವಳಯಮುಂ ಪರಮಸುಖದಿಂದಿರ್ಪಲ್ಲಿ,

ಚಂಪಕ

ತೊಲಗದ ಪುಣ್ಯವಾರಿಧಿಗಗಣ್ಯಮರೀಜಿಗೆ ಲೀಲೆಯಿಂದೆ ಬಂ
ದಿಳೆಯೊಳೆ ಪುಟ್ಟಿದಪ್ರತಿಮೆಗಾನತಲೋಕೆಗೆ ಶರ್ವನಾಮೆಗು
ಜ್ಜ್ವಳಿಪ ನಿಜಕ್ಕೆ ನಾಮಕರಣಂ ಗಿರಿಜಾತೆಯೆನಿಪ್ಪುದಾಗೆ ತೊ
ಟ್ಟಿಲೊಳಡುತಿರ್ದರೊಪ್ಪುವ ಸುವಾಸಿನಿಯರ್ ಮನದುತ್ಸವಂಗಳಂ ೬೫

ದಿಟದಿಂ ಜಗಕ್ಕೆ ತನ್ನಂ
ಗುಟಮೇ ತಾಯ್ದೊಟ್ಟಿಲಾದ ಗಿರಿಸುತೆಯನತಿ
ಸ್ಫುಟಮಣಿಗಣಪ್ರಭಾಸಂ
ಪುಟಮೆನಿಸುವ ರನ್ನದೊಟ್ಟಿಲೊಳಗಿರಿಸುತ್ತುಂ ೬೬

ರಾಗಂ ಮಿಗೆ ಸಪ್ತರ್ಷಿ
ಸ್ತ್ರೀಗಣಮೊಲವಿಂದೆ ಲಳಿತೆ ಬಂಗಾಳಂ ಶ್ರೀ
ರಾಗಂಗಳೊಗೆಯೆ ಪಾಡುತೆ
ತೂಗಿದರಖಿಳಪ್ರಪಂಚವಾಡಿಪ ಶಿಶುವಂ ೬೭

ಜೋ ಸಕಳತತ್ತ್ವಮಯೆ ಜೋ
ಜೋ ಸತ್ತ್ವಾದಿಗುಣರಹಿತೆ ಜೋ ನಿರ್ಮಳೆ ಜೋ
[೨]ಜೋ ಸದ್ಗುಣೆ ಜೋ ಶಾಶ್ವತೆ
ಜೋ ಸಂಪದೆ ಜೋ ವಿಶಾಲೆ ಜೋ ಶಿವೆ [೨]ಜೋಜೋ ೬೮

ಶಾರ್ದೂಲ

ಜೋಜೋ ಶಂಕರನರ್ಧಮಂ ಕವರ್ದುಕೊಳ್ವತ್ಯಂತರೂಪಾನ್ವಿತೇ
ಜೋಜೋ ಸರ್ವಜಗಚ್ಛಿಶುಪ್ರಕರಮಂ ರಕ್ಷಿಪ್ಪ ಮಾತಾಮಹೇ
ಜೋಜೋ ಶೈವಸಮುದ್ರವರ್ಧನಕರಪ್ರಖ್ಯಾತಚಂದ್ರಾನನೇ
ಜೋಜೋ ರಕ್ಷಿಸೆನುತ್ತೆ ತೂಗಿ ನಲಿದರ್ ಶರ್ವಾಣಿಯಂ [೩]ಜಾಣೆ[೩]ಯರ್ ೬೯

೧-೧ ಪುಣ್ಯಪರತೆಗೆ (ಶಾ ಕ); ಪುಣ್ಯಯಶಸ್ಸಿಂಗೆ (ಗೊ ಕೊ). ೨-೨ ಜೋ ಶಾಶ್ವತೆ ಸಂಪದೆ। ಜೋ ಶಿವೆ ಶರ್ವಾಣಿಮಾಯೆರ್ಮ ಮಂಗಳೆ (ಪಾ); ಜೋ ಸೌಭಾಗ್ಯತೆ ಶಾಶ್ವತೆ। ಜೋ ಸಂಪದೆ ಜೋ ವಿಶಾಲೆ ಜೋ ಶಿವೆ (ಯ ಗೊ); ಜೋ ಶಾಶ್ವತೆ ಜೋಜೋ ತೇ। ಜೋಸಂಪದೆ ಜೋ ವಿಶಾಲೆ ಶಿವೆ ಜೋ (ಅ). ೩-೩ ರಾಣಿ (ಜಿ ಕೊ ಸ ಪ ಗ ಓ ದಾ).

ಅಂತು ತೂಗುವ ಜೋಗುಳದ ರಾಗದೊಳಂ, ಮೊಲೆಯೂಡುವ ಮೇನೆಯ ಮಗ್ಗುಲೊಳಂ, ಸಾಗಿಸುವ ಸಾವಿತ್ರಿಯ ಸೋಗಿಲೊಳಂ, ಎತ್ತುವನಸೂಯೆಯ ಹಸ್ತದೊಳಂ, ಅಪ್ಪುವರುಂಧತಿಯುರದೊಳಂ, ನೆಗೆಪುವ ಗಾಯತ್ರಿಯ ಸೊಗಸಿನೊಳಂ, ಮುಟ್ಟುವ ರೋಹಿಣಿಯ ತಣ್ಪಿನೊಳಂ, ಸೊಂಕುವ ಕಮಳೆಯ ಸಂಪದದೊಳಂ, ಮುದ್ದಾಡಿಸುವ ಸರಸ್ವತಿಯ ಮಧುರ[೧]ವಾಣಿಯೊಳಂ[೧] ನೋಡುವ ಶಚಿಯ ಸಂತೋಷದೊಳಂ, ಪರಸುವ ಸಪ್ತಮಾತೃಕೆಯರ ಪರಕೆಯೊಳಂ, ಮಿಕ್ಕಿನಲಿವಚಲಗತಿಯುಳ್ಳಬೂಳಂ, ಸಾಮರ್ಥ್ಯದ ಬಿಳ್ತಿನಂತೆ, ಸೌಂದರ್ಯದಂಕುರದಂತೆ, ಸೌಕುಮಾರ್ಯದ ಪಲ್ಲವದಂತೆ, ಸಾಹಿತ್ಯದ ಕುಸುಮದಂತೆ, ಸತ್ಯದ ಫಲದಂತೆ, ಭೂಮಿಯ ಬಿಣ್ಪಿನಂತೆ, ಸಲಿಲದ ತಣ್ಪಿನಂತೆ, ಗಗನದ [೨]ಪೆಂಪಿನಂತೆ[೨], ಪಯೋನಿಧಿಯ ಗುಣ್ಪಿನಂತೆ, ಪವಮಾನನುಸಿರಿನಂತೆ, ಪಾವಕನ ತೇಜದಂತೆ, ಚಂದ್ರನ ಬಲದಂತೆ, ದಿವಸೇಂದ್ರನ ಕಿರಣದಂತೆ, ಪರಮಾತ್ಮನ ಪರಿಣಾಮದಂತೆ, ಲೋಕದಾಲೋಕದಂತೆ, ಸಲ್ಲಕ್ಷಣದ ಲಾವಣ್ಯದಂತೆ, ಬೆಳ್ದಿಂಗಳ ಬಣ್ಣದಂತೆ, ವಸಂತನ ವಶ್ಯದಂತೆ, ಮಲಯಾನಿಲನ ಮಹಿಮೆಯಂತೆ ಮಕರಧ್ವಜನ ಮದದಂತೆ, ಕುಸುಮಬಾಣದ [೩]ಕುಶಲದಂತೆ,[೩] ಪುಣ್ಯದ ಜೀವದಂತೆ, ಶಿವಜ್ಞಾನದ ದೇಹದಂತೆ, ಸಾಲೋಕ್ಯದ ಸವಿಯಂತೆ, ಸಾಮೀಪ್ಯದ ಸೀಮೆಯಂತೆ, ಸಾರೂಪ್ಯದ ಸುಧೆಯಂತೆ, ಸಾಯುಜ್ಯದ ನಿಲವಿನಂತೆ, ಶಿವನ ಸುಖದಂತೆ, ಮುಕ್ತಿಯ ಮುಖದಂತೆ, ಕಾಂತಿಯ ಲತೆಯಂತೆ, ನಿರುಪಾಧಿಕ ಜ್ಯೋತಿಯಂತೆ, ಸಕಲಜಗನ್ಮಾತೆಯಪ್ಪ ಗಿರಿಜಾತೆ ಶೈಶವಲೀಲೆಯನೊಳಕೊಂಡು ತೊಳತೊಳಗಿ ಬೆಳಬೆಳಗಿ ನಳನಳಿಸಿ ಬಳೆಯುತಿರ್ದಳಂತು ಮಲ್ಲದೆಯುಂ;

ಸರಸಿಜಕುಟ್ಮಳಮ್ಮಲರ್ವಂ
ತಿರೆ ಕರುಣಾನಿಳಯಮೃದುಕವಾಟಂದೆಗೆವಂ
ತಿರೆ ನಗೆ ಮೊಗಮಂ ಸವಿವಂ
ತಿರೆ ಗಿರಿಸುತೆ ಕಲ್ತಳಮರ್ದಿನಗೆಯಂ ನಗೆಯಂ ೭೦

ಘನರಜತಗಿರಿಯ ಸಿಂಹಾ
ಸನದೊಳ್ ನಲಿದಿರ್ಪ ಪರಿಯನ್ ಭವನ ತೊಡೆಯೊಳ್
ಮನದೊಲವಿಂ ಕುಳ್ಳಿರ್ಪುದ
ನನುಕರಿಸುವ ತೆಱದೊಳಗಜೆ ಕುಳ್ಳಿರೆ ಕಲ್ತಳ್ †೭೧

೧-೧ ವಾಕ್ಯದೊಳಂ (ಯ). ೨-೨ ಹೆಂಪಿನಂತೆ (ಯ) ೩-೩ ಹೊಗರಿನಂತೆ (ಸ).
†೭೧ ನೆಯ ಪದ್ಯವಾದ ಮೇಲೆ ಡ ಪ್ರತಿಯಲ್ಲಿ—ಅವನೀಸಿಂಹಾಸನದೊಳ್ । ತವೆ ಕುಳ್ಳಿರ್ದಂತೆ ಶಿವನ ತೊಡೆಯೊಳ್ ಸುಖದಿಂ ॥ ದವೆ ಕುಳ್ಳಿರ್ದಂತಾ ಕೈ । ಶವದೊಳ್ ಗಿರಿಜಾತೆಯೋತು. ಕುಳ್ಳಿರೆ ಕಲ್ತಳ್ ॥ ಎಂಬ ಪದ್ಯವಿದೆ.

ತ್ರ್ಯಂಬಕನಂ ಬಲವರಲೆರ
ಡೆಂಬೀ ಪದವೆಯ್ದುವೆಂದು ಸಾಲ್ಕುಂ ಕಾಲಿಂ
ದಂ ಬಲವಂದಪಳೆಂಬಂ
ತಂಬಿಕೆಯಂಬಳಕಿಯಾಡುವಳ್ ಶೈಶವದೊಳ್ ೭೨

ಬೀರ್ವಡದೆ ಕೂಡೆ ತಾನೆಯು
ಡರ್ವಿಳಿಕ್ಕೆಂಬ ನೈಜವಂ ಮೆಱೆಯಿ[1]ಸುತಂ[1]
ದಾರ್ವಿಂ ಭಿತ್ತಿಗಳಂ ನೆ
ಮ್ಮಿರ್ಪಳ್ ನಿಂದಗಜೆ ಬಾಲ್ಯವುಂ ನಟಿಯಿಸುತುಂ ೭೩

ಅಡಿಗಳ ಕೋಮಲತೆಗೆ ಧರೆ
ಬಿಡಲಾಱದೆ ಪೊಡವಡುತ್ತೆ ಬಿಡದಿರೆ ನಯದಿಂ
ಬಿಡಿಸಿಕೊಳುತ್ತುಂ ಮೆಲ್ಲನೆ
ನಡೆದಪಳೆನೆ ಮೆಱೆದುವಗಜೆಯೊಳ್ ದಟ್ಟಡಿಗಳ್ ೭೪

[2]ಒಡನೆಯು ಸತಿಯರ್[2] ನೆಲನು
ಗ್ಗಡಿಸೆ ಧರಾಕಾಂತೆ ಮೆಲ್ಲಡಿಗೆ ಮೃದುವಾಗು
ತ್ತೆಡೆಗುಡುತುಂ ಪುಳಕಿಸುತಿರೆ
ನಡೆಗಲ್ತಳ್ ಗಿರಿಜೆ [3]ಪರಮ[3]ನರಮನೆಯುತ್ತಲ್ ೭೫

ರಸನೆಯು ಸುಧೆಯುಂ ಮಿಗೆ ಸವಿ
ದುಃ ಸವಿದು ಮಗ್ನತೆಯುನೆಯ್ದಿ [4]ಮಧುರಾಕ್ಷರಮು[4]
ಬ್ಬಸದಿಂ ಪೊರಳುತ್ತುರುಳು
ತ್ತೊಸರ್ದಪುದೆನೆ ಗಿರಿಜೆಯೊಳ್ ತೊದಳ್ನುಡಿಯೆಸೆಗುಂ ೭೬

ಮನದೊಳಗೆ ಪುಟ್ಟಿ ಕಂಠದೊ
ಳನುನಯದಿಂ ಬಳೆದು ಜಿಹ್ವೆಯೊಳ್ ದಟ್ಟಡಿಯಿ
ಟ್ಟಿನಸುಂ ಸುಳಿಗೊಳುತುಂ ಗಿರಿ
[5]ತನಯಳ[5] ಮುಖದೊಳ್ ತೊದಳ್ನುಡಿಗಳೆಸೆದಿರ್ಕುಂ ೭೭

ಅಂತುಮಲ್ಲದೆಯುಂ,

೧–೧ ಸಿ ಬಂ (ಅ). ೨–೨ ಒಡನೆ ರಮಾಸತಿ (ಅ). ೩–೩ ಗಿರಿಶ (ಬೆ ಮು ಬ ಕೊ ಸೆ ವಾ ಯ). ೪–೪ ಪಂಚಾಕ್ಷರವು (ಅ); ಪಂಚಾಕ್ಷರಿಯು (ಗೊ). ೫–೫ ತನಯಾ (ಅ).

ಮಂಗಳಮುಖಿಯರ್ ಸಖಿಯರ್
ಸಂಗಡದಿಂ ಕೊಂಡುಕೊನೆಯುತಾಡಿಸುವೆಡೆಯೊಳ್
ಪಿಂಗದೆ ಭುಜಲತೆ ಶಿವನಾ
ಲಿಂಗನಮಂ ಪೇಳೆ ಬಾಲೆ ತೋಳಾಡಿಸುವಳ್ ೭೮

ಉಣ್ಮೆ ಶಶಿಧರನ ಬಗೆ ಮಿಗೆ
ಪೊಣ್ಮುವ ಪುಳಕಂಗಳಿಂದೆಯಂತಃಸ್ಥದೊಳೊ
ಲ್ದಾಣ್ಮನನೀಕ್ಷಿಪ ತೆಱದಿಂ
ಕಣ್ಮುಚ್ಚುವ[೧]ಳಮಳೆ[೧]ವಿಮಳಕಮಳಾಕ್ಷಿ[೨]ಯಿಂ[೨] ೭೯

ಗಿರಿಸುತೆ ಹರನಂಘ್ರಿಯನಂ
ತರಂಗದೊಳ್[೩] ಮೆಚ್ಚಿ[೩] ಪೊಱಗೆ ನೋಳ್ಪಾಸೆಯೊಳಾ
ಚರಣಾರುಣೋದಯಕೆ ತಾ
ವರೆಯಲರ್ದವೊಲಂದು ಮುಂದೆ ಕಣ್ದೆಱೆದಿರ್ದಳ್ ೮೦

ಮತ್ತಮಾ ಶೈಶವದಲ್ಲಿ.

ವರ[೪]ಭಾಳಾಕ್ಷದ[೪]ಮೇಲೊಂ
ದ್ಧುರುತರ[೫]ನಿಟಿಲಾಕ್ಷಮೊ[೫]ಗೆದುದೆಂಬಂತಿರೆ ಶಾಂ
ಕರಿಗೆಸೆದುದು ಮುಂದಲೆಯೊಳ
ಗರಳೆಲೆ ಬಹುರತ್ನನೂತ್ನಕಾಂತಿ[೬]ಪ್ರಕರಂ[೬] ೮೧

ನೋಡಭವವಲ್ಲಭೆಯ ಕಿವಿ
ಗೂಡಿದೆವತಿಸಫಲವಾದೆವೆನುತಂ ಕುಣಿವಂ
ತಾಡುವ ಗಿರಿಜೆಯ ಮೊಗದೊಡ
ನಾಡುವ ಹೊನ್ನೋಲೆವಿಡಿದು ಪೊಸಮಾಗಾಯ್ಗಳ್ ೮೨

೧-೧ ಳಬಳೆ (ದಾ ಯ ಕೊ). ೨-೨ ಯೊಳ್ (ಓ). ೩-೩ ಮುಚ್ಚಿ (ಶಾ ಬೆ) ೪-೪ ಭಾಳಾಕ್ಷಿಯ (ಶಾ ಬೆ); ತರಳಾಕ್ಷದ (ಓ). ೫-೫ ವಿಮಳಾಕ್ಷಿಯೊ (ಶಾ ಕ ಬ ಬೆ ಯ ಅ ಗೊ ಡ ಗ) ೬-೬ ಪ್ರಸರಂ (ಯ ಅ ಗೊ); ಗಳಿಂದಂ (ಶಾ ಕ ಡ).

ಶಿವನಂ ಬಿಡದಪ್ಪುವ ತೋ
ಳಿವನಪ್ಪಿ ಕೃತಾರ್ಥರಪ್ಪೆವೆಂಬಂದದೊಳಾ
ನವರತ್ನದ ರವೆಯದ ಬಂ
ದಿ ವಿರಾಜಿಸು[1]ತಿರ್ಪುದಪ್ಪಿಯಗಜೆಯ ತೋಳಂ[1] ೮೩

ಒದವಿರ್ದ ಸಕಲ ಲಾವ
ಣ್ಯದ ಸಿರಿ ಕೆಯ್ಸಾರ್ದದರ್ಕೆ ಕಂಕಣಮಂ ಕ
ಟ್ಟಿದವೊಲ್ ಮೆಱೆದುವು ವರ ಹ
ಸ್ತದೊಳೆಸೆವಂಬಿಕೆಯ ಸುಕರಮಣಿಮಯಕಟಕಂ ೮೪

ಪುರಮಥನನ ವರಕೀರ್ತ್ಯಂ
ಕುರಮಾ ಗಿರಿಸುತೆಯ ವದನದೊಳ್ ಮೊಳೆತುದು ಸಾ-
ದರದಿಂ ತಾನೆಂಬಂತಿರೆ
ಕರಮೆಸೆದುದು ವಿಮಳಮೌಕ್ತಿಕಂ ನಾಸಿಕದೊಳ್ ೮೫

ಅನವಧಿಗುಣನಿಧಿ ಪಾರ್ವತಿ
ಜನಿಯಿಸೆ ತಾನಱಿದು ಬಂದು ಚಂದ್ರಾಭರಣಂ
ಮನವೊಸೆದು ತಾಳಿಗಟ್ಟಿದ
ನೆನೆ ಮೆಱೆದುದು ಕೊರಲೊಳೇಕಮುಖರುದ್ರಾಕ್ಷಂ ೮೬

ಈ [2]ಶಶಿಮುಖಿ[2] ದಿಟದಿಂ ವ್ಯಾ
ಘ್ರಾಸುರಹರನರಸಿಯೆಂಬುದರ್ಕಿಡೆ ಕುಱುಪೆಂ
ಬಾ ಸೈಪನಱಿಪುವಂತಿರೆ
ಭಾಸುರಮಾಯ್ತ್ತರರೆ ಪುಲಿಯುಗುರ್ ನಗಸುತೆಯೊಳ್ ೮೭

ಹೆಱೆಸೂಡಿದನ ಮನವನೀ
ತೆಱದಿಂದಂ ಸುತ್ತುವಳ್ ಭವಾನಿಯೆನಿಪ್ಪಾ
ತೆಱನಂ ತೋಱುವ ತೆಱದಿಂ
ಮೆಱೆವುಡಿಗೆಯ ಮೇಲೆ ಸುತ್ತಿದುಡೆವಣಿ [3]ತೋರ್ಕುಂ[3] ೮೮

೧–೧ ತಿರ್ಪುವಲ್ಲಿ ಗಿರಿಜೆಯ ತೋಳೊಳ್ (ಕ ಕಾ ಸ); ತಿರ್ಪುವಪ್ಪಿ ಗಿರಿಜೆಯತೋಳಂ (ಯ). ೨–೨ ಸುಂದರಿ (ಕ). ೩–೩ ಯೆಸೆಗುಂ (ಕಾ ಬಿ ಅ ಓ).

ಬಿಡೆವಿನ್ನೀ ಗಿರಿಜೆಯ ಮೆ
ಲ್ಲಡಿಗಳನೆಂದಖಿಳವೇದಮುಲಿವಂತೆ ವಲಂ
ನಡೆವೆಡೆಯೊಳಗುರ್ಬಿಂ ಬೊ
ಬ್ಬಿಡುವಂದುಗೆ ಗೆಜ್ಜೆ ಸಜ್ಜನೆಗೆ ಸೊಗಯಿಸುಗುಂ ೫೯

ಇಂತು ಸಕಲಸೌಂದರ್ಯವುಂ ಬೀಱುವ ಬಾಲದುಡಿಗೆವೆರಸು ಲೀಲೆ ಮಿಕ್ಕು,

ತರದಿಂ ಗೆಜ್ಜೆಗಳುಲಿಯು
ತ್ತಿರೆ ಮಾಂಗಾಯುಲುಗೆ ಮೂಡೆ ಮೆಲ್ಲನೆ ನಲವಿಂ
ಪರಿಪರಿದು ಪೋಗಿ ಗಿರಿಸುತೆ
ಹರಿಸಂ ಮಿಗೆ ಹರನ ನಿಳಯದೊಳ್ ನೆಲೆಸಿರ್ದಳ್ ೬೦

ನಲಿವಳ್ ನಗುವಳ್ ರಾಗಿಪ
ಳುಲಿವಳ್ ಮುದ್ದಿಸುವಳಳುವಳಪ್ಪುವಳಂತಿಂ
ತೊಲೆವಳ್ ನಿಲ್ವಳ್ ಮೇನೆಯ
[೧]ವೊಲೆಯುಂ[೧] ಮಱೆದಭವನಾಟದೊಳ್ ಸಂದಿರ್ದಳ್ ೬೧

ಇಂತಾರುಮಂ ಬಗೆಯದೆ ನೆರಮಂ ಪಾರದೆ ಪೋಗಿ ಪರಮಪ್ರೀತಿಯಿಂ ಹರನಾಲಯದೊಳ್ ಗಿರಿಜಾತೆಯಿರ್ಪುದುಂ ಗಿರಿರಾಜಂ ಕಂಡು ಮನಂಗೊಂಡು ಜಡೆ ಮುಡಿಯ ಜಾಣೆಗೆ [೨]ಭಾಳತಳದ ಭಾಮಿನಿಗೆ[೨] ತ್ರಿಲೋಚನದ ಲಲನೆಗೆ ಕರ್ಣಪಾಲಿಕೆಯ ಕಾಮಿನಿಗೆ ಕಪೋಳವಿಪುಳೆಗೆ ನಗೆಗಣ್ಗಳ [೩]ನಲ್ಲೆಗೆ[೩] ನಾಸಿಕದ ನೀಱೆಗೆ ಬೆಳರ್ವಾಯ ಭಾಗ್ಯನಿಧಿಗೆ ಸಿರಿಮೊಗದರಸಿಗೆ ತೊದಳ್ನುಡಿಯ ಸದಮಳೆಗೆ ಕಂಬುಗ್ರೀವದ ಕಲ್ಯಾಣಿಗೆ ಪೇರುರದ ಪಾರಿಜಾತಕ್ಕೆ ನಳತೋಳ ನಿಜಕ್ಕೆ ಹಸ್ತಕಡಗದ ಹರಿಣಾಕ್ಷಿಗೆ ಬಡನಡುವಿನ ಬಾಲೆಗೆ ಸುಳಿನಾಭಿಯೆಳೆಯಳ್ಗೆ ಎಸೆವುಡಿಗೆಯ ಪೊಸಚೆಲ್ವೆಗೆ ನುಣ್ದೊಡೆಯ ನೂತನೆಗೆ ಕಿಱುದೊಡೆಯ ಕಾಮಧೇನುಗೆ ಮೃದು [೪]ತಳದ[೪] ಮಂದಯಾನೆಗೆ ಗೆಜ್ಜೆಗಳ ಸಜ್ಜನೆಗೆ ಅಂದುಗೆಯಾನಂದೆಗೆ ನೇವುರದ ಭಾವಕಿಗೆ, [೫]ಪಾಡಗ[೫]ದ ಪರುಷಕ್ಕೆ ಉಡಿಗೆಯ ಮೃಡಾಣಿಗೆ ಉಡೆವಣಿಯುತ್ಸಾಹಕ್ಕೆ ಕರವಲಯದ ಪರ[೬]ಬೊಮ್ಮಕ್ಕೆ[೬] ಹೊಂಗಡಗದ ಲಿಂಗವಂತೆಗೆ ತೋಳಬಂದಿಯ ಬಾಲಕಿಗೆ ಪುಲಿಯುಗುರ ಸುಲಲಿತೆಗೆ [೭]ನೇವಳದ[೭] ನಾಯಕಿಗೆ ರನ್ನದಾಳಿಯ

೧-೧ ಸಲೆ ತಾ (ಕ ಡ). ೨-೨ ಭಾಳನೇತ್ರನ ಸ್ಥಳದ ಭಾಮಿನಿಗೆ (ದಾ); ಭಾಳಸ್ಥಳದ ಭಾಮಿನಿಗೆ (ಕ ಶಾ); ಭಾಳತಳಭಸಿತದ ಭವಾನಿಗೆ (ಅ). ೩-೩ ನಲವಿಂಗೆ (ಅ). ೪-೪ ಪದದ (ಶಾ ಕ). ೫-೫ ಸೂಡಗ (ಶಾ ಕ ಯ ಗೊ). ೬-೬ ಬ್ರಹ್ಮಕ್ಕೆ (ಶಾ). ೭-೭ ನೇವಣದ (ಶಾ).

ರಾಜಹಂಸೆಗೆ ಮಾಗಾಯ್ಗಳ ಮುಗ್ಧೆಗೆ ಹೊನ್ನೋಲೆಯ ಚೆನ್ನೆಗೆ ಮೂಗುತಿಯ ಮುಗುಳ್ಗೆ ಅಂಜನದಮೃತಕ್ಕೆ ತಿಲಕದ ಲಲಿತೆಗೆ ಅರಳೆಲೆಯ ತರಳೆಗೆ ಸೂಸಕದ ಸುಮ್ಮಾನೆಗೆ ರುದ್ರಾಕ್ಷಿಯ ಭದ್ರಾಂಗಿಗೆ ವಿಭೂತಿಯ ವಿಳಾಸನಿಧಿಗೆ ಭಕ್ತಿಯ ಭಾವಕ್ಕೆ ಅಱಿವಿನನಯವಕ್ಕೆ ಶಿವಜ್ಞಾನದ ಸೀಮೆಗೆ ವೈರಾಗ್ಯದ ಮೇರೆಗೆ ಪರಮೈಶ್ವರ್ಯದ ಪುಣ್ಯಕ್ಕೆ [೧]ಲೋಕದ ಲೋಚನಕ್ಕೆ[೧] ಸಾಕಾರದ ಸುಧೆಗೆ ಪಶುಪತಿಯ ಪಟ್ಟದ ಮಹಾದೇವಿಗೆ ಸಕಳ ಜಗನ್ಮಾತೆಗೆ ಸಕಳ ಬ್ರಹ್ಮಾಂಡಮಂ ರಕ್ಷಿಸುವ ರುದ್ರಾಣಿಗೆ ರಕ್ಷಣಾರ್ಥಂ ತಂದೆ ನಿಯಾಮಿಸಿ ಕೊಟ್ಟ ದಂಡಿಗೆಯ ಧವಳ-ಛತ್ರದ ಅಂಗರಕ್ಷಕರ ಸಹವಾಸಿಗಳ ದಾದಿಯರ ಪಡಿಯಱಿತಿಯರ ಚಾಮರದ ಸೀಗುರಿಯ ಹಡಪದ ಮಡಿವರ್ಗದ ಅಂಜನದ ಕನ್ನಡಿಯ [೨]ಕಳಶದ[೨] ಸಿರಿಮುಡಿಯ ಸಿಂಗರದ ಸಾದಿನ [೩]ಕುಸುಮಕುಳದ[೩] ಕತ್ತುರಿಯ ಕರ್ಪೂರದ ಶ್ರೀಖಂಡದ ರಾಜಶುಕಪಠಣದ ಹಂಸ[೪]ರಕ್ಷಣದ[೪] ಮಯೂರನರ್ತನದ ಲೀಲಾಂಬುಜದ ರತ್ನ-ಕಂತುಕದ ವಿಳಾಸಿನಿಯರ ಹರಿದ್ರಾಭರಣದ ಚರಣಪ್ರಕ್ಷಾಳನದ ಕದಂಬಫಲಭಾರದ ಮಂಗಳಾರತಿಯ ಮಾನಿನಿಯರಾದಿಯಾದ ಪುಣ್ಯಾಗಣ್ಯ ಲಾವಣ್ಯಮಯಸಮ್ರಾಜ್ಯ-ಪರಿಚರ್ಯಾಪಟುಗಳೆನಿಸಿದ ಷೋಡಶಸಹಸ್ರವಿಳಾಸಿನಿಯರ್ವೆರಸು ನಡೆತಂದಪೂರ್ವ-ಸರ್ವವಿದ್ಯೆಗಳನಭ್ಯಾಸಂ ಮಾಡದೊಡಂ ಮುನ್ನಿನಂತೆ ಸಹಜವಾಗಿ ನೆಲಸಿ ನಿಲೆ ವಿಹಿತನವೀನಕ್ರೀಡೆ ಬಾಲ್ಯಮಂ ಸವಿದಪುದೆನೆ ಸಲ್ಲೀಲೆಯಿಂ [೫]ಶೈಲಾತ್ಮಜೆ[೫] ಕೇಳೀವನಂಗಳಂ ಪುಗುತಂದು,

ಉತ್ಪಲ

ಎಲ್ಲಿ ಸರೋಜಮೆಲ್ಲಿ ವಿಮಳೋತ್ಪಲಮೆಲ್ಲಿ ಲತಾವಿತಾನದೊ
ಳ್ಪೆಲ್ಲಿ ವನಂಗಳೆಲ್ಲಿ ಕೃತಕಾಚಳಮೆಲ್ಲಿ ವಿಶಾಲಮಪ್ಪ ತ
ಣ್ಪೆಲ್ಲಿ ತಟಾಕಮೆಲ್ಲಿ ಪುಳಿನಸ್ಥಳಮೆಲ್ಲಿ ನದೀನದಾಳಿ ತಾ
ನಲ್ಲಿ ಭವಾನಿ ಭಕ್ತಿ ಮಿಗೆ ಭಾವಿಸಿ ಭರ್ಗನನೊಲ್ದು ಪೂಜಿಪಳ್ ೬೨

ಕಣ್ಮಲರಿಂದಶ್ರುಜಲಂ
ಪೊಣ್ಮುತ್ತಿರೆ ತನುವಿನಲ್ಲಿ ಪುಳಕಂ ಸಾಲ್ಗೊಂ
ಡುಣ್ಮುತ್ತಿರೆ ಗಿರಿಪತಿಸುತೆ
ನುಣ್ಮಳಲಿಂ ದಿವ್ಯಲಿಂಗಮಂ ವಿರಚಿಸುವಳ್ ೬೩

೧-೧ ಲೋಕದಾಲೋಕನಕ್ಕೆ (ಕಾ ದಾ ಬೆ ಕ) ೨-೨ ಕರಗದ (ಮ ಬ ಗೊ ಕೊ ಅ ದಾ ಯ). ೩-೩ ಮೃಗಮದದ (ಕಾ ಬೆ ದಾ ಕ ಸ). ೪-೪ ಯಾನದ (ಅ). ೫-೫ ಶೈಲರಾಜಾತ್ಮಜೆ (ಯ).

ವಿರಚಿಸುವ ಲಿಂಗದೊಳ್ ಮೃದು
ಕರಾಂಗುಲಿಸ್ಪರ್ಶಸುಖಮನೆಳಸುತೆ ಶರ್ವಂ
ಪರಿತಂದು [1]ನಿಲ್ವನೆಂದೊಡೆ[1]
ಗಿರಿಜೆಯ ಸೌಭಾಗ್ಯದಿರವನಾರ್ ಬಣ್ಣಿಸುವರ್ ೯೪

ಇಂತು ಸೌಕುಮಾರ್ಯಶೃಂಗಾರಮನಾಂತು,

ಹಿಮಕರಕಿರಣಾವಳಿಗಳ್
ಕುಮುದದ ಸೋಂಕಿಂದೆ ಕಂಪನಪ್ಪಿದು[2]ವೆನೆ ವಿ-
ಭ್ರಮ[2]ಮಲ್ಲಿಕಾನಿಕಾಯದೆ
ಕಮಳಾನನೆ ವಿಮಳಲಿಂಗಮಂ ಪೂಜಿಸುವಳ್ ೯೫

ತರಣಿಯ ತರುಣಕಿರಣಮಂ
ಬುರುಹ[3]ಪರಿಷ್ವಂಗದಿಂದೆ[3] ಪರಿಮಳಮಂ [4]ಪೊ[4]-
ತ್ತಿರಲ್ದಪುವೆನಿಸುವ ಸಂಪಗೆ
ಯಲರಿಂದಂ ಗಿರಿಜೆ ಹರನನೊಲ್ದರ್ಚಿಸುವಳ್ ೯೬

ತರಣಿಯ ಮಧುಕರನಿಕರದ
ಮರುತನ ಕಾಲ್ದುಳಿಯಿಮೆಂದು ಪೂವಂ ಬಿಟ್ಟಾ
ಗಿರಿಸುತೆ ಮನಃ[5]ಕುಸುಮದಿಂ[5]
ಪರಮನನೇಕಾಂತಭೂಮಿಯೊಳ್ ಪೂಜಿಸುವಳ್ ೯೭

ಅಂತುಮಲ್ಲದೆ,

ವನರುಹನಾಳಂ [6]ದಂಡಂ[6]
ವನರುಹನವಪತ್ರ[7]ವೊಂದೆ[7] ಪೊಸಸೊರೆ ಮತ್ತಾ
ವನರುಹಸೂತ್ರಂ ತಂತ್ರಿಗ
ಳೆನೆ ಶಿವನಂ ಜಾಣೆ ಬೀಣೆಯಿಂ ಕೇಳಿಸುವಳ್ ೯೮

ಇಂತು ಬಾಲಲೀಲೆ ಶಿವಲೀಲೆಯಾಗಿ ಕೆಲನಱಿಯದೆ ಬಲನಱಿಯದೆ ಪಸಿವಱಿಯದೆ ತೃಷೆಯಱಿಯದೆ ದೆಸೆಯಱಿಯದಿರುಳ್ ಪಗಲಱಿಯದೆ ಪರಿಜನಮಂ ಪರೀಕ್ಷಿಸದೆ ಶಿವನಂ ಮರುಳ್ಗೊಂಡು ಭವಾನಿಯಿರೆ ಕಂಡು

೧–೧ ನಿಲ್ವನೆನೆ ವರ (ಕಾ ಕ ದಾ). ೨–೨ ವೆನಿಪುತ್ತಮ (ಕಾ ಕ ಬೆ ದಾ ಅ ಡ). ೩–೩ ಪರಿಸ್ಪಂದದಿಂದೆ (ದಾ ದ). ೪–೪ ಪೆ (ಕಾ). ೫–೫ ಕಮಲದಿಂ (ಯ). ೬–೬ ಪಂಡಿಗೆ (ಕಾ ಬೆ ದಾ ಅ ಓ). ೭–೭ ಯುಗದ (ಯು).

ಕೌತುಕಂಗೊಂಡು [೧]ಸಹಚರಿಯರ್[೧] ತವಂತವಗಂಜಿ ಭಾರತಿಗೋರನ್ನಳಪ್ಪ ನಾರಿಯೊರ್ವಳಂ ಗಿರಿರಾಜನಲ್ಲಿಗೆ ಭರದಿಂ ಕಳುಪಿದೊಡಾ ತರುಣಿ ಭೀತಿಯಿಂ ಪರಿತಂದರಮನೆಯಂ ಪೊಕ್ಕೋಲಗದೊಳ್ ನಿಂದು ನಗಾಧಿಪಂಗೆ ನಯಂ ಮಿಗೆ ಭಯಭಕ್ತಿಯಿಂ ಮೆಯ್ಯಿಕ್ಕಿ ಕೆಯ್ಮುಗಿದು ನಿಂದು,

ಉತ್ಪಲ

ದೇವ ಕುಮಾರಿ ಬಾಲೆ ಸುಕುಮಾರಿ ಸಮರ್ಥೆಯತಿಸ್ವತಂತ್ರೆ ನಾ
ನಾವಿಧಶೈಲರಾಜಿ ನವರಾಜಿ ಸರೋವರರಾಜಿ ಸಲ್ಲತಾಂ
ತಾವಳಿ ಸೈಕತಾವಳಿ ಲತಾವಳಿಯೆಂಬಿವಱಲ್ಲಿ ಸಂತತಂ
ದೇವರ ದೇವನಂ ಶಿವನನರ್ಚಿಸುತಿರ್ದಪಳೊಲ್ಲ[೨]ಳೇ[೨]ನುಮಂ ೯೯

ದೇವಿಯ ಮೊಲೆವಾಲಂ ಪರಿ
ಭಾವಿಸಲಾರಯ್ಯುಳಂಜಳಳ್ಕಳ್ ವನದೊಳ್
ತೀವಿರ್ದ ಗುಲ್ಮಲತೆವೃ
ಕ್ಷಾವಳಿಯೊಳ್ ಲಿಂಗ[೩]ಪೂಜೆಯೊಳ್ ಸಂದಿರ್ಪಳ್[೩] ೧೦೦

ಕಲ್ಲಿನ್ನಳ್ ಮುಳ್ಳಿನ್ನಳ್
ಮೆಲ್ಲಿತ್ತಿದು ಬೆಟ್ಟತೆನ್ನಳತಿಭಕ್ತಿಯೊಳಂ
ತೆಲ್ಲಿ ಸುಖಸ್ಥಳಮುಂಟಾ
ದಲ್ಲಿ ವಿರೂಪಾಕ್ಷ[೪]ಪೂಜೆಗೀಡಾಗಿರ್ಪಳ್[೪] ೧೦೧

ಬರೆದರೊ ಬೈತರೊ ಪೊಲ್ದರೊ
ಪೊರೆದರೊ ಬೆಚ್ಚರೊ ಮಗುಳ್ಚಿ ಕರುವಿಟ್ಟರೊ ಕಂ
ಡರಸಿದರೊ ಕಡೆದರೋ ಎನೆ
ಗಿರಿರಾಜತನೂಜೆ ಪೂಜೆಯೊಳ್ ರಾಜಿಸುವಳ್ ೧೦೨

ಬೇಡೆಂದೊಡೆ ಮಾಣಳ್ ನಲಿ
ದಾಡುವಳಪ್ಪುವಳಮರ್ಚುವಳ್ ಪುಳಕಿಪ್ಪಳ್
ಮಾಡುವ ಲಿಂಗಾರ್ಚನೆಯೊಳ್
ನೋಡಳ್ ನುಡಿಯಳ್ ಭವಾನಿಯೇನೆಂದಱಿಯಳ್ ೧೦೩

೧-೧ ಸಹಚರಿಯರಪ್ಪ ಜಯಾವಿಜಯೆಗಳ್ (ಅ ಯ). ೨-೨ ದೇ (ಶಾ ಓ). ೩-೩ ಪೂಜೆಯಿಂದೆಸೆದಿರ್ದಳ್ (ಯ ದಾ ಅ ಗ). ೪-೪ ಪೂಜೆಯೊಳ್ ಸಂದಿರ್ಪಳ್ (ಗೊ ಯ); ಪೂಜೆಗೊಡಲಾಗಿರ್ಪಳ್ (ಸೆ).

ಎಂದು ಬಿನ್ನವಿಸೆ ಕೇಳ್ದು ಗಿರಿರಾಜಂ ನಿಜಾತ್ಮಜಾವಲೋಕನಹರ್ಷ[೧]ವದನಂ[೧] ಭದ್ರಾಸನದಿಂ ಭೋಂಕನೆೞ್ದು ಪೊಱಮಡುತ್ತೆ ಆರಾಧಿತಾರ್ಯಪ್ರಕರನುಂ, ದಾನಪ್ರಮೋದಿತನಾನಾದ್ವಿಜನುಂ, ತ್ಯಾಗಪರಿತೋಷಿತವಂದಿ[೨]ವ್ರಜನುಂ,[೨]ಅವಷ್ಟಂಭಿತ ಕುಂಭಿಕುಂಭಸ್ಥಳಪೂರ್ವಾಸನನುಂ, [೩]ಸಮಸ್ತಮುಕ್ತಾನೀತ[೩]ಮೌಕ್ತಿಕಾತಪತ್ರನುಂ, ಪಾರ್ಶ್ವಯುಗನರ್ತಿತಚಮರವಿಭ್ರಮನುಂ, ನವೀನನರ್ತಕೀನರ್ತನಲೀಲಾ ವಿಲಾಸೇಕ್ಷಣನುಂ, ಬಹಳಕಹಳಾರವಬಧಿರೀಕೃತದಿಙ್ಮಂಡಲನುಂ, ನಿಸ್ಸೀಮೋದ್ಧತನಿಸ್ಸಾಳನಾದನುಂ, ಮಕರಾಯಮಾನದ್ವಿರದಕುಲತರಂಗಾಯಮಾನತುರಂಗೌಘಮೇಘಾಯಮಾನ ರಥಯುತಸೇನಾಸಮುದ್ರನುಮಾಗಿ ನಡೆತರುತ್ತುಂ ಮುಂದೆ ನಿಂದು ಬಹಿರ್ವನದೊಳಗಣ ಬಾಲಚೂತಾಂಕುರಮಂ ಬಲವಂದು ಭಾವಿಸಿ ನೋಡಿ ತೀವಿದ ನೇಹದಿಂದೋವಿಯೋವಿ ನಸು ಕರ್ದುಂಕಿ ನವರಸಮಂ ಸವಿಸವಿದು ಸೊರ್ಕಿ ಪಕ್ಕಮಂ ಬಿರ್ಚಿ ಮಿಕ್ಕು ನೆಗೆದೆಳದಳಿರ ಬಳಗದೊಳ್ ಪೊರಳ್ದು [೪]ಪಾರ್ದು[೪] ನಲಿನಲಿದು ನೋಡಿ ನೋಡಿ ಮಲೆತು ನಿಂದು ಮೇಲಣ ತರುಶಾಖಮನೇಱಿ ವಿರಹಿಗಳತ್ತಲ್ [೫]ಬರಲಾಗ[೫] ಕಾಮದೇವನ ತೋಟ ಬೇಡೆಂದು ಬಿರುದೆತ್ತಿ ಕರೆವ ಕಂದರ್ಪನ ಕಹಳೆಗಳೆಂಬಂತೆ ತಂಡತಂಡದಿಂ ಕೂಗುವ ಗಂಡುಗೋಗಿಲೆಗಳಂ, ಮತ್ತಮಲರ್ದಿರದೆ ಮುಕುಳಿತಮಾಗದುಳ್ಳಲರ್ದ ಬಿರಿಮುಗುಳೊಳ್ ಭರದಿಂ [೬]ಪೊಕ್ಕು ಪೊಸಕಂಪನೆಸೆಯೆ ಪೀರ್ದು ತಣಿತಣಿದಣಿಯುರದಿಂದುರ್ಕಿ ಸೊರ್ಕಿ ಮೊರೆದು ನೆರೆದು ಮೇಗಣ್ಗೆ ನೆಗೆದು ಸಾಲ್ಗೊಂಡೇಱಿ ವನಲಕ್ಷ್ಮಿ ಪಾರ್ವತಿಗೆ ಲೀಲೆಯಿಂದೋಲಗಿಸಲೆಂದೆತ್ತಿದ ನೀಲದ ಮಾಲೆಯಂತೆ ನೆಱೆಮೆಱೆವ ಮಧುಕರಪ್ರಕರಮಂ,[೬] ಮತ್ತಂ ಸೆಳೆಗೊಂಬಿನ ತನಿವಣ್ಣಂ ತವಕದೊಳಪ್ಪಿ ರಸದೊಱತೆಯ ಸೆಱೆಯಂತಿರ್ದ ಪಣ್ಣ ಸೆರೆಯಂ ಕಂಡು ಕಣ್ಣೊಳಾಲಿಂಗಿಸುವಂತೆ ಸವಿಸವಿದು ನೋಡಿ ಚಂಚುಪುಟದೊಳೇಡಿಱಿದೆಚ್ಚು ಪಾಯ್ವ ರಸಧಾರೆಗೆ ನಾಲಗೆಯನೊಡ್ಡಿ ನಲಿನಲಿದೀಂಟಿ ತಣಿದು ತೂಗಿ ತೊಂಡುಗೆಡೆದು ವಸಂತರಾಜನ ಪಡಿಯಱರಂತೆ ವಿರಹಿಗಳಂ ಚಪ್ಪರಿಪ ರಾಜಕೀರಂಗಳಂ, ಮತ್ತಮಗಲ್ದ ಪೆಣ್ಣಂಚೆಯಂ

೧–೧ ಮನಂ (ಶಾ); ವರ್ಧನಂ (ಯ ದಾ ಅ ಕ ಸ). ೨–೨ ಜನರುಂ (ಶಾ ಯ ದಾ). ೩–೩ ಸಮುಚಿತಾನೇಕ (ದಾ ಅ). ೪–೪ ಪೊರಳ್ದು (ಶಾ ಬೆ). ಪೊರ್ದು (ಅ ಕೊ). ೫–೫ ಬರಲಾಗದು (ಶಾ ಡ); ಬರಲಾಗದಂ (ಬಾ); ಬರಲಾಗದೆಲೆಲೇ (ಅ ಸ). ೬–೬ ಮೊಗವಿಟ್ಟು ಪೊಕ್ಕು ಕರ್ಣಿಕೆಯ ನಲಿದು ಕೇಸರಮಂ ಕೆದಱಿ ಪರಾಗದೊಳ್ ಪೊರಳ್ದು ಪರಿಮಳಂ ಸರಸದಿನೀಂಟಿ ತಣಿದು ಸೊಕ್ಕಿ ಜಿನುಗಿ ಜೀವಿಸಿ ತುಱುಗಿದೆಸಳೊಳ್ ತಿರುಗಿ ಬಂದು ಸರಃಶ್ರೀಯಂಕೇಳಿಸುವ ಗಾನರಂತೆ ನೆರೆನೆರೆದು ಝುಂಕರಿಪ ಮಧುಕರ ಪ್ರಕರದಿಂ (ಯ).

ಪುಳಿನಸ್ಥಳದ ೧ಕುಸುಮರಜದ೧ ಪೊಸಪಜ್ಜೆವಿಡಿದಱಸಿ ಪೋಗಿ ಕೊಳನಂ ಪೊಕ್ಕು ಘಳಿಲನೆ ಕಂಡಮರ್ದಪ್ಪಿ ಕಮಲವನದೆಲೆದಱುಗಲಿಱುಂಬಿನೊಳನುರಾಗದಿಂ ನೆರೆವ ರಾಜಹಂಸಮಿಥುನಂಗಳಂ, ಮತ್ತಂ ಕಳ್ತಲಿಪ ತಮಾಲವನದೊಳ್ ವಿರಹಿಗಳನಱಸಲೆಂದು ಕಾಮದೇವನೆತ್ತಿಸಿದ ಕೆಯ್ದೀವಿಗೆಗಳಂತೆ ಪಲ್ಲವರಾಗದಿಂ ಪಲ್ಲವಿಸಿ ತೋರ್ಪಶೋಕದ್ರುಮಂಗಳಂ, ನಿಂದ ಲತೆಗಳನಲ್ಲಾಡಿಪ ಮಂದಾನಿಳನಂ, ಅಗಲ್ದರಂ ನಗುವಂತೆ ನಸುವಿರಿದ ದಾಡಿಮಂಗಳಂ, ಸುಳಿವ ವಿದ್ಯಾಧರಿಯರಂ, ಕುಣಿವ ನವಿಲ್ಗಳಂ ಕರೆವ ಕೊಳರ್ವಕ್ಕಿಗಳಂ, ನೆರೆವ ಚಕ್ರಮಿಥುನಂಗಳಂ, ಕಂಡು ಗಿರಿರಾಜಂ ಕೊಂಡಾಡುತಂ ಬಂದು ಮುಂದೆ ಪುಂಡರೀಕಪ್ರಕರಪರಿಮಳಾಸಕ್ತ-ಭ್ರಮರಕುಲವಿಲಸಿತಮಾದ ಕಾಸಾರತಟದೊಳ್ ಮಂದಾನಿಳನಿಂ ಪರೆದ ಪರಾಗದ ಪೀಠದ ಮೇಲಣ ನುಣ್ಮಳಲ ಶಿವಲಿಂಗಮನಗಣಿತಪ್ರೇಮದಿಂ ಸೊಗಸುಮಿಕ್ಕು ಮಿಗೆ ಪೂಜಿಸುತ್ತಿರ್ದ ಮಗಳಂ ಕಂಡು,

ಬಿಡದೇಳ್ವ ಪುಳಕತತಿಯೊಡ
ನೊಡನಾನಂದಾಶ್ರುವೊಗೆಯೆ ಬಗೆವೆರ್ಚುತ್ತಿ
ರ್ಮಡಿ ಮೂವಡಿ ನಾಲ್ವಡಿಯ
ಯ್ವಡಿ ಸಂತಸದಿಂದೆ ತಂದೆ ಮಗಳಂ ಕರೆದಂ ೧೦೪

ಶಾರ್ದೂಲ

ಬಾರೆನ್ನಾಯುವೆ ೨ಬಾರ೨ ಪುಣ್ಯತತಿಯೇ ಬಾರೆನ್ನ ಸೌಂದರ್ಯಮೇ
ಬಾರೆನ್ನಾದಿಯೆ ೨ಬಾರ೨ ೩ಶೈವ೩ನಿಧಿಯೇ ಬಾರೆನ್ನಯ ಪ್ರಾಣವೇ
ಬಾರೆನ್ನೊಲ್ಮೆಯೆ ೪ಬಾರ೪ ತತ್ವಸುಖಮೇ ಬಾರೆನ್ನ ಮಾತಾಮಹೇ
ಬಾರೆನ್ನಾಳ್ದಳೆನುತ್ತುಮೊಲ್ದು ಕರೆದಂ ಶರ್ವಾಣಿಯಂ ಶೈಳಪಂ ೧೦೫

ಇಂತು ಕರೆದ ನಿಜಜನಕಜನಿತಸ್ನೇಹರಸಾರ್ದ್ರಮಧುರಾಕ್ಷರಸಮ್ಮಿಳಿತ ಸಾತ್ವಿಕ ಸರಮಂ ಕೇಳ್ದು ಪುತ್ರೀಭಾವಮಂ ನಟಿಸಲೆಂದು ಶಿವಲಿಂಗಮಂ ಬೀಳ್ಕೊಂಡು ತಿರುಗಿ ನೋಡಿ,

ನಿಂದಿರ್ದು ನಗುತೆ ನಲಿಯು
ತ್ತಂದುಗೆ ಪೊಂಗೆಜ್ಜೆಯುಲಿವು ನೆಲನುಗ್ಗಡಿಸು
ತ್ತಂದೆಸೆಯೆ ಮಂದಯಾನದೊ
ಳಿಂದುಪ್ರಭೆ ಮುಂದೆ ಮುಂದೆ ನಡೆತರುತಿರ್ದಳ್ ೧೦೬

೧-೧ ಕಜದೊಳ್ (ಯ). ೨-೨ ಬಾರೆ (ಕಾ ಬೆ). ೩-೩ ಮುಕ್ತಿ (ಅ); ಪುಣ್ಯ (ಓ). ೪-೪ ನೀಱೆ (ಮ ಯ ಬೆ ಅ ಸೆ).

ಅರಳೆಲೆ ಭಾಳದೊಳಾಡು
ತ್ತಿರೆ ಮಾಂಗಾಯ್ಗಂಡಯುಗಳಮಂ ಮುಂಡಾಡು
ತ್ತಿರೆ ಕುರುಳ್ಗಳ್ ಕುಣಿದಾಡು
ತ್ತಿರೆ ಸತಿಯರ ನಡುವೆ ಗಿರಿಜೆ ನಡೆತರುತಿರ್ದಳ್ †೧೦೭

ನವಿಲಾಟಂ ಹಂಸೆಯ ನಡೆ
ತವೆ ಮಂದಾನಿಳನ ಸುಗತಿ ಮದಗಜಗಮನಂ
ತವತವಗಡಂಗುತಿರ್ದುವು
ನವೀನಬಾಲಕಿಯ ಮಧುರಮೃದುಪದಗತಿಯೊಳ್ ೧೦೮

ಎಂದೆನಿಪ ವಿಳಾಸಂ ಮಿಗೆ
ಮುಂದಾಡುತೆ ತೊಳಪ ಬೆಳಪ ಬೆಳತಿಗೆಗಣ್ಗಳ್
ಮಂದೈಪ ಮೆಲ್ನಗೆಯನುಗೆ
ಬಂದಪ್ಪಿದಳಗಜೆ ಸೊಗಯಿಸುತ್ತಿರೆ ಪಿತನಂ ೧೦೯

ಅಂತು ಬಂದಪ್ಪಿದಾಗಳ್

ಮಾಣಿಕವೆ ಮೌಕ್ತಿಕವೆ ಮತ್
ಪ್ರಾಣವೆ ಪೊನ್ನೊಱೆಯೆ ಪರುಷವೇ ಮುಕ್ತಿಯ ನಿ
ರ್ವಾಣವೆ ಎನುತುಂ [1]ಮೂರ್ಧ್ನಾ[1]
ಘ್ರಾಣಂ ಬೆರಸಗಲದಪ್ಪಿದಂ ಗಿರಿರಾಜಂ ೧೧೦

ಸುತ್ತಿದ ಪರಮಸ್ನೇಹದೆ
ಮತ್ತಂ ಮತ್ತಪ್ಪಿ ಪುಳಕಿಸುತ್ತುಂ ಪುಟವೇ
ಱುತ್ತುಂ ಪೊಣ್ಮುತ್ತುಂ ನಲಿ
ಯುತ್ತೆ ಗಜಾರೂಢನಾಗುತುಂ ಗಿರಿರಾಜಂ ೧೧೧

ಪೂರ್ವಾಸನದೊಳ್ ಪದೆಪಿಂ
ಪಾರ್ವತಿಯುಂ ಹರ್ಷಮೇಱೆ ಬಿಜಯಂಗೆಯ್ಯು
ತ್ತುರ್ವುತೆ ಕೊರ್ವುತೆ [2]ಪರ್ವುತೆ[2]
ಪರ್ವತರಾಜಂ ಪುರಕ್ಕೆ ತಿರುಗಿದನಾಗಳ್ ೧೧೨

† ೧೦೭ ನೆಯ ಪದ್ಯವು ಗ ಪ್ರತಿಯಲ್ಲಿಲ್ಲ. ೧–೧ ಮೂರ್ಧ್ನಿF (ಮ ಯ ದಾ ಅ ಕ). ೨–೨ ನಲವಿಂ (ಅ).

ಮಹಾಸ್ರಗ್ಧರೆ

[೧]ಒಸೆದೆತ್ತಲ್[೧] ತನ್ನ ಬೆನ್ನೊಳ್ ಬರುತಿರೆ ಚತುರಂಗಂ ಮಹಾದೇವಿ ಶರ್ವಾ
ಣಿ ಸಮಸ್ತಾಧಿಕ್ಯೆ ಪೂರ್ವಾಸನದೊಳಿರೆ ಬರುತ್ತೊಪ್ಪಿದಂ ಶೈಳಪಂ ಸಂ
ತಸದಿಂ ಭೂಭಾಗಮಂ ನೋಳ್ಪತಿಭರವಶದಿಂ ಪೂರ್ವಗೋತ್ರಾಗ್ರದೊಳ್ ತಾಂ
ಶಶಿಯುಂ [೨]ಮುಂತಿಟ್ಟು[೨] ಬರ್ಪುಜ್ಜ್ವಳವಿಮಳವಸಂತಂಬೊಲಾನಂದದಿಂದಂ ೧೧೩

ಚಂಪಕ

ಬರುತಿರೆ ಮುಂದೆ [೩]ಪಟ್ಟಣ[೩]ದೆರಳ್ದೆಸೆಯೊಪ್ಪುವ ರಾಜವೀಧಿಯೊಳ್
ನೆರೆವ ಶಶಾಂಕವಕ್ತ್ರೆಯರ ಕಣ್ಗಳ ಕಾಂತಿ ಶರೀರಕಾಂತಿಯಾ
ಭರಣದ ಕಾಂತಿ ರತ್ನಕುಲಕಾಂತಿ ದರಸ್ಮಿತಕಾಂತಿಯೆಂಬ [೪]ವಿ
ಸ್ತರಿತ[೪] [೫]ಸುಖಾಬ್ಧಿಯಂ[೫] ಸುಖದೊಳೀಸುತೆ ಬಂದ[೬]ನಗೇಂದ್ರವಲ್ಲಭಂ[೬] ೧೧೪

ಅಂತು ಬಂದು ಸಕಲರಾಜಲೋಕಂಬೆರಸು ಗಿರಿರಾಜಂ ರಾಜಧಾನಿತಿಳಕ-
ಮೆನಿಪ ರಾಜಮಂದಿರದ ಮುಂದೆ ನಿಂದು,

ಪೊಳೆವ ಗಜದಿಂದಮವನೀ
ತಳಕ್ಕೆ ನಿಜತನುಜೆವೆರಸು ಬಿಜಯಂಗೆಯ್ದು
ಗ್ಗಳಪ ಶಶಿಸೂರ್ಯ[೭]ವಂಶೋ
ಜ್ಜ್ವಳರಂ[೭] ಕಳಪುತ್ತೆ ಬಂದನಗಕುಲರಾಜಂ ೧೧೫

ಪರಿಜನವೊಡನೊಡನೊಲ್ದೊ
ಪ್ಪಿರೆ ಕೆಲಬಲ [೮]ಪಡಿತಳಾವಧಾರುಯೆನುತ್ತುಂ[೮]
ಬರುತಿರೆ ತನೂಜೆ ಸಹಿತಂ
ಗಿರಿರಾಜಂ ಸಿಂಹವಿಷ್ಟರಸ್ಥಿತನಾದಂ ೧೧೬

೧-೧ ಒಸೆದೆತ್ತಂ (ಶಾ ಅ); ಒಸೆದಿತ್ತಂ (ಬಿ). ೨-೨ ಮುಂದಿಟ್ಟು (ಶಾ ಬಿ). ೩-೩ ಪತ್ತನ (ಶಾ). ೪-೪ ವಿಸ್ತರದ (ಶಾ ಕ). ೫-೫ ಸುಧಾಬ್ಧಿಯಂ (ಅ ದಾ). ೬-೬ ನಗಾಧಿನಾಯಕಂ (ಅ) ೭-೭ ವಂಶೋ। ದ್ಭವರಂ (ದಾ). ೮-೮ ಪದತಳಾವಧಾರುರೆ-ಯೆನುತುಂ (ದಾ).

ಉತ್ಪಲ

ಹಾರಮರೀಚಿ ತತ್ಕುಚಮರೀಚಿ ಕಪೋಳಮರೀಚಿಯಾನನ
ಸ್ಮೇರಮರೀಚಿ ಲೋಚನಮರೀಚಿ ಲಲಾಟಮರೀಚಿ ದಂತವಿ
ಸ್ತಾರಮರೀಚಿಗಳ್ ತೊಳಗುವಾರತಿಗಾರತಿಗೆತ್ತು ಸುತ್ತಿ [೧]ನಿಂ[೧]
ದಾರತಿಯೆತ್ತಿದರ್ ಗಿರಿಜೆಗಂ ಜನಕಂಗಮನಂತಕಾಂತೆಯರ್ ೧೧೭

ಅಂತೆತ್ತುವಾರತಿಗಳಂ ಕೆಯ್ಕೊಂಡು ಗಿರಿರಾಜಂ ನಾನಾಹರ್ಷದಿಂ ಮೇನಾ-ದೇವಿಯುಂ ಕರೆಯಿಸೆ ಬರುತಿರ್ದಳದೆಂತೆಂದೊಡೆ,

ಚಂಪಕ

ಎಡಬಲವಂಕದೊಳ್ ನೆಲನನುಗ್ಗಡಿಪಾಳಿಯರಿಂ ವಿಳಾಸದಿಂ
ದಡಿಯಿಡುವಲ್ಲಿ ನೇವುರದ ನುಣ್ದನಿಗಾಡುವ ಹಂಸೆವಿಂಡಿನಿಂ
ಬಿಡದೆ ಮುಖಾಬ್ಜಸೌರಭಮನುಣ್ಬ ಮದಾಳಿಗಳಿಂ ವಿನೂತನಂ
ಬಡೆದತಿ[೨]ಮಾನಿ[೨] ಮೇನೆ ನಡೆತಂದು [೩]ನಿರೀಕ್ಷಿಸುತುಂ[೩] ಭವಾನಿಯುಂ ೧೧೮

ಶಾರ್ದೂಲ

ಏನೆನ್ನಾಯುವೆ ಎನ್ನಪಾರಸುಖಮೇ ಏನೆನ್ನ ಪುಣ್ಯಾಬ್ಧಿಯೇ
ಏನೆನ್ನುತ್ಸವಮೇ ವಿಳಾಸನಿಧಿಯೇ ಏನೆನ್ನ ಸೌಂದರ್ಯಮೇ
ನಾನಾಪರ್ವತದೊಳ್ ವನಪ್ರಕರದೊಳ್ ಸಂಪೂರ್ಣಕಾಸಾರದೊಳ್
ನೀನೇಕಿಂತಿರಲೇಕೆ ತಾಯೆ ಎನುತುಂ ಬಂದಪ್ಪಿಕೊಂಡೊಪ್ಪಿದಳ್ ೧೧೯

ಇಂತು ಮೊಲೆಯೊಡನೆ ಕಣ್ ತೊಱೆಯೆ ಪುಳಕದೊಡನೆ ಗದ್ಗದಂ ಪೊಣ್ಮೆ ಸ್ವೇದದೊಡನೆ ಕಂಪನಂ ಕೊನರೆ ಸಿಂಹಪೀಠದ ಸಿಂಗರದ ಶಿಶುವಂ [೪]ಮೊಗೆದಪ್ಪಿ ತೆಗೆದಪ್ಪಿ[೪] ಮೂರ್ಧ್ನಾಘ್ರಾಣಮಂ ಮಾಡಿ ಮೊಲೆಯೂಡಿ ಮೇನೆಯುಂ ಗಿರಿರಾಜನುಂ ಕಣ್ ತೀವಿ ನೋಡಿ ಮೆಯ್ ತೀವಿಯಪ್ಪಿ ಮನಂ ತೀವಿ ನೆನೆಹಿನೊಳಿಟ್ಟು ಶಶಿಕಲೆಯುಂ ಸಲಹುವಂತೆ ಸೌಕುಮಾರ್ಯಮಂ ಸುಯಿಧಾನಂ ಮಾಳ್ಪಂತೆ ಸೊಬಗಂ ಸಂವರಿಸುವಂತೆ ಬೆಳ್ದಿಂಗಳಂ ಬಣ್ಣವಿಡುವಂತೆ ಭೋಗಮಂ ಸಾಗಿಸು-ಸುವಂತೆ ಚೆಲ್ವಂ ಚಮತ್ಕರಿಸುವಂತೆ ಸಾಹಿತ್ಯಮಂ ಸಯ್ತಿಡುವಂತೆ ಪ್ರಾಣಮಂ ಪರಿರಕ್ಷಿಪಂತೆ ಜ್ಞಾನಮಂ ಬಳೆಯಿಸುವಂತೆ ಶಾಂತಿಯುಂ ಕಾಂತಿಯಿಡುವಂತೆ

೧–೧ ಬಂ (ಓ). ೨–೨ ಮಾನ್ಯೆ (ಅ). ೩–೩ ಪರೀಕ್ಷಿಸುತಂ (ಅ). ೪–೪ ಮೊಗೆದತ್ತಿ ತೆಗೆದೆಪ್ಪಿ ಬಿಗಿಯಪ್ಪಿ (ಬಿ).

ಸತ್ಯಮಂ ಸಂತವಿಡುವಂತೆ ನಿತ್ಯಮಂ ಪ್ರತ್ಯಕ್ಷಮಂ ಮಾಳ್ಪಂತೆ ಪುಣ್ಯಮಂ ಪುಟವಿಡುವಂತೆ ಮುಕ್ತಿಯಂ ಮೂರ್ತಿಗೊಳಿಸುವಂತೆ ಪಾರ್ವತಿಯಂ ಸಲಹುತ್ತು-ಮಿರೆಯಿರೆ,

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೨೦

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದ
ಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ಹೈಮವತೀಶೈಶವವರ್ಣನಂ ತೃತೀಯಾಶ್ವಾಸಂ

ಚತುರ್ಥಾಶ್ವಾಸಂ

ಪಾರ್ವತೀಯೌವನ ರಾತ್ರಿವಿಹಾರವರ್ಣನಂ

ಶ್ರೀಸಕಳಸುರಮುನೀಶ್ವರ
ವಾಸವಹರಿಕಮಲಪುತ್ರಪೂಜಿತಚರಣಂ
ಭಾಸುರತೇಜಂ ಭಕ್ತಿವಿ
ಳಾಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ೧

ಶಿವಶಿವ ನಳನಳಿಸುವ ಶೈ
ಶವದೊಳ್ ಬಳೆಯುತ್ತುಮಿರ್ಪ ಗಿರಿಜೆಗೆ ರೂಪೋ
ತ್ಸವದೊಡನೆ ಮೆಱೆವ ದಶವ
ರ್ಷವದಾಯ್ತುಲರ್ಗಣೆಗೆ ಕೂರ್ಪು ಕೂಡುವ [೧]ತೆಱದಿಂ[೧] ೨

ಇಂತಾಗೆ ಮೇನೆಯುಂ ತತ್
ಕಾಂತನುಮತಿಹರ್ಷಪುಳಕಯುತರಾಗುತ್ತುಂ
ಮುಂತಿರ್ದ ತನುಜೆಯಂ ಮನ
ದಿಂ ತೂಪಿಱಿಯುತ್ತೆ ತಮ್ಮೊಳೊಲ್ದಿಂತೆಂದರ್ ೩

೧-೧ ತೆಱದೊಳ್ (ಅ).

[೧]ಅನವದ್ಯಂ ಚರಿತಂ[೧] ಮು
ನ್ನಿನ ಪರಿ ತಾನಲ್ಲ ಬಾಲ್ಯವಿಾ ಪೋದುದೆ ಯೌ
ವನಮಿಾ ಸಾರ್ದುದೆ ಬಣ್ಣಿಸು
ವನ ಪಾಣ್ಮೆಗತರ್ಕ್ಯಮತುಳಮನುಪಮಮಧಿಕಂ ೪

ಚಂಪಕ

ನಗೆ ನಸುಲಜ್ಜೆಯೊಳ್ ತೊಡರಲಿರ್ದುದೆ [೨]ಬಲ್ನುಡಿ[೨] ಮಾಂದ್ಯಭಾವದೊಳ್
ಪುಗಲಿದೆ ಬಾಸೆ ಸಾಲಱಿಪಲಿರ್ದುದೆ ಸೂಸುವ ನೋಟವಾಸೆಯೊಳ್
ಮಿಗಲಿದೆ ತತ್ಕುಚಂ ನಿಜದ ಸೀಮೆಗೆ ರೇಖೆಯನೊತ್ತಿ ಲಜ್ಜಿಸಲ್
ಬಗೆದಿವೆ ಯೌವನೋದಯಮೊ ಬಾಲ್ಯವಿಮೋಚನಮೋ ಭವಾನಿಯಾ ೫

ಅಳಕಂ ತೆಱಪುಗೊಡಲ್ಕಿವೆ
ತಿಳಕಕ್ಕೆ ತದಾಸ್ಯಬಿಂಬಮಾದರ್ಶದೊಳಂ
ಪೊಳೆಯಲಿದೆ ನಾಭಿಮಂಡಲ
ಮೊಳಪುಗಲಿದೆ ನೋಡು ಮೇನೆಯಂಬಿಕೆಯುರವಂ ೬

ದಂತಂ ಮುಸುಂಕುಗಳೆಯು
ಲ್ಕಾಂತಿವೆ ನಡು ತನುವನೆಳಸಲಿದೆ ನುಡಿ ಮೌನ
ಪ್ರಾಂತಮನೊತ್ತುಗೊಳಲ್ಕಿದೆ
ಕಾಂತಿ ಶರೀರಮನಮರ್ಚಲಿದೆ ಪಾರ್ವತಿಯಾ ೭

ಎಂದಿಂತು ಮಗಳ ವಯಸ್ಸಂಧಿಯಂ ವಯಃಪರಿಣತರಪ್ಪ [೩]ಮಾತಾಪಿತೃ-
ಗಳ್[೩] ಬಣ್ಣಿಸುತಿರ್ಪಿನಮನುಕ್ರಮದಿಂ ಪಲಕೆಲವು ದಿನಕ್ಕೆ ಬನಮಂ ಸಹಕಾರಂ ಸಹಕಾರಮಂ ವಸಂತಂ ವಸಂತನಂ ಕಾಮಂ ಕಾಮನಂ ಇಕ್ಷುಚಾಪಂ ಇಕ್ಷುಚಾಪಮಂ ನನೆಗಣೆ ಸಾರ್ವಂತೆ ಪಾರ್ವತಿಯಂ ನವಯೌವನಂ ಸಾರ್ವಲ್ಲಿ

ನವಕುಚಕಳಶಂಗಳನೊ
ಪ್ಪುವ ಮುಖದರ್ಪಣದಿನಳಕತೋರಣದಿಂ ಪೊ
ಣ್ಮುವ ಮುಡಿಗುಡಿಯಿಂದಂ ಮಿ
ಕ್ಕ ವಯಃಪದಿಂದಗಜೆ ಯೌವನಮನಿದಿರ್ಗೊಂಡಳ್ ೮

೧-೧ ಅನವದ್ಯಚರಿತೆಯುಂ (ಅ); ಅನವದ್ಯಚರಿತದಿಂ (ಸ ಗ). ೨-೨ ಮೆಲ್ನುಡೆ (ಅ); ಬಲ್ನಗೆ (ಮ). ೩-೩ ತಾಯ್ತಂದೆಗಳ್

ಎಂಬಂತೆ ತೀವಿ ಪರ್ವಿದ
ಚುಂಬಿತಮುದಿತೋದಿತಪ್ರಕಾಶಿತಗಿರಿಶಾ
ಲಂಬಿತಗಿರಿಜಾಯೌವನ
ಮಂ ಬಣ್ಣಿ ಪೊಡುರಗಖಚರಭೂಚರರಳವೇ ೯

ಶರ್ವಾಣಿಯ ಸೌಂದರ್ಯಮ
ನೋರ್ವಂ [1]ಬಣ್ಣಿಸುವೆ[1]ನೆಂಬವಂ [2]ಗಾಂಪಂ ಪ
ನ್ನಿರ್ವರ್[2] ಭಾರತಿಯರ್ ಸಾ
ಸಿರ್ವರ್ ಫಣಿರಾಜರಾದೊಡಂ ತೀರ್ದಪುದೇ ೧೦

ಮತ್ತೇಭ

ಮದಮಂ ವಿಭ್ರಮಮಂ ವಿಲಾಸದೊದವಂ ಸೌಂದರ್ಯಮಂ ಸೌಖ್ಯಮಂ
ಸದಲಂಕಾರತೆಯಂ ಸಲಕ್ಷಣಮನಾಂತಿರ್ದಂಬಿಕಾಯೌವನಂ
ಪದೆಪಿಂ ಪೇಳ್ವೊಡದತ್ಯನೂನಪದಮತ್ಯಾಶ್ಚರ್ಯಮತ್ಯುಜ್ವಲ
ಪ್ರದಮತ್ಯೂರ್ಜಿತಮತ್ಯಸಾಧ್ಯಗುಣಮತ್ಯಾನಂದಮತ್ಯುನ್ನತಂ ೧೧

ಅತಿಮಧುರಮತಿಮನೋಹರ
ಮತಿಮಂಗಳಮತಿವಿಚಿತ್ರಮತಿಬಂಧುರಮಂ
ತತಿಸಂಭ್ರಮಮತಿವಿಭ್ರಮ
ಮತಿಯೌವನಮತಿವಿಲಾಸಮತಿ ಪಾರ್ವತಿಯಾ ೧೨

ಮತ್ತಮಾ ಪಾರ್ವತಿಯ ನವಯೌವನಂ ವಸಂತನಂತೆ ರಾಗೋದಯಂ ಮಕರಧ್ವಜನ ಮತ್ತಗಜದಂತೆ ಮಂದಯಾನಂ ಕಂದರ್ಪನ ಶಿಳೀಮುಖಕಳಾಪದಂತೆ ಜಗನ್ಮೋಹನಂ ಝಷಕೇತನನಿಕೇತನತೋರಣರತ್ನಸ್ತಂಭಂಗಳಂತೆ ಕಾಂತಿಮಯಂ ಶಶಿಕಾಂತಕೃತಕಾಚಳದಂತೆ ನಿರ್ಮಳೀಕೃತಂ ಕ್ಷೀರಾಬ್ಧಿಯ ತರಂಗದಂತುತ್ತರೋತ್ತರಂ ಕಮಲಾಕರದಂತೆ ಪ್ರಸನ್ನಗಭೀರಂ ಬಿಸಜನಾಳದಂತೆ ಭುವನಾಲಂಕಾರಂ ವನಲತೆಯಂತೆ ಸುಕೋಮಲಂ ಸುವರ್ಣಕಳಶದಂತೆ ರಮಣೀಯಂ ಸುರದ್ರುಮಶಾಖೆಯಂತೆ ಸರ್ವವಾಂಛಿತಫಲಪ್ರದಂ ಕಂಬುವಿನಂತೆ ತ್ರಿರೇಖಾನ್ವಿತಂ ಪೂರ್ಣಚಂದ್ರನಂತೆ ಕಲಾಭರಿತಂ ವ್ಯೋಮದಂತೆ ಘನಚಿತ್ರಮೆನಿಸಿರ್ದುದಂತುಮಲ್ಲದೆಯುಂ,

೧–೧ ಬಣ್ಣಿಪ್ಪೆ (ಸೆ) ೨–೨ ಗಾಂಪಂ ತಾ । ನಿರ್ವರ್ (ಕ ಮ ಗೊ); ತಾಂ ಗಾಂಪಂ । ಗೀರ್ವರ (ಬೆ ಕೊ).

ತೀವಿದ ಜವ್ವನವಮಂ ಪರಿ
ಭಾವಿಸೆ ಮಾಧುರ್ಯ[1]ಚರಿತ[1]ಮೆಡೆಗೊಂಡುದು ಸವ್
ಭಾವಂ ಚಂದ್ರಾಭರಣನ
ಜೀವಂ ಬಣ್ಣಿಪ್ಪನಾವನವನೇ ದೇವಂ ೧೩

ಅದೆಂತೆಂದೊಡೆ,

ಮನದಾಸೆ ವದನದೊಳ್ ಲೊ
ಚನದೊಳ್ ನುಡಿ ನಗೆ ಕಪೋಳದೊಳ್ ಕೋಪಂ ಪು
ರ್ಬಿನೊಳಱಿವು ಬುದ್ಧಿಯೊಳ್ ಭಾ
ವನೆ ಚಿತ್ತದೊಳಮರ್ದುವಂಬಿಕೆಗೆ ಯೌವನದೊಳ್ ೧೪

ಮಹಾಸ್ರಗ್ಧರೆ [ಸಾರ್ದುದೆಯ್ದಿ

ನುಡಿಯೊಳ್ ಜಾಣ್ ನೋಟದೊಳ್ ವಕ್ರತೆ ಪೊಸನಡೆಯೊಳ್ ವಿಭ್ರಮಂ
ತ್ರಿಡಿಯುಟ್ಟುತ್ಸಾಹ ಕರ್ಣಾಮೃತಮತಿರುಚಿರಂ ಕಣ್ಣ ಪುಣ್ಯಂ ದಿಟಕ್ಕೆ
ವರ್ಮಡಿ ವಾಣೀದೇವಿಗಂ ನೂರ್ಮಡಿ ಕುಸುಮಶರಕ್ಕಂಜೆವಿಂಡಿಂಗೆ ಸಾಸಿ
ರ್ಮಡಿ ಸಾಹಿತ್ಯಂ ವಿಳಾಸಂ ಗಮಕಮಮರ್ದುದಾಯಾಂಗದೊಳ್
ಕಣ್ಗೆ ಚಿತ್ರಂ ೧೫

ಇಂತೊಪ್ಪುವ ನವಯೌವನದೊಳ್ ಸಕಲಲೀಲಾವಿಲಾಸೆಯಪ್ಪ ಪಾರ್ವತೀದೇವಿ ನಲವಿಂ ಜಲಕ್ರೀಡೆಗೆಂದು ಷೋಡಶಸಹಸ್ರವಿಳಾಸಿನಿಯರ್ವೆರಸು ಕೇಳೀವನಮಂ ಪುಗುತರ್ಪಾಗಳ್

ಚಂಪಕ

ವಿದಳಿತಪದ್ಮಸೌರಭಕೆ ಸಂದಣಿಗೊಳ್ವ ಮಧುವ್ರತಪ್ರತಾ
ನದಿನೆಸೆವುತ್ಪಳಪ್ರಕರದೊಳ್ ನೆಱೆ ಸಿಲ್ಕಿ ಜಿನುಂಗುತಿರ್ಪ ಷ
ಟ್ಪದಶಿಶುವೃಂದದಿಂ ಕಮಲತಂಡುಲಮಂ ಕೊಳುತಿರ್ಪ ಹಂಸೆಯಿಂ
ಮದನಸುಖಾಬ್ಧಿಯೊಳ್ ನೆರೆವ ಚಕ್ರದಿನೊಪ್ಪುವುದೊಂದು ಪೂಗೊಳಂ ೧೬

ಮತ್ತೇಭ

ಕೊಳನಂ ಕಂಡು ವಿಳಾಸಿನೀನಿಕರಮುದ್ಯಚ್ಚಂದನಂ ಕುಂಕುಮಂ
ವಿಳಸನ್ನೂತನಪುಷ್ಪರಾಜಿ ಮೃಗನಾಭಿವ್ರಾತಮಂ ತಂದು ನಿ
ರ್ಮಳಕಾಸಾರದೊಳೊಂದುಗೂಡಿ ಶಿವೆ ಬಾ ಸರ್ವಜ್ಞೆ ಬಾ ದೇವಿ ಬಾ
ಕಳನಾದಪ್ರಿಯೆ ಬಾರೆನುತ್ತೆ ಕರೆದರ್ ಶರ್ವಾಣಿಯಂ [2]ಜಾಣೆಯರ್[2] ೧೭

೧–೧ ಭರಿತ (ದಾ). ೨–೨ ರಾಣಿಯರ್ (ಮ ಬ ಸೆ ಗ ಓ ಯ).

ಅಂತು ಕರೆಯೆ,

ವನಲಕ್ಷ್ಮಿ ಕೆಯ್ಗುಡುತ್ತಿರೆ
ಯನಸೂಯಾದೇವಿಯಾದಿಯಾ[೧]ದಂಗನೆಯರ್[೧]
ಜನನಿ ಜಗಜ್ಜೀವನೆ ಮೆ
ಲ್ಲನೆ ಪಾಯವಧಾರು ದೇವಿಯೆನೆ ನಡೆತಂದಳ್ ೧೮

ನೇವುರದ ಮುದ್ರಿಕೆಯ ಹಾ
ರಾವಳಿಗಳ ಮಧುರನಾದಮಬ್ಜಾಕರಮಂ
ತೀವುತ್ತಿರೆ ಸಕಲಕ್ರೀ
ಡಾವಾರಿಧಿ ಎಳಸಿ [೨]ಬಳಸಿ[೨] ಕೊಳನಂ ಪೊಕ್ಕಳ್ ೧೯

ತೊಳಗುವ ವಿಮಳಾಕಾಶದೊ
ಳೆಳವೆಱೆ ಪುಗುವಂತೆ ಮುಂತೆ [೩]ನಿರ್ಮಳ[೩]ಶಶಿಮಂ
ಡಳದಧಿದೇವತೆ ಬೆಳ್ದಿಂ
ಗಳೊಳಗೆ ಪುಗುವಂತೆ ಪೊಕ್ಕಳಂಬಿಕೆ [೪]ಕೊಳನೊಳ್[೪] ೨೦

ಗಿರಿಜೆ ಶಶಿವದನೆ [೫]ಕೊಳನಂ[೫]
ಭರದಿಂ ಪುಗೆ ನೆಯ್ದಿಲೆಯ್ದಿದುವು ವಿಕಸನಮಂ
ವಿರಹಮನಾಂತುವು ಕೋಕಂ
ಸರಸಿರುಹಂ ಮುಗಿದುವರರೆ ಪಗಲೊಳ್ ಚಿತ್ರಂ ೨೧

ಇಂತು ಜಲಕ್ರೀಡೆಗೆಂದು ಕೊಳನಂ ಪೊಕ್ಕಲ್ಲಿ ನನೆದೊಡಿಗೆಯ ನಾಯಕಿಯರುಂ ತಿಲಕದ ಲಲನೆ[೬]ಯರುಂ[೬] ಪೂದುಱುಂಬಿನ ಪುಣ್ಯವತಿಯರಂದುಗೆಯ ಭಂಗಿ[೬]ಯರುಂ[೬] ನಗೆಗಣ್ಗಳ ನೀಱೆ[೬]ಯರುಂ[೬], ಗಿರಿಜೆಯ ಚರಣಕಮಲಕ್ಕೆ ಭರದಿಂದೆಱಗುತ್ತುಂ ನತಮುಖಿಯರ್ ಸನ್ನದ್ಧೆಯರಾಗಿ

ಬಗೆಮಿಗೆ ಸತಿಯರ್ ಜಲಕೇ
ಳಿಗೆ ಚಿತ್ತಂಗೊಟ್ಟು ದೇವಿಯವಧಾರೆನುತುಂ
ಪುಗುತುಂ ಮಿಗುತುಂ ನಗುತುಂ
ಸೊಗಯಿಸಿದರ್ ಸೆಣಸಿದರ್ ಸಮಂತಿದಿರಾದರ್ ೨೨

೧–೧ ದಾ ಸ್ತ್ರೀಯರ್ (ಬ ದಾ ಅ ಗೊ). ೨–೨ ಬಂದು (ಅ ಯ ಗೊ). ೩–೩ ನಿಶ್ಚಳ (ಬ). ೪–೪ ಕೊಳನಂ (ಕಾ ಬೆ ಅ ಡ). ೫–೫ ಕೊಳನೊಳ್ (ಯ); ಕೊಳದೊಳ್ (ಅ ಡ). ೬–೬ ಯರ್ (ಅ).

ಅಳಿಗಳಳಕಂಗಳೊಡನು
ತ್ಪಳಮುಕ್ತಿಗಳೊಡನೆ ಕಮಳಮಾಸ್ಯದೊಡನೆ ನಿ
ರ್ಮಳಚಕ್ರಂ ಕುಚದೊಡನ
ಗ್ಗಳಿಸಿದುವಿದಿರಾದುವಮರ್ದುವುರ್ಬಿದುವಾಗಳ್ ೨೩

ಮೃದುಕರತಳದಿಂದಬಲೆಯ
ರುದಕಂಗಳನೆತ್ತಿ ಸುತ್ತಿ ಸೂಸುವ ಪದದೊಳ್
ಮುದದಿಂ ಕುಡುವಂತಿರ್ದುದು
ಮೊದಲೊಳ್ ಮದನಂಗೆ ಮೆಱೆವ ರತ್ನಾಂಜಲಿಯಂ ೨೪

ಓರೊರ್ವರೊಳೋರ್ವರ್
ವಾರಿಗಳಂ ಚೆಲ್ಲುವಲ್ಲಿ ಜಲದೇವತೆಯರ್
[೧]ಕಾರೊಳಗಾಡುಪ್ಪೊಲಿರ್ದುದು[೧]
ಹಾರಯ್ಸುತೆ ನಲಿಯುತಾಲಿವರಲೋಕುಳಿಯಂ ೨೫

ಮತ್ತಮಲ್ಲದೆ,

ಅಳಕಾಳಿಗಳಿಂ ನಯನೋ
ತ್ಪಳದಿಂ ಮುಖಕಮಳದಿಂದೆ ಕುಚಚಕ್ರದಿನು
ಜ್ಜ್ವಳಕಾಂತಿಸಲಿಲದಿಂದಾ
ಕೊಳನೊಳ್ ಕೊಳನಾಡುವಂತಿರೊಪ್ಪಿದರಾಗಳ್ ೨೬

ಅಲ್ಲದೆ ತಮ್ಮೊಳೆಱೆವಚ್ಚಿಕೊಂಡು ಮತ್ಸರಂಗೆಯ್ದು

ಕಮಳದಳಂಗಳೊಳಗೆ ಕುಂ
ಕುಮಜಳಮಂ ತೀವಿ ಚಕ್ರಕುಚೆಯರ್ [೨]ಚಲದಿಂ[೨]
ವಿಮಳೇಂದುಮುಖಿಯರಂ ವಿ
ಭ್ರಮದಿಂ [೩]ನಡೆದಿಟ್ಟು[೩] [೪]ಕಱೆದರೆಳ[೪]ವಿಸಿಲೊಳ್ಪಂ ೨೭

೧-೧ ಕಾರೊಳಗಾಡುವಪ್ಪೊಲಿಕ್ಕಿದು (ಪಾ); ಕಾರೊಳಗಾಡುಪ್ಪೊಲಿರ್ದರ್ (ಬೆ ಸೆ ಕೊ) ೨-೨ ಭರದಿಂ (ಕಾ ಕ ದಾ ಅ ಗೊ ಡ). ೩-೩ ದಡಿಯುಟ್ಟು (ಯು). ೪-೪ ಕಂಡರೆಳ (ಕಾ); ಕವಿದರೆಳ (ಕ)

ಇಡೆ ಶಶಿಮುಖಿಯರ್ ಕಂಡಾ
ಗಡೆ ಧವಳೋತ್ಪಳದ ನಡುವೆ ಚಂದನರಸಮಂ
ಬಿಡೆ ತೀವಿಕೊಂಡು ನಡೆನಡೆ
ದೊಡನೊಡನಿಟ್ಟಟ್ಟು ಜೊನ್ನಮಂ ಪಸರಿಸಿದರ್ ೨೮

ಇಂತಾಡುವಲ್ಲಿ

ಅಂಬುವಿನೊಳಗೆ ನಿಜಪ್ರತಿ
ಬಿಂಬಮನೀಕ್ಷಿಸುತೆ ತರುಣಿ ಪೋಗದಿರೆನುತುಂ
ಬೆಂಬತ್ತಿ ನಡೆದು ಕಾಣದೆ
ಡಂಬಲನಂ ನೋಡಿ ಮುಗ್ಧೆ ನಗಿಸಿದಳಾಗಳ್ ೨೯

ಮಡದಿಯರಾಡುವ ಪದದೊಳ್
ಸಡಿಲ್ದ ಘನಕುಂತಳಾಳಿ ಪೋಲ್ದುದು ಜಲದಿಂ
ದುಡುಪತಿಬಿಂಬಂಗಳ ಬೆಂ
ಬಿಡದೆಯ್ದುವ ರಾಹುಮಂಡಲಂಗಳ [1]ತೆಱನಂ[1] ೩೦

ಉರವಣಿಸಿ ಜೆಲ್ಲೆ ಸತಿಯರ್
[2]ಕರಂಗಳಿಂ[2] ವದನವೃಂದಮಂ ಮುಚ್ಚಿರೆ ತ
ಳ್ತರವಿಂದಂ ಶಶಿಬಿಂಬೋ
ತ್ಕರಮಂ ಮುತ್ತಿದುದೆನಿಪ್ಪ ತೆಱನಾಯ್ತಾಗಳ್ ೩೧

ನೋಡುವ ಪಾರ್ವತಿ ಮುದಮಂ
ಕೂಡುತ್ತಿರೆ ತುಂಬಿವಿಂಡು ಪಾಡುತ್ತಿರೆ ತು
ಳ್ಕಾಡಿದರಿಟ್ಟಾಡಿದರೀ
ಸಾಡಿದರಮರ್ದಾಡಿದರ್ ಸರೋಜಾನನೆಯರ್ ೩೨

ಇಂತಾಡುವ[3] ಸತಿಯರ್ಗೆ[3] ಸಂತಸದಿಂ ಮುಯ್ಯಾಂತು

೧-೧ ತೆಱದಿಂ (ಅ ಗೊ ಡ ಗ ಯ). ೨-೨ ಕರಂಗಳೊಳ್ (ಯ); ಕರಕಂಜದೆ (ಅ). ೩-೩ ಸಕಲಸ್ತ್ರೀಯರ್ಗೆ (ದಾ ಗೊ ಗ)

ಈ ತೆಱದಿಂ ಜಲಕೇಳಿ[೧]ಯೊ
ಳೋತು[೧] ಮನಂಗೂಡಿ ನೋಡಿಯಾಡುತ್ತೆ ಜಗ
ನ್ಮಾತೆ ಗಿರಿಜಾತೆ ಸುಖಸಂ
ಭೂತೆ ನುತಖ್ಯಾತೆ ಸರಸಿಯಂ ಪೊಱಮಟ್ಟಳ್ ೨೩

ಅಂತು ಪೊಱಮಟ್ಟು ನವ್ಯದುಕೂಲಮನುಟ್ಟು ದಿವ್ಯಾಭರಣಮಂ ತೊಟ್ಟು ಸಂತಸಮಂ ಮುಂತಿಟ್ಟು ಸಕಳಕಳೆಗಳನೊಚ್ಚತಂಗೊಂಡು ನಿಶ್ಚಲಿತಚತ್ರ-ಯುಚ್ಚಾಸನಮನೇಱಿ ವಿಲಾಸಿನಿಯರ್ ಕೆಲಬಲದೊಳ್ ನೆಲನುಗ್ಗಡಿಸೆ ಪುರಾಭಿ-ಮುಖಿಯಾಗಿ [೨]ಬರುತ್ತುಮಿರೆ[೨],

ಇತ್ತಲ್ ತಮ್ಮೊಳ್ ನುಡಿದರ್
ವೃತ್ತಸ್ತನೆ ಗಿರಿಜೆಗುತ್ತರೋತ್ತರರೂಪಂ
ಚಿತ್ತಘನಯೌವನಂ [೩]ಸಾ[೩]
ರುತ್ತಿರ್ದಪುದೀ ವರಾಂಗನೆಗೆ ವರ[೪]ನಾರೋ[೪] ೨೪

ಈ ರೂಪಿಂಗೀ ಯೌವನ
ಕೀ ರಮಣೀಯಾಂಗ[೫]ವತಿಗೆ[೫] ಮಿಗೆ ಸೌಂದರ್ಯ
ಕ್ಕೀ ರಾಜಿಪ ಗಿರಿಜೆಯ ವಿ
ಸ್ತಾರಕ್ಕಂ ವರನನಿಂದುಧರನೇ ಬಲ್ಲಂ ೨೫

ಎಂದಿಂತು ನುಡಿಯುತ್ತೆ ಶರ್ವಾಣಿಯ ರೂಪಾತಿಶಯಕ್ಕೆ ಬೆಱಗಾಗಿ ಮೇನೆಯ ತಪಕ್ಕೆ ದಾಕ್ಷಾಯಿಣಿ ಕರುಣಿಸಿ ಬಂದಳೆಂಬುದ[೬]ವತ್ಯಾಶ್ಚರ್ಯದಿಂ[೬] ಮಱೆದು,

ತಿಳಿಯದೆ ಮೇನಾಸತಿಯುಮ
ಚಳಪತಿಯುಂ ಚಿಂತಿಸುತ್ತುಮಿರೆಯಿರೆ ತೋಱೆ
ತ್ತಳವಲ್ಲದೆ ನಳನಳಿಸುತೆ
ತಳತಳಿಸುತೆ ಪೊಳೆದು ಬಳೆವ ಬೆಳಗಾಗಸದೊಳ್ ೨೬

ಆ ಬೆಳಗಿನೊಳಗೆ,

೧-೧ ಯ | ನೋತು (ಅ). ೨-೨ ಬರುತ್ತುಮಿರೆಯಿರೆ (ದಾ ಅ ಗೊ). ೩-೩ ದೀ (ಅ). ೪-೪ ನಾವಂ (ಯ ದಾ ಅ ಗೊ). ೫-೫ ರುಚಿಗೆ (ದಾ). ೬-೬ ನತ್ಯೈಶ್ವರ್ಯದಿಂ (ಯ).

ಚಂಪಕ

ಅಮೃತಮಯೂಖಮಂಡಲದಿನೇಳ್ತರುತಿರ್ಪ ಶಶಾಂಕಮೂರ್ತಿಯೋ
ಅಮರನದೀಪ್ರವಾಹದೊಳಗಿಂದೊಗೆತರ್ಪ ವಿಶಾಲಪುಣ್ಯಮೋ
ಪ್ರಮುದಿತ ಶೈವಕೀರ್ತಿ ಬರುತಿರ್ದಪುದೋ ಎನೆ ಬಂದನಳ್ಕಱಿಂ
ವಿಮಳವಿಶಾರದಂ [೧]ಘನಶರದ್ಘನ[೧]ಸನ್ನಿಭನೊಲ್ದು ನಾರದಂ ೩೭

ಇಳಿವ ಜಡೆ ಬಳೆವ ವೀಣಾ
ಕಳಸ್ವನಂ ಭಸಿತಗಾತ್ರಮುಜ್ವಳ[೨]ತೇಜಂ[೨]
ವಿಳಸನ್ಮಂಜುಳಮುಖಮಂ
ಡಳಚಂದ್ರಿಕೆಯೊಪ್ಪೆ ನಾರದಂ ನಡೆತಂದಂ ೩೮

ಬರೆ ಗಿರಿಪತಿಯುಂ ಸತಿಯುಂ
ವರಮುನಿಗತಿವಿನತರಾಗಿ ಭದ್ರಾಸನದೊಳ್
ಭರದಿಂ ಕುಳ್ಳಿರಿಸುತ್ತುಂ
ಚರಣಂದೊಳೆಯುತ್ತೆ ತೀರ್ಥಜಳಮಂ ತಳೆಬರ್ †೩೯

ಅಂತು ತಳೆದು,

ಗುರುಮೂರ್ತಿ ಶೈವನಿಧಿ ಶಂ
ಕರಮೂರ್ತಿ [೩]ಕೃಪಾಪರೈಕ[೩]ವರಶಾಂತಿ ಸುಧಾ
ಕರಮೂರ್ತಿ ದೇವ ನಿಮ್ಮಯೆ
ಬರವಿಂದೆ ಕೃತಾರ್ಥರಾದೆವೆಂದಿಂತೆಂದರ್ ೪೦

ಮತ್ತೇಭ

ಬರವೆಂತಾದುದು ನಾಕಲೋಕ[೪]ಸುಖಮಂ[೪] ಬಿಟ್ಟೀ ಧರಾಮಂಡಲ
ಕ್ಕಿರದಿಂದೆಮ್ಮಯೆ ಪುಣ್ಯವೆಮ್ಮ ಜನನಂ ಸಾಫಲ್ಯವೆಮ್ಮಿಂದೆ ವಿ
ಸ್ತರಸೌಖ್ಯಾಕರರಾರೆನುತ್ತೆ ನಲಪಿಂ ಬಿನ್ನಯ್ಸುತಿರ್ಪನ್ನೆಗಂ
ಬರುತಿರ್ದಳ್ ಗಿರಿಜಾತೆ ಷೋಡಶಸಹಸ್ರಸ್ತ್ರೀಪರಿಸ್ಪಂದದೊಳ್ ೪೧

೧-೧ ನವಶರದ್ಘನ (ಡ ಗ ಓ); ಬರದ ನೀರದ (ಸ). ೨-೨ ತೇಜೋ (ಅ). ೩-೩ ಪರಾಪರೈಕ (ಶಾ ಕ ಸ). ೪-೪ ದಿರವಂ (ಶಾ). † ೩೯ ನೆಯ ಪದ್ಯವು ಬ ಪ್ರತಿಯಲ್ಲಿಲ್ಲ.

ಮಹಾಸ್ರಗ್ಧರೆ

ಇದು ವಿದ್ಯುನ್ಮಾಲೆಯೋ ಚಂದ್ರಮನ ಕಮನೀಯೂಪದೀಪ್ತಿಸ್ವರೂಪೋ
ಮದನಾಸ್ತ್ರವ್ರಾತವೋ ನೂತನವನಲತಿಕಾನೀಕವೋ ನಾಕಲೋಕಾ
ಸ್ಪದನಾರೀಕ್ಷೀರವಾರಾಶಿಯೊ ಸುರುಚಿರ ಸೌಂದರ್ಯಸಂಘಾತವೋ ನೋ
ಡಿಮ ತಾನೆಂಬಂತೆ ಶೀವಿರ್ದಬಲೆಯರೊಳ್[೧]ಗಿರ್ದಂಬಿಕಾ[೧]ಕಾಂತೆ ಬಂದಳ್ ೪೨

ಚಂಪಕ

ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗಪಾತ್ರೆಯು
ತ್ಕರುತರದಾನಿ ನಿರ್ಮಲಭವಾನಿ ನಿರಂತರಮಾನಿ ನವ್ಯಸೌಂ
ದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನರ್ತಿ ಬಂದಳೊ
ಪ್ಪಿರೆ ಗಿರಿಜಾತೆ ಲೋಕಜಯಮಾತೆ ಜಗಕ್ಕೆ ವಿನೂತೆಯಳ್ಕಱಿಂ †೪೩

ಇಂತು ಬಂದು [೨]ತಾರೆಗಳ[೨] ನಡುವಣ ತಾರಾಪತಿಯು ಕಳೆಯಂತೆ ಲತೆಗಳ ನಡುವಣ ಕಲ್ಪಲತೆಯಂತೆ ರತ್ನಂಗಳ ನಡುವಣ ಚಿಂತಾರತ್ನದಂತೆ ಧೇನುಗಳ ನಡುವಣ ಕಾಮಧೇನುವಿನಂತೆ ರುದ್ರಾಕ್ಷಿಗಳ ನಡುವಣೇಕಮುಖರುದ್ರಾಕ್ಷಿಯಂತೆ ಸಕಲಸ್ತ್ರೀಯರ ನಡುವೆ ಗಿರಿರಾಜತನೂಜೆ ವಿರಾಜಿಸುತಿರ್ದು,‡

ಸುರುಚಿರಪೂರ್ವಾಚಳದೊಳ್
ಗುರುತರಪೂರ್ಣೇಂದುವುದಯಿಸಂತಿರೆ ರಾತ್ರೀ
ಶ್ವರವದನೆ ಗಿರಿಜೆ ಭರದಿಂ
ಗಿರಿರಾಜನ ತೊಡೆಯ ಮೇಲೆ ಬಿಜಯಂಗೆಯ್ದಳ್ ೪೪

ಆ ಸಮಯದೊಳ್,

ಸ್ರಗ್ಧರೆ

ಕಂಡಷ್ಟಾಂಗಪ್ರಣಾಮಂಬೆರಸು ಹರಿಸದಿಂ ನಾರದಂ ಭೀತಿಯಿಂ ಕೈಯ್
ಕೊಂಡಿಷ್ಟಾರ್ಥಪ್ರದೈಕಪ್ರಭೆಗೆ ವಿಭವದಿಂದಂ ನವಾಶ್ಚರ್ಯ[೩]ಪೂರ್ವಂ[೩]
ಖಿಂಡೇಳ್ವಾನಂದರೋಮಾಂಚದ ಪೊದಕೆಗಳಂ ತಾಳ್ದು ನಿಂದಿರ್ದು ತಾಯೇ
ಚಂಡಾಂಶು[೪]ವ್ರಾತ[೪]ತೇಜೋನಿಧಿ ಶರಣೆನುತಂ ಸ್ತೋತ್ರಮಂ ಮಾಡುತಿರ್ದಂ ೪೫

೧-೧ ಗೊಲ್ದಂಬಿಕಾ (ಕಾ ಬೆ). ೨-೨ ಕಾಂತಿಗಳ (ಕಾ ಬೆ). ೩-೩ ದಿಂದಂ (ಅ). ೪-೪ ವ್ರಾತೆ (ಅ). † ಈ ಪದ್ಯವು ಬ ಮ ಕ ಡ ಗ ಓ ಪ್ರತಿಗಳಲ್ಲಿಲ್ಲ. ‡ ಈ ವಚನವು ಣಾ ಪ್ರತಿಯಲ್ಲಿಲ್ಲ.

ಶ್ರೀನಿಧಿ ಶಾಂಕರಿ [೧]ಶೈವ[೧]
ಜ್ಞಾನಿ ಸದಾವರದೆ ಭುವನಭರಿತೆ ಭವಾನೀ
ಮಾನಿನಿ [೨]ಮಾತೆ[೨] ಮಹೇಶ
ಧ್ಯಾನಿ ಮಹಾದಾನಿ ನೀನೆ ಶರಣೆನುತಿರ್ದಂ ೪೬

ಇಂತಿಂತು ಬಣ್ಣಿಸುತ್ತುಂ
ಮುಂತಿರ್ದಗರಾಜಸುತೆಯನುಚ್ಚಾಸನದೊಳ್
ಸಂತಂ ಬಿಜಯಂಗೆಯ್ಸು
ತ್ತುಂ ತಣಿಯದೆ ಮತ್ತೆ ನಾರದಂ ನುತಿಗೆಯ್ದಂ ೪೭

ತಾಯೇ ತವರೇ ತ್ರಿಭುವನ
ದಾಯುವೆ ಜಗದುಸಿರೆ [೩]ಜಗದ ಕಣ್ಣೆ ಜಗನ್ನಿ
ರ್ವಾಯಾ[೩]ನಿಧಿಯೇ ಸುಧಿಯೇ
ಕಾಯೆನ್ನಂ ಕರುಣದಿಂದೆ ಸಲಹೆನುತಿರ್ದಂ ‡೪೮

ಎಂದಿಂತಾರ್ತದಿಂ ಸ್ತೋತ್ರಂಗೆಯ್ಯೆ ಕೇಳ್ದು ಕೌತುಕಂದಾಳ್ದು ಗಿರಿರಾಜನುಂ ಮೇನೆಯುಮಿರ್ದೆಲೆಲೆ ಮುನೀಂದ್ರಾ ನಿಮ್ಮಡಿಗಳನೊಚ್ಚತಂಗೊಂಡುಚ್ಚಾಸನದೊಳಿರಿಸಿ ಪಾದೋದಕಮನಾದರದಿಂ ಕೊಂಡು ಅತಿಹರ್ಷದಿಂ ಕೃತಾರ್ಥರಾದೆವಲ್ಲದೆಮ್ಮ ಮಗಳ್ಗೆ ನಿಮ್ಮಡಿಗಳ್ ವಂದನಗೆಯ್ವುದತ್ಯಾಶ್ಚರ್ಯವೆಂದಜ್ಞಾನದಿಂ ನುಡಿಯೆ ದಿವ್ಯಜ್ಞಾನಿ ನಾರದಂ ನಸುನಗುತ್ತುಮಿಂತೆಂದಂ

ಸುರರಱಿಯರಿಂದ್ರನಱಿಯಂ
ಹರಿಕಮಲಜರಱಿಯರಖಿಲಮನುಗಳ್ ಮುನಿಗಳ್
ಕರಮಱಿಯರೆಂದೊಡಗಜೆಯ
ಚರಣಾಬ್ಜಕ್ಕೆಱಗಲಿಳೆಯೊಳಾ[೪]ನೆನಿತಱಿವಂ[೪] ೪೯

೧–೧ ವಶಸು (ಕ). ೨–೨ ಮಾನಿ (ಕಾ ದಾ ಬೆ). ೩–೩ ಜಗದ ಕಣ್ಣೆ ಜಗದ ನಿ। ರ್ವಾಯಾ (ಅ); ಜಗದಗಣ್ಣ ಜಗನ್ನಿ। ರ್ವಾಯಾ (ಯ); ಜಗದ ಕಣ್ಣೇ ತ್ರಿಜಗ। ನ್ನಿರ್ವಾ (ಕ); ಜಗದ ಕಣ್ಣೇ ತ್ರಿಜಗ ನ್ಮಾಯಾ (ಕಾ ಡ). ೪–೪ ನೇತಱಿವಂ (ಅ).
‡ ಈ ಪದ್ಯವು ಓ ಪ್ರತಿಯಲ್ಲಿಲ್ಲ.

ಮಹಾಸ್ರಗ್ಧರೆ

ನೆವದಿಂದಂ ನಿಮ್ಮ ಪುಣ್ಯೋದರದೊಳೊಗೆದೊಡೀ ಬಾಲೆಯಂ ಪುತ್ರಿಯೆಂಬೊಂ
ದವಿಚಾರಂ ಬೇಡ ನೀವೇ ಜನನಿಜನಕರಲ್ಲಲ್ಲದಂತಿರ್ಕೆ ತಾಯೇ
ನವರತ್ನಕ್ಕಬ್ಧಿ ಚಿಂತಾಮಣಿಗೆ ಮೊರಡಿ ಮುತ್ತಿಂಗೆ ಸಿಂಪಿಂದುವಿಂಗಂ
ರವಿಗಂ ಪೂರ್ವಾಶೆ ಲಿಂಗಕ್ಕವನಿ ಸುಧೆಗೆ ದುಗ್ಧಾಬ್ಧಿ ಪದ್ಮಕ್ಕೆ ಪಂಕಂ ೫೦

ಮತ್ತಮಲ್ಲದೆ,

ಮೇನೆಯೆ ನಿನ್ನ ತಪಕ್ಕತಿ
ಮಾನಿ ಮಹಾದೇವಿ ಕರುಣದಿಂ [1]ನಿನ್ನುದರ[1]
[2]ಸ್ಥಾನದೊಳಂ ಜನಿಯಿಸೆ ಸು[2]
ಜ್ಞಾನಿಯನೆಲೆ ಪುತ್ರಿಯೆಂಬರೇ ಧಾರಿಣಿಯೊಳ್ ೫೧

ಶಿವನ ಸುಧೆ ಶಿವನ ಜೀವಂ
ಶಿವನಾನಂದಂ ಸದಾಶಿವನ ಘನಪುಣ್ಯಂ
ಶಿವನ ಸುಖಂ ಶಿವನ ಮುಖಂ
ಶಿವನಾಯು ಗಿರೀಂದ್ರ ಗಿರಿಜೆಯುಂ ಸುತೆಯೆಂಬರ್ ೫೨

ದಕ್ಷನ ಶಿವನಿಂದೆಗೆ ಕಮ
ಲಾಕ್ಷಿ ಮಹಾದೇವಿ ಸೆಡೆದು ನಿಜಯೋಗದೊಳಂ
ತಕ್ಷಯನಿಧಿ ಮೇನೆಗೆ ಕರು
ಣೇಕ್ಷಣೆಯಾಗುತ್ತೆ ಬಂದುದಂ ಭಾವಿಸಿರೇ ೫೩

ಅದು ಕಾರಣದಿಂ ಮುನ್ನಮೆ
ಮೊದಲಿಂ ಹರನರಸಿ ಗಿರಿಶನರ್ಧಾಂಗಿ ವರ
ಪ್ರದೆ [3]ವರನೀಶ್ವರನೀಕೆಗೆ[3]
ಮುದದಿಂ ಶಿವನಲ್ಲಿಗಿರದೆ ಕಳಿಪುವುದುಚಿತಂ ೫೪

೧-೧ ನಿಮ್ಮುದರ (ಬ ಪು). ೨-೨ ಸ್ಥಾನದೊಳೊಗೆದಡೆ ದಿವ್ಯ (ಬ ಯ ಅ ಕೊ).
೩-೩ ವರನೀಕೆಗೆ ನಿತ್ಯಂ (ಕಾ).

ಗಿರಿಸುತೆ ಬಳೆವನ್ನೆವರಂ
ಹರನಿರ್ದಪನೊಲ್ದು ಹೇಮಕೂಟಸ್ಥಳದೊಳ್
ಪರಿಪೂರ್ಣಪರಂಜ್ಯೋತೀ
ಸ್ವರೂಪನಿಜಯೋಗಭೋಗರಾಗೋನ್ನತಿಯಿಂ ೫೫

ಎಂದಿಂತತರ್ಕ್ಯಮುನಿ ಹಿತೋಪದೇಶಮಂ ಪೇಳ್ದು ಗಿರಿಜೆಯ ಪರಮ-ಲಾವಣ್ಯಾವಯವಂಗಳಂ ಕಂಡು ನೋಡಲಣ್ಮದೆ ಪೊಡೆಮಡುತ್ತೆ ಮತ್ತಮಿಂತೆಂದಂ,

ಈ ಗಿರಿಜೆಯ ನವಯೌವನ
ಮಾ ಗಿರಿಜೆಯ ರೂಪವಿಭವಮಾ ಗಿರಿಜೆಯ ಸೌ
ಖ್ಯಾಗಮವೀ ಗಿರಿಜೆಯ ನಿಜ
ರಾಗಂ [೧]ಶಂಕರನ[೧] ಚಿತ್ತಮಂ ಚಿಗುರಿಸದೇ ೫೬

ಚಂಪಕ

ಹರನ ಮನೋಹರಂ ಗಿರಿಜೆಯಾ ನಡೆಯಾ ನುಡಿಯಾ ವಿಳಾಸವೀ
ತರಳಕಟಾಕ್ಷವೀ ಪರಿಮಳಾಕೃತಿಯಾ ದರಹಾಸವೀ ಸುಖಾ-
ವರಣತೆಯಾ ಸಲಕ್ಷಣತೆಯಾ ಸೊಬಗೀ ಮಧುರಸ್ವಭಾವವೀ
ಸುರುಚಿರಕಾಂತಿಯಾ ಹರೆಯವೀ ಸುಕುಮಾರತೆಯಾ ಸುಧಾಮಯಂ ೫೭

ಮತ್ತೇಭ

ಉರಮಿಂಬಿಲ್ಲ ಪಯೋಧರದ್ವಯದ ಕೊರ್ಬಿಂಗಾಸ್ಯಮಿಂಬಿಲ್ಲ ಭಾ
ಸುರನೇತ್ರದ್ವಿತಯಪ್ರಚಾರತೆಗೆ ಬೆನ್ನಿಂಬಿಲ್ಲ ಧಮ್ಮಿಲ್ಲಬಂ
ಧುರಸೀಮಾವಳಯಕ್ಕೆ ನೋಡ ನಡುವಿಂಬಿಲ್ಲೊಪ್ಪುವೀ ಬಾಸೆಗೀ
ಗಿರಿಜಾಯೌವನಸಂಪದಕ್ಕೆ ತನುವೆಂತಿಂಬಪ್ಪುದೋ ರುದ್ರನಾ ೫೮

ಇಂತೊಪ್ಪುವ ಜವ್ವನೆಯಂ
ಶಾಂತೆಯನಖಿಳೈಕಮಾತೆಯಂ ಶಂಕರನೇ
ಕಾಂತದ ಸುಖಮಂ ಸ್ತ್ರೀಮಾ
ತ್ರಂ ತನುಜೆಯೆನಿಪ್ಪ ಬಗೆಯನುಳ ಗಿರಿರಾಜಾ ೫೯

೧-೧ ಸ್ಥಾಣುವಿನ (ಕಾ ಬೆ ಅ ಯ).

ನಿನಗಱಿಪಲ್ ಬಂದೆಂ ಶ
ರ್ವನ ವಧು ಶರ್ವಾಣಿಯೆಂದು ನಗಜೆಯು[1] ನಗರಾ
ಜನೆ[1] ಕೇಳ್ ಭರದಿಂ ಕೈಲಾ
ಸನಗಕ್ಕಾಂ ಪೋಪೆನೆಂದು ನಾರದನೆಂದಂ ೬೦

ಎನೆ ಕೇಳ್ದು ಶೈಳರಾಜಂ
ವಿನಯಂಬೆರಸಗಜೆಗಂದು ಕೆಯ್ಮುಗಿಯುತ್ತುಂ
ಮನದೊಳ್ [2]ಬೆಱಗಾಗುತ್ತುಂ[2]
ಘನಶೈವಾಂಬುಧಿಗೆ ನಾರದಂಗಿಂತೆಂದಂ ೬೧

ಶಾರ್ದೂಲ

ನೀವೆಂದಂತೆ ಭವಾನಿಯುಂ ಮಱೆದು ಪುತ್ರೀಭಾವಮಂ ತಾಳ್ದಿ ವಿ
ನ್ನೀವೇಳ್ವೆಂ ಮರುಳಾಗುತಿರ್ದೆಮಗೆ ನಿಮ್ಮಾ ಬೋಧೆಯಿಂ ಜ್ಞಾನಸ
ದ್ಭಾವಂ ಪುಟ್ಟಿದುದಿಂಪಿನಿಂ ಪರಸುತಂ ಪಂಪಾವಿರೂಪಾಕ್ಷನಿ
ರ್ಪಾವಾಸಕ್ಕಿರದುಯ್ದು ತೋಱಿದಪೆನೀ ಶರ್ವಾಣಿಯಂ ಜಾಣೆಯಂ ೬೨

ನೀವಿಂದೆಮ್ಮರಮನೆಯೊಳ್
ದೇವಾರ್ಚನಂ ಗೆಯ್ದು ನಾಳೆ ಪೋಪುದೆನುತ್ತುಂ
ತೀವಿರ್ದ ಮೃದುಮಧುರವಾ
ಕ್ಯಾವಳಿಯಿಂ ನಾಡೆ ಬೇಡಿಕೊಂಡಂ ಭೂಪಂ ೬೩

ಇಂತು ಬೇಡಿಕೊಳುತ್ತುಮಿರೆ,

ಚಂಪಕ

ನಗಪತಿಯೆಂದುದಂ ಸಲಿಸಿ ನಾರದನಾತನ ಕೂಡೆ ರುದ್ರನಂ
ಮೃಗಧರಚೂಡನಂ ಶಿವನನರ್ಚಿಸಿ ತತ್ಪರಮಪ್ರಸಾದದಿಂ
ಮಿಗೆ ತಣಿದಿರ್ದರುಂ ಕನಕಪೀಠದೊಳರ್ಪಿನಮಿತ್ತಲತ್ತಲಾ
ಖಗನ ತುರಂಗಮೆಯ್ದಲಣಿಮಿರ್ದುವು ಪಶ್ಚಿಮಪರ್ವತಾಗ್ರಮಂ ೬೪

೧–೧ ನಗಸಾ । ಥನೆ (ಯು ದಾ ಅ ಗೊ). ೨–೨ ಬೆಱಗುಗೊಳುತ್ತುಂ (ಅ).

ಆ ಸಮಯದೊಳ್

ಅದು ಪೂರ್ವಾಂಗನೆ ಇಡೆ ನೆಗೆ
ದೊದೆವುತೆ ಬೆಳಬೆಳಗುತೆಯ್ದೆ ಪಶ್ಚಿಮಶೈಲಾ
ಗ್ರದ ಮೇಲೆ ಬಿಳ್ದ ಮಾಣಿ
ಕ್ಯದ ಕಂತುಕದಂತಿರೆಸೆದುದರ್ಕನ ಬಿಂಬಂ ೬೫

ಆ ಸಮಯದೊಳ್

ಚಂಪಕ

ಅರೆಮುಗಿವಬ್ಜಮುಳ್ಳಲರ್ವ ಕೈರವಮಾಕುಲಿಪಾ ಮಧುವ್ರತಂ
ಕೊರಗುವ ಕೋಕಮುತ್ಸವಿಪ ಜಾರೆಯರೊಂದೆರಡೇಳ್ವ ಮೀನ್ಗಳಂ
ಕುರಿಪ ತಮಂಧಮುಳ್ಕುಱೊಳೆ ಪಕ್ಕಿಗೆ ಸಾರ್ವ ವಿಹಂಗವೀಧಿ ಜೇ
ತರಿಸುವ ಮಾರುತಂ ನಸುಕಲಂಕುವ ಸಾಂಧ್ಯಮಯೂಖಲೇಖೆಗಳ್ ೬೬

ಅತ್ತಿತ್ತಂ [೧]ಮಿಸುಕದೆ[೧] ಮೆ
ಯ್ವೆತ್ತಿದ [೨]ಮನ್ಮಥ[೨] ಸುಖೋತ್ತಮಾಂಗದೊಳಿರುತುಂ
[೩]ಮುತ್ತಿನ[೩] ಕಾಂತಿಗೆ ಭಯಮುಂ
ಪೊತ್ತಿನವಕ್ರಮನೆ ನೋಡಿ ಸುಯ್ದುದು ಕೋಕಂ ೬೭

ಕಾಲ್ಗೆಗೆಯೆ ಬಿಳ್ದನಂ ಮಿಗೆ
ಸಾಲ್ದೆಗೆದುದು ವಿಹಗವೀಥಿ ಮುಗಿಯುತ್ತಬ್ಜಂ
ಜೋಲ್ದುವು ನೊಂದು ರಥಾಂಗಂ
ಕೀಲ್ದೆಗೆದವೊಲಗಲೆ ಸಾರ್ದು ಕೊರಗಿದುವಾಗಳ್ ೬೮

ಬಗೆಗುಂದಿ ಚಕ್ರಮಿಥುನಂ
ಮಿಗೆ ನೊಂದೊಂದೊಂದನಗಲಲಾಱದೆ ನೋಟಂ
ದೆಗೆಯುತ್ತಳಲುತ್ತೊರಲು
ತ್ತಗಲ್ದುವು [೪]ಉಱೆ[೪] ಪಗಲನರಸಿ ತಿರುಗುವ ತೆಱದಿಂ ೬೯

೧–೧ ಚಲಿಸದೆ (ಕಾ ದಾ ಅ ಗೊ ಯ ಡ). ೨–೨ ಚಿತ್ತಜ (ಬಿ ಬ ಯ ದಾ ಅ).
೩–೩ ಮತ್ತಿನ (ಅ). ೪–೪ ನೆರೆ (ಕಾ ದಾ ಅ).

ಮುಗಿವ ಸರಸಿರುಹಷಂಡಮು
ನಗಲ್ವ ಚಕ್ರಪ್ರತಾನಮುಂ ಕೋಟರದೊಳ್
ಪುಗುವ ವಿಹಗಂಗಳಂ ಮಿಗೆ
ನಗುವಂತಿರೆ ನೆಯ್ದಿಲೆಯ್ದಿದುವು ವಿಕಸನಮುಂ ೭೦

ಇಂತು ಮುಗಿವ ಕಮಲಂಗಳನಗಲ್ವ ಚಕ್ರಮಿಥುನಂಗಳಂ ನೋಡಲಾಱದಿಳಿವಂತೆ ಜಳಜಸಖಂ ಪಶ್ಚಿಮಾಬ್ಧಿಯೊಳಿಳಿಯೆ ನಾನಾಶಿವಾಲಯಾಂತರಂಗಸಂಧ್ಯಾಸಮಯಸಮುದ್ಭೂತಮೃದುಮೃದಂಗಪಟಹಶಂಖಭೇರೀನಿನಾದಮುಂ ವಾರನಾರೀಸಂಗೀತನೃತ್ಯಚಟುಳತರರವಭರಿತಪುರವಳಯವಿಳಸಿತಬಹುರತ್ನರಚಿತಸಹಸ್ರವೀಧೀಪ್ರತಿನಿಳಯಂಗಳೊಳ್ ಪತಂಗನ ಕಿರಣಂಗಳಂ ಕಳ್ತಲೆ ಸೆಱೆವಿಡಿದಂತೆ ಪೊತ್ತಿಸಿದದೀಪಿಕಾನಿಕಾಯಮುಂ ನಾಡೆ ಮೆಱೆಯೆ, ಕಡುಗಳ್ತಲೆ ಕವಿತರ್ಪಾಗಳೊರ್ವ ಜಾರೆ ಮನೆಯುವರ್ಗಂಜಿ [೧]ಮಹೋತ್ಸಾಹದಿಂ[೧] ಪುದಿದ ತಮಮುಂ ಪದಿರಿಂ ಪಾಡಿದಳದೆಂತೆಂದೊಡೆ.

ಅಳಿಯುಂ ಕತ್ತುರಿಯುಂ ಕೋ
ಕಿಳನಂ ಕಾಳಿಂದಿಯುಂ ವಿನೀಳಾಂಬುದಮುಂ
ಬಳನನುಜನನುಱೆ ಪಾಡಿದ
ಳಳಪಟ್ಟತಿಜಾರೆ ಧೀರೆ ರಜನೀಮುಖದೊಳ್ ೭೧

ಮತ್ತಮಲ್ಲದೆ,

ಪರಸಿದರಿದಿರ್ಗೊಂಡರಲಂ
ಕರಿಸಿದರಾದರಿಸಿದರ್ ಕರಂ ನುತಿಗೆಯ್ದರ್
ಬೆರಸಿದರೆಳಸಿದರಪ್ಪಿದ
ರೆರೆದರ್ ನಲಿನಲಿದು ಜಾರೆಯರ್ [೨]ಕಳ್ತಲೆಯಂ[೨] ೭೨

ಆಗಳಭಿಸಾರಿಕಾನಿಕಾಯದುತ್ಸವಂ ಪೆರ್ಚುವಂತೆ,

ನಸುಗಳ್ತಲೆಯುರೆಗಳ್ತಲೆ
ಮುಸುಂಕುಗಳ್ತಲೆ ಪೊದಳ್ದ ಪೆರ್ಗಳ್ತಲೆ ನಾ
ಲ್ದೆಸೆಗಳ್ತಲೆ ಪೊಸಗಳ್ತಲೆ
ರಸೆಗಳ್ತಲೆಯೆನಿಸಿ ಕೂಡೆ ತೀವಿತು ತಿಮಿರಂ ೭೩

೧-೧ ಮನದುತ್ಸವದಿಂ (ಕಾ); ಮನೋತ್ಸಾಹದಿಂ (ಯ ಅ ಬೆ). ೨-೨ ಕಳ್ತಲೆಯೊಳ್ (ಯು ದಾ ೬).

ದಿವಸುಧೆಯಬ್ಧಿಯನೊಲವಿಂ
ತವೆ ಜನರಿಚ್ಛೆಯನೆ ಪಡೆಯಲೆಂದುಱೆ ಕಡೆಯಲ್
ಹವಣಿಸಿದ ವಿಷಮನನುಕರಿ
ಸುವ ತೆಱದಿಂದುದಯಮುಳಿದು ತಳೆದುದು ತಮಮಂ ೭೪

ಅಱಿಯೆಂ ಪಿರಿದಂ ಪೊಗಳಲ್
ಪೆಱತೇಂ ಮುಚ್ಚಿದೊಡೆ [೧]ಮುಚ್ಚಿದಂತಲ್ಲದೆ[೧] ಕಣ್
ತೆಱೆದೊಡೆ [೨]ತೆಱೆದಂತಲ್ಲದೆ[೨]
ಮಱೆದಂತೆವೆಯಿಕ್ಕಲೀಯದಿಱಿದ ತಮಂಧಂ ೭೫

ಮತ್ತೇಭ

ಉಗುರಿಂದಂಟಿ ಬೆಱಂಟೆಯಂಜನಮದಕ್ಕುಂ ಚೌಕಮಂ [೩]ಕೀಱುತುಂ[೩]
ತೆಗೆದಾಚ್ಛಾದಿಸೆ ಕೇಳ ನೀಳಪಟಮಕ್ಕುಂ ಬಟ್ಟತಂ ಮಾಡಿ ಸು
ತ್ತುಗ[೪]ಳೆ[೪]ತ್ತಲ್ಕಸಿತಾತಪತ್ರ[೫]ಮೆನಲಕ್ಕುಂ[೫] [೬]ತಾನಿದೆಂಬಂತಿರೀ[೬]
ಜಗದೊಳ್ ಕಣ್ಗೆ ವಿಚಿತ್ರಮಾಗೆ ನೆರೆದಟ್ಟಯ್ಸಿತ್ತನಿತ್ತಂ ತಮಂ ೭೬

ಇದು ಮಧುಕರಮಿದು ಮಲ್ಲಿಗೆ
ಯಿದು ಕೋಕಿಳಮಿದು ಮರಾಳಮಿದು ಮದಗಜಮಿಂ
ತಿದು ಕಂಠೀರವಮಿದು ಕರಿ
ದಿದು ಬಿಳಿದೆಂದಱಿಯಬಾರದುರ್ವಿದ ತಮದೊಳ್ ೭೭

[೭]ಮನದೊಳಗಂ ಪೊಱಗಂ ತೆ
ಕ್ಕನೆ ತೀವಿದ ಮರ್ಬಿ[೮]ನಲ್ಲಿ[೮] ಮನಸುಂ ನೆನಸುಂ
ಕನಸುಂ[೭] ತಾನುಂ ಕಳ್ತಲೆ
ಯೆನಿಸಿರ್ದುದು ತಮದ [೯]ಘನಮನದನೇನೆಂಬೆಂ[೯] ೭೮

೧–೧ ಮುಚ್ಚಿರಲ್ಕಲ್ಲದೆ (ಶಾ ದಾ ಬೆ ಬ) ೨–೨ ತೆಱೆದಿರಲಲ್ಲದೆ (ಬ ಅ ಕೊ). ೩–೩ ಸೀರುತುಂ (ಸೆ); ಕೋರುತುಂ (ಅ); ಸೀಳುತುಂ (ದಾ). ೪–೪ ಮೆ (ಅ.) ೫–೫ ಮೆ ಅದಕ್ಕುಂ (ಶಾ ಯು). ೬–೬ ತಾನಿದೆಂಬಂದದಿಂ (ದಾ ಗೊ ಅ). ೭–೭ ಮನೆಯೊಳಗಂ ಪೊಱಗಂ ತೆ।ಕ್ಕನೆ ತೀವಿದ ಮರ್ಬಿನೊಳಗೆ ಸುಳಿವ ಜನಕ್ಕಂ॥ಮನಸುಂ (ಓ). ೮–೮ ನೊಳಗೆ (ಶಾ ಬೆ). ೯–೯ ಘನಮುನಾರ್ ಬಣ್ಣಿಸುವರ್ (ಡ).

೧ನೆಲಸಿ ನೆಲೆಗೊಂಡ ಪೆರ್ಗ
ಳ್ತಲೆಯೊಳ್ ತೊಳತೊಳಗಿ ಬೆಳಗಿ ಮಿನಿಮಿನಿಸುತ್ತುಂ
ಪಲವುಂ ದೀವಿಗೆಗಳ್ ಕ
ಳ್ತಲೆ ಪೂತಂತೊಪ್ಪುತಿರ್ದುವಾ ಮನೆಮನೆಯೊಳ್೧ ‡೭೯

ಅಂತೊಪ್ಪುತ್ತುಮಿರೆಯಿರೆ,

ರಸೆಯುಂ ನಭಃಸ್ಥಳಮನೆ
ಪ್ಪೆಸೆಯುಂ ದಟ್ಟಯ್ಸುತಮರ್ದ ತಮದೊಳ್ ಜಾರ
ಪ್ರಸರಂ ಪೊಱಮಟ್ಟುದು ಶಂ
ಕಿಸದೊಲ್ದಲ್ಲಲ್ಲಿ ಕುಟಿಲಪಥ೨ಸಮತಳದೊಳ್೨ ೮೦

ಒದವಿದ ಕಳ್ತಲೆಯೊಳ್ ೩ಸ
ಮ್ಮದದಿಂ೩ ಪೊಱಮಟ್ಟ ಜಾರಮಿಥುನಾಳಿಗೆ ಕಂ
ಡುದೆ ಬರವೇಳಸಿತೆ ಮನಮಿ
ರ್ದುದೆ ಮನೆ ಪಟ್ಟುದುದೆ ಪಾಸು ಮುಟ್ಟಿತೆ ಮರ್ಮಂ ೮೧

ದಾರಿಯೊಳಡುಕುಱೊಳೋಣಿಯೊ
ಳಾರವೆಗಳ ತಳದೊಳಂಗಡಿಗಳೊಳ್ ಮನೆಯೊಳ್
ಕೇರಿಯೊಳಾವಿಗೆಗಳೊಳಂ
ಬೇರೂಱಿತು ಜಾರರನುಭವಂ ಕಳ್ತಲೆಯೊಳ್ ೮೨

ಅದೆಂತೆಂದೊಡೆ

ತಾಗದ ಚುಂಬನಮುಱೆ ಸೊ
ಪ್ಪಾಗದ ಕರಘಾತಮಗಲದಿರ್ಪನುಭವದೊಳ್
ಸಾಗಿಸುವ ಸರಭಸಂ ಮಿಗೆ
ರಾಗಿಸುವ ಮನಂ ಮನೋಹರಂ ಜಾರೆಯರೊಳ್ ೮೩

೧-೧ ಒತ್ತಂಬಿಸಿ ಪರ್ವಿದ ಪೆ। ರ್ಗತ್ತಲೆಯೊಳ್ ಕೂಡೆ ನೋಡೆ ಮಿನಿಮಿನಿಸುತ್ತುಂ॥ ಸುತ್ತುಂ ಬೆಳಗಿದ ದೀವಿಗೆ। ಕತ್ತಲೆ ಪೂತಂತಿರೊಪ್ಪಿದುವು ಮನೆಮನೆಯೊಳ್ (ಬೆ ಅ ಗೊ). ೨-೨ ಸಮ್ಮತದೊಳ್ (ದಾ); ವನುಮತದೊಳ್ (ಅ); ಸಮ್ಮತದಿಂ (ಕ ಗ). ೩-೩ ಸ। ಮ್ಮದದಿಂ (ಕಾ). ‡ ಇಲ್ಲಿಂದ ಮುಂದೆ ೮೨ನೆಯ ಪದ್ಯದ ಕೊನೆಯ ವರೆಗಿನ ಭಾಗವು ಡ ಪ್ರತಿಯಲ್ಲಿಲ್ಲ.

ಆರ್ಪೈವ ಮನಂ ಸುಖದೊಳ್
ಪೂರ್ಪೈವ ಶರೀರಮುಸಿರದುಸಿರಿರ್ಪಡಕಂ
ಸ್ಮೇರಾಸ್ಯಂ ಮೊಳೆನುಡಿ[1]ಗಳ[1]
ಸೌರಂಭಂ ಸುರತಸಂಭ್ರಮಂ ಜಾರೆಯ[2]ರಾ[2] ೪೮

ಪುಳಕಿಪ ತನು ಪೊಣ್ಮುವ ಸುಯಿ
ಬಳೆವ ರತಂ ಬೆಮರ್ವ ಗಂಡಮಿಳಿವಶ್ರು ಸುಖಂ
ದಳಿವ ಮನಂ ಕಂಪಿಪ ಕೆಯ್
ಕಳವಳಿಸುವ ಗಳಮನೂನಮುಸತೀಕುಳದೊಳ್ ೮೫

ಕಲ್ಲೆನ್ನದೆ ಮುಳ್ಳೆನ್ನದೆ
ಸಲ್ಲಲಿತಾಸ್ಥಾನಮೆನ್ನೆ[3]ದಿರ್ದೀ[3]ರ್ದೆಡೆಯೊಳ್
ಪಲ್ಲವಿಸಿತು ಪೂತುದು ಫಲ
ವಲ್ಲರಿಯುಂ ಪಡೆದುದರರೆ ಜಾರರ ಸುರತಂ ೮೬

ಒರ್ಬುಳಿಸಿದ ಸಮಸುಖದೊಳ
ಗುರ್ಬಿಸುತಂತೊಲಿದು ನಲಿದು ಪಲತೆಱದಿಂ ನಿಂ
ದುರ್ಬುತೆ ಕೊರ್ಬುತೆ ಪರ್ಬುತೆ
ಗರ್ಬಿಸಿತಭಿಸಾರಿಕಾನಿಕಾಯಂ ನಿಶಿಯೊಳ್ †೮೭

ಮತ್ತಮಲ್ಲದೆ

ಚಂಪಕ

ಇಳೆಯುನಮರ್ಚಿ ಮುಚ್ಚಿ ಮುಸುಕಿರ್ದ ತಮಂಧಮನಳ್ತಿಯಿಂದೆ[4]ಕಂ
ಡಳ[4]ಕುಳಮೆಂದು ಕಾಳಮತರಂಗಿಣಿಯೆಂದು ವಿನೀಳಮೇಘಮೆಂ
ದಳಕದೊಳೊತ್ತುತುಂ ಸಲಿಲಕೇಳಿಯುಮಂ ನವಿಲಾಟದೇಳ್ಗೆಯಂ
ತಳೆದಭಿಸಾರಿಕಾನಿಕರಮೊಪ್ಪಿದುದಾತ್ತರತಾಂತಲೀಲೆಯೊಳ್ ೮೮

ಅಂತೊಪ್ಪುತ್ತಿರ್ಪ ಸಮಯದೊಳ್

೧-೧ ಗತ (ಕಾ ಬೆ ಯ ಬ ದಾ ಓ). ೨-೨ ರೊಳ್ (ಯ ದಾ ಅ ಗೊ ಸೆ ಗ ಓ). ೩-೩ ದೆಲ್ಲಿ (ಕಾ ಬೆ ಯ). ೪-೪ ನಿಂ । ದಳ (ಬ ಮ ಗೊ ಅ ಗ ಓ ಯ). † ೮೭ ನೆಯ ಪದ್ಯವು ಓ ಪ್ರತಿಯಲ್ಲಿಲ್ಲ.

ಗಗನಂ ಪೂತುದೊ ತಮಮಂ
ಮಿಗೆ ನೋಡುವ ಭರದೊಳಂಬರಂ [೧]ತಾನಂತ[೧]
ಕ್ಷಿಗಳಂ ಪಡೆದುದೊ ಪೇಳೆನೆ
ಸೊಗಯಿಸಿದುವು ತೊಳಗಿ ಬೆಳಗಿ ತಾರಗೆ ನಭದೊಳ್ ೫೯

ದಿನಕರನೆಸೆವಾಕಾಶಾ
ವನಿಯೊಳ್ ದಶಶತಕರಾನುಕೂಲಂ ಮನದೊಂ
ದನುನಯದಿಂ ಬಿತ್ತಿದ ಬೆಳ
ಗಿನ ಬೀಜಾಂಕುರಮಿವೆನಿಸಿದುವು ತಾರಗೆಗಳ್ *೬೦

ಅಂಬುಜನಿಜಸಖನಸ್ತಮ
ಯಂಬರಮಂಬರದ ನಡುವೆ ಬಹುತರದಿಂ ನೆ-
ಯ್ದಂಬರದೊಳ್ [೨]ಕೆಯ್ಗೊಳಿಸಿದ[೨]
ಚುಂಬಿತರತ್ನಂಗಳಂತೆ ತಾರಗೆ ಮೆಱೆಗುಂ ೬೧

ನೆಟ್ಟನೆ ಬಂದಪನೆನ್ನಯೆ
[೩]ನಿಟ್ಟಿಯ[೩] ನಿಧಿ ಚಂದ್ರನೆಂದು [೪]ರಾತ್ರೀವಧು[೪] ತಾಂ
ಕಟ್ಟಿದ ಬಹುರತ್ನದ ಮೇ
ಲ್ಕಟ್ಟೆನಿಸಿದುದಂಬರಂ ಸು ತಾರಾಗಣದಿಂ ೬೨

ಅಂದಂಬರಗಂಗೆಯ ಮುಳಿ
ಸಿಂದಂ ಕಾಳಿಂದಿ ಕಲಕೆ ಕರ್ಪುಗಲ್ಕ
ಲ್ಲೊಂದಿದ ಮುಕ್ತಾವಳಿಯೆಂ
ಬಂದದಿ ತಾರಗೆಗಳೆಸೆದುವಾ ನಭದೆಡೆಯೊಳ್ ‡೬೩

ಅಂತೆಸೆವ ನಕ್ಷತ್ರೋದಯಸಮನಂತರದೊಳ್,

೧–೧ ನೆಱೆತಾನ (ದಾ). ೨–೨ ಮೆಯ್ಗೊಳಿಸಿದ (ಕಾ). ೩–೩ ನಿಟ್ಟೆಯ (ಕಾ). ೪–೪ ರಾತ್ರಿವನಿತೆ (ಡ); ರಜನೀವಧು (ಓ) * ೬೦ ನೆಯ ಪದ್ಯವು ಕ ಡ ಪ್ರತಿಗಳಲ್ಲಿಲ್ಲ. ‡೬೩ನೆಯ ಪದ್ಯವು ಬ ಮ ಅ ಕ ಡ ಗ ಓ ಪ್ರತಿಗಳಲ್ಲಿಲ್ಲ. ಮತ್ತು ಬೆ ಯ ದಾ ಗ ಸೆ ಪ್ರತಿಗಳಲ್ಲಿ ಈ ಪದ್ಯವಲ್ಲದೆ ಇದರ ಮುಂದೆ–ಉದಯಿಸತಿ ತನ್ನ ನಲ್ಲಂ। ಉದಧಿಯೊಳೆಳೆಯಲ್ಕೆ ತನಗೆ ಮುತ್ತಯ್ದೆತನ ॥ ಕ್ಕಿದು ಸಲ್ಲದೆನುತ್ತುಂ ಹಾ। ರದ ಮಣಿಯಂ ಕಿಳಲುದಿರ್ದವೊಲುಡುಗಣ- ಮೆಸೆಗುಂ ॥ ಎಂಬ ಪದ್ಯವೂ ಇರುತ್ತದೆ.

ಮತ್ತೇಭ

ಇದು ಸಂಕ್ರಂದನದಿಗ್ವಧೂನಿಟಿಲಸಿಂಧೂರಾಂಶುವೊ ನೋಡು ನೋ
ಡಿದು ಪುಷ್ಪಾಯುಧಪದ್ಮರಾಗಮುಕುರಪ್ರದ್ಯೋತಮೋ ಪೇಳ್ವೊಡಿಂ
ತಿದು ವಿಸ್ತಾರಿತ ಕಾಮಹೋಮಹುತಭುಕ್ಪ್ರಜ್ವಾಲೆಯೋ ಎಂಬ ಸಂ
ಪದಮಂ [೧]ಬೀಱ್[೧]ದುದಿಂದ್ರ[೨]ದಿಗ್ವಿವರ[೨]ದೊಳ್ ಚಂದ್ರದ್ಯುತಿ[೩]ಪ್ರಾಭವಂ[೩] ೯೪

ಆಗಳ್,

ಚಂಪಕ

ಕರಮೊಸೆದತ್ತು ಕೌಮುದಿಯ ಬಿತ್ತು ಚಕೋರಿಯ ತುತ್ತು ನೀರಜೋ
ತ್ಕರದ ವಿಪತ್ತು ತಾರೆಗಳ ತುತ್ತು ಸುಧಾಂಬುಧಿಯೊತ್ತು ಮತ್ತಮಂ
ಬರದ ಪುಳಿಂದಿ ತಾಳ್ದಿಸೆವ ಮೂಗಿನ ಮುತ್ತು ಮಗುಳ್ದು ನೋಡಲ
ಚ್ಚರಿಯೆನಿಸಿತ್ತು ಮೂಡದೆಸೆಯಿಂದೊಗೆತರ್ಪ ಹಿಮಾಂಶುಮಂಡಲಂ ‡೯೫

ಮಹಾಸ್ರಗ್ಧರೆ

ಮುದದಿಂ ತಂದಿರ್ಕೆ ಪೂರ್ವಾಂಗನೆ ಗಿರಿಶಿರದೊಳ್ ಪೀಠಮಂ [೪]ಸತ್ತ್ರಭಾ[೪]ಸಂ
ಪದಮಂ ಕೆಯ್ಗೊಟ್ಟು ಚೈತ್ರಂ ನಡೆಶರೆ ಮದನಂ ಪುಷ್ಪಬಾಣಂಗಳಂ ಹೂ
ಡಿದ ಬಿಲ್ಲಂ ಪೊತ್ತು ಪಿಂದಂ ಬರೆ ನವಕುಮುದಾಮೋದಮಾಧುರ್ಯದಿಂ ಷ
ಟ್ಪದಗಾನಂಬೊಣ್ಮೆಸುತ್ತುಂ ಶಶಿಯುದಯದೊಳೊಪ್ಪಿತ್ತು ರಾಜೋಪಚಾರಂ ೯೬

ಅಂತೊಪ್ಪುತ್ತುಮಿರೆ,

ಮತ್ತೇಭ

ವಿದಳತ್ಕೈರವರಾಜಿ ರಾಜಬಲದಿಂ ಸಂತೋಷಮಂ ಮುಟ್ಟಿ[೫] ಸಂ
ಮುದಮಂ[೫] ತಾವರೆಯೆತ್ತಿ ಕಟ್ಟಿ ತಮಮಂ ಶೀತಾಂಶುವೆಳ್ಪಟ್ಟಿ ಪೆ
ರ್ಚಿದಗುರ್ವಿಂ ವಿರಹಾಳಿಯಂ ಕುಸುಮಬಾಣಂ ಕಾಯ್ದು ಬೆನ್ನಟ್ಟಿ ಮೆ
ಟ್ಟಿದನಿಂದ್ರಾಚಲಚೂಡಮಂ ಕಿರಣವೀಥೀಸಾಂದ್ರಮಂ ಚಂದ್ರಮಂ ೯೭

ಮತ್ತಮಲ್ಲದೆ,

೧–೧ ಬೀಱಿ (ಮ). ೨–೨ ದಿಗ್ವದನ (ಅ). ೩–೩ ಪ್ರೋದ್ಭವಂ (ಮ ದಾ). ೪–೪ ತತ್ತ್ರಭಾ (ಗೊ). ೫–೫ ಸಂ | ಮದದಿಂ (ಕಾ). ‡ ೯೫ನೆಯ ಪದ್ಯವು ಮ ಬ ಅ ಕ ಓ ದ ಗ ಪ್ರತಿಗಳಲ್ಲಿಲ್ಲ.

ಅದು ಪೊಸಪವಳದ ಬಂಧೂ
ಕದ ಕೆಂದಾವರೆಯ [೧]ದಾಸಣದ[೧] ಪೂವಿನ ವ
ರ್ಣದ ಸಂಪದದಿಂ [೨]ಮುದದಿಂ
ಮುದದಿಂದೊಪ್ಪಿತ್ತು[೨] ಚಂದ್ರಬಿಂಬವಿಡಂಬಂ ೯೮

ಇದು ವಿರಹವಾರ್ಧಿ[೩]ಮಧ್ಯ
ಪ್ರದೇಶದಿಂದೊಗೆವ ರಾಗವಡಬಾನಳಪಿಂ
ಡದವೋಲ್ ವಿರಹಿಗೆ ತೋಱಿದು
ದು[೬]ದಯಾದ್ರಿಯ ಮೇಲೆ ಮೆಱೆವ ಹಿಮಕರಬಿಂಬಂ ೯೯

ಅನಂತರಂ,

ಅದಿರದೆ[೪]ವಿರಹಿಗಳತಿಸಂ[೪]
ಮುದದಿಂ ಬರ್ಪಾಗಳೊಲ್ದು ಮಧು ಮದನಂಗೆ
ತ್ತಿದ ಮುತ್ತಿನ ಸತ್ತಿಗೆಯೆನಿ
ಸಿದುದಿಂ[೫]ದ್ರಾಶಾನಿವೇಶ[೫]ದೊಳ್ ಶಶಿಬಿಂಬಂ ೧೦೦

ಉತ್ಪಲ

ಮುಂದೆ ತಮಂಧಮಿಟ್ಟಣಿಸಿ ರಾಹುವಿನಂತಿರೆ ಪೂರ್ವವೈರಮಂ
ಮುಂದುಗೊಳುತ್ತೆ ಎನ್ನನಿದು ಮಾಡುವ ಮಾಳ್ಕೆಯನಿಂದು ಮಾಳ್ಪೆನಾ
ನೆಂದು ತದೀಯರೂಪನುಱೆ ನುಂಗೆ ತನುಚ್ಛವಿಯಿಂದೆ ತೋಱಿತೆಂ
ಬಂದದೊಳೊಪ್ಪುತಿರ್ದುದು ನಿಶಾಕರಮಂಡಲದಲ್ಲಿ ಲಾಂಛನಂ ೧೦೧

ಒಡವುಟ್ಟಿದ ಬಿಸಮಿದನಾಂ
ಕಡೆನೂಂಕಲದೇಕೆ ಕೂಡಿ ನಡೆವೆನೆನುತ್ತುಂ
ದೊಡಲೊಳಗಿಂಬಿಟ್ಟೆಯ್ದುವ
ಪಡಿಯೆನಲೊಪ್ಪಿದುದು ಲಾಂಛನಾಂಕಿತಚಂದ್ರಂ *೧೦೨

೧-೧ ದಾಸಳದ (ಕಾ ಕ ಡ). ೨-೨ ಮುದದಿಂ । ಸದಮಳವೊಪ್ಪಿತ್ತು (ಬ). ೩-೩ ಮಧ್ಯದೊ । ಳದಟಂದಿಹ ಬಾಡಬಾನಲಂ ತಾನುರಿವಂ ॥ ದದಿ ವಿರಹಿಗಳ್ಗೆ ತೋಱಿ । ತ್ತು (ಅ). ೪-೪ ವಿರಹಿಗಳನೆಸಲ್ (ಕ ಬ ಡ); ವಿರಹಿಗಳನಿಸಲ್ (ಕಾ ಪ); ವಿರಹಿಯನೆಸೆಯಲ್ (ಅ). ೫-೫ ದ್ರಾ ದ್ರಿಪ್ರದೇಶ (ಅ). ೬-೬ ಮಧ್ಯದೊಳಿರ್ದ (ಬ ಯ).
* ೧೦೨ ನೆಯ ಪದ್ಯವು ಬ ಮ ಅ ಕ ಡ ಗ ಓ ಪ್ರತಿಗಳಲ್ಲಿಲ್ಲ.

ಇಂತಾದ ಚಂದ್ರೋದಯಮಂ ಕಂಡು ಭೋಗಸಹಾಯರಪ್ಪ ನಾಗರಿಕ ವಿಟ ವಿದೂಷಕ ಪೀಠಮರ್ದಕರ್ ಭರದಿಂ ಪರಿತಂದು ಆಸ್ಥಾನದೊಳಿರ್ದ ಗೋತ್ರರಾಜಂಗೆ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ದೇವಾ, ಪತಂಗಂ ಪಶ್ಚಿಮಾಬ್ಧಿಯೊಳಿಳಿದಂ ಸರಸಿರುಹಂ ಸುರುಳ್ದುವು ಕುಮುದಕುಲಂ ರಮಣೀಯಮಾದುವು ಕೋಕಂಗಳ-ಗಲ್ದು ಶೋಕಮನೆಯ್ದಿದುವು ಪಕ್ಕಿಗಳ್ ಪಕ್ಕೆಗೆ ಸಾರ್ದುವು ಮೃಗಂಗಳ್ ನಗಮ-ನೊತ್ತುಗೊಂಡುವು ಇಳೆಯ ಜನಂ ನಿಳಯಮಂ ಪೊಕ್ಕುದು ಕತ್ತಲೆಯೊತ್ತರಿಸಿತ್ತು ಜಾರೆಯರ್ ಹಾರಯಿಸಿದರ್ ಗಗನದೊಳ್ ಭಗಣಂ [೧]ಸೆಗೆದುದು[೧] ಚಂದ್ರಂ ಶೈಳೇಂದ್ರಮನೇಱಿದಂ ಬೆಳ್ದಿಂಗಳ್ ಬೀದಿವರಿದುದು ಅಸತಿಯರ್ ದೆಸೆಗೆಟ್ಟೋಡಿ-ದರ್ ಚಕೋರಮುಖಂ ವಿಕಸಿತಮಾದುದು ಮನ್ಮಥಂ ನನೆಗಣೆಯಂ ಹೂಡಿದಂ ವಿರಹಿಗಳ್ [೨]ವಿರಥ[೨]ರಾದರ್ ದೇವಾ ಇಂದಿನ ದಿನಂ ಬೇಳತಿಗೆ ಬೆಳ್ದಿಂಗಳೊಳ್ ಪುರವೀಥಿಯ ವಿಳಾಸಮಂ ಕೆಯ್ಮಿಕ್ಕು ನೋಡಿ ರಾತ್ರೀವಿಹಾರಮಂ ಮಾಡಲ್-ವೇಳ್ಪುದೆಂದು ಬಿನ್ನಯ್ಸಿದ ಮನ್ನಣೆಯ ರಸಿಕರ್ಗೆ ಪಸಾಯನಮನಿತ್ತೋಲಗಮಂ ಪರೆಯಲ್ವೇಳ್ದು ನಾರದನೊಡಗೂಡಿ ನಗರಾಜಂ ನಿರ್ಮಳೀಕೃತಕರಚರಣನುಂ ಭಸಿತಾವಯವನುಂ [೩]ರುದ್ರಾಕ್ಷಮಾಲಾಲಂಕೃತನುಂ[೩] ಶಿವಲಿಂಗೇಕ್ಷಣನಿತ್ಯನಿಯಮ ಸಂಪನ್ನನುಂ ಪ್ರಸಾದಭರಿತ[೪]ಶರೀರನುಂ[೪] ಸುಗಂಧಮಯತಾಂಬೂಲಮುಖನುಂ ಕುಸುಮಾವಳೀಪರಿವೃತಕಬರೀಭರನುಂ ಯಕ್ಷಕರ್ದಮಕಕ್ಷಪುಟನುಂ ನವ್ಯ[೫]ವಸ್ತ್ರ-ಪರಿವೃತನುಂ[೫] ದಿವ್ಯಾಭರಣಸರ್ವಾಂಗನುಮಾಗಿ [೬]ದಕ್ಷಿಣಾನುಕೂಲಧೃಷ್ಟ[೬]ಶಠ-ನಾಯಕರೆಂಬ ರಾಜಪುತ್ರರಂ ಕೂಡಿಕೊಂಡು ಸಕಲಸುಕುಮಾರಭೋಗ[೭]ನಿಯೋಗ-ನಿರತರ್[೭] ಪಿಂತೆ ಬರೆ ನಾರದಮುನೀಂದ್ರಸಹಿತಂ ಗಿರಿರಾಜಂ ತನ್ನರಮನೆಯಂ ಪೊಱಮಟ್ಟು ರಾಜವೀಥಿಯೊಳ್ ನಿಂದು [೮]ಪೂರ್ವದಿಶಾವಲೋಕನನಾಗಿ[೮] ಕಟ್ಟಿ-ದಿರೊಳಿಟ್ಟಣಿಸಿದ ಬೆಳಗಿಂ ದಟ್ಟಯ್ಸಿ ತೋರ್ಪ ಚಂದ್ರಬಿಂಬಮಂ ನೋಳ್ಪಾಗಳ್,

ಸರಸನೆನಿಸಿರ್ದ ಸಖನಾ
ಗರಿಕಂ [೯]ಕೆಲಸಾರ್ದು[೯] ನಿಂದು ಕೆಯ್ಮುಗಿಯುತ್ತುಂ
ಪರಿಪೂರ್ಣಚಂದ್ರಮಂಡಲ
ದಿರವಂ ಕಂಡಾಗ[೧೦]ಳವನಿಪಂ[೧೦]ಗಿಂತೆಂದಂ ೧೦೩

೧–೧ ನೆಗೆದುವು (ಬ ಯ ಮ ಬೆ). ೨–೨ ವಿರತ (ಕಾ ಕ ಬೆ). ೩–೩ ರುದ್ರಾಕ್ಷಾ-ಭರಣಭೂಷಿತನುಂ (ದಾ). ೪–೪ ಸಂತೃಪ್ತನುಂ (ಗೊ ಯ). ೫–೫ ವಸ್ತ್ರಪರಿವಸನನುಂ (ಮ ಯ ಅ ಬ); ವಸನಾಚ್ಛಾದಿತನುಂ (ಬೆ ಕೊ). ೬–೬ ದಾಕ್ಷಿಣ್ಯನನುಕೂಲಂ ಧೃಷ್ಟಂ (ಮ ಯ ಬ ಬೆ ದಾ ಅ ಸೆ ಗ). ೭–೭ ನಿಯೋಗನಿಕರಂ (ಕಾ ಅ ಬೆ); ನಿಯೋಗರ್ (ಕ). ೮–೮ ಪೂರ್ವದಿಶಾವಲೋಕನಮುಖನಾಗಿ (ಯ); ಪೂರ್ವದಿಶಾಮುಖಾವಲೋಕನನಾಗಿ (ಕಾ ಬೆ). ೯–೯ ಕೆಯ್ಸಾರ್ದು (ದಾ). ೧೦ ಳಚಳಪತಿ (ಕಾ ದಾ ಬೆ).

ಉತ್ಪಲ

ಇಂದು ಸುಧಾಂಶುರಾಜನತಿಶೀತಳಶೀಲನನೂನದಾನಿಯೋ
ಳ್ತಂದೊಡೆ ಕೈರವಕ್ಕೆ ಶಶಿಕಾಂತದ ಕಲ್ಗೆ ಚಕೋರಮಾಲೆಗಾ
ನಂದಮುದಾಯ್ತು ಪಂಕಜಕೆ ಚಕ್ರಯುಗಕ್ಕಸತೀಕುಲಕ್ಕೆ ಪೋ
ದಂದುಗಮಾಯ್ತು ಸರ್ವಜನಸಮ್ಮತನಾವ[1]ನಗಾಧಿ[1]ನಾಯಕಾ ೧೦೪

ಮತ್ತಮಲ್ಲದೆ,

ಕಮಲಂಗಳೊಡನೆ ಧಾತ್ರೀ
ಕುಮುದಂ ಮುಗಿದಿರ್ದುವರಸ ಕುಮುದದೊಡನೆ ತತ್
ಕಮಲಂ ಮಿಕ್ಕಲರ್ದುವು ಚಂ
ದ್ರಮನುದಯದೊಳೆಂದೊಡಿಳೆಗದೇಂ ಕೌತುಕಮೋ ೧೦೫

ಮತ್ತಮಲ್ಲದೆ ದೇವಾ, ಪರ್ಬಿದ ಬೆಳ್ದಿಂಗಳಗುರ್ಬನೇನಂ ಬಣ್ಣಿಪೆಂ

ಮುನ್ನಂ ಪಯೋಧಿ ಪಡೆದೊಡೆ
ತನ್ನಂ ಶಶಿ ಪಡೆದನಾ ಪಯೋಧಿಯನೆಂಬಂ
ತುನ್ನತಿವೆತ್ತುದು ರಾಜೋ
ತ್ಪನ್ನಮಭಿನ್ನಂ ಪ್ರಸನ್ನಮೊಪ್ಪುವ ಜೊನ್ನಂ ೧೦೬

ಮತ್ತೇಭ

ಹರನುದ್ಧೂಳಿಸಿದತ್ಯನೂನಭಸಿತಪ್ರದ್ಯೋತಮೋ ಚಂದ್ರಶೇ
ಖರನಾನಂದಮಯಾಟ್ಟಹಾಸರುಚಿಯೋ ಸರ್ವೇಶ ಸತ್ಕೀರ್ತಿಯೋ
ಪರಮೋತ್ತುಂಗಮರುನ್ನದೀಪ್ರಬಳಗೌರಚ್ಛಾಯೆ ಭೂಭಾಗದೊಳ್
ಪರೆದತ್ತೋ ಎನೆ ಪರ್ವಿತುರ್ವಿಯನಗುರ್ವಿಂ ಸಾಂದ್ರಚಂದ್ರಾತಪಂ ೧೦೭

ಚಂಪಕ

ಮುಡಿವೊಡೆ ಮಲ್ಲಿಕಾಪ್ರತತಿ ಪೂಸುವೊಡುತ್ತಮನವ್ಯಚಂದನಂ
ತುಡುವೊಡೆ ಮೌಕ್ತಿಕಾಭರಣವೀಸುವೊಡಂತಮೃತಾಬ್ಧಿ[2]ಪೊರ್ದು[2]ಕೊ
ಳ್ವೊಡೆ ಧವಳೋತ್ತರೀಯಮೊಸೆದೀಂಟುವೊಡಾ ನವದುಗ್ಧಮೊಲ್ದು ನೋ
ಳ್ಪೊಡೆ ರಜತಾದ್ರಿಯೆಂದೆನಿಸಿ ತೋಱಿತು [3]ಮಿಾಱಿದ[3] [4]ಚಂದ್ರಿಕೋಜ್ವಳಂ[4] ೧೦೮

೧-೧ ನಿಳಾಧಿ (ಬ ಯ ಅ ಗೂ ಓ). ೨-೨ ತಾಳ್ದು (ಮ); ಪೊರ್ದಿ (ಶಾ). ೩-೩ ಮಿಾಱಿತು (ಬ ಯ ಅ). ೪-೪ ಚಂದ್ರನುಜ್ವಳಂ (ಅ ಓ).

ಸಕಳ[೧]ಜನಂ[೧] ಕೌಮುದಿಯಿಂ
ದೆ ಕಡೆದು ಕಂಡರಿಸಿತೆಂಬ ನುಡಿ ಚಿತ್ರಮೆ ಕೌ
ತುಕಮರಸ ಚಂದ್ರಮಂ ಚಂ
ದ್ರಿಕೆ ಕವಿದ ಕಳಂಕಚಂದ್ರನಂತೆಸೆದಿರ್ದಂ ೧೦೯

ಶಿವಕೀರ್ತಿರಸದೆ [೨]ಬೊಮ್ಮಂ[೨]
ತವೆ ತೊಳೆದನೊ [೩]ಜಗಮನಮೃತ[೩]ವಾರ್ಧಿಯ ಬೆಳಗಿಂ
ಧವಳಿಸಿದನೊ ಪೇಳೆನೆ ಭೂ
ಭುವನಮನೆಡೆಗೊಂಡು[೪]ದಚ್ಚ[೪]ಪೊಸವೆಳ್ದಿಂಗಳ್ ೧೧೦

ಇಂತೊಪ್ಪುವ ಸಾಂದ್ರಚಂದ್ರಿಕಾಸಂಪದಮಂ ನಗೇಶ್ವರಂಗೆ ನಾಗರಿಕಂ ನಲಿನಲಿದು ತೋಱುತ್ತುಂ ವಿೞಿ ಬರೆವರೆ ಪಟ್ಟಣದ ದಟ್ಟಯ್ಸಿದ ಪಲವುಂ ವೀಥಿಗಳ ವಿಚಿತ್ರವಿಭ್ರಮಮಂ ಶೈಲಪತಿಯಾಲೋಕಿಸುತ್ತುಂ ಕೇಳುತ್ತುಂ ಬಾಳುತ್ತುಂ ಕೇಳೀವನಮಂ ಪುಗುತರ್ಪಾಗಳ್,

ಸುಗಿದಿವೆ ಕಮಳಂ ಕುಮುದಂ
ನಗುತಿವೆ ಕೋಕದ್ವಯಂ ರತೀಶ್ವರನೆಸುವಿಂ
ದುಗಿಬಗಿಯಾಗುತ್ತಿವೆ ಮಿಗೆ
ಬಗೆವೆರ್ಚುತ್ತಿವೆ ಸರಾಗಪೂರಚಕೋರಂ ೧೧೧

ಉತ್ಪಲ

ಚೂತಮನಪ್ಪಿ ಪುಷ್ಪವತಿಯಾದುದು ಮಲ್ಲಿಗೆ ಶೀತಕೃತ್ಕರ
ವ್ರಾತಮನಪ್ಪಿಯೊಪ್ಪೆ ಕರಗಿತ್ತು ಹಿಮೋಪಲಮೋತು ತುಂಬಿಯುಂ
ಪ್ರೀತಿಯೊಳಪ್ಪಿ ಗರ್ಭಿಣಿಯದಾಯ್ತು ಸರೋರುಹಮುತ್ಪಲಂ ಪ್ರಸೂ
ತಾತುರೆಯಾಗಿ ಪೆತ್ತುದಳಿಯಂ ನವಚಂದ್ರಿಕೆಯೊಳ್ ನಗೇಶ್ವರಾ ೧೧೨

ಮತ್ತಮಲ್ಲದೆ,

ಎಳದಳಿರೊಳರಲೊಳಾಮ್ರದ
ನೆಳಲೊಳ್ ಪುಳಿನಂಗಳೊಳಗೆ ಶಶಿಕಾಂತಶಿಲಾ
ತಳದೊಳ್ ಕೊಳದೊಳ್ ವನದೊಳ್
ತಳರದ ವಿರಹಿಗಳ ವೀಥಿಯಿಂದೆ ಗಿರಿ[೫]ರಾಜಾ[೫] ೧೧೩

೧-೧ ಜಗಂ (ಯು ಬ ದಾ). ೨-೨ ಜಗಮಂ (ಬೆ ಬ ಯು). ೩-೩ ಬೊಮ್ಮನಮೃತ (ಬೆ ಬ ಯು). ೪-೪ ದಮುಮ (ದಾ). ೫-೫ ನಾಥ (ಶಾ ಕ).

ಉತ್ಪಲ

ಒತ್ತುವ ಪದ್ಮಪತ್ರಕದಳೀದಳಸಂಕುಳಮೆಯ್ದೆ ಬೆಂದು ಸೀ
ಯುತ್ತಿವೆ ದೂರದಿಂದೆ ಸಖಿಯರ್ ತವೆ ಚೆಲ್ಲುವ ಶೀತವಾರಿಯು
ಕರ್ಗುತ್ತಿವೆ ಬೀಸುತಿರ್ಪ ಕುಸುಮೋಜ್ವಳವೀಜನವೃಂದಮೋವೊ ಪೊ
ತ್ತುತ್ತಿವೆ ತನ್ವಿಯೋ ವಿರಹವಹ್ನಿಗೆ ಪುಟ್ಟಿದದೊಂದು ಮೂರ್ತಿಯೋ ೧೧೪

ಸಂದಣಿಸಿ ಮಾಣದಾಳೀ
ವೃಂದಂ ಶಿಶಿರೋಪಚಾರಮಂ ಲಲನೆಗೆ ಮಾ
ಳ್ಪಂದಂ ಘೃತದಿಂ ಕಿರ್ಚಂ
ನಂದಿಪ ತೆಱನಾಗಿ ತೋಱುತಿದೆ [1]ನೋಡರಸಾ[1] ೧೧೫

[2]ತಾಳ್ದದ[2] ವಿರಹದೊಳೀಕೆಗೆ
ಬೆಳ್ದಿಂಗಳ್ [3]ಬಿಳಿಯ[3] ಕಿರ್ಚು ಸಸಿ ಬಿಸಿ ಕಾವಂ
ತೂಳ್ದುವ ದಾವಂ ಚೈತ್ರಂ
ಸೀಳ್ದಿಕ್ಕುವ ಕುಂಭಿ ಕದಳಿ ಕದಳೀಘಾತಂ ೧೧೬

ಎಂದಿಂತು ವಿರಹಾತಿಶಯಮಂ ಬಿನ್ನವಿಸುತ್ತುಂ ಬರೆವರೆ ಮುಂದೊಂದೆಡೆಯೊಳ್,

ಮಿಗೆ ಸೌಕುಮಾರ್ಯನವವ
ಸ್ತುಗಳಂ ಪೆಸರ್ಗೊಂಡೊಡುಳಿಯಳವಳೆನುತುಂ ಸು
ತ್ತುಗವಳಲುತ್ತುಂ ಸಂಜ್ಞೋ
ಕ್ತಿಗಳಂ ತೋಱುತ್ತುಮಿರ್ದುದಬಳಾನೀಕಂ ೧೧೭

ಚಂಪಕ

ಇದೆ ಪಿಕನೆಳ್ಪು ಹಂಸೆ ಬರುತಿರ್ದುದೆ ನೂಂಕು ಮಧುವ್ರತಾಳಿ ಮುಂ
ದಿದೆಯಿಡು ಚಂಪಕಪ್ರಸವದಿಂ ಗಿಳಿವಿಂಡಿದೆ ಸೋವು ಮಾರುತಂ
ಮುದಮುಖದಿಂದೆ ತೀಡುತಿದೆಯೊಡ್ಡು ಸೆಱಂಗನೆನಿಪ್ಪ ತಮ್ಮ ಹ
ಸ್ತದ ನಿಜಸಂಜ್ಞೆಯಿಂ ಸುದತಿಯರ್ ನುಡಿದರ್ ಶಿಶಿರೋಪಚಾರದೊಳ್ ೧೧೮

೧-೧ ಗಿರಿರಾಜಾ (ಗ). ೨-೨ ತಾಳ್ದ (ಕಾ ಬೆ) ತಾಳ್ದೀ (ಅ). ೩-೩ ಪುಸಿಯ; (ಮ ಗೊ ಕ ಡ).

ಮತ್ತಮೊಂದೆಡೆಯೊಳೊರ್ವ ತರುಣಿಗತ್ಯಧಿಕವಿರಹತಾಪಂ ಒಳಗಂ ಪೊಱಗಂ ತೆಕ್ಕನೆ ತೀವೆ ತಳತಳಿಸಿ ಕಾಯ್ದು ಘುಳುಘುಳಿಸುವಯಃಪಿಂಡಮೆಂದು ಶಶಿಮಂಡಲಮಂ ನೋಡಲಂಜಿ ಕಣ್ಮುಚ್ಚಿ ಬಿಡಱುತ್ತುಂ ಬಿಸಿಯ ಬೆಳಗೆಂದು ಬೆಳ್ದಿಂಗಳ ಸೋಂಕಿಂಗೆ ಮೆಯ್ದೆಗೆದು ಸುಗಿಯುತ್ತುಂ ಬಾಳ ಬಾಯ್ದಾರೆಯ ಸೋಂಕೆಂದು ಕದಳೀದಳಸ್ಪರ್ಶನಕ್ಕೆ ದರ್ಪಂಗೆಟ್ಟೊಪ್ಪಂಗುಂದುತ್ತುಂ ವಸಂತನೆಂಬ ಕಮ್ಮಱಿಂ ಶಶಿಬಿಂಬದ ಪೊಸಸಾಣೆಯೊಳೊತ್ತಿ ಮಸೆವ ಕಾಮದೇವನ ಕೂರಲಗಿನ ದನಿಯೆಂದು ಕೋಕಿಲಧ್ವನಿಗಾಕಂಪನಂಗೊಳುತ್ತುಂ ಮಕರಧ್ವಜವೇತ್ರಧರಮುಖಜನಿತಮುಖರಗರ್ಜನಾರವಮೆಂದು ಚಪ್ಪರಿಪ ಗಿಳಿಗಳ ಬಳಗಕ್ಕೆ ಧರೆಗಿಳಿಯುತ್ತುಂ ಬಿಡದಿಸುವ ಕುಸುಮಕೋದಂಡಚಂಡಪ್ರಸವಬಾಣಭೀಂಕಾರಘೋರಧ್ವನಿಯೆಂದುಱೆ ಝೇಂಕರಿಸುವ ತುಂಬಿಗಳ ಝೇಂಕಾರಕ್ಕೆ ಭೋಂಕನೆ ನಡುಗಿ ಶಂಕಿಸುತ್ತುಂ ಚೈತ್ರರಾಜತೇಜಃಪ್ರತಾಪದುರಿಯ ಹಳವಿಗೆಯ ಹೊಯ್ಲೆಂದು ಬೀಸುವ ಪೊಂಬಾಳೆಯ ಚಾಮರದೆಲರ್ಗೆ ಕೊಱಗಿ ಕಳೆಗುಂದುತುಂ ಸಖೀಜನಂ ಕೆಯ್ಗೊಟ್ಟೆಯ್ತಂದು ಕೊಳನಂ ಪುಗಿಸೆ ಮೆಯ್ಯ ಬೆಂಕಿಯಿಂ ಚುಯ್ಯೆಂದು ನೊರೆಗಟ್ಟಿ ಬಿಸಿಯ ತೆರೆ [1]ತನುಮುಟ್ಟ[1] ಸೆಕೆಯುಸಿರ್ ಭುಗಿಲನೊಗೆದು ಕಾದ ನೀರ್ ಕಾಯಮಂ ಸುಡೆ ಘಳಿಲನೆ ಪೊಱಮಟ್ಟು ಕೆಳದಿಯರಂ ನೆಮ್ಮಿ ಹಮ್ಮೈದಂಬೋಗುತ್ತುಂ ಕಾಮಂಗೆ ಕನಲ್ದು ವಸಂತಂಗಳಲ್ದು ಎಳಲತೆಗೆ ಬಳಲ್ದು ಪಲ್ಲವಕ್ಕೆ ಕಳಲ್ದು ಕುಸುಮಕುಲಕ್ಕೆ ಬಸವಳಿದು ಮಂದಾನಿಳಂಗೆ ಮದವುಡುಗಿ ಕಾಮನ ಕಾರಾಗಾರದೊಳಿರ್ಪಂತೆ ಕೇಳೀವನದೊಳಿರ್ಪ ಬಾಲಕಿಗೆ ಚಂದ್ರನ ದಾಳಿ ಅಳಿಗಳ ದಳವುಳಂ ಬಸಂತನ ಬಂದಿ ಬಾಲಚೂತದ ಭಯಂ ಮಳಯಾನಿಳನ ಗಾಸಿ ಶಿಶಿರೋಪಚಾರದ ದಂಡಣೆಯುಖಂಡಿತವಾಗೆ ಕೊಱಗಿ ಕರಗಿ ಕಂದಿ ಕುಂದಿ ಕೋಡಿ ಬಾಡಿ ಸುರುಳ್ದುರುಳ್ದು ತೆರಳ್ದು ಒಳಗಾಱೆ ಬಿಸುಪೇಱೆ ಕಳೆಗುಂದಿಯಾಸೆಯಱಿತು ನೋಟಂ ಬಱಿತು ವಿರಹಾಗ್ನಿಯೆತ್ತಿ ಮನಂ ಪೊತ್ತಿ ಬುದ್ಧಿ ಕವರ್ದು ಅಹಂಕಾರಂ ಹೊಗೆದು ಚಿತ್ತಂ ಬೆಂದು ಹರಣಮುರಿದು ಹಮ್ಮಯ್ಸಿ ಕಣ್ಮುಚ್ಚಿ ವಿರಹದ ಕರುವಿನಂತೆ ಕರುಣದ ಹಾಹೆಯಂತೆ ದೈನ್ಯದ ಸೀಮೆಯಂತೆ ಕಾರ್ಪಣ್ಯದ ನೆಳಲಂತೆ ವಿಲಾಸದ ವಿರತೆ ವಿಭ್ರಮದಭ್ರಚ್ಛಾಯೆ ಲಾವಣ್ಯದ ಬಂಜೆ ಭೋಗದ ವಿಯೋಗಿಯೆನಿಸಿರ್ದ ತರುಣಿಯರ ವಿರಹಾತಿಯುಶಮಂ ಗಿರಿರಾಜಂ ಕರುಣಿಸಿ ನೋಡಿ ಕೌತುಕಮನಾಳುತ್ತಾ ವನದೊಳ್ ಬೇಯುತ್ತುಮಿರ್ಪ ವಿರಹಿಗಳ್ಗವರವರ ನಲ್ಲರನಲ್ಲಲ್ಲಿ ತಂದು ಸಲ್ಲೀಲೆಯಿಂ ಕೂಡುವುದೆಂದು ಚರರಂ ಪರಿಕಲ್ಪಿಸುತ್ತುಂ ತಿರುಗಿ ನಡೆತಂದು ಪಣ್ಯಾಂಗನಾವೀಥಿಯಂ ಪುಗುತರ್ಪಾಗಳ್

---

೧ ತಾಮುರ್ಟಿಟ್ಟ (ಕಾ); ಕಾಯ್ಪು ಮುಟ್ಟೆ (ಯ ಅ).

ಮಹಾಸ್ರಗ್ಧರೆ

ಯುವತೀಸಂತಾನ ನಾನಾಜಲದಳಕಲಸಲ್ಲಾಸ್ಯಲೀಲಾಪ್ರಬದ್ಧಂ
ವಿವಿಧಾಗಾರಾಂಗಣಪ್ರಸ್ಫುರಿತಕೃತಕಕಾಸಾರಪಾನೀಯಭಂಗೋ
ದ್ಭವಬಿಂದುವ್ರಾತಶೀತಾವರಣನೊಲವಿನಿಂ ತೀಡಿದಂ ಸ್ತ್ರೀಕುಲೋದ್ಯ
ನ್ನವಕಸ್ತೂರೀಹಿಮಪ್ರೋನ್ಮಲಯಜಘುಸೃಣಾಮೋದಭಾರಂ ಸಮೀರಂ ೧೧೯

ಅಂತು ತೀಡುವ ಮಂದಾನಿಳಂಗೆ ಮೆಯ್ಯಾಂತು ಬರೆವರೆ,

ಚಂಪಕ

ಸಕಳನಿಕೇತನಂಗಳೊಳೆ ದರ್ಪಕನುನ್ನತಿ ದರ್ಪಕಾಜ್ಞೆ ದ
ರ್ಪಕನ ಕಥಾಳಿ ದರ್ಪಕನ ವರ್ಣನೆ ದರ್ಪಕನ ಪ್ರಶಸ್ತಿ ದ
ರ್ಪಕನ ವಿಳಾಸವಿಭ್ರಮತೆ ದರ್ಪಕನುಜ್ಜ್ವಳತೇಜದೇಳ್ಗೆ ದ
ರ್ಪಕನ ಸುಕೀರ್ತಿ ದರ್ಪಕನ ದಂಡನೆ ದರ್ಪಕನಾಣೆ ಸುತ್ತಲುಂ ೧೨೦

ರತಿಯ ವಿಲಾಸದಿಂ ರತಿಯ ವಿಭ್ರಮದಿಂ ರತಿಯರ್ಚನಾಳಿಯಿಂ
ರತಿಯತಿತೇಜದಿಂ ರತಿಯ ನೋಂಪಿಗಳಿಂ ರತಿಯಾಣೆಯೋಜೆಯಿಂ
ರತಿಯ ಸುಗೀತದಿಂ ರತಿಯ ನವ್ಯ[೧]ಸುಧಾ[೧]ರಸಪೂರಗೋಷ್ಠಿಯಿಂ
ರತಿಮಯಮಾಯ್ತು ಪಣ್ಯವನಿತಾಪರಿವೀಥಿಯೊ[೨]ಳೆಲ್ಲಿ[೨] ನೋಳ್ಪೊಡಂ ೧೨೧

ಮತ್ತಮಲ್ಲಿ,

ಚಂಪಕ

ಉಳಿ ಕಳೆ ನಿಃಸ್ವನಂ ಕರೆ ಸದರ್ಥನನಿಂಬಿಡು ತಂದ ಮಂಡನಂ
ಗಳನೊಸೆದಳ್ಕಱಿಂ ರತಿಯನರ್ಚಿಸು ಕಾಮನ ನೋಂಪಿಗಿಕ್ಷುಸಂ
ಕುಳಫಳಪುಷ್ಪಮಂ ತರಿಸು ನವ್ಯದುಕೂಲಸುಗಂಧವೃಂದಮಂ
ತಳೆ ನವನಂದನಕ್ಕೆ ನಡೆಯೆಂಬ ರವಂ ಸಲೆ ಗೇಹಗೇಹದೊಳ್ ೧೨೨

ಅಂತು ನುಡಿಪ ಮದನಪ್ರತಾಪವಿತತಚತುರೋಕ್ತಿಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳ್ ಕೆಲಬರ್ ಮುಗ್ಧೆಯರ್ಗೆ ವಿದಗ್ಧೆಯರ್ ಲಲಿತಚರಿತಮಂ ಕಲಿಸುತಿರ್ದರದೆಂತೆಂದೊಡೆ :

೧–೧ ಕಥಾ (ಬ ಯ ಕಾ ಬೆ ಅ). ೨–೨ ಳಿತ್ತ (ಮ ಯ ಬ ದಾ ಅ ಗ ಸೆ).

ಓದಿಸದಿರ್ ಗಿಳಿಯಂ ನಿ
ನ್ನೀದಂತವನೆಸೆವ [1]ದಾಡಿಮಾ[1]ಬೀಜಂ ಗೆ
ತ್ತಾದರದಿಂ ಕರ್ದುಕುಗುಮೆಂ
ದೋದಿಸುತಿರ್ದಳ್ ವಿದಗ್ಧೆ ಮುಗ್ಧೆಯನೊಲವಿಂ ೧೭೩

ತಿಳಿವಿಲ್ಲದೆ ಶಶಿಕಾಂತದ
ಕಳಶಮನೇಕಾಂತೆ ಕಾಂತೆ ನಿನ್ನಮುಖೇಂದೂ
ಜ್ಜ್ವಳಕೌಮುದಿಯಿಂದೊಸರ್ದಪು
ದಿಳಪಿಳಪೆಂದೊರ್ವ ಮುಗ್ಧೆಯಂ [2]ಸಖಿನುಡಿದಳ್[2] ೧೭೪

ಕಂಜದಳೇಕ್ಷಣೆ ನಿನ್ನೀ
ಮಂಜುಳರವದಿಂದೆ ಪಾಡೆ ನವಪರಪುಷ್ಟ
ಪ್ರಾಂಜುಳಮಧುರಧ್ವನಿಯೆಂ
ದಂಜುವರೆಲೆ ಮಗಳೆ ಪಾಡದಿರ್ [3]ವಿರಹಿಣಿಗಳ್[3] ೧೭೫

ತಿಳಕಮದಿಲ್ಲದೆ ಬೆಳ್ದಿಂ
ಗಳೊಳಗೆ ನಿಂದಿರದಿರಬಲೆ ಸಕಳಂಕಂ [4]ನಿ[4]
ನ್ನೊಳಸೂಯೆಗೊಂಡು [5]ನೋಡುವ
ನೆ[5]ಳೆಯಳೆ ಚಂದ್ರಮನ ದಿಟ್ಟಿ ತಾಗದೆ ನಿನ್ನಂ †೧೭೬

ಎಂದು ನುಡಿವ ವಿದಗ್ಧೆಯರ ಪ್ರೌಢವಚನಂಗಳಂ ಕೇಳುತಿರ್ಪ ಮುಗ್ಧೆಯರೊಳೊರ್ವಳ್ ಬೆಳ್ದಿಂಗಳೊಳ್ ನಿಂದು,

ಕಳಶೋದಕದೊಳ್ ಚಂದ್ರನ
ನೆಳಲಂ ಕಂಡೆಲೆಲೆ ಸಿಲ್ಕಿದಂ ಶಶಿಯೆನುತಂ
ದೊಳಪೊಕ್ಕು ನೋಡಿ ಕಾಣದೆ
ಗಳಲನೆ ತಡವರಿಸಿ ತರುಣಿ ತಳವೆಳಗಾದಳ್ ೧೭೭

ಮತ್ತಮೊರ್ವಳ್,

೧–೧ ದಾಡಿಮದ (ಯ ಬೆ ಅ ಸೆ ಗ). ೨–೨ ನುಡಿಯಿಸಿದಳ್ (ಅ). ೩–೩ ವಿರಹಿಣಿಯರ್ (ಕಾ ಅ); ವಿರಹಿಗಣಂ (ಬೆ) ೪–೪ ತ (ಕಾ ಬ ಯ). ೫–೫ ನೋಡಿದೊಡೆ (ಕಾ ಕ ಬ ಯ ಅ). † ೧೭೬ನೆಯ ಪದ್ಯವು ಗ ಪ್ರತಿಯಲ್ಲಿಲ್ಲ.

ಕರತಳಕಳಶೋದಕದೊಳ್
ಸುರುಚಿರಚಂದ್ರಮನ ನೆಳಲನೂನಂ ತೋಱು
ತ್ತಿರೆ ಬೆಳ್ಳಿವಟ್ಟಲೆಂದಾ
ತರುಣಿ ೧ಕರಂ ತೆಗೆದು ತೆಗೆದು೧ ಬೆಱಗಾಗಿರ್ದಳ್ ೧೨೮

ಮಿಗೆ ದಟ್ಟಯ್ಸಿದ ಚಂದ್ರಿಕೆ
ಸೊಗಯಿಸಿ ಕಂಡೊರ್ವ ಮುಗ್ಧೆ ದುಗ್ಧಮಿದೆಂದೆಂ
ದಗಲದೆ ಬದ್ಧಾಂಜಳಿಯಿಂ
ಮೊಗೆಮೊಗೆದಾ ಬಯಲನೀಂಟಿ ಬಳಲುತ್ತಿರ್ದಳ್ ೧೨೯

ಅದಲ್ಲದೆಯುಂ ಮತ್ತಮೊಂದೆಡೆಯೊಳೊರ್ವ ಮುಗ್ಧೆ ಮನೋವಲ್ಲಭಂ ಬಿನವದಿಂ ಬನಕ್ಕೆ ಪೋಗೆ ಸೈರಿಸಲಾಱದಿರ್ಪಲ್ಲಿ,

ಮುಗುಳೊಳ್ ಕಿಡಿ ಬೆಳ್ದಿಂಗಳೊ
ಳಗೆ ದಳ್ಳುರಿ ಪೂವಿನೊಳ್ ಪುಗುಳ್ ಮೂಡುವವೋಲ್
ಮಿಗೆ ಮುಗ್ಧೆಯೊಳತಿವಿರಹಂ
ನೆಗೆದುಮ ಮತ್ತೊರ್ವರಱಿಯುರಂತಿಂತು೨ಸುರಳ್೨ ೧೩೦

ಒಳಗಣ್ಗಂ ಪೊಱಗಣ್ಗಂ
ಬಳಲುತ್ತೆಡೆಯಾಡುವಳ್ ಕರಂ ಬಿಸುಸುಯ್ವಳ್
ಮುಳಿವಳ್ ತನ್ನೊಳ್ ತಾನೇ
ತಿಳಿವಳ್ ಕಳೆಗುಂದುವಳ್ ಕನಲ್ವಳ್ ಕಾಯ್ವಳ್ ೧೩೧

ಒಳಗೊಳಗೆ ಬಳೆಬಳೆದು ಘಟ
ದೊಳಗಣ ದೀಪ್ತಿಯವೋಲಿರ್ಪ ಘನವಿರಹಮನಂ
ತೊಳಕೊಂಡು ನುಡಿಯಲಱಿಯದೆ
ಕಳೆಗುಂದಿದ ಚಂದ್ರನಂತೆ ೩ಕರಗು೩ತ್ತಿರ್ದಳ್ ೧೩೨

ಇರೆ ಹರಣಂ ನಡೆತರ್ಪಂ
ತಿರೆ ವಲ್ಲಭನಲ್ಲಿ ಬರೆ ಸರಾಗೋತ್ಸವದಿಂ
ಕರೆದಿದಿರ್ಗೊಂಡಿರದಿದಿರ್ಗೊಂ
ಡೆರೆದಿದಿರ್ಗೊಂಡಪ್ಪಿಯಪ್ಪಿಯುರಲುತ್ತಿರ್ದಳ್ ೧೩೩

೧-೧ ಕರಂಡೆಗೆದು ನಿಂದು (ಅ). ೨-೨ ಸಿರಲ್ (ಕಾ ಅ). ೩-೩ ಕೊರಗು (ಕಾ ಬೆ ಯ ಬ ದಾ ಅ).

ಭರದಿಂ ಬಂದಚ್ಚಳಿಯದೆ
ಸಿರಿಮಂಚದ ಮೇಲೆ ಲೀಲೆ ಮಿಕ್ಕಾದರದಿಂ
ತರದಿಂ ಪುಳಕಂ ನೆಗೆಯು
ತ್ತಿರೆ ಸುರತಾಂಬುಧಿಯ ಸುಧೆಯ ಸುಳಿಯೊಳ[1]ಗಿರ್ದರ್[1] ೧೩೪

ಮನವಲರೆ ಮುಖವಲರೆ ಲೋ
ಚನವಲರೆ ಕಪೋಲವಲರೆ ಕಂಠವಲರೆ ಸು
ಯ್ಯನುವಲರೆ ತನುವಲರೆ ಮಿ
ಕ್ಕನುಭವಸುಖವಲರೆ ಸುರತ[2]ಸುಖದೊಳಗಿರ್ದರ್[2] ‡೧೩೫

ಆ ಸಮಯದೊಳ್,

ಪುದಿದಾಲಿಂಗನದೊಳಗಾ
ವುದನಾವುದು ಸೋಂಕಿತದೆ ಮುಖೋತ್ಸವಮದೆ ಕಾ
ಮದಮದೆ ಮದನವಿಲಾಸಾ
ಸ್ಪದಮದೆ ಸರ್ವಾಂಗಹರ್ಷಮದೆ ಸಮಯೋಗಂ *೧೩೬

ಇಂತು ಸಮಾನರಾಗಸಂಭೂತ[3]ಸುಖಮುಖ[3]ದೊಳಿರ್ದು ಭರಿತವಾದ [4]ಸುರತ[4]ಶ್ರಾಂತಿಯಿಂ ಪೊಱಪೊಣ್ಮಿದ ಸುಖಸ್ವೇದಬಿಂದುಗಳನಾಱಿಸಲೆಂದು ಮೀಱಿ ಬಂದು ನಿಜನಿಳಯವೇದಿಕಾಮಧ್ಯದೊಳಿರ್ದ ಮುಗ್ಧೆಯರಂ ಗಿರಿಪತಿಗೆ ನಾಗರಿಕಂ ತೋಱುತ್ತುಂ ಬರೆವರೆ ಮುಂದೊಂದೆಡೆಯೊಳೊರ್ವ ಮುಗ್ಧೆ ವಲ್ಲಭನೊಳ್ ಮುಳಿದಂತೆ ಮಱಿದು ನುಡಿಯದಿರ್ಪಲ್ಲಿ ತತ್ಪ್ರಿಯನಿಂತೆಂದಂ

ಮುಗ್ಧೇ ಕೈರವನೇತ್ರೆ ವಿ
ದಗ್ಧೆಯವೋಲ್ ಮುಳಿಸನಾಂತೊಡಾ[5]ನೆಂತಿರ್ಪೆಂ[5]
ದಗ್ಧಾಂತರಂಗನಾದೆಂ
ದುಗ್ಧಂ ವಿಷಮಾದೊ[6]ಡೇನನೆಂದಪೆ[6]ನಿಳೆಯೊಳ್ ೧೩೭

ಎಂದು ನುಡಿದು ಸುಖದೊಳಿರೆ ಮತ್ತಮೊಂದೆಡೆಯೊಳ್,

೧-೧ ಗಿರ್ದರ್ಳ್ (ಬ ಯ ಅ). ೨-೨ ಸುಖದಿಂದಿರ್ದರ್ (ಬ ಯ). ೩-೩ ಸುಖಮಯ (ಯ). ೪-೪ ಸುರಸುರತ (ಯ). ೫-೫ ನೆಂತುೞಿವೆಂ (ಶಾ ಕ ಬೆ). ೬-೬ ಡೆಂತು ಸೈರಿಪೆ (ದಾ ಕೊ). * ೧೩೫ನೆಯ ಪದ್ಯವು ಅ ಪ್ರತಿಯಲ್ಲಿಲ್ಲ. ‡ ೧೩೬ನೆಯ ಪದ್ಯವು ಓ ಪ್ರತಿಯಲ್ಲಿಲ್ಲ.

ಬಳೆದೊಡಿಸಲೆಂದು ಸುದತಿಯು
ಕೆಳೆಯನದೊರ್ವಂ ಕರಕ್ಕೆ ಕೆಯ್ನಾಡೆ ಸುಖೋ
ಜ್ಜ್ವಳೆಯ ಶಶಿಮುಖಿಯು ಚಿತ್ತಂ
ಗೊಳಿಸುವ ಸಖಿ ಬೇಡಬೇಡವೆನುತುಂ ನುಡಿದಳ್ ೧೩೮

ಪರಿರಂಭಾರಂಭಣದಾ
ತುರುಸಮಯದೊಳಂ ಮನೋಹರವ್ಯಾಜದೊಳಂ
ವಿರಹದೊಳಂ ತನ್ನಿನಿಯಂ
ಬರೆ ಸುಖದೊಳಗಬಲೆಗೆಂತು ನಿಲ್ವುವು ಬಳೆಗಳ್ ೧೩೯

ಎಂದಿಂತು ನುಡಿವ ಸರಸೋಕ್ತಿಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳೊರ್ವ ಮುಗ್ಧಮನಾಯಕಿಯ ವಿರಹಾತಿಶಯಮಂ ಪ್ರೇಮಸಖಿ ತನ್ನ ಕೆಳದಿಗೆ ಪೇಳುತ್ತುಮಿರ್ದಳದೆಂತೆಂದೊಡೆ,

ಅಸವಸದಿಂದಿನನುಳಿದೊಡೆ
ದೆಸೆ ಕಾವುಳಮುಸಗಿ ಮಾನಿನಿಗೆ [೧]ಮಧು ಮುಖಕಂ[೧]
ನಸಿ ಬಿಸಿ ಕಾವಂ ದಾವಂ
ಬಿಸಜಂ ಬಿಸಮನಿಲನನಲನೆನಿಸಿತ್ತಾಗಳ್ ೧೪೦

ಮತ್ತಮದಲ್ಲದೆ,

ಚಂಪಕ

ವಿರಹದೊಳೀಕೆಗಕ್ಕ ಬಿಸಜಂ ವಿಷಜಂ ಹಿಮರೋಚಿ ಸೂಜಿ ಪಾ
ದರಿ ದರಿ ಮಾವು ಪಾವು ಕುಮುದಂ ಕುಮುದಂ ತನಿಗರ್ಬು ಮರ್ಬು ಕ
ತ್ತುರಿಯುರಿ ಗಾಳಿ ದಾಳಿ ಕುಸುಮಂ ವಿಷಮಂ ಪೊಸಬಾಳೆ ಬಾಳ್ [೨]ವನೋ
ತ್ಕರಪುರಿ[೨] ಹಂಸೆ ಹಿಂಸೆ ಮೊರೆವಾಜಿಡಿಯಾಜಿಡಿ ತಿಂಗಳಂಗಳಂ ೧೪೧

ಮತ್ತಮದಲ್ಲದೆ,

ಅತಿವಿರಹದೊಳೀ ಲಲನೆಗೆ
ಮತಿ ದುರ್ಮತಿ ವೀಣೆ ಸಾಣೆ ಸೋಮಂ ಭೀಮಂ
ಲತೆಯಸಿಲತೆ ಸಂಪಗೆ ಪಗೆ
ನುತಕೀರಂ ಘೋರಮನ್ಯಪುಷ್ಪಮನಿಷ್ಟಂ ೧೪೨

೧-೧ ಮನಮುಖಕಂ (ಕ). ೨-೨ ವನೋ। ತ್ಕರ ಪುರ (ಕಾ ಬಿ).

ಎಂದು ನುಡಿವಾಗಳ್,

ಬಿಸಿಲ ಚಕೋರಿಗೆ ಚಂದ್ರಂ
ಪಸಿದ ಶುಕಂಗಿದಿರೊಳಮೃತಫಳಮಿದಿರ್ವರ್ಪಂ
ತಸಮಾನಸುಧಾಶೀಲಂ
ರಸಮಯಸುಖಜಲಧಿ ವಲ್ಲಭಂ ನಡೆತಂದಂ ೧೪೩

ಚಂಪಕ

ನಡೆತರೆ ಕಂಡು ಜೀವಮಿದಿರ್ವಂದವೊಲೊರ್ವರನೊರ್ವರೀಕ್ಷಿಸು
ತ್ತಡಿಯಿಡುತೊಂದಿ ಮುಂದುವರಿವಿಂದ್ರಿಯದಿಂ ನಡೆ ಮುಂಚಿ ಮಾಜ಼್ ಬಂ
ದೆಡೆಗುಡದಪ್ಪಿಯಪ್ಪಿ ನಿರತಂ ಸುರತಾಬ್ಧಿಯೊಳಾಳುತೇಳುತುಂ
ಕಡೆವೊದಲಿಲ್ಲದೆಳ್ತರದ ಕಾಮಿಗಳಿರ್ದರನೂನ[೧]ಸಂಗದೊಳ್[೧] ೧೪೪

ಮಹಾಸ್ರಗ್ಧರೆ

ಘನಗಾಢಾಲಿಂಗನಂ ಚಾಪಳಗಳಮತಿದೈನ್ಯೋಕ್ತಿಯುಕ್ತಾಧರಂ ಚುಂ
ಬನಸೀತ್ಕಾರಂ ಸ್ಮಿತಾಸ್ಯಂ ಮುಕುಳಿತನಯನಂ ಲಾಸ್ಯನೀಲಾಳಕಂ ಕಂ
ಪನಹಸ್ತಂ ಸ್ವೇದಗಂಡಂ ಪುಳಕಭರಿತಗಾತ್ರಂ ಸುಖಶ್ವಾಸಮಾನಂ
ದನಿವಾಸಂ ಲೀನಚಿತ್ತಂ ಗುರುತರಸುರತಂ ಕೂಡೆ ಕೂಡುತ್ತುಮಿರ್ದರ್ ೧೪೫

ನಯನಝಷಾವಳಿಯಿಂದತಿ
[೨]ಶಯಾಧರೋದ್ಯತ್[೨]ಪ್ರವಾಳದಿಂದಂ ದ್ವಿಜಸಂ-
ಚಯಮೌಕ್ತಿಕದಿಂ ಸುರತಾ
ಬ್ಧಿಯು[೩]ದಂತಿರೆ ತೆರೆಗಳಂತೆ[೩] ಕಾದಲರಿರ್ದರ್ †೧೪೬

ಅಂತು ಸುರತಸುಖದಿಂ ನಲಿನಲಿದು ನರ್ತಿಸುತ್ತುಂ ಮತ್ತವಾರಣದ ಮೇಲಿರ್ಪ ಮಧ್ಯಮನಾಯಕಿಯುಂ ನಾಗರಿಕಂ ನಗರಾಜಂಗೆ ತೋಱುತ್ತುಂ ನಡೆತರೆ ಮುಂದೊಂದೆಡೆಯೊಳೊರ್ವ ವಿದಗ್ಧೆ ವಿರಹತಾಪದಿಂ ನಿಲಲಾಱದೆ ನಿಜಸಖಿಗೆ ಬಿಸುಸುಯ್ಯುತ್ತುಮಿಂತೆಂದಳ್,

---

೧–೧ ಸಂಗದಿಂ (ಅ). ೨–೨ ಶಯದಧರೋದ್ಯತ್ (ಕಾ). ೩–೩ ದಂಪತಿದೆರೆಗಳಂತೆ (ಬ ಮ ಬೆ ಯ). † ೧೪೬ ನೆಯ ಪದ್ಯವು ಅ ಪ್ರತಿಯಲ್ಲಿಲ್ಲ.

ಮತ್ತೇಭ

ಸಕಳಂಕಂ ಶಶಿ ಕಾಮನೀಶನುರಿಗಣ್ಣಿಂ ಬೆಂದವಂ ವಾಯು ಸ
ರ್ಪಕದಂಬಾಶನಶೇಷವಂಗಜನ ಮಿತ್ರಂ ರಾಗಿ ಮತ್ತಾಳಿಗಳ್
ವಿಕಳಂಗಳ್ ಪಿಕನನ್ಯಪುಷ್ಟನಿವಱೊಳ್ ಸೌಜನ್ಯಮಂ [೧]ಮಾಳ್ಪುದ
ಕ್ಕೆ[೧] ಕರಂ ಕಷ್ಟಮೆನುತ್ತೆ ಕಾಂತೆ ನುಡಿದಳ್ ಸಾಲಿಟ್ಟ ಸಂತಾಪದಿಂ ೧೪೭

ಎಂದು ನುಡಿದ ನಿರ್ವೇದೋಕ್ತಿಗಳಂ ಕೇಳಲಾಱದೆ ಪರಮಮಿತ್ರೆ ಪರಿದು ಪೋಗಿ ಮನೋವಲ್ಲಭನನೊಡಗೊಂಡು ಬರೆ ಬಂದು ನಿಂದು ಸಾಪರಾಧಿ ಸಮೀಪಸ್ಥನಾಗಿ ಕುಳ್ಳಿರ್ಪಲ್ಲಿ,

ಚಂಪಕ

ಎಱಗುಗುವೆಂದು ಮೇಲುದಿನೊಳಂಘ್ರಿಗಳಂ ಮಱೆಮಾಡುತುಂ ಸ್ಮಿತಂ
ಪೊಱಮಡೆ ಮತ್ತಮೊಂದು ನೆವದಿಂದಮೆ ಮುಚ್ಚುತುಮೆಯ್ದೆ ನೋಟಮಂ
ಮಱೆಯಿಸಿ ನೋಡುತುಂ ನುಡಿಯಲುತ್ತರಮಂ ಸಖಿಗೀಯುತಿಂತು ತ
ನ್ನೆಱೆಯನೊಳೊಲ್ದು ಕೋಪಿಸುವ ಕಾಮಿನಿಗೀ [೨]ಮುಳಿಸೊಂದು[೨] ಸಾಲದೇ ೧೪೮

ಇಂತು ಮುಳಿದ ವಿದಗ್ಧನಾಯಕಿಯ ಮುಳಿಸಂ ತಿಳಿಪಿ ಸಜ್ಜೆವನೆಯ ಸಿರಿಮಂಚದ [೩]ಹಂಸತೂಳವಡಕಿಲ್ವಾಸಿನೊಳ್[೩] ಭರದಿಂ ನೆರೆವಾಗಳ್,

ಸೆಳೆಮಂಚದ ಕಳನಿನದಂ
ಬಳಸಿದ ಶಕುನಿಗಳ ನುಚ್ಚರಂ ನೇವುರದು
ಜ್ಜ್ವಳನಾದಂ ಲಲನಾಗಳ
ಗಳಿತಧ್ವನಿ ಬೆರಸಿ ಬಳೆದು ನೆರಪಿದು[೪]ದಾಗಳ್[೪] ೧೪೯

ಮಹಾಸ್ರಗ್ಧರೆ

ಕರಘಾತಂ ಸೌಖ್ಯಜಾತಂ ಕಳರಣಿತಸಮೇತಂ ಲಸತ್ಕರ್ಣಪೂತಂ
ಸ್ಮರಯಂತ್ರಂ ಸಾರತಂತ್ರಂ ಘನಗಳರವಮಂತ್ರಂ ಪ್ರಮೋದಸ್ವತಂತ್ರಂ
ಸ್ಫುರಿತಾಂಗಂ ಸ್ವೇದಸಂಗಂ ಸುರತರಸತರಂಗಂ ಪ್ರರೋಮಾಂಚಲಿಂಗಂ
ಗುರುನೇತ್ರಂ ಬಾಷ್ಪಪಾತ್ರಂ ಸುಖರವಮುದಿತ[೫]ಶ್ರೋತ್ರ[೫]ಮಾನಂದಗಾತ್ರಂ ೧೫೦

೧-೧ ಮಾಳ್ಪುದ । ಕ್ಕೆ (ಮ ಬೆ ಗೊ ಸೆ); ನೋಳ್ಪುದ । ಕ್ಕ (ಅ). ೨-೨ ಮುನಿಸೊಂದೆ (ಶಾ). ೩-೩ ಹಂಸತೂಳತಲ್ಪದೊಳ್ (ದಾ ಅ ಡ). ೪-೪ ವಾಗಳ್ (ಅ ಕೊ). ೫-೫ ಸ್ತೋತ್ರ (ಕೊ ಗ).

ಅಂತುಮಲ್ಲದೆ,

ಗಳರವದಿಂದಪ್ಪಿಂ ಕೋ
ಮಳರೂಪಿಂದಧರರಸದೆ ಸುಯ್ಗಂಪಿಂದಾ
ಗಳೆ ಕಿವಿ ಮೆಯ್ ಕಣ್ ನಾಲಗೆ
ವಿಳಸನ್ನಾಸಿಕಮನಲ್ಲಿ [1]ತಣಿಪುತ್ತಿರ್ದಳ್[1] ೧೫೧

ಮತ್ತಮೊಂದೆಡೆಯೊಳೊರ್ವಳ್ ತನ್ನ ಮಂಗಳ ಸೌಭಾಗ್ಯಮಂ ಪ್ರೇಮಸಖಿಗೆ ಪೇಳುತ್ತುಮಿರ್ದಳದೆಂತೆಂದೊಡೆ,

ಮಾಳತಿಯೊಳ್ ಬಂಡುಂಡ ಮ
ದಾಳಿಯುನಳಿಮಾಲೆ ಎಱಗಿ ಬಂಡುಣ್ಬವೊಲೀ
ನೀಳಾಳಕಿಯೊಳ್ ಬೆರೆಸಿದ
ಖೇಳನ [2]ವಿಟರೆಯ್ದಿ[2] ಸೋಂಕಿ ಸುಖಿಯಾಗಿರ್ಪರ್ ೧೫೨

ಅಂತುಮಲ್ಲದೆ,

ಮಹಾಸ್ರಗ್ಧರೆ

ದರಹಾಸಶ್ರೀಗೆ ಬೆಳ್ದಿಂಗಳ ಸಿರಿ ಸರಿಯಲ್ಲಂ ಕಟಾಕ್ಷೇಕ್ಷಣಕ್ಕಾ
ಸ್ಮರಬಾಣಂ [3]ಸಾಟಿಯಲ್ಲಂ[3] ಮಿಱುಗುವ [4]ಕುಡು[4]ಪುರ್ವಿಂಗೆ ತಾನಿಕ್ಷುಚಾಪಂ
ದೊರೆಯಲ್ಲಂ ಚಕ್ರವಾಕಂ ನೆಲೆಮೊಲೆಗೆಣೆಯಲ್ಲಂ ಕಳಂಕಪ್ರಭೂತಂ
ಪರಿದಗ್ಧಂ ತದ್ವಿಯೋಗಾಕುಳನಬಲೆಯ ರೂಪಿಂಗದೆಂತೊಂದುಮಾಳ್ಪಂ ೧೫೩

ಎಂದು ಬಣ್ಣಿಸುತ್ತಿರ್ಪಿನಂ ಇತ್ತಲ್ ಮತ್ತೊಂದೆಡೆಯೊಳೊರ್ವ ವಿದಗ್ಧವಿಟಂ ವಿರಹಪರಿತಾಪದಿಂ ನಿಲಲಾಱದೆ ನಿಜಸಖಗಿಂತೆಂದಂ :

ಮತ್ತೇಭ

ಎರೆವೆಂ ಮತ್ಸಖಿ ತಂದು ಕೂಡು ಗುಣವೃಂದಾರಾಮೆಯಂ ರಾಮೆಯಂ
ವರಪುಷ್ಪಾಯುಧಚಾಪಸಂಯುತಮೆನಿಪ್ಪಾ ನಾರಿಯಂ ನಾರಿಯಂ
ಸ್ಮರನಾಳೋಚನೆಗಾಪ್ತೆಯಾಗಿ ನೆಲೆಸಿರ್ಪಾ ಕಾಂತೆಯಂ ಕಾಂತೆಯಂ
ತರುಣೀಸಂಘಶಿರೋಮಣಿ ಪ್ರಬಳಕೀರ್ತ್ಯಾಶಾಂತೆಯಂ ಶಾಂತೆಯಂ ೧೫೪

೧-೧ ತಣಿಪುತ್ತಿರ್ದರ್ (ಕಾ ಳ ಬೆ). ೨-೨ ವಿಟರೆಲ್ಲ (ಕಾ ಯ ಬ ಅ ದ). ೩-೩ ಪಾಟಿಯಲ್ಲಂ (ಮ ಬ ಬೆ ಗೊ ಅ ಕ), ೪-೪ ನಿಡು (ಮ ಬ).

ಎಂದಿಂತು ಬಾಯುೞಿವ ಮಿತ್ರನಂ ನಲ್ಲಳೊಳ್ [1]ಕೂಡಿ ಸಮಸುಖದೊಳಿರಿಸೆ[1] ಮತ್ತಮೊಂದೆಡೆಯೊಳ್ ವಿಟಂಗತ್ಯಾಸಕ್ತೆಯಾದ ಮಗಳ್ಗೆ ಮಾತೆ ಬುದ್ಧಿವೇಳ್ವಲ್ಲಿ,

ಚಂಪಕ

ಮಗಳೆ ಬಿಡಾತನಂ ಬಿಡೆನವಂ ಧನಮಂ ಪಿರಿದೀಯನಿತ್ತುದೇ
ಮಿಗೆ ಪಿರಿದೆಯ್ದೆ ದೆಯ್ದುವುದು ಸಾಲದು ಸಾಲ್ವುದು ಬೇಡ ಬೇಳ್ಪುದೊ
ತ್ತ್ರಗೆ [2]ನಡೆ ಊಹು[2] ಮೂರ್ಖತೆಯ ಮೂರ್ಖತೆ ಕೆಟ್ಟಪೆ ಕೆಟ್ಟಪೆಂ ಕೆಲಂ
ತೆಗಳ್ದಿಯ ಹೈ ಕರಂ [3]ತೆಗಳ್ದಿಯೆಂದೆನೆ[3] ಪುತ್ರಿಯನಟ್ಟಿ ಮೋದಿದಳ್ ೧೫೫

ಅಲ್ಲದೆಯುಂ ಮತ್ತಮೊಂದೆಡೆಯೊಳೊರ್ವ ವೃದ್ಧವೇಶ್ಯಾಂಗನೆ ತನ್ನ ನೆರೆಮನೆಯ ಬಾಲಮುಗ್ಧೆಯ ಸೊಬಗಂ ಕಂಡು ಅಸೂಯೆಗೊಂಡು ತನ್ನೊಳಿಂತೆಂದಳ್,

ಚಂಪಕ

ಮೊಲೆ ಮುಗುಳೊತ್ತ ಪಕ್ಷಿ ಚಪಳತ್ವಮನೆಯ್ದುವು ಬಾಸೆ ಬಾರದು
ಜ್ವಳಿಸದು ಭಾಳಲೇಖೆ ವದನಂ ಮದವೇಱದು ನೋಡೆ ತಳ್ತು ಕಣ್
ಗೊಳಿಸದು ಮೇಲುದಗ್ಗಳಿಪ ನೋಟಮಗುರ್ವಿಪ ಮಧ್ಯಮೊಪ್ಪುವೀ
ತಿಳಕಮನೂನಗರ್ವಮೊಲಪಿಂ ನೆಲೆವೆರ್ಚದು ಚೋದ್ಯಮಲ್ಲವೇ ೧೫೬

ಎಂದು ತನ್ನೊಳ್ ತಾನೇ ಜಿನುಂಗಿ ನುಡಿವ [4]ಮುದುಪಾಱಿಯಂ[4] ನೋಡುತುಂ ನಗುತುಂ ಬರೆ ಮುಂದೊಂದೆಡೆಯೊಳೊರ್ವ ಲಲನೆ ತನ್ನೋಪನಿಂದಾದ ಬೇಸಱಿಂ ನಿಜಸಖಿಗೆ ಪೇಳುತಿರ್ದಳದೆಂತೆಂದೊಡೆ :

ಉತ್ಪಲ

ಆದರಿಪಂತೆ ಸಾರ್ಪನುಪಚಾರಮನಾಡುಪನಿತ್ತುದಂ ಸಮಂ
ತೋದುವನಾವಗಂ ಕಟಕಿಯಂ ನುಡಿವಂ ನಗುವಂತೆ ಕೋಪಿಪಂ
[5]ಸಾಧಿ[5]ಸುವಂ ದಿಟಂ ಪುರುಡಿಪಂತೆ ನೆಗಳ್ಚುವನಟ್ಟೆ ಪತ್ತುವಂ
ಪೋದೊಡೆ ಪೋಗನಿರ್ದೊಡಿರನೀ ಶನಿಯಂ ಸಖಿಯೆಂತು ನೀಗುವೆಂ ೧೫೭

೧–೧ ಕೂಡೆ ಸಮಸುಖದೊಳಿರೆ (ಕಾ). ೨–೨ ನಡೆಯೊಲ್ಲೆ (ಅ). ೩–೩ ತೆಗಳ್ದೆನೆಂದೆನೆ (ಅ). ೪–೪ ಮುದಿಪಾರಿಯುಂ (ಕಾ). ೫–೫ ವಾದಿ (ಅ).

ಎಂದು ನುಡಿದ ನಿರಾಶಾವಚನಂಗಳಂ ಕೇಳುತ್ತುಂ ಬರೆವರೆ ಮುಂದೊಂದೆಡೆಯೊಳನೇಕನವೀನರತ್ನಮಯದರ್ಪಣಕನಕಕಳಶವಿಚಿತ್ರಪತ್ರಪರಿಶೋಭಿತಮಾಗಿ ನವೀನಕ್ರೀಡೆ ತವಿಲಿಲ್ಲದ ನವಿಲುಯ್ಯಲ ಮುಂದೊರ್ವ ವಿದಗ್ಧವನಿತೆ ಸಖೀಜನಂಬೆರಸು ಬೆಳ್ದಿಂಗಳನಿದಿರ್ಗೊಂಡು ವಸಂತಂಗೆ ಪೊಸತಳಿರ್ಗಳ ಪಸೆಯಂ ತಂದಿಕ್ಕಿ ಕಾಮಂಗೆ ಸಣ್ಣನನೆಗಳ ಪುಷ್ಪಾಂಜಳಿಯನಿತ್ತು ರತಿದೇವಿಗೆ ಮೆಯ್ಯಿಕ್ಕಿ ಚಂದ್ರಂಗೆ ಕುಸುಮರಸದರ್ಘ್ಯಮಂ ಕೊಟ್ಟು ಗಿಳಿಹಂಸೆಕೋಗಿಲೆಗಳನುಚಿತಾಹಾರದಿಂ ತಣಿಪಿ ಮಂದಯ್ಸಿದ ಸತಿಯರ ಸಂದಣಿಯೊಳಾಂದೋಳಮನೇಱಿದಾಗಳ್,

ಏಱಿದ ಮಣಿಯುದಯನಗಂ
ತೋಱಿದ ಮುಖಬಿಂಬಮಿಂದುಬಿಂಬಮಪಾಂಗಂ
ಮೀಱಿದ ಚಂದ್ರಿಕೆಯೆನೆ ಕಳೆ
ಯೇಱಿದ ಪಡಿಚಂದ್ರನಂತೆ ಸೌಂದರಿಯೆಸೆದಳ್ ೧೫೮

ಉತ್ಪಲ

ನೋಡುವನೇಕಸದ್ವಿಟಜನಂಗಳ ಪೆಣ್ಗಳ ಕಣ್ಗಳಾಡೆ ಕೊಂ
ಡಾಡುವ ತತ್ಸಖೀ[೧]ಕುಲದ[೧] ಚಾಗದ ಭೋಗದ ರಾಗಮಾಡೆ ತೂ
ಗಾಡುವ ಬಾಲಕೀವ್ರಜದ ಕಂಕಣಝುಂಕೃತಿ ಭೋಂಕನಾಡೆ ತಾ
ನಾಡಿದಳುಯ್ಯಲಂ ಮುಖಶಶಿಪ್ರಭೆ ಮುಚ್ಚಿ ಮುಸುಂಕೆ ಚಂದ್ರನಂ ೧೫೯

ಇಂತಾಡುವ ನವೀನಾಂದೋಳನಕ್ರೀಡೆ ಕಡೆಯಾದನೇಕಮದನಮಹೋತ್ಸವಂಗಳಂ ನೋಡುತ್ತುಂ ಪಣ್ಯಾಂಗನಾವೀಥೀವಿಸರಮಂ ಕಳೆದು ಬಂದು ರಾಜನಿಳಯದ್ವಾರದ ಮುಂದೆ ನಿಂದಿರೆ ನಾಗರಿಕನಿಂತೆಂದಂ,

ದೀಪ್ತಿಯನುಳಿದುವು ಭಗಣಂ
ಸುಪ್ತಜನಂ ನಿದ್ರೆದಿಳದುದಿದೆ ಕೋಕಂ ತ
ನ್ನಾಪ್ತನನಱಸುತ್ತಿರುಳ ಸ
ಮಾಪ್ತಿ ಕರಂ ಹತ್ತೆಸಾರ್ದುದಚಳಾಧೀಶಾ ೧೬೦

ಬರವಂ ಬಯಸುತೆ ಕುಳಿರೆಂ
ಬ ರವಂ ಮಿಗೆ ಪತ್ತೆ ಸಾರುತಿಂತಿವೆ ಚಕ್ರಂ
ಅರುಣೋದಯಮಂ ಸೂಚಿಸು
ತರುಣೋದಯಮಿತ್ತಲಾಗುತಿದೆ ಗಿರಿರಾಜಾ ೧೬೧

೧–೧ ಜನದ (ಶಾ ಕ).

ಎಂದು ನುಡಿವ ನಾಗರಿಕನ ಬಿನ್ನಪಮಂ ಕೇಳ್ದು ಅರಮನೆಯಂ ಪೊಕ್ಕು ಗಿರಿರಾಜಂ ನಿರ್ಮಳೀಕೃತಕರಚರಣನುಂ ನವ್ಯವಸ್ತ್ರಪರಿಶೋಭಿತನುಂ ವಿಭೂತಿ-ವಿಳಸಿತಸರ್ವಾಂಗನುಂ ರುದ್ರಾಕ್ಷಾಲಂಕೃತಶರೀರನುಂ ಶಿವಲಿಂಗಪೂಜಾವಿರಚಿತಹಸ್ತ-ಕಮಳನುಂ ೧ತತ್ಪಾದವಂದನಾಸಕ್ತನುಂ೧ ಪಾದೋದಕಪ್ರಸಾದಸಂತುಷ್ಟಹೃದ-ಯನುಂ ಕರ್ಪೂರತಾಂಬೂಲಮುಖವಳಯನುಮಾಗಿ ಸಭಾನಿಳಯಕ್ಕೆ ನಡೆತಂದು ನಾರದಮುನಿಯಂ ೨ನಾಕ೨ಲೋಕಕ್ಕೆ ಕಳುಪಿ, ಪೂರ್ವಾಚಳಮನೇಱಿದ ಭಾಸ್ಕರ-ನಂತೆ ಸಿಂಹವಿಷ್ಟರೋಪವಿಷ್ಟನಾಗಿರ್ದನಾ ಪ್ರಸ್ತಾವದೊಳ್,

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೬೨

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದ
ಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ಪಾರ್ವತೀಯೌವನ ರಾತ್ರಿವಿಹಾರವರ್ಣನಂ ಚತುರ್ಥಾಶ್ವಾಸಂ

೧-೧ ತಾತ್ಪರ್ಯವಂದನಪ್ರಕರನುಂ (ಬ ದಾ ಯ ಮ ಅ ಕ ಗ); ತಾತ್ಪರ್ಯಿವಂದನಾ-ಸಕ್ತನುಂ (ಬೆ). ೨-೨ ನಾಗ (ಕಾ ಅ).

ಪಂಚಮಾಶ್ವಾಸಂ

ವಿರೂಪಾಕ್ಷದರ್ಶನ ಪುಷ್ಪಾಪಚಯ ಪೂಜಾವರ್ಣನಂ

ಶ್ರೀಗಂಗಾಧರವಭವಂ
ಶ್ರೀಗೌರೀವರನುದಾರಪಾರಾವಾರಂ
ಶ್ರೀಗುರು ಹಂಪೆಯ ಶಂಕರ
ನೀಗೆಮಗೆ ಮನೋರಥಂಗಳಂ ಕೃಪೆಯಿಂದಂ ೧

ಮಹಾಸ್ರಗ್ಧರೆ

[೧]ಸರಸೀಸಂಜಾತಜಾತೋನ್ನಿಶಿತನಿಶಿತ[೧]ಸೌರಂಭಸಂಪಾದನಾವಂ
ಧರಣೀದಿಗ್ವ್ಯೋಮಭಾಗಾವೃತಭರಿತಘನಧ್ವಾನ[೨]ಸಂಭೇದ[೨]ನಾದಂ
ಸುರತಾಸಕ್ತ[೩]ವ್ರಜಾಲಿಂಗನ[೩]ಚಲನಕರಪ್ರೌಢಿತಾನಾದನಾದಂ
ಪರೆಗತ್ತಾದಂ ಪ್ರಮೋದಂ ಶಿವನಿಳಯಕುಳೋತ್ಪಾದವಾ ಶಂಖನಾದಂ ೨

ಚಂಪಕ

ಮುಗಿಯಲೊಡರ್ಚಿನಿಂದ ಕುಮುದಾವಳಿಯುಂ ಸರಸೀರುಹಂ ಮುಗುಳ್
ನೆಗೆ ನಗುವಂತಿರಿರ್ದುವು ಚಕೋರಿಗಳಸ್ತಗಿರೀಂದ್ರದತ್ತಲು
ಬ್ಬೆಗದೊಳೆ ನೋಡುತಿರ್ದುವು ರಥಾಂಗಯುಗಕ್ಕೆ ಮನೋಜನೇಸು ಮೆ
ಲ್ಲಗೆ ತೊಲಗುತ್ತುಮಿರ್ದುದುದಯಾದ್ರಿಗೆ ಗೋಪತಿ ಬರ್ಪ ಪೊಳ್ತಿನೊಳ್ ೩

೧–೧ ಸರಸೀಸಂಭೂತಜಾತಸ್ಮಿತತತಿಯುತಿ (ಓ); ಸರಸೀಸಂಜಾತಜಾತೋಸ್ಮಿತತತಿಯುತಿ (ಅ). ೨–೨ ಸಂಭೇರಿ (ಸ). ೩–೩ ಪ್ರಣಾಲಿಂಗನ (ಕಾ ಡಾ ಬೆ ಅ ಸ ಓ).

ಕೆಂಪೇಱಿತು ಮೂಡಣ ದೆಸೆ
ಸೊಂಪೇಱಿತು ಚಕ್ರಮಿಥುನಮಬ್ಜಕದಂಬಂ
ಕಂಪೇಱಿತು ಸಕಳ[1]ಜಗಂ[1]
ಪೆಂಪೇಱಿತು ಪದ್ಮಮಿತ್ರನುದಯಿಸುವಾಗಳ್ ೪

ಉರ್ಕುಡುಗಲ್ ಕುಮುದಂಗಳ್
ಸೊರ್ಕೋಗೆಯಲ್ [2]ಕಮಳಚಕ್ರಪಕ್ಷಿ[2]ಯುಗಂಗಳ್
ತರ್ಕೈಸಲ್ ತಮಮಾಗಳ್
ಬರ್ಕಟ ಬಯಲಾದುದರ್ಕನುದಯಿಸುವಾಗಳ್ ೫

ಇಳೆಯ ಮುಸುಂಕಂ ಮೆಲ್ಲಗೆ
ಕಳೆಯುತ್ತೆೞ್ಚಱಿಸುತುಂ ರಥಾಂಗಮನಬ್ಜಂ
ಗಳನೆವೆಡೆಱಿಯಿಸುತುಂ ದೆಸೆ
ಗಳನೆಳ್ಪಸು[3]ತೆಳ್ದು[3]ವಾಗ[4]ಳಿನನ ಕರಂಗಳ್[4] ೬

ಮತ್ತಮಲ್ಲದೆ,

ಕೊರಗಿಸಿ ಕುಮುದವನೆಳ್ಪಿಸಿ
ಯರವಿಂದಮನಂಧತಮಮನೋಡಿಸಿ ದೋಷಾ
ಕರನಂ ಕಳೆಗುಂದಿಸಿ ಪರಿ
ಪರಿದುವು ತರಣಿಯ ತಳಾಱರಂತಿರೆ ಕಿರಣಂ ೭

ಆ ಸಮಯದೊಳ್

[5]ಮುದುಡಿಸುತುಂ[5] ಕೈರವಮಂ
ಬೆದಱಿಸುತುಂ ಕೌಶಿಕಂಗಳಂ ಘನಪಥದೊಳ್
[6]ಕೆದಱುತ್ತುಂ[6] ಕಿರಣಾಳಿಯ
ನುದಯಾಚಳಚೂಡದಲ್ಲಿ ಮೂಡಿದನರ್ಕಂ ೮

೧-೧ ಜನಂ (ಕಾ ಬ ಯ ದಾ ಅ ಕ). ೨-೨ ಸರಸಿಜಂ ರಥಾಂಗ (ಸೆ). ೩-೩ ತಿರ್ದು (ಕಾ ಯ). ೪-೪ ಇನಕಿರಣಂಗಳ್ (ಗ). ೫-೫ ಮುದಗಿಸುತುಂ (ಮ ಅ ಕ ಬ); ಮುದವುಡಿಗಿಸಿ (ಯ ಬೆ ದಾ ಕೊ). ೬-೬ ಕೆದಱಿಸುತುಂ (ಮ ಗೊ ಕ ಡ ಗ ಓ).

ಕಮಳಾಕರದಮಳ್ವಕ್ಕಿಗ
ಳ ಮನೋರಥಮಲರೆ ವಾಸವಾಶಾಮುಖದೊಳ್
೧ತಮಮೆಂಬಿವೆದೆಗೆಯುತ್ತಿರೆ೧
ವಿಮಳಜಗಚ್ಚಕ್ಷುಂ ತೊಳಗಿ ಬೆಳಗುತ್ತಿರ್ದಂ ೯

ಅಂತಾದ ಸೂರ್ಯೋದಯದೊಳ್ ಸಕಳಶಿವಾಲಯಪ್ರೋದ್ಭೂತಮಪ್ಪ ಪಂಚಮಹಾಶಬ್ದಮುಂ ತಟಾಕತೀರಸ್ಥಿತಸಂಧ್ಯಾವಂದನಾಸಕ್ತಧರಾಮರಪ್ರಕರಮುಂ ಗಜಶಿಕ್ಷಾಪ್ರಾರಂಭಸಮಯಸಂರಂಭಸಂಯುಕ್ತಸುಭಟಾರೋಹನಿಕಾಯಮುಂ ಹಯಶಿಕ್ಷಾವಾಹಕವ್ಯೂಹಮುಖರಮುಖಜನಿತನಿಬಿಡನಿರ್ಘೋಷಮುಂ ಸೇವಾಭರಧರಾಧೀಶ್ವರಪ್ರಕರಸಂರಂಭಮುಂ ರಾಜನಿಳಯಾಗಮಲಂಪಟಲಲಿತಲಲಿತಾಂಗೀವಿತಾನವಿಸ್ತಾರಹಸ್ತಕಟಕಮಂಜೀರಸಂಜನಿತಮಧುರಧ್ವನಿಯುಂ ನರ್ತಕನರ್ತಕೀನಿಕರವೈತಾಳಿಕಾದಿ ವಂದಿಮಾಗಧಸ್ತೋತ್ರಧರಾಮರಪರಮಾಶೀರ್ವಾದಕದಂಬಧ್ವನಿಯುಂ ಪುರದೊಳಂ ರಾಜಮಂದಿರದೊಳಂ ನೆಗಳೆ ಪರಮಹರ್ಷದಿಂ ಗಿರೀಶ್ವರಂ ಪ್ರಭಾತಸಮಯಸಮುಚಿತಾಸ್ಥಾನನಾಗಿ ಕುಳ್ಳಿರ್ದು ನೆನೆದುನೋಡಿ ನಾರದಮುನೀಶ್ವರನಱಿಪಿ ಪೋದುದಂ ಕುಱುಪುಗೊಂಡು ಹೈಮವತಿಯುಂ ಹೇಮಕೂಟದೊಳಿರ್ಪ ಪರಂಜ್ಯೋತಿಃಸ್ವರೂಪನಪ್ಪ ಶ್ರೀವಿರೂಪಾಕ್ಷನಲ್ಲಿಗೆ ೨ಕಳುಪಲೆಂದು೨ ಮನದಂದೋಲಗಮಂ ಪರೆಯಲ್ವೇಳ್ದು,

ಮಹಾಸ್ರಗ್ಧರೆ

ಗಿರಿರಾಜಂ ನಾರದಂ ಪೇಳ್ದ ತಿಹಿತವಚಮಂ ಚಿಂತಿಸುತ್ತಲ್ಲಿ ನಾನಾ
ವರವಾರಸ್ತ್ರೀಯರೊಳ್ ತಾಂ ಜಯೆವಿಜಯೆಯೆನಿಪ್ಪಿರ್ವರಂ ಕೂಡಿಕೊಂಡೊ
ಪ್ಪಿರೆ ಮೂಱುಂ ಪುಷ್ಪಕಂಗಳ್ ಬರೆ ನಿಜಸುತೆಯಂ ಶಾಂತೆಯಂ ಸತ್ಯೆಯಂ ಶಾಂ
ಕರಿಯಂ ಶರ್ವಾಣಿಯಂ ಶಾಶ್ವತಗುಣನಿಧಿಯಂ ಬಾರೆನುತ್ತಿರ್ದನಾಗಳ್ ೧೦

ಗಿರಿಪತಿ ಕರೆದೊಡೆ ಪುಳಕಾ
ಭರಣೆ ಮಹಾದೇವಿ ಮಾನಿ ಶರ್ವಾಣಿ ಕೃಪಾ
ಕರೆ ಹಂಸಯಾನೆ ಬಿಂಬಾ
ಧರೆ ತಂದೆಯ ಮುಂದೆ ಬಂದು ನಿಂದಿರ್ದಾಗಳ್ ೧೧

೧–೧ ತಮದೆರ್ದೆಯೊಡೆಯುತ್ತಿರೆ ತಾಂ (ಕ ಗ). ೨–೨ ಸಮರ್ಪಿಸಲೆಂದು (ಕಾ ಬಿ ಸ).

ಮಹಾಸ್ರಗ್ಧರೆ

ಪದೆಪಿಂದಂ ಬಂದು ಮೇನಾಸತಿ ನಿಜಸುತೆಯಂ ನೋಡಿ ಮುಂಡಾಡಿ ದೇವೀ
ಸದಳಂಕಾರ್ಯೈಕಪಾತ್ರೇ ಪುಲಿ ಕರಡಿ ಮಹಾ[೧]ಸರ್ಪ ನವ್ಯಾಘ್ರ[೧] ಸಿಂಹಂ
ಮದವನ್ಮಾತಂಗನುಗ್ರಗ್ರಹವಿಡಿದ ಬಿದಿರ್ ಬೆತ್ತವುಂಟಲ್ಲಿ ತಾಯೇ
ಪಮುಳಂ ಪೋಗವ್ವ ಪೋಗೆಂದತಿಭಯರಸದಿಂ ಬುದ್ಧಿವೇಳುತ್ತುಮಿರ್ದಳ್ ೧೨

ಎಂದಿಂತು ಪೇಳೆ ಕೇಳ್ದು ಮನದೊಳ್ ನಸುನಗುತ್ತುಂ [೨]ಮಾತೆಯ ಮಾತಿಗೊಡಂಬಟ್ಟು[೨] ವಿನಯವಿನಮಿತೆಯಾದ ಪಾರ್ವತಿಯುಂ ಪರ್ವತರಾಜಂ ಪುಷ್ಪಕದೊಳ್ ಬಿಜಯಂಗೆಯ್ಸಿ ತಾನುಂ ಕುಳ್ಳಿರ್ದು ಪಿಂತಣ ವಿಮಾನಂಗಳೊಳ್ ಜಯವಿಜಯೆಗಳಂ [೩]ಬರ[೩]ಲ್ವೇಳ್ದು ಗಗನಕ್ಕೆ ನೆಗೆದು ಪಾಱಿ ಪಾಱಿ ತ್ರ್ಯಕ್ಷನಂ ನೆನೆದು [೪]ದಕ್ಷಿಣಾಭಿಮುಖನಾಗಿ ನಡೆತರ್ಪಾಗಳ್[೪],

ಮಹಾಸ್ರಗ್ಧರೆ

ಪಲವುಂ ದೇಶಂಗಳಂ ಭಾಸುರನಗರಿಗಳಂ ತತ್ತಟಾಕಂಗಳಂ ನಿ
ಶ್ಚಲಕೇದಾರಂಗಳಂ ಪರ್ವತವಿತತಿಗಳಂ ವಿಂಧ್ಯಸಂದೋಹಮಂ ನಿ
ರ್ಮಲಕಾಸಾರಂಗಳಂ ತಾವರೆಗಳನಳಿಯಂ ಹಂಸಮಾಲಾವಿಳಾಸೋ
ಜ್ಜ್ವಲಮಂ ನೋಡುತ್ತೆ ತೋಱುತ್ತ ಗಜೆಗೆ ನಗ[೫]ನಾಥಂ[೫] ಬರುತ್ತಿರ್ದನಾಗಳ್ ೧೩

ಇಂತಿಂತು ನೋಡುತುಂ ಬರೆ
ಮುಂತಿರ್ದುದು ತರಳತರತರಂಗಪ್ರಯುತಾ
ನಂತನವಫೇನಜಲಚರ
ಸಂತಾನಂ ತುಂಗಭದ್ರೆ ಗಂಗಾಪ್ರಾಯಂ ೧೪

ಇರೆ ಕಂಡು ಕೊಂಡುಕೊನೆಯುತೆ
ಗಿರಿರಾಜಂ ನಿಜತನೂಜೆಗಱಿಪಿದನತ್ಯಾ
ದರದಿಂ ಭರದಿಂ ಪರಿದುದು
ಸುರುಚಿರ[೬]ನದಿ[೬] ತುಂಗಭದ್ರೆಯೆಂಬುದು ಪೆಸರಿಂ ೧೫

೧-೧ ಸರ್ಪನವ್ಯಾವು (ಮ ಬೆ ದಾ ಅ ಕ ಬ); ಸರ್ಪನವ್ಯಾಹ (ಯ); ಸರ್ಪನುಂ ಘೋರ (ಸೆ) ೨-೨ ಮಾತಿನೊಳೊಡಂಬಟ್ಟು (ಮ ಬ ಯ ದಾ ಗೊ). ೩-೩ ಪುಗ (ಗ). ೪-೪ ದಕ್ಷಿಣಾಭಿಮುಖನಾಗಿ (ಮ ಬ ಅ ದಾ ಗ ಓ). ೫-೫ ರಾಜಂ (ಕಾ ಬೆ). ೬-೬ ವಹ (ಮ).

ಚಂಪಕ

ತರಳತರಂಗಮುದ್ರೆಯನನೇಕಮುನೀಂದ್ರ[1]ಮನಸ್ಸ[1]ಭದ್ರೆಯಂ
ಪರಮಸುಧಾರಸಾರ್ದ್ರೆಯನಪಾರಗಭೀರಸಮುದ್ರೆಯಂ ಪರಾ
ಪರಸುಖನಿದ್ರೆಯಂ ದುರಿತಮಾಲೆಗುಪದ್ರೆಯನತ್ಯನೂನವಿ
ಸ್ತರಸುಕೃತಾರ್ದ್ರೆಯಂ ನೆರೆ [2]ನಿರೀಕ್ಷಿಸು[2] ಪಾರ್ವತಿ ತುಂಗಭದ್ರೆಯಂ ೧೬

ತಡೆವಿಡಿದೊಪ್ಪುವಾಮ್ರವರನೇಱಿಲಶೋಕೆ ಕವುಂಗು ತೆಂಗು ಕ
ರ್ಚಿಡಿದ ತಮಾಲಮಾಳೆ ನವದಾಡಿಮವೀಥಿ ಲವಂಗ [3]ಲುಂಗವಿಂ[3]
ಪೊಡರಿಪ ಬಾಳೆ ಪಕ್ವಫನಸಾವಳಿ ನಿಂಬಕದಂಬಮಿಂಬುಗೊಂ
ಡಡಸಿದ ಮಾತುಳಂಗತತಿ [4]ಪೂಗ[4]ಕುಲಂ ಸಲೆ ತುಂಗಭದ್ರೆಯೊಳ್ ೧೭

ಮತ್ತಮಲ್ಲದೆ,

ನೆನೆದನೆ ಧನ್ಯಂ ನೋಡಿದ
ನನಘಂ [5]ಸೊಂಕಿದವನಮರ[5]ನಘಮರ್ಷಣಮಿ
ರ್ದನೆ ಗಣನಾಥಂ ಸೇವಿಸಿ
ದನೆ ಮುಕ್ತಂ ಕೇಳ ತುಂಗ[6]ಭದ್ರೆ[6]ಯ [7]ಜಳಮಂ[7] ೧೮

ಎಂದು ಪೇಳುತ್ತುಂ ತೋಱುತ್ತುಮಿರ್ಪಲ್ಲಿ,

ಮಹಾಸ್ರಗ್ಧರೆ

ತರದಿಂ ಕುಳ್ಳಿರ್ದ ಸಂಧ್ಯಾಸಮಯ[8]ವಿಮಳ[8]ಮಂತ್ರಾಕ್ಷರಸ್ತೋಮಶೋಭಾ
ಕರವಕ್ತ್ರಾನೀಕದಿಂದೊಪ್ಪುವ ಮುನಿತತಿಯಂ ಪರ್ಣಶಾಲಾಂತ್ಯದೊಳ್ ಭಾ
ಸುರಶಂಭುಧ್ಯಾನನಾನಾಜಪನಿಯಮಸದಾಹೋಮದಿಂದಿರ್ಪ ವಿಪ್ರೋ
ತ್ಕರದಿಂದಂ ತುಂಗಭದ್ರಾತಟಮೆಸೆದುದು ಹೇಮಾಚಳಪ್ರಾಂತಕಾಂತಂ ೧೯

ಮತ್ತಮಾ ತುಂಗಭದ್ರೆ ಶಿವನ ಕೀರ್ತಿಯಂತೆ ಭುವನಭರಿತಮುಂ ಪಾರ್ವತೀ-ವಿಳಾಸದಂತೆ ತೀರದೊಪ್ಪಮುಂ ಅಮರಾವತಿಯಂತನಿಮಿಷಪ್ರಕರಮುಂ ಕಱೆ-ಗೊರಲನಂತೆ ವಿಷಭಂಗಮುಂ ಗಗನತಳದಂತೆ ವಕ್ರಗತಿಯುಂ ದ್ವಿಜರಾಜಶೋಭಿತ-ಮುಮೆನಿಸಿರ್ದುದಾ ನದಿಯುಭಯತಟವಿಳಸಿತವನಾವಳಿಯಲ್ಲಿ,

---

೧–೧ ಮನೋಽಸು (ಮ); ಮನೋಽಶು (ಬೆ ದಾ ಬ). ೨–೨ ಪರೀಕ್ಷಿಶು (ಮ ಬ ಯ). ೩–೩ ಸಂಗದಿಂ (ಬ ಯ); ಸಂಗವಿಂ (ಸೆ). ೪–೪ ಬಿಲ್ವ (ಯ ದಾ ಬ ಸೆ). ೫–೫ ಸೊಂಕಿದನೆ ಅಮರ (ಕ ರಾ). ೬–೬ ಭದ್ರಾ (ಬ ಬೆ ಯ). ೭–೭ ಘನಮಂ (ಓ). ೮–೮ ನಿಗಮ (ಅ)..

ಚಂಪಕ

ಪಱಿದೆಲೆಯಿಟ್ಟು ಪಲ್ಗಿಱಿದು ಹಱ್ಱನುತುರ್ಬುತೆ ಪುರ್ಬನೇಱಿಸು
ತ್ತುಱುಗಿಸಿ ನೋಡಿ ದಾಂಟಲನುಗೆಯ್ಯುತೆ ತೂಗುತೆ ಝುಂಕಿಸುತ್ತೆ ಬಾ
ಯ್ದೆಱೆದೊಲೆಯುತ್ತೆ [೧]ಕೆಯ್ಗ್ಗಳನೆ ಕೂನಿಸಿ[೧] ಕುರ್ಗುತೆ ಏಡಿಸುತ್ತೆ ತಾಂ
ನೆಱೆ ನಗಿಸಿತ್ತು ತಾಪಸಕುಮಾರರನಲ್ಲಿಯದೊಂದು [೨]ಮರ್ಕಟಂ[೨] ೨೦

ಅಂತು ಪರಿಹಾಸರಸಮಂ ಮುನಿಗಳ ಮೊಗಕ್ಕೆ ಮೊಗೆದು ಚೆಲ್ಲುವಂತೇಡಿಸುವ [೩]ಕೋಡಗಂಗಳಂ[೩] ನೋಡುತ್ತುಂ ಬರೆವರೆ ಮುಂತನಂತಗುಲ್ಮಲತಾವೃಕ್ಷಗುಹಾ-ಗಹ್ವರಂಗಳೊಳ್ ಶಿವಧ್ಯಾನನಾನಾತಪೋಭರಭರಿತಮಾದ ಮನುಮುನಿಸ್ತೋಮದಿಂ ಹೇಮಕೂಟಾಚಳಪ್ರಾಂತಮಿರ್ದಪದೆಂತೆಂದೊಡೆ,

ಮಹಾಸ್ರಗ್ಧರೆ

ಪರಮಾರ್ಥಂ ಪುಣ್ಯತೀರ್ಥಂ ಮೃಗಪತಿನಿಕರಸ್ವಾರ್ಥಮುದ್ವೃತ್ತಸದರ್ಥಂ
ಸುರಭೂಜಂ ಶೈವತೇಜಂ ವಿಮಳಮುನಿಸಮಾಜಂ ನಗವ್ರಾತರಾಜಂ
ಸ್ಥಿರಶೀಲಂ ದಂತಿಜಾಲಂ ಸುಕೃತಪರಿವೃತಸ್ಥೂಲಮೊಪ್ಪಿತ್ತು ಶೈಲಂ
ವರಕೂಟಂ ಶೃಂಗಮಾಟಂ ಮೃಗಧರಧರಜೂಟಂ ಕರಂ ಹೇಮಕೂಟಂ ೨೧

ಆ ಶೈಲದಲ್ಲಿ,

ತರುತರುಗಳೊಳಗನಾದಿಯ
ಹಿರಿಯುರತಿವ್ರತಿಗಳಚಳರಾರೂಢರ್ [೪]ಭ
ಕ್ತಿರಸಾವಿಷ್ಟರ್ ನಿಯತರ್[೪]
ಪರಮತಪೋ[೫]ನಿಧಿಗಳಧಿಕ[೫]ರುನ್ನತರಿರ್ಪರ್ ೨೨

[೬]ವೇದಕರೀಶನ ಭಕ್ತಿಯು[೬]
ಬೋಧಕರುರುಸಾತ್ವಿಕರ್ ಸಮರ್ಥರ್ ಸಿದ್ಧರ್
ಸಾಧಕರುತ್ತಮರಭವಾ
ರಾಧಕ[೭]ರತಿ[೭]ಸಾಧುಗಳ್ ವಿರಾಜಿಸುತಿರ್ಪರ್ ೨೩

೧-೧ ಕೆಯ್ದ್ಗಳಿ ತೂಗಿಸಿ (ಯು); ಕೆಯ್ಗಳಿ ಜಾಗಿಸಿ (ಕಾ); ಕೆಯ್ಗೆಳಿ ಕೂನಿಸಿ (ದಾ). ೨-೨ ಕೋಡಗಂ (ದಾ). ೩-೩ ಮರ್ಕಟಂಗಳಂ (ಗೊ ಸೆ). ೪-೪ ಭ । ಕ್ತಿರಸರ್ ನಿಯತರ್ ವಿರತರ್ (ಯು); ಭ । ಕ್ತಿರಸಾವಿಷ್ಟರ್ ಪುಷ್ಟರ್ (ಬ ಮ). ೫-೫ ನಿಷ್ಠರಧಿಕ (ಯು). ೬-೬ ವೇದಕರುನ್ನತರೀಶನ (ಓ); ವೇದಕೃತಿತಯಭಕ್ತಿಯು (ಯು). ೭-೭ ರುಚಿ (ಅ).

[೧]ನಿರತರ್ ಭರಿತರ್ ಚರಿತರ್[೧]
ಪರತತ್ತ್ವ[೨]ರತರ್ ನುತರ್ ವಿಕರ್ತನತೇಜಃ[೨]
ಕಿರಣರ್ ಕರುಣರ್ ಶರಣರ್
ಕರುಣಾಳುಗಳರುಣಮಣಿನಿಭರ್ ನೆಲಸಿರ್ದರ್ ೨೪

ಅಂತವರ ನಿಸ್ಸೀಮತಪಃಪ್ರಭಾವಮಂ ನೋಡುತ್ತುಂ ಬರ್ಪಾಗಳ್,

ಕರೆಯುವು ಕೋಗಿಲೆ ಮಧುಪಂ
ಮೊರೆಯುವು ಗಿಳಿ [೩]ಗಳಪವನಿಲನಲ್ಲಾಡಂ[೩] ಪೆರ್
[೪]ಮರನಂ ಗಿಡುವಂ ಲತೆಯುಂ
ಗುರುಶರ್ವಸಮಾಧಿಭೀತಿಯಿಂದಾ [೪]ನಗದೊಳ್ ೨೫

ಅಂತವಱನೀಕ್ಷಿಸುತ್ತುಂ ಬರೆವರೆ ಮುಂತೆ.

ಸ್ರಗ್ಧರೆ

ಭಾನುಪ್ರದ್ಯೋತಕಾಯಂ [೫]ನುತ[೫]ಸುಕೃತನಿಕಾಯಂ ವಿಮಾಯಂ ಮಹೇಶ
ಧ್ಯಾನಾರೂಢಂ ಸಗಾಢಂ ಸದಮಳಗುಣಚೂಡಂ ಶಿವಜ್ಞಾನ[೬]ಲೀಢಂ[೬]
ಶ್ರೀನಂದೀಶಂ ಸುವೇಶಂ ಸುರುಚಿರಸುಖಸಾಕಾರಸಾರಂ ಸುಧೀರಂ
ಸಾನಂದಂ ಕಾದು ನಿಂದಂ ಗಿರಿಶಿಖರಮುಖದ್ವಾರಮಂ ಭಕ್ತಿಯಿಂದಂ ೨೬

ಅಂತಿರ್ದ ನಂದಿನಾಥಂ
ಮುಂತಿದಿರ್ವಂದಗಜೆಗೆಱಗಿ ಹೆಱಸಾರ್ದೊಲವಿಂ
ದಂ ತಾಯೆ ದೇವಿ ಶಾಂತೆಯ
ನಂತಗುಣಾಭರಣೆ ಕರುಣಿ ಶರಣೆನುತಿರ್ದಂ ೨೭

ಆಗಳ್,

೧-೧ ಭರಿತರ್ ನಿರತರ್ ತ್ವರಿತರ್ (ಯ); ನಿರತರ್ ಭರಿತರ್ ತ್ವರಿತರ್ (ಬ). ೨-೨ ರತರ್ ನುತರ್ ವಿರಕ್ತನತೇಜಃ (ಕಾ); ನುತರ್ ವಿಕರ್ತನಾ ತೇಜಯುತರ್ (ಯ). ೩-೩ ಯುಲಿಯುವನಿಲನಲ್ಲಾಡಂ (ಮ); ನುಡಿಯುವನಿಲನಲುಗಂ ಮಿಗೆ (ಅ). ೪-೪ ಮರನುಂ ಗಿಡುವುಂ ಲತೆಯುಂ । ಪರಮೇಶನ ನಿಜಸಮಾಧಿಯಿಂದಾ ೫-೫ ನತ (ಮ). ೬-೬ ನೀಢಂ (ಮ ಬ).

ತೊಳಗುವ ಶಾರದ ನೀರದ
ದೊಳಗಿಂ ಮಿಂಚಿಳಿವ ತೆಱದೆ ಗಿರಿಸುತೆ ಶಶಿಮಂ
ಡಳದಧಿದೇವತೆ ಧರಣೀ
[೧]ತಳಕ್ಕೆ[೧] ಬರ್ಪಂತೆ ಪುಷ್ಪಕದಿನಿಳಿತಂದಳ್ ೧೮

ಒಡನಿಳಿದಂ ಗಿರಿರಾಜಂ
ತಡವಿಲ್ಲದೆ ಭೋಂಕನಿಳಿದು ಜಯೆವಿಜಯೆಗಳಾ
ಗಡೆ ನವರತ್ನದ ಪಾವುಗೆ
ಯಿಡೆ ಮೆಟ್ಟಿದಳಗಜೆ ಮುಟ್ಟಿದಳ್ ಶಿವನೊಲವಂ ೧೯

ಗಿರಿರಾಜಂ ಕೆಯ್ಗುಡೆ ನೇ
ಪುರದ ಕಳಧ್ವಾನಮೊಗೆದು ನಗವಂ ಜಗವಂ
ಪರಿವೇಷ್ಟಿಸೆ ಬರುತಿರ್ದಳ್
ಪರಮೇಶ್ವರಿ ಚಂದ್ರಧರನನೀಕ್ಷಿಪ ಭರದಿಂ ೨೦

ಅಂತು ಬರೆವರೆ,

ಮತ್ತೇಭ

ಇದು ವಿದ್ಯುತ್ಪ್ರಭವಪ್ರಭಾಪ್ರಸರಮೋ ಸಂಪೂರ್ಣಚಂದ್ರಾಂಶುಸಂ
ಪದಮೋ ಶಾಶ್ವತಸೂರ್ಯಕೋಟಿರುಚಿರಪ್ರದ್ಯೋತಮೋ ಪೇಳ್ ಪೊ
ಣ್ಮಿದ ಸರ್ವೇಶನಿಜಪ್ರಕಾಶನಿಧಿಯೋ [೨]ಪೇಳೆಂಬಿನಂ[೨] ತೋಱುತಿ
ರ್ದುದು ದಿಕ್ಸಂಕುಳನಿರ್ಮಳೀಕೃತವಿರೂಪಾಕ್ಷಪ್ರಭಾಮಂಡಲಂ ೨೧

ಆ ಪ್ರಭಾಮಂಡಲದೊಳಗೆ,

ಮಹಾಸ್ರಗ್ಧರೆ

ವಿಳಸತ್ಪದ್ಮಾಸನಂ ಭಾಸುರಭಸಿತವಪುರ್ವಲ್ಕಲಂ ಧ್ಯಾನಮುದ್ರಾಂ
ಗುಳಿ ರುದ್ರಾಕ್ಷಾಕ್ಷಮಾಲಾರುಚಿನಳಿನಗುಣವ್ರಾತಯಜ್ಞೋಪವೀತಂ
ಲಳಿತಾಸ್ಯಂ ಸ್ನಿಗ್ಧಗಂಡಂ ಮುಕುಳಿತನಯನಂ ಚಿತ್ತನಿಷ್ಕಂಪನಂ ಪಿಂ
ಗಳವರ್ಣೋದ್ಯಜ್ಜಟಾಮಂಡಳಮೆಸೆಯೆ ತಪೋವೇಷದಿಂದೀಶನಿರ್ದಂ ೨೨

೧-೧ ತಳಕಂ (ಬ ಯ ಗೊ). ೨-೨ ತಾನೆಂಬಿನಂ (ಅ).

ಮಹಾಸ್ರಗ್ಧರೆ

ಮನಮೆಂತುಂ ಬುದ್ಧಿಯೊಳ್ ಬುದ್ಧಿಯ ನಿಲವವಹಂಕಾರದೊಳ್ ತಾನಹಂಕಾರ ನಿಜಂ ಚಿತ್ತಾಂತದೊಳ್ ಚಿತ್ತದ ನೆಲೆ ವಿಲಸತ್‌ಪ್ರಾಣದೊಳ್ ಪ್ರಾಣಮುಂ ಜೀವನೊಳಾದಂ ಕೂಡೆ ಜೀವಂ ಪರಮನೆನಿಸಿ ನಿರ್ವಾಣಿಯ ನಿಷ್ಕಾಮಿ ನಿಷ್ಕಂಪನಿವಾತಜ್ಯೋತಿರೂಪಂ ನಿರುಪಮನೆನಿಸಿರ್ದಂ ವಿರೂಪಾಕ್ಷಲಿಂಗಂ ೨೩

[1]ಭಿನ್ನಾ[1]ಭಿನ್ನಂ ಜ್ಞಾನಮ
ಯಂ ನಿಜತೇಜೋ[2]ವಿಲೀನ[2]ಮಾನಸನಚಲಂ
ತನ್ನಂ ತಾನೇ ಜಾನಿಪ
ಬಿನ್ನಣದೊಳಗಿರ್ದನಭವನದ್ವಯರೂಪಂ ೨೪

ಮಹಾಸ್ರಗ್ಧರೆ

ಇದು ಸತ್ಯಾಕಾರಮೋ ಶಾಂತಿಯ ನೆಲೆವನೆಯೋ ಧರ್ಮವಿಸ್ತಾರಮೋ ಪುಣ್ಯದ ಜನ್ಮಸ್ಥಾನಮೋ ಜ್ಞಾನದ ನಿಜರುಚಿಯೋ ನಿತ್ಯ[3]ನಿರ್ವಾಣಿಯ[3]ಮೋ ತತ್ತ್ವದ ತೇಜಃಪುಂಜಮೋ ಮುಕ್ತಿಯ ಸುಖಮುಖಮೋ
ಯೋಗಸಂಧಾನಮೋ ನೋಡಿದು ತಾನೆಂಬಂತೆ ಮುಂತಿರ್ದುದು ಶಿವನ ನಿಜಧ್ಯಾನಮೂರ್ತಿಪ್ರಭಾವಂ ೨೫

ಅಂತುಮಲ್ಲದೆ,

ಮಾತಿನ ವೇಧೆಯ ಬೋಧೆಯ
ಭೂತಾದಿಯ ಪಂಚವಿಂಶತಿಗಳಂ ಮೀಱಿ
ಜ್ಞಾತೃಜ್ಞಾನಜ್ಞೇಯ
ವ್ರಾತಮನಳಿದುಳಿದು ತಾನೆ ತಾನಾಗಿರ್ದಂ ೨೬

ಮುನಿತತಿಗಳ ಮನವೆಯ್ದದ
ಮನುಗಳ ಬಗೆ ಪುಗದ ಶಾಸ್ತ್ರವಱಿಯದ ವೇದಂ
ಜಿನುಗುವ ಗಜಬಜೆ [4]ನಿಳ್ಕದ[4]
ಘನತೇಜೋರಾಶಿ ನಿಜನಿವೇಶದೊಳಿರ್ದಂ ೨೭

೧–೧ ಭಿನ್ನ (ಕಾ ಬೆ ಯ ಬ). ೨–೨ ವಿಧಾನ (ಬ ಯ ಮ); ನಿಧಾನ (ಡ). ೩–೩ ನಿರ್ವಾಣ (ಮ ಬ ಯ). ೪–೪ ಗಂದದ (ಬೆ); ನಿಲ್ಲದ (ವಾ).

ಪೊಱಗಂ ಬಳಸದ ಮಾಯೆಗೆ
ತೆಱಹಂಗುಡದಚ್ಚಬಚ್ಚಬಱಿಯಱಿವಿನ ಸೈ
ವೆಱಗಿನ ಮಱಹಿನ ಕುಱುಹಿನ
ಕಱೆಗೊರಲಂ ನಿಜಸಮಾಧಿಯೊಳ್ ಸಂದಿರ್ದಂ ೩೮

ಇರೆ ಕಾಣುತೆ ಗಿರಿರಾಜಂ
ಪರಮಸುಖಂಬಡೆದು ಪಿಡಿದು [೧]ಮೆಲ್ಲಡಿಗಳನಾ[೧]
ದರದಿಂ ಹರ್ಷಂ ಮಸೊಡು
ತ್ತಿರೆ ಪುಳಕದ ಮೆಯ್ಯೊಳೊಲ್ದು ಮೆಯ್ಯಿಕ್ಕಿರ್ದಂ ೩೯

ಅಂತು ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು ಪಾರ್ವತಿಯಂ ಕರೆದು,

ಚಂಪಕ

ಅನುಪಮ[೨]ನಿರ್ದನಿರ್ದನೆ[೨] ಶರಣ್ಯುಗು ಶಾಶ್ವತಮೂರ್ತಿಯಿರ್ದ[೩]ನಿ
ರ್ದನೆ[೪] ನಡೆನೋಡು ಚಂದ್ರಧರ[೩]ನಿರ್ದನೆ[೩] ನಂಬು ನಿಜೇಶ[೨]ನಿರ್ದನಿ
ರ್ದನೆ[२] ಪರಿಭಾವಿಸಪ್ರತಿಮ[३]ನಿರ್ದನೆ[३]ಕೀರ್ತಿಸು ಶಂಭು[೫]ವಿರ್ದನಿ
ರ್ದನೆ[೫]ಪದೆದರ್ಚಿಸರ್ಚಿಸೊಲವಿಂದಮೆ ಪಾರ್ವತಿ ಹಂಪೆಯಾಳ್ದನಂ ೪೦

ನಿಧಿಯಿದೆ ಭಕ್ತರ ಬಯ್ಕೆಯ
ನಿಧಾನವಿದೆಯುಚ್ಚಶರಣರನುಪಿದೆ ಕರುಣಾಂ
ಬುಧಿಯಿದೆ ಸುಧೆಯಿದೆ ಕೇಳ್ ನಿ
ನ್ನಧಿಪಂ ಶಶಿಮೌಳಿಯೆಂಬ ಕಲ್ಪಮಹೀಜಂ ೪೧

ಸದಮಳಮಿದೆ ಪರತತ್ತ್ವದ
ನಿಧಾನಮಿದೆಯಾದ್ಯರಱಿದು ಕುಱುಪಿಟ್ಟಾನಂ
ದದ ಮೊದಲಿದೆ ಪರಮಾರ್ಥದ
ತುದಿಯಿದೆ ಗಿರಿಜಾತೆ ನೋಡು [೬]ನೆನೆ ಹೊಗಳೆಂದಂ[೬] ೪೨

೧–೧ ಮೆಲ್ಲಡಿಯಂ ಸಾ (ಕಾ). ೨–೨ ನೀತನೀತನ (ಅ ಓ); ನಿಧನಿಧನೆ (ಮ ಬ ಕ ಗೊ ಡ ಗ); ನೀದನೀದನೆ (ಸೆ). ೩–೩ ನೀತನೆ (ಅ ಓ); ನಿಧನೆ (ಮ ಬ ಕ ಗೊ ಡ ಗ); ನೀದನೆ (ಸೆ). ೪–೪ ನೆಱೆ (ಅ ಓ) ೫–೫ ವೀತನೀ। ತನ (ಅ ಓ); ವಿಧನಿ। ಧನೆ (ಮ ಬ ಕ ಗೊ ಡ ಗ); ವೀದನೀದನೆ ೬–೬ ನೆಱೆ। ಪೊಗಳೆಂದಂ (ಅ).

ಎಂದು ಗಿರಿರಾಜಂ ಹರನ ಪರತತ್ತ್ವಮಯಸೌಂದರ್ಯರೂಪಮಂ ಗಿರಿಜೆಗೆ ತೋಱುತ್ತುಂ 'ಪೊಡೆಮಡು ಪೊಡೆಮಡೆ'ನೆ ಪಾರ್ವತೀದೇವಿಗೆ ಕೌತುಕರಸದೊಳಾನಂದಂ ಪುಟ್ಟೆ ಭಯರಸದೊಳ್ ಭಕ್ತಿಯುಣ್ಮೆ ಸ್ನೇಹರಸದೊಳ್ ತಾತ್ಪರ್ಯಂ ಪೊಣ್ಮೆ ಶೃಂಗಾರರಸದೊಳ್ ಲಜ್ಜೆವೆರಸಿ ಕಲ್ಪತರುವಿನ ಬೀಳಲ್ ಮಹಾನಿಧಾನಕ್ಕೆಱಗುವಂತೆ ಮಂದಾನಿಳನ ಸೊಂಕಿಂದಂ ಪುಷ್ಪಮಾಲೆ ಬಳ್ಕುವಂತೆ ಕುಸುಮಚಾಪಂ ಕಾಲ್ಗೆಱಗುವಂತೆ ಪಂಚಬಾಣಂ ಹೊಡೆಗೆಡೆವಂತೆ ಮುಂದೆ ನಿನ್ನ [1]ವಾಮಭಾಗಮಂ[1] ಸೂಱೆಗೊಳ್ವುದರ್ಕಿದೆ ಕುಱುಪೆಂಬಂತೆ ಬಿಂಕದಿಂ ಕೊಂಕಿ ನಿಂದು ವಿಲಾಸದಿಂದೆಡದುಂಗುಟಮಂ ಲಲಾಟದಿಂ ಮುಟ್ಟೆ ಪೊಡೆಮಟ್ಟು ನಿಂದು,

ಶಾರ್ದೂಲ

ಆನಿರ್ದಂತಿರದೇಕೆ ಬೇಡ ತಪಮೆಂದೆಂಬಂತಹಂಕಾರದಿಂ
ನೀನೇ ಸದ್ಗತಿ ದೇವದೇವ ದಯೆಗೆಯ್ಯೆಂಬಂತೆ ಕಾರ್ಪಣ್ಯದಿಂ
ಸಾನಂದಾತ್ಮಕನೆನ್ನನೇಕಜೀವನೆಂದೆಂಬಂತೆ ನಿರ್ವೇದದಿಂ
[2]ನಾನಾ ಭೋಗ[2]ದೊಳೆಂದು ಕೂಡಿದಪೆನೆಂಬಂತಾಸೆಯಿಂ ನೋಡಿದಳ್ ೪೩

ಮತ್ತೇಭ

ಶಿವನೀತಂ ನಿಜವಲ್ಲಭಂ ಮಮಗುರುಪ್ರಖ್ಯಾತನತ್ಯೂರ್ಜಿತಂ
ಭವನೆನ್ನಾಳ್ದನೆನಿಪ್ಪುದಂ ತಿಳಿದೆ ನಾಂ ನೀಂ ಪೋಗು ನಿತ್ಯಾರ್ಚನೋ
ತ್ಸವದಿಂ ಸಂತಸದಿಂ ಸದಾತುರತೆಯಿಂ ಸಾನಂದದಿಂದಿರ್ಪೆನೆಂ
ದು ವಿಳಾಸಾಬ್ಧಿ ಭವಾನಿ ನೋಡಿ ನುಡಿದಳ್ ಭೂಭೃತ್ಕುಲಾಧೀಶ[3]ನೊಳ್[3] ೪೪

ನುಡಿಯೆ ಗಿರಿರಾಜನೊಲವಿಂ
[4]ಮೃಡಾಣಿಯುಂ[4] ನೋಡಿ ಮಗಳೆ [5]ಮಾತೆ ಕರಂ[5] ನ
ಟ್ಟಡವಿ ಗುಹೆ ಗಹ್ವರಂ ಮಡು
ಗಿಡುವವಱೊಳ್ ಪದುಳಮರ್ಚಿಸೆನುತುಂ [6]ನುಡಿದಂ[6] ೪೫

ಪತ್ತಡಿಯಿಟ್ಟತಿಮೋಹಂ
ಚಿತ್ತಮನಳ್ಕಱಿಯೆ ತಿರುಗಿ ಬಂದು ಗಿರಿಜೆ ಲೋ
ಕೋತ್ತಮೆ ಪೋದಪೆನೆನುತುಂ
ಮತ್ತಂ ಮತ್ತಪ್ಪಿ ಪರಸಿ ಗಿರಿಪತಿ ಪೋದಂ ೪೬

೧–೧ ವಾಮಾಂಗಮಂ (ದಾ). ೨–೨ ನಾನಾ ಭಾವ (ಓ). ೩–೩ ನಂ (ಅ). ೪–೪ ಮೃಡನರಸಿಯು (ಅ). ೫–೫ ಚಂದ್ರಾನನೆ (ಮ) ೬–೬ ನಡೆಪಂ (ಅ); ಪೋಪಂ (ಸೆ).

[1]ಅಂತು ಪೋಗೆ ಚಿಂತಿಸಿ ನೋಡಿ[1] ಮುಂತಿರ್ದ [2]ವಿಪುಳ[2]ವಿಭ್ರಮನಂ ತಪೋಮಯನಂ ವಿಳಾಸನಿಧಿಯುಂ ವೈರಾಗ್ಯಯುಕ್ತನಂ ಸೌರಭ್ಯಸದನನಂ ಭಸಿತ-ಕಾಯನಂ ಸೌಂದರ್ಯರೂಪನಂ ಜ್ಞಾನಪ್ರದೀಪನಂ ನಿಜಸುಖನಿವಾಸನಂ ಸ್ವಯಂ-ಪ್ರಕಾಶನಂ ಕಂಡು ಶೃಂಗಾರರಸಕ್ಕೆ ಮನದಂದು ವೈರಾಗ್ಯರಸಕ್ಕೆ ಮೆಯ್ದುಗೆದು ಸಹಚರಿಯರಪ್ಪ ಜಯೆವಿಜಯೆಗಳ್ಗೆ ನಗತನೂಜೆ ನಿರ್ವೇದದಿಂದಿಂತೆಂದಳ್,

ಚಂಪಕ

ಇದೆ ವಿಭು ಸಾರ್ದನೊಲ್ದು ಪರವಂ ಪರವಂ ಪರವಂಚನೋಕ್ತಿ ಕೊ
ಳ್ಳದು ತಪಮತ್ಯಸಾಧ್ಯವಿಷಯಂ ವಿಷಯಂ ವಿಷಯಂತ್ರದಂತೆ ಸು
ತ್ತಿದುದುಪತಾಪವೆಯ್ದಿ ತನುವಂ ತನುವಂ ತನುವಂ ಕಪರ್ದಿ ನೋ
ಡಿಪೊಡೆನಗಾದುದೆಯ್ದಿ ಕುಮುದಂ ಕುಮುದಂ ಕುಮುದಂ ಮೃಗೇಕ್ಷಣೇ ೪೭

ತಪಮಿಂತಿದು ಮದ್ವಿರಹಾ
ತಪಮತ್ಯಧಿಕಂ ತುಡುಂಕಬಾರದಪಾರಂ
ತಪನನ ತೇಜಕ್ಕಂ ವಿ
ತ್ತಪನಳಿವಿಂಗಂ ವಿಶೇಷಜೋದ್ಯಮಭೇದ್ಯಂ ೪೮

ನಿಗಮಂಗಳ್ ವಿಷ್ಣು ವಿರಿಂ
ಚಿಗಳಳಿಯದ [3]ಶಿವನನಱಿವೊಡೆನ್ನಳವೇ ತಾಂ[3]
ಬಗೆವೊಡೆ ಸಾತ್ತ್ವಿಕಶಿವಭ
ಕ್ತಿಗಲ್ಲದಭವಂ ಸಮಂತು ಸಿಲ್ಕಂ ನಿಲ್ಕಂ ೪೯

ಅದು ಕಾರಣದಿಂ ಭಕ್ತಿ
ಪ್ರದನಂ ವಿರೂಪಾಕ್ಷನಂಘ್ರಿಗಳನರ್ಚಿಸುವೆಂ
ಸದಮಳಶಿವಸುಖಮುಖಸಂ
ಪದದೊಳ್ ಬಳಿಕಿರ್ಪೆನಪ್ಪಿ ಶರ್ವನ ತನುವಂ ೫೦

೧-೧ ಅಂತು ಗಿರಿರಾಜಂ ಪೋಗೆ ಮತ್ತೆ ಗಿರಿಪತಿಸುತೆ ಚಿಂತಿಸಿ ನೋಡಿ (ಯ). ೨-೨ ವಿಮಳ (ಡ). ೩-೩ ಶಿವನನಱಿವೊಡೆನ್ನಳವೇ ಪೇಳ್ (ಕಾ ಕ ಸೆ).

ಎಂದಬಲೆಯರೊಳ್ ನುಡಿಯು
ತ್ತುಂ ದಟ್ಟಡಿಯಿಟ್ಟು ಭಕ್ತಿ ತನ್ನಯ ಮನಮಂ
ಬಂದಡರೆ ಭರಂ ಮಿಗೆ ಮುದ
ದಿಂದಂ [1]ಪುಷ್ಪಾಪ[1]ಚಯಕೆ ಗಿರಿಸುತೆ ಬಂದಳ್ ೫೧

ನೇವುರದ ನುಣ್ದನಿಗೆ ಮಿಗೆ
ಯಾವರಿಸುವ ಹಂಸೆವಿಂಡನೆಡಪುತ್ತುಂ ಸದ್
ಭಾವಕಿ ಭಾಮಿನಿ ಭರ್ಗನ
ಜೀವಂ ಶೃಂಗಾರವಾರಿನಿಧಿ ನಡೆತಂದಳ್ ೫೨

ಇಂತು ನಡೆತಂದು ಪೂದೋಂಟಮಂ ಪೊಕ್ಕು,

ಅರರೆ ಸುಕುಮಾರೆ ಸೌರ
ಭ್ಯರತೆ ವಸಂತಾನುಕೂಲೆ ಮೆಲ್ಲಡಿಯಿಡುತಂ
ಹರನ ಜಡೆಮುಡಿಗೆ ನಡೆತಂ
ದಿರವಂತಿಗೆಯರಲನಗಜೆ ಬಗೆಮಿಗೆ [2]ತೆಗೆದಳ್[2] ೫೩

ತೊಳಗುವ ಚಂಪಕನಾಸಿಕೆ
ಬಳಸಿದ ಚಂಪಕಸುಗಂಧಿ ನಗನಂದನೆ ಬಂ
ದಳಿಮನವಲ್ಲದ ಭಕ್ತ್ಯು
ಜ್ಜ್ವಳೆ ತಿಱಿದಳ್ [3]ಕಂಪು[3] ಸುರಿವ ಸಂಪಗೆಯರಲಂ ೫೪

ಎಸೆವ ರಜೋಗುಣ[4]ಲಸಿತ[4]
ಪ್ರಸನ್ನಮುಖರಾಗಯುಕ್ತೆ ಶಿವಪದಪೂಜಾ
ವ್ಯಸನೆ ಶಶಿವದನೆ ತಿಱಿದಳ್
ಪೊಸ ಹರಿಸಮನಾಂತು ಶಾಂತೆ ಸೇವಂತಿಗೆಯಂ ೫೫

ಪರಮೋತ್ಸವದಿಂ ನಡೆತಂ
ದುರುತರಮೃಗನಾಭಿಗಂಧಿ ನಿಂದು ಬಿಳಿಯ ಕ
ತ್ತುರಿ ತಾನೆನಿಸುವ ಪಡ್ಡಳ
ಯರಲಂ ತಿಱಿದಳ್ ಭವಾನಿ ಶಿವಪೂಜಾರ್ಥಂ ೫೬

೧–೧ ಪುಷ್ಪೋಪ (ಬ ಯ ದಾ). (ಶಾ ಅ ಬೆ). ೨–೨ ತಿಱಿದಳ್ (ಸೆ). ೩–೩ ಸೊಂಪು (ಬ). ೪–೪ ಲಲಿತ (ದಾ ಬ); ವಿಲಸತ್ (ಅ); ವಿಲಸಿತ (ಶಾ ಬೆ).

ಎಳಸಿ ನಲಿನಲಿದು ನವಪಾ
ಟಳಗಂಧಿಕೆ ಪಾಟಳಾಂಗಿ ಮಿಗೆ ಕೊಯ್ದಳ್ ಪಾ
ಟಳರುಚಿರಾಧರೆ ಕಾಮನ
ಶಿಳೀಮುಖದ ಪರಿಯ ಪಾದರಿಯ ಪೊಸಪೂವಂ ೫೭

ಅವಂ ಕೊಂಡು ಮತ್ತೆ ನಡೆತಂದು ಕೊಳನಂ ಪೊಕ್ಕು,

ಕಮಳಂದಿಱಿಯಲ್ ನಿಜಕರ
ಕಮಳಮುಮಂ ನೀಡೆ ಕೆಯ್ಯ ಕಂಪಿಂ[೧]ಗಮಮು[೧]
ಭ್ರಮರಾಳಿ [೨]ಮುತ್ತೆ[೨] ಕರಮಂ
ಕಮಳಂ ದಿಟವೆಂದು ಬಗೆದು ನೋಡುತ್ತಿರ್ದಳ್ ೫೮

ಅಂತು ನೋಡಿ ತಿಳಿದು,

ಮಿಸುಪ ನವತರುಣತರಣಿಯ
[೩]ಪಸಿಯ ಬಿಸಿಲ್ ಮಸಗೆ[೩] ತನುವಿನರಿಸಿನವೊಲವಿಂ
[೪]ದೆಸೆವ[೪] ರಥಾಂಗಕುಚದ್ವಯೆ
ಪೊಸದಾವರೆವೂವನೋವಿ ಭಾವಿಸಿ ತಿಱಿದಳ್ ೫೯

ಸದಮಳಮೃದುಮಯಹಸ್ತ
ಪ್ರದೇಶಮಂ ಸುತ್ತಿ ಮುತ್ತೆ ಮತ್ತಾಳಿಗಳಂ
ಬುದಕೋದಂಡಭ್ರೂಯುಗೆ
ಸುದೀರ್ಘನಖೆ ಕೊಯ್ದಳೊಲ್ದು ನುತಕೇತಕಿಯಂ ೬೦

ಸೆಳ್ಳುಗುರ್ಗಳ ನಳನಳಿಸುವ
ಬಳ್ಳಿವೆಳಗು ಕರೆಯೆ ಕೌಮುದಿಯನುತ್ಸವದಿಂ
ದುಳ್ಳಲರ್ವ ಕುಮುದಕುಲದೊಳ
ಗೊಳ್ಳಿದುವಂ ತೆಗೆದಳಂಬುಮುಖಿ ತಿಳಿ[೫]ಗೊಳನೊಳ್[೫] ೬೧

೧–೧ ಗರರೆ (ಮ ಕೊ ಸ ಅ ಕ ಗ ಓ). ೨–೨ ಸುತ್ತೆ (ಮ ಕೊ ಡ ಗ ದಾ ಓ). ೩–೩ ಪೊಸಬಿಸಿಲವೊಲೆಸೆವ (ಕಾ ಅ ಕ ಗ). ೪–೪ ದೆಸೆಯೆ (ಕಾ ದಾ ಅ ಕ ಬ). ೫–೫ ಗೊಳದೊಳ್ (ಕಾ ಕ).

ಜಾತಿಸುಗಂಧಿನಿ ಮೇನಾ
ಜಾತೆ ಕುಸುಮಜಾತಿಯೊಳಗೆ ಜಾತಿಯಿದೆಂದಾ
ಜಾತಿಸ್ತ್ರೀಜಾತಿಯೊಳತಿ
ಜಾತೆ ಜಗನ್ಮಾತೆ ಜಾತಿಯರಲಂ ಕೊಯ್ದಳ್ ೬೨

ಮಲ್ಲಿಗೆ ಶರ್ವನ ಜೆಡೆಮುಡಿ
ಯಲ್ಲಿಗೆ [೧]ಕೊಂಡೊಯ್ಯಲೆಂದು[೧] ಸಮ್ಮದದಿಂ ನಿ
ಮ್ಮಲ್ಲಿಗೆ ಬಂದೆನೆನುತ್ತುಂ
ಮಲ್ಲಿಗೆಯಲರ್ದೊಂಗಲಂ ಮಹೇಶ್ವರಿ [೨]ಕೊಯ್ದಳ್[೨] ೬೩

ಮತ್ತಂ ಪುಷ್ಪಜಾತಿಯುಂ ಕೊಯ್ದು ಪತ್ರಜಾತಿಯಂ ಕೊಯ್ಯಲೆಂದು,*

ಸಹಜಾಮೋದ ಸುಗಂಧಾ
ಮಹಮೆನಿಸಿದ ಮರುಗದಲ್ಲಿ ಪರಿಮಳದೆಲೆಯುಂ
ಬಹುಗುಣಭೂಷಣೆ ಭಕ್ತಿಯೊ
ಳಹಿನಿವಹಾಭರಣನರ್ಚನೆಗೆ [೩]ನೆರೆ[೩] ತಿಱಿದಳ್ ೬೪

ನಲವಿಂದಂ ಮುಡಿವಾಳದ
ನೆಲೆಗೆಯ್ತಂದಗತನೂಜೆ ಬೇರಂ ಬಲ್ಲ
ರ್ಗೆಲೆದೋಱಲೇಕೆ ನೀನೆನು
ತೊಲವಿಂ ಪರಿಮಳದ ಬೇರ್ಗಳಂ ಬರೆತೆಗೆದಳ್ ೬೫

ಇಂತಿಂತನಂತಕಾಂತಲ
ತಾಂತಂಗಳನಾಯ್ದು ಕೊಯ್ದು ಸಂತಸದಿಂದಂ
ಮುಂತೆ ನವಾಂಕುರಕಿಸಲಯ
ದಿಂ ತೀವಿದ ಬಾಲಚೂತದೆಡೆಗೆಯ್ತಂದಳ್ ೬೬

ಒಡನೆ ಜಯೆವಿಜಯೆಗಳ್ ಮೆ
ಲ್ಲಡಿಯಿಡುತುಂ ಬಂದು ಪುಷ್ಪಪುಟಿಕೆಗಳಂ ಸಂ
ಗಡವಿಳುಹಿ ವಿಮಳತಳದೊಳ್
ಪೊಡೆಮಡುತುಂ ಗಿರಿತನೂಜೆಗತಿಮುದದಿಂದಂ ೬೭

೧-೧ ಕೊಂಡೊಯ್ವೆನೆಂದು (ಕ ಶಾ ಬೆ). ೨-೨ ತಿರಿದಳ್ (ಶಾ ಬೆ). ೩-೩ ಮಿಗೆ (ಸ).
* ಈ ವಚನವು ಅ ಬ ಮ ಯ ಕ ದಾ ಗೊ ಗ ಪ್ರತಿಗಳಲ್ಲಿಲ್ಲ.

ಅಂತು ಪೊಡೆವಟ್ಟು ಬಾಲಸಹಕಾರತಳದೊಳ್ ಹರಿತಭೂಮಿಕೆಯೊಳ್ ಸುರುಚಿರಮರೀಚಿಗಳಂಕುರಿಸಿತೆಂಬಂತೆ ನಳನಳಿಸಿ ಬೆಳೆದ ಪೊಸಪಸಲೆಯ ಮೇಲೆ ಕದಳೀದಳಂಗಳಂ ಕಮಲಪತ್ರಂಗಳಂ ನುಣ್ಪೇಗಂ ಕಱೆವ ಪೊಂಬಾಳೆಯ ಪತ್ರಂಗಳನಿಂಬಿನಿಂ ಪಾಸುತ್ತುಂ ಪಾಸಿಂಗೆ ಕವಿವ ಮತ್ತಾಳಿಗಳನೆತ್ತಂ ನಿವಾರಿ-ಸುತ್ತುಂ ಕುಸುಮಕುಲಮನೆಸೆಯೆ ಸುರಿದು ಭಾಸುರದುಕೂಲದಿಂ ಬಾಸಣಿಸಿ ಶತಪತ್ರಸೂತ್ರಕುಲಮಂ ಕೆಲದೊಳಿರಿಸಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು ದೇವಿ ಜಗನ್ಮಾತೆ ಸರ್ವಕಳಾಕೋವಿದೆ ಸುಕುಮಾರಾಂಗಿ ಸೌಂದರ್ಯಮೂರ್ತಿ ಇತ್ತ ಬಿಜಯಂಗೆಯ್ವುದೆಂದು ಬಿನ್ನವಿಸಿ ಕೆಯ್ಗುಡೆ ಮೃದುಪದನ್ಯಾಸದಿಂ ನಡೆತಂದಿಕ್ಕಿದ ಮಾಂದಳಿರ ಪೊಸಪಸೆಯ ಮೇಲೆ ಕಮನೀಯದಿಂ ಕುಳ್ಳಿರ್ದಾಗಳ್,

ಪರಿಮಳದಧಿದೇವತೆಯೋ
ವರಕುಮುದದ ಕೂಡೆ ಬಂದ ಶಶಿಕಳೆಯೋ ವಾ
ರಿರುಹದ ನಡುವೆಯ್ತಂದಿಂ
ದಿರೆಯೋ ಎನೆ ದೇವಿ ಪೂವನೋವುತ್ತಿರ್ದಳ್ ೬೮

ಅಂತೋವುತ್ತುಮಿರ್ದು,

ಮುಟ್ಟಿದೊಡಾಗಳೆ ಕಂದುವ
ನೆಟ್ಟನೆ ನೋಡಿದೊಡೆ ೧ಕೋಡಿ೧ ಬಾಡುವ ನೆನೆಯಲ್
ತೊಟ್ಟನೆ ಕೊರಗುವ ಪೂವಂ
ಕಟ್ಟುವ ಪರಿಯೆಂತೆನುತ್ತೆ ಚಿಂತಿಸುತಿರ್ದಳ್ ೬೯

ಅಂತು ಚಿಂತಿಸಿ ನೋಡಿ ಭಕ್ತಿಯೊಳ್ ಕೂಡಿ ಪೂಜಿಸಲ್ಬೇಡಿ ಪೂವಂ ಪೂಸೋಂಕೆ ಕೊರಗದೆಂಬಂತೆ ತನ್ನ ಕರಕಮಲಮಂ ನೀಡಿ,

ಅತಿಸುಕುಮಾರೆ ೨ಸುಖಾಕರೆ೨
ನುತಗುಣಗಣಯುಕ್ತೆ ಶಾಂತೆ ಸಾತ್ತ್ವಿಕರೂಪಾ
ನ್ವಿತೆ ಸರ್ವಕಳಾನಿಧಿ ಪಾ
ರ್ವತಿ ಸತಿ ಶತಪತ್ರಸೂತ್ರಮಂ ತೆಗೆಯುತ್ತುಂ ೭೦

೧–೧ ಬಳ್ಕಿ (ಓ). ೨–೨ ಶುಭಾಕರೆ (ಬ ಯ).

ವದನಕ್ಕಂ ಕುಸುಮಕ್ಕಂ
ಪದೆದೆಱಗುವ ಮಧುಕರಂಗಳಂ ಸೋವುತ್ತುಂ
ಮೃದು[1]ತರಸರಳಾಂಗುಲಿ[1]ಯಿಂ
ಸದಮಲೆಯಿರವಂತಿಯುರಲನೊಲವಿಂ ಪಿಡಿದಳ್ ೭೧

ಪಿಡಿದೆತ್ತಿ ನಳಿನಗುಣದೊಳ್
ತೊಡರ್ಚುತುಂ ಮೆಲ್ಲಮೆಲ್ಲನಿರವಂತಿಯ ಪೂ
ದೊಡಿಗೆಗಳಂ ವಿರಚಿಸಿದಳ್
ಮೃಡಾಣಿ ಮೃಡನವಯವಕ್ಕೆ ಸಡಗರದಿಂದಂ ೭೨

ಸರಸಿಜಬಂಧಂ ಕಮಲಾ
ಕರಬಂಧಂ ಮುರಜಬಂಧಮುತ್ಪಲಬಂಧಂ
ತರುಬಂಧಂ [2]ಗಿರಿ[2]ಬಂಧಂ
[3]ಪರ[3]ಬಂಧಂ ಲಿಂಗಬಂಧಮಂ ವಿರಚಿಸಿದಳ್ ೭೩

ಸುರರ ಶಿರೋಮಾಲಾ[4]ಪವಿ
ತ್ರ[4]ಬಂಧಂ ನಾಗಬಂಧಮವನೀಬಂಧಂ
ದ್ವಿರದಾಜಿನಬಂಧಂ [5]ಪವಿ
ತ್ರ[5]ವಿಧುರವಿಬಿಂಬಬಂಧಮಂ ವಿರಚಿಸಿದಳ್ ೭೪

ಕರಕಮಲದ ಲೋಚನಸರ
ಸಿರುಹದ ವದನಾರ[6]ವಿಂದದಾ[6] ಪರಿಮಳದಿಂ
ಪೊರೆಯುತ್ತುಂ ಪೊಸಪೂವಂ
ಗಿರಿಜೆ ಸುಖಂ [7]ಮುಟ್ಟಿ[7] ಮುಟ್ಟಿ [8]ಕಟ್ಟುತ್ತಿರ್ದಳ್[8] ‡೭೫

೧–೧ ತರಳತರಾಂಗುಲಿ (ಬ); ಕರಸರಳಾಂಗುಲಿ (ಕ). ೨–೨ ಹರಿ (ಕಾ ಬೆ ಯ ಬ ದಾ ಅ ಸೆ). ೩–೩ ಸ್ಮರ (ಕಾ ಬೆ ಬ ಗ ಸೆ ಅ ದಾ). ೪–೪ ಬಂ | ಧುರ (ಕಾ ಬ ಬೆ ಯ ಸೆ ದಾ ಕ). ೫–೫ ಸು | ಸ್ಥಿರ (ಅ). ೬–೬ ವಿಂದದತಿ (ಸೆ). ೭–೭ ಪುಟ್ಟಿ (ಕಾ ಬ ಸೆ ಬೆ ಯ); ಪುಟ್ಟಿ (ಅ). ೮–೮ ಕಟ್ಟಿದಳಾಗಳ್ (ದಾ ಗೊ ಅ ಸೆ). ‡ ೭೫, ೭೬ ನೆಯ ಪದ್ಯಗಳು ಬಿ ಪ್ರತಿಯಲ್ಲಿಲ್ಲ. ಕ ಪ್ರತಿಯಲ್ಲಿ ಇವು ಕೂಡಿ ಹೋಗಿ ಬಹಳ ತಪ್ಪಾಗಿದೆ.

ಈ ತೆಱದಿಂ ಕ್ಷಿತಿಧರವರ
ಜಾತೆ [೧]ಜಗನ್ಮಾತೆಯೆಸೆವ[೧] ಕುಸುಮಾವಳಿಯಿಂ
ದೋಱು ಮನೋಹರಮಪ್ಪ ವಿ
[೨]ನೂತನಮಾಳಾ[೨]ವಿಳಾಸಮಂ ಮಿಗೆ ಸಮೆದಳ್ ‡೭೬

ಇಂತು ಪುಷ್ಪಾವಳಿಯಿಂ ಪಲವುಂ ತೆಱದ ಬಂಧಮಂ ಸಮೆದು ಬಳಲ್ದು ಸ್ವೇದಭರಿತಗಂಡಸ್ಥಳೆಯುಂ ಶಿಥಿಳೀಕೃತಕರತಳೆಯುಮಾಗಿರ್ದ ಪಾರ್ವತಿಯಂ ಕಂಡು ಸಹಚರಿಯರ್ ಬಂದು ಸೇವಂತಿಗೆಯ ಪನಿನೀರಂ ಮಜ್ಜನಕ್ಕೆಱೆದು ಪರಾಗದಂಗರಾಗಮನಮರ್ಚಿ ತಾವರೆಯ ನೂಲ ದುಕೂಲಮನುಡಿಸಿ ಕದಂಬ-ಕುಸುಮಮಂ ಸಿರಿಮುಡಿಯೊಳ್ ತುಱುಂಬಿ ಕೇತಕಿಯ [೩]ಸಣ್ಣನಪ್ಪ[೩] ನುಣ್ಣಿಸಳ ಕರ್ಣಪತ್ರಮನಿಕ್ಕಿ ಮಕರಂದದ ತಿಲಕಮನಿಟ್ಟು ಪುಷ್ಪಮಂಜರಿಯ ಕರ್ಣಾವ-ತಂಸಮನಳವಡಿಸಿ ಮಲ್ಲಿಗೆಯ ನನೆಯ ಏಕಾವಳಿಯುಂ ಮುತ್ತಿನ ಹಾರದೊಳೊಡ-ಗೂಡಿ ಮೊಲ್ಲೆಯ ಮುಗುಳ ಕಂಕಣಮಂ ಕೆಯ್ಗೊಳಿಸಿ ನಳಿನಕರ್ಣಿಕಾಮುದ್ರಿಕೆಗಳಂ ಭದ್ರಾಂಗುಲಿಗೆ ಹತ್ತಿಸಾರ್ಚಿ ನವಲತೆಯನಂಕುರದಿಂದಲಂಕರಿಸುವಂತೆ ಕಲ್ಪತರುವಂ ಕುಸುಮದಿಂದೆ ಮುಸುಂಕುವಂತೆ ಪಿನಾಕಿಯ ಮನೋರಥಮಂ ಪುಣ್ಯಫಲದಿಂ [೪]ಪಸದನಂಗೊಳ್ವಂತೆ[೪] ಕುಸುಮಬಾಣಮಂ ಪೊಸಗಂಪಿಂ ಕೂರ್ಪಿಡುವಂತೆ ಸೌಂದರ್ಯಮಂ ಮೋಹದಿಂದೊಲ್ವಂತೆ ಸೌಕುಮಾರ್ಯನಿಧಿಯಪ್ಪ ಶರ್ವಾಣಿಗೆ ಶೃಂಗಾರಂಗೆಯ್ದನುರಾಗದಿಂ ಕೆಯ್ಗೊಟ್ಟ ಕೆಳದಿಯರ ಕೆಯ್ಯೊಳ್ ಮೆಯ್ಯಂ ಮಲಂಗಿಸಿ ಮೆಲ್ಲಮೆಲ್ಲನಡಿಯಿಡುವಾಗಳ್ ಹೊನ್ನ ಹಾವುಗೆಯ ರನ್ನವೆಳಗಂ ಕೀಳ್ಮಾಡಿ ನಕ್ಷತ್ರಮಾಲೆಯುಂತೆ ನುಣ್ಪೆಳಗನೀಂಬ ಪದನಖಪ್ರಭೆ ಪೂವಲಿಗೆದಱೆ ಮಂಜೀರದ ಮಧುರಧ್ವನಿಗೆ ಮಂಡಳಿಸುವ ಮರಾಳಕುಳಮಂ ಜಱೆವಂತೆ ಪಳಂಚುವ ಪಾದಮುದ್ರಿಕೆ ನುಣ್ದನಿಯನುಗುಳೆ ಹರನ ಚಿತ್ತಮಂ ಗಿರಿಜೆ ನಿನ್ನ [೫]ಚರಣದೊಳ್[೫] ಕೆಡೆಪುವೆನೆಂದು ಭಾಷೆಗುಡುವಂತೆ ಸೂಸುವ ಸುನಾದದಿಂ ನೇವುರಮುಲಿಯೆ ಕುಸುಮಕುಳವಿಳಸಿತಕಾಂಚೀದಾಮದ ಭಾರಮಂ ತಳೆದ ನಿತಂಬಬಿಂಬಮಂ ಸುತ್ತಿ ಮುತ್ತಿದ ದುಕೂಲದ ಧವಳದ್ಯುತಿ ದೆಸೆದೆಸೆಗೆ ಪಸರಿಸೆ ಲಾವಣ್ಯರಸಂ ತೀವಿ ನೆಲೆಗಾಣಲ್ ಬಾರದ ಗಂಭೀರನಾಭೀಸರೋವರದೊಳಗೊಗೆದ ಮೃಣಾಳನಾಳದಂತಿರ್ದ ಬಾಸೆಯುಂ ಮಱೆಗೊಂಡ ಬಡನಡುವಡಿಗಡಿಗೆ ಬಳುಂಕು-ತ್ತಿರೆ ವಿಭವವಾದುಭಯಕಕ್ಷಮನಿಂಬುಗೊಂಡು ತುಂಬಿ ಬಳೆದು ಮುತ್ತಿದ

೧–೧ ಜಗಖ್ಯಾತೆಯೊಸೆದು (ಮ ಬ ಅ ಯ). ೨–೨ ನೂತನಕಮಲಾ (ಅ). ೩–೩ ಸುಣ್ಣನಪ್ಪ (ಕಾ ದಾ ಯ). ೪–೪ ಪಸರಂಗೊಳ್ವಂತೆ (ಅ); ಪಸದನಂಗೊಳಿಸುವಂತೆ (ಕಾ ಕ). ೫–೫ ಚಿತ್ತಾಂತಃಕರಣದೊಳ್ (ಕ).

ಮೇಲುದನೊತ್ತರಿಸಿ ಹೊತ್ತಿತ್ತಿ ಕೆಲಕ್ಕೆ ನೂಂಕುವ ಪೆರ್ಮೊಲೆಗಳ್ಗೆ ಹಾರಕಾಂತಿ ಹೊಸಮೇಲುದಂ ಪೂರಯ್ಸೆ ಕಲ್ಪತರುವಿನ ಶಾಖೆಗಳಂತೆ ಕೋಮಳದಿಂ ನೀಳ್ದು ನಳನಳಿಸಿ ಬೆಳೆಬೆಳೆದ ಬಾಹುಲತಾಪ್ರಸೂನವಂ ಪೋಲ್ವಸೆಳ್ಗುರ್ಗಳ್ ಬಳ್ಳಿವೆಳಗಂ ಕಱೆಯೆ ಕಬರೀಭರದ ಗುರುತ್ವಮನಾಂತ ಕಂಬುಗ್ರೀವಮಿಂಬುವಡೆಯೆ ಕಪೋಳ-ಬಿಂಬದೊಳ್ ಪ್ರತಿಬಿಂಬಿಸುವ ಕರ್ಣಾವತಂಸಪ್ರಸವಮಂಜರಿಗಳ್ ಕರ್ಣಪಾಲಿಕೆ-ಯೊಳಾಂದೋಳಮನಾಡೆ ನೆಱೆ ತೀವಿ ತೆರೆ ಮಸಗುವ ಮುಖರಸದೊಡನೆ ಕಡೆಗಣ್ಣ ಕಾಂತಿ ಕೋಡಿವರಿಯೆ ಕರ್ಪೂರದ ಮೂಕುತಿಗೆ ಕಂಪನಿರ್ಮಾಡಿಸುವ ನಿಡುಸುಯ್ಯ ಪರಿಮಳಕ್ಕೆ ಪರಿಮರಿಯಾಡುವ ಮಧುಕರನಿಕರಂ ಮಕರಂದತಿಲಕದ ತನಿಗಂಪಿಂ-ಗೆಳಸಿ ಲಲಾಟಪಟ್ಟದೊಳಂಕುರಿಸಿ ನಲಿವ ನೀಲಾಳಕಮೆಂಬ ಮಱಿದುಂಬಿಗಳೊಳ್ ಕಾಳೆಗಂದೆಗೆಯೆ ೧ತಾರಕಿತ೧ಮಾದ ನೀರದಮಂ ಮುಸುಂಕಿದ ತಾರೇಶಮರೀಚಿ-ಗಳಂತೆ ಕದಂಬಕುಸುಮಗರ್ಭೀಕೃತಕಬರೀಭರಸಂಯುತಶಿರೋಭಾಗಮಂ ಬಾಸಣಿಸಿದ ನನೆಯ ಸೂಸಕದ ಕೊನೆಗಳಲುಗೆ ಶಿವನ ಮನೋರಥಂ ಮೂರ್ತಿಗೊಂಡಂತೆ ಹರನ ಮೆಚ್ಚುಹರೆಯಂಬಡೆದಂತೆ ಶಂಕರನ ಬಿಂಕಂ ಬಿನ್ನಣವಾದಂತೆ ಚಂದ್ರಕಳೆ ಕಣ್ದೆಱೆದಂತೆ ನೆಱೆ ಮೆಱೆದು ನಡೆತಂದು ನಗತನೂಜೆ ಚಂದ್ರಧರನ ಮುಂದೆ ನಿಂದು,

ಇರುಳುಂ ಪಗಲುಂ ಕಾವಂ
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ
ಗಿರಿಶಂಗೆ ತೋರ್ಪ ತೆಱದಿಂ
ನೆರಪಿದಳಭವಾಂಘ್ರಿಗಳ್ಗೆ ಪುಷ್ಪಾಂಜಲಿಯಂ ೭೭

ಅಂತುಮಲ್ಲದೆ,

ಸಂದಣಿಸುವ ೨ನವನವಪುಳ
ಕಂ೨ ದಟ್ಟಯ್ಸುತ್ತೆ ನೆಗೆಯೆ ಶಶಿವೌಳಿಗೆ ಪೂ
ರ್ಣೇಂದುಮುಖಿ ಪೊಡೆಮಡುತ್ತಾ
ನಂದಾಶ್ರುಗಳಿಂದೆ ಚರಣತಳಮಂ ತೊಳೆದಳ್ ೭೮

೧-೧ ತಾರಾಂಕಿತ (ಬೆ ಯು); ಕಳಂಕಿತ (ಬ). ೨-೨ ತನುಪುಳಕಂ । ತಾಂ (ಕಾ ಕ); ಹೊಸ ಹೊಸಪುಳ । ಕಂ (ಬ ಬೆ ದಾ ಸಿ).

ಪದೆಪಿಂ ಪೊಡೆಮಡುವಾಗಳ್
ಮೃದುತರಪದದುಪರಿಭಾಗಮಂ ಚೆಲ್ವಿಂ ಪ
ತ್ತಿದ ಮಕರಂದದ ತಿಳಕಂ
ಸವಮಳಚಂದನವಿಳಾಸಮೆನಿಸಿತ್ತಾಗಳ್ ೨೯

ಸದ್ಗಂಭೀರಾವೃತ ವಿಳ
ಸದ್ಗಮಕದೆ ನಿಂದು ಶಿವನ ಮೆಲ್ಲಡಿಗಳಿಗು
ದ್ಯದ್ಗುಣಭೂಷಣೆ ಸುರಿದಳ್
[೧]ಗದ್ಗದಿಸುತೆ ಪುಳಕಿಸುತ್ತೆ[೧] ಸರಸಿಜದಲರಂ ೩೦

ಊರುದ್ವಯದೊಳ್ ಕರದೊಳ್
ಚಾರುಭುಜಾಗ್ರಂಗಳೊಳ್ [೨]ಸುಬಾಹುಗಳೊಳ್[೨] ಪು
ಣ್ಯೋರಃಸ್ಥಳದೊಳ್ ಗಿರಿಸುತೆ
ಹಾರಯ್ಸುತೆ ಕುಸುಮಮಾಲೆಯುಂ ಪಸರಿಸಿದಳ್ ೩೧

ಮತ್ತಮದಲ್ಲದೆಯುಂ,

ತವತವಗೆ ಮುಂಚುವಿಂದ್ರಿಯ
ನಿವಹಮನೋವುತ್ತೆ ಗಿರಿಜೆ ಹರಕಂಧರದೊಳ್
ನವಕುಸುಮಮಾಲೆಯುಂ ಸಾ
ರ್ಚುವ ನೆವದಿಂ ಸೋಂಕಿ ಸೋಂಕಿ ಪುಳಕಿಸು[೩]ತಿರ್ದಳ್[೩] ೩೨

ಅಂತಿರ್ದು,

ಭರದಿಂದಂ ನವಕುಸುಮಾ
ಭರಣಂಗಳನಭವನಂಗದೊಳ್ ಸಿಂಗರಿಸು
ತ್ತರಳುತ್ತುರ್ಬುತೆ ಕೊರ್ಬುತೆ
ಗಿರಿಸುತೆ ನಱುಸುಯ್ಯ ಧೂಪಮಂ ಪದೆದಿತ್ತಳ್ ೩೩

೧-೧ ಗದ್ಗದಿಸುವ ಪುಳಕದಿಂದೆ (ಕ). ೨-೨ ಶಿರಾಗ್ರದೊಳುಂ (ಅ). ೩-೩ ತಿರ್ದಳ್ (ಶಾ ಸೆ ಬೆ).

ಅಲರ್ದೋಂಗಲ ಪೊಸದುಡಿಗೆಯು
[೧]ನಲಂಪಿನಿಂ[೧] ಶಂಕರಂಗೆ ಕೆಯ್ಗೊಳಿಸುತ್ತ
ಗ್ಗಲಿಸುತ್ತೆತ್ತಿದಳಂಬಿಕೆ
ನಲವಿಂ ನಗೆಮೊಗದ ಕಾಂತಿಯೆಸೆವಾರತಿಯಂ ೮೪

ಉತ್ತಮಗುಣಗಣಭೂಷಣೆ
ಚಿತ್ತವಿಕಾಸಮನೆ ಪಡೆದು ಸಾತ್ತ್ವಿಕಭಾವೋ
ನ್ಮತ್ತೆ ನಗಪುತ್ರಿ ಮುದದಿಂ
ದಿತ್ತಳ್ ಶರ್ವಂಗೆ ಭಕ್ತಿಯಾರೋಗಣೆಯುಂ ೮೫

ಇಂತು ಪಾರ್ವತಿ ಪಲವುಂ ಭೋಗಂಗಳಂ ರಾಗದಿಂ ರಾಜಪೌಳಿಗೊಲ್ದು ಪೂಜಿಸಿ ನೆವದಿಂ ನಿವೇದಿಸಿ ಸಂಪದಮನೋಲಗಿಪ [೨]ಸಿಂಗರ[೨]ದಂತೆ ಧರ್ಮಮಂ ಬಳೆಯಿಸುವ ಸಂಪದದಂತೆ ಪುಣ್ಯಮಂ ಸೇವಿಪ [೩]ಧರ್ಮ[೩]ದಂತೆ ಭಕ್ತಿಯಂ [೪]ಬಯಸುವ[೪] ಪುಣ್ಯದಂತೆ ಶಿವಜ್ಞಾನಮನೆಳಸುವ ಭಕ್ತಿಯಂತೆ ಮುಕ್ತಿಯಂ ನಿಶ್ಚಯಿಪ ಶಿವಜ್ಞಾನದಂತೆ [೫]ಶಿವಸಂಗಮಂ[೫] ಬಯಸಿ ಮನ್ಮಥಮನೋರಥದುರ್ಲಭ ವಲ್ಲಭನಂ ನೋಡುವಾಗಳ್,

ಚಂಪಕ

ಪೊಸಜಿಡೆಯೊಳ್ ತೊಡಂಕಿ ನೊಸಲೊಳ್ ನಡೆಪಾಡಿ ಕಪೋಲಭಾಗದೊಳ್
ಪಸರಿಸಿ ಲೋಚನಂಗಳೊಳಮರ್ಚಿ ತದಾಸ್ಯದೊಳೊಂದಿ ಕಂಠದೊಳ್
ಮಿಸುಗಿ ಭುಜಾಗ್ರದೊಳ್ ತೊಳಗಿ ವಕ್ಷದೊಳಾಳ್ದು ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿಳ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್ ೮೬

ಇಂತು ಶರ್ವನ ಸರ್ವಾಂಗದೊಳ್ ನೋಟಂ ಮುಸುಂಕಿ ನೋಡಿ,

ಬೆಮರ್ವಳ್ ಬೆರ್ಚುವಳುರ್ಬುವ
ಳಮರ್ವಳ್ ಪೆಜಿಸಾರ್ವಳಂಜಿ ನಿಲ್ವಳ್ ಸೋಂಕಲ್
ನಿಮಿರ್ವಳ್ ನೆನೆವಳ್ ಮುನಿವಳ್
ಸಮಸಲ್ವಳ್ ಗಿರಿಜೆ ಸೆಡೆದು ಸುಯ್ವಳ್ ಕಾಯ್ವಳ್ ೮೭

೧-೧ ನಲವಿಂದಂ (ಬ ಅ). ೨-೨ ಶೃಂಗಾರ (ಶಾ). ೩-೩ ಸತ್ಕರ್ಮ (ಶಾ ಬೆ ಅ ಬ). ೪-೪ ಬಳೆಯಿಪ (ಶಾ ಕ ಬ ಬೆ). ೫-೫ ಶಿವನಂಗಸಂಗಮಂ (ಅ).

ಚಾರುತರಕಾಂತಿಮಯಸುಕು
ಮಾರಾವಯವಂಗಳಂ [೧]ನಿರೀಕ್ಷಿಸಿ[೧] ನಲಿವಳ್
ತಾರಾಚಳನಾಥನ ಘನ
ವೈರಾಗ್ಯಕ್ಕಂಜಿ ನಡುಗಿ ಸಿಡಿಮಿಡಿಗೊಳ್ವಳ್ ೫೮

ಅಂತುಮಲ್ಲದೆ,

ಮಹಾಸ್ರಗ್ಧರೆ

ಶಿವನಂ ನೋಡುತ್ತೆ [೨]ಮೇನಾಸುತೆ ಮದನ[೨]ಸುಖಾಸಕ್ತಿಯಿಂ
ಸುತ್ತುವಳ್ ಸೋಂ
ಕುವಳಾನಂದಾಶ್ರುವಂ ಸೂಸುವಳನುಮಿಸುವಳ್ ತತ್ತಪಕ್ಕಂಜಿ ಹಿಮ್ಮೆ
ಟ್ಟುವಳಂತಂತಳ್ಕುವಳ್ ಬಳ್ಕುವಳದಟಳಿವಳ್ ಕೋಡುವಳ್ ಬಾಡುವಳ್ ಕುಂ
ದುವಳಾರ್ತಂಗೆಟ್ಟು ನಿಲ್ವಳ್ ನೆನೆದುರವಣಿಪಳ್ ಮುಂದಳಲ್ವಳ್ ಬಳಲ್ವಳ್ ೫೯

ಮತ್ತಮಾಗಳ್,

ನಗುವಳ್ ನಗೆಯೊಳ್ ಕೌತುಕ
ಮೊಗೆಯೆ ನಿರೀಕ್ಷಿಸುವಳೀಕ್ಷಣದೊಳಗೆ ದೈನ್ಯಂ
ಮಿಗೆ ಭಾವಿಸುವಳ್ ಭಾವದೊ
ಳಗೆ ದೇವನ [೩]ಚೆಲ್ವನಬಲೆ ಸಲೆ ನಿಲೆ[೩] ನೆನೆವಳ್ ೬೦

ಇಂತು ನೋಳ್ಪರ ಕಣ್ಗೆ ಶೀತಳಮಯ [೪]ಸುಧಾರೋಚಿಗಳಂ[೪] ಬೀಱುವ ಚಂದ್ರಮನಂತೆ ಮುಟ್ಟುವರ ಮೆಯ್ಗೆ ತೀವ್ರಪ್ರತಾಪಮಂ ಕುಡುವ ಸೂರ್ಯನಂತೆ ಪೊಗಳ್ವರ ನಾಲಗೆಗಮೃತದಂತೆ ಕೇಳ್ವರ ಕಿವಿಗೆ ಮಧುರವಾಣಿಯಂತೆ ನೆನೆವರ ಮನಕ್ಕೆ ನಿರುಪಾಧಿಕಜ್ಯೋತಿಯಂತೊಪ್ಪುತಿರ್ದ ರುದ್ರನ ಮನೋಹರಮೂರ್ತಿಯಂ ನೋಡಿ ನೋಡಿ ತಣಿಯದೆ ಸೋಂಕಿ ಸೋಂಕಿ ಸವೆಯದೆ ಪೊಗಳ್ದು, ಪೊಗಳ್ದು ತೀಱದೆ ನೆನೆದು ನೆನೆದು ನೆಱೆಯದೆ ನಡೆತಂದು ಪಾರ್ವತೀದೇವಿ ಪೊಚ್ಚಪೊಸಪೂಗಳ ನಚ್ಚರಿಮಿಗೆ ತಂದುತಂದಂದಂದಿಗೆ ಚಂದ್ರಧರನಂ ಕಳಾನಿಧಿಯಂ ವಿಳಾಸ-ದಿಂದಾರ್ತದಿಂ ಹತ್ತೆಸಾರ್ದು ಮತ್ತೆ ಮತ್ತೆ ಮಾಣದೆ,

---

೧-೧ ಪಂಕ್ತಿಸಿ (ಅ ಬ). ೨-೨ ಮೇನಾಕುವಂ ಘನ (ಆ ಓ). ೩-೩ ಚೆಲ್ವನೀಕ್ಷಿಸುತ್ತುಂ (ಕ). ೪-೪ ಸುಧಾರಸಂಗಳಂ (ಕ).

ಹರನಂ ಶಿವನಂ ಮೃಗಧರ
ಧರನಂ ಸುಸ್ನೇಹವುಂಡರೆ ನವನವಕುಸುಮೋ
ತ್ಕರದಿಂದೆ ನಚ್ಚಿ ಮಚ್ಚಿಯೆ
ಗಿರಿಜಾವಧುವರ್ಚಿಸುತ್ತು ಮಿರ್ಪಿನಮತ್ತಲ್ ೯೧

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೯೨

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದ
ಮಧುಕರಾಯಮಾನಸತ್ಕವೀಶ್ವರ ಹಂಪೆಯ ಹರಿಹರದೇವವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ವಿರೂಪಾಕ್ಷದರ್ಶನ ಪುಷ್ಪಾಪಚಯ ಪೂಜಾವರ್ಣನಂ ಪಂಚಮಾಶ್ವಾಸಂ

ಷಷ್ಠಾಶ್ವಾಸಂ

ತಾರಕಾಸುರಯುದ್ಧವರ್ಣನಂ

ಶ್ರೀಪತಿವಾಕ್ಪತಿಪೌಲೋ
ಮಾಪತಿಪೂಜಿತಪದದ್ವಯಂ ಸದ್ಭಕ್ತಿ
ಶ್ರೀಪದವಂ ಕುಡುಗೆಮಗೆ ವಿ
ರೂಪಾಕ್ಷಂ ಭಾಸುರಂ ಭವಾನೀಭರ್ತಂ ೧

ಸಕಳೋರಗ[೧]ಸುರನರ[೧]ಮ
ಸ್ತಕಶೂಲನ[೨]ನಮಿತ[೨]ಲೋಕ[೩]ಪಾಲ[೩]ನ ತೀವ್ರ
ಪ್ರಕಟಯಶೋಲೋಲನ[೪] ತಾ
ರಕಾಸುರನ[೪] ಕೊರ್ವು ಪರ್ವಿತುರ್ವೀ[೫]ತಳಮಂ[೫] ೨

ಅಂತುಮಲ್ಲದೆ,

ಮಹಾಸ್ರಗ್ಧರೆ

ಉರಗಾನೀಕಾಬ್ಧಿ ಮರ್ತ್ಯವ್ರಜಗಹನ ಸುರವ್ರಾತಧಾರಾಧರ[೬]ಪ್ರ[೬]
ಸ್ಫುರಿತೌರ್ವಂ ಪಾವಕಂ ಮಾರುತನೆನಿಸಿ ಕರಂ ಶೋಷಿಸುತ್ತಾವಗಂ ಸು
ಟ್ಟುರಿಪುತ್ತೈಟ್ಟುತುಂ ಪೆರ್ಚಿದನಸುರನವಂ ತಾರಕಂ ತೀವ್ರ ಕೋಪಾ
ಕರರೂಪಂ ಪ್ರಾಯು[೭]ಕಾಯಂ ಪ್ರಬಳ[೭]ಬಳ[೮]ಯುತಂ ಚಂಡ[೮]ಶೀಲಂ ವಿಶಾಲಂ ೩

೧-೧ ನರಸುರ (ದಾ ಗೊ). ೨-೨ ನಿಖಿಳ(ಶಾ ಯು ಅ ಕ). ೩-೩ ಕಾಲ (ಶಾ ಯು ಬೆ ಅ ದಾ ಕ ಗೊ). ೪-೪ ತಾ । ರಕದೈತ್ಯನ (ಬೆ ಯು ಅ ಸೆ); ತಾ । ರಕದನುಜನ (ಶಾ ಕ ಡ). ೫-೫ ತಳದೊಳ್ (ಬ ಅ ದಾ). ೬-೬ ಶ್ಯಾ (ಕ ಶಾ). ೭-೭ ಕಾಯಪ್ರಬಳ (ಬ ಬೆ ಮ ಯು ದಾ). ೮-೮ ಯುತೋದ್ದಂಡ (ಮ ಬ ಬೆ ಕ ಅ ದಾ).

ಮತ್ತೇಭ

ಅರರೇ ಆತ್ಮಬಲಾಕ್ಷಿಪಥ್ಯ[೧]ವಿಮಲಶ್ರೀ[೧]ತಾರಕಂ ತಾರಕಂ
ಪರಭೂಪಾಲತಮಂಧಭೇದನಕರೋದ್ಯತ್ತಾರಕಂ ತಾರಕಂ
ಸುರಸಂಘಾತಪತಾಕಿನೀಪ್ರಬಳವಾರ್ಧ್ಯುತ್ತಾರಕಂ ತಾರಕಂ
ನರನಾಗಾಮರಲೋಕಶೋಕಸರಣೀವಿಸ್ತಾರಕಂ ತಾರಕಂ ೪

ಎಂಬ ಗಂಭೀರಪ್ರತಾಪಮಂ ತಳೆದು,

ಚಂಪಕ

ಧರಣಿಯುನೊಕ್ಕಲಿಕ್ಕಿ ದಿಗಧೀಶರ ಗಂಟಲನೊತ್ತಿ ಮೆಟ್ಟಿ ಭೀ
ಕರಫಣಿಲೋಕಮಂ ಹಿಳಿದು ನಾಕಮನೋಡಿಸಿ ನಿಂದ ವೀರರಂ
ಧುರದೊಳೆ ತತ್ತಱಂದಱಿದು ತಳ್ಗಿಸುತಪ್ರತಿಮಪ್ರತಾಪಭಂ
ಗುರಭುವನತ್ರಯಂ ನೆಗಳ್ದನಕ್ರಮಕಾರಿ ಜಿತಾರಿ ತಾರಕಂ ೫

ಇಂತು ಜಗತ್ತ್ರಯುಮಂ ನಿಜಪ್ರತಾಪದಿಂ ಕುಕ್ಕುಳಂಗುದಿಸುವ ವಿಕ್ರಮಶೀಲನಪ್ಪ ತಾರಾಕಾಸುರನುರವಣೆಯುಂ ಸೈರಿಸಲಾಱದೆ ನಾಗರ್ಕಳುಂ ನರರುಂ ನಿರ್ಜರರುಂ ಕಿನ್ನರಸ್ತೋಮಮುಂ ಕಿಂಪುರುಷವ್ರಜಮುಂ ನೆರೆದು ಪರಿತಂದು ಮೇರುವಿನ ತಪ್ಪಲೊಳಿರ್ಪ ನಾರಾಯಣವಾರಿಜಪುತ್ರಪುರಂಧರರ ಸಭಾನಿಳಯದ್ವಾರವಳಯದ ಮುಂದೆ ಮಂದೈಸಿ ಪಱದವಳಿದು ಮದವುಡುಗಿ ಮೆದೆಗೆಡೆದು ಮುಂದುಗೆಟ್ಟು ಸಂದಣಿಸಿ ನಿಂದು,

ಚಂಪಕ

[೨]ನರತತಿ[೨] ನೊಂದಳಲ್ದು ಮೊಱೆಯೋ ಮೊಱೆಯೋ [೩]ನೆರೆವಲ್ಲಿಗಲ್ಲಿಗೊ[೩]
ತ್ತರಿಸಿ ನಿಳಿಂಪವೀಥಿಯುವಿಧಾಯುವಿಧಾ ಉರಗಪ್ರತಾನಮಾ
ತುರಿಸಿ ಬಿಗುರ್ತು ನಿಂದು [೪]ಶಿವಧೋ ಶಿವಧೋ[೪] ಎನುತುಂ ಸುರುಳ್ದು ಸೂ
ಗುರಿಸಿ ತೆರಳ್ದು ತಲ್ಲಣಿಸಿ ಮಲ್ಲಳಿಗೊಂಡುದು ಮೇರುಭಾಗದೊಳ್ ೬

೧–೧ ವಿಲಸಚ್ಛ್ರೀ (ಕಾ ಬೆ ದಾ ಯು). ೨–೨ ಸುರತತಿ (ಅ). ೩–೩ ನೆರದಲ್ಲಿಗಲ್ಲಿಯೊ (ಕಾ); ಎನುತಲ್ಲಿಗಲ್ಲಿಗೊ (ಅ). ೪–೪ ಶಿವಧಾ ಶಿವಧಾ (ಮ ಬ ಕ ಬೆ).

ಮೊಱೆಯಿಡೆ ಕೇಳ್ದು ಚಕ್ರಧರನುಂ ಜಳಜೋದ್ಭವನುಂ ಬಲಾರಿಯುಂ
ಮಱುಗಿ [೧]ಸುರುಳ್ದಳಲ್ದು[೧] ಕರೆಯೆಲ್ಲಿಯುದೀ ಘನ[೨]ಶೋಕವಾವನಿಂ[೨]
ತುಱುಗಿದುದಾವನಿಂದೊವವಿತಾವನಿನುರ್ಚಿದುದಾವನಿಂದೆ ಯು
ಳ್ಕಱಿದುದಿದಾವ[೩]ನಿಂದಲರ್ದು[೩]ದಾವನಿನೊತ್ತರಿಸಿತ್ತು ಕೌತುಕಂ ೭

ಎಂದೆಂದು ನುಡಿಯುತಿರ್ಪಿನ
ಮಂದೆಯ್ತಂದೊಟ್ಟಯೊಱಲಿ ಮೆದೆಗೆಡೆಯುತ್ತುಂ
ಸಂದಣಿಸುತ್ತುರವಣಿಸು
ತ್ತುಂ ದಡವಡಿಸುತ್ತೆ ಸುರನರೋರಗನಿಕರಂ ೮

ಸುರಿತರ್ಪ ಕಣ್ಣನೀರಿಂ
[೪]ಕರಾಗ್ರದೊಳ್ ನೆಗೆದು[೪] ತೋರ್ಪ ಪುಲ್ಲಿಂ ಮುಖದೊಳ್
ತರದಿಂ ಪೊಣ್ಮುವ ಮೊಱೆಯಿಂ
[೫]ನೆರೆದೊಱಲುತ್ತುಳುರ್ವ[೫] ತಾಪದಿಂದಖಿಳಜನಂ ೯

ಅಂತು ಬಂದಳಲ್ದು ನಿಂದು,

ಉತ್ಪಲ

ಕಾವುದು ವಿಷ್ಣು ಕಾವುದರವಿಂದತನೂಭವ ಕಾವುದಿಂದ್ರ ಸದ್
ಭಾವದೊಳೆಮ್ಮನೀಕ್ಷಿಪುದು ತಾರಕನಿಂದುಱೆ ನೊಂದು ಶೋಕದಿಂ
ತೀವಿದೆವಾವುದಿನ್ನೆಮಗೆ ಜೀವನವಾವುದು ನಿಲ್ವ ತಾಣವಿ
ನ್ನಾವುದು ರಕ್ಷಣಾರ್ಥಕರವಾವುದು ಸತ್ಪಥವಾವುದಾಶ್ರಯಂ ೧೦

ಅಂತುಮಲ್ಲದೆ,

ಚಂಪಕ

ಧರೆಗೆಸೆದತ್ತು ತಾರಕನ ದುರ್ಗತಿ ತಾರಕನೇಳ್ಗೆ ತಾರಕಾ
ಸುರನ ಪೊಡರ್ಪು ತಾರಕನ ಮತ್ತತೆ ತಾರಕನಾಜ್ಞೆ ತಾರಕಾ
ಸುರನ ತೆರಳ್ಕೆ ತಾರಕನ ತೀವ್ರತೆ ತಾರಕನುರ್ಕು ತಾರಕಾ
ಸುರನ ನಿಮಿರ್ಕೆ ತಾರಕನ ಮೂರ್ಖತೆ [೬]ತಾರಕನುತ್ಪಥ[೬]ಕ್ರಮಂ ೧೧

೧–೧ ಸುರುಳ್ದುರುಳ್ದು (ಕಾ ಕ); ಮರಳ್ದಳಲ್ದು (ಅ). ೨–೨ ಘೋಷವಾವನಿಂ (ಮ ಬ ಕೊ ಗೊ ಕ ಡ ಗ ಓ). ೩–೩ ನಿಂದಳಿದು (ಕಾ ಕ ಅ). ೪–೪ ಕರದಗ್ರದೊಳೊಪ್ಪಿ (ಅ). ೫–೫ ನೆರೆದೊಳಗಱತುಳಿವ (ಅ). ೬–೬ ತಾರಕನುನ್ನತ (ಅ).

ತಾರಕನಂ ಗುರುತರಭೂ
ಭಾರಕನಂ ಸಕಳದುರಿತಪೂರಿತಪಾಪ
ಪ್ರೇರಕನಂ ದುರ್ಗುಣವಿ
ಸ್ತಾರಕನಂ [೧]ಬಾರಿ[೧]ಪನ್ನರಾರ್ ಧಾರಿಣಿಯೊಳ್ ೧೨

ಎಂದು ಬಿನ್ನವಿಸಿದ ಪನ್ನಗನರಸುರರ ಸಂತಾಪಮನೆಂತಾನುಂ ಕೇಳಲಾಱದೆ ಸಂತೈಸಿ ಮಂತ್ರಾಳೋಚನೆಯುಂ ಮುಂದುಗೊಂಡು ಹರ್ಯಜಪುರಂಧರರ್ ಪರಿಚಿಂತಾಸ್ಥಾನರಾಗಿ,

ಚಂಪಕ

ಪುರಹರನಿರ್ದಪಂ ನಿರುಪಮಾನತಪೋಮಯನಾಗಿ ಲೋಕಮೊ
ತ್ತರಿಸಿ ತೆರಳ್ದು ಪುಯ್ಯಲಿಡುತಿರ್ದುದು ಸೈರಿಸಬಾರದಾತ್ತ ಸಂ
ಗರವಿಜಯೋರ್ಜಿತಪ್ರಮುಖರಿಲ್ಲ ವಿಚಾರಿಸೆ ವೀರತಾರಕಾ
ಸುರನತುಳಪ್ರತಾಪನಿಧಿ ಕಾಳೆಗಮಾ ಪದದೊಳ್ ನಿರರ್ಥಕಂ ೧೩

ಸುರಗುರುವಂ ಕಳಿಪುವುದಾ
ದರದಿಂ ಸಂಧಾನಮಂ ನಿಮಿರ್ಚುವುದವನಿ
ರ್ಪಿರವಂ ನೋಡುವುದಲ್ಲದೊ
ಡರವರಿಸದೆ ಕಾದುವುದು [೨]ದಿಟಕ್ಕಿದು[೨] ಮಂತ್ರಂ ೧೪

ಎಂದು ನಾರಾಯಣನೀರಜಭವನಾಕಪತಿಗಳೇಕಚಿತ್ತರಾಗಿ,

ಶೌರ್ಯಮದೀ ಪೊಳ್ತಲ್ಲಂ
[೩]ವೀರ್ಯಾಧಿಪ[೩]ನೆನಿಪ ತಾರಕನ ಸಂಧಾನಂ
ಕಾರ್ಯಮಿದೆನುತುಂ ತ್ರಿದಶಾ
ಚಾರ್ಯನ ಮುಖಮಂ ನಿರೀಕ್ಷಿಸುತ್ತಿಂತೆಂದರ್ ೧೫

ಸಕಳಕಳಾಪೂರಿತಮನ
ನಕಳಂಕಚರಿತ್ರನಮರಗುರು ನೀಂ ಘನಸಾ
ತ್ತ್ವಿಕನದುಕಾರಣದಿಂ ತಾ
ರಕನಲ್ಲಿಗೆ ಪೋಪುದೊಲ್ದು ಪಾಳ್ಪುದು ನಯಮಂ ೧೬

೧–೧ ಭೇದಿ (ಅ) ೨–೨ ದಿಟಕ್ಕಿದೆ (ಅ). ೩–೩ ವೀರ್ಯಾಧಿಕ (ಮಾ).

ವಿನಯಮನಾಡುವುದಾಳೋ
ಜನೆಗೆಯ್ವುದು ಚಿತ್ತದೊಳಗನಾರಯ್ವುದು ನೀ
ನನುಕೂಲನಂತೆ ಪೊರ್ದುವು
ದನವದ್ಯಂ ಸಾಮದಿಂ ಮರಳ್ಚುವುದವನಂ ೧೭

ಅದು ಸಲ್ಲದೊಡಾತನ ನೇ
ಹದ ಗೋತ್ರಸುಮಿತ್ರರಾಜಪುತ್ರಸಚಿವಸಂ
ಘದ ಕಿವಿಗೇನಾನುಮನೀ
ವುದನಾಡುತೆ ಭೇದದಿಂ [೧]ಕಳಲ್ಚು[೧]ವುದವನಂ ೧೮

ಆ ನಯ[೨]ವಾಗ[೨]ದೊಡಸುರಂ
ಗಾನತವಚನಾಗಿ ಬಲ್ಪುಗುಂದದೆ ಬಯಸಿ
ತ್ತೀನೆಂದುಮನನುಸರಿಸುವ
ದಾನದೊಳಂ ಸಂತವಿಡುವುದಾತನ ಮನಮಂ ೧೯

ಈ ಪೇಳ್ದಂದಮನೊಲ್ಲದೆ
ಚಾಪಳವೃತ್ತಿಯೊಳೆ ಮೀಱಿ ನುಡಿದೊಡೆ ಸಮರ
ವ್ಯಾಪಾರದಲ್ಲಿ ಕಾಣ್ಬಂ
ಕೋಪಾವಿಷ್ಟಪ್ರಚಂಡದಂಡಕ್ರಮಮಂ ೨೦

ಎಂದು ರಾಜೀವಸಂಭವಾದಿಗಳೋಜೆಯುಂ ರಾಜನೀತಿಯಂ ಕಲ್ಪಿಸಿ ಕಳಪೆ,

ಮಹಾಸ್ರಗ್ಧರೆ

ಭರದಿಂ ಬೀಳ್ಕೊಂಡು ವಾಚಸ್ಪತಿ ಗಮನ[೩]ವಶಂ[೩]ಪುಷ್ಪಕಾರೂಢಕಾಯಂ
ಸ್ಥಿರಚಿತ್ತಂ ಸರ್ವಕಾರ್ಯಸ್ಥಿತಪರಿಣತನಜ್ಞಾನಮೇಘಾನಿಳಂ ಭಾ
ಸುರತೇಜಂ ರಾಜಪೂಜ್ಯಂ ನುತಸಕಳಕಳಾಮಾರ್ಗಸಂಗಂ [೪]ಸುಖಾಂಗಂ[೪]
ಹರಪಾದಾರಾಧಕಂ ತಾರಕನ ನಗರಿಯಂ ಪೊಕ್ಕನುತ್ಸಾಹದಿಂದಂ ೨೧

ಅಂತು ಪೊಕ್ಕು ಪುರವೀಥಿಯಂ ನಿರೀಕ್ಷಿಸುತ್ತುಂ ನೂತನನಿಕೇತನಯೂಥಕ್ಕೆ ಕೌತುಕಚಿತ್ತನಾಗಿ,

---

೧-೧ ಮರಳ್ಚು (ಗ). ೨-೨ ವೊಲ್ಲ (ದಾ). ೩-೩ ರಥಂ (ಶಾ ಬೆ ದಾ). ೪-೪ ವರಾಂಗಂ (ಬ).

ಉತ್ಪಲ

ಬಂದು ವಿಮಾನದಿಂದಿಳಿದು ರಾಜಗೃಹಪ್ರತಿಹಾರದೇಶದೊಳ್
ನಿಂದು ಸುರೇಂದ್ರಮಂತ್ರಿ ನಡೆತಂದನೆನಿಪ್ಪುದನಂದು ಪೇಳೆ ಸಾ
ರ್ತಂದು ಕವಾಟಮಂ [೧]ತೆಱೆಯೆ[೧] ಕಂಡನನಂತಸಮುದ್ಭಟಾವಳೀ
ವಂದಿತಪಾದಪದ್ಮಯುಗರಾಜಿತನಂ ಘನತಾರಕಾಖ್ಯನಂ ೨೨

ಕಂಡುಪ[೨]ಚರಿಸಿದೊಡಸುರಂ[೨]
ಕೊಂಡಾಡುತ್ತುನ್ನತಾಸನಮನೀಯುತ್ತಾ
ಖಂಡಲಮಂತ್ರಿಯುನಸುಹೃ
ನ್ಮಂಡಲರವಿರಾಹುಸನ್ನಿಭಂ ಬೆಸಗೊಂಡಂ ೨೩

ಸುರಪತಿಗೆ ಕುಶಲಮೇ ಪಂ
ಕರುಹಭವಂ ಕ್ಷೇಮಿಯೋ ಸರೋರುಹನಾಭಂ
ಸ್ಥಿರನೇ ನೀಮಿಂತಿಲ್ಲಿಗೆ
ಬರವೇನೆಂದಱಿಪುವರ್ಥಮಾವುದು ಕಜ್ಜಂ ೨೪

ಎನೆ ಸುರಗುರುಮೆಂದಂ ನಾ
ಗನಿಕರಮುಂ ಮರ್ತ್ಯನಿಕರಮುಂ ತರದಿಂ ದೇ
ವನಿಕರಮುಂ ನಿಮ್ಮೊಳಗ
ಮನೆ ಭರದಿಂ ಪುಯ್ಯಲಿಕ್ಕೆ ಕಳುಪಿದರೆನ್ನಂ ೨೫

ಮಹಾಸ್ರಗ್ಧರೆ

ಬಿದಿಯುಂ ದೈತ್ಯಾರಿಯುಂ ವಜ್ರಧರನುಮೆನಿಪೀ ಮೂವರುಂ ಕೂಡಿ ಮೂಲೋ
ಕದ ಶೋಕಾನೀಕಮಂ ಕೇಳ್ದತಿಕೃಪೆ ಮನದೊಳ್ ಪುಟ್ಟೆ ನಿನ್ನಲ್ಲಿಗೆನ್ನಂ
ಪದೆಪಿಂದಂ ಪೋಗವೇಳ್ದಟ್ಟಿದರಿದುವೆ ನಿಮಿತ್ತಂ ದಿಟಂ ಬಂದೆನೀ ಕಾ
ರ್ಯದ ಭಾರಂ ನಿನ್ನದೆಂತುಂ ನಿನಗೆ ಧುರದೊಳಾರ್ [೪]ಪಾಟಿ[೪] ಪೇಳ್ ದೈತ್ಯರಾಜಾ ೨೬

ವರಗಂಭೀರಂ ಧೀರಂ
ಪರಸೈನ್ಯಾರಣ್ಯದಾವನೆನಿಸಿದ ನಿನಗೊಂ
ದರಿದುಂಟೆ ಪೇಳೆನುತ್ತಂ
ಸುರಗುರು ಮಿಗೆ ಪೊಗಳೆ ತಾರಕಂ ನಗುತೆಂದಂ ೨೭

೧-೧ ತೆಗೆಯೆ (ಬ ಯು ಅ). ೨-೨ ಚರಿಸಿದನಸುರುಂ (ಕಾ ಯು). ೪-೪ ಸಾಟಿ (ಕಾ ಬಿ ಯು ಸ).

ನಯಮಿಂತೇಕೆ ಬೃಹಸ್ಪತಿ
ಜಯಮಂ ಮುಂತಿಟ್ಟು ಬಂದವಂಗೆನಗತಿನಿ
ಶ್ಚಯಬುದ್ಧಿಯಿಂದೆ ಮೇಲತಿ
ಶಯಸಂಗರವಿಕ್ರಮಂಗಳುಳ್ಳೊಡೆ ಪೇೞ ೨೮

ಎಂದು ತಾರಕಂ ನಯಮನೊಲ್ಲದೆ ನಿರಾಕರಿಸಿ ನುಡಿಯೆ ಸುರಗುರು-ವಿಂತೆಂದಂ,

ಮಹಾಸ್ರಗ್ಧರೆ

ನಯಮಂ ನೀನೊಲ್ಲೆ ಬುದ್ಧಿಪ್ರದಸಚಿವಕುಲಂ ನೋಡೆ ತಾನಿಲ್ಲ ನಿಸ್ಸಂ
ಶಯದಿಂದಂ ಮಂತ್ರಿಗಳ್ ಪೇಳ್ದ ತಿಹಿತವಚಮಂ ಕೇಳೆ ಮತ್ತಾರುಮಂ[1] ಸಂ
ದೆಯದಿಂದಂ[1] ನಂಬೆ ನಂಬಿರ್ದತಿಹಿತಜನಮಂ ಪೊರ್ದಿ ಮಾತಾಡೆ ಮೇಲ
ಪ್ಪ ಯಶೋವಿಸ್ತಾರಮಂ ಭಾವಿಸೆ ತನುಮದದಿಂ ತಾರಕಾ ಮೇರೆಗೆಟ್ಟಯ್ ೨೯

ಎಂದು ವಾಚಸ್ಪತಿ ಸಾಮಮಂ ಬಿಟ್ಟು ಭೇದಮಂ ನುಡಿಯೆ ತಾರಕಂ ದರಸ್ಮಿತಮುಖನಾಗಿ,

ಎಂತೆಂತು ಗುರುವೆ ನೀನೆ
ನ್ನಂತರಮಂ ನೋಡದಿಂತು ನುಡಿವರೆ ಸಮರ
ಪ್ರಾಂತದೊಳೆನಗೆ ವಿಚಾರಮೆ
ಸಂತಮಿರತಿಮಥನಮೇಕೆ ತಾರಕನಿದಿರೊಳ್ ೩೦

ಹಿತರೆನಗಿನ್ನಾರ್ ವಾಚ
ಸ್ಪತಿ ನೀನೆಂದಂತಿರಹಹ ಹುಸಿ[2]ಯಲ್ತಲ್ತು[2]
ನ್ನತಸಂಗರದೊಳಗಱಿಯಯ್
ಹಿತರೆನ್ನ ನಿಶಾತಖಡ್ಗಮುಂ ನಿಡುದೋಳುಂ ೩೧

ಇಂತೆಂದು ನುಡಿದ ತಾರಕ-
ನಂತಸ್ಥಮನಱಿದು ಸಾಮಭೇದಂಗಳುಮಂ
ಪಿಂತಿಕ್ಕಿ ನಿರ್ಜರಾಚಾ-
ರ್ಯಂ ತಡೆಯದೆ ನುಡಿದನುಚಿತದಾನಕ್ರಮಮಂ ೩೨

೧-೧ ಸಂ। ಶಯದಿಂದಂ (ಕಾ ದಾ ಯ); ಸಂ। ದೆಯದಿಂ ನೀಂ (ಬ). ೨-೨ ಯಲ್ಲಲ್ಲು (ಯ ಕೊ).

ಉತ್ಪಲ.

ಕೇಳಿಲೆ ತಾರಕಾಸುರ ಸರೋಜಭವಾದಿಗಳಾಜಿರಂಗದೊಳ್
ಕಾಳೆಗಮಂ ನಿಮಿರ್ಚಲಣಮಾಱದಿರರ್ ದಿಟಮೆಂಬ ಯುದ್ಧಸ-
ಲ್ಲೀಳೆಯುದಿರ್ಕೆ ನಿನ್ನ ಮನದೊಳ್ ಬಯಸಿರ್ದುದನೇನನಾದೊಡಂ
ಪೇಳದನಿತ್ತಪರ್ ಬಡವರಲ್ಲೊಡೆಯರ್ ಕನಕಾದ್ರಿಗಾವಗಂ ೩೩

ನೀಡಾಗದೆ ರಣರಂಗ-
ಕ್ರೀಡೆಯನುಳಿದೆಳಸಿದನಿತುಮಂ ದೇಶಮನೀ
ಡಾಡಲ್ ಸಮರ್ಥರದಱಿಂ
ಬೇಡೊಲ್ದು ಸಮುದ್ರಮುದ್ರಿತಾವನಿಯೆಡೆಯೊಳ್ ೩೪

ಎನೆ ತಾರಕಂಗೆ ಕೋಪಂ
ಮನದೊಳ್ ಪುಟವೆಳ್ದು ಮುಖದೊಳವತರಿಸಿ ವಿಲೋ-
ಚನದೊಳ್ ಪಸರಿಸಿ ಪುರ್ಬಿನ
ಕೊನೆಯೊಳ್ ಕುಡಿಗೊಂಡು ನಿಮಿರೆ ನಡುಗುತೆ ನುಡಿದಂ ೩೫

ಸಡಿಫಡ ಸುರೇಂದ್ರಮಂತ್ರಿಯೆ
ಬೆಡಂಗಿದೇಕೆನ್ನ ಕೂಡೆ ನೆನೆಯದ[1]ಮುನ್ನಂ[1]
ಪೊಡವಿಯನೆನ್ನಯ ಕೆಯ್ಯೊಳ-
ಗಡಗಿರ್ದುದನೆನಗೆ ಕುಡುವೆನೆಂಬುದು ಚಿತ್ರಂ ೩೬

ಉತ್ಪಲ.

ಎನ್ನೊಡನೇಕೆ ನಿನ್ನ[2]ಮತಿ[2]ನಿನ್ನ[3]ಮದಾಂಧತೆ[3]ನಿನ್ನ ಮತ್ಸರಂ
ನಿನ್ನ ನಯೋಕ್ತಿ ನಿನ್ನ ಹೃದಯೋಗ್ರತೆ ನಿನ್ನಯ ಬುದ್ಧಿ ನಿನ್ನ ಸಂ-
ಪನ್ನತೆ ನಿನ್ನ ಮಂತ್ರಗತಿ ನಿನ್ನಯ[4]ವಕ್ರ್ಯತೆ[4]ನಿನ್ನ ವಿಸ್ತರಂ
ನಿನ್ನಯ ನೀತಿ ನಿನ್ನ ಬಗೆ ನಿನ್ನ ತಿರಸ್ಕರಣಂ ಬೃಹಸ್ಪತೀ ೩೭

೧-೧ ಮುನ್ನೀ (ಅ). ೨-೨ ಮಱಿ (ಕಾ). ೩-೩ ಮದೋನ್ನತೆ (ಕಾ ಬೆ ಯ); ಮದೋದ್ಧತೆ (ಬ ದಾ). ೪-೪ ವಕ್ರತೆ (ಅ).

ಧರೆಯೊಳಗೆ ತಾರಕಂಗೆನ-
ಗರಿಪೋಘಮಹಾಬಲಂಗೆ ಸಮರಾಂಗಣದೊಳ್
ಹರಿಗಿರಿ ರವಿಗಿವಿ ಶಿಖಿಗಿಖಿ
ಸುರಪತಿಗಿರಪತಿಯಜಂಗಿಜಂ ತೆಗೆ ಸರಿಯೇ *೩೮

ನೆಟ್ಟನೆ ಕಾಳೆಗಮನೊಡಂ
ಬಟ್ಟೆಂ ಕೇಳಮರಗುರುವೆ ಅಮರಾವತಿಯಂ
ಬಿಟ್ಟೋಡಿ ನಿಮ್ಮ ಬೆಳ್ಳಿಯು
ಬೆಟ್ಟದ ಗುಹೆಗುಹೆಗಳೊಳಗೆ ಮಾಡುವುದಿಂಬಂ ೩೯

ಎಂದು ನುಡಿದ ತಾರಕನ ವೀರಾಳಾಪಮಂ ವಾಚಸ್ಪತಿ ಕೇಳ್ದು ಕೌತುಕಮಂನಾಳ್ದು ನಿರ್ವೇದ[೧]ದೊಳ್ ಬಿಳ್ದು[೧] ಭಯರಸದೊಳಳ್ದು ಧೈರ್ಯದೊಳೆಳ್ದಿಂತಾನುಂ ಸಂತಯ್ಸಿಕೊಂಡು ಸಾಮಭೇದದಾನಂಗಳನುಲ್ಲಂಘಿಸಿದ ಕರ್ಕಶನಪ್ಪ ರಕ್ಕಸರರಸನೊಳ್ ದಂಡಮೆಂದುಂ ಹಸನಾಗದೆಂದು ಮನದೊಳಳ್ಕುತುಂ ಮಾತಿನೊಳ್ ಬಲ್ಪುಗಿಡದೆ [೨]ತಾರಕನಂ[೨] ಬೀಳ್ಕೊಂಡು,

[೩]ಮೋನದೆ[೩] ನಡೆತಂದಂ ಸಂ
ಧಾನವಿಹೀನಪ್ರಧಾನ[೪]ಚಿಂತಾಭರಿತಂ
ಮಾನ[೪]ಮನಸ್ಸಂಗತವಿಧು
ರಾನನವಿಗತಪ್ರಧೈರ್ಯನಮರಾಚಾರ್ಯಂ ೪೦

ಬರೆವರೆ ಸರೋಜಭವನುಂ
ಹರಿಯುಂ ವಾಸವನುಮಮರರುಂ ನೆರೆದಿರ್ದಾ
ತುರದಿಂದೆ ಬರ್ಪ ಮಂತ್ರಿಯ
ಬರವಂ ನೆರೆ ಕಂಡು ತಮ್ಮೊಳಂದಿಂತೆಂದರ್ ೪೧

೧–೧ ದೊಳುಬ್ಬೆದ್ದು (ಅ). ೨–೨ ತಾರಕನಿಂ (ಸೆ). ೩–೩ ಮೌನದೆ (ಕಾ ಬೆ ಯ ಅ). ೪–೪ ಚಿಂತಾಭರದು । ಮ್ಲಾನ (ಅ). *೩೮ನೆಯ ಪದ್ಯದ ಮುಂದೆ ಗೊ, ಸೆ ಪ್ರತಿಗಳಲ್ಲಿ ಗುಡಜನಿತಂ ಭಗಪಾತಕ । ದೊಡವಿದ ಕೆಲಸಕ್ಕೆ ನೀಂ ಸಹಾಯನಹೆಯುಯರ್ ॥ ಪದುಳಂ ಪೋಗು ಬೃಹಸ್ಪತಿ । ಮುದದಿಂದಂ ಪೇಳು ಕಂಡ ಕಾರ್ಯದ ಹದನಂ ॥ ಎಂಬ ಪದ್ಯವಿದೆ.

ಕೊರಗಿದುವು ಲೋಚನಂ ಭಾ
ಸುರಮುಡುಗಿತು ಭಾಳಲೇಖೆ ಕಂದಿತು ಗಂಡಂ
ವರವಕ್ತ್ರಂ ಕಳೆಗುಂದಿತು
ಗುರುತರಸಂಧಾನಮಿಲ್ಲ ಗುರುವಿನ ಮುಖದೊಳ್ ೪೨

ಎಂದಾಗಳ್ ನುಡಿಯುತ್ತಿರೆ
[೧]ಬಂದೆಲ್ಲರ್ ನಮಿಸಲಮರ[೧]ಗುರು ಕುಳ್ಳಿರ್ದಿಂ
ತೆಂದಂ ರಕ್ಕಸನೊಡನೆ
ಲ್ಲಂದದೊಳಂ ಪೇಳ್ದಿನಾವ ಮಂತ್ರಮನೊಲ್ಲಂ ೪೩

ಕ್ರಮದೊಳ್ [೨]ಸಲ್ಲಂ[೨] ಸಂಧಾ
ನಮನೊಲ್ಲಂ ಸಂಗರಾನುಸಂಧಾನಮೆ ತ
ನ್ನ ಮನಂ ತಾರಕನೊಡನ
[೩]ಶ್ರಮದಿಂ[೩] ಕಾದುವುದೆ ಮಂತ್ರಮಿಂತಿದೆ ಕಜ್ಜಂ ೪೪

ಅತಿನಿಷ್ಠುರನತಿ ನಿಷ್ಕೃಪ
ನತಿನೀರಸನತಿನಿರಾಶ್ರಯಂ ತಾರಕನಿಂ
ತತಿದುಷ್ಕರನತಿದುರ್ಜನ
ನತಿ[೪]ದುರ್ಗುಣನತಿ[೪]ದುರಾತ್ಮನತಿದುಶ್ಶೀಲಂ ೪೫

ಅಂತುಮಲ್ಲದೆ,

ಅಪರಿಮಿತತುರಗಕುಲದಿಂ
ದಪರಿಮಿತೇಭಪ್ರತಾನದಿಂ ತಾರಕನಿಂ
ತಪರಿಮಿತಪತ್ತಿಯಿಂದ
ಶ್ವಪತಿಗೆ ಗಜಪತಿಗೆ ನರಪತಿಗೆ ಮಿಗಿಲೆನಿಪಂ ೪೬

ಸಿಡಿಲಿಂದರಣ್ಯಶಿಖಿಯಿಂ
ವಡಬಾನಳನಿಂ ಲಯಾಗ್ನಿಯಿಂ ತಾರಕನಿ
ರ್ಮಡಿ ಮೂವಡಿ ನಾಲ್ವಡಿಯ
ಯ್ವಡಿ [೫]ಭರದೊಳ್ ಬಲ[೫]ದೊಳುಷ್ಣದೊಳ್ [೬]ತೀವ್ರತೆಯೊಳ್[೬] ೪೭

೧–೧ ಬಂದೆಲ್ಲರ್ಗೆರಗುತಮರ (ಕಾ ಬ ಯು ಗ ಡ ಗೊ ಅ ಕ). ೨–೨ ಬಲ್ಲಂ (ಬ). ೩–೩ ಕ್ರಮದಿಂ (ಕ ಡ ಗ). ೪–೪ ದುರ್ಗುಣಿಯುತಿ (ಕಾ ಯು ಅ ಕ). ೫–೫ ಬಲದೊಳ್ ಚಲ (ಕಾ ಬೆ). ೬–೬ ತೀವ್ರದೊಳಂ (ಅ).

ಎಂದು ವಾಚಸ್ಪತಿ ತಾರಕಾಸುರನ ಪಟುತರಪ್ರತಾಪಮಂ ಪೇಳುತಿರ್ಪ ಸಮಯದೊಳೊರ್ವ ಗಂಧರ್ವನಾಯಕನತಿತ್ವರಿತಗತಿಯಿಂ [೧]ಪರಿತಂದು[೧]

ಉತ್ಪಲ

ಏತಱಿ ಮಾತಿದೇತಱಿ [೨]ವಿಚಾರತೆಯೇತಱಿ[೨] ಮಂತ್ರಶಕ್ತಿಯಿ
ನ್ನೇತಱಿ ಸತ್ವಮೇತಱಿ ಬಲೋನ್ನತಿಯೇತಱಿ ವೀರವೃತ್ತಿ ತಾ
ನೇತಱಿ ಬುದ್ಧಿಯೇತಱಿ ಪರಾಕ್ರಮಮುತ್ಸವವೇತಱಾಜ್ಞೆ ವಿ
ಖ್ಯಾತನ ತಾರಕಾಸುರನ ಬೀಡು ಬೀಡುತ್ತಿದೆ ನೋಡಲದ್ಭುತಂ ೪೮

ಮಹಾಸ್ರಗ್ಧರೆ

ಧರೆಯಿಂಬಿಲ್ಲಬ್ಧಿಯಿಂಬಿಲ್ಲಜಲವಿತತಿಯಿಂಬಿಲ್ಲ ದಿಕ್ಚಕ್ರಮಿಂಬಿ
ಲ್ಲ ರಥವ್ರಾತಕ್ಕೆ ಘೋಟಪ್ರತತಿಗೆ ಗಜಯೂಥಕ್ಕೆ ಪಾದಾತಿವೃಂದ
ಕ್ಕರಿದಾರ್ಗಂ ರೇಣು ಪಂಕಂ ಶಿಥಿಲತೆ ದೆಸೆಗೆಟ್ಟಿತ್ತು ತಾನೆಂಬಿನಂ ಸಂ
ಗರಕಾಲಾಭೀಳಭೃತ್ತಾರಕನಖಿಳಬಳಂ ತೀವಿ ಪರ್ವಿತ್ತಿದೆತ್ತಂ ೪೯

ಎಂಬ ಸಂಭ್ರಮೋಕ್ತಿಯನಂಬುಜಾಕ್ಷಂ ಕೇಳ್ದು ಕೋಪಮಂ ತಾಳ್ದು,

ನಡೆ ಸುರಪತಿ ನಡೆ ಪಾವಕ
ನಡೆಯಂತಕ ನಡೆ ನೃಪಾಹ ನಡೆ ಜಳಧೀಶಾ
ನಡೆ ಮಾರುತ ನಡೆ ವಿತ್ತಪ
ನಡೆ ವೃಷಭಾರೂಢ ಗಾಢತರವಿಕ್ರಮದಿಂ ೫೦

ಸುರರುಂ ಕಿನ್ನರರುಂ ಖೇ
ಚರರುಂ [೩]ಗಂಧರ್ವರುಂ ಗರುಡರುಂ[೩] ವಿದ್ಯಾ
ಧರರುಂ [೪]ರಾಕ್ಷಸರುಂ[೪] ಯ
ಕ್ಷರುಮೊಂದೊಂದೆಸೆಯೊಳೊಡ್ಡನೊಡ್ಡುಗೆ ರಣದೊಳ್ ೫೧

ಎಂದು ಬೃಹಸ್ಪತಿಗತಿಭರ
ದಿಂದಂ ಬೆಸಸುತ್ತುಮಿರ್ಪ ಸಮಯದೊಳೊರ್ವಂ
[೫]ಸಂದಣಿಪ ನುಡಿಗಳೊಗುತಿರೆ[೫]
ನಿಂದುರ್ಬಿತೆ ಭಾಷೆಗೊಟ್ಟನಚಳಿತವೀರಂ ೫೨

೧–೧ ಪರಿದು ಬಂದು (ಕಾ ಕ ದಾ ಗೊ ಸೆ). ೨–೨ ವಿಚಾರವದೇತಱಿ (ಬ ಅ). ೩–೩ ಗಂಧರ್ವಗರುಡರುನ್ನತ (ಅ). ೪–೪ ಪನ್ನಗರುಂ (ಅ). ೫–೫ ಸಂದಣಿಯೊಳ್ ತೂಗುತ್ತಿರೆ (ಅ).

ಚಂಪಕ

ಎನಗಿದಿರಾದ ತಾರಕಬಳಂ ಕಬಳಂ ಕಬಳಂಬೊಲಿಂದು ಪೊ
ಕ್ಕನವಧಿಸಾಹಸಪ್ರಕರವಂ ಕರವಂ ಕರವಂತೆ ಪೊರ್ದಿ ಭೋಂ
ಕನೆ ಕರವಾಳ್ ಕಡಂಗಿದವನಂ ದವನಂ ದವನಂಜೆವೊಯ್ದು ಪೋ
ಳ್ದನಿಮಿಷ[೧]ರಾರೆ[೧]ವೈರಿಬಲವಂ ಬಲವಂ ಬಲವಂದು ಗೆಲ್ದಪೆಂ ೫೩

ಎಂದು ನಿಂದಾಸುರದಿಂ ಭಾಷೆಗುಡುತ್ತಿರ್ಪ ವೀರಾಳಾಪಮಂ ಕೇಳುತ್ತ ಮರಪತಿ ಸಮರೋತ್ಸಾಹಭೇರಿಯಂ ಪೊಡೆಯಿಸೆ,

ಮತ್ತೇಭ

ಧರೆಯಲ್ಲಾಡೆ ಸಮುದ್ರಮುರ್ಕೆ ದಿಗಧೀಶರ್ ಬೆರ್ಚೆ ದಿಕ್ಕುಂಜರಂ
ಕರಮುಳ್ಕುತ್ತಿರೆ ಸೀಳೆ ಶೈಳಮಹಿರಾಜಂ ಬಳ್ಕೆ ಕೂರ್ಮಂ ಭಯಾ
ತುರಘರ್ಮಾನನನಾಗೆ ಮೇಗಣುಡುವೃಂದಂ ಬೀಳ್ಕೆ ಕೋಳಾಹಳೋ
ತ್ಕರನಿಸ್ಸಾಳಧಳಂಧಳಂಧಳರವಂ ಪರ್ಬಿತ್ತು ಮೂಲೋಕಮಂ ೫೪

ಅನಂತರದಲ್ಲಿ,

ಮತ್ತೇಭ

ಉರುನಿಸ್ಸಾಳಧಳಂಕೃತಂ [೨]ನೆಗೆದುದೇಳೇಳ್[೨] ಭೀಕರಾಕಾರಮಾ
ಗಿರೆ ಪೆಣ್ಣಾನೆಯನಾದರ್ಮ ಹಲ್ಲಣಿಸು [೩]ವಾಹ[೩]ವ್ಯೂಹಮಂ ಕೂಡೆ ಪೂ
ಡು ರಥವ್ರಾತಮನೆಯ್ದೆ ಕೆಯ್ದುಗೊಳವೇಳ್ ಪಾದಾತಿಯಂ ಬೇಗಮೆಂ
ಬ ರವಂ ಪರ್ವಿತು ನಾಕಲೋಕದಿವಿಜಾನೀಕಪ್ರಧಾನಾಖ್ಯರೊಳ್ ೫೫

ಇಂತು ಕೊರ್ಬಿ ಪರ್ಬಿದ ಕೋಳಾಹಳದ ಸಂಭ್ರಮಮಿಂಬುವಡೆಯೆ, ಸುರಕುಲಂ ಸಡಗರಿಸಿ ಘುಡುಘುಡಿಸಿ [೪]ನಡೆನಡೆದು[೪] ಪರಿದು ನೆರೆದು ಮುಂಗುಡಿಗೆಪರಿ ಸಂಗರಭೂಮಿಯೊಳೊಡ್ಡಿ ನಿಂದೆಡ್ಡವಾಗಿ ಬಗ್ಗಿಸಿ ಮೊಗ್ಗರಿಸುತ್ತೊಗ್ಗುಗೆಡವೆ ನಡೆಗೋಂಟೆಯಂತೆ ನೆಲೆವೆರ್ಚಿ ನಿಂದು ತೊಲಗವ ಕಂಭದ ಹುಲಿಯು ಬಜ್ಜಣೆಯ ಗಜಮುಖದ ಭುಜಬಳಗರುಡನ ಗಜಕೇಸರಿಯ ಬಿರುದ ಶರಭನ ಗಂಡರ ದಾವಣಿಯ [೫]ಭಂಡಣವಿಜಯನ[೫] ವೈರಿ[೬]ಜಗದ್ದಳನನ[೬] ವೀರಘಂಟೆಯ ಹೊನ್ನ ಗುಬ್ಬಿಯ

೧–೧ ರಾಶಿ (ಕಾ); ರಾರಿ (ಅ). ೨–೨ ನೆಗೆವುದುದ್ಧತ್ (ಕಾ ಕ). ೩-೩ ವಾಜಿ (ಕಾ ಬೆ ಯು). ೪–೪ ನಡೆತಂದು (ಕಾ ಕ). ೫–೫ ಚಂಡರಣವಿಜಯದ (ದಾ). ೬–೬ ಗಜವಿದಳನ (ದಾ).

ರನ್ನವಟ್ಟೆಯ ಬೆನ್ನ ಚಮ್ಮಟಿಗೆಯ ಬಿಳಯ ಚವರದ ವಿಳಸದ ಗೆಜ್ಜೆಯ ಅಭಯ-ಹಸ್ತದ [೧]ಉಭಯಸತ್ತಿಗೆಯ[೧] ಹಗಲ ಕೆಯ್ದಾವಿಗೆಯ ಫಟಸರ್ಪನ ಕಟಕಸೂಱೆ-ಗಾಱನ ಅಸುರಕೋಳಾಹಳನ ದೈತ್ಯಮರ್ದನನ ದಾನವಾರಿಯ ರಕ್ಕಸಜೂಜಿನ [೨]ಪಚ್ಚೆಯ ಪರಿಗೆಯ ಪಸರದ[೨] ಪಾರಿಯದೊಯ್ಯಾರದ ಕೆಂದಟ್ಟಿನ ಪಂತಿಯ ಪೊಂಬಟ್ಟೆಯ [೩]ಹಾದಿಯ[೩] ಕಾಳಿಕೆಯ ಜಾಳದ ನೀಲದ ಸಾಲಶಂಖದ ತಟ್ಟಿನೊಟ್ಟಜೆಯ ಕಟ್ಟುಬ್ಬಟೆಯ ಬಿರುದಿನ ಹರಿಗೆಕಾಱರ [೪]ಪರಿವೀಥಿ[೪]ಯೊಳಂ; ಮತ್ತಮಾ ಹರಿಗೆಕಾಱರಿಕ್ಕೆಲದೊಳ್ ಕೋಡಕೆಯ್ಯೊಳುಟ್ಟ ಮಲ್ಲಗಂಟಿನ ತೊಡರ್ಚಿಮುಡೆಗಂಟೆಯ ಕಿರ್ಗಟ್ಟಿನ ಸುರಿಗೆಯ ಕಟ್ಟಿದ [೫]ಚಿಂದಿಯ[೫] ತೊಟ್ಟ [೬]ಕಂಚುಳಿಕೆಯ[೬] ಹಿಡಿದ ಬಿಲ್ಲ ಬಲಗೆಯ್ಯ ಸರಳ ಬೆನ್ನ ಬತ್ತಳಿಕೆಯ ಸುತ್ತಿದ ಪೀಲಿಯ ಮುಡಿಗಟ್ಟಿನ ಪಟ್ಟೆಯ ಮಲಯಜದ ಮಂಗಳಬೊಟ್ಟಿನ ಕಟ್ಟಣಕದ ಸಿಂಗರಂಬೆರಸಿ ಬೀರಸಿರಿಯುಂ ಬೀಱೆ ನಂಜಿನ ಪುಂಜದಂತೆ ಕುಳಿಕನ ಕುಲದಂತೆ ಜವನ ಜಂಗುಳಿಯಂತೆ ಬಯ್ದು ಕೊಲ್ವ ಬಕನ ಬಳಗದಂತೆ ನಿಂದ ಬಿಲ್ಲ ಬಲ್ಲಣಿಯ ಪಿಂಗಟ್ಟಿನೊಳ್ ಮುಂಕಣಿಸಿ ನೆಗೆಪಿದ ಸಬಳಂಗಳ ಮೊನೆಯ ಮೊತ್ತಮಿನಕಿರಣಂಗಳನೊತ್ತರಿಸಿ ಮಿಸುಗುವ ತಪನನ ಬಿಸಿಯ ಬಿಂಬದೊಳ್ ಮಾರ್ಪೊಳೆದು ತಳತಳಿಸಿ ಸಿಡಿಲ ಬಳಗಂ ತಳೆರ್ತಂತೆ ಗಗನತಳದೊಳ್ ತುಱುಂಗಿ ನೆರೆ ಮೆಱೆಯೆ ನಭಕ್ಕೆ ಜಿಮ್ಮಿ ಕುರುಳ್ಚಿ ಕೆಯ್ಯಾಡುವ ಕೊಂತಕಾಱರ ತಿಂತಿಣಿಯ ನಡುವೆ ಪಿಡಿದ ವಜ್ರಮುಷ್ಟಿಯ ಮಸೆದಿಟ್ಟಿಯೆಸೆವ ಗಂಡಗತ್ತಿಯ ಕೂರಲಗಿನ ಭಾರಿಸಂಕಲೆಯ ಪಟ್ಟೆಯದ ಪರಶುವಿನ ಚಕ್ರದ ಕಕ್ಕಡೆಯ ಕರವಾಳ ಕಠಾರಿಯ ಕತ್ತಿಯ ಕರಗಸದ ಗಂಡಗತ್ತರಿಯ ಶೂಲದ ಕಾಲ ತೊಡರ ರಕ್ಕಸರ ಹಾಹೆಯ ತಡೆಯುದ ಲವುಡಿಯ [೭]ಚಾವುಡಿಯ[೭] ಬಾವುಲಿಯ ಬಲ್ಲಾಳ್ಗಳ ಮುಂದೆತ್ತಿದ ಪರಿಪರಿಯ ಪತಾಕಾವಳಿಯ ಸೂಳಱಿದು ಮಸಗಿ ದುವ್ವಾಳಿಸುವ ಗೋವಳಗಟ್ಟಿಗೆಯ ಗೊಂದಣಂಗೂಡಿ ಗಗನಂ [೮]ಕವಿದಂತೆ[೮] ದೆಸೆಗಳ್ ಉಗಳ್ದಂತೆ ಭೂಮಿ ಬೆಸಲಾದಂತೆ ಭೂಚಕ್ರಮಂ ತೆಕ್ಕನೆ ತೀವಿದ ಪದಾತಿ ಬಲದೊಳಂ; ಮತ್ತಮಾ ಪದಾತಿಬಲದ ಪೆಡಮೆಟ್ಟಿನೊಳ್ ಹೂಡಿದ ಕುದುರೆಯ ನೀಡಿ ನೆಗೆದ ಪಳವಿಗೆಯ ಕಟ್ಟಿದ ಚಮರದ ನೆಟ್ಟ ತಿಸುಳವ ಕೀಲಿಸಿದ ಕೀಲ್ಗಳ ತಿರುಗುವ ಚಕ್ರದ ಸುತ್ತಿಬಿಗಿದ ಲೋಹಬಂಧದ ತೆತ್ತಿಸಿದ [೯]ಸೂಲಿಗೆಯ[೯] ಹೇಱಿದ ಶಸ್ತ್ರವೇಱಿದ ಸಾರಥಿಯ ಮೀಱಿ ನಿಂದ ಜೋದರ ಭೀಕರರೂಪು ಲೋಕಕ್ಕೆ ಪೊಸತಾಗೆ ಚಕ್ರಜೀತ್ಕೃತಿಗೆ ದಿಕ್ಕರಿಗಳ್ ಬೆರ್ಚೆ ಸೂತರ ಕಳಕಳಕ್ಕೆ ಭೂತಳಂ ನಡುಗೆ ಜವನ ಜಕ್ಕಂದೊಳಲಿಯಂತೆ ಮಾರಿಯ ಮುಸಕದಂತೆ ಪಸರಿಸಿ ನಿಂದ

೧-೧ ಉಭಯಚ್ಛತ್ರದ (ಶಾ ಕ). ೨-೨ ಪಚ್ಚೆವರಿಗೆಯ ಪಸಡನದ (ದಾ). ೩-೩ ಹಳದಿಯ (ಶಾ ಬೆ ಯ). ೪-೪ ಪರಿವಿಡಿ (ಶಾ ಯ). ೫-೫ ಚಿಂದರಿಯ (ಶಾ). ೬-೬ ಕಂಚುಕಿಯ (ಹು ಬ). ೭-೭ ಚವುರಿಯ (ಅ). ೮-೮ ಬಿಳ್ದಂತೆ (ಅ). ೯-೯ ಸೂನಗಿಯ (ಶಾ ಕ ಬೆ ಯ).

[೧]ರಥ[೧]ಕಪ್ರತಾನದೊಳಂ; ಮತ್ತಮಾ ಸ್ಯಂದನವೃಂದಮಂ ಮುಂದುಗೊಂಡ
ಹೊನ್ನ ಹಲ್ಲಣದ ರನ್ನದ [೨]ಪಕ್ಕರಕ್ಕೆಯ[೨] ಕಟ್ಟಿದ ಗೆಜ್ಜೆಯ ಸೂಟಿಯ ರವದ
ಪೊರ್ಕುಳ ಗಂಟೆಯ ಮೋಹಿಸುವ ಮೊಗವಡದ ರೂಹಿಸುವ ನೊಸಲ ಕನ್ನಡಿಯ
ಕಡುಚೆಲ್ವ ಕೊಡಂಕೆಯ ಲಂಬಿಸುವ ಚಮರದ ಚಾರುತರಭೂಷಣಂ ಭೀಷಣಮಾಗೆ
ಕಂಬಿಯ ಕಡಿಯಣದ ಕೀಲಣದ ಹೋರಟೆಯ ಘಾರಾಘಾರಿಯೊಳ್ ಜೋಳಸುವ
ಲಾಲಾಜಲಂ ಖುರಹತಿಯಿಂ ನೆಗೆವ ದೂಳ್ಗೆ ಚಳೆಯುಂಗುಡೆ ಹರಿಣಚರಣಮಂ ಜೆಲ್ಲ
ವಾಡುವ ಗರುಡನಂ ಪರಿಹಾಸಂಗೆಯ್ವ ಪವನನಂ ಪರಿಭವಿಸುವ ಮನಮನನು
ಗೆಡಿಸುವ ದಿಟ್ಟಿಗಳನಿಟ್ಟಣಿಸಿ ದಾಂಟುವ ಕಡುವೇಗದಿಂ ವೆಱಿದ ಚರ್ಮದಂಡದ
ನೆಮ್ಮುಗೆಯಿಲ್ಲದೆ ದನಿದೋಱುವನುಮಾನಂ ಪೊರ್ದದೆ ಮಡಸನ್ನೆ ಮನದೊಳಂಕು
ರಿಸುವಲ್ಲಿಂ ಮುನ್ನಂ ಪರಿದು ಶರಧಿಯನೆಡಗಲಿಪ ಗಗನಮನಡರ್ವ ಜಾತ್ಯಶ್ವಂಗಳ
ವಳಯಮಂ ಸೋಂಕದಂಕಣಿಯ ಹಂಗಿಲ್ಲದೆ ಭೋಂಕನೇಱಿ ಸುಳಿವ ಮಿಂಚಂ
ಸೆಳೆದು ನಿಮಿರ್ಚಿ ಕರತಳದೊಳಮರ್ಚಿದಂತೆ ಮಿಗೆ ಪಿಡಿದು ಹೆಗಲೊಳಿಟ್ಟ ಪಟ್ಟೆಗಳ
ಬೆಳಗಗೆಯೆಳ್ದು ಗಗನಮನಪ್ಪಿ ಗಾಡಿಕೆಯಿಂದೊಪ್ಪುವ ಭುಜಪೂಜೆಯ ವೀರ
ನಿವಾಳಿಯ ಬಿರುದಿನೇಳ್ಗೆಯ ತರದ ದೌಡೆಯ ಹೀಲಿದಳೆಯ ಮಾಲೆಗೊಂಡೆಯ
[೩]ಜೆಲ್ಲುವ[೩] ಚಾಮರದ ಸೂಸುವ ಸೀಗುರಿಯ ಸೂರ್ಯಸೋಮವಂಶದ ರಾಜ
ಪುತ್ರರ ರಾಯ ರಾವುತರ ದಿವ್ಯವಾಹಕರ ರಾಘೆಗಿಂಬುಗೊಟ್ಟು ವಾಘೆಗಳವಟ್ಟು
ಪ್ರಳಯಸಮಯದೊಳ್ ಮೇರೆಯಂ ಮೀಱಿದ ವಾರಿನಿಧಿಯ ತರಂಗಕುಲದಂತಿರ್ದ
ತುರಂಗಬಲದೊಳಂ; ಮತ್ತಮಾ ತುರಂಗಬಲದಪರಭಾಗದೊಳ್ ಹಮ್ಮಿದ ಗುಳದ
ಹೂಡಿದ ಱಂಜೆಯದ ಕಾಲ ಕಂಭದ ದಂಡೆಯ ಬರಿಕೆಯ್ಯ ಪಟ್ಟೆಯದ ಕೋಡ
ಮೊನೆಯ ಕೀರ್ತಿಮುಖದ ಅಗ್ರಪಲ್ಲವದ ಪತ್ರಗತಿಯ ತಲೆಯೊಳೊಟ್ಟಿದ ಕುಂಕು-
ಮದ ಕಪೋಳದೊಳ್ ಸುರಿವ ಮದಜಲದ ಬೆನ್ನ ಮೇಲಿಳಿವ ಬಿಳಿಯ ಚವರದ
ಮುಂತಣ ಮಾವಂತರ ಪಿಂತಣ ಬಡಿಗೆಕಾಱರ ನಡುವಣ ವೀರಜೋದರ ಮುಗಿಲನಳ್ಳಿ
ಱಿವ ಕದಳಿಯ ಕಂಭದ ಬೊಬ್ಬೆಗುಡುವಾರೆಕಾಱರ ಘುಳುಘುಳಿಸುವ ವೀರವೃಂದದ
ಘುಡುಘುಡಿಸುವ ದೌಡೆಯ ಕೋಳಾಹಳದಬ್ಬರಮಾಗೆ ಸೂರ್ಯಮಂಡಲಮಂ
ಸೆಳೆವ ಸಿಡಿಲಂ ಪಿಡಿವ ದಿಕ್ಕರಿಗಳನೆಳ್ಬಿಟ್ಟುವ ಕಡುಗಾಯ್ಪಂ ತಳೆದು ನೀಲಾಚಳಂ
ಸಾಲಿಟ್ಟಂತೆ ಅಂಜನಗಿರಿಯೊಯ್ಯಾರಂಬಡೆದಂತೆ ಕಾಲಮೇಘಂಗಳ್ಕವಿದಂತೆ ನಿಂದ
ಗಜಘಟಾಪಟಲದೊಳಂ; ಇಂತೊಡ್ಡಿನಿಂದ ಹಸ್ತ್ಯಶ್ವರಥಪದಾತಿಯೆನಿಪ ದೇವರ್ಕಳ
ಚಾತುರಂಗಬಲದ ಕಟ್ಟಿದಿರೊಳೊಡ್ಡಿ ನಿಂದ ತಾರಕಾಸುರನ ಚಾತುರಂಗಬಲ
ವೆಂತಿರ್ದುದೆಂತೆಂದೊಡೆ ಪೆರ್ಬುಲಿಯೊರ್ಬುಳಿಯಂತೆ ಸಿಂಗವ [೪]ಸಂಗರ[೪]ದಂತೆ

೧ ರಥ (ಅ). ೨ ಪಕ್ಕರಿಕೆಯ (ಕಾ ಅ ಳ). ೩ ಚಿಮ್ಮುವ (ಕಾ). ೪ ಪಂಗಡ (ಕಾ); ಸಂದಣಿ (ಬ).

ಶರಭಂಗಳ ನೆರವಿಯಂತೆ ಭೇರುಂಡನ ಹಿಂಡಿನಂತೆ ಕುಳಿಕನ ಕುಳದಂತೆ ನಂಜಿನ ಪುಂಜದಂತೆ ಸಿಡಿಲ ಗಡಣದಂತೆ ಕಾಳ್ಕಿರ್ಚಿನ ಗೂಳೆಯಂತೆ ವಡಬಾನಲನ ಪಡೆಯಂತೆ ಕಾಲಾಗ್ನಿಯ ಮಾಲೆಯಂತೆ ಮಾರಿಯ [೧]ಮೂರಿ[೧]ಯಂತೆ ಮೃತ್ಯುವಿನ ಕೊತ್ತಳಿಯಂತೆ ಅಂತಕನ ಸಂತತಿಯಂತೆ ಭೈರವನ ಬಳಗದಂತೆ ಮುಂತಿರ್ದ ರಕ್ಕಸವಡೆಯ ನಡುವೆ ನಿಂದ ವೀರತಾರಕಾಸುರಂ ತನ್ನ ಬಲಕ್ಕಿದಿರಾದ ನಿರ್ಜರಬಲಮಂ ನಿರೀಕ್ಷಿಸಿ ರಾಕ್ಷಸಗುರುವಪ್ಪ ಭಾರ್ಗವನ ಮುಖಮಂ ನೋಡಿ,

ಒಟ್ಟಿದ ನಿರ್ಜರಬಲದೊಳ್
ಕಟ್ಟಿದಿರಾಗಿರ್ದು ನಿಂದರಾರಾರವರಂ
ನೆಟ್ಟನೆನಗಱಿಪವೇಳ್ಕೆನೆ
ನಿಟ್ಟಯಿಸಿಯೆ ನುಡಿವನಸುರಕುಲಗುರು ಭರದಿಂ ೫೬

ಮತ್ತೇಭ

ನಡೆತಂದುನ್ನತವಕ್ತ್ರನಾಗಿ ಸುರ[೨]ರಂ[೨] ಗಂಧರ್ವ[೨]ರಂ[೨] ಯಕ್ಷ[೨]ರಂ[೨]
[೩]ಎಡೆ[೩]ಗೊಂಡೊಪ್ಪುವ ರತ್ನಕೋಟಿ[೪]ರುಚಿರ[೪]ಪ್ರಖ್ಯಾತಕೋಟೀರಮಿ
ರ್ವಡಿ ದಿವ್ಯಪ್ರಭೆಯಿರಾಯೆ ಬೆಳ್ಗೊಡೆಯ ವೀರಚ್ಛಾಯೆಯೊಳ್ ವಜ್ರಮಂ
ಪಿಡಿದೈರಾವತಮೇಱಿ [೫]ನಿಂದನವನಿಂದ್ರಂ ಕೇಳ್[೫] ದನುಪ್ರೋದ್ಭವಾ ೫೭

ಆತನ ಕೆಲದೊಳ್ ಚಂಡ
ವ್ರಾತಂ ಸಿಡಿಲೇಳ್ಗೆಯೇಳ್ವ ಬಲ್ದಗರೇಱಿ
ರ್ದಾತಂ ಸಕಳಜಗದ್ವಿ
ಖ್ಯಾತಂ ಹುತವಹನೆನಿಪ್ಪನವಧರಿಸಸುರಾ ೫೮

ಉರುತರ ಭೀಕರವಕ್ತ್ರಂ
ಕರತಳದಿಂ ಕಾಲದಂಡಮಂ ಕಡುಪಿಂದಂ
ತಿರಿಪುತ್ತಿರ್ಪವನಂತಕ
ನರಿದೆನಿಪ ಲುಲಾಯವಾಹನಂ ದನುಜೇಂದ್ರಾ ೫೯

೧-೧ ಬಳಗ (ಬೆ); ಮುಡಿ (ಯು). ೨-೨ ರಿಂ (ಕಾ ಯು ಬೆ). ೩-೩ ನಡೆ (ಕಾ ಯು ಬೆ). ೪-೪ ಖಚಿತ (ದಾ). ೫-೫ ನಿಂದವನೆ ದೇವೇಂದ್ರಂ (ಅ ದಾ ಗ ಕೊ).

ಅಸಮಬಳನತುಳವಿಕ್ರಮ
ನಸುರ[೧]ಕುಲೋತ್ತಂಸ[೧]ನಾಜಿಮುಖಹಸನಂ ಮಾ
ನಸನಂ ಪಾಯ್ದೇಱಿದ [೨]ರ
ಕ್ಕಸರರಸಂ ನಿರೃತಿ ನಿರುತಮೆಲೆ ದನುಜೇಂದ್ರಾ[೨] ೬೦

ಅವಧರಿಸೆಲೆ ತಾರಕ ಮಕ
ರವನೇಱಿ ವಿಶಾಲಪಾಶಮಂ ಪಿಡಿದತ್ಯು
ತ್ಸವದಿಂದಂ ನಿಂದಾತಂ
ನವರತ್ನಾ[೩]ಭರಣನಿಕರಕಿರಣಂ ವರುಣಂ[೩] ೬೧

ಸಂದಣಿಪ ಕುರುಳ ಕುಂತದ
ಮುಂದಣ ಸಾಮಂತರಾಜಪುತ್ರೋತ್ಕರದಿಂ
ಗೊಂದಣಿಸಿ ಪರ್ವಿ ರಣದೊಳ್
ನಿಂದಿರ್ಪವನೇಣವಾಹನಂ ಪವಮಾನಂ ೬೨

ತುರಗವನೇಱಿ ಮಯೂಖಾ
ವರಣಸಿತಚ್ಛತ್ರಮೆಸೆಯೆ ಗರುಡರ ಗಂಧ
ರ್ವರ ಯಕ್ಷರ ಸಂದಣಿಯೊಳ್
ಬರುತೊಪ್ಪುವ ಭೀಕರಂ ಕುಬೇರಂ ದನುಜಾ ೬೩

ನಂದಿಯನೇಱಿ ಗಣಂಗಳ
ಮುಂದೆ ವೃಷಧ್ವಜಮನೆತ್ತಿ ಸಮರೋತ್ಸಾಹಾ
ನಂದದೊಳೆ ಬಂದು ಮುಂದಂ
ನಿಂದವನೀಶಾನನೆಂಬನೊರ್ವಗಣೇಶಂ ೬೪

ವರಚಕ್ರಂ ಶಾರ್ಙ್ಗಂ ಗದೆ
ಯುರುತರಭೀಕರಮನೀಯೆ ಸಂಗರರಂಗ
ಕ್ಕುರವಣಿಸುತ್ತುಂ ಬರ್ಪಂ
ಗರುಡಧ್ವಜನಸುರಮರ್ದನಂ [೪]ಕೇಳರಸಾ[೪] ೬೫

೧-೧ ಕುಲೋತ್ತುಂಗ (ದಾ). ೨-೨ ಕ। ಕ್ಕಸರಕ್ಕಸನವನೆ ನಿರುತಿ ನಿರುತಂ ದನುಜಾ (ಯು); ಕ। ರ್ಕಶರಕ್ಕಸನವನೆ ನಿರುತಿ ನಿರುತಂ ದನುಜಾ (ಬೆ ದಾ ಕೊ); ಕ। ರ್ಕಶನವನೇ ನಿರುತಿಯಿಾಕ್ಷಿಸಸುರಾಧೀಶಾ (ಅ). ೩-೩ ವರಣಕಿರಣವರಣಂ (ಶಾ). ೪-೪ ಕೇಳಸುರಾ (ಶಾ ಕ ಅ ದಾ ಗೊ).

[1]ಸುತ್ತಿರ್ದ ತಳೆಯ[1] ದಿವಿಜರ
ಮೊತ್ತದ ಗಂಧರ್ವಕುಲದ ನಡುವೆ ವಿಳಾಸಂ
ಬೆತ್ತತಿಸಂಭ್ರಮದಿಂದೆ ಬ
ರುತ್ತಿರ್ಪಂ ಹಂಸವಾಹನಂ ಚತುರಾಸ್ಯಂ ೬೬

ಎಂದು ತಾರಕಾಸುರಂಗೆ ಭಾರ್ಗವಂ ಬೇಱೆವೇಱೆ ಮಾಱೊಡ್ಡಿ ಮಿಾಱಿ ನಿಂದ ಗೀರ್ವಾಣಮುಖ್ಯರಂ ತೋಱುತ್ತಿರ್ಪ ಸಮಯದೊಳಮರಪತಿ ಸಮರಕ್ಕೆ ಸನ್ನದ್ಧಮಾದ ತನ್ನ ಬಲಕ್ಕೆ ಸನ್ನೆದೋಱೆ ಹೊಯ್ವ ನಿಸ್ಸಾಳದ ಭೇರಿಯ ತಂಬಟದ ಚಂಬಕದ ವೀರವೃಂದದ ದೌಡೆಯ ಪಟಹದ ಢಕ್ಕೆಯ ಧವಳಶಂಖದ ಜವಳಿಗಾಳೆಯ ತಿತ್ತಿರಿಯ ಕಿನ್ನರಿಯ ಹೊನ್ನ [2]ಬೊಂಬುಳಿಯ[2] ರನ್ನದ ಕೊಂಬಿನ ಕೋಳಾಹಳಂ ನೆಗಳೆ ಮುಸುಗಿ ಬೊಬ್ಬಿಟ್ಟು ದೆಸೆದೆಸೆಗೆ ಪರಿದು ಮೂದಲಿಸಿ ಮುಂಗುಡಿಗೆವಱೆ ಮೊಗ್ಗರಂಬೊಯ್ದುಗ್ಗಲಿಸಿ ನಡೆದು ಬಗ್ಗಿಸಿ ಬಯ್ದೊಗ್ಗುಗೆಡದೆ ಮುಂಕಣಿಸಿ ಭೋಂಕನೆ ನೂಂಕಿ ಪದಾತಿಬಲಂ ಪಡಿತಳಿಸಿ ರಥವ್ರಾತಮುಂ ತುರಂಗಸಂಘಮುಂ ಗಜಘಟಾಪಟಳಮುಂ ಸಂಗಡಿಸಿ ಪಿಂಗದೊತ್ತರಿಸಿ ತನಗಿದಿರಂ ಬರ್ಪ ಚತುರಂಗಬಲದ ಭಾರದುರವಣೆಯುಂ ತಾರಕಾಸುರಂ ಕಂಡು ಕೋಪಮನೆಡೆಗೊಂಡಾಸ್ಫೋಟಿಸಿ ಬಾಹಾಸ್ಫಾಲನಂಗೆಯ್ದು ಗಜಱಿ ಗರ್ಜಿಸಿ ಗದ್ದುಗೆವೊಯ್ದು ದರ್ಪ ಪೊರ್ದಿ ನಿಂದು ಮಿಕ್ಕು ಮಿಾಱುವ ರಕ್ಕಸಪಡೆಗೆ ಕಾಯ್ದು ಕಡುಕೆಯ್ದು ಮೆಯ್ದೋಱಿ ಕೆಯ್ವಿಾಸಿದಾಗಳ್,

ಚಂಪಕ

ಚರಣದ ಧೂಳಿ ಬಾಂದೊಱೆಗೆ ಬಾಸಣಮಾಗಿರೆ ಹೇಪಿತಂ ದಿಶಾ
ಕರಿಗಳನೆಳ್ಚೆ ಬೃಂಹಿತಮಜಾಂಡಮನಾಂತಿರೆ ಚೀತ್ಕೃತಂ ಧರಾ
ಧರಮು[3]ನದಿರ್ಪೆ ತಾಗಿದು[3] ಪದಾತಿ ಪದಾತಿಯೊಳಶ್ವಮಶ್ವದೊಳ್
ಕರಿ ಕರಿಯೊಳ್ ರಥಂ ರಥದೊಳದ್ಭುತಮಾಹವಭೂಮಿಗಪ್ಪಿನಂ ೬೭

ಅಂತು ತಾಗಿದಾಗದಳ್

೧-೧ ಸುತ್ತಿಡಿದ ಕಳೆಯ (ಅ). ೨-೨ ಬೊಬ್ಬುಳಿಯ (ಶಾ ಕ). ೩-೩ ನಮುಚಿಗೆ ತಾಗಿತು (ಕ).

ಚಂಪಕ

ಬೆರಸಿ ಪದಾತಿ ನೆಕ್ಕೆ ನೆರಿಲೆಂಬ [1]ನೆಳಿಲ್ ನೆಳಲೆಂಬ[1] ಘಾರು ಘ
ರ್ಘರ ಘರಿಲೆಂಬ ದೊಪ್ಪುಧಡಲೆಂಬ ಬುದಿಲ್ ಬುದಿಲೆಂಬ ಸಂಭ್ರಮಂ
ನೆರೆದು ಖಣಿಲ್ ಖಟಿಲ್ ದೊಗಹು ಧೊಕ್ಕು ದುಡುಮ್ಮು ತಟಿಲ್ ನೆಟಿಲ್ ಪಟಿಲ್
ಗರಿಗರಿಲೆಂಬ ನಿಷ್ಠುರರವಂ ಮಿಗೆ ತಳ್ತುಱಿದತ್ತು ಯುದ್ಧದೊಳ್ ೬೮

ಅನಂತರದಲ್ಲಿ,

ಚಂಪಕ

ಗಿರಿಗಿರಿಯೊಳ್ ಪಳಂಚುವವೊಲೆಯ್ದಿ ರಥಂ ರಥದೊಳ್ ಪಳಂಚೆ ಸೂ
ತರ ರಥಚಕ್ರಸಂಚಯದ ಕಾರ್ಮುಕವೀಥಿಯ ಮುಕ್ತಮಾರ್ಗಣೋ
ತ್ಕರದ ವಿಶಾಲಹುಂಕೃತಿ ಸಮುದ್ಧತಜೀತ್ಕೃತಿ ಚಾರುಟಂಕೃತಿ
ಸ್ಫುರಿತನವೀನಭೀಂಕೃತಿ ಚಮತ್ಕೃತಿಯಾಯ್ತು ಮಹಾಜಿರಂಗದೊಳ್ ೬೯

ಅಂತು ತಾಗಿದ ರಥಪ್ರತಾನದ ಕಾಳೆಗಮಂ ಕಂಡು,

ಚಂಪಕ

ಜಳಧಿತರಂಗಸನ್ನಿಭತುರಂಗಬಲಂ [2]ಮುಳಿದೇಱಿ[2] ವಾಹಕಾ
ವಳಿಯ ನಿಶಾತಖಡ್ಗದ ಖಣಿಲ್ ಖಟಿಲೆಂಬ ಮಹಾರವಂ ಮುಖೋ
ಚ್ಚಳತರವಂ ಖುರೋದ್ಗತರವಂ ಕಳಕೋಚ್ಚರವಂ ಕಶಾರವಂ
ಬಳಸಿ ನಭಃಸ್ಥಲಕ್ಕೆ ಬಳೆಯುತ್ತಿರೆ ತಾಗಿದುದಾಜಿರಂಗದೊಳ್ ೭೦

ಚಂಪಕ

ನೆರೆದುಬುಬೆಂಬ ಕಟ್ಟಿದಿರ ತಟ್ಟಿನ ರಾವುತರೊಳ್ ಕಡಂಗಿ ಮಂ-
ಚ್ಚರಿಸಿ ಮರಳ್ದು ಮೂದಲಿಸಿ ಕೂರಸಿಯಿಂ ತಲೆ ಪಾಱೆ ಬೀಳ್ವನಂ
ಸರಿಬೆಸನಾಗಿ ಪೊಯ್ಯೆ ತಲೆ ಮಾರ್ತಲೆಯೊಳ್ ನಿಮಿರ್ವಟ್ಟೆಯಟ್ಟೆಯೊಳ್
ಹರಿಹರಿಯೊಳ್ ಪಳಂಚೆ ಪೊಸತಾದುದು ಸಂಗರರಂಗಭೂಮಿಯೊಳ್ ೭೧

ಆ ಕಾಳೆಗದ ಕಡುಪಂ ಚಂಡಗಜಾರೋಹಕರ್ ಕಂಡು,

೧-೧ ನಿಳಿಲ್ ನಿಟಿಲೆಂಬ (ಕಾ ಬೆ ಕ). ೨-೨ ಮುಳಿದೇಱಿ (ದಾ); ಮುಳಿದೆತ್ತಿ (ಕಾ); ಮುಳಿದೆಯ್ದಿ (ಅ).

ಉತ್ಪಲ

ಮುಂಕಣಿಸುತ್ತೆ ಚಪ್ಪರಿಸುತುಂಗುಟದಿಂದೊದೆದಾರ್ದು ಸಾರ್ದು ಕೂ
ರಂಕುಸಮಿಟ್ಟು ಭೈ ಭಲರೆ ಭೈಯೆನುತುಂ ಕಡುಪಿಂದೆ ನೂಂಕೆ ನಿ
ಶ್ಶಂಕತೆಯಿಂದೆ ತೂಳ್ದು ಘಟೆಯೊಳ್ ಘಟೆ ಜೋಡಿಸಿ ದಂತಜಾಲದೊಳ್
ಭೋಂಕನೆ ಪೊಣ್ಮೆ ತೋರಕಿಡಿ ಸೂಸೆ ಕಱುತ್ತುಱೆ ತಾಗಿತಾಜಿಯೊಳ್ ೭೨

ಆಗಳ್,

ಭರಿಕೆಯ್ ಭರಿಕೆಯ್ಯೊಳ್ ನಿ
ಷ್ಠುರದಂತಂ ದಂತದೊಳ್ ಮುಖಂ ಮದಮುಖದೊಳ್
ವರಜೋದರ್ ಜೋದರೊಳೊ
ತ್ತರಿಸಿದರಾರೋಹಕರ್ಕಳಾರೋಹಕರೊಳ್ ೭೩

ಮುಂತಿದಿರೊಳ್ ನೂಂಕಿದ ಮಾ
ವಂತರ ಗಳಗರ್ಜನಕ್ಕೆ ಕಡುಮುಳಿಯುತ್ತು
ತ್ತ್ಯಂತಂ ಪೊಣ್ಮಿತು ದಂತಾ
ದಂತಿ ನಖಾನಖಿಯೆನಿಪ್ಪ ಕಾಳೆಗಮಾಗಳ್ ೭೪

ಅಂತು ಪೋಗದೆ ನಿಂದು ತಾಗಿ ತಳ್ತಿಱಿದು ರಕ್ಕಸವಡೆಯೊಳ್ ಮಿಕ್ಕು ಮಿಱುವ ದೇವರ್ಕಳ ದೆಖ್ಖಾದೆಖ್ಖಿಯ ಕಾಳೆಗಮಂ ಕಂಡು ಕಡುಮುಳಿದು ತಾರಕಾಸುರಂ ವಾರಣಾರೂಢನಾಗಿ ತನ್ನ ಕೆಲಬಲದ ಪಿಂತಣ ಮುಂತಣ ಚತುರಂಗಬಲಂ [1]ಬೆರಸಿ ಬಿಲ್ಲನುಗಿದು[1] ನಿಲ್ಲದೆ ನೂಂಕಿದಾಗಳ್,

ಚಂಪಕ

ಅರರೆ ಚತುರ್ಬಲಂಬೆರಸು ಭೋಂಕನೆ ನೂಂಕಿದ ವೀರತಾರಕಾ
ಸುರನೊಳದಾವನೇಱುವನದಾವನಮರ್ಚುವನಾವ[2]ನೆಯ್ದಿ[2] ಮು
ಚ್ಚರಿಸುವನಾವನೊಡ್ಡುವನದಾವನೊಡರ್ಚುವನಾವನಾಂತು ನಿ
ತ್ತರಿಸುವನಾವನಜ್ಜೆ ತಲೆದೋರ್ಪನದಾವನಿದಿರ್ಚಿ ತಾಗುವಂ ೭೫

ಎಂಬ ಸಂಭ್ರಮಮಂತರಿಕ್ಷದೊಳೀಕ್ಷಿಪ ಯಕ್ಷಕುಲದೊಳ್ ನೆಗಳೆ,

೧-೧ ಬೆರಸು (ಕಾ); ಬೆರಸೊಲ್ಲನುಲಿದು (ಬ); ಬೆರಸೆಲ್ಲರಂ ನುಲಿದು (ಯು) ಬಲಂಬೆರ-
ಸೂಲವಿಂ (ಬೆ ಕೊ) ೨-೨ ನೆಯ್ದೆ (ಕಾ).

ಚಂಪಕ

ಕುಳಿಕನ ಕೂರ್ಪೊ ಬಾಡಬನ ತೀವ್ರತೆಯೋ ಸಿಡಿಲೇಳ್ಗೆಯೋ ದವಾ-
ನಳನ ಪೊಡರ್ಪೊ ಭೈರವನಳುರ್ಕೆಯೊ ಕಾಲನ ಕಾರ್ಪೊ ತದ್ದಿಶಾ-
ನಿಳನತಿವೇಗಮೋ ಪರಿವ ಮೃತ್ಯುವಿನುಗ್ರತೆಯೋ ಮಹಾಲಯ-
ಜ್ವಲನನ ದಾಳಿಯೊ, ತಿಳಿಯೆ ಪೇಳೆನೆ ನೂಂಕಿದನುಗ್ರತಾರಕಂ ೭೬

ಅಂತು ನೂಂಕಿದತುಳಬಳವೀರತಾರಕನ ಚತುರಂಗಬಲದುರವಣೆಗಿರಲಾಱದೆ ಸುರರ ಪದಾತಿಬಲಂ ಪರಿಭವಂಬಡೆದು ರಥಾನೀಕಂ ವಿರಥಮಾಗಿ [1]ತುರಂಗಕುಲಂ[1] ತರಹರಿಸಲಾಱದೆ ಗಜದೊಡ್ಡು ಗಂಡುಗೆಟ್ಟು ಬೆಂಗೊಟ್ಟು ನಿಲ್ಲದೋಡಿ [2]ಕಲೆಯುಂ ಕವಿಯುಮಾಗೆ[2],

ಉತ್ಪಲ

ಕಂಡತಿವೀರತಾರಕನಣಂ ಪರಿಹಾಸಮನಾಳ್ದು ಮಾಱಿ ಬೆಂ-
ಕೊಂಡು ಭಯಾಕುಳವ್ರಜದ ಬೆಂಬಳಿಯಂ ನೆಱೆಬಿಟ್ಟು ನಿಂದು ವೇ-
ದಂಡಮನೋಜೆಯಿಂ ತಿರುಪಿ ನೂಂಕಿ ಮರಳ್ದು ರಣಾಗ್ರರಂಗಭೂ-
ಮಂಡಳಮಂ ನಿರೀಕ್ಷಿಸುತೆ ಪೋದನಪಾರಗಭೀರವಿಕ್ರಮಂ ೭೭

ಅಂತು ಪೋಗೆ,

ಉತ್ಪಲ

ಇತ್ತಲನಂತರಂ ತ್ರಿದಶರೋಡಿ ಸುರಾದ್ರಿಹರಾದ್ರಿಯೊಳ್ ಭಯಂ
ಬೆತ್ತು ಮಹಾಗುಹಾವಳಿಗಳಂ ಘನಗಹ್ವರಘೋರವೀಧಿಯಂ
ಸುತ್ತಿ ದರಣ್ಯದಂಧತಮಮಂ ತವಕಂ ಮಿಗೆ ಸಾರ್ದು ಪೊಕ್ಕು ಶೌ
ಯೋ೯ತ್ತರರಿರ್ದರಪ್ರತಿಮತಾರಕಸಂಗರರಂಗಭಂಗಿತರ್ ೭೮

[3]ಓಡಿದರಡಗಿದರಗಿದರ್[3]
ಕೋಡಿದರನುಗೆಟ್ಟರಳ್ಕಿದರ್ [4]ಸೊರ್ಕೞಿದರ್[4]
[5]ಬಾಡಿದರಂಜಿ[5]ದರಮರರ್
ಪಾಡಳಿದರ್ ಮಣಿದರಳ್ದರಳಿದರ್ ಕಳಿದರ್ ೭೯

೧-೧ ಚತುರಂಗಬಲಂ (ಅ) ೨-೨ ಕಲಿಯುಮಾಕಲಿಯುಮಾಗೆ (ಬ); ಯುಂ ಕಲ್ಲಿಯುಂ ದಲ್ಲಿವಿಲ್ಲಿಯುಮಾಗೆ (ಕಾ) ಚೆಲ್ಲಾಪಿಲ್ಲಿಯುಮಾಗಿ (ಯ); ಯುಂ ತಲ್ಲೆಯುಂ ದಲ್ಲಿವಿಲ್ಲಿಯುಮಾಗಿ (ಬೆ); ಕತ್ತಲೆಯುಂ ಕವಿಯುತಮಾಗೆ (ಅ); ಕಂಗೆಟ್ಟೆಲ್ಲಿಯುಂ ಕಲ್ಲಿಯುಮಾಗೆ(ದಾ). ೩-೩ ಓಡಿದರಂಜಿದರಗಿದರ್ (ಮ ಬ ಯ ಕ ಡ ಸೆ); ಓಡಿದರಂಜಿದರಡಗಿದರ್ (ಅ). ೪-೪ ಸೊರ್ಕಳಿದರ್ (ದಾ ಕ). ೫-೫ ಬಾಡಿದರಳ್ಕಿ(ಬ); ಬಾಡಿದರಳ್ಕಿ (ದಾ ಕೊ ಕ).

ಇಂತು ಭಯಾಕುಳರಾಗಿ ಮೇರುಗಿರಿಯ ರಜತಾದ್ರಿಯ ಗುಹೆಗಹ್ವರಂಗಳಂ ಪೊಕ್ಕು ಗಾಡಿಗೆಟ್ಟು ಗಂಡುಡುಗಿರ್ದ ದೇವರ್ಕಳನಲ್ಲಲ್ಲಿ ಕರೆದು ಮೆಲ್ಲಮೆಲ್ಲನೆ ನೆರೆಪಿ ಸುರಕುಲಂಬೆರಸು ಹಿರಣ್ಯಗರ್ಭನುಂ ಜಿಷ್ಣುವುಂ ವಿಷ್ಣುವಿರ್ದ ತಾಣಕ್ಕೆ ಜಾಣಿಂ ಬಂದು ಕಂಡು ಕುಳ್ಳಿರ್ದ ಕಾಳೆಗದಿಂ ನೊಂದಾಳೋಚನಂ[೧]ಗೆಯ್ವಲ್ಲಿ[೧] ಮುನ್ನಿನಂತಲ್ಲದಿನ್ನೊರ್ಮೆ ಸಂಗರಮಂ ಸಮಕಟ್ಟಲ್ವೇಳ್ಕುಮಾನಿರ್ದಪೆಂ ನೀವಿರ್ದ ಪಿರಜನಿರ್ದಪನಂಜಲೇತರ್ಕೆಂದು ಶಕ್ರಂ ಮಿಕ್ಕು ನುಡಿಯೆ,

ನೆನೆದು ವಿಚಾರಿಸಿ ನಿಶ್ಚಯ
ಮನನತುಳೋಪಾಯಕೋವಿದಂ ಸ್ಥಿತಿಕರ್ತಂ
ವನಜಾಕ್ಷಂ ಘನನಿರ್ಮಲ
ನನಾಗತಜ್ಞಾನಿ ಶಕ್ರನೊಡನಿಂತೆಂದಂ ೮೦

ಆನಿರ್ದುಂ ತಾನಿರ್ದುಂ
ನೀನಿರ್ದುಂ ಮೂವರಿರ್ದುಮೇನಾದುದು [೨]ಪೇಳ್
ನಾನಾನಿಷ್ಠುರತಾರಕ[೨]
ಸೇನಾಮುಖನಿಖಿಳಭುವನ[೩]ವಿಧ್ವಂಸನದೊಳ್[೩] ೮೧

ಅಂತುಮಲ್ಲದೆ,

ಅಯ್ದುಂ ಮುಖದ ಭವಂಗಿ
ರಯ್ದುಂ ಭುಜದೀಶ್ವರಂಗೆ ಷಣ್ಮುಖನುದಯಂ
ಗೆಯ್ದೇಳನೆಯ ದಿನಂ ಬಂ
ದೆಯ್ದಿದೊಡತ್ಯುಗ್ರ ತಾರಕಾಸುರನಳಿವಂ ೮೨

[೪]ಎಂದಬ್ಜಜನಿತ್ತಾದೇ
ಶಂ[೪]ದಿಟಮದುಕಾರಣಂ ಕಪರ್ದಿಯ ತಪಮಂ
ಭಂದಂಗೆಡಿಸುವ ವೀರನ
[೫]ನಿಂದೆ[೫] ಪಿಚಾರಿಸಲೆ ವೇಳ್ಪುದಿಂತಿದೆ ಕಜ್ಜಂ ೮೩

೧-೧ ಗೆಯ್ಯು ವಿಚಾರಿಸುವಲ್ಲಿ (ಶಾ ಕ ಜಿ ಯ). ೨-೨ ಪೇ । ಳಾ ನಿಷ್ಠುರತರತಾರಕ (ಶಾ ಕ). ೩-೩ ವಿಧ್ವಂಸಕನೊಳ್ (ಅ ಕ). ೪-೪ ಎಂದಬ್ಜಾಕ್ಷನಿತ್ತುಪದೇಶಂ (ದಾ ಸೆ). ೫-೫ ನಿಂತು (ಶಾ ಬೆ).

ಕಾಳೆಗದ ಮಾತನಾಡದಿ
ರಾಳಾಪಂಗೊಳ್ಳನಸುರನತಿಬಳನದಱಿಂ
ಸೂಳಿಯ ತಪಮಂ ಚಲಿಯಿಸು
ವಾಳಾಪಂ[೧]ಗೆಯ್ವುದುಚಿತಕಾರ್ಯಂ ಶೌರ್ಯಂ[೧] ೮೪

ಎಂದು ಚಕ್ರಧರಂ [೨]ಶಕ್ರನೊಳ್ ತಕ್ಕಳಿದು[೨] ನುಡಿಯೆ ತಮ್ಮೊಳೊಂದಾಗಿ ವಚನನಿಚಯದಿಂ ವಿಚಾರಿಸಿ ನೋಡಿ ಸಕಳಜಗಜ್ಜನವಶೀಕರಣಪಟುತರಕುಸುಮ ಕೋದಂಡಟಂಕಾರಪ್ರತಾಪಮುಖಂ ಮಕರಪತಾಕನೆಂದಚ್ಚರಿಮಿಗೆ ನಿಶ್ಚಯಿಸಿ ಪಂಚೇಶುವಿಂದಲ್ಲದೆ ಪಂಚಮುಖನ ತಪಂ ಸಂಚಲಿಸದೆಂಬ ಸಂಚಮನಱಿದು ಕಾಮನಂ ಕರೆಯಿಸಲ್ವೇಡಿ ಸರಸಿಜಾಕ್ಷಂ ಪುರಂದರನ ಮುಖಮಂ ನೀಡಾಗದೆ ನೋಡಿದಾ ಪ್ರಸ್ತಾವದೊಳ್,

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೮೫

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ
ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕ
ರಂದಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ
ಶ್ರೀಗಿರಿಜಾಕಲ್ಯಾಣಮಹಾಪ್ರಬಂಧದೊಳ್
ತಾರಕಾಸುರಯುದ್ಧವರ್ಣನಂ ಷಷ್ಠಾಶ್ವಾಸಂ

೧-೧ ಗೆಯ್ವಕಾರ್ಯಮುಚಿತದ ಶೌರ್ಯರ (ಕಾ ಕ). ೨-೨ ಶಕ್ರನೊಳಳ್ಕಳಿದು (ಬಿ).

ಸಪ್ತಮಾಶ್ವಾಸಂ

ವಸಂತೋದ್ಯಾನಮದನಪ್ರಯಾಣಪ್ರಾರಂಭವರ್ಣನಂ

ವರಸುರನರೋರಗವ್ರಜ-
[1]ಕಿರೀಟಪದಯುಗನತಿಸ್ವತಂತ್ರಂ ಶರ್ವಂ[1]
ಹರನಧಿಕಾಕ್ಷಂ ಸಲೆ ಭ-
ಕ್ತಿರಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ೧

ಪುರುಹೂತಂ [2]ಹರಿ ನೋಡಿದ[2]
ಪರಿಯಂ ತಾನಱಿದು ಮಂತ್ರಿವಾಚಸ್ಪತಿಯಂ
ಕರೆದೀಗಳೆ ಕಾಮನನತಿ-
ಭರದಿಂದೊಡಗೊಂಡು ಬರ್ಪುದೆಂದಿಂತೆಂದಂ ೨

ಇರ್ದೀ ತೆಱನಿದು ನೀನಱಿ-
ದಿರ್ದದೆ ನಿನಗಱಿಪಲಿಲ್ಲ ಕಾರ್ಯ[3]ಸ್ಥಿತಿಯಿಂ[3]
ಸಾರ್ದತಿವೇಗದೆ ಶೂರ್ಪಕ-
ಮರ್ದನನಂ ತರ್ಪುದಾವ ತೆಱದಿಂ [4]ಜೀವಾ[4] ೩

೧-೧ ಸುರುಚಿರಕೋಟೀರಪಾದಪದ್ಮಂ ಶರ್ವಂ (ಅ). ೨-೨ ಹರಿಯಾಡಿದ (ಕಾ ಬೆ). ೩-೩ ಸ್ಥಿತಿಯಂ (ಅ ಗ). ೪-೪ ಜವದಿಂ (ಓ).

ಎಂದು ಬೆಸಸುತ್ತುಮಿಱಿ ನಡೆ
ತಂದಂ ಗುರು ಮದನನಲ್ಲಿಗಮಲಿನದೇಹಂ
ಸಂದ ಕಳಾವ್ಯೂಹಂ ಗುಣ
ಸಂದೋಹಂ ಗಗನಗಮನಪುಷ್ಪಕವಾಹಂ ೪

ನಡೆತಂದು ಮುಂದೆ ಜೆಲ್ವಿಂ
ದಿಡಿದ ರತೀಶ್ವರನ ರಾಜಧಾನಿಯನೊಳಪೊ
ಕ್ಕೆಡೆಯುಡುಗದೆ ನೆರೆದರಮನೆ
ಗೆಡೆಯಾಡುವ ಲಲನೆಯರ್ಕಳಂ ನೋಳ್ಪಾಗಳ್ ೫

ತೆಗೆದೆಸುವ ಪುಷ್ಪಚಾಪನ
ಮುಗುಳಂಬಿಂಗೆಣೆಯೆನಿಪ್ಪ ವಧುವೊರ್ವಳ್ ಮೆ
ಲ್ಲಗೆ ಬಂದಳ್ ಮನ್ಮಥ೧ನೋ
ಲಗಕ್ಕೆ೧ಶತಪತ್ರದಾತಪತ್ರದ ನೆಳಲೊಳ್ ೬

ನೇವುರದ ಮುದ್ರಿಕೆಯ ಮಧು
ರಾವರಣಧ್ವನಿ ಬೃಹಸ್ಪತಿಯ ಕಿವಿವುಗೆ ಸದ್
ಭಾವಕಿಯೊರ್ವಳ್ ಬಂದಳ್
ಕಾಪನ ಸಭೆಗೆಸೆವ ರತ್ನಮುಕುರದ ತೆಱದಿಂ ೭

ಬಿಸರುಹದಳದೊಳ್ ಚಂದನ
ರಸಮಂ ನೆಱೆ ತೀವಿಕೊಂಡು ಮೆಲ್ಲಡಿಯಿಡುತುಂ
ಪೊಸಜವ್ವನೆ ನಡೆತಂದಳ್
ಕುಸುಮಾಸ್ತ್ರನ ಗಟ್ಟಿವಳ್ತಿಯೊರ್ವಳ್ ೨ಬನದಿಂ೨ ೮

ಇಂಬಾಗಿರೆ ವರಹಿಮಕರ
ಬಿಂಬದ ಬೆಂಬಳಿಯೊಳಳಿವ ತಣ್ಗದಿರ್ಗಳೆನಲ್
ಪೊಂಬಾಳೆಯ ೩ಚಮರಮದಾ೩
ಲಂಬಿಸೆ ಪಿಡಿದೊರ್ವ ಚಂದ್ರಮುಖಿ ನಡೆತಂದಳ್ ೯

೧-೧ ನೋ। ಲಗಕಂ (ಅ). ೨-೨ ಭರದಿಂ (ಕಾ ಕ ಅ ಬ ಡ ಓ). ೩-೩ ಚಾಮರಮಾ (ಅ).

ಪ್ರಬಳನವರತ್ನರೋಚಿಃ-
ಶಬಳಿತದರ್ಪಣಮನಾಂತು ಮುಂದೆಯ್ತಂದಳ್
ನಿಬಿಡತರಸುಕರಪುಷ್ಪ-
ಸ್ತಬಕದ ಬೆಳ್ಗೊಡೆಯ ನೆಳಲೊಳಂಗನೆಯೊರ್ವಳ್ ೧೦

ಅಂತವರ ನಿರತಿಶಯಸ್ವಭಾವಸೌಂದರ್ಯಸೌಕುಮಾರ್ಯಂಗಳಂ ಕಂಡು ಬೃಹಸ್ಪತಿ ಮನದೊಳಳಿಪುತ್ತುಂ ಬುದ್ಧಿಯೊಳ್ ಬೆದಱುತ್ತುಂ ಚಿತ್ತದೊಳ್ ಕೌತು-ಕಂಬಡುತ್ತುಂ ನಡೆತಂದವರಮನೆಯ ಮುಂದೆ ಪುಷ್ಪಕಮನಿಳಿದೊಪ್ಪುವ ದರ್ಪ ಭೂಷಣಮೆನಿಸಿದ ದರ್ಪಕಾಸ್ಥಾನಮಂ ಪುಗು[೧]ತರ್ಪಲ್ಲಿ,[೧]

ಸ್ರಗ್ಧರೆ

ಮುಂತಿರ್ದಂ ಪುಷ್ಪಮಾಲಾನಿಚಯರಚಿತಸೌರಭ್ಯಲೋಲುಪ್ತಭೃಂಗೀ-
ಸಂತಾನಾಬದ್ಧಧಾರಾನಿಳಯವಳಯಮಧ್ಯಪ್ರದೇಶಪ್ರರತ್ನಾ-
ನಂತಪ್ರದ್ಯೋತವೀಥೀಪ್ರಯುತನಿಯುತ ಸಿಂಹಾಸನಾರೂಢತಾನಿ-
ಶ್ಚಿಂತಂ ಶೃಂಗಾರ[೨]ಕಾಂತಂ[೨]ಜನವಿನುತರತೀನಾಥನಾನಂದಯೂಥಂ ೧೧

ಅಂತಿರ್ದ ಮದನಭೂಭುಜನಂ ತ್ರಿದಶಾಚಾರ್ಯಂ ದೂರದಿಂ ನಿರೀಕ್ಷಿಸುತ್ತುಂ ಬರ್ಪಾಗಳ್ ಮುಂದೆ ಮಗಮಗಿಪ ಕದಂಬಕುಸುಮದ ಪೊಸಗಂಪಿಂ ಪೊರೆದು ಸಾರ್ವರ್ತುಕಮೆನಿಸಿ ಕೊರ್ಬಿ ಬೆಳೆದ ಕೇಳೀವನದ ನಡುವೆ ನಿಂದ ನೀಲದ ನೆಲೆ ಗಟ್ಟಂಗೆ ನೆಲೆಯಾದ ಮುತ್ತಿನ ಬೆಳಗಿನ ಬೆಳ್ದಿಂಗಳ ಭಿತ್ತಿಗಳ ಮೇಲೆ ತರತರದಿಂ ಪರಪಿದ ಕೈರವದ ನುಣ್ಣೆಸಳ ಸಣ್ಣ ಜಂತೆಗಳನಾಂತ ಕೇತಕಿಯ ನೀಳ್ದ ದಳದ ಪೆಟ್ಟಿಗೆಗಳೊಟ್ಟಜೆಗಳಿಂ, ಮತ್ತಂ ಮುತ್ತಿ ಮತ್ತವಾರಣಮಂ ನವೀನಗ್ರಂಥದಿಂ ತವೆ ಪೊರೆದ ದವನದ [೩]ದಾರವಂದದೊಳಜ್ಯೋತಿ ಬೆಚ್ಚಂತಿರ್ದು[೩] ಲಾಮಂಚದ ಮುಚ್ಚುಳಮಂ ಸೆವ್ವಿ ನಿಂದಿರ್ದ ಪಡಿಯಱಗೋಗಿಲೆಗಳಿಂ, ಮತ್ತಂ ರವಿಕರಕೆಡೆ-ಗುಡದಿಡಿದಿಡಿದು ಸುತ್ತಿ ಮುತ್ತಿ ಕವಲಿಱಿದು ಕವಿದ ಲತಾಂತಜಾಳದ ತಳ್ತ ನೆಳಲಿಂ ಕಳ್ತಲಿಸುವ ಓಲಗಸಾಲೆಯೊಳ್ ಬಂದುಗೆಯ ಬಣ್ಣದ ತಿಣ್ಣವೆಳಗುಂ ಕಣ್ಣ ಬೆಳಗುಂ ತಮ್ಮೊಳರ್ಮಡಿಸೆ ಮೆಯ್ದೋಱಿ ಕೆಯ್ದಾವಿಗೆ[೪]ವಿಡಿದಿರ್ದ[೪] ಖೇಚರಾಂಗನೆಯರಿಂ, ಕಾಮನ ರತಿಯ ನನೆಯ ಸಿಂಹಾಸನದಿಕ್ಕೆಲದೊಳ್ ನಿಂದು ಮುಗುಗವ ಪೊಂ ಬಾಳೆಯ ಸೀಗುರಿಯ ಚಾಮರಂಗಳಂ ಪಿಡಿದಿರ್ದ ಹಸ್ತಿನಿಯರಿಂ, ನೆರೆದು ನಿಂದ ಕೀರಾಳಿಗೆ ಕಾಮಾದ್ಯೈತ ಶಾಸ್ತ್ರಸೂತ್ರಮಂ ಪಾಠವೋದಿಪ ಪರಿಜ್ಞಾನದಿಂ ಮೆಱೆವ

೧-೧ ತರ್ಪಾಗಳ್ (ಅ ದಾ). ೨-೨ ಕಾಂತಾ (ಕಾ ಬೆ ಯ). ೩-೩ ದ್ವಾರಬಂಧದೊಳ್ ಜ್ಯೋತಿ ಬೆಚ್ಚಂತಿರ್ದ (ಅ). ೪-೪ ವಿಡಿದಂತಿರ್ಪ (ಕ).

ಚಿತ್ತಿನಿಯರಿಂ, ಮೇಲೆ ಬೀಳ್ವ ಕಾಮದೇವನ ಕಟಾಕ್ಷಕಂಜಿ ರತಿದೇವಿಗಡಿಗಡಿಗೆ ಕೆಯ್ಮುಗಿದು ಕೆಲಸಾರ್ದಿರ್ಪ ಶಂಖಿನಿಯರಿಂ, ಮತ್ತಂ [೧]ಶತಪತ್ರ[೧]ದೊಳಮೃತ ರಸಮನೋವಿ ತೀವಿ ಮುದದಿಂ ಪಿಡಿದಿರ್ಪ ಪದ್ಮಿನೀನಾಯಕಿಯರಿಂ, ಹಂಸೆ-ವಿಂಡಿಂಗೆ ನಡೆಗಲಿಪ [೨]ಮದಕರಿ[೨]ಯಾನೆಯರಿಂ, ನವಿಲನಾಡಿಪ ನರ್ತಕಿಯರಿಂ, ಮತ್ತಂ ಮಧುಕರಮಂಡಳಿಗೆ ಮಾರಭೂಪನ ಬಿರುದಿನೇಳ್ಗೆಗಳ ಗೀತಗೋಷ್ಠಿಯ-ನೀವ ನೂತನಗಾಯಕಿಯರಿಂ, ಶತಪತ್ರವೀಜನಸಮಾಜದಿಂ ರಥಾಂಗಮಿಥುನದ ಸುರತಶ್ರಾಂತಿಯನಾದರದಿಂದಾರಿಸುವ ಚಕ್ರಕುಚೆಯರಿಂ, ಹರಿಣಿಗಳ ಮುಳಿಸಂ ತಿಳಿಪಿ ಹರಿಣಂಗಳನೊಡಗೂಡುವ ಹರಿಣಾಕ್ಷಿಯರಿಂ, ಅಶೋಕೆಯನೊದೆದಂಕುರಮಂ ಪುಟ್ಟಿಪ [೩]ಪದ್ಮಮುಖಿಯರಿಂ[೩], ಕುರುವಕಮಂ ಪರಿರಂಭಣದಿಂ ಪೊರೆಯೇಱಿಸುವ ತರುಣಿಯರಿಂ, ಕುಸುಮರಸಗಂಡೂಷದಿಂ [೪]ವಕುಳಕುಳಮಂ[೪] ಕೋರಕಿತಂ ಮಾಳ್ಪ [೫]ಸಾರ[೫]ಮುಖಿಯರಿಂ, ಹೂವಿನ ಬಿಲ್ಲನೊಚ್ಚತಂಗೊಂಡರ್ಜಿಸುತ್ತಿರ್ಪ [೬]ನಿಡು[೬]ಪುರ್ವಿನ ನೀಱೆಯರಿಂ, ನನೆಯಂಬಂ ಕೆಯ್ಗೆಯ್ವ ಸವಿನೋಟದ [೭]ಸಾಧಾರಣೆಯರಿಂ[೭], ಮತ್ತಂ ಮಕರಕೇತನನ ಕೇತಕಿಯಲಗಂ ಪರಾಗದ ಸಾರಣೆಯೊಳ್ ಪರಿಮಳದ ಹೊಗರೆತ್ತುವಳಕುಂತಳೆಯರಿಂ, ನನೆಯ ಕಠಾರಿಯಂ ಸಿಂಗರಿಪ ಸಂಗಡದ ಮುಗ್ಧೆಯರಿಂ, ತಳಿರ ತೋಮರಮಂ ತಿರ್ದುವ ಕಳಕಂಠ ನಿನಾದೆಯರಿಂ, ಕೈರವದ ಸಬಳಮನೊಪ್ಪವಿಡಿವ ಕುಮುದಾಕ್ಷಿಯರಿಂ, ಚಕೋರಿಯ ಕುಳಕ್ಕೆ ಬೆಳ್ದಿಂಗಳನೂಡುವ ರೋಹಿಣೀವಿಳಾಸಿನಿಯರಿಂ, ಪೂಗೊಳನಂ ಸಾಗಿಪ [೮]ಭೋಗವತಿಯರಿಂ,[೮] ಬನಮಂ ಬಳೆಯಿಸುವ ವನಲಕ್ಷ್ಮಿಯರಿಂ, ಮತ್ತಂ ವಿರಿಂಚಿಯ ಹಾಹೆ ಕಾಲೊಳೆಳಲೆ ನಿಂದಿರ್ಪ ನಾಯಕಿಯರಿಂ, ಇಂದ್ರನ ಮೆಯ್ಗಣ್ಣ ಬಾವುಲಿಯ [೯]ದರ್ಪಾಯಿತಿಯರಿಂ,[೯] ಕುಬೇರನ ರೂಪು ನೇಪುರದೊಳೆಳಲ್ವ ಚಾಪಳೆಯರಿಂ, ಜಿತೇಂದ್ರಿಯರಂ ಗೆಲ್ವ ವಿಜಯಧ್ವಜದ ವೀರೆಯರಿಂ, ತಳಿರ ಗದ್ದುಗೆಯೊಳ್ ಕೆಳಗೆ ಕುಳ್ಳಿರ್ಪ ವಸಂತರಾಜನಿಂ, ಬೆಳ್ದಿಂಗಳ ಹಸೆಯೊಳ್ ಬಳಸಿ ಕುಳ್ಳಿರ್ಪ ಕಳಾಮಾಳೆಯರಿಂ,[೧೦]ಅರಸಾಳ್[೧೦]ಬೆಸನಂ [೧೧]ಸಾರ್ದಿರ್ಪ[೧೧] ಮಳಯಾನಿಳನಿಂ, ಕೆಲದೊಳ್ ನಿಲಿಸಿದಿಕ್ಷುಚಾಪದಿಂ, ಮಲಂಗಿಸಿದ ಪುಷ್ಪಬಾಣಂಗಳಿಂ, ಸಮಸ್ತವಸ್ತು ವಿಸ್ತಾರವಿಳಸದ್ [೧೨]ವಿಲಾಸವಿಭ್ರಮಮಂ[೧೨] ಪಡೆದು ಪರಾಗಮಂ ಪಸರಿಸುವ ಸರಸೀರುಹದೆಸಳ ತುಱುಂಗಲ ಸಿಂಹಾಸನದೊಳ್ ಸುರತರುವಂ

೧-೧ ಕಮಳಪತ್ರ (ದಾ ಕೊ ಅ). ೨-೨ ಮಧುಕರ (ಕ); ಮಂದ (ಗೊ). ೩-೩ ಮೃಡುಪದೆಯರಿಂ (ಕಾ ದಾ); ಮದಮುಖಿಯರಿಂ (ಬ). ೪-೪ ಕೋಗಿಲೆಗಳ ಕೊರಲಂ ಬಕುಳಮಂ (ಅ). ೫-೫ ಸಾರಸ (ಅ). ೬-೬ ಕುಡು (ಕಾ ಬ). ೭-೭ ರಸಾಧಾರೆಯರಿಂ (ಅ). ೮-೮ ಯೋಗಾಂಗನೆಯರಿಂ (ಅ). ೯-೯ ದರ್ಪಾಯೆಯರಿಂ (ಕಾ); ದರ್ಪೋನ್ನತಿಯರಿಂ (ಯ ಬೆ). ೧೦-೧೦ ಅರಸಾಳ್ವಿನಂ (ಕಾ). ೧೧-೧೧ ಪೊರ್ದಿರ್ಪ (ಅ ಯ ದಾ); ಪಾರ್ದಿರ್ಪ (ಬ). ೧೨-೧೨ ವಿಳಸದ್ವಿಭಾಸ (ಕಾ).

ಮಲಂಗಿ ವಸಂತನ ಮೇಲೆ ಕಾಲಂ ನೀಡಿ ಶೀತಕರನಿಂ ಶ್ರೀ ಹಸ್ತಮನೊತ್ತಿಸಿ ಕೊಳುತ್ತುಂ ನಳಿನಗುಣದುಕೂಲದ ಮಲ್ಲಗಂಟುಂ ಮೊಲ್ಲೆಯ ಮುಗುಳ ಕಂಕಣಮುಂ ಮಲ್ಲಿಗೆಯ ನನೆಯ ಹಾರಮುಂ ಬಂದುಗೆಯ ಬಾಹುಪೂರಮುಂ [1]ದಾಡಿಮೀ[1]ಬೀಜದ ಕರ್ಣಾವತಂಸಮುಂ ಚಂದನತಿಲಕಮುಂ ಶ್ಯಾಮವರ್ಣಮುಂ ಕೋಮಲಾಂಗಮುಂ ಕಣ್ಣ ಬೆಳಗುಂ ಮುಖದ ಕಾಂತಿಯುಂ ಮಿಗೆ ಸೊಗಸಂ ಮೂವಡಿಸೆ ಮೂಱುಂ ಜಗಮಂ ಮಾಱಿ ಗೆಲಲೆಂದು ಸಂಗಡಿಸಿ ಶೃಂಗಾರ ರಸಮಂಗಂಬಡೆದಂತೆ ಸುಕುಮಾರತೆ ಸಾಕಾರಂಗೊಂಡಂತೆ ಸೊಬಗು ಸಂದಣಿಸಿ ದಂತೆ ನಳನಳಿಕೆ ಬಳೆದಂತೆ ಕಣ್ಗಳ ಭಾಗ್ಯಂ ಕವಲ್ತಂತೆ ಮನೋರಥಂ ಮದ ವೇಱಿದಂತೆ ಪುಟವಿಟ್ಟ ಪುಣ್ಯಂ ಪುರುಷಾಕಾರಮಾದಂತಿರ್ದ ಕಂದರ್ಪರಾಜನ ಕಮನೀಯರೂಪಂ ಬೃಹಸ್ಪತಿಯ ಕಣ್ಗಳೊಳಪೊಕ್ಕು ಮನಮನಲ್ಲಾಡಿಸೆ ಬುದ್ಧಿ ಬೆದಱಿಯಹಂಕಾರಮಳಿದು ಚಿತ್ತಂ ಸೂಸಿ ಮದನವಿಕಾರದ ಜಮ್ಮು ಜಕ್ಕುಲಿಸಿ ಹಮ್ಮುದಂಬೋಗಿ ಜೀವಂ ಸುಖದ ಜೀವಕಳೆಯ [2]ಕಳಾಸದ[2] ಕುಣಿಕೆ ಕಳಲ್ಚಿ ತನ್ನನಱಿಯದಿದಿರನಱಿಯದೆ ಬಂದುದಂ ಮಱೆದು ಕಜ್ಜಮಂ ತೊಱೆದಿನಿತುಂ ಬೇಗಂ ಸುಖದ ಸೊಂಕಿಂದುರ್ಕುವ ಕಾಮರಸದ ತೆರೆಯೊಳ್ ತೇಂಕಾಡು ತಿರ್ದಂತಾನುಮೆಳ್ಚತ್ತು ಸಂತೈಸಿಕೊಂಡು,

ಮಱೆಯುತ್ತೆಳ್ಚಱುತುಂ ಕುಱು-
ಕುಱುಮೆಟ್ಟುತ್ತಡಿಯನೆತ್ತಿ ತಾನೆಂದಿದಿರೆಂ-
ದಱಿಯದೆ ಕಾಮವಿಕಾರಂ
ನೆಱೆ ಪತ್ತಿ ಸುರೇಂದ್ರಮಂತ್ರಿ ದಡದಡಿಸುತ್ತುಂ ೧೨

ಮೆಲ್ಲನೆ ಮೆತ್ತನೆ ನಡೆತರು-
ತಲ್ಲಲ್ಲಿಕುನುಂಗಿ ಕುರ್ಗಿ ಪಂಚಶರಂಗು-
ತ್ಫುಲ್ಲನವಕುಸುಮ[4]ಸಂಕುಳ[4]
ವಲ್ಲರಿಯಂ ಕಾಣ್ಕೆಯಿತ್ತನಮರಾಚಾರ್ಯಂ ೧೩

ಮತ್ತಮನಂತರಂ,

ಕಂಪಂ ಕೆಯ್ಕೊಳುತುಂ ಮೆಯ್
ಜೊಂಪಿಸಿ ಬೀಳ್ವಳಿನಿಕಾಯಸಹಿತಂ ಜೀವಂ
ಪೆಂಪಿನ ಸೊಂಪಿನಲಂಪಿನ
ಸಂಪಗೆಯಲರ್ದೊಂಗಲಂ ರತೀಶಂಗಿತ್ತಂ ೧೪

೧-೧ ದಾಡಿಮದ (ಅ); ದಾಡಿಮ (ದಾ). ೨-೨ [ವಿಳಾಸದ (ಶಾ). ೪-೪ ಪರಿಮಳ (ದಾ).

ಅಂತು ಕಾಣ್ಕೆಯಿತ್ತು ಕುಳ್ಳಿರ್ದ ವಾಚಸ್ಪತಿಯ ಮುಖಮಂ ಮಕರಧ್ವಜಂ ನೋಡಿ,

ಸುರಪತಿ ಸರಸಿಜಭವ ಪಂ
ಕರುಹಾಕ್ಷರ್ ಸುಖದೊಳಿರ್ದಪರೆ ತಾರಕಸಂ
ಗರಮೇನಾದುದು ಸುರಕುಲ
ಗುರುವೇ ನೀಂ ಬಂದ [1]ಕಜ್ಜಮೇನೀ ಪದದೊಳ್[1] ೧೫

ಎನೆ [2]ಗುರುವೆಂದಂ[2] ತಾರಕ
ನನುವರವಂ ಮಾಣ್ದು ಮೇರುಗಿರಿತಟದೊಳ್ ಶ
ಕ್ರನುಮಜನುಂ ಸರಸಿಜನಾ
ಭನುಮೇಕಾಂತದೊಳಗಿರ್ದು ಕಳುಪಿದರೆನ್ನಂ ೧೬

ಅತುಳತರಗುಪ್ತಕಾರ್ಯ
ಸ್ಥಿತಿಯಾಳೋಚನೆಗಳುಂಟು ನೀಂ ಬೆಚ್ಚರಮು
ಪ್ರತಿಮಂ ಕಾಮನನೊಡ[3]ಗೊಂ
ಡು ತರ್ಪುದೆನೆ ಬಂದೆನಿದೆ ಪದಂ ನಡೆ[3] ಮದನಾ ೧೭

ಎನುತುಂ ಗುರು ನುಡಿಯೆ ಸುಖಾ
ಸನದಿಂದಿದಿರೆಳ್ದು ಶಶಿವಸಂತಾದಿಗಳಂ
ಬನದೊಳ್ ಪಿಂತಿರಿಸುತೆ ಭೋಂ
ಕನೆ ರತಿವೆರಸೇಱಿ ದರ್ಪಕಂ ಪುಷ್ಪಕಮಂ ೧೮

ತಾನುಂ ವಾಚಸ್ಪತಿಯುಂ
ನಾನಾವಿಧಕಾರ್ಯಗತಿಗಳಂ ನುಡಿಯುತ್ತುಂ
ಸಾನಂದಂ ಹರಿಯಜರಾ
ಸ್ಥಾನ[4]ನಿಕೇತನದ ಮುಂದೆ[4] ಬಂದಿಳಿತಂದರ್ ೧೯

೧-೧ ಕಾರ್ಯವೇನೀ ಪಥದೊಳ್ (ದಾ). ೨-೨ ಗುರು ನುಡಿದಂ (ದಾ ಕೊ). ೩-೩ ಗೊಂ। ಡತಿವೇಗದೆ ಬರ್ಪುದೆನಲ್ ಬಂದೆಂ (ಕಾ ಬೆ ಯು ಗೊ); ಗೊ। ಳ್ಪುತೆ ಬರ್ಪುದೆನಲ್ಕೆ ಬಂದೆನೀ ಪದಂ (ಅ). ೪-೪ ನಿಕೇತನಮುಖಕ್ಕೆ (ದಾ ಕೊ).

ಉತ್ಪಲ

ಬಂದೊಳಪೊಕ್ಕು ಚಕ್ರಿಗೆ ವಿರಿಂಚಿಗೆ ವಜ್ರಧರಂಗೆ ವಂದನಾ
ನಂದಶರೀರರಾಗಿ ಕುಸುಮಾಯುಧನುಂ ರತಿಯುಂ ಪ್ರಸಿದ್ಧ ಸಂ
ಕ್ರಂದನಮಂತ್ರಿಯುಂ ಮುದದೆ ಕುಳ್ಳಿರೆ ಕಾಮನನೀಕ್ಷಿಸುತ್ತೆ ಗೋ
ವಿಂದನನಿಂದಿತಂ ನುಡಿದನಾತ್ಮಗತಾರ್ಥವಿಚಾರಸಾರಮಂ ೨೦

ಕೇಳಲೆ ದರ್ಪಕ ತಾರಕ
ನೊಳಗದಿಂದುರಗ ಮರ್ತ್ಯ ನಿರ್ಜರಲೋಕಂ
ಗೋಳಂಡೆಗೊಳುತುಮಿದೆ ಮೀ
ರಾಳಪಂಗೊಳ್ಳದಸುರನತ್ಯಧಿಕಬಲಂ ೨೧

ಆರಿಂದಂ ಸಾಯಂ ತ್ರಿಪು
ರಾರಿಗೆ ಪುಟ್ಟಿದ ಕುಮಾರನಿಂದಲ್ಲದಮಂ
೧ತೀರಂ೧ ತಾರಕನಂತದು
ಕಾರಣದಿಂ ಮಾಳ್ಪ ಕಜ್ಜಮುಂಟೀ ಪದದೊಳ್ ೨೨

ಹರನತ್ಯಧಿಕತಪೋವಿ
ಸ್ತರಮುನನಾಗಿರ್ದಪಂ ಮದನ ತತ್ತಪಮಂ
ಕೊರಗಿಸಿ ವರಗಿರಿಸುತೆಯೊಳ್
ನೆರೆಪಲ್ಲಿಗೆ ನೀನೆ ಬಲ್ಲೆ ನೀನೆ ಸಮರ್ಥಂ ೨೩

ತಪಮಂ ಕೆಡಿಪುದು ಮಾಡುವ
ಜಪದಕ್ಷರದೊಳಗೆ ನಿನ್ನ ನನೆಯಂಬಂ ಕೀ
ಲಿಪುದಾ ಗಿರಿಜಾವಧುಸೌ
ಖ್ಯಪದಾವರಣಾತ್ಮನೆನಿಸುವುದು ಶಶಿಧರನಂ ೨೪

ಅಂತುಮಲ್ಲದೆ,

ಪುರುಷರ್ ವಧುಗಳ್ಗೆ ವಧೂ
ತ್ಕರಮಾ ಪುರುಷರ್ಗೆ ಸೋಲ್ವುದುಚಿತಮದಿಲ್ಲೀ
ಧರೆಯೊಳ್ ಮದನ ವರಸ್ತ್ರೀ
ಪುರುಷರ್ ನೆರೆ ನಿನಗೆ ೨ಸೋಲ್ವುದೆನಗಿದು೨ ಚಿತ್ರಂ ೨೫

೧-೧ ಮೀರಂ (ಕಾ ಬೆ ಯ ಸೆ). ೨-೨ ಸೋಲ್ವರೆನಗಿದು (ಬೆ ಬ).

ಇಂತಪ್ಪ ನಿನಗೆ ಮನ್ಮಥ
ಮುಂತಿದಿರಪ್ಪವರದಾರೊ ಶಶಿಚೂಡನ ತ
ಜ್ಜ್ಯಾಂತಿಯನುಡುಗಿಸಿ ಗಿರಿಜಾ
ಕಾಂತೆಯ ಸಮಸುಖಸಮುದ್ರಮಧ್ಯದೊಳಿರಿಸಯ್ ೨೬

ಎನೆ ಮದನಂ ನುಡಿದಂ ನಿಜ
ಜನಕನೊಳಕ್ಕಕ್ಕಿದಪ್ಪುದಪ್ಪುದು ಸರ್ವೇ
ಶನನನವಧಿಗುಣನಂ ಶ
ರ್ವನನೆಸುವುದನೆನಗೆ ಬೆಸಸುವುದು ನಿಮಗರಿದೇ ೨೭

ಶ್ರುತಿಗಳ್ ಕಾಣದ ಮನುಗಳ
ಮತಿಯೆಯ್ದದ ಮುನಿಗಳಱಿವು ನಿಲ್ಕದ ಶಾಸ್ತ್ರ
ಪ್ರತತಿ ನೆಱೆಯಱಿಯದಪ್ರತಿ
ಹತರೂಪನನೆಂತು ಕಾಣ್ಬೆನೆಂತಾನೆಸುವೆಂ ೨೮

[೧]ಇಸುವೆನ್ನೀ ಮನಮಂ ಪ್ರೇ
ರಿಸುವೀತನ[೧]ನಖಿಳಲೋಕಗುರುವಂ ಭರದಿಂ
ದಸಮಾಕ್ಷನನಿರದಾರ್ದಿಸು
[೨]ವಸಮಾಸ್ತ್ರರ್ ಜಲಧಿವಸನ[೨] ವಸುಧೆಯೊಳುಂಟೇ ೨೯

ತಿಳಿಯದೆ [೩]ಶೂಲಿಯ[೩] ತಪಮಂ
ಚಲಿಯಿಸು ನೀನೆಂಬುದಹಿತಮೆನಗೆ ಹೆಜ್ಜಿರ ಮ
ಕ್ಕಳನಿಕ್ಕಿ ನೆಲೆಯನಱಿವುದ
ನಿಳೆಯೊಳಗೆನ್ನಲ್ಲಿ ಮಾಳ್ಪರೇ ಕಮಲಾಕ್ಷಾ ೩೦

ಅಂತುಮಲ್ಲದೆ,

ಹರಿಯಲ್ಲಿಗೆ ತಮಮಂ ಕೇ
ಸರಿಯಲ್ಲಿಗೆ ಕರಿಯನಭ್ರಶಿಖಿಯಲ್ಲಿಗೆ ಕೇ
ಳುರಗನನಟ್ಟುವ ತೆಱದಿಂ
ಹರನಲ್ಲಿಗೆ ತಂದೆ ಕಳಿಪುವರೆ [೪]ನೀವೆನ್ನಂ[೪] ೩೧

೧-೧ ಇಸುವೆಂ ನಿಮ್ಮ ಮನಂ ಪ್ರೇ। ರಿಸಿದೀಶನ (ಅ). ೨-೨ ವಸಮಾಸ್ತ್ರದೆ ಜಲಧಿಶಯನ (ಕಾ ಬೆ ಯು); ಮ। ಸಮರ್ಥರ್ ಜಲಧಿವಸನ (ಬ). ವಸಮಾಕ್ಷರ್ ಜಲಧಿವಸಸ (ಕ). ೩-೩ ರುದ್ರನ (ಕ ಡ). ೪-೪ ನೀ ಕನ್ನಂ (ಅ). ಮುರಮಥನಾ (ಬ ಅ).

ಎಂದೊಡೆ ಮುಕುಂದನೆಂದಂ
ಕಂದರ್ಪ ಬಹೂಕ್ತಿಯಿಂದಮೇನಪ್ಪುದು ನಿ
ನ್ನಿಂದಂ ಸಕಳಜಗಂ ಸುಖ
ದಿಂದಿರ್ಪೊಡೆ ಹರಣದೊಂದು ಹುರುಳಱಸುವರೇ ೩೨

ಎನೆ ಕಂದರ್ಪಂ ಸಕಳಭು
ವನಮೆನ್ನಿಂ ಪರಮಸುಖದೊಳಿರ್ಪುದು ಗಡಮಾ[೧]
ನೆನಿತಱವನೆನ್ನ ಹರಣಂ
ಘನಮೇ ತೆಗೆಯಿಂದೆ ನೂಱು ಶೀವಿತ್ತೆಂದಂ[೨] ೩೩

ಎಂದು ಮಿಱಿ ನುಡಿಯುತ್ತೊಡಂಬಟ್ಟು ಬೀಳ್ಕೊಂಡು ನಡೆತಂದು ಪೊಱಗಿಕ್ಕಿದ ಸಿಂಹವಿಷ್ಟರಮನವಷ್ಟಂಭಿಸುತುನ್ನತಚಿತ್ತಂ ಪುಷ್ಪಧನ್ವಂ ತನ್ನೊಳಿಂತೆಂದಂ, *

ಚಂಪಕ

ಪೊಡವಿಯೊಳುಳ್ಳ ಮುಖ್ಯಮುನಿಗಳ್ ಮನುಗಳ್ ಜಿತಕಾಮರುಂ ಸಮಂ-
ತೆಡೆಗುಡದೆನ್ನ ಕಾರ್ಮುಕದ ಟಂಕೃತಿಮಾತ್ರದೊಳತ್ತಲಿತ್ತಲುಂ
ಸೆಡೆದು ಸುರಾಳ್ದರುಳ್ದ ರತಿಯುನ್ನತಿಯಿಂ [೩]ರತರಪ್ಪ[೩]ರೆಂದೊ[೪]ಡೀ[೪]
ಸಡಿಫಡ ಶೂಲಿಗೀಲಿಯು ತಪಂಗಿಪಮೊಡ್ಡಿಪುದೇ ರತೀಶನೊಳ್ ೩೪

ಎಂದು ದರ್ಪಕಂ ತನ್ನೊಳ್ ತಾನೆ ಗಜಱಿ ಗರ್ಜಿಸಿ ಮಧುದೂತಿಯೆನಿಪ್ಪ-ದಿರ್ಗಂತಿಯುಂ ಕರೆದು ವಸಂತಾದಿಚತುರಂಗಬಲಮುಂ ಬರಲ್ವೇಳೆಂದು ಕಳಿಪುವ ಸಮಯಮೆ ವಸಂತಸಮಯಮಾಗೆ,

ಶಿಶಿರದ ತವುದಲೆಯುಂ ನವ
ವಸಂತಸಮಯಪ್ರವೇಶಮುಂ ತಮ್ಮೊಳ್ ಸಂ
ದಿಸೆ ಬಣ್ಣಿಸಲರಿದಾದೊಡ
ಮೆಸೆವಾ ಋತುಸಂಧಿಯುಂ ವಿಭಾಗಿಸಿ ಪೇಳ್ವೆಂ ೩೫

ಅದೆಂತೆಂದೊಡೆ,

---

೧ ನಾ (ದಾ). ೨ ತುಂಬಿತ್ತೆಂದಂ (ಅ ಬ). ೩-೩ ನತರಪ್ಪ (ಬ ಕೊ ಅ ದಾ); ನೆರೆದಪ್ಪ (ಕಾ ಬೆ ಯ) ೪-೪ ಡಾರ್ (ದಾ). * ಈ ವಚನವು ಕ. ಪ್ರತಿಯಲ್ಲಿಲ್ಲ.

ಚಂಪಕ

ಪೊಳೆವದಿರ್ಗಂತಿಯುಚ್ಚೈ ಮಧುಮಾಸವೊಡರ್ಚಿದುದನ್ಯಪುಷ್ಪಸಂ
ಕುಳರುತಿ ಹತ್ತೆಸಾರ್ದುದು ನವಾಮ್ರಕುಳಂಗಳೊಳಂಕುರಸ್ಥಳಂ
ತಳೆದುವು ತಂಬೆಲರ್ ಜನಿಯಿಸಿರ್ದುದು ಬಾಲ್ಯದೊಳತ್ತ ಮಾರನ
ಗ್ಗಳಸುವ ಮಾರ್ಗಣಂಗಳೆನೆ ಚಿಂತಿಸುತಿರ್ದನಿದಾವ ಕಾಲಮೋ ೩೬

ಆ ಸಮಯದೊಳ್,

ನನೆಯುಂ ಪೆತ್ತುದು ಮಾಧವಿ
ಮೊನೆಸಿದುವಂಕುರಿಪ ತಾಣಮಿಮ್ಮಾವುಗಳೊಳ್
ಜಿನುಗಿದುವು ಕೊರಲೊಳಗೆ ಪಿಕ
[1]ನನಂತರಂ[1] ಬಿಲ್ಗೆ ಮದನನನುಮಾನಿಸಿದಂ ೩೭

ಮತ್ತೇಭ

ಮುಗುಳೊತ್ತಿತ್ತದಿರ್ಗಂತಿಯಂಕುರಿಸಿತಾಮ್ರಂ ಬಂದು ಮಂದಾನಿಳಂ
ಪುಗುತೊಂದೊಂದಡಿಯಿಟ್ಟನನ್ಯಭೃತನಂತೋರೊರ್ಮೆ ಕೂಗಿತ್ತು ಮೆ
ಲ್ಲಗೆ ಬಿಲ್ಲಂ ಗೊಲೆಗೆತ್ತಿ ಹೂಡಿದನಮೋಘಾಸ್ತ್ರಂಗಳಂ ದರ್ಪಕಂ
ದಿಗಿಲೆಂದಿತ್ತು ವಿಯೋಗಿವೃಂದಹೃದಯಂ ವಾಸಂತಿಕಾವಾಸದೊಳ್ ೩೮

ಚಂಪಕ

ಕಳದುದು ಮಾಗಿ ಕೂಗಿದುದು ಕೋಗಿಲೆ ಪಲ್ಲವಿಸಿತ್ತು ಮಾಮರಂ
ತಳವೆಳಗಾಯ್ತು ಪಾಂಥಜನವೊಲ್ದವರೊಳ್ ನವಭೋಗದುಜ್ಜುಗಂ
ಮೊಳೆತುವು ಕಾಮನೇಸು ಗುಜಗಂಡುದು ತಂಡದೆ ನಿಂದ ನಂದನಂ
ತಳೆದುವು ಕೂಡೆ ಕೆಂಪಿನ ಪಸುರ್ಪಿನ ಕರ್ಪಿನ ಬೆಳ್ಪಿನಂದಮಂ ೩೯

ಆ ಸಮಯದೊಳ್,

ಚಂಪಕ

ಜನಮನುರಾಗಮೇಱ ಲಲನಾಜನಮಂ ತೆಗೆದಪ್ಪಿ ಮಾಱ ಸ
ನ್ಮುನಿನಿಕರಂ ಜಪಂ ತಪಮನೋವದೆ ಬಿಟ್ಟತಿದೈನ್ಯದಿಂ ವಧೂ
ಸ್ತನತಟವಕ್ಷರಾಗೆ ಮೃಗವೀಧಿ ಮೃಗೀಕುಲದತ್ತ ಸಾರ್ದು ಬೆ
ನ್ನನೆ ಮಿಗೆ ಪೋಗೆ ಪರ್ಬಿತಿಳೆಯುಲ್ಲಿ ವಸಂತವಿಶಾಲಸಂಪದಂ ೪೦

೧–೧ ನನವರತಂ (ಶಾ ಬೆ ಬ).

ಆಗಳ್,

ಮತ್ತೇಭ

ಮುದದಿಂದಂ ಮಧುಮೂತಿಯಂ ಮೊಗಮೊಲರ್ಚುತ್ತುಂ ವಿರಾಜಿಪ್ಪ ಚೂ
ತದ ಮೆಯ್ಯೊಳ್ ಪುಳಕಂಗಳಂ ನೆಗೆಪುತುಂ ಸಾರ್ದನ್ಯಪುಷ್ಪಕ್ಕೆ ಕಂ
ಠದ [೧]ಕಾಕಂ[೧] ನೆಲೆವೆರ್ಚಿಸುತ್ತೆ [೨]ವನಮಂ[೨] ವೈವರ್ಣಮಂ ಮಾಡುತು
ರ್ವಿದಲಂಪಿಂದೆ ವಸಂತರಾಜನೊಸೆದೇಳ್ತಂದಂ ಜಗದ್ವಲ್ಲಭಂ ೪೧

ಚಂಪಕ

ನಡುಗಿ ವಿಯೋಗಿಗಳ್ ಸೆಡೆದು ಜೀವಮನೊಪ್ಪಿಸೆ ದರ್ಪಕಂಗೆ ತುಂ
ತಡಿಬಿಡಲಾರದೊತ್ತರಿಸೆ ಪಾಂಥಜನಂ ಕಳೆಗುಂದಿ [೩]ನಿಂದು[೩] ಪಾ
ವಡರ್ದವೊಲಾಗುತುಂ ಬೆವಱಿ ನಲ್ಲರ ಮೆಯ್ಸಿರಿ ನವ್ಯಭೋಗದೊಳ್
ತೊಡರ್ದಿರೆ ಬಂದನಿಂದುಕಳೆಯಂ [೪]ದಳವೇಱಿಸುತುಂ[೪] ವಸಂತಕಂ ೪೨

ಇಂತು ವಸುಮತಿಯ ಪೆಂಪಿನ ಸಂಪದಮಂ ಸೊಂಪೇಱಿಸುತುಂ ನವ್ಯವನಂಗಳ್ಗೆ ನಳನಳಿಕೆಯನೀಯುತುಂ ಚೂತದ ಮೆಯ್ಯೊಳಂಕುರಮನಾಗಿಸಿ ಕೋಗಿಲೆಗಳ ಕೊರಲಂ ಕೆಳೆಯೇಱಿಸುತುಂ ಅಶೋಕೆಯೊಳ್ ಪಲ್ಲವಮಂ ಪಡೆದು ಕಾಂತಾಜನದ ಕಣ್ಣ ಪುಣ್ಯಮಂ ಕವಲ್ವರಿಯಿಸುತುಂ ಲತಾವಿಸರದೊಳ್ ಕುಸುಮಕುಲಮಂ ಪಸರಿಸಿ ಮಧುಕರಂಗಳ ಮನೋರಥಂಗಳಂ ಪಡೆಯುತುಂ ತರುನಿಕರಕ್ಕೆ ನವೀನಫಲಮಂ ಕೊಟ್ಟು ಶುಕಂಗಳ ಜಿಹ್ವೆಯ ವಿಕಸನಮಂ ಮಾಡುತ್ತುಂ, ಪೂಗೊಳನಂ ತಿಳಿಯಿಟ್ಟು ನೀರ್ವಕ್ಕಿಗಳಂ ನೆಲೆವೆರ್ಚಿಸುತ್ತುಂ ರವಿಕಿರಣಂಗಳಂ ಪುಟವಿಟ್ಟು ರಥಾಂಗಮಂ ನಲವೇಱಿಸುತ್ತುಂ ನಳಿನಕುಲಮನಲರ್ಚಿ ಕಲಹಂಸಂಗಳಂ ತಣಿಪುತ್ತುಂ ನದೀಜಳಮಂ ನಿರ್ಮಳಮಂ ಮಾಡಿ ಮೃಗಪಕ್ಷಿಕುಳಮಂ ಮಿಗೆ ತುಪ್ಪಿವಡಿಸುತ್ತುಂ ಚಂದ್ರಕಳೆಯಂ ದಳವೇಱಿಸಿ ಚಕೋರಮಾಲೆಗೆ ಸುಖಮಂ [೫]ಕೂಡುತ್ತುಂ[೫] ಇಳೆಯೊಳ್ ಬೆಳ್ದಿಂಗಳಂ ಪಸರಿಸಿ ವಿರಹಿಗಳಂ ವಿರಥರಂ ಮಾಡುತ್ತುಂ ಕಾಮನ ಬಾಣಕ್ಕೆ ಕಂಪನಿತ್ತುಂ ಕಾಮಿಗಳ ನಿರ್ವೆಯ್ಯಾಗಿಸುತ್ತುಂ ಮಳಯಾನಿಳಂಗೆ ಶೈತ್ಯಸೌರಭ್ಯಮಾಂದ್ಯಮನಿತ್ತು ಸುಖಮಿಥುನದ ಸುರತಶ್ರಾಂತಿಯನಾಱಿಸುತ್ತುಂ ಮುನಿಗಳ ಮನಮನನನ್ವಿತಂ ಮಾಡಿ ವನಿತಾಜನದ ವದನಮನಲರ್ಚುತ್ತುಂ ಸಕಳಭುವನಕ್ಕೆ [೬]ರಾಗಾಂಧತೆ[೬]ಯನಿತ್ತು ಸತೀಜನಮನೇಪೊಳ್ತುಂ

೧–೧ ಸಾರಂ (ಕ). ೨–೨ ಬನದೊಳ್ (ಬ). ೩–೩ ಕಂದಿ (ಶಾ ಬೆ ಬ ಯ ದಾ ಕ ಗ). ೪–೪ ಕಳೆಯೇಱಿಸುತುಂ (ಅ ಓ) ೫–೫ ಮಾಡುತ್ತುಂ (ಶಾ ಕ). ೬–೬ ರಾಗೋನ್ನತಿ (ಅ); ಕಾಮಾಂಧತೆ (ಕೊ).

ನೆರೆವುತ್ತುಂ,ಇಂತು ತನ್ನ ಬರವಿನುರವಣೆಯನುರಾಗಕ್ಕೆ ಅನುರಾಗವೇಱಿ ಮನ್ಮಥರಾಜಂ ರತಿಯನಾಲಿಂಗಿಸಲನುಗೆಯ್ಯುತ್ತಿರೆ ವಸಂತಂ ಸಂತಸದಿಂ ನಡೆತಂದೆಳಗೆಂಪಂ ಪಸರಿಪ ಕಿಸಲಯವಿಸರಮಂ ಕಂಪಂ ಕವಲ್ವರಿಯಿಸುವ ಕುಸುಮಮಂಜರಿಯಂ ಮಧುರರಸಮಂ ತೆರೆಮಸಗಿಪ ನವ್ಯಫಳಂಗಳಂ ಮಕರಪತಾಕಂಗೆ ಕಾಣ್ಕೆಯಿಕ್ಕಿ ಮೆಯ್ಯಿಕ್ಕಿ ಕೆಯ್ಯಂ ಮುಗಿದು ನಿಂದು,

ಇದೆ ಚತುರಂಗಬಲಂ ಬಂ
ದುದು ಮನ್ಮಥಭೂಪ ನೋಡು ಚಿತ್ತವಿಸೆನುತುಂ
ಸದಮಳಮೋಹನಜನಕಾ
ಸ್ಪದಸೇನೆಯನೊಲ್ದು ತೋಱುತಿರ್ದಂ ಚೈತ್ರಂ ೪೩

ಅದೆಂತೆಂದೊಡೆ,

ಮಿಳಿ ಲತೆ ಗುಳಮೇ ಪತ್ರಂ
ಫಳರಸಮೆ ಮದಾಂಬು ನೀಳ್ದ ಕೊಂಬೆ ಕರಂ ಪೂ
ತೆಳಗೊಂಬುಗಳೇ ದಂತಂ
ಕಳಕಂಠನಿನಾದಮೆಸೆವ ಬೃಂಹಿತನಾದಂ ೪೪

ವಿಪುಳೋನ್ನತಪಲ್ಲವಮು
ಗ್ರ[೧]ಪಲ್ಲವಂ[೧] ಡಿಂಡಿಮಸ್ವನಂ ಮತ್ತಾಳೀ
ಚಪಳಸ್ವನಮೆನೆ ಚೂತ
ದ್ವಿಪಘಟೆಯಂ ತೋಱಿದಂ ಸಮಂತು ವಸಂತಂ ೪೫

ವರಮುಖ[೨]ರಾಗದ[೨] ಮೊಗವಡ
ದ್ವಿರುಕಾಂತಿಯ ವಾಘೆ ಚರಣದಂಕಣೆ[೩]ಯಿಂ[೩] ಭಾ
ಸುರಪಕ್ಷದ ಪಚ್ಚೆಯ ಪ
ಕ್ಕರಿಯೆಸೆವ ಶುಕಾಶ್ವವೀಧಿಯಂ ಕಾಣಿಸಿದಂ ೪೬

ಎರಡುಂ ಪಕ್ಷಂ ಚಕ್ರಂ
ಪೊರೆವಾಲಿಂಗನಮೆಯಚ್ಚು ಚಂಚುಪುಟಂ ಪೊ
ತ್ತರಿಸುವ ಮುಂಕಣಿಯಾಗಿರೆ
ನೆರೆದಿರ್ದ ರಥಾಂಗ[೪]ರಥಮನೊಪ್ಪಿರೆ ತಂದಂ[೪] ೪೭

೧–೧ ಪತಾಕಾ (ಅ); ಪತಾಕಂ (ಓ). ೨–೨ ರಾಗಂ (ದಾ). ೩–೩ ಗಳ್ (ಕಾ ಬಿ ಯ ಕ); ಯಿನೆ (ಕೊ). ೪–೪ ರಥಂಗಳಂ ತೋಱಿಸಿದಂ (ಅ).

ಇಂತು ವಸಂತಂ ಹಸ್ತ್ಯಶ್ವರಥಂಗಳಂ ತೋಱಿದ ಸಮನಂತರದೊಳ್ ಪದಾತಿಬಲಂ ಬರುತಿರ್ದುದದೆಂತೆಂದೊಡೆ,

ಪಾಡುವ ತುಂಬಿಯ ತಲೆಯ
ಲ್ಲಾಡುತ್ತಿರೆ ಬಂದಳಮವು ಕೃಷ್ಣನ ಮನಮಂ
ಷೋಡಶಸಹಸ್ರಭಾಗಂ
ಮಾಡಿದ ಮನ್ಮಥನ ಮೊನೆಯ ನಾಯಕಿಯೊರ್ವಳ್ ೪೮

ಆನವದ್ಯಕಳಾಕೋವಿದ
ನೆನಿಸಿಯುಮಾತ್ಮಜೆಯೊ[೧]ಳೊಲ್ದು[೧] ಬೆರಸಿದ ಚತುರಾ
ಸ್ಯನ ರೂಪು ಕಾಲ ಪೊಸಪೂ
ವಿನ ಹಾಹೆಯೊಳೆಳಲೆ ಬಂದಳಂಗನೆಯೊರ್ವಳ್ ೪೯

ಭಾಸುರತರಸುಕುಮಾರೆ ವಿ-
ಲಾಸದೆ ನಡೆತಂದಳಂದಹಲ್ಯೆಯ ಕತದಿಂ
ಸಾಸಿರಕಣ್ಣಂ ಮಾಡಿದ
ವಾಸವವಿಜಯಧ್ವಜಪ್ರತಾಪದಿನೊರ್ವಳ್ ೫೦

ಮತ್ತಮಲ್ಲದೆ,

ನೆರೆದು ಪಳಂಚುವ ಕಾಲುಂ
ಗುರದ ರವಂ ಮುಂದೆ ಡೌಡೆವಱಿಯಂ [೨]ಪೊಯ್ಯು[೨]
ತ್ತಿರೆ ಕುಸುಮಾಸ್ತ್ರನ ಮದವತ್
ಕರಿಯಂತೆ ಕರೀಂದ್ರಯಾನೆ ಬಂದಳದೊರ್ವಳ್ ೫೧

ಮತ್ತಂ ವಸಂತಂ ಪದಾತಿಬಲಮಂ ತೋಱುತಿರ್ದನದೆಂತೆಂದೊಡೆ,

ಅದೆ ನನೆಯ ಕಠಾರಿಯ ಮರು
ಗದ ಹಱಿಗೆಯ ತಾಮರಸದ ಘಂಟೆಯ ಮುಡಿವಾ
ಳದ ಚಮರಿಯ ಕುಮುದದ [೩]ಕೊಂ[೩]
ತದ ಕೇತಕಿಯೆಸಳ ಸುರಗಿಯ ಬಳಾನೀಕಂ ೫೨

೧-೧ ಳಂದು (ಬ ದಾ). ೨-೨ ಪೋಱು (ಶಾ ಬೆ ಯ). ೩-೩ ಕುಂ (ಶಾ).

ತಳಿರ್ಗಳ ಚಕ್ರದ ಕದಳೀ
ದಳಫಲಕದ ಸುರಗಿಯ್ಯುರಲ ಕೌಕ್ಷೇಯದ ಪ-
ಡ್ಡಳಿಗಳ ಸಬಳದ ಬಂದುಗೆ
ಗಳ ತಿಸುಳದ ಮೊಲ್ಲೆಯಿಟ್ಟಿಗಳ ಕಾಮಿನಿಯರ್ ೫೩

ಸುರಹೊನ್ನೆಯ ಮುಗುಳ್ಗಳ ತೋ
ಮರದ ಲತಾವಳಿಯ ಸೆಲ್ಲೆಹಂಗಳ ಪೊಸಪಾ
ದರಿಗಳ ಬಲ್ಲೆಹದೆಸವಂ
ಕುರವೀಧಿಯ ವಜ್ರಮುಷ್ಟಿಯಂಗನೆಯರ್ಕಳ್ ೫೪

ದವನದ ಸೀಗುರಿಗಳ ಪೊ
ಣ್ಮುವ ಪೊಂಬಾಳೆಗಳ ಚಾಮರಂಗಳ ಕಂಪೇ
ಱುವ ಸಂಪಗೆಗಳ [೧]ಸತ್ತಿಗೆ
ಯ ವಿಚಕಿಲನಿಕಾಯಕೇತುದಂಡದ ಸತಿಯರ್[೧] ೫೫

[೨]ತರದಿಂದಂ[೨] ಕ್ಷೀರಾಬ್ಧಿಯ
[೩]ತರಂಗದಂತೆಸೆವ[೩] ಶಶಿಯ ಹಾದಿಯುವೋಲ್ ಸುಂ-
ದರಿಯರ ಮೋಹರಮಿಂತೊ
ತ್ತರಿಸೆ ನಿರೀಕ್ಷಿಸುತೆ ದರ್ಪಕಂ ಬೆಱಗಾದಂ *೫೬

ಇಂತು ಬೆಱಗಾಗುತ್ತುಮಿರೆಯಿರೆ ಮತ್ತಂ ಕಂದರ್ಪರಾಜನ ಮುಂದೆ,*

ಚಂಪಕ

ನಳನಳಿಪಿಕ್ಷುದಂಡದ ಧನುವ್ರಜದಿಂ ಶತಪತ್ರಸೂತ್ರದಿಂ
ತೊಳಗುವ ನಾರಿಯಿಂ ತಳಿರ ಕೆಯ್ಪೊಡೆಯಿಂ ಕುಸುಮಾಸ್ತ್ರ[೪]ಮಾಲೆಯಿಂ[೪]
ದಳವಡೆ ನಿಂದು ನೀಡಡಿಗೆ ನೀಡಡಿ ಸೇರ್ದಿರೆ ಸಾರ್ದು ಬೊಬ್ಬೆಗೊ
ಟ್ಟೆಳೆ ಬೆಱಗಾಗೆ ನಾರಿಯರ ಬಿಲ್ವಡೆ ತೋಱಿತು ಮಾಱಿ ಲೋಕಮಂ ೫೭

ಅಂತುಮಲ್ಲದೆ,

೧-೧ ಸತ್ತಿಗೆ। ಯುವರ ನಿಕಾಯಕ್ಕೆ ಕನುಳದಂಡದ ಸತಿಯರ್ (ಅ). ೨-೨ ತರತರದಿಂ (ಶಾ ಬೆ ಬ ಗ ದಾ ಗೊ) ೩-೩ ತೆರೆ ಕವಿದಂತೆಸೆವ (ಬ) * ಇವು ಅ ಪ್ರತಿಯಲ್ಲಿಲ್ಲ. ೪-೪ ಜಾಲದಿಂ (ಅ).

ತೊಳತೊಳಪಮೃತಮಯೂಖಂ
ಗಳನೊಸೆದೆಡ್ಡೆಸೆಗೆ ಪಸರಿಸುತ್ತೆ ಚಕೋರಾ
ವಳಿ ಬಳಸೆ ನೆರೆದ ಕೈರವ
ಕುಳದೊಳ್ ನಡೆತಂದನಮಮ ತಾರಾಧೀಶಂ *೫೮

ಕ್ರಮದಿಂದೆ ಶೈತ್ಯಸೌರ
ಭ್ಯಮಾಂಧ್ಯಮೆಂದೆಂಬ ತನ್ನ ಗುಣದೊಳ್ಪು ರತೀ
ರಮಣನ[೧]ನಲ್ಲಾಡಿಸೆ[೧] ಮಂ
ದಮಾರುತಂ ಮೋಹಿಸುತ್ತೆ ಮುಂದೆಯ್ತಂದಂ ೫೯

ಇಂತು ಸಹಕಾರಸಾಮಜಸಮಾಜಮುಂ ಕೀರಕದಂಬತುರಂಗಸಂಘಮುಂ [೨]ರಥಾಂಗರಥವ್ರಾತಮುಂ[೨], ಸುದತೀಸಮೂಹಪದಾತಿಕುಲಮುಂ, ನಿರೀಕ್ಷಿಸುತ್ತುಂ ಪರಮಾನುರಾಗದಿಂ ಕಂತುರಾಜಂ ಸಂತಸಮನೆಯ್ದುವಾಗಳ್ ವಸಂತನಿರ್ದಿತ್ತ ಲವಧರಿಸೆಂದು ನವೀನವಚೋವಿಳಾಸೋನ್ಮತ್ತತೆಯಿಂದಿಂತೆಂದಂ,

ಕಿಸಲಯಮುದ ಕುಸುಮವಿತತಿಯು
ಪೆಸರೇಕಾ ಸ್ಥಾಣುವಿನ ವಿನಿಶ್ಚಲಮನಮಂ
ಬೆಸುಗೆಗಳೆದೊಡೆದು ಮೂಡಲ್
ಮಿಸುಪಂಕುರಮೊಂದೆ ಸಾಲದೇ ಮದನನೃಪಾ ೬೦

ಎಸೆವ ನವಾಂಕುರ[೩]ರಸದಿಂ[೩]
ಮುಸೆದೀ ಕೋಕಿಲನ ಕೊರಲ ಮಧುರಧ್ವನಿಯೊಂ
ದೆ ಸಮರ್ಥಂ ಶೂಲಿಯು ತಪ
ದೆಸಕಮನುಡುಗಿಸುವೊಡುಳಿದ ಪರಿಕರಮೇಕಯ್ ೬೧

ಇಳೆಯೊಳ್ ಸರ್ವೇಶನ ನಿ
ಶ್ಚಳತಪದುರವಣೆಯ ತೇಜಮಂ ದೊರೆಗೆಡಿಸಲ್
ಕಳರವದಿಂ ಬಗ್ಗಿಸುವರ
ಗಿಳಿಗಳ [೪]ಚಪ್ಪರಣೆಯೊಂದೆ ಸಾಲದೆ ಮದನಾ[೪] ೬೨

ಇಂತಿವರ್ಕೆ ಸೆಡೆಯದೆ ಕಡುಪಿಂದಿಂದುಧರಂ ನಿಂದನಪ್ಪೊಡೆ

೧-೧ ನಳ್ಳಾಡಿಸೆ (ಬ). ೨-೨ ರಥಾಂಗವರೂಥವೀಥಿಯುಂ (ದ ಬ). * ಈ ಪದ್ಯವು ಓ ಪ್ರತಿಯಲ್ಲಿಲ್ಲ. ೩-೩ ದಿಂಡಂ (ಗ). ೪-೪ ರವಮೊಂದೆ ಸಾಲದೇ ಕಂದರ್ಪಾ (ಅ). ಚಪ್ಪರಣೆ ಸಾಲದೇ ಮದನನೃಪಾ (ಕ ಡ).

ಅರಗಿಳಿಗಳ ಪವಮಾನನ
ತರುಣೀನಿವಹದ ಫಳಪ್ರತಾನದ ಪುಷ್ಪೋ
ತ್ಕರದನುಪಮ ಶಬ್ದಸ್ಪ
ರ್ಶರೂಪರಸಗಂಧದಿಂದೆ ಶಿವನಂ ಗೆಲ್ವೆಂ ೬೩

ಅಂತು ಸಕಲಜಗಜ್ಜನಮನೋಽನುರಾಗಜನನಕಾರಣಕರ್ತೃವಪ್ಪ ವಸಂತಂ ಭಾಷೆಗೊಟ್ಟ ಸಮನಂತರದಲ್ಲಿ,

ಭರದಿಂದೆ ಬಂದು [೧]ನುಡಿದಂ[೧]
ವರಹಿಮಕರನೆಸೆವ ಚಂದ್ರಕಾಂತದ ಕಲ್ಲಂ
ಕರಗಿಸುವೆನ್ನ ಸುಧಾಮಯ
[೨]ಕರಂಗಳಂ ಹರನ ಚಿತ್ತಮಂ ಕರಗಿಸುವೆ[೨] ೬೪

ಆ ಸಮಯದೊಳುರವಣಿಸಿ ನಡೆತಂದು ಮುಂದೆ ನಿಂದ ಚಂದ್ರಮುಖಿಯರೊಳೊರ್ವಳ್,

ತ್ರಿಣಯನ ತಪಮಂ ಕಿಡಿಸಲ್
ಕ್ಷಣವೇಧಿಗಳೆನಿಸುವೆನ್ನ ತರಳಕಟಾಕ್ಷೇ
ಕ್ಷಣ[೩]ಯುಗ[೩]ಮಿರ್ದಂತೀ[೪]ನನೆ[೪]
[೫]ಗಣೆಗಳ್[೫] ಪರ್ಯಂತವೇಕೆ ಮಕರಪತಾಕಾ ೬೫

ಮತ್ತಮೊರ್ವಳ್,

ಮಾರನೃಪ ನಿಜದನುಷ್ಟಂ
ಕಾರಮನಾರಾಂಪರಂತದಿರ್ಕೆನ್ನಯ ಮಂ
ಜೀರದ ಮಧುರಧ್ವನಿಯಿಂ
ಘೋರತಪೋಮಯನನಭವನಂ ಪರಿಭವಿಪೆಂ ೬೬

ಎಂದು ಮಾಱಿ ನುಡಿವ ನೀಱೆಯರ ನಡುವಣ ಭಾಮಿನಿಯೊರ್ವಳ್ ಭಾಷೆಗುಡುತ್ತುಮಿರ್ದಳದೆಂತೆಂದೊಡೆ,

---

೧-೧ ನಿಂದಂ (ಕ). ೨-೨ ಕಿರಣಂಗಳ್ ಹರನ ಚಿತ್ತಮಂ ಕರಗಿಸುಗುಂ (ಅ). ೩-೩ ಗಣ (ದಾ). ೪-೪ ಹೂ (ಕಾ ಬೆ ಬ ಯ); ಪೂ (ದಾ). ೫-೫ ಗಣೆಗಳ (ಕಾ).

ಚಂಪಕ

ಮದನನೃಪಾಲ ಕೇಳ ಭುವನತ್ರಯಮಂ ಕ್ಷಣದಿಂದೆ ಗೆಲ್ದು ಪಿಂ
ಗದ ಘನಕೀರ್ತಿಯಿಂ ತೊಳಗುವಿಕ್ಷುವ ಚಾಪದ ಪುಷ್ಪಬಾಣದ
ಗ್ಗದ ನುಡಿಯಿಲ್ಲಿಗೇಕೆ ಮಿಸುಪೆನ್ನಯೆ ಪುರ್ವಿನ ಕರ್ಪುವಿಲ್ಲ ನೋ
ಟದ ನನೆಗೋಲ ಲೀಲೆಯೊಳೆ ಸೋಲಿಸುವೆಂ ಜಿತಕಾಲಶೂಲಿಯಂ ೬೭

ಎಂದಿಂತು ಸಂದಣಿಸಿ ಭಾಷೆಗೊಟ್ಟ ವಸಂತಾದಿಸಂಮೋಹನಬಲಮುಖ್ಯರ ಸುಧಾರಸಪೂರಿತಚಾರುವಚನರಚನೆಗಳಂ ಕೇಳ್ದು ಕುಸುಮಾಯುಧಂ ವಿಶಸನ ವಿಜಯಿಗಳಪ್ಪ ನಿಜಭುಜದಂಡಯುಗಳಮಂ ನೋಡಿ ಮದೋನ್ಮತ್ತವೀರಾಳಾಪ ಮುಖರಮುಖನಾಗಿ,

ಇನ್ನಿರ್ಪನಿರ್ಪನಭವಂ
ಸನ್ನುತತಪದಿಂದಮಿರದೆ ಮಾಣ್ಬಂ ಕಾಣ್ಬಂ
ತನ್ನಗ್ಗದ ವೈರಾಗ್ಯದ
ಬಿನ್ನಣಮುಮನೆನ್ನ ಪಂಚಬಾಣದ ¹ಬಲಮಂ¹ ೬೮

ಚಂಪಕ

ಗಣಿದಮದೇವುದಿಕ್ಷುಧನುವುಂ ಕುಸುಮಾಸ್ತ್ರಮುಮೆನ್ನ ಕೆಯ್ಗೆ ಸಂ
ದಣಿಸೆ ಬಳಿಕ್ಕಮೆತ್ತಣ ತಪೋಮಯರೆತ್ತಣ ಶಾಂತಿಭೂಷರೆ,
ತ್ತಣ ಜಿತಕಾಮರೆತ್ತಣ ದಿಗಂಬರರೆತ್ತಣ ಕರ್ಮನಿಷ್ಠರೆ,
ತ್ತಣ ಬುಧರೆತ್ತಣಾತ್ಮವಿದರೆತ್ತಣ ನಿಸ್ಪೃಹರೆತ್ತಣುತ್ತಮರ್ ೬೯

ಅಂತುಮಲ್ಲದೆ,

ಪರಿಮಳಮನೆಣ್ದೆಸೆಗೆ ಬಿ
ತ್ತರಿಸುವ ನನೆಗಣೆಗಳಿಂದೆ ಗಿರಿಪತಿತನಯಾ
ವಿರಹಾತಪಮೊಗೆಯಲ್ ಶಂ
ಕರನ ತಪಶ್ಛತ್ರದಂಡಮಂ ಖಂಡಿಸುವೆಂ ೭೦

ಅತಿಭೀಮರ್ ಜಿತಕಾಮರ್
ನುತನಾಮರ್ ಮದನನಿದಿರೊಳಲ್ಲೆನೆ ಹೋಹೋ
ಸತಿ ಕಾಮಿತಮನದಿಂ ಪಾ
ರ್ವತಿ ಬಳಿವನ್ನೆವರಮಿರ್ಪ ತಪಮೊಡ್ಡಿಪುದೇ ೭೧

೧–೧ ಬಲುಹಂ (ಅ ಬ); ಬಲ್ಪಂ (ಶಾ ಬೆ ಗೊ).

ಅಂತುಮಲ್ಲದೆ,

ಸೊಂಪಿಂ ಮುದದಿಂ ಮೋಹನ
ದಿಂಪಿಂ ಸಂತಾಪದಿಂ ವಶೀಕರಣೋದ್ಧೃತ್
ಸಂಪದದಿಂ ನೆಱೆ ತೋ
ರ್ಪೆಂ ಪಂಚಮುಖಂಗೆ ಪಂಚಬಾಣದ ಸವಿಯಂ ೭೨

ಎಂದಿಂತು ನಿಜಭುಜಪ್ರತಾಪಾಲಂಕೃತವೀರಾಳಾಪಮಂ ಮಾರನೃಪಂ ನುಡಿಯುತ್ತುಂ ನಳಿನಗುಣವಿರಚಿತನವ್ಯದುಕೂಲಮಂ, ತೆಗೆದು ಬಿಗಿದುಟ್ಟು, ದಿವ್ಯಚಂದನಮನುದ್ವರ್ತನಂಗೆಯ್ದು, ಪರಾಗದ ತಿಲಕಮನಿಟ್ಟು, ಕೇತಕೀದಳದ ಕೂರಲಗಂ ಕಿಗ್ಗಟ್ಟಿನೊಳಳವಡಿಸಿ, ವಸಂತಂ ಪೊಸಮಲ್ಲಿಗೆಯ ನುಣ್ಣನಪ್ಪ ಸಣ್ಣನನೆಯ ವೀರಸೇಸೆಯಂ ಸೂಸೆ, ವನಲಕ್ಷ್ಮಿ ಪಳಿಕಿನ [೧]ಪರಿಯಾಣದೊಳ್[೧] ಬಂದುಗೆಯ ಕುಸುಮದ ವಿಜಯಾರತಿಯನೆತ್ತಿ ಮಜ್ಜಯ್ಯ ಪೂತುರೆ ಎಂದು ಸರಸಿಜಾಕ್ಷಂ ಪರಸೆ ಲಕ್ಷ್ಮೀದೇವಿಯರ್ ಮೊದಲಾದ ಲಲನಾಜನಂ "ವೀರವಿಭ್ರಮ ವಿಜಯೀಭವ" ಎಂದು ಗೆಲ್ವನೀಯೆ, ಚತುರಾಸ್ಯನುಮಿಂದ್ರಾದಿದಿಗ್ವರರುಂ ಮುಂದೆ ಉರಾವುರೇ ಎಂದು ಮೆಯ್ಯಾಂತು ಕೆಯ್ವಾರಿಸೆ, ಕಳಾಮಾಳಿ ಕೆಯ್ಗುಡೆ ಗರ್ವಪರ್ವತಮನೇಱುವಂತೆ ಮುಂದೆ ನಿಂದ ಮಾಕಂದಮತ್ತಮಾತಂಗಮಂ, ಭೋಂಕನೇಱಿ, ಪಜ್ಜಿವಾಸನದೊಳ್ ರತೀದೇವಿಯನಿರಿಸಿ ಹೊಳೆಹೊಳೆವ ಚಂದ್ರಮನ ಬೆಳ್ಗೊಡೆ ಮೇಲಲರೆ ಗಂಧವಹಂ ಸುಗಂಧದ ಸೀಗುರಿ ಚಾಮರವನಿಕ್ಕೆ, ಕಬ್ಬಿನ [೨]ಬಿಲ್ಲುಮನಲರ[೨] ಸರಲುಮಂ ರೋಹಿಣೀದೇವಿ ಪಿಡಿದಿರೆ ಕೆಲಬಲದೊಳ್ ಶುಕಾವಳೀ ತುರಂಗಸಂಘಂ, ಸಂದಣಿಸೆ, ರಥಾಂಗಘನರಥಂ ಮೇಳಯ್ಸೆ ಚೂತಗಜಂ ವೀಥಿಗೊಳೆ ಮುಂದೆ ಸುದತೀಕುಲಪದಾತಿಬಲಂ ಮುಂದಯ್ಸೆ ನೆಗೆಪಿದ ಮಕರಧ್ವಜಂ ಗಗನಮಂ ಚುಂಬಿಸೆ ದರ್ಪಂ ಕೆಯ್ಮಿಕ್ಕು ದರ್ಪಕಭೂಭುಜಂ ಶೂರ್ಪಕಮರ್ದನಂ ಶಂಬರಸೂದನಂ ನತಜಿತೇಂದ್ರಿಯವಿತಾನಂ ಮುನಿಜನಮನೋಹಾರಿ, ಯತಿವ್ರಜವಾರಣಪಂಚಾನನಂ ಕಾಂತಾ[೩]ಕುಲ[೩]ಚಕ್ರವರ್ತಿ, ಅಪ್ರತಿಹತವಿಕ್ರಮಂ ಕಾಮದೇವಂ ಹೇಮಕೂಟಾಭಿಮುಖನಾಗಿ ನಡೆತರ್ಪಾಗಳ್,

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೭೩

೧-೧ ಹರಿವಾಣದೊಳ್ (ಕಾ ಕ) ೨-೨ ಬಿಲ್ಲನರಲ (ಕಾ ಯ) ೩-೩ ಜನ (ಕಾ ಟ ಯ)

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ

ಶ್ರೀ ಗಿರಿಜಾಕಲ್ಯಾಣಮಹಾಪ್ರಬಂಧದೊಳ್

ವಸಂತೋದಯಮದನಪ್ರಯಾಣಪ್ರಾರಂಭವರ್ಣನಂ ಸಪ್ತಮಾಶ್ವಾಸಂ

ಅಷ್ಟಮಾಶ್ವಾಸಂ

ಕಾಮದಹನವರ್ಣನಂ

ಗರಳಧರನುರಗಭೂಷಂ
ಸರಸಿಜಭವಮಸ್ತಕಪ್ರಯುಕ್ತಕರಂ ಭೀ-
ಕರಭಾಳಲೋಚನಂ ಭ
ಕ್ತಿರಸಮನೆಮಗೀಗೆ ಹಂಪೆಯ ವಿರೂಪಾಕ್ಷಂ ೧

ಉತ್ಪಂ

ಕೀರತುರಂಗಸಂಘಮುಮೀ ಧರೆ ಪುಷ್ಪಜಯಾಸ್ತ್ರಶಸ್ತ್ರವಿ
ಸ್ತಾರ[1]ಸುಗಂಧವೃಂದ[1]ಮುಮೀ ಕಕುಭಂ ಮಕರಂದಸಾಂದ್ರ[2]ಸಂ
ಚಾರಿ[2]ರಜೋನಿಕಾಯಮುಮೀ ನಭಮೊಂದೆನೆ ಕೌತುಕಪ್ರದಂ
ಮಾರನೃಪಾಲಸೇನೆ ನಡೆದತ್ತು ಜಿತೇಂದ್ರಿಯ ಚಿತ್ತಶೋಷಣಂ ೨

ಇಂತು ನೆರೆದು ನಡೆವ ಕುಸುಮಕೋದಂಡನ ಕಮನೀಯಬಲದ [3]ಹಿಂದೆ[3]

ಘಳಿಲೆನೆ ಕಂಪನದಿಂ ಮುನಿ
ಗಳ ಕರತಳದಕ್ಷಮಾಲೆ ಬೀಳುತ್ತಿರೆ ಕೋ
ಕಿಳಕುಳನಿಸ್ಸಾಳಧಳಂ
ಧಳಂ ಧಳಂ ಧಳನಿನಾದಮುಣ್ಮಿತ್ತಾಗಳ್ ೩

೧–೧ ವಿಶಾಲಗಂಧ (ಯ). ೨–೨ ವಿಸ್ತಾರ (ಶಾ ಕ). ೩–೩ ಮುಂದೆ (ಶಾ ಬೆ ಯ ಅ ಗೊ).

ಅನಂತರದಲ್ಲಿ,

ಮಹಾಸ್ರಗ್ಧರೆ

ಮುನಿಜಿತ್ತಾಕರ್ಷನೀ ಬಂದನೆ ಋಷಿವಿಮಳಾಚಾರ[೧]ಸಂಹಾರಿಯಿ[೧] ಬಂ
ದನೆ ಧರ್ಮಜ್ಞಾರಿಯಿ ಬಂದನೆ ಜಿತವಿಷಯವ್ರಾತ[೨]ವಿಧ್ವಂಸಿಯಿ[೨] ಬಂ
ದನೆ ಶಾಂತಾರಾತಿಯಿ ಬಂದನೆ ಯತಿಹರನೀ ಬಂದನೀ ಬಂದನೀ ಬಂ
ದನೆಯೆಂದಲ್ಲಲ್ಲಿ ಭೃಂಗೀಬಹುವಿಧಕಹಳಾನಾದಮುಣ್ಮಿತ್ತದೆತ್ತಂ ೪

ತೊಲಗೆಲೆ ಸಹಸ್ರಲೋಚನ
ತೊಲಗೆಲೆ ವಾಚೀಶ ತೊಲಗೆಲೇ ಪಾವಕ ನೀಂ
ತೊಲಗು ಬೃಹಸ್ಪತಿ ಕೃಷ್ಣನೆ
ತೊಲಗೆನುತುಣ್ಮಿದುವು ಬಹಳ ಕಹಳಾನಾದಂ ೫

ಇಂತು ಬಿರುದೆತ್ತಿ ಕರೆವ ಬಹಳಕಹಳಾನಾದಂಗಳ ನಡುವೆ,

ಚಂಪಕ

ನಡೆದುದು ಸೈನ್ಯವೊಲ್ದವರನನ್ಯವಗಲ್ದರ ಜೀವಶೂನ್ಯ[೩]ವಾ[೩]
ರ್ದಡಸಿತು ಕೂಡೆ ಕಾಮಿನಿಯರಾಡೆ ಜಿತೇಂದ್ರಿಯರೋಡೆ ನೋಡೆ [೪]ಬಿ[೪]
ಲ್ವಿಡಿದ ರತೀಶನಪ್ರತಿಮವೇಶನನೂನವರಪ್ರಕಾಶನು
ರ್ಕುಡುಗೆ ವಿಯೋಗಿಗಳ್, ವಿಗತಭೋಗಿಗಳುದ್ಧನಿರೋಧಯೋಗಿಗಳ್ ೬

ಮುನಿಗಳ ಧೈರ್ಯಭೂಮಿ ರಜಮಪ್ಪಿನೆಗಂ, ಮನುಜೇತನಾದ್ರಿ ಭೋಂ
ಕನೆ ಪುಡಿಯಪ್ಪಿನಂ, ಯತಿಚರಿತ್ರತರಂಗಿಣಿ ಪಂಕಮಪ್ಪಿನಂ,
ಘನವಿಮಳವ್ರತೀಂದ್ರರ ತಪೋವಿಪಿನಂ ಬಯಲಪ್ಪಿನಂ, ರತೀ
ಶನ ಚತುರಂಗಸೇನೆ ನಡೆದತ್ತು ಧರಿತ್ರಿಗೆ ಚಿತ್ರಮಪ್ಪಿನಂ ೭

ಕೊರಗಿದರಾ. ಯತಿಪತಿಗಳ್
ಹರಣಂಗಳೆದರ್ ವಿಯೋಗಿಗಳ್ ಮನುಮುನಿಗಳ್
ಶರಣೆಂದರ್ ಜಿತಕಾಮರ್
ಮರುಳಾದರ್ ಪುಷ್ಪಶರನ ಪಡೆನಡೆವಾಗಳ್ ೮

೧-೧ ಸಂಹಾರ ನೀ (ಶಾ). ೨-೨ ವಿಧ್ವಂಸನೀ (ಶಾ). ೩-೩ ಸಾ (ಅ). ೪-೪ ಜೆ (ಬ).

ಇಂತು ಸಕಳಭುವನಮಂ ಭಂಗಿಸುವ ಚತುರಂಗಸೇನೆಯು ನಡುವೆ ಕಡುಪಿಂ ನಡೆತಂದು ಭೂಮಿಗೆ ಮೆಱೆವ ಸೋಮಧರನಿರ್ಪ ಹೇಮಕೂಟಪ್ರಾಂತದೊಳ್ ನಿಂದು ನಗಾಗ್ರಮಂ ನೋಡಿ ಕಡುಮುಳಿದು ಕಾಮಭೂಪಂ ಉನ್ನತಮಪ್ಪ ತನ್ನ ಸೇನೆಗೆ ಕೆಯ್ಯಾಸಿದ ಸಮಯದೊಳ್ ಗಿಳಿಗಳ್ ಚಪ್ಪರಿಸೆ ತುಂಬಿಗಳ್ ಮೊರೆಯೆ ಕೋಗಿಲೆಗಳ್ ಕರೆಯೆ ಮಂದಾನಿಳಂ ೧ಮೇರೆವರಿಯೆ೧ ಚಂದ್ರಂ ಬೆಳ್ದಿಂಗಳಂ ಬೀಱೆ ಚಕೋರಿಗಳ್ ನಲಿದುಲಿಯೆ ಕುಸುಮಕುಲಂ ಕಂಪನೊತ್ತರಿಸೆ ಸಹಕಾರಂ ಸಂದಣಿಸೆ ಕಾಮಿನಿಯರ್ ಜಡಿಯೆ ರಥಾಂಗಂ ೨ಸಂಗಳಿಸಿ೨ ನೂಂಕೆ ಮಕರಧ್ವಜಂ ಗಗನದೊಳ್ ಕುಣಿಯೆ ಮತ್ಸ್ಯಪತಾಕೆಯುಚ್ಚರಿಯೊಳಾಡೆ ೩ಮಾಕಂದಗಜ೩ಪೂತ್ಕಾರಂ ರಥಾಂಗರಥಚೀತ್ಕಾರಂ ಶಿಳೀಮುಖಝೇಂಕಾರಂ ಹಂಸಕುಲಕ್ರೇಂಕಾರಂ ಝಷಕೇತನ ಘಟತ್ಕಾರಂ ತರುಣೀಚರಣಮುದ್ರಿಕಾಠಣತ್ಕಾರಂ ತತ್ಕಟಕಮಂಜೀರಝಣತ್ಕಾರಂ ಕಳಕಂಠವೀಥೀಧಿಕ್ಕಾರಂ ಬೆರಸಿ ಬಳೆದಾಗಸಮಂ ಮುಸುಂಕೆ ಸರ್ವ ೪ಬಲಮೊರ್ಬುಳಿಸಿ ಬೊಬ್ಬಿಟ್ಟಬ್ಬರಿಸಿ೪ ಪರ್ಬಿ ಪರೆದು ಶರ್ವನ ಸಮಾಧಿಪರ್ವತಮನೊತ್ತರಿಸಿ ಪತ್ತಿ ಬಿಡದೆ ಸುತ್ತಿ ಮುತ್ತುತ್ತಿರೆ ಮುಂದಣ ಕಾಪಿನ ನಂದೀಶ್ವರಂ ಮೋಹನಬಲದ ಸುಧಾರಸಮಯಸುನಾದಮಂ ಭೋಂಕನೆ ಕೇಳ್ದಂತಂತೆ ಕಂಪಿಸಿ ಕರಣಂ ಕಲಂಕಿ ಕಿಂಚಿತ್‌ಸಂಚಲಮನನಾಗಿ ಚೆಲ್ಲಿದ ಚಿತ್ತಮಂ ಮೆಲ್ಲಮೆಲ್ಲನೆ ಸಂತಯ್ಸಿಕೊಂಡು ಶಿವಜ್ಞಾನದಿಂದೆಳ್ಚತ್ತು ಕಣ್ದೆಱೆದು ಮುಂದಿರ್ದ ಬಲಮಂ ಕಂಡು,

ಚಂಪಕ

ಹರನ ಸಮಾಧಿಗಿಂತಿದನುಕೂಲತೆಯಲ್ಲ; ವಿರೋಧವೃತ್ತಿಯಂ
ನೆರಪುವರಾರಿದಾರ ಬಲವಾರ ಮದೋನ್ನತಿಯಾರ ಲೋಕಭೀ
ಕರರವವಾರ ಸಂಭ್ರಮಮಿದಾರ ಮರುಳ್ತನಮೆಂದು ನಂದಿಕೇ
ಶ್ವರನತಿಕೋಪದಿಂ ಮದನಸೇನೆಯನೀಕ್ಷಿಸಿದಾ ಕ್ಷಣಾರ್ಧದೊಳ್ ೯

ಅಳಿ ಮಲ್ಲಳಿಗೊಂಡುವು ಕೋ
ಕಿಳನಿಕರಂ ೫ವ್ಯಾಕುಳಾಂಗಮಾದುವು೫ ಚಂದ್ರಂ
ಕಳೆಗುಂದಿ ಕಂದಿದಂ ಕೋ
ಮಳೆಯರ್ ವಿಹ್ವಳ೬ವಿಧಾನ೬ಮಾನಸರಾದರ್ ೧೦

ಮತ್ತಮಲ್ಲದೆ,

೧–೧ ಮೇಲ್ವರಿಯೆ (ಕಾ ಬೆ ಯ ಬ); ಮೇಲ್ವರಿಯೆ (ಕ). ೨–೨ ಸಂದಣಿಸಿ (ಕಾ ಅ) ೩–೩ ಮಾಕಂದ ಮಾತಂಗ (ದಾ). ೪–೪ ಬಲಮೊಬ್ಬುಳಿಗೊಂಡು ಬೊಬ್ಬೆಗೊಟ್ಟಬ್ಬರಿಸಿ (ಅ). ೫–೫ ವ್ಯಾಕುಳಂಗಳಾದುವು (ಕಾ ಬೆ ಯ) ೬–೬ ವಿತಾನ (ಬ ಬೆ ಕೊ).

ಉತ್ಪಲ

ಕೀರತರಂಗವೋಡಿದುವು ಚೂತಗಜಾವಳಿ ಘೀಳಡುತ್ತೆ ಕಾಂ
ತಾರದೊಳೆಯ್ದೆ ಬಿಳ್ದುವು ಸವಿಾರನಡಂಗಿದನಾ ವಸಂತಕಂ
ಘೋರವನಂಗಳೊಳ್ ಪುಗುತೆ ಮೆಯ್ಯುರೆದಂ ಕಳಹಂಸಮಾಲೆ ಕಾ
ಸಾರದೊಳಂಜಿ ಪೊಕ್ಕುವು ರಥಾಂಗರಥಂ ನಡೆಗೆಟ್ಟುವದ್ಭುತಂ ೧೧

ಇಂತು ಕಂತುರಾಜನ ಚತುರಂಗಬಲಂ ದಿವಸೇಂದ್ರನ ಮುಂದಣ ತಮಃಪಟಲದಂತೆ ನಂದೀಶ್ವರನ ಕೋಪದ [1]ಕಡುಗಾಯ್ಪಿಂ ನೋಡೆ ನೋಡೆ[1] ಮಾಯುವಾಗೆ,

ನುಡಿದಂ ಮದನಂ ತನ್ನೊಳ್
ಬೆಡಂಗಿದೇನೀ ಗಣೇಶನೀ ತೆಱನಿನ್ನಾ
ಮೃಡನಂ ನಡೆದೆಸುವೊಡೆ ಸಂ
ಗಡವಾರಾರಳವದಾರ ಶಕ್ಯಮಶಕ್ಯಂ ೧೨

ಇಂತೆನುತುಂ ಕಂತುರಾಜಂ ಸಂತಾಪದಿಂ ಚಿಂತಿಸುತಿರ್ಪಿನಮಿತ್ತಲ್,

ಮಹಾಸ್ರಗ್ಧರೆ

ಬರುತಿರ್ದಳ್ ಮುಂದೆ ಕಾಂತಿಪ್ರದೆ ಸದಮಳೆ ಸತ್ಪ್ರಕಾರೂಢೆ ಸತ್ಯಾ
ಕರೆ ನಿತ್ಯಾನಂದೆ ಚಂದ್ರಾಭರಣನ ಸುಖಸಂಪತ್ತಿ ರುದ್ರಾರ್ಚನಾವಿ
ಸ್ತರೆ ವಿಶ್ವಾರಾಧ್ಯೆ ಕಾರುಣ್ಯದ ನೆಲೆವನೆ ಶರ್ವಾಣಿ ಗೀರ್ವಾಣಮೌಳೀ
ವರರತ್ನವ್ರಾತಸಂಘಟ್ಟಿತಪದೆ ನಗಸಂಭೂತೆ ಸಂಪ್ರೀತಿಯಿಂದಂ ೧೩

ಬರೆ ಕಣ್ ಬಂದಂತುಸಿರ್ ಬಂದವೊಲತಿಮುದಮಂ [2]ತಾಳ್ದಿ[2] ಬಾಳ್ದಿರ್ದ ಶೋಭಾ
ಕರನಷ್ಟಾಂಗಪ್ರಣಾಮಂಬೆರಸು ಗಿರಿಜೆ ಗೌರೀ ಜಗನ್ಮಾತೆ ಸರ್ವೇ
ಶ್ವರಿ ದಿವ್ಯಜ್ಞಾನಿ ನಾನಾಗಮವಿದೆ ಸದಲಂಕಾರೆ ಸಾರಾಂಗಿ ವಿಶ್ವೋ
ದರೆಯೆನ್ನಂ ರಕ್ಷಿಸೆಂದೀಕ್ಷಿಸಿ ಮಿಗೆ ಪೊಗಳ್ದಂ ಬಾಷ್ಪದೃಕ್‌ಪುಷ್ಪಚಾಪಂ ೧೪

ಅಂತು ದರ್ಪಕಂ ಶೂರ್ಪಕಮರ್ದನನಾರ್ಪುಗುಂದಿ ಕಾರ್ಪಣ್ಯದಿಂ ನಗತನೂಜೆಯಂ [3]ಪೊಗಳುತ್ತುಂ[3] ಮತ್ತಮಿಂತೆಂದಂ,

---

೧-೧ ಕಡುಗಾಯ್ಪಿಂದೊಡನೊಡನೆ (ಕಾ ಕ). ೨-೨ ತಾಳ್ದು (ಕಾ ಬೆ ಯು).
೩-೩ ಪೊಗಳ್ದು (ಕಾ ಬೆ ಯು)

ಗಿರಿಶನ ತಪಮಂ ಕಿಡಿಸಲ್
ಮುರರಿಪು ಕಳುಪಿದೊಡೆ ಬಂದು ಹೇಮಾಚಳಮಂ
ಭರದಿಂದೆ ಮುತ್ತೆ ನಂದೀ
ಶ್ವರನಿಂದಂ ಸಕಲಸೇನೆಯುಳಿದಾನುಳಿದೆಂ ೧೫

ತಾಯೇ ತವರೇ ಕೇಳೆ
ನ್ನಾಯುಮಂ[೧]ಯೆನ್ನಸುಮಂ[೧] ಕಾವುದೆಂದೊಱಲುತ್ತುಂ
ಬಾಯುಳಿವ ಮದನನಂ ಕಾ
ತ್ಯಾಯನಿ ದಯೆಯಿಂದೆ ನೋಡಿ ನಯದಿಂ ನುಡಿದಳ್ ೧೬

ಅಱಿದೆಂ ನಿನ್ನಯ ಬರವಂ
ಕಱೆಗೊರಲನ ತೀವ್ರತಪಮನೆಳ್ಚುವುದೀ
ತೆಱದಿಂದೆನ್ನಿಷ್ಟಮದೆ
ನ್ನಱಿಕೆಯುದೆನ್ನಿಚ್ಛೆ[೨]ಯೆನ್ನಲಾಭಂ ಲೋಭಂ[೨] ೧೭

ನಾನಾವಿಧದಿಂ ರುದ್ರನ
ನೂನತಪೋಭರದ ಬೆಸುಗೆಯಂ ಬಿಡಿಸೊಲವಿಂ
ಶ್ರೀನಂದನ ನೀನಂಜದಿ
ರಾನಿರ್ದಪೆನಾನೆ ರಕ್ಷೆಯಾನೆ ಸಹಾಯಂ ೧೮

ಎಂದಗಜೆ ಬೆಸಸೆ ಕಾಮಂ
ಪಿಂದಣ ಪರಿಭವಮ[೩]ನುಡುಗಿ[೩] [೪]ತಳೆ[೪]ದತಿಮುದಮಂ
ಸಂದಣಿಸುತೊಡನೊಡನೆ ನಡೆ
ತಂದಂ ಪುಷ್ಪಕದ ನೆಳಲ ಕರ್ಬಿನ ಮಱೆಯೊಳ್ ೧೯

ಆ ಸಮಯದೊಳ್,

ಮುಗಿದ ಮನಂ ಮುಗಿದ ಕರಂ
ಮುಗಿದಕ್ಷಿ[೫]ಗಳಲರ್ದ ಪುಳಕಮಲರ್ದಾನಂದಾ[೫]
ಶ್ರುಗಳಲರ್ದ ಭಕ್ತಿ ತನ್ನೊಳ್
ಸೊಗಯಿಸೆ ನಂದೀಶನಿರ್ದನುತ್ತಮಭಕ್ತಂ ೨೦

೧–೧ ಯೆನ್ನುಸುರೆ (ಬೆ ಯು). ೨–೨ ಸುಖಮುದೆನ್ನಯ ಲಾಭಂ (ಕ). ೩–೩ ನುಳಿದು (ಬೆ ಕೊ). ೪–೪ ಕಳೆ (ಕಾ ಕ ದಾ ಯು). ೫-೫ ಗಳಲರ್ದಪುಳಕಮಲರ್ದಾನಂದಾ (ಕಾ).

ಅಂತಿರ್ದ ನಂದೀಶನಂ ಚಂದ್ರಾನನೆ ಕೃಪೆಯಿಂದಂ ನೋಡುತ್ತುಂ ಶಿವಾರ್ಚನಾತತ್ಪರೆ [೧]ಪುಷ್ಪೋಪಚಯಕ್ಕೆ[೧] ಬಿಜಯಂಗೆಯ್ದಳಿತ್ತಲ್ ಪುಷ್ಪಚಾಪಂ ನಂದೀಶನ ಕಾಪಿನ ಸೀವೆಯಂ ಕಳೆದು,

ಉತ್ಪಲ

ಬಂದು ಮತಂಗಪರ್ವತಮನೇಱಿ ಮಹೇಶನ ವಾಮಭಾಗದೊಳ್
ನಿಂದು ವಿರಾಜಿಸಿರ್ಪ ರತಿಯಂ ಕೆಲದೊಳ್ ನಿಲವೇಳ್ದು ಶೌರ್ಯವೀ
ರ್ಯಂ ದಳವೇಱಿ ಮೀಱಿ ನಭದೊಳ್ ಸುರಸಂತತಿ ನೋಡಿ ಭಾಪು ಭಾ
ಪೆಂದೆನೆ ಮುಂದೆ ಪುಷ್ಪಶರನೀಕ್ಷಿಸಿದಂ ನಿಟಿಲಾಕ್ಷಲಕ್ಷ್ಯಮಂ ೨೧

ಅಂತು ನೋಡಿ,

ಅತುಳಬಳನಪ್ರತಿಮನೂ
ರ್ಜಿತಶೌರ್ಯಂ ಕರ್ವುವಿಲ್ಲನೆಡಗೆಯ್ಯೊಳ್ ಮಂ
ಡಿತಮೆನೆ ಪಿಡಿರ್ದಹಾ ರತಿ
ಪತಿ ನಾರಿಯನೋವಿ ನೀವಿ ಜೇವೊಡೆವಾಗಳ್ ೨೨

ವ್ರತಿಗಳ್ ಮನುಗಳ್ ಮುನಿಗಳ್
ಯತಿಗಳ್ ಸೆಡೆವಳ್ಕಿ ಬಳ್ಕಿ ಸುಗಿದಗಿದು ಕರಂ
ಮತಿಗೆಟ್ಟರ್ ಧೃತಿಗೆಟ್ಟರ್
ಗತಿಗೆಟ್ಟರ್ ಬುದ್ಧಿಗೆಟ್ಟರುನ್ನತಿಗೆಟ್ಟರ್ ೨೩

ಅಂತಿಕ್ಷುಧನುಷ್ಟಂಕಾರರವದಿಂದಧಿಗತಪರಮಾರ್ಥರೆನಿಪ ಜಿತೇಂದ್ರಿಯರ್ ವಿಕಾರಚಿತ್ತರಾಗುತ್ತುಮಿರಲಿತ್ತಲ್ ಕುಸುಮಾಯುಧಂ ವಿಷಮಾಕ್ಷನನಿಸಲೆಂದು ಸಾಹಸಚಿತ್ತನುತ್ಸಾಹಿಸುತಿರ್ಪಾಗಳ್,

ಪಸರಿಸಿ ಪರ್ಬಿದ ನೀಡಡಿ ,
ಕುಸಿದಂಗಂ ನೀಳ್ದು ದಂಡೆ ನೆಗೆವ ಭುಜಾಗ್ರಂ,
ಕುಸುಮಶರಾಕುಂಚಿತಕರ ,
ಮೆಸೆದಿರ್ದುವು ದೃಷ್ಟಿ ಮುಷ್ಟಿ ಶರಸಂಧಾನಂ ೨೪

ಆ ಸಮಯದೊಳ್,

೧–೧ ಪುಷ್ಪಾಪಚಯಕ್ಕೆ (ಶಾ ದಾ ಯ).

ಶೃಂಗಾರಂ ಕೋಡಿಟ್ಟುದೊ,
ಜಂಗಮಲತೆ ವೃತ್ತಮಾಯ್ತೊ, ಲಾವಣ್ಯಂ ಶೌ
ರ್ಯಾಂಗಂಬಡೆದುದೊ ಪೇಳೆನೆ
ಪಿಂಗದೆ ನೆಱೆ ತೆಗೆದು ಪುಷ್ಪಚಾಪಂ ನಿಂದಂ ೨೫

ಹರಿಯಜರರಿದರಿದೆನೆಯುಂ
ಬರತಳದೊಳ್ ಕಲಹಲಂಪಟಂ ನಾರದನಾ
ರ್ದಿರೆ ಕಾಮಂ ಸಾಯಲ್ ಬ
ಲ್ಲರ ದೇವಂ ತೊಟ್ಟನೊಂದು ಸರಲಂ ೧ತೊಟ್ಟಂ೧ ೨೬

ಅಂತು ನನೆಗಣೆಯುಂ ತೊಟ್ಟು ವಿಕ್ರಮಮುಮಂ ಮುಂತಿಟ್ಟು ಕೇಣಮುಮಂ ನಿಂಬಿಟ್ಟು ಕಲಹಮನೊಡಂಬಟ್ಟು ಭಾಳಾಕ್ಷನಂ ಲಕ್ಷಿಸಿ ನೋಡಿ,

ಅಜ್ಞತೆಯಿಂ ಸಕಳಕಳಾ
ಭಿಜ್ಞನ್ನನಖಿಳೈಕ೨ತಾತನಂ೨ ಮದನಂ ದಿ
ವ್ಯಜ್ಞಾನಿಯು೩ನಿರದುಱಿ೩ ಸ
ರ್ವಜ್ಞನನುನ್ಮದನಬಾಣದಿಂ ತೆಗೆದೆಚ್ಚಂ ೨೭

ಎಜ್ಜೊಡೆ ತಪೋಮರೀಚಿಯು
ನುಚ್ಚಳಿಸಲ್ಕಾಱದಿತ್ತ ತಿರುಗಿದ ಶರಮಂ
ಬೆಚ್ಚಱದೀಕ್ಷಿಸಿ ಛಲದಿಂ
ದೆಚ್ಚಂ ಪಂಚೇಷು ಮದನಶರದಿಂದಾಗಳ್ ೨೮

ನೀಡಾಗದೆ ಮದನಶರಂ
ನಾಡೆಯುಮಿರದೆಯ್ದಿ ಹರನ ಹತ್ತಿರೆ ಬೀಳು
ತ್ತೋಡಿ ಬರೆ ಕಂಡು ಕಾಮಂ
ಹೂಡಿದನುಬ್ಬುಕ್ಕೆನುತ್ತೆ ಮೋಹನಶರಮಂ ೨೯

ಇದು ಹರಿಯಜಸುರಪತಿಗಳ
ಮದಮುಡುಗಿಸಿತೀ ಶರಂ ಕರಂ ಮೂಱುಂ ಲೋ
ಕದ ಚಿತ್ತಮನಲ್ಲಾಡಿಸಿ
ತಿದೆಕ್ಕೊಳ್ಳದೆ ಕೊಳ್ಳೆನುತ್ತೆ ಮನ್ಮಥನೆಚ್ಚಂ ೩೦

೧-೧ ಭರದಿಂ (ಗ ಬೆ ಯು ಸೆ ಕೊ). ೨-೨ ದಾತನಂ (ಬ). ೩-೩ ನಂಜದೆ (ಗ ಕೊ).

ಆಂತೆಸೆ ಮೋಹನಶರವಾ
ರ್ಚಿಂ ತಡೆಯದೆ [೧]ಶೂಲಧರನ[೧] ಬಹಿರಂಗಮನಂ
ತಂತೆ ನಸು ಸೋಂಕಿ ಬರುತಿರೆ
ಸಂತಾಪನಬಾಣದಿಂದೆ ರತಿಪತಿಯೆಚ್ಚಂ ೩೧

ತೆಗೆದೆಚ್ಚೊಡೆ ಸಂತಾಪನ
ಮಗಲದೆ ಪರಿತಂದು ಹರನ ಮನದೊಳಗಂ ಮೆ
ಲ್ಲಗೆ ಮುಟ್ಟಿ ಮುಟ್ಟಲಣ್ಮದೆ
ಮಗುಳ್ದುದಿತೆ ಬರೆ ಕಂಡು ಮನ್ಮಥಂ ಮುಳಿದಾಗಳ್ ೩೨

ಲೋಕಕ್ಕದ್ಭುತಮೆಲೆಲೆ ಪಿ
ನಾಕಿಯ ತಪಮಿನ್ನುಮೆನ್ನಿದಿರೊಳಿರ್ದಪುದೆಂ
ದಾಕರ್ಣಂಬರೆ ತೆಗೆದು ವ
ಶೀಕರಣಾಸ್ತ್ರದಿನನೂನವಿಕ್ರಮನೆಚ್ಚಂ ೩೩

ಇಸೆ ಬಂದು ವಶೀಕರಣಂ
ಸಸಿಯಂ ಸೂಡಿದನ ಕಮಲವಿಮಲಜ್ಞಾನಾ
ವಸಥಪರಂಜ್ಯೋತಿಯ [೨]ಕಾ
ಲ್ದೆಸೆಯಂ[೨] ಕಾಣದೆ ಮರಳ್ದು ಬರೆ ಬೆಱಗಾದಂ ೩೪

ಓಹೋ [೩]ಉನ್ಮದನಮದನ[೩]
ಮೋಹನಸಂತಾಪನಂ ವಶೀಕರಣಾಸ್ತ್ರ
ವ್ಯೂಹಂ ವ್ಯರ್ಥಮಿದೆಂದು
ತ್ಸಾಹಂಗುಂದುತ್ತೆ [೪]ಮದನನಂದಿಂತೆಂದಂ[೪] ೩೫

ಟಂಕಾರಾಲ್ಪಧ್ವನಿಯಿಂ
ಕಿಂಕುರ್ವಾಣತೆಯನೆಯ್ದುವರ್ ಮುನಿಗಳ್ ನಿಃ
ಶಂಕನನಚಳಿತನಂ ಹರ
ನಂ ಕಂಡೆಂ ಧರೆಗೆ ಚಿತ್ರಮತುಳಚರಿತ್ರಂ ೩೬

೧–೧ ಬಂದು ಶಿವನ (ಅ) *೩೧ನೆಯ ಪದ್ಯವು ಬ ಪ್ರತಿಯಲ್ಲಿಲ್ಲ ೨–೨ ಕಾಳಸೆಯಂ (ಮ ಬ). ೩–೩ ಉನ್ಮದಮದನಸ (ಕಾ); ಉನ್ಮದಮದನಂ (ಅ). ೪–೪ ಮನದೊಳಂ ದಿಂತೆಂದಂ (ಕಾ ಬೆ).

ತೆಱಹುಗುಡನಚಳನನ್ಯವು
ನಱಯುಂ ನಿರುಪಮಸವಾಧಿಯುಕ್ತನಭೇದ್ಯಂ,
ಕುಱುಹಿಲ್ಲೆನುತುಂ ಬಿಲ್ಲುಂ
ಬೆಱಗಾಗಿರ್ದಂ ರತೀಶನಸ್ತ್ರವಿಳಾಸಂ, ೩೭

ಈ ತೆಱದಿಂ ಬೆಱಗಾಗಿ ನಿ
ಶಾತತಪೋಗಾತ್ರ[1]ಧರನನೆಸಲಾಱದ[1] ವ್ರಾ
ಜಾತನನೀಕ್ಷಿಸಿ ಗಗನದೊ
ಳಾತುರಿಸುವ ಹರಿಯಜರ್ಗೆ ನಾರದನೆಂದಂ ೩೮

ಜಲದೊಳಗಣ ಜಲಜದವೋಲ್
ತಿಲದೊಳಗಣ ತೈಲದಂತೆ ಕಾಷ್ಠದ ನಡುವು
ಜ್ಜ್ವಲಿಸುವ ಶಿಖಿಯುಂತೊಪ್ಪುವ
ಚಲಶಿವನಂ ಕಾಮನೆಸುಗೆ ಕೆಯ್ಕೊಂಡಪುದೇ ೩೯

ತ್ರಿಣಯನನಂ ಹರನಂ ನಿ
ರ್ಗುಣನಂ ಸಡಿಫಡ ರತೀಶನಿಸುವನೆ ಹೋ ಬೇ
ಡಣಕದ ಮಾತೆಲ್ಲಿಯುದೆ
ತ್ರಣ ಕಾಮನದೆತ್ತಣಭವನೆತ್ತಣ ಬಾಣಂ ೪೦

ಎಂದು ಗಗನಾಂಕಣದೊಳ್ ಕುಣಿವ ಸಂಗ್ರಾಮಲಂಪಟನಪ್ಪ ನಾರದ ಮುನೀಂದ್ರಂ ನಾರಾಯಣನೀರಜಸಂಭವರ್ಗೆ ನಲಿನಲಿದು ಪೇಳುತಿರ್ಪಿನಮಿತ್ತಲ್,

ಮತ್ತೇಭ

ನಡೆತಂದಳ್ ಶಿವಪೂಜೆಗೆಂದಗಜೆ ಪುಷ್ಪವ್ರಾತಮಂ ಕೊಂಡು ಸಂ
ಗಡದೊಳ್ ಬರ್ಪ ವಿಲಾಸಿನೀನಿಕರದಿಂ ಸೌರಭ್ಯಲೋಲುಪ್ತಿಯಿಂ,
ಗಡಣಂಗೊಂಡ ಶಿಳೀಮುಖಪ್ರಕರದಿಂ[2]ಸುಯ್ಗುಂಪಿನೊಳ್ ಸಾರ್ದು[2] ಮುಂ
ಗುಡಿಯೊಳ್ ತೀಡುವ ದಕ್ಷಿಣಾನಿಲನಿನೊಪ್ಪಂಬೆತ್ತ[3]ವಿಸ್ತಾರದೊಳ್[3] ೪೧

೧–೧ ಹರನನಿಸಲಾಱದ (ಕಾ ಬಿ) ೨–೨ ಸುಯ್ಗುಂಪಿನೊಳ್ ಸೇರ್ದು (ಮ ಬ); ಸುಯ್ಗುಂಪುಮಂಪೀರ್ದು (ಬಿ). ೩ ನಿಸ್ತಾರದಿಂ (ಓ).

ಉತ್ಪಲ

ಬಂದು ನವೀನಪುಷ್ಪಕುಲಮಂಡನಮಂ, ಜಡೆಯೊಳ್ ಭುಜಂಗಳೊಳ್
ಸಂದ ಕರಂಗಳೊಳ್ ಶಿವನ ತೋಳ್ಗಳೊಳುರಃಸ್ಥಳದೊಳ್ ಪದಂಗಳೊಳ್
ನಿಂದು ವಿಳಾಸದಿಂದಗಜೆ ಸಿಂಗರಿಸುತ್ತೆ ಕಟಾಕ್ಷಕಾಂತಿಯೊಳ್
ಸಂದಣಿಗೊಳ್ವ ಕಾಮ[೧]ಕುಲಮಂ[೧]ದೊಗೆಯುತ್ತಿರೆ ನಾಡೆ ನೋಡಿದಳ್ ೪೨

ಅಂತು ನೋಟದೊಳ್ ಕೋಟ್ಯನುಕೋಟಿ ಕುಸುಮಾಯುಧರ್ ಪುಟ್ಟುತ್ತಿರೆ, ಪುಷ್ಪಾಂಜಲಿಯಂ ಪಿಡಿದು ಕಪರ್ದಿಯ ತಪಮೆಂಬ ಶಶಿಕಾಂತಶಿಳಾತಳದೊಳ್ ಬಿಳ್ದ ಚಂದ್ರಕರಂಗಳಂತೆಯುಂ; ಶಂಭುವಿನನೆಳ್ಜ[೨]ಱ[೨]ಕೆಯೆಂಬ ಚಂದ್ರೋದಯಮಪ್ಪನ್ನಂ ಸೈರಿಸದೆ ಪರಿದು ಮುತ್ತುವ ಚಕೋರಿಗಳಂತೆಯುಂ; ಹರನ ಕರಣಂಗಳೆಂಬ ಬಲ್ಲನೆಗಳಲರ್ವಣ್ಣ ಮಿರಲಾಱದೆ ಪರಿದೆಱಗಿ ಸುತ್ತಿ ಮುತ್ತುವ ಮಧುಕರಂಗಳಂತೆಯುಂ; ಬೇಗಮಾಗಳೆ ನಿನ್ನ ತಪಮಂ ಪಕ್ವತರಮಂ ಮಾಳ್ಪೆನೆಂಬ [೩]ಭೀ[೩]ಂಕೃತಿಯಂ ನುಡಿದು ಪರಿದು ಬೆರಸುವ ಕುಸುಮಶರಂಗಳಂತೆಯುಮಿರ್ದು ತನ್ನ ಸರಸದೃಷ್ಟಿಗಳಿಂ ಹರನಂ ನೋಡುತುಂ ತಪೋಭರಮಂ ಬಿಡಿಸಲಿರ್ದ [೪]ಮೃಡಾನಿಯಂ[೪] ಕುಸುಮಕೋದಂಡಂ ಕಂಡು,

ಇನ್ನಂಜಿನಂಜೆನಾಹಾ
ಉನ್ನತಬಲಮಾಯ್ತೆನುತ್ತೆ [೫]ವಿಭ್ರಮ[೫]ಬಳಸಂ
ಪನ್ನಂ ಕಾಮಂ ತೆಗೆದಂ
ತನ್ನಗ್ಗದ ದುದಂಚಪಂಚಬಾಣಮನಾಗಳ್ ೪೩

ನಳನಳಸುವಿಕ್ಷುಚಾಪದೊ
ಳಳವಡೆ ನಡೆನೋಡಿ ಹೂಡುತೈದಂಬಂ ಸಂ
ಚಳಿಸದ ಶಂಕರನ ಮನಂ
ಚಳಯಿಪುದಂ ಸಾರ್ದು ಪಾರ್ದು ತೆಗೆನೆಱೆ[೬]ದಿರ್ದಂ ೪೪

ಮಹಾಸ್ರಗ್ಧರೆ

ತೆಗೆದಾಕರ್ಣಂಬರಂ [೭]ಶಂಬರ[೭]ರಿಪು ನೆಱೆ ಹೂಡಿರ್ದ ಪುಷ್ಪಾಸ್ತ್ರದೊಂದು,
ಜ್ಜ್ಜಗಮಾಕಾಶಸ್ಥನಾಕೌಕರೊಳೊದವಿದನೂನಾರ್ತಿ ಕೂರ್ತೆಯ್ದೆ ನಿಂದಿ
ರ್ದಗಜಾಚಿತ್ತಾಭಿಲಾಷಾವಿತತಿ ನೆರೆದು ಭೂತೇಶಚಿತ್ತಾಂತದೊಳ್ ಪೊ
ಕ್ಕು ಗಭೀರೋದ್ಯತ್ತಪೋಬೀಜಮನತಿಭರದಿಂದೊತ್ತಿ ಮುತ್ತಿತ್ತು ಸುತ್ತಂ ೪೫

೧-೧ ಕಳೆಯಂ (ಕಾ). ೨-೨ ಝು (ಕಾ). ೩-೩ ಭವಾನಿಯಂ (ಅ). ೪-೪ ವಿಕ್ರಮ (ಅ). ೫-೫ ಶಂಕರ (ಅ ಓ).

ಇಂತು ಸಕಲಜಗದ್ಧಿತಾರ್ಥಮಪ್ಪ ಹರಿವಿರಿಂಚಿಗಳ ಮನದ ಬಯಕೆಯುಂ, ಕಂದರ್ಪನ ಪಂಚಬಾಣಾನುಸಂಧಾನಮುಂ, ಪಾರ್ವತಿಯ ಮನೋರಥಮುಂ ಮುಪ್ಪುರಿಗೊಂಡು ಶಿವನ ನಿಷ್ಕ್ರಿಯಾತ್ಮಕನಿರುಪಾಧಿಕನಿರಾವರಣ[೧]ಸ್ವಾನುಭವ[೧]ಸಂವೇದ್ಯಸ್ವಯಂಪ್ರಕಾಶಮಂ ಸುತ್ತಿ ಮುತ್ತಿ ಪತ್ತಿ ಜಿಗಿಲ್ತು ಬಿಡದಿರೆ ನಿರ್ವಿಕಾರ ಸ್ವರೂಪನಪ್ಪ ಪರಮಂಗೆ ಸ್ವಪ್ನೋಪ[೨]ಮಾಹಂ[೨]ಮಮಂತೆ ತಲೆಯೋಱೆ ಜೀವನಾಗಿ ಜೀವನಿಂ ಪ್ರಾಣಾನಿಲಂ ಪ್ರಾಣಾನಿಲನಿಂ ಚಿತ್ತಂ ಚಿತ್ತದಿಂದಹಂಕಾರಂ ಅಹಂಕಾರದಿಂ ಬುದ್ಧಿ ಬುದ್ಧಿಯಿಂ ಮನಂ ಜನಿಯಿಸಿತ್ತಂತರಂಗಬಹಿರಂಗಭಾವಮಂ ನೆನೆಯೆ ನೆನೆವಲ್ಲಿಂ ಮುನ್ನಂ ಮದನನ ಪಂಚಬಾಣಂ ಪರಿತಂದು ನೆರೆದಡಿಪಿ ಬೆರಸಿ ಕವಿದು [೩]ಮನಮನಿರ್ಮೆಯ್ಗೊಂಡು[೩] ಸಹಸ್ರಮುಖದಿಂ ಸಂಚಳಮನೀಯೆ ನಿಲಲ್ಬಾರದೆ ತಪೋಭರದ ಬೆಸುಗೆ ಬಿಡುವಂತೆ ಮೆಯ್ಯ ಸಂಪುಟಂ ಬಿರ್ಚಲೊಡಂ ನೋಡಿ ನೋಡಿ ನೋಡಲಣ್ಮದೆ ಪುಷ್ಪಶರಮಂ ನೂರ್ಮಡಿಸುವಂತೆ ಪುಷ್ಪಾಂಜಲಿಯಂ ಕೊಟ್ಟಂತೆ ಕಂಪಿಸಿ ಮುಂತೆ ಮೆಯ್ಯಿಕ್ಕಿರ್ದ ಗಿರಿಜಾತೆಯಂ ಭೂತೇಶ್ವರಂ ಕಂಡಾನೇಕೆಯಿಾ [೪]ಮಾನಿನಿಯೇಕೀ ತಪದೊಳೆಲ್ಲಿಯುದೆತ್ತಣಿಂ[೪] ಬಂದುದಾರಿಂದಾದುದೆಂದು ಕಾಮನಿರ್ಪ ವಾಮಭಾಗಮಂ ನಿಟಿಲಾಕ್ಷಂ ನಸುಗೋಪದಿಂ ನೋಡಿದಾಗಳ್,

ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದು ನಿಟಿಲೇಕ್ಷಣದೊಳ್
[೫]ಕೂಡೆ[೫] ಬಳೆಬಳೆದು ಸುಳಿಸುಳಿ
ದೀಡಿಱಿದೊಳಗೊಳಗೆ ಘುಳಘುಳಿಸಿ [೬]ಕಂದಿ[೬]ದಾಗಳ್ ೪೬

ಚಂಪಕ

ಪೊಗೆದುದು ಪೊತ್ತಿದತ್ತು ಕಿಡಿಯಿಟ್ಟುದು ನಾಲ್ದೆಸೆದೋಱಿದತ್ತು ಬಾನ್
ಗೊಗೆದುದು ನಿಂದು ಪೊಂಬೆಳಗುಮಂ ಪರಪುತ್ತದು ಧಂಧಗಿಲ್ ಧಗಿಲ್
ಧಗಿಲೆನುತಟ್ಟಿ ತಟ್ಟಿದುದು ಮುಟ್ಟಿತು ಸುಟ್ಟಿತು ತಿಂದು ತೇಗಿದ
ತ್ತಗಿಯದೆ ನಿಂದ ಪೂಗಣೆಯನಂ ಪಣೆಗಣ್ಣುರಿ ಹಂಪೆಯಾಳ್ದನಾ *೪೭

ಇಟ್ಟಣಿಸಿ ಘುಡುಘುಡಿಸಿ ಕಿಡಿ
ಗುಟ್ಟಿ ಕನಲ್ದಡಸಿ ಸಿಡಿಲ ಬಳಗದ ಮುಳಿಸಂ
ತೊಟ್ಟುದು ಬಿಸುಗಣ್ಣುರಿ ಪೊಱ
ಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ ೪೮

೧–೧ ಸ್ವಾನುಭಾನ (ಕಾ ಬೆ ಯ ಬ). ೨–೨ ಮಾಯಂ (ಕಾ ಬೆ ಅ ಓ). ೩–೩ ಮನಮನಿಂಬುಗೊಂಡು (ಅ). ೪–೪ ಮಾನಿನಿಯೇಕೆಯಿಾ ತಪಮೆಲ್ಲಿಯುದೆತ್ತಣಿಂ (ಕಾ). ೫–೫ ಮೂಡಿ (ಕೊ ಸೆ). ೬–೬ ಮುಳಿ (ಕಾ ಬೆ ಬ ಯ ಅ ದ ಸೆ). * ಪದ್ಯವು (ಮ ಬ ಯ ಅ ದಾ ಕ ಡ ಓ) ಪ್ರತಿಗಳಲ್ಲಿಲ್ಲ.

ಗಗನದ ಹರಿಸುರಪತಿಗಳ್
ಜಗದ್ಧಿತಾರ್ಥಂ ಮಹೇಶ ಕರುಣಿಪುದೆಂಬ
ನ್ನೆಗಮಿತ್ತಲ್ ಘಿಳ್ ಘಿಳ್ ಭುಗಿ
ಭುಗಿಲೆನೆ ನೆಱೆ ಕಾಮನುರಿದು ಕರಿಮುಱಿವೋದಂ ೪೯

ತೊಟ್ಟನೆ ಭಾಳಾನಲಗನಿರಂ
ದೊಟ್ಟಯಿಸಿಯೆ ಕುಸುಮಶರನನುರುಪಿದ ಪದದೊಳ್
ಪುಟ್ಟಿತುಮಂ ಪೋದುದುಮಂ
ಸುಟ್ಟುದುಮಂ ಕಾಣಬಾರದಾಯ್ತಾ ಕ್ಷಣದೊಳ್ ೫೦

ಅಂತುಮಲ್ಲದೆ,

ಮತ್ತೇಭ

ಅರರೇ ಭುರ್ಭುಗು ಭಾಪುರೇ ಭುಗುಭುಗು ಪ್ರಜ್ವಾಲೆ ಮಜ್ಜಯ್ಯ ದೇ
ವುರೆ [1]ಮೇಘಾನಲ[1]ವಿಸ್ಫುಲಿಂಗಮುಮಮ ಪ್ರದ್ಯೋತವಯ್ಯಯ್ಯ ಭೀ
ಕರವಾಹಾ ಛಿಳಿಛಿಳ್ ಛಿಟಿಲ್ ಛಲರೆ ಭಾಳಾಭೀಳಮೆಂದೆಂದು ನಿ
ರ್ಜರಲೋಕಂ ಬೆಱಗಾಗೆ ಸುಟ್ಟುದು ವಿರೂಪಾಕ್ಷಾಕ್ಷಿ ಕಂದರ್ಪನಂ ೫೧

ಸಂದಣಿಸಿ ಪತ್ತಿದುರಿ ಘರಿ
ಲೆಂದುರುಪಿಡೆ ಬೇಗದಿಂದೆ ಉರಿದಾಕ್ಷಣದೊಳ್
ಬೆಂದ ನುಲಿಯಂತೆ ಮದನಂ
ನಿಂದಿರೆ ಕಂಡಭವನೆಯ್ದೆ ಮುಳಿದಂ ತುಳಿದಂ ೫೨

ಜಯಶೀಲಂ ಪ್ರಭು ಪಾವಕ
ನಯನಂ [2]ವಿಷಕಂಠನಹಿವಿಭೂಷಂ[2] ಕೋಪೋ
ದಯನಭವಂ ಸ್ಮರಭಸ್ಮಾ
ವಯವಂ ತಾನಾದನತುಳಬಳನಪ್ರತಿಮಂ ೫೩

ಇಂತತಿಸ್ವತಂತ್ರಂ ಶತಪತ್ರನೇತ್ರಪೂಜಿತಪಾದಂ ಹೇಮಕೂಟಾಗ್ರದ ಮತಂಗ ಪರ್ವತದೊಳ್ ಮದನನಂ ಸುಟ್ಟುರುಪುತ್ತನಂಗಭಸ್ಮೋದ್ಧೂಳಿತಗಾತ್ರನಾಗಿ,

---

೧-೧ ನಂ (ಕ). ೨-೨ ಕೋಪಾನಳ (ಕಾ ಬಿ ಯ).

ಮುಂತಿರ್ದೋಪ್ಪುವ ಗಿರಿಜಾ
ಕಾಂತೆಯನೀಕ್ಷಿಸದೆ ನುಡಿಯಿಸದೆ ಸೋಂಕದೆ ನಿ
ಶ್ಚಿಂತಂ ಸ್ವತಂತ್ರನಹಿಧರ
ನಂತರ್ಧಾನಕ್ಕೆ ಸಂದನಲ್ಲಿಂ ಬಳಿಯಿಂ ೫೪

ಶಿವನಧಿಕಾಕ್ಷಕ್ರೋಧೋ
ದ್ಭವಶಿಖಿಯಿಂ ಮದನನುರಿಯೆ ರತಿಗತಿಶೋಕಂ
ಕವಿದಳ್ಕಿದಳಂದುಗುಪ
ಪ್ಲವಮಾಗೆ ಚಕೋರಿ ಕರಗಿ ಕೊರಗುವ ತೆಱದಿಂ ೫೫

ಇಂತು ಮನಮಳ್ಕಿ ತನು ಬಳ್ಕಿ ಕೋಡಿ ^೧ಕರಣಂ^೧ ಬಾಡಿ ಮತಿ ಕೆಟ್ಟು ರತಿ ದೇವಿಗತಿದುಃಖಂ ಪುಟ್ಟಿ ನಿಲಲಾಱದೆ ಕೊರಗುತುಂ ಪರಿದು ಬಂದು,

ಬೆಂದಿರ್ದ ಕಾಮನಂ ಕಂ
ಡಂದಳಲೊಳ್^೨ಗೇಱ^೨ ನುಡಿಯಲಱಿಯದೆ ನಿಲೆ ಶೋ
ಕಂ ದಳವೇಱುತೆ ಮಿಾಱುತೆ
ಸಂದಣಿಸುತ್ತಳಸಿತಸ್ತ್ರರತಿಯಂ ರತಿಯಂ ೫೬

ಅದೆಂತೆಂದೊಡೆ,

ಎತ್ತಣ ಹರನೆತ್ತಣ ತಪ
ಮೆತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್
ಎತ್ತಣುರಿ ಎತ್ತಣೆರವಿದು
ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ ೫೭

ಎಳೆಯನೆ ಸುಕುಮಾರನೆ ಸದ
ಮಳನೆ ಸುಖಪ್ರದನೆ ಸೊಬಗೆ ಸುರತರುವೇ ತತ್
ಫಳಮೆ ಸುಧಾರಸಮೇ ನಿ
ನ್ನಳವಱಿಯದೆ ನೊಸಲ ಕಣ್ಣ ಮುಸುಕಂ ತೆಱೆದಯ್ ೫೮

೧-೧ ಕಣ್ (ಅ). ೨-೨ ಗೞಗಿ (ಕಾ ಬೆ ಬ ಕ ಯ).

ಅಸ್ವಪ್ನರನತಿಘೋರತ
ಪಸ್ವಿಗಳನಪಾರಮಹಿಮರಂ ವಿಮಳಾಜಾ
[೧]ರಾ[೧]ಸ್ವಾದಿಗಳಂ ಗೆಲ್ದ ಮ
ನಸ್ವಿ ಲಲಾಟಾಗ್ನಿಗೆಂತು ಸವಿದುತ್ತಾದಯ್ ೫೯

ಕಂತುವೆ ನೀನಿಂತಾದೊಡ
ದೆಂತುಳಿವೆನದೆಂತು ನಿಲ್ವೆನೆಂತೊಪ್ಪುವೆನಿ
ನ್ನೆಂತುಸಿರ್ವೆನೆಂತು ಬಾಳ್ವ
ದೆಂತೀಕ್ಷಿಪೆನೆಂತು ಪೋಪೆನೆಂತಾನಿರ್ಪೆಂ ೬೦

ಭಾವಿಸಿ ಭವನಂ ಕುಸುಮಾ
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂದಿರ್ದನಿದಿಂ
ತೋವೋ ನಿಟಿಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆನಲರ್ವಿಲ್ಲರಸಾ ೬೧

ಎಂದಳಲ್ದು ಮತ್ತಮಿರದೆ,

ಶಾರ್ದೂಲ

ಲಾವಣ್ಯಂ ಲಯಮಾಯ್ತು ವಿಭ್ರಮವಿಳಾಸಂ ಮಾಯಮಾಯ್ತುತ್ಕಟಾ
ಜೀವಂ ಬೆಂದುದು ಚೆಲ್ವು ಸತ್ತುದು ಸುಖಂ ಹಾಳಾಯ್ತು ಕಂದರ್ಪ ಸದ್
ಭಾವಂ ಭಸ್ಮಮದಾಯ್ತು ಮೆಯ್ಮೆ ಮಡಿಯಿತ್ತುತ್ಸಾಹವಿಂಗಿತ್ತದಿ
ನ್ನೇವೇಳ್ವೆಂ ನಡೆದೆತ್ತ ಸಾರ್ವೆನಿಳೆಗಿನ್ನೇನಪ್ಪೆನೆಂತಿರ್ಪೆನೋ ೬೨

ಎಲ್ಲಿತ್ತೊ ಶಶಿಯ ಬೆಳ್ಗೊಡೆ
ಎಲ್ಲಿತ್ತೋ ಪೂತ[೨]ನೂತ್ನ[೨] ಚೂತಗಜಂ ತಾ
ನೆಲ್ಲಿತ್ತೊ [೪]ಪಂಚಬಾಣ[೪]ಮ
ದೆಲ್ಲಿತ್ತೋ ಕುಸುಮ[೩]ಚಾಪ[೩]ವಿಭ್ರಮಮಾಗಳ್ ೬೩

ಎಲೆ ಸುರತಕಾಮಧೇನುವೆ
ಎಲೆ ಸುರತಾಂಭೋಧಿಚಂದ್ರ ಎಲೆ ಸುರತಮಹೋ
ತ್ಪಲಸೂರ್ಯ ಎಲೆ ಸುರತಸಂ
ಕುಲಪರಮಾರಾಧ್ಯ [೫]ಎತ್ತಡಂಗಿದೆ[೫] ಮದನಾ ೬೪

೧-೧ ರ (ಕಾ ಬೆ ಬ). ೨-೨ ನೂತ (ಬೆ ಮ ಬ ದಾ). ೩-೩ ಇಕ್ಷುಚಾಪ (ಕಾ ಬೆ ಬ ಅ ಯ) ೪-೪ ಬಾಣ (ಕಾ ಅ ಬೆ ಬ ಯ). ೫-೫ ಯೆತ್ತಲಡಗಿದೆ (ಕಾ ಬೆ ದಾ ಕ ಯ).

ಲಕ್ಷ್ಮಿಗೆ ನೆಱೆ ಪುಟ್ಟಿರ್ದಱಿ
ಲಕ್ಷ್ಮಾಪತಿಯೆನಿಸಿ ಬಾಳ್ದ ಪುರಹರನ ಲಸತ್
ಪಕ್ಷ್ಮಪುಟಾಗ್ರಂ ಬಿರ್ಚಿದ
ಸೂಕ್ಷ್ಮದೆ ಕಾಲದೊಳೆ ಘಳಿಲನುರಿದಯ್ ಮದನಾ ೬೫

ಕೇಳಿಲೆ ಮನ್ಮಥ ಹಂಸೆಯ
ತೂಳದ ತಳ್ಪಂ ಕರಂ ಕಠಿನಮೆಂದೀಗಳ್
ಭಾಳಾಕ್ಷಿಯರಮನೆಯೊಳಾ
ಭೀಳದ ದಳ್ಳುರಿಯ ಮಂಚದೊಳ್ ಪವಡಿಸಿದಯ್ ೬೬

ಅಂತುಮಲ್ಲದೆ,

ಹಾ ಮದನ ಹಾ [೧]ಮನೋಹರ[೧]
ಹಾ ಮಕರಪತಾಕ ಹಾ ಮಹಾವಿಭ್ರಮ ಹಾ
ಹಾ ಮನ್ಮಥ ಹಾ ಸಮ್ಮದ
ಹಾ ಮತ್ಪ್ರಾಣೇಶ ಹಾ ವಿಳಾಸವಿನೋದಾ ೬೭

ಕುಸುಮಾಭರಣಾವಳಿಗಳ್
[೨]ಬಸಮಲ್ಲಂ[೨] ಪೊಱೆಯಿವೆಂಬ ಸುಕುಮಾರತೆಯೊಳ್
ಬಿಸುಗಣ್ಣ ಮಿಸುಪ ಕೋಪದ
ಪೊಸತುಡಿಗೆಯನೆಂತು ಸೈರಿಸಿದೆ ಕಂದರ್ಪಾ ೬೮

ಮತ್ತಮಲ್ಲದೆ ಪಂಚಬಾಣನ ಸರ್ವಗುಣಂಗಳಂ ನೆನೆನೆನೆದು ಸೈರಿಸಲಾಱದೆ ಮತ್ತೆ ಮತ್ತೆ ಶೋಕಂಗೆಯ್ದು,

ಪಸಿವಱಿಯದೆ ತೃಷೆಯಱಿಯದೆ
ದೆಸೆಯಱಿಯದೆ [೩]ಮದನ ಮದನ ಪಲವುಂ ಕಾಲಂ[೩]
ಕುಸುಮದೆ ಲಿಂಗಮನೊಸೆದ
ರ್ಚಿಸಿದ ಫಲಂ ಕಿರ್ಚಿನೊಳಗೆ ಬೇವಂತಾಯ್ತೇ ೬೯

೧–೧ ಮನೋರಥ (ಬೆ ಬ). ೨–೨ ಬಸಮಲ್ಲದ (ಕಾ); ಬಸಮಲ್ಲದೆ (ಕ). ೩–೩ ಮದನ ನೀನು ಪಲವುಂ ಕಾಲಂ (ಯ); ನಿದ್ದೆಯಱಿಯದಿರುಳುಂ ಪಗಲುಂ (ಕಾ ಬೆ); ಮದನ ಮನದಿ ಪಲವುಂ ಕಾಲಂ (ಅ ಓ).

ಸುರತಶ್ರಾಂತಿಯೊಳೀಪತ್
ಪರಿಸುಪ್ತಿಯನೆಯ್ದಿ ಸುಖದೊಳಾನಿರೆ ನೀಂ ಪೆಯ್
ಗರೆದೆನ್ನನಂದು ನೋಯಿಪ
ಪರಿ ತಾಂ ದಿಟಮಾದುದಿಂದು ಮನ್ಮಥಭೂಪಾ ೭೦

ಬೆಳಗಾಯ್ತುಪ್ಪವಡಿಸು [೧]ಬೆಳ
ಬೆಳಗುವ[೧] ಮಣಿಮುಕುರಮುಂ ನಿರೀಕ್ಷಿಸು ಹಂಸಾ
ವಳಿಯುಂ ನಡೆಪಾಡಿಸು ಕೋ
ಕಿಳನಾದಮನಾಲಿಸುಸಿರದಿರ್ಪರೆ ಮದನಾ ೭೧

ಎಂದುಂ ಮುಳಿದೊಡೆ ತಿಳಿವಂ
ಮುಂದಿಟ್ಟಲ್ಲದೆ ಮದೀಶ ಮುಳಿಸಿಲ್ಲಿಲ್ಲೀ
ಯಂದಂ ಪೊಸತಿಂದಿನ ಮುಳಿ
ಸೆಂದಿನ ಮುಳಿಸಿನ[೨]ವೊಲಲ್ತು[೨] ಮದನನೃಪಾಲಾ ೭೨

ಪನ್ನಗ[೩]ಭೂಷನ[೩] ವಿಷಸಂ
ಪನ್ನನ ನಿಷ್ಠುರಗುಣಂಗಳುರಿವುವುದುಚಿತಂ
ನಿನ್ನಂ ನಿನ್ನೀ ಸದ್ಗುಣ
ಮೆನ್ನಂ ನೆರೆದುರಿಪಲೇಕೆ ಮನ್ಮಥರಾಜಾ ೭೩

ಎಂದು ಕುಸುಮಕೋದಂಡನ ಸುಧಾಮಯಸದ್ಗುಣಂಗಳನೆಣಿಸಿಯೆಣಿಸಿ ಪಲುಂಬಿ ಪಂಬಲಿಸಿ ಪಳಯಿಸಿ ಮತ್ತೆ ಮತ್ತೆ [೪]ಮಾಣದೆ,[೪]

ಚಂಪಕ

ಮದಕರಿ ಎತ್ತ ಪೋದೆ ವರಮೂರ್ತಿ ಅದೆತ್ತಲದೃಶ್ಯವಾದೆ ಮದ್
ವದನಸರೋಜಭೃಂಗನೆ ಅದೆತ್ತಲಡಂಗಿದೆ ನೀನದೆತ್ತ ಮ
ಳ್ಗಿದೆ ಮಧುಮಿತ್ರ ಎತ್ತ ಲಯವಾದೆ ಮದೀಶ್ವರ ಎತ್ತಣಕ್ರಮ
ಕ್ಕೊದವಿದೆ ಎತ್ತ ಸಾರ್ದೆ ಕಳೆದೆತ್ತಲಣಂ ತವಿಲಾದೆ ಮನ್ಮಥಾ ೭೪

೧–೧ ತೊಳತೊಳಗುವ (ಕಾ). ೨-೨ ಪೊಲಲ್ಲ (ಕಾ ಜೆ ಬ ಯು). ೩-೩ ಭೂಷಣ (ಕಾ ಬೆ ಯು). ೪ ಕಾಣದೆ (ಅ).

ಎಂದಿಂತು ಶೋಕಿಸುತ್ತುಂ ವ್ಯಾಕುಲಚಿತ್ತೆ ವಲ್ಲಭವಿರಹಿತೆ ಸಕಳಸುಖವಿರಹಿತೆಯಪ್ಪ ರತಿದೇವಿ ನಿಂದಿರ್ದು ಬಿಸುಸುಯ್ದು ಬಸಿಱಂ ಹೊಸೆದು ಕೆಯ್ಯೆತ್ತಿ ದೆಸೆದೆಸೆಯುಂ ನೋಡಿ,

ಮೊಱೆಯೋ ಮೊಱೆಯೋ [೧]ಶಿವಧೋ[೧]
ಕಱೆಗೊರಲನ ಕಣ್ಣ ದಾಳಿ ಕುಸುಮಾಯುಧನಂ
ನೆಱೆ ಮುತ್ತಿತ್ತಯ್ಯೋ ಇದ
ನಱಿವವರಿಲ್ಲಕ್ಕಟಾ ಕೃಪಾಳುಗಳಿಲ್ಲಾ *೭೫

ನೆಲನೇ ನಭವೇ ಶಿಖಿಯೇ
ಜಲವೇ ರವಿಯೇ ಶಶಾಂಕನೇ ಮಾರುತನೇ
ಬಲವಳಿದವಳನನಾಥೆಯ
ನಲಘುತರಾಘಾಘೆಯುಂ [೨]ನಿರೀಕ್ಷಿಸಿರೆನ್ನಂ[೨] ೭೬

ವನದೇವತೆಯರಿರಾ ನಂ
ದನದೇವತೆಯರಿರ ದೆಸೆಯ ದೇವತೆಯರಿರಾ
ಘನಪಾಪಂ ಪುದಿದಿರ್ದೀ
ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ ೭೭

ಎಂದಿಂತು ದೆಸೆದೆಸೆಗೆ ಕರೆಕರೆದು ಬಾಯಾಱಿ [೩]ಬಲ್ಪಳಿದು[೩] ನಿಂದಿರಲಾಱದೆ ಕಾಲ್ ಕುಪ್ಪಳಿಸಿ ಭೋಂಕನೆ ಕುಳ್ಳಿರ್ದು ತನ್ನೊಳಗೆ ತೆಕ್ಕನೆ ತೀವಿ ತೆರೆಮಸಗುವ ಶೋಕರಸಮುರ್ಕಿ ಪೊಱಪೊಣ್ಮಿದುದೆಂಬಂತೆ ಕಣ್ಣ ನೀರ್ ಕಱಿದೊತ್ತರಿಸಿ ಪರಿಯೆ ಮತ್ತೆ ಮತ್ತಳುತ್ತುಂ ಗಂಟಲುರ್ಬಿ ಸೆರೆಬಿಗಿದು ಕಣ್ ಕೆಂಪೇಱಿ ಮಿಕ್ಕು ನೆಗೆವ ಬಿಕ್ಕಿನೊಳ್ ಬೆರಸಿ ನಾನಾವಿಧದಿಂ ನಾಲಗೆಯೊಳ್ ಪೊಱಮಡುವ ಶಿಥಿಲಾಕ್ಷರಂ ಶೋಕಾಗ್ನಿಯೊಳ್ ಬೆಂದುಗಿದು ಸೀದು ಸೀಕರಿವೋಗಿ ಪೊರಳ್ದುರುಳ್ದು ಬರೆ ನೆಲೆಗೊಂಡ ಗದ್ಗದದಿಂ ಪಲುಂಬಿ ಪಳಯಿಸುತುಂ ಮತ್ತಂ ಮನ್ಮಥನುರಿದ ದುಃಖಾನಳನಿಂ ಚಿತ್ತಂ ಹೊತ್ತಿಯಹಂಕಾರಂ ಹೊಗೆದು ಬುದ್ಧಿ[೪]ಯುರಿದು[೪] ಮನಂ ಬೆಂದುರಿಯುಸುರನುಸುರಿಕ್ಕೆ ಕೆಲಬಲದ ಮುಂದಣ ಗುಲ್ಮಲತೆಗಳ್ ಘಳಿಲನೆ ಘುಱಿಘುಱಿಲನುರಿಯೆ ವಶಮಲ್ಲದ ದುಃಖದಿಂ ಬಿಸುಸುಯ್ಯುತ್ತುಂ ಮತ್ತಂ ಗ್ರಹಣಕ್ಕಂಜಿ ಗಗನತಳದ ಮೃಗಧರಬಿಂಬಂ ಪೊಡವಿಯೊಳ್ [೫]ಬಿಳ್ದೊಡನೊಡನೆ[೫]

೧-೧ ಶಿವಥಾ (ಮ ಬ). ೨-೨ ಪರೀಕ್ಷಿಸಿರೆನ್ನಂ (ಪು ಬ ಗೊ ಸ). ೩-೩ ಬಲವಳಿದು (ಅ). * ೭೫ನೆಯ ಪದ್ಯವು ಗ ಪ್ರತಿಯಲ್ಲಿಲ್ಲ. ೪-೪ ಕರಿದು (ಬ). ೫-೫ ಬೀಳಲೊಡನೆ (ಕಾ ಬೆ ಯ).

ಬಿಡವೆ ಬೆಂಬತ್ತಿ ಕಡುವೇಗದಿಂ ಬಂದುರ್ವಿಯೊಳ್ ಸರ್ವಗ್ರಾಸಂಗೊಂಡು ನೆಲದೊಳಿಟ್ಟೊರಸುವ ರಾಹುಮಂಡಲದಂತೆ ಕೆದಱಿದ ಮುಡಿಕಟ್ಟು [೧]ಪಚ್ಚುವರೆದು[೧] ಮುಚ್ಚಿ ಮುಸುಂಕಿ ಭಾಳತಳಮಂ ಭೂತಳದೊಳಿಟ್ಟಾವದ ನೋವಿಂ ತೇದುಕೊಳುತ್ತುಂ ಇಂತು ಕೇಳ್ವ ಪಶುಪಕ್ಷಿಮೃಗಗುಲ್ಮಲತೆವೃಕ್ಷಾವಳಿಗಳ್ಗೆ ಕರುಣಂ ಪುಟ್ಟುವಂತೆ ರತಿಯುತಿಶೋಕಂಗೆಯ್ದು ದುಃಖಪ್ರಳಾಪಂಗೆಯ್ದು ಮೆಯ್ಯಿಕ್ಕಿ ಬಸಿಱಿಂ ಪೊಸೆದು ಜೀತನಂಗೆಟ್ಟು ಭೂತಳದೊಳ್ ಬಿಳ್ದು ಕೆಚ್ಚುಗಟ್ಟಿದಳಲಿಂ [೨]ಮೂರ್ಛೆ[೨]ವೋಗಿ ಕೊರಲೊಳ್ ಹರಣಮಂ ಕಣ್ಗೊಳ್ ಕಾರ್ಪಣ್ಯಮಂ ಪಡಿಮೊಗದೊಳ್ ನಿಡುಸುಯ್ಯಂ ನಾಲಗೆಯೊಳ್ ವಿಕಳತೆಯುಂ ಮನದೊಳ್ ಪರವಶತೆಯುಂ ತನುವಿನೊಳ್ ಜೀತನಮಂ ಪಿಡಿದು ಗಗನದಿಂ ಬಿಳ್ದಂತೆ ದುಃಖದೊಳಳ್ದಂತೆ [೩]ದೈನ್ಯದೊಳೆಳ್ದಂತೆ[೩] ಶೋಕಂ ಹೊಸೆದು ಬಿಸುಟಂತೆ ದುಃಖಂ ರೂಪುಗೊಂಡಂತೆ ಮಱಿದೊಱಗಿರ್ದಾಗಳ್,

ಚಂಪಕ

ಗಿರಿಸುತೆ [೪]ಬಂದು[೪] ಕಂಡು ಬೆಱಗಾಗಿ ಕೃಪಾಕರಜಿತ್ತೆ ಹತ್ತೆ ಸಾ
ರ್ದು ರತಿಯ ಮೆಯ್ಯುಮಂ [೫]ಮೊಗ[೫]ಮುಮಂ ತಡವುತ್ತಿರೆ ಸೋಂಕಿನಿಂದೆ ಜೀ
ತರಿಸುತೆ ಕಣ್ಗಳಂ ತೆಱೆದು ಪಾರ್ವತಿಯುಂ ನಡೆ ನೋಡುತುಂ ದಯಾ
ಪರೆ ಭುವನೈಕಮಾತೆ ಪದೆದೀಕ್ಷಿಪುದೆನ್ನಯ ದುಃಖದೊಪ್ಪಮಂ ೭೮

ಎಂದಳಲ್ದು ನುಡಿದು ನಿಲಲಾಱದೆ,

ಗಿರಿಜೆಯ ಪದಯುಗದೊಳ್ ರತಿ
ಪೊರಳ್ದು ಪುಯ್ಯಲ್ಟಿ ಪೆರ್ಚಿದಳಲಿಮ್ಮಡಿಸು
ತ್ತಿರೆ ಪಳಯಿಸುತುಂ ದುಃಖಾ
ತುರೆ ಶೋಕಂಗೆಯ್ದು ಸುಯ್ದು ಪೊಯ್ದಳಲುತ್ತುಂ ೭೯

ಕರುಣಿಸು ತಾಯೇ ತವರೇ
ಪರಿರಕ್ಷಿಸು ದಯೆಯೊಳೀಕ್ಷಿಸುಡುಗಿಸು ನೋವಂ
ಪರಿಹರಿಸು ದುಃಖಮಂ ವರ
ಗಿರಿರಾಜತನೂಜೆ ಕಾದುಕೊಳ್ಳೆನ್ನಸುವಂ ೮೦

ಎಂದಳಲ್ವ ರತಿಯುಂ ಕಂಡು ಮನಂಗೊಂಡು,

೧-೧ ಪಱಿ ಪರೆದು (ಸೆ). ೨-೨ ಮುಚ್ಚೆ (ಕಾ ಬೆ ಯ) ೩-೩ ದೈನ್ಯದೊಳ್ ನಿಂದಂತೆ (ಕಾ ಬೆ ಬ). ೪-೪ ಕಂಡು (ಕಾ ಬೆ ಬ ಯ). ೫-೫ ಮುಖ (ಕಾ).

ಬೇಡುಡುಗು ಶೋಕ೧ರಸಮಂ೧
ನೀಡಾಗದೆ ನಿನ್ನ ವಲ್ಲಭನನೀಶ್ವರನಂ
ಬೇಡುವೆನಾವರ್ಥದೊಳಂ
ಮಾಡುವೆನೆಲೆ ಪರಮಹರ್ಷಮಂ ನಿನಗೆ ರತೀ ೮೧

ಎಂದಗಜೆ ಬೆಸಸೆ ಶೋಕಮ
ನಂದುಡುಗುತಡಂಗಿಸುತ್ತು ಮಳಲಂ ಮನದೊಳ್
ಸಂದಣಿಪ ದುಃಖಮಂ ಮಱೆ
ದೊಂದಿದಳಾ ರತಿ ಭವಾನಿಯುಜ್ಜ್ವಳ೨ವಚನಮಂ೨ ೮೨

ಆ ಸಮಯದೊಳ್,

ಇಂತು ರತಿಗಭಯಮಂ ಕೊ
ಟ್ಟಂತಕಹರನಿರದೆ ಪೋದ ಪರಿಯಂ ೩ಭರದಿಂ೩
ಚಿಂತಿಸಿ ಜಯವಿಜಯೆಗಳೊಡ
ನಿಂತೆಂದಳ್ ಗಿರಿಜೆ ಮನದ ಮುನಿಸಿಂದಾಗಳ್ ೮೩

ಸ್ರಗ್ಧರೆ

ಆನಿಂತಿಂತರ್ಚಿಸುತ್ತುಂ ಗತಿ ಮತಿ ಪತಿಯೆನ್ನಾಯುವೆನ್ನಾತ್ಮತತ್ತ್ವಂ
ತಾನೆಂದುತ್ಸಾಹದಿಂದಿರ್ದಚಳಪತಿಯ ಮೇನಾಖ್ಯೆಯೊಂದಳ್ಕಱಂ ಬಿ
ಟ್ಟಾನಂದಂಗೂಡಿ ಕಾರುಣ್ಯಮನನವರತಂ ಪಾರುತಿರ್ಪಲ್ಲಿ ಕೇಳಂ
೪ತೇನೆಂದುಗ್ರಂ ಸಮಗ್ರಂ೪ ರಜತಗಿರಿಗೆ ಪೋದಂ ನಿಕೃಷ್ಟಾತ್ಮನಾದಂ ೮೪

ಅಂತುಮಲ್ಲದೆ,

ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ಮಡಿಯಿಸದಂತ
ರ್ಧಾನಕ್ಕೆ ಸಂದನದಱಿಂ
ದಾನಿರ್ದಲ್ಲಿಗೆ ಸಮಂತು ೫ತನ್ನನೆ೫ ತರ್ಪೆಂ ೮೫

೧-೧ ರಸಮಂ (ಕಾ ಬೆ ಬ ಯು ಗ). ೨-೨ ವಚದಿಂ (ಕಾ ಬೆ ಗೊ). ೩-೩ ಮನದೊಳ್ (ಕಾ ಬೆ ಬ). ೪-೪ ತೇನೆಂದುಂ ನೋಡದುಗಂ (ಕಾ). ೫-೫ ತನ್ನಂ (ಅ).

ಉತ್ಪಲ

ಉಗ್ರತಪೋಭರಾಕೃತಿಯನಾಂತು ಜಗಂ ಬೆಜಿಗಾಗೆ ನಿಶ್ಚಲಾ
ವ್ಯಗ್ರಮನೋಬಲಪ್ರಬಲೆಯಾಗಿ ಬಿಸಿಲ್‌ಮಳೆಸೀತದೊಳ್ ನಗ
ಪ್ರಾಗ್ರದೊಳಂ ಕುಜಪ್ರತತಿಯೊಳ್ ಸರಸೀಕುಳದೊಳ್ ನಿರಾಜಿಸು
ತ್ತುಗ್ರನನೀಶನಂ ವಿಪುಳನಿಶ್ಚಳನಂ ಚಲದಿಂದೆ ತಂದಪೆಂ ೮೬

ಎಂದಿಂತು ಸಖೀಜನದೊಡನೆ ತನ್ನ ಸಾಮರ್ಥ್ಯದೊಂದುನ್ನತಿಯಂ ನುಡಿಯುತ್ತುಂ ಮೃಡಾನಿ ಮಹಾಮಾಯೆ ಸಕಳಜಗಜ್ಜನನಿ ನಿಖಿಳಾರಾಧ್ಯೆ ಅಕಳಂಕ ಚರಿತ್ರೆ ದಿವ್ಯಜ್ಞಾನಿ ಸರ್ವಬ್ರಹ್ಮಾಂಡಾಭರಣೆ ಹರನ ಮನೋಹರೆ ಸದಾಶಿವನ ಸುಖಮುಖಂ ಮಹಾದೇವನ ಮನೋರಥಂ ಚಲದ ಲಲನೆ ಬಲ್ಪಿನ ಭಾವಕಿ ಏಕನಿಷ್ಠಾನಿಧಿ ಪಶುಪತಿಯ ಪಟ್ಟದ ಮಹಾದೇವಿಯೆನಿಪ್ಪ ಶ್ರೀ ಪಾರ್ವತೀದೇವಿಯುಗ್ರತಪೋಭರನಿವೇಶನಾಭಿಮುಖಿಯಾಗಿ,

ಚಂಪಕ

ಸರಸಿಜನೇತ್ರೆ ಪುಣ್ಯಮಯಗಾತ್ರೆ ಸದಾಶಿವನಂಗಪಾತ್ರೆಯ
ತ್ಯುರುತರಮಾನಿ ನಿರ್ಮಳಭವಾನಿ ನಿರಂತರದಾನಿ ನವ್ಯಸುಂ
ದರವರಮೂರ್ತಿ ಶರ್ವನ ಸುಕೀರ್ತಿ ಮಹೇಶ್ವರನಾರ್ತಿ ಬಂದಳೊ
ಪ್ಪಿರೆ ಗಿರಿಜಾತೆ ಲೋಕ[1]ಜಯ[1]ಮಾತೆ ಜಗಕ್ಕೆ ವಿನೂತೆಯಳ್ಕಱಿಂ ೮೭

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೮೮

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ

ಶ್ರೀ ಗಿರಿಜಾಕಲ್ಯಾಣಮಹಾಪ್ರಬಂಧದೊಳ್

ಕಾಮದಹನವರ್ಣನಂ ಅಷ್ಟಮಾಶ್ವಾಸಂ

೧–೧ ಮಯ (ದಾ).

ನವಮಾಶ್ವಾಸಂ

ಪಾರ್ವತೀತಪೋವರ್ಣನಂ ವಿರೂಪಾಕ್ಷಪ್ರತ್ಯಕ್ಷೀಕರಣವರ್ಣನಂ

　　ಕಾರುಣ್ಯಾಕರನಭವಂ
ಘೋರತಪೋಮಯ ೧ತಪಃ೧ ಪ್ರಮೋದಾವೃತಪಿ
ಸ್ತಾರಫಲಪ್ರದನೆಮಗೀ
ಗೋರಂ೨ತತಿ೨ಭಕ್ತಿಯಂ ವಿರೂಪಾಕ್ಷಶಿವಂ ೧

ಉತ್ಪಲ

ಬಂದು ತಪೋನಿವೇಶನಮನೀಕ್ಷಿಸಿ ಬರ್ಪ ನಿದಾಘಕಾಲದೊಳ್
ಸಂದ ನಗಾಗ್ರದಲ್ಲಿ ನಿಲವೇಳ್ಕು೩ಮೆನುತ್ತಮೆ೩ ನಿಂದು ಮೇನಕಾ
ನಂದನೆ ತದ್ವಿಳಾಸಿನಿಯರಾನನಮಂ ಸಡೆನೋಡೆ ಕಾಣುತುಂ
ಸೌಂದರಿಯರ್ ಜಟಾರಚನೆಯಂ ತರದಿಂ ಭರದಿಂದೊಡರ್ಚಿದರ್ ೨

　　ವಿರಚಿಸಿದರ್ ಜಡೆಗಳನಾ
ದರದಿಂ ದರಹಸಿತಬಿಸರುಹಾನನೆಯರ್ ಶಂ
ಕರನರಸಿಗೆ ಗಿರಿಜಾತೆಗೆ
ವರಭಸಿತಮನಂಗತತಿಯೊಳುದ್ಧೂಳಿಸಿದರ್ ೩

೧-೧ ನತಿ (ಕಾ ಬೆ ಯು ದಾ); ನತ (ಬ. ಅ) ೨-೨ ತಿರೆ (ಕಾ). ೩-೩ ವೆಂನಲ್ ತಿಂಗೆ (ಕಾ).

ವರಭಸಿತೋದ್ಧೂಳನಮಂ
ಗಿರಿಜೆಗೆ ಸುರಸತಿಯರೊಲ್ದು ಮಾಳ್ಪೆಡೆಯೊಳ್ ಕ
ಪ್ಪುರದ ರಜದಿಂದೆ ಪುಷ್ಪೋ
ತ್ಕರಮಾಲೆಯನೊಸೆದು ಪೊರೆವ ತೆಱನಾಯ್ತಾಗಳ್ ೪

ಅಂತುಮಲ್ಲದೆ,

ವಾರಿಜಮುಖಿಯರ್ ಸಖಿಯರ್
ತಾರಾಚಲನಾಥನರಸಿಗನುನಯದಿಂದಂ
ಸಾರಮೃದುತರವಿಮಳವಿ
ಸ್ತಾರಿತವಲ್ಕಲಮನೊಪ್ಪಲುಡಿಸುತ್ತಿರ್ದರ್ *೫

ಅಂತುಮಲ್ಲದೆ,

ಸಾಕ್ಷಾಜ್ಜಂಕರವಕ್ತ್ರಮಿ
ವಕ್ಷಯಸುಖಮಿಾವ ಸುಕೃತಫಲಮಿವು ಸತ್ಯಂ
ರಕ್ಷೆಯಿವೆನುತಗಜೆಗೆ ರು
ದ್ರಾಕ್ಷಿಗಳಂ ಕೂಡೆ ತೊಡಿಸಿದರ್ ಮಾನಿನಿಯರ್ ೬

ಇಂತು ಭಕ್ತಿಜ್ಞಾನವೈರಾಗ್ಯಯುಕ್ತಮಪ್ಪ ತಪೋಮಂಡನಂಗಳಂ ಸಂಗಡ ವಿರ್ದಂಗನೆಯರ್ ಶೃಂಗರಿಸೆ ಮಂಗಳಮುಖಿ ಹೊಂಗಿ ಹೊರೆಯೇೞೆ,

ಸುಂದಣಿಸುವ ಜಡೆ ಬೆನ್ನಂ
ಮಂದಯಿಸಿ ಮುಸುಂಕುತಿಳಯೆ ನೀಲಾಂಬುದಮಂ
ಪಿಂದಿಕ್ಕಿ ಮುಂದೆ ಬೆಳಗುತೆ
ನಿಂದೆಳಮಿಂಚಿನವೊಲಗಜೆ ನೆಱೆ ಮೆಱೆದಿರ್ದಳ್ ೭

ಅಳವಡೆ ಮುನ್ನಂ ಪತ್ತಿದ
೧ಕಳಂಕಮಂ೧ ಪೊರ್ದದಂತೆ ನಭದಿಂದಿಳಿತಂ
ದಿಳೆಯೊಳ್ ಶಂಭುಗೆ ಮಿಗೆ ಶಶಿ
ಕಳೆ ತಪಮಿರ್ಪಂತೆ ಗಿರಿಜೆ ತಪದೊಳ್ ನಿಂದಳ್ ೮

೧-೧. ಕಳಂಕಮುದು (ಕಾ ಬೆ ಯು); *೫ನೆಯ ಪದ್ಯವು ಅ ಪ್ರತಿಯಲ್ಲಿಲ್ಲ.

ಭಗ್ನಮನವಲ್ಲದಚಲಿತೆ
ಲಗ್ನವ್ರತೆಯಾಗಿ ಶಂಕರಪ್ರೇಮಾಗ್ನಿಮಗ್ನೆ
ನ್ಮಗ್ನಾಂಗಿ ಧೈರ್ಯನಿಧಿ ಪಂ
ಚಾಗ್ನಿಯ ನಡುವಗಜೆ ವಿಪುಳತಪದೊಳ್ ನಿಂದಳ್ *೯

ಅದೆಂತೆಂದೊಡೆ,

ಮತ್ತೇಭ

ಮಿಗೆ ಸುತ್ತಿರ್ದ ದವಾಗ್ನಿ[೧]ಕಾಯ್ವ ರವಿಕಾಂತೋಚ್ಚಾಗ್ನಿ[೧]ಯುತ್ಕೃಷ್ಟವಂ
ನೆಗೆಪುತ್ತಿರ್ಪುದರ್ಧಾಗ್ನಿ[೧][೨]ಮೇಗೆ[೨] ಕವಿತರ್ಪಾದಿತ್ಯತೀವ್ರಾಗ್ನಿ[೧]ಬಂ
ದೊಗೆದಾ ಬೇಸಗೆಯುಗ್ನಿ[೧]ಯೆಂದೆನಿಸಿ ತೋಱುತ್ತಿರ್ಪ ಪಂಚಾಗ್ನಿ ಮ
ಧ್ಯಗತಾಂಘ್ರಿಪ್ರಭೆ ನಿಂದಳುಗ್ರತಪದೊಳ್ ಶರ್ವಾಣಿ[೩]ಯುವ್ಯಗ್ರದಿಂ[೩] ೧೦

ಚಲದಿಂದಂ ನಗರಾಜಪುತ್ರಿ ಹೃದಯಾಬ್ಜಾವಾಸದೊಳ್ ಭಾಪು ನಿ
ಶ್ಚಲನಂ ನಿರ್ಮಳನಂ ನಿರಾವರಣನಂ ನಿರ್ಮಾಯನಂ ನಿತ್ಯನಂ
ನಿಲಿಸುತ್ತುನ್ನತವಕ್ತ್ರೆ ಸನ್ನುತತಪೋವಿಸ್ತಾರೆ ಮಾರ್ತಂಡಸಂ
ಕುಲತೇಜೋನಿಧಿ ನಿಂದಳುಗ್ರತಪದೊಳ್ ಲೋಕಕ್ಕಗುರ್ವಪ್ಪಿನಂ ೧೧

ಅಂತುಮಲ್ಲದೆ,

ಚಂಪಕ

ನೆನೆಯುತೆ ದೇವಿ ನಿಪ್ಪವರನಂ ವರನಂ ವರನಂ ಮಹೇಶನಂ
ಘನ[೪]ನಿಟಿಲಾಗ್ನಿ[೪]ಯಿರ್ಪ ಶಿವನಂ ಶಿವನಂ ಶಿವನಂ ನಗೇಶನಂ
ದನೆ ನೆಱೆ[೫] ಸಾರದೀ ಭುವನಮಂ ವನಮಂ ವನಮಂ ಭವಾನಿ ಭೋಂ
ಕನೆ [೫]ತಪಮಿರ್ದ[೫]ಳುಗ್ರ[೬]ತಪಮಂ [೬]ತಪಮಂ [೬]ತಪಮಂ[೬]ವಿಭಂಗಿಸಲ್ ೧೨

ವರನುತಧೈರ್ಯೆ ಪುಣ್ಯಮಯವೀರ್ಯೆ ಸಮಗ್ರತಪಃಪ್ರಶೌರ್ಯೆ ಶಂ
ಕರನ ಸುಖೈಕಭಾರ್ಯೆ ಪರಮಾಗಮಕಾರ್ಯೆ ಜಗದ್ಧಿತಾರ್ಯೆ ವಿ
ಸ್ತರಘನತೂರ್ಯೆ ಶಂಭು [೭]ಸುಖ[೭]ಪೂರ್ವೆ ವಧೂಜನವರ್ಯೆ ರುದ್ರಬಂ
ಧುರನಿಜಧಾರ್ಯೆ ಸೂರ್ಯಶಿಲೆಯಿಂ ಬಲದಿಂ ಛಲದಿಂದೆ ಮೆಟ್ಟಿದಳ್ ೧೩

೧ ೧ ರಸೋ (ಕಾ ಬ ಬೆ ಯ ಅ ದಾ ಕ). * ೯ನೆಯ ಪದ್ಯವು ಓ ಪ್ರತಿಯಲ್ಲಿಲ್ಲ.
೨-೨ ಮಿಕ್ಕ (ಕಾ ಯ). ೩-೩ ಯತ್ಯುಗ್ರದಿಂ (ಕಾ ಅ ಓ). ೪-೪ ನಿಟಿಲಾಕ್ಷಿ (ಕಾ).
೫-೫ ನೆರೆನಿಂದ (ಅ). ೬-೬ ತಪಮಂ (ಮ ಅ ಡ ಓ). ೭-೭ ಶುಭ (ಕಾ ಕೊ).

ಇಂತು ಸೋಮಧರನರಸಿ ಹೇಮಕೂಟಾಗ್ರದ ಮೇಲವ್ಯಗ್ರದಿಂದುಗ್ರತಪದೊಳ್ ನೆಲಸಿ ನಿಲೆ ತಪಸ್ತೇಜಂ ಮೂಜಗಮಂ ಪರ್ಬಿದಾಗಳ್,

ಮೃಗತತಿ ಸುಳಿಯವು ಮಿಗೆ ಪ
ಕ್ಷಿಗಳೆೞ್ದಿಗವು ಸಮೀರಣಂ ಸಂಚಲಿಸಂ
ಗಗನದ ಖೇಚರರಾ ಬ
ಟ್ಟೆಗೆ ಸಾರರ್ ನಗಜೆಯತುಳತಪದಾತಪದೊಳ್ ೧೪

ಅಸುರದ ಗಿರಿಜೆಯುಗ್ರವಿ
ಭಾಸುರತಪಕಂಜಿ ನಭದ ತಪನಂ ನಡೆಯು
ತ್ತಾ ಸರಿಸಮುಂ ಕರಂ ಬಿ
ಟ್ಟೋಸರಿಸಿಯೆ ನಡೆವನೆಂದೊಡೇವಣ್ಣಿಪೆನೋ ೧೫

ಅಸಮಾನಮುಜಳಮದ್ಭುತ
ವಿಸರಮನೂನಪ್ರಭಂ ೧ಶುಭಂ ಘನ೧ವಿಭವಂ
ಪೆಸರಿಡಬಾರದು ಮಿಗೆ ೨ನಿ
ಟ್ಟಿಸ೨ಬಾರದು ನೋಡಬಾರದಂಬಿಕೆಯ ತಪಂ ೧೬

ಎಂಬ ಸಾಮರ್ಥ್ಯಮನೊಳಕೊಂಡು ಜಡೆಗಳ ಬೆಡಂಗಿ ಭಸಿತದ ೩ಭಾಳ೩ಲೋಚನೆ ರುದ್ರಾಕ್ಷಿಯ ಭದ್ರಾಂಗಿ ನಾರ ಸೀರೆಯ ಧೀರೆ ಗಿರಿಶಿಖರದ ಗರುವೆ ಉಗ್ರತಪದ ವ್ಯಗ್ರೆಯೆನಿಪ ಪಾರ್ವತೀದೇವಿ ಪ್ರಚಂಡತರಪ್ರತಾಪತಪೋವೇಷದಿಂದಿರೆಯಿರೆ,

ಮಹಾಸ್ರಗ್ಧರೆ

ದೆಸೆಯಂ ೪ಕಾಹೇಱಿಸುತ್ತುಂ೪ ತೃಣಕುಲಲತೆಯುಂ ಸೀದು ಕರ್ಪೇಱಿಸುತ್ತುಂ
ರಸೆಯುಂ ಸಂತಾಪಿಸುತ್ತುಂ ಜಳಭರಿತತಟಾಕಂಗಳಂ ಶೋಷಿಸುತ್ತುಂ
ಸಸಿಯುಂ ವೃಕ್ಷಾಳಿಯುಂ ಸುಟ್ಟುರಿಪುತ್ತೆ ಮೃಗಮುಂ ಬೇಯಿಸುತ್ತದ್ರಿಯುಂ ದ
ಳ್ಳಿಸಿ ಸೀಳುತ್ತುಂ ವಿಶಾಳಂ ದವಶಿಖಿಯುಪ್ಪೊಲೆೞ್ದತ್ತು ಘೋಷಂ ನಿದಾಘಂ ೧೭

೧–೧ ಲಸದ್ಘನ (ಶಾ). ೨–೨ ಸ್ಪೃಷ್ಟಿಸ (ಯ ಅ ಬ ಕೊ); ಪುಟ್ಟಿಸ (ಮ ಗೊ ಸ ಅ ಕ ಡ ಗ ಓ). ೩–೩ ಫಾಲ (ಶಾ). ೪–೪ ಕಾಯ್ಪೇಱಿಸುತ್ತುಂ (ಶಾ ಯ).

ಅಂತು ತೋಱಿದ ನಿದಾಘದಲ್ಲಿ,

ಪೊಸಬೇಸಗೆಯೊಳ್ ಮೃಗತತಿ
ಯುಸುವೆರಸಿರವೇಳ್ಕುಮೆಂದು ಕರುಣಿಸಿ ಮಿತ್ರಂ
ಬಿಸಿಲಂ [೧]ಹಿಳಿದೊಡೆ[೧] ಬೆನ್ನೀ
ರೊಸರ್ವಂತಿರ್ದುದು ಮರೀಚಿಕಾಜಲಮೆತ್ತಂ ೧೮

[೨]ತರದಿಂದಂ ತೆರೆಮಸಗುವ
ಮರೀಚಿಕಾಜಲಮನಿಳೆಯು[೨] ಜಲಮೆಂದು ಕರಂ
ಹರಿಣಂಗಳ್ ಪರಿತಂದಾ
ತುರಿಸುತ್ತುಂ ಬಿಸಿಲ ಬಯಲನೀಂಟಿ ಬಳಲ್ಗುಂ ೧೯

ವಹ್ನಿ ಧರೆಯೊಳಗೆ ತೀವಿದ
ಚಿಹ್ನಮಿದೆಂಬಂತೆ ಬಿಸಿಲ ಬೇಗೆ ಕರಂ ಮ
ಧ್ಯಾಹ್ನದೊ[೩]ಳಳುರ್ದೊಡೆ[೩] ಮೃಗತತಿ
ಜಾಹ್ನವಿಯೊಳ್ ಪುಗಲೆ ಬಯಸಿದುವು ಬೇಸಗೆಯೊಳ್ ೨೦

ಆ ಸಮಯದೊಳ್,

ಚಂಪಕ

ಘುರಿಘುರಿಲೆಂದು ಸೀದುವು ವಿಹಂಗಕುಲಂ ಕೆಱೆ ಬಾವಿ ಬೆಂಚೆಗಳ್
ಪುರಿದರಳೆಳ್ದುವೀ ಮನುಜರಾತಪತಾಪದೊಳಳ್ಕಿ ಬಳ್ಕಿದರ್
ಕರಿಮುರಿವೋಯ್ತು ರಣ್ಯಮುಱೆ ಬೆಂದು ಮೃಗಾವಳಿ ಪೊಂದಿದತ್ತು ನಿಂ
ದುರಿದುವು ಬೆಟ್ಟಮಿಂಗಿದುವು ವಾರಿಧಿ ಕಾಯ್ದುದು ಭೂರಿಭೂತಳಂ ೨೧

[೪]ಮೃಗಶಿಶುಗಳ್[೪] ಕರಿಮುರಿ [೫]ಕಣ್
ಗೊಗೆದ[೫] ಮರಂ ಘುರಿಘುರಿಲ್ ಗಜಂ ಚಿಮಿಚಿಮಿಯೆಂ
ದಗನಿಕರಂ ಛಿಳಿಛಿಟಿಲೆನೆ
ಮಿಗೆ ಸೀದುವು ಬೆಂದುವುರಿದುವೊಡೆದುವು ಬಿಸಿಲೊಳ್ ೨೨

೧-೧ ಹಿಳಿಯಲ್ (ಕಾ ಬಿ ಬ ಯ). ೨-೨ ತರದಿಂ ಮರೀಚಿಕಾಜಲ|ಧರ ಮಸಗಲ್ ನೋಡುತಿಳಿಯ (ಅ). ೩-೩ ಳೀಳ್ದೊಡೆ (ಅ); ಳಿಳಿದುರೆ (ಡ). ೪-೪ ಮೃಗತತಿಗಳ್ (ಕಾ ಬಿ ಕ ಯ ಸೆ). ೫-೫ ಕಾ|ದೊಗೆದ (ಅ).

ಮರವಡಿಯೊಳ್ ಕಾನನದೊಳ್
ಗಿರಿತಟದೊಳ್ ಬಟ್ಟಬಯಲೊಳಂಬರತಳದೊಳ್
ಕರಿಯ ಬಿಸಿಲುರಿಯ ಬಿಸಿಲ
ಜ್ಜರಿಯ ಬಿಸಿಲ್ ಪಿರಿಯ ಬಿಸಿಲಖಂಡಿತದ ಬಿಸಿಲ್ ೨೩

ಮತ್ತಮಲ್ಲದೆ,

ಮತ್ತೇಭ

ನಡೆಯಲ್ಕೊಂದಡಿಯಿಟ್ಟು ಕಾಯ್ದ ನೆಲನಂ ಕಾಲ್ ಮುಟ್ಟೆ ಚುಯ್ಯೆಂದು ಬೆಂ
ದೊಡೆ ಮತ್ತೊಂದಡಿಯೆತ್ತಲಾಱದಳಲಿಂ ಕಣ್ಮುಚ್ಚಿ ಹಸ್ತಾಗ್ರಮಂ
ಕಡೆವಾಯೊಳ್ ಸೆಱೆ[1]ಯಿಟ್ಟು ನೆತ್ತಿ ಬಿರಿದೆತ್ತಲ್ ಮುತ್ತುಗಳ್ ಸುತ್ತಲುಂ
ಸಿಡಿಯುತ್ತಿರ್ಪಿನಮಿರ್ದುದೊಂದತಿಮದೇಭಂ ಭೀಷ್ಮದೊಳ್ ಗ್ರೀಷ್ಮದೊಳ್ ೨೪

ಅಂತುಮಲ್ಲದೆ ಮತ್ತಮೊಂದೆಡೆಯೊಳ್,

ಚಂಪಕ

ಎಲೆಲೆಲೆ [2]ನೋಡನೋಡೆ[2] ಕೆಲನುಂ ಬಲನುಂ ನೆಲನುಂ ದವಾಗ್ನಿ ಸು
ಟ್ಟೊಲೆಯುವೊಲಾಗೆ ಮೆಟ್ಟದಡಿಯೆತ್ತಿದ ಕಾಲುಱಿ ಸೀಯೆ ನಿಂದಿರಲ್
ಚಲಿಯಿಸಲಾಱದಾತಪದೆ [3]ಹಸ್ತಮನೆತ್ತುತೆ ಘೀಳಿಡುತ್ತೆ ತಾ
ನೊಲೆದುದು[3] ಜೋಪ್ಪೆಗುಂದಿದುದು ಜೋಲ್ದುದು ಬಿಳ್ದುದು ಬೆಂದುದೊಂದಿಭಂ ೨೫

ಮತ್ತಮಲ್ಲದೆ,

ಜಳಜಸಖನನಿಲಸಖನೆಂ
ದಿಳೆಯೊಳ್ ರಸವೆಸರನಾನದಿರ್ದೊಡೆ ಸೂರ್ಯಾ
ನಳರೋವೊ ಸಂತಮಿರ್ಪರೆ
ಘಳಿಲನೆ ನಿಂದುರಿದು ಪೋಗರೇ ಬೇಸಗೆಯೊಳ್ ೨೬

೧-೧ ಬಿರಿದೆತ್ತಂ (ಬ ಯ); ಬಿರಿಯುತ್ತುಂ (ಕಾ ಬೆ ಡ) ೨-೨ ನೋಡು ನೋಡು
೩-೩ ಹಸ್ತಮನೆತ್ತಿ ಬಳಲ್ದು ಘೀಳಿಡು । ತ್ತೊಲೆದುದು (ಕೊ).

ತಪನನ ಮೆಯ್ಯೊಳ್ [೧]ಪುಗುಳಸ
ಮಪಾವಕನ ತನುವಿನೊಳ್[೧] ಮಹಾ ಸ್ಫೋಟಕವಾ
ತಪದ ಕಡುಪಿಂದೆ ನೆಗೆತಂ
ದಪುವೆನೆ ಬೇಸಗೆಯ [೨]ಬಿಸಿಲ ನಾಲಗೆಯೊಳ್ಪಂ[೨] ೨೭

ಮತ್ತಮಾ ನಿದಾಘಂ ಕಡುಗಾಯ್ವ ತೀವ್ರಖರಕರಪ್ರಕರಮಂ [೩]ಚುರ್ಚುರ್ಚುರನೆ[೩] ಸುಡೆ ಕಾಯ್ದುರ್ಕಿ ಬಿಸಿಯ ತೆರೆ ತಾವರ್ಱಿಟ್ಟೆ ನೊರೆಗಟ್ಟಿ ಕೆಕ್ಕಳಂಗುದಿವ ಬಿಸುನೀರೊಳ್ ನಿಲಲಾಱದೆ ನೆಱೆ ಮಱುಗಿ ಪೊಱಪೊಣ್ಮಿ ಬೆದಬೆದನೆ ಬೆಂದು ಬೆಂಡೆಳ್ದು ಬಱಬಱಂಬತ್ತಿ ಹೊತ್ತಿ ಹೊಗೆದು ಜೀವನವಿಂಗೆ ಜೀವನವಿಂಗುವಂತಾಗೆ ತಿಱುಮೆಂಚೆಯೊಳ್ ಕೋಟಲೆಗೊಳುತಿರ್ಪ ಪಾಠೀನಕುಲದಿಂ, ಮತ್ತಂ ಮಸಗುವ ತಪನನ ಬಿಸಿಯ ಬಿಂಬದಿಂದೊಗೆತರ್ಪ ಬಿಸಿಲ ಬೆಂಕಿಯಿಂ ಹೊಗೆದೆಯ್ದ ತರುನಿಕರವುರಿದು ಕರಿಗೊಳ್ಳಯಂತೆ ಕಾಯ್ಪೇಱೆ ಕರ್ಬೊಗೆಯಂ ನೆಗೆಪುವ ಕೊಂಬುಗಳ ಕಡುಬಿಸುಪು ಕಾಲ್ಗಳಂ ಸುಡೆ ಬಳ್ಳಿಗೊಂಡ ಬೇಗೆಯಿಂ ಕುಳ್ಳಿರಲಾಱದೆ ಮಿಱಿ ನೆಗೆದು ಪಾಱುವಾಗಳ್ ಬಿಸಿಲುರಿ ಪೊಡೆದು ಪಕ್ಕಂ ಸೀದು ನೆಲಕ್ಕೆ ಬಿಳ್ದು ಕಣ್ಮುಚ್ಚಿ ಹಮ್ಮಯ್ಸಿ ಹರಣಂಗಳೆದು ಮಳಲೊಳ್ ಪುರಿದಂತಾಗೆ ಪರೆದಿರ್ಪ ಬಹುವಿಧದ ವಿಹಂಗಾವಳಿಯಿಂ, ಮತ್ತಂ ತಪನಪ್ರದ್ಯೋತಹತಿಯಿಂ ಬೆನ್ನೊಡೆದು ಬಾಯಾರಿ ತಾಳಿಗೆ ಬತ್ತಿ ನೆತ್ತಿ ಹೊತ್ತಿ ಕಣ್ಣೊಳ್ ನೆತ್ತರೆಚ್ಚು ಪಾಯ್ದು ಪರಿವರಿದು ಮರೀಚಿಕಾಜಲದೊಳ್ ಮೊಗಮಿಟ್ಟು ಬಗೆಗೆಟ್ಟು ಮರವಟ್ಟು ಧರೆಯೊಳ್ ಕೆಡೆದಿರ್ಪ ನಾನಾಮೃಗನಿಕಾಯದಿಂ, ಮತ್ತಂ ಮಾರ್ತಾಂಡ [೪]ಮರೀಚಿ[೪] ಸುತ್ತಿ ಮುತ್ತೆ ಕುಂಭಸ್ಥಳಂ ಹೊತ್ತಿ ಹೊಗೆದು ಬಿರಿದ ನೆತ್ತಿಯಿಂ ಮುತ್ತೊಡೆದು ಸಿಡಿದು ಪಾಱೆ ಬೆನ್ನೊಣಗಿ ಚರ್ಮಂ ಹೊಪ್ಪಳಿಸಿ ಸೀಳ್ದು ಬೀಡೆ ನಾಡೆ ನೋಯಿಸಿ ನೀರಡಿಕೆ ನೆರೆದೊಳಗುದೋಱೆ ಬಾಯೊಳ್ ಭರಿಕೆಯ್ಯನಿಟ್ಟೊಡಲೊಳಗೆ ಪುಡಿ ಪಾಱೆ ಬೆಂದ ಪುಷ್ಕರಮಂ ಭೋಂಕನೆ ತೆಗೆದು ಕಾಯ್ದ ಕೋಡೊಳ್ ಪೊಱಲಣ್ಮದೆ ಮಿಱಿದ ದರಿಯ ತಟದೊಳ್ ನೀಡಿ ಕೆಡಪಿ ಕಣ್ಮುಚ್ಚಿ ನೆಮ್ಮಿ ಹಮ್ಮಿದಂಬೋಗಿ ಕಿಡಿಸೂಸಿ ಸುಯ್ದು ಗಾಸಿಯಾಗಿ ಮೆದೆಗೆಡೆದು ಮದವಳಿದಿರ್ಪ ಮಾತಂಗವ್ರಾತದಿಂ, ಮತ್ತಂ ಶತಧಾರಾಸಹಸ್ರದಂತೆ ಸಹಸ್ರಕರಮರೀಚಿಗಳುಱಿವೆಱಿಗಿ ನಟ್ಟು ಕಾಯೆ ಗಳಗಳ ನರಳ್ದು ಪಳಪಳನೆ ಸೀಳ್ದು ಸಿಡಿಮೊಡೆದು ಹಿಗ್ಗಿ ತಗ್ಗಿ ಕುಗ್ಗಿ ಕುಪ್ಪಳಿಸಿರ್ಪ ಪರ್ವತಪ್ರತಾನದಿಂದತ್ಯುಗ್ರತೆಯನತಿ ಪ್ರಚಂಡತೆಯನತ್ಯುಷ್ಣತೆಯನತ್ಯಾಭೀಳತೆಯನತಿಪ್ರತಾಪಮನುಗುಳುತ್ತಿರ್ದುದಂತುಮಲ್ಲದೆಯುಂ,

---

೧-೧ ಪುಗುಳುಗ । ಳುಪಮಿಸೆ ಪಾವಕನ ತನುವಿನೊಳ್ (ಕಾ ಬ ಬೆ ಯ ಗ); ಪುಗುಳಂ । ದುಪಮಿಸೆ ಪಾವಕನ ತನುವಿನೊಳ್ (ಅ). ೨-೨ ಬಿಸಿಲನದನೇನೆಂಬಂ (ಕಾ ಬೆ ಯ ಸೆ ದಾ ಕ ಡ). ೩ ಚುಟಚುಟನೆ (ಅ). ೪ ರೋಚಿ (ಕಾ).

ಮಹಾಸ್ರಗ್ಧರೆ

ಪಸಿವಿಂ ದ್ಮಾವಾನಳಂ ಸುಟ್ಟುರಿಪೆ ತರುಗಿರಿವ್ರಾತಮಿಲ್ಲಾದುದೋ, ನಾ
ಲ್ದೆಸೆಯೊಳ್ ಸೂರ್ಯಂ ಕ್ಷುಧಾಪೀಡಿತನಱಸುತೆ ಕೆಯ್ನೀಡೆ ನಿಸ್ಸಾರಕಾಷ್ಠ
ಪ್ರಸರಂ ಕೌಱೆಳ್ದುದೋ, ನಿಂದನುಪಮತೃಷಿತಂ ವಾಡಬಂ ಪೀಱೆ ತಾಂ ಶೋ
ಷಿಸಿತೋ ವಾರಾಶಿಯೆಂಬುಷ್ಣಮನೊದವಿಸಿ[೧]ತತ್ತ್ಯುಗ್ರ[೧]ಯೋಗಂ ನಿದಾಘಂ ೨೮

ಆ ನಿದಾಘದಲ್ಲಿ,

ಮಹಾಸ್ರಗ್ಧರೆ

ರವಿಕಾಂತೋಗ್ರಸ್ಫುಲಿಂಗಪ್ರತತಿ ನೆಗೆದು ಪಾದಂಗಳೊಳ್ ಬಿಳ್ವೊಡಂ; ಪೊ
ಣ್ಮುವ ದಾವಪ್ರೋದ್ಭವಪ್ರಸ್ಫುರಿತವಿಲಸದುಷ್ಣಂ ತನೂಭಾಗಮಂ ಪ
ತ್ತುವೊಡಂ, [೨]ತದ್ದೇಹದಗ್ನಿ[೨] ಪ್ರಭೆಯೊದವುವೊಡಂ ಸೂರ್ಯತಿಗ್ಮಾಂಶುಗಳ್ ತಾ
ಗುವೊಡಂ, ಮಾಧ್ಯಂ ನಿದಾಘಂ ಕವಿದೊಡಮನಿತಕ್ಕಳ್ಕದಂ[೩]ತಾಯೆರ್[೩]
ನಿಂದಳ್ ೨೯

ಅಂತು ನಿಂದು,

ದಶಭುಜನ ಮನೋವಲ್ಲಭೆ
ದಿಶಾವಳೀಭರಿತಕೀರ್ತಿಯುತೆ ಘೋರತಪೋ
ವಶೆ ನೆಱೆ ಗಂಗಾಧರನಂ
ಶಶಿಧರನಂ ನೆನೆದು ಕಳೆದಳಾ ಬೇಸಗೆಯಂ ೩೦

ಆ ಸಮಯದೊಳ್ ಸಕಳಕಳಾಕೋವಿದೆಯರಪ್ಪ ಜಯೆವಿಜಯೆಗಳ್
ಮೆಯ್ಯಿಕ್ಕಿ ಕೆಯ್ಯಂ ಮುಗಿದು,

ಚಂಪಕ

[೪]ಮದವುಡುಗಿತ್ತು[೪] ಬೇಸಗೆ ಕರಂ ನಸುದೋಱಿದುವಲ್ಲಿಗಲ್ಲಿಗಂ
ಬುದನಿಕರಂ ಸುರುಳ್ದುದು ಬಿಸಿಲ್, ನೆಗೆದತ್ತು ತಟಿಲ್ಲತಾಂಕುರಂ.
ಬೆದಱಿದುವಂಚೆ ಮೂಡಲಡಿಯಿಟ್ಟುವು ಸೋಗೆಗಳೆಯ್ದೆ, ಪಲ್ಲವಂ
ಪುದಿದ ಕದಂಬದೊಳ್ ಮುಗಿಲನೆಳ್ಚಲಿರ್ದುದು ಪಶ್ಚಿಮಾನಿಳಂ ೩೧

೧-೧ ತತ್ತ್ಯುಷ್ಣ (ಶಾ ಬೆ ಕ ಯ). ೨-೨ ತಜ್ಜಠರಾಗ್ನಿ (ಬೆ ಹು ಯ ಬ ಓ ದಾ).
೩-೩ ಪ.ಯೆರ್ (ಕೊ). ೪-೪ ಮುದವಳಿದಿತ್ತು (ಕೊ).

ಅನಂತರವಾಗಳ್,

ಕಡವಿನ ಸೊವಡ್ಡಿಂದೊಂದೆರ
ಡಡಿಯಿಡುತಿರ್ದಪುದು ಗಾಳಿ ನಲಿದು ನವಿಲ್ಗಳ್
ನಡೆನಟಣೆಗೊಳುತ್ತಿರ್ದಪು
ವೆಡೆಯುಱಿಸುತ್ತಿರ್ಪುವಂಚೆ ಸುಳಿದುವು ಮುಗಿಲ್ಗಳ್ *೩೨

ಎಂದು ಬಿನ್ನಯ್ಸುತ್ತುಂ ಮತ್ತಮಿಂತೆಂದರ್ *

ಪೋದುದು ಬೇಸಗೆ ಕಾರ್ ವೊಗ
ವಾದುದು ತರುತಳದ ನೆಳಲ ತಣ್ಪಿನೊಳಿರ್ದ
ತ್ಯಾದರದಿಂ ಮಾಳ್ಪುದು ಪು
ಣ್ಯೋದಯ[1]ನಿಷ್ಕಪಟವಿಪುಳ[1]ತಪಮಂ ಗಿರಿಜೇ ೩೩

ಎನೆ ಕೇಳ್ದು ಮನಂಗೊಂಡ
ತ್ಯನುಪಮಶೈವಪ್ರತಾಪತೇಜೋನಿಧಿ ಭೋಂ
ಕನೆ ಗಿರಿಸುತೆ ನಡೆತಂದಳ್
ವಿನಯವಿಭೂಷಣೆ ವಿಲಾಸವಿಭ್ರಮದಿಂದಂ ೩೪

ಮಹಾಸ್ರಗ್ಧರೆ

ಭರದಿಂದೆಯ್ತಂದು ಭರ್ಗಪ್ರಿಯೆ ಭವನ ಮನೋಮೂರ್ತಿ [2]ಭಾಳಾಕ್ಷಭಕ್ತ್ಯಾ[2]
ತುರೆ ಮುಕ್ತಿವ್ರಾತೆ ಭೂತೇಶನ [3]ಸಕಳ[3]ಸುಖಾಕಾರೆ ಶರ್ವಾಣಿ ಸರ್ವೇ
ಶ್ವರಿಯುರ್ವೀಮಾತೆ ಮೂಲೋಕದ ಸುಕೃತಫಲಂ ಸತ್ಯವಿಸ್ತಾರೆಯುದ್ಯದ್
ಗಿರಿರಾಜಾಪತ್ಯೆ ನಿಂದಳ್ ಘನವಟವಿಟಪಿಚ್ಛಾಯೆಯೊಳ್ ಪ್ರೀತಿಯಿಂದಂ ೩೫

ಇಂತಘಟಿತಘಟಿತೆ ಪಟುತರಚಿತ್ತೆ ನಿಟಿಲಲೋಚನೆ ವಟವೃಕ್ಷದ ಕೆಳಗೆ ವಾರಿಕುಲಕ್ಕೆ ಸೋಲದೆ ಧೀರೋದಾತ್ತೆ ಘೋರತಪದೊಳ್ ನಿಂದಳನ್ನೆಗಮಿತ್ತಲ್,

ಚಂಪಕ

ನಲಿದುದು ಸೋಗೆ ನುಣ್ಪನೆಡೆಗೊಂಡುದು ಜಾವಗೆವಕ್ಕಿ ಮಿಕ್ಕು ಪೂ
ತಲರ್ದುದು ಸೊಂಪಿನಿಂ ಕಡವು,ತಣ್ಪನೆ [4]ಹೇಱಿ[4]ದುವೆಯ್ದೆ ಬೆಟ್ಟು ಬಂ
ದಲೆದುದು ಪಶ್ಚಿಮಾನಿಳನ್ನಮರ್ಚಿತು ಕೇತಕಿ ಪೂದೊಡಂಬೆಯುಂ,
ಬಿಲದೊಳೆ ಪೊಕ್ಕುವಂಚೆ ಮುಗಿಲೊಡ್ಡಣೆಯೊಡ್ಡಿತು ಕಾರ ಕೋರ್ವಿನೊಳ್ ೩೬

೧-೧ ದಿಂ ಕಪಟರಹಿತ (ಕಾ). * ಇವು ಕ ಪ್ರತಿಯಲ್ಲಿಲ್ಲ. ೨-೨ ಭಾಳಾಕ್ಷಭಕ್ತಾ (ಕಾ). ೩-೩ ನಿಖಿಳ (ಕಾ). ೪-೪ ಬೀಱಿ (ಕಾ).

ಅಂತುಮಲ್ಲದೆಯುಂ,

ಹರಿಸಂ ಮಿಗೆ ನವಿಲಾಡು
ತ್ತಿರೆ ಚಾವಗೆಯುರ್ಬಿ ನಲಿಯೆ ನಾಲ್ಕುಂ [೧]ದೆಸೆಯುಂ[೧]
ಕರಿಯುಂತಿರೆ ಗಿರಿಯಂತಿರೆ
ಧರೆಯಂತಿರೆ [೨]ನೆಗೆದುದಭ್ರಕುಲಮಂಬರದೊಳ್[೨] ೩೭

ತರದಿಂ ಶಿಖಿ ಜಾದಗೆ ಮಧು
ಕರಮಂಚಿ ಪಯೋಧರಂಗಳನುನಯದಿಂದಂ
ಕರೆದುವು ನೆರೆದುವು ಮೊರೆದುವು
ಪರೆದುವು ತೊಱೆದುವು ನಿರಂತರಂ ಕಾರ್ಮೊಗದೊಳ್ ೩೮

ಮತ್ತಮಲ್ಲದೆಯುಂ,

ಮಹಾಸ್ರಗ್ಧರೆ

ಹರಿಸಂ ಮಿಕ್ಕಭ್ರಮಾತಂಗಮನತಿಭರದಿಂ ನೋಡಲೆಂದೆಳ್ದುವೋ ದಿ
ಕ್ಕರಿಗಳ್ ದೇವೇಂದ್ರನೊಳ್ ಕಾದುವ ಕಡುಮುಳಿಸಿಂದೆಳ್ದುವೋ ಗೋತ್ರಶೈಲೋ
ತ್ಕರಮಿನ್ನಾಶಂಗಂ ಹಿರಣ್ಯಾಕ್ಷನಿನೊಗೆದ ಮನೋದುಃಖಮಂ ದೂಱಲೆಂದಾ
ತುರದಿಂದೆಳ್ದತ್ತೊ ಧಾತ್ರೀತಳಮೆನೆ [೩]ನಭದೊಳ್[೩] ತೀವಿತಭ್ರಪ್ರತಾನಂ ೩೯

ಆ ಸಮಯದೊಳ್,

ತವೆ ಬಳೆದು ಪರ್ಬಿತಾಕಾ
ಶವನೇಱಿದ ಮುಗಿಲ ನೀರ ನೆಱೆಯಂ ಮಿಗೆ ದು
ಶ್ಚ್ಯವನಂ ಬಿಡಿಸುವ ಘನಶ
ಸ್ರವಣಂ ಹೊಳೆವಂತೆ ಮಿಂಚು ಮಿಂಚಿತ್ತಾಗಳ್ ೪೦

ಘುಳುಘುಳು ಘಳಘಳ ಘುಡುಘುಡು
ಘುಳು ಛಿಟಿಛಿಟಿ ಘಾಘುರ್ಘಳಂ ಧಡಂ ಧಾಂಧಡ ಛಿಂ
ಛಿಳಛಿಳ ಭಿಂಭಿಂ ಘಡಘಡ
ಘಳಘಡಘಡಿಲೆಂದು ಮೊಳಗು ಮೊಳಗಿತು ನಭದೊಳ್ ೪೧

೧-೧ ದೆಸೆಯೊಳ್ (ಕೊ). ೨-೨ ನೆರೆದುವಂಬರಕ್ಕಬ್ದಕುಲಂ (ಬ). ೩-೩ ನಭಮಂ (ಯ).

ಆ ಮಿಂಚಿನ ಮೊಳಗಿನೊಳು
ದ್ದಾಮಾಂಬುದನಿಕರದಿಂದೆ ರ್ಗಸೆ ದೆಸೆ ಗಗನಂ
ತಾಮಱಿಯಲ್ ಬಾರದವೋ
ಲೇಮಾತೋ ಕಱೆದುದಿಳೆಯ ಹರ್ಷಂ ವರ್ಷಂ ೪೨

ಮತ್ತಮದಲ್ಲದೆಯುಂ,

ಮಿಗೆ ಕಾರರಸಂ ಪಗೆವೇ
ಸಗೆಯಂ ಸುರಧನುವಿನಿಂದೆ ಮುಗಿಲಂಬುಗಳಿಂ
ತೆಗೆದೆಸೆ ಬಹುವಿಧಶರವವ
ನಿಗೆ ಬಳ್ವಂತಿರ್ದುವಂಬುಧಾರಾ೧ನೀಕಂ೧ ೪೩

ಬೆಂಗೊಟ್ಟೋಡುವ ಬೇಸಗೆ
ಯಂ ೨ಗರ್ಜಿಸು೨ವಬ್ದಸಮಯನೃಪಘನಮದಮಾ
ತಂಗಕುಲದಾನಧಾರಾ
ಭಂಗಿಯನೊಡರಿಸಿತು ಕಟ್ಟ ಕಱೆವಾಸಾರಂ ೪೪

ಗಗನದಿನೆಱಗಿದ ಮಳೆ ನೀ
೩ನೆ೩ಗಲದೆ ಸಲಪೆಂದು ವರ್ಷನರಪಂಗಿಳೆಯಂ
ಮುಗಿಲಗಲದ ಹಸ್ತದಿನಾ
ಗಗನಾಂಗನೆ ಧಾರೆಯೆಱೆದ ತೆಱನಾಯ್ತಾಗಳ್ ೪೫

ಘನಸಮಯನೃಪಾಲಕನೊಳ್
ಘನಪಾಣಿಗ್ರಹಣಮಾದ ಭೂವನಿತೆಗೆ ಮು
ತ್ತಿನ ಸೇಸೆಗಳಂ ಗಗನಾಂ
ಗನೆ ಸೂಸಿದಳೆನಿಸೆ ಬಿಳ್ದುವಾಲಿಪರಲ್ಗಳ್ ೪೬

ಅಂತು ಬರ್ಪ ಕಾರಮಳೆಯಂ ಕಂಡು ಮನಂಗೊಂಡು,

೧-೧ ನಿಕರಂ (ಸಿ). ೨-೨ ಗರ್ದಿಸು (ಕಾ). ೩-೩ ರ (ಬ).

ಚಂಪಕ

ಶುಕನಿಕರಂಗಳುಗ್ಗಡಿಸೆ ಕೋಕಿಳನಾದದ ತಾಳಮುಣ್ಮೆ ಸೌ
ಖ್ಯಕರಕದಂಬಪುಷ್ಪರಸದಿಂ ತಣಿದೊಯ್ಯನೆ ಪಾಡೆ ಷಟ್ಪದಂ
ವಿಕಸಿತಪಕ್ಷನೂರ್ಧ್ವಗಳನುನ್ಮುಖನುಚ್ಚಳಿತಸ್ವನಂ ಬಳಾ
ಹಕನಿನವಕ್ಕೆ ಪೆಕ್ಕಣಮನಾಡಿದುದೊಂದು ಮಯೂರನಲ್ಲಿಯಿಂ ೪೭

ಮತ್ತಮನಂತರದಲ್ಲಿ,

ಚಂಪಕ

ನೆಗೆದುದು ಸಾರ್ದು ಪೊರ್ದಿ ತಮರಿತ್ತು ತುಳುಂಕಿತು ಬೆಂಗೆ ನೀರ ಧಾ
ರೆಗಳುಱೆ ನಾಂಟಲೀಂಟಿದುದು ನೇಹದೆ ನೋಡಿತುದಂಚಚಂಚುವಿಂ
ದುಗಿದುದು ಪಕ್ಕದಿಂ ಪೊಡೆದುದಂಘ್ರಿಗಳಿಂದೊದೆದತ್ತು ನೆತ್ತಿಯಿಂ
ನೆಗೆಪಿದುದಪ್ಪಿ ¹ತಳ್ತಿರಿದು¹ದಂಬುಕಣಂಗಳನೊಂದು ಚಾತಕಂ ೪೮

ಇಂತು ಶಿಖಿಪ್ರಕರಮುಂ ಚಾತಕಕುಲಮುಂ ನಲಿಯುತ್ತುಮಿರೆಯಿರೆ,

ಧಾರೆಗಳವನಿಯನೊಳಪೊ
ಕ್ಕೋರಂತುಚ್ಚಳಿಸಿ ಮಾಱುತಿರೆ ನಭದಿಂ ಘೋರ್
ಘೋರೆಂದೆರುಳುಂ ಪಗಲುಂ
ಜೀರೆನುತುಂ ತೆಱಪುಗುಡದೆ ಕಱೆದುವು ಮುಗಿಲ್ ೪೯

ಒತ್ತರಿಸುತ್ತಂಬರಮಂ
ಮುತ್ತುತ್ತುಂ ²ದಿಗ್ವಿತಾನಮಂ² ಧರೆಯೊಳ್ ತೀ
ವುತ್ತುಂ ಕತ್ತಲಿಸುತ್ತುಂ
ಸುತ್ತುಂ ಜಿನುಗಿದುವು ಸೋನೆ ಇರುಳುಂ ಪಗಲುಂ ೫೦

ಅಂತುಮಲ್ಲದೆ,

ಸರಿಗಳ ನೆರೆದೋಂಟಂ ಬಲ್
ಸರಿಗಳ ಭರಿತಂ ಸರಿಗಳ ಕಲ್ಲೋಲಕುಲಂ
ಸರಿಗಳ ಘೂರ್ಣಿತದಿಂದಂ
ಶರನಿಧಿ ಕವಿದಂತೆ ಕಱೆದುದಿಳೆಯೊಳ್ ವರ್ಷಂ ೫೧

---

¹-¹ ತಳ್ತಿರಿದು (ಡ). ²-² ದಿಕ್ಸತಾನಮಂ (ದಾ).

ಮೇಘಂಗಳ್ ಪರಿಗತವಿನಿ
ದಾಘಂಗಳ್ ಕಮಲವಿಮಳಜೀವನಭರಿತಾ
ಮೋಘಂಗಳ್ ಶಿಖಿನಿಕರ
ಶ್ಲಾಘಂಗಳ್ ಕಱಿದು[1]ವತುಳ[1]ಶೀತಳಜಳಮಂ ೫೨

ನೋಡುತ್ತಿರೆ ಸಕಳಜನಂ
ಕೂಡುತ್ತಿರೆ ಚಾತಕಂಗಳಿಳೆ ಜಳದೊಳ್ ತೇಂ
ಕಾಡುತ್ತಿರೆ ಶಿಖಿಕುಲಮೆ
ಳ್ದಾಡುತ್ತಿರೆ ತುಱುಗಿ ಕಱಿದು ಮೆಱೆದುವು ಮೇಘಂ ೫೩

ವೃಷ್ಟಿಗಳವು ಶಿಖಿಚಾತಕ
ತುಷ್ಟಿಗಳವು ಘನತಟಾಕವಿಮಳನದೀಸಂ
ಪುಷ್ಟಿಗಳವು ಜೀವರ್ಕಳ
ದೃಷ್ಟಿಗಳವು ಬಿಡದೆ ಕಱಿದುವವನೀತಳದೊಳ್ ೫೪

ಮತ್ತಮಲ್ಲಿ,

ಮತ್ತೇಭ

ಗಗನಂ ಕೆಟ್ಟುದು ಚಂದ್ರಸೂರ್ಯರಳಿದರ್ ದಿಕ್ಚಕ್ರಮಿಲ್ಲಾಯ್ತು ಬ
ಟ್ಟೆಗಳಸ್ಪಷ್ಟಮವಾದುವಾತ್ತಜಳದೊಳ್ ಪೂಳ್ದತ್ತು ಧಾತ್ರೀತಳಂ
ಖಗಸಂಚಾರತೆ ಶೂನ್ಯಮಾದುದು ನಿರುದ್ಯೋಗಕ್ಕೆ ಪಕ್ಕಾದುದೀ
ಜಗಮೊಂದೆಂಬಿನಮೆಯ್ದೆ ಕಟ್ಟಿಕಱಿದತ್ತಾಸಾರಮಿಾ ಲೋಕದೊಳ್ ೫೫

ಸುರಿದುದು ಮಳೆ ತಣಿಯುತ್ತಿಳೆ
ನೆರೆದುದು ಬೆಳೆ. ಕಾನನಂಗಳೊಳ್ [2]ನೆಱೆ[2] ವಿಸಟಂ
ಬರಿದುವು ಹೊಳೆ ನಾಂದುವು ಕಿಳೆ
ಧರಣಿಗೆ ಮೊಳೆ ಪಿಡಿದ ತಳೆಗಳಾದುವು ಮಳೆಯೊಳ್ ೫೬

ಇಂತಪ್ಪ ಮಳೆಗಳೊಳಗೆ,

೧-೧ ವಮುಳ (ಕಾ). ೨-೨ ಕೆಱ (ಮ).

ಮಳೆ ಮಾಣ್ದೊಡೆ ಹನಿ ಮಾಣದ
ದಳಫಳಯುತವಿಟಪಭರಿತವಿಟಪಿಯ ತ
ಣ್ಣೆಳಲಲ್ಲಿಂ ತಳರದೆ ಕೋ
ಮಳೆ ಮಳೆಯೊಳಗಗಜೆ ನಲಿದು [1]ಸಲೆ ನಿಂದಿರ್ದಳ್[1] ೫೭

ಆ ಸಮಯದೊಳ್,

ಅಭವಂಗಿಳೆಯೊಳ್ ತಪಮಿ
ರ್ಪ ಭವಾನಿಗೆ ಬಂದು ಕಲ್ಪತರು ಫಳರಸದಿಂ
ದಭಿಷೇಕಂ[2]ಮಾಡುವ ನವ[2]
ವಿಭವದವೋಲೆಸೆದುದಾಲಮರನಾ ಮಳೆಯೊಳ್ ೫೮

ಇಂತು ನೆಗೆದ ಮುಗಿಲ್ಗಳ ಭೀಕರಾಕಾರಕ್ಕಂ ಮಿಂಚುಗಳ ಸಂಚಳತೆಗಂ ಮೊಳಗಿನ ಮಹಾಧ್ವನಿಗಂ ಸಿಡಿಲ ಸಡಗರಕ್ಕಂ ಬಲ್ಸರಿಗಳ ಸಂಭ್ರಮಕ್ಕಂ ಬಿಱುಮಳೆಯ ಬಲ್ವೊಯಿಲ್ಗಂ ಪೆರ್ಮಳೆಯ ಧಾರೆಗಂ [3]ಆಲಿ[3]ಕಲ್ಲ ಕರ್ಕಶಕ್ಕಂ ಇಂದ್ರಗೋಪದ ಸಂದಣಿಗಂ ಶೀಕರದ ಶೀತಕ್ಕಂ ತುಂತುಱ ತಿಂತಿಣಿಗಂ ಸೋನೆಗಳ ಜಿನುಂಗಿಗಂ ಬಿಱುಗಾಳಿಯ ಗಾಸಿಗಂ ಕಾಲ್ವೊನಲ ಕಡುಪಿಂಗಂ ಪೆರ್ವೊಱೆಡವ ಕಳ್ತಲೆಗಂ [4]ಮರುಳ[4] ಭಯಾನಕಕ್ಕಂ ಕ್ರೂರಮೃಗದ ರೌದ್ರಕ್ಕಂ ಉಗ್ರಸರ್ಪಂಗಳದ್ಭುತಕ್ಕಂ [5]ಅರಣ್ಯದಾ[5]ಭೀಳತೆಗಂ ಕೋಡದೆ ಕೊಂಕದೆ ಬಾಡದೆ ಬಳ್ಕದೆ ಸೆಡೆಯದೆ ಸೇಡುಗೊಳ್ಳದೆ ಬೆಚ್ಚದೆ ಬೆವಱದೆ ಬಲಂಗೆಡದೆ ಮನಂಗುಂದದೆ ಕೆಲನಂ ಸಾರದೆ ಸಹಾಯಮಂ ಪಾಱದೆ ಮಹಾವಟವೃಕ್ಷದ ಕೆಳಗೆ ವಿಪುಳತಪದಿಂ[6]ದಪರ್ಣೆ[6]ಯೊಪ್ಪುತ್ತುಮಿರೆಯಿರೆ,

ಜಯವಿಜಯೆಗಳಱಿದು ಶಿವ
ಪ್ರಿಯೆಯುಗ್ರತಪಃಪ್ರಭಾವ[7]ಭಾಸುರೆ[7] ಪುಣ್ಯೋ
ದಯೆ[8]ಶೀಲೆ ಶಾಂತೆ[8] ಪಾರ್ವತಿ
ಜಯಜಯಜಯರಕ್ಷಿಸೆನುತುಮೆಂದಿಂತೆಂದರ್ ೫೯

೧-೧ ತಪದಿಂದಿರ್ದಳ್ (ಡ). ೨-೨ ಮಾಡುವಸತಿ (ಕಾ). ೩-೩ ವಾರಿ (ಮ ಬ ಕ). ೪-೪ ಕಾರಿರುಳ (ಕಾ ಜೆ ಬ ಯ ಗೊ); ಇರುಳ (ಮಾ ಡ ಸೆ). ೫-೫ ಭೀಮರವಾ (ಕಾ). ೬-೬ ಪಗಜೆ (ಡ). ೭-೭ ಭಾಷುರೆ (ದಾ). ೮-೮ ಶೀಲೆಯೆಂ ಕಲಿ (ಬ); ಶೀಲೆ ಕಲಿಯೆಂ (ಗೊ)

ಮಾಣ್ದುದು ಮಳೆ ಶರದಮಳತೆ
ಪೂಣ್ದುದು ಕಳಹಂಸಮಾಲೆ ಮೆಲ್ಲನೆ ಬಿಲದೊಳ್
ಕಣ್ದೆಱೆದುವು ತೊಳತೊಳಗು
ತ್ತೆಣ್ದೆಸೆ ನೆರೆ ತಿಳಿದುವೀಗಳವಧಾರ್ಗಜೇ ೬೦.

ಚಂಪಕ

ಜನವನುರಾಗವೇಱೆ ಪೊಱಮಟ್ಟು ಕೃಷಿವ್ಯವಸಾಯವೃಂದಮಂ
ಮನದೊಲವಿಂದೆ ಮಾಡುತಿದೆ ಕೋಟರದಿಂ ನೆಗೆತಂದು ಪಕ್ಷಿಗಳ್
ಕೊನೆದಳಿರ್ಗೊಂಬಿನೊಳ್ ಬಿಸಿಲನಾಂತಿವೆ ಹಂಸಕುಲಂ ಬಿಲಂಗಳಿಂ
ದನುಮಿಸೆ ೧ಕೂಡೆ೧ ಪೊಣ್ಮುತಿವೆ ಪಾರ್ವತಿ ನೋಡ ಶರದ್ವಿಳಾಸಮಂ ೬೧

ರವಿಕಿರಣಂ ನೀರೋಡು
ತ್ತಿವೆ ೨ತಣ್ಪಂ೨ ಬೀರುತಿವೆ ರಥಾಂಗಕುಲಂಗಳ್
ತವೆ ತಣ್ಬಿಸಿಲೊಳ್ ನಿಂದಿ
ರ್ದಿವೆ ಮೇಘಂ ಹಿಂಡಿ ಹರಹಿದಂತಿವೆ ನಭದೊಳ್ ೬೨

ಪರೆದುವು ಪಯೋಧರಂಗಳ್
ಬರುತಿವೆ ಕಳಹಂಸಮಾಲೆ ಬಿಸಿಲೊಳ್ ವಿಹಗಂ
ನೆರೆದಿವೆ ಮೃಗಸಂತತಿ ಗ
ಹ್ವರದಿಂ ಪೊಱಮಟ್ಟು ಮೇಯುತಿವೆ ಮೊಳೆವುಲ್ಲಂ ೬೩

ತಿಳಿದುವು ದೆಸೆಗಳ್ ಹಂಸಾ
ವಳಿ ಸಾರ್ದುವು ಪೂರ್ಣಸರಸಿಯಂ ಬಿಸಕಂದಂ
ಮೊಳೆವೋದುವು ಸಲಿಲಂ ನಿ
ರ್ಮಳಮಾದುವು ೩ತಳೆದು೩ದಾಗಸಂ ಧವಳತೆಯಂ ೬೪

ಎಂದು ಜಯವಿಜಯೆಗಳ್ ಬಿನ್ನಪಂಗೆಯ್ದು,

ಇದುವೆ ಶರತ್ಸಮಯಂ ಮೇ
ಲೊದವುತ್ತಿರೆ ಶೀತಕಾಲಮಗಸುತೆ ಕಾಸಾ
ರದ ಕೆಱೆಗಳ ತೊಱೆಗಳ ಬೆ
ಟ್ಟದ ತಳ್ಪಲ ಹಿಮದೊಳೆಸೆಯೆ ಮಾಳ್ಪುದು ತಪಮಂ ೬೫

೧-೧ ನೋೞಿ (ಕಾ ಬಿ ಯ). ೨-೨ ತಣ್ಪಂ (ಕಾ ಬಿ ಯ). ೩-೩ ಕಳೆದು (ಕಾ); ತೞಿದು (ಕ).

ಎಂದು ಜಯವಿಜಯೆಗಳ್ ಬಿನ್ನಪಂಗೆಯ್ದುಚಿತವಚನಾನೀಕಮನಾಕರ್ಣಿಸಿ ಲೋಕೈಕಬಂಧು ಸಾಕಾರಸುಧೆಯೆನಿಪ ಮಹಾದೇವಿ ಮಳೆಗಾಲಂ ಮಾಣ್ದುದಂ ಮನದೊಳಱಿದು ಬಡವಾದೊಡಲಂ ಬಿಡದೋಲಗಿಪ ನಾರಸೀರೆ ನಯಂವೇಱಿ ಪೊಱಗಣ ಮಳೆಯಿಂ ನಾಂದ ಮೆಯ್ಯ ನೀರ ಬಣ್ಣಮಂ ತಣ್ಣೆಳಲೊಳಾಱಿಸಿ ಧ್ಯಾನಾನಂದರಸದ ಸೋನೆಯಿಂದೊಳಗೆ ನಾಂದ ಕರಣಂಗಳನುಸಿರೊಳಾಱಿಸುತ್ತುಂ ತಪೋಭಾನೂದಯಕ್ಕೆ ಮುಖಕಮಳದಳಂ ಬಿರ್ಚುವಂತೆ ಮೆಯ್ಯ ಸಂಪುಟಂ ಬಿರ್ಚೆ ಕಣ್ದೆಱೆದು ಮುಂದಿರ್ದ ಸಹಚರಿಯರಂ ಕಂಡು,

ಜಳಧರದೊಳಗಿಂದಂ ಶಶಿ
ಕಳೆ ಪೊಱಮಡುವಂತೆ ಪರ್ಣದಾಲದಮರದಿಂ
ಗಳಿಲನೆ ಪೊಱಮಟ್ಟಳ್ ಕೋ
ಮಳೆಯರ್ ಕೆಯ್ಗುಡೆ ಭವಾನಿ ಮೆಲ್ಲಡಿಯಿಡುತುಂ ೬೬

ನಡೆತಂದು ಮಂಜು ನೆಱೆ ಮಾ
ಱ್ಪೊಡೆ ಶೀತಂ ಮಾಣದಿರ್ದ ತಣ್ನೆಳಲೊಳ್ ಕಂ
ಪಿಡಿದ ಲತಾಗೇಹಂಗಳ
ನಡುವಣ ಕಾಸಾರತಟದೊಳಂಬಿಕೆ ನಿಂದಳ್ ೬೭

ಅಂತು ನಿಂದಿರೆಯಿರೆ,

ಇತ್ತಲ್ ಭೂತಳದೊಳ್ ಹಿಮ
ಮೊತ್ತರಿಸಿತು ಭುವನಜನಮನುಱೆ ನಡುಗಿಸುತುಂ
ಸುತ್ತುತ್ತುಂ ಸುಗಿಯುತ್ತುಂ
ಮುತ್ತುತ್ತುಂ ಮುಂದುಗೆಡಿಸುತುಂ ಮುಸುಕಿಡುತುಂ ೬೮

ಅಂತುಮಲ್ಲದೆಯುಂ,

ಮೃಗಸಂತತಿಯುಂ ಕೊಳರ್ವ
ಕ್ಕಿಗಳಂ ಪಕ್ಕಿಗಳ[೧]ನದ್ರಿ[೧]ತಟದೊಳ್ ಕೊಳನೊ
ತ್ತುಗಳೊಳ್ ಕೋಟರದೊಳ್ ಮಿಗೆ
ಪುಗಿಸುತ್ತುಂ ಬಂದನಮಮ ಶಿಶಿರನೃಪಾಲಂ ೬೯

೧–೧ ನದಿಯ (ಮ).

ಅಂತು ಬಂದು,

ಮತ್ತೇಭ

ಕಿಡಿಗಳ್ ಕೆಚ್ಚನೆಯಾಲಿಕಲ್ಲುರಿಯು ಮೊತ್ತಂ ಕೆಂದಳಿರ್ ಕೆಂಡದೊಂ
ಡಡಕಿಲ್ ಮಾಣಿಕದಿಂಡೆ ಕಾಯ್ವ ತಪನಂ ಚಂದ್ರಂ ಪೊದಳ್ದಾತಪಂ
ಗಡ ಬೆಳ್ದಿಂಗಳೆನಿಪ್ಪುದೊಂದು ಪೆಸರಂ ತಾಂ ಮಾಡಿದಂತಿರ್ದುದಾ
ಕಡುಪಿಂ ತನ್ನಯ ಕಾಲದಲ್ಲಿ ಹಿಮರಾಜಂ ಧಾರಿಣೀಚಕ್ರದೊಳ್ ೭೦

ಮತ್ತಮಲ್ಲದೆಯುಂ,

ಮಿಗೆ ಬೆಮರಱತುದು ನೀರಡಿ
ಕೆಗಳಿಂಗಿದುವುಷ್ಣದುಸಿರಡಂಗಿತು ತಪನಂ
ಗೊಗೆದುದು ಪೆರ್ಚಿದ ತಣ್ಪ
ಗ್ಗಿಗೆ ಶೀತಂ ಪತ್ತಿತೇನನೆಂಬೆಂ ಹಿಮದೊಳ್ ೭೧

ಸಲೆ ರವಿ ತೇಜಂಗುಂದುತೆ
ನಿಲಲಂಜುತ್ತೋಡಿ ಪುಗುವನದ್ರಿಯ ಮಱೆಯೊಳ್
ಗಿಗಿಲೆಗಿ ಹರಿವ ಹಾವುರಿವ ಕಿ
ರ್ಚೆಲೆ ನಿಂದುವು ಶಿಶಿರನೃಪತಿಯಾಜ್ಞೆಗೆ ಜಗದೊಳ್ ೭೨

ಮತ್ತಮಲ್ಲಿ,

ಉದಯಂ ಶೀತೋದಯಮು
ಗ್ಗದ ಮಧ್ಯಾಹ್ನಂ ತುಷಾರಮಧ್ಯಾಹ್ನಂ ಮಿ
ಕ್ಕುದುದಸ್ತಮಯಂ ತಾನು
ಷ್ಣದಸ್ತಮಯಮೆನಿಸಿತಮಮ ಹಿಮವಿಭ್ರಮದೊಳ್ ೭೩

ತಿಳಿವೊಡೆ ಶಶಿ ರವಿ, ರವಿ ಶಶಿ,
ಬೆಳಗುವ ಜೊನ್ನಂ ಬಿಸಿಲ್ ಬಿಸಿಲ್ ತಾಂ ಜೊನ್ನಂ
ಚಳಿ ಬಿಸುಪು ಬಿಸುಪು ಚಳಿಯನೆ
ಬಳೆದುದು ಹಿಮರಾಜತೇಜವಿಮಾ೨ ಜಗದೆಡೆಯೊಳ್ ೭೪

೧-೧ ನೆಲೆ (ಕೊ). ೨-೨ ಮೂ (ಬ ಯ).

ಆಸಮಯದೊಳ್,

ಪಲ್ಪಱ[೨]ಯೊಳೆ ಹುಹುಹೆಂಬಾ
ಜೊಲ್ಪಗ್ಗಡಣೆಯೊಳೆ ಹಸ್ತದಂಡಿಗೆಯೊಳ್ ತಾ
ನೊಲ್ವನ್ನಂ ಶಿಶಿರನಟಂ
[೧]ಸಲ್ವನ್ನಂ[೧] ಜನವನಾಡಿಸಿದನುರ್ವರೆಯೊಳ್ ೭೫

ನುಡಿಯೆ ಹುಹು [೨]ನಡೆ[೨]ಯು ಮಾತೇ
[೩]ಕೊಡಲೇ[೩] ಪ್ರಾಣಂಗೆ ಚಳಿಯು ಕುಪ್ಪಸವಾಯ್ತೆಂ
ದೊಡೆ ಹಿಮದ ಮಹಿಮೆಯಂ [೪]ಪೇ
ಳ್ವೊಡೆ ಕೇಳ್ವವನಾವನೊರ್ವನುರ್ವೀತಳದೊಳ್[೪] *೭೬

ಉಱ[೩] ಶೀತಂ ಪತ್ತಿದೊಡಿರ
ಲಱಯದೆ ಜೀವಂ ಬಿಗುರ್ತು ಜಠರಾಗ್ನಿಯನೆ
ಳ್ಚಱಸೆ ಹೊಗೆಯುಸಿರ ಪಥದಿಂ
ಪೊಱಮಡುವುದು ಜನದ ಮುಖದೊಳಲ್ಲದೊಡುಂಟೇ *೭೭

ಮತ್ತಮಲ್ಲದೆಯುಂ,

[೫]ಈಕ್ಷಿಸಿದಳೆಳಸಿ[೫] ಭಸಿತದ
ರಕ್ಷೆಯನೊಸೆದಿಟ್ಟು ಮಂಜಿನಿಂ [೬]ತೂಪಿಱದುಂ[೬]
ಶಿಕ್ಷಿಸಿ ಬಲ್ಪಿಂದೊಡಂ[೭]
[೭]ರಕ್ಷಿಸುವಳ್[೭] ಶೀತಮಾತೆ ಶಿಖಿಬಾಲಕನಂ ೭೮

ಒದವಿ ಧರಾತಳದೊಳ್ ತೀ
ವಿದ ಶೀತಕ್ಕಂಜಿ ಕಂಪಿಸುತ್ತುಂ ನಿಲಲಾ
ಱದೆ ಬಡವಾಗಿ ಕರಂ ಕಾ
ಷ್ಠದೊಳಗೆ ಪೊಕ್ಕಂ ಕೃಶಾನುವೇನಂ ಪೇಳ್ವೆಂ ೭೯

ಮತ್ತಮಾ ಶೀತಾತಿಸಮಯದಲ್ಲಿ,

೧-೧ ಸಾಲ್ವನ್ನಂ (ಶಾ). ೨-೨ ಕಡೆ (ಶಾ ಬೆ ಯ). ೩-೩ ನೋಡಲೇ (ಶಾ ಬ ಯ) ೪-೪ ಕಿ| ಳ್ವೊಡೆ ಬಲ್ಲದನಾವನೋರ್ವನುರ್ವೀತಳದೊಳ್ (ಶಾ ಕ); ಪೇ | ಳ್ವೊಡೆ ಕೇಳ್ವವನೊಬ್ಬನಿಲ್ಲವೀ ಧಾರಿಣಿಯೊಳ್ (ಯ). ೫-೫ ಈಕ್ಷಿಸುತೆಳಸಿ (ಬ ಯ). ೬-೬ ತೂಪಿಱದಳ್ (ಶಾ). ೭-೭ ರಕ್ಷಿಸುವಳೆ (ಶಾ ಬ). * ೭೬ ಮತ್ತು ೭೭ನೆಯ ಪದ್ಯಗಳು ಬ ಪ್ರತಿಯಲ್ಲಿಲ್ಲ.

ಮುಂಚ್ಚಿ ಮುಸುಂಕಿದ ಹಿಮಮಂ
ಕಿಚ್ಚಿಂದಂ ಕಳೆಯಲಾಱದಿಳೆಯ ಜನಂಗಳ್
ಬೆಚ್ಚರಮೆಯ್ತಂದೊಲವಿಂ
ದಚ್ಚರಿ ವಿರಹಿ[1]ಯನೆ[1] ಕಾಯ್ದು ಕಳೆವರ್ ಚಳಿಯಂ ೮೦

ಪರಿಪೂರ್ಣತಟಾಕದ ಮೇ
ಲುರಿಯಿಲ್ಲದೆ ಧೂಮಮೊಗೆವು[2]ತಿರೆ[2] ಮಾಗಿಯೊಳ
ತ್ಯುರುತರಗುರುತರತಾಪ
ಕ್ಕಿರಲಾಱದೆ ವಿರಹಿ ಪೊಕ್ಕು ಮುಳುಗದೆ ಮಾಣಂ ೮೧

ಪುಟ್ಟಿತು ಚಳಿ [3]ಬಳೆದುದು[3] ಚಳಿ
ಕೊಟ್ಟುದು ಚಳಿ ಕೊಂಡುದೆಲ್ಲಮಂ ಚಳಿಚಳಿಯಿಂ
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ ಮುಟ್ಟಿತೆಲ್ಲ ಚಳಿ ಪೊಸಚಳಿಯೊಳ್ ೮೨

ಎಂಬ ಕೌತುಕಮನೊಳಕೊಂಡು,

ಈ ತೆಱದಿಂ ನೆಱೆ ಪರ್ಬಿದ
ಶೀತದೊಳಗಜಾತೆ ನೂತ್ನಸುರುಚಿರಸರಸೀ
ವ್ರಾತಮದೆಲ್ಲಿ ಘನಾಚಳ
ನೈತಂಬಮದೆಲ್ಲಿಯಲ್ಲಿ [4]ತಪದಿಂ ನಿಂದಳ್[4] ೮೩

ಇಂತು ನಿದಾಘನಿಷ್ಠುರತೆಯೊಳಂ ಮಳೆಗಾಲದ ಪ್ರಳಯಜಲದೊಳಂ ಮಾಗಿಯ ಮಹಾಶೀತಲದೊಳಂ ಭಾಳಲೋಚನನ ಭಾಮಿನಿ ಗಂಗಾಧರನ ಗರುವೆ ಚಂದ್ರಧರ ನರಸಿಯೆನಿಪ ಗಿರಿರಾಜತನೂಜೆಯಿರ್ದ ನಿರುಪಮಾನತಪಃಪ್ರಭಾವಂ ವಿರೂಪಾಕ್ಷನ ಕರಣಂಗಳೊಳ್ ಬೆರಸಿ ಬಳೆಯೆ ಪುರಹರನೆಳ್ಚತ್ತು ಕೆಚ್ಚುಗಟ್ಟಿದ ಧೈರ್ಯಮ ನೊಡೆದು ಮೂಡಿ ಪಿಡಿದೆಳೆವ ಕಾರುಣ್ಯಕ್ಕೆ ಪಕ್ಕಾಗಿ ಪನ್ನಗಭೂಷಣನಿನ್ನಿರಲ್ ಬಾರದೆಂದು ತನ್ನೊಳ್ ಬಗೆದತಿಸ್ವತಂತ್ರಂ ಗಿರಿಜೆಯ ಮನಮನೊರೆದು ನೋಡುವ [5]ಭರದಿಂ ಬಂದು[5] ನಿಂದು,

---

೧-೧ ಗಳ (ಕೊ). ೨-೨ ತಿವೆ (ಯ). ೩-೩ ಬಳೆವುದು (ಮ ಯ). ೪-೪ ತಪದಿಂದಿರ್ದಳ್ (ಕೊ). ೫-೫ ಭರದಿಂದೆಳ್ದು (ಯ ಬಿ ಬ).

ದಶಭುಜಮಂ ಪಂಚಾಸ್ಯಮ
ನಶೇಷಭೀಮಾಂಗವಿತತಿಯಂ ತನುವಿನೊಳಂ
ವಶಮಂ ಮಾಡುತಡಂಗಿಸಿ
ಪಶುಪತಿ ವಟುವೇಷದಿಂದಮೊಪ್ಪುತ್ತಿರ್ದಂ ೮೪

ಗಿರಿಸುತೆಯಂ ಕಾಣ್ಬನ್ನಂ
ವರಪರಮಬ್ರಹ್ಮಚರ್ಯದಿಂದಂ ತಾನಿ
ರ್ದಿರವಂ ತೋರ್ಪುವ ೧ತೆಱದಿಂ೧
ಗಿರಿಶಂ ವಟುವೇಷಮಂ ವಿರಾಜಿಸೆ ತಳೆದಂ ೮೫

ಅಂತು ತಳೆದು,

ಮತ್ತೇಭ

ಮಿಗೆ ಶೀತಾಂಶು ಚಕೋರಿಯಲ್ಲಿಗೆ ವಸಂತಂ ರಾಜಿಪುದ್ಯಾನದ
ಲ್ಲಿಗೆ ಸೂರ್ಯಂ ಸರಸೀಜದಲ್ಲಿಗೆ ವರಪ್ರಾಣಾನಿಳಂ ದೇಹದ
ಲ್ಲಿಗೆ ಮೇಘಂ ಶಿಖಿಯಲ್ಲಿಗೊಪ್ಪುವ ಮರಾಳಂ ಪೂರ್ಣಕಾಸಾರದ
ಲ್ಲಿಗೆ ಬರ್ಪಂತೆ ಭವಾನಿಯಲ್ಲಿಗಭವಂ ಬಂದಂ ೨ಜಗದ್ವಲ್ಲಭಂ೨ ೮೬

ಇಂತು ಭೂಲೋಕಕ್ಕಿಳಿತಂದು ಹೇಮಕೂಟದೊಳ್ ಹೈಮವತಿಯಿರ್ಪ ತಪೋವನಮಂ ಪುಗುತರ್ಪಾಗಳ್,

ಚಂಪಕ

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ
ಕುರಿಸಿತು ಮಾವು ಪಲ್ಲವಿಸಿತಲ್ಲಿಯಶೋಕೆ ವಸಂತದೂತಿಯೊ
ಪ್ಪಿರೆ ನೆಱೆ ಪೂತುವನ್ಯಭೃತನುನ್ನತಿಯಿಂ ಕರೆದತ್ತು ಮಲ್ಲಿಕಾ
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಳಂ ೮೭

ಅಂತು ತೀಡೆ,

ಜಯೆವಿಜಯೆಗಳಿದು ಪೊಸತತಿ
ಶಯಮೀ ಶಿಶಿರದೊಳದೇಂ ಭವಾನಿ ವಸಂತೋ
ದಯಸೂಚನೆಯಾದುದು ನಿ
ಮ್ಮಯ ಪುಣ್ಯತಪಃಪ್ರಭಾವಕಾರಣಮಲ್ತೇ ೮೮

೧-೧ ನೆವದಿಂ (ಗೊ ಗ). ೨-೨ ಭವಂ ಭಾಸುರಂ (ಮ ಬ ಆ ಕ).

ಚಂಪಕ

ಎನುತಿರೆ ಬಂದು ಭಾವಿಸಿ ತಪೋವನಮಂ ಶಶಿಮೌಳಿ ಪೊಕ್ಕು ಮೆ
ಲ್ಲನೆ ಬರುತುಂ ಪಥಶ್ರಮವನಾಂತು ಬಳಲ್ದವೊಲಾಗಿ ತೇಂಕುತುಂ
ಮನದೊಳನೂನಸಂಪದಮನೆಯ್ದುತುಮಾಕ್ಷಿಸುತಿರ್ಕೆಲಂಗಳಂ
ಘನಮಹಿಮಂ ಸ್ವತಂತ್ರವಿಭು ಪೊರ್ದಿದನೊಂದು [೧]ವಿನೂತ್ನ[೧]ಚೂತಮಂ ೮೯

ಇಂತು ಪೊರ್ದಿ ಕಪಟವಟುವೇಷಮಂ ತಳೆದ ಕಪರ್ದಿ ಪಾರ್ವತೀದೇವಿಯರ್ ತಪದೊಳಿರ್ಪ ಸೀಮಾಸಮೀಪದ ವಿಶಾಲಬಾಲಚೂತಶೀತಳಚ್ಛಾಯೆಯೊಳ್ ಕುಳ್ಳಿರೆ ಸಹಚರಿಯರಪ್ಪ ಜಯೆವಿಜಯೆಗಳ್ ಕಂಡು,

ತರಳನಪೂರ್ವಿಗನತಿಥಿ
ಸ್ವರೂಪನೀಷದ್ವಿಭೂತಿಲಸಿತಲಲಾಟಂ
ವರವಿಪ್ರನೆನುತೆ ಬಂದಾ
ದರಿಸಿದರೊಲವಿಂದೆ ಚರಣತಳಮಂ ತೊಳೆದರ್ ೯೦

ಅಂತು ತೊಳೆದು,

ಎಳಮಾಳೆಯ ಸುಳಯೆಲೆಯೊಳ್
ನಳನಳಸುವ ಕಂದಮೂಲಮಂ ನವಜಂಬೂ
ಫಳಮಾಮ್ರಫಳಂ ಕದಳೀ
ಫಳಂಗಳಂ ತೀವಿ ತಂದು ಮುಂದಿಳಪುತ್ತುಂ ೯೧

ಎಲೆಯತಿಥಿ [೨]ಬಳಲ್ದಿರೆಮ್ಮೀ[೨]
ಫಲದಿಂದಂ ನಿಮ್ಮ ಪಸಿವ[೩]ನುಡುಗಿಸಿಯೆನೆ[೩] ಸೈ
ಫಲಮಂ ಕೆಯ್ಕೊಂಡಪೆವೀ
ಲಲನೆಯದಾರ್ ತಪಮಗಣ್ಯಮಾವನ ಪುಣ್ಯಂ ೯೨

ಎಂದು ನುಡಿಯೆ ಜಯೆವಿಜಯೆಗಳ್ [೪]ಕೇಳ್ದು[೪]

ಇವರಿರವಿನ ಚಿಂತಾರತಿ
ನಿಮಗೇಕೀ ಕ್ಷುಧೆಯನೀ ಪಥಶ್ರಮಮಂ ತೀ
ರ್ಚುವ ಬಗೆಯಿಂ ಬೇಗಂ ಮಾ
ಡುವುದೆನೆ ನಸುನಗುತೆ ವಿಪ್ರನಂದಿಂತೆಂದಂ ೯೩

೧-೧ ವಿನೂತ (ಶಾ). ೨-೨ ಬಳಲ್ದಿರಿಮಾ (ದಾ ಗೊ ಡ ಜ ಅ). ೩-೩ ನಡಗಿಸಿಮೇನೆ (ಅ). ೪-೪ ಕಂಡು (ಡ).

ಬೆಸಗೊಂಡೊಡೆ ದೋಷಮೆ ಈ
ಪೊಸಕನ್ನೆ ತಪೋನಿರೋಧದಿಂದಿರ್ದೊಡೆ ಸೈ
ರಿಸಬರ್ಪುದೆ ತಪಮಂ ಮಾ
ಣಿಸುವವರಿಲ್ಲಾ ಸಹಾಯ[೧]ಸಂಪದಮಿಲ್ಲಾ[೧] ೯೪

ಎನೆ ಕೇಳ್ದು ಗಿರಿಜೆ ಮನದೊಳ್
ಮುನಿಯುತ್ತುಂ ಜಪವನುಡುಗಿ ಜಪಮಾಲೆಯನೊ
ಯ್ಯನೆ [೨]ಕೆಯ್ಯೊಳೋಸರಿಸಿ[೨] ಮೆ
ಲ್ಲನೆ ಕಣ್ದೆಱೆ[೩]ಯುತ್ತೆ ಕಂಡಳಾ ವರ ವಟುವಂ ೯೫

ಆ ಸಮಯದೊಳ್,

ಇಂದುಗೆ ಮೇಘಂ ಕವಿದೊಡ
ಮಂದೀ ಲೋಕಕ್ಕೆ ತಣ್ಪು ತಪ್ಪದ ತೆಱದಿಂ
ದಿಂದುಧರಂ ವರವಟುವೇ
ಷಂವಳೆದೊಡಮಗಜೆಗಾದುದತಿಹರ್ಷಮುಖಂ ೯೬

ಅಂತು [೪]ಹರ್ಷಮನಿಮಿತ್ತಮೇಕಾದಪುದೆಂದು[೪] ನಿಮಿತ್ತಮಂ ನೆಱೆಯದೆ ಬೆಱಗಾಗಿ ನೋಡುತಿರ್ಪಲ್ಲಿ,

ಗಿರಿಸುತೆಯ ಮಧುರದೃಷ್ಟಿಗ
ಳುರವಣೆಯಿಂ ತಾಗೆ ತನ್ನನಾಗಳ್ ವಿಪ್ರಂ
ಕರಗಿ ನಿಲಲಾಱದೆಳ್ದ
ತುರಪುಳಕಮನಂತುಮಿಂತು ಸಂತಮಿಡುತ್ತುಂ ೯೭

ನೆಗೆವ ಜಡೆಮುಡಿಯನೊತ್ತು
ತ್ತೊಗೆವ ಭುಜಾಳಿಯನಡಂಗಿಸುತ್ತೂರುಗಳಿಂ
ಮಿಗುವ ವೃಷೇಂದ್ರನನೌಂಕು
ತ್ತಗಲದೆ ನಿಜಮೂರ್ತಿ[೫]ಯೊಳಗೆ[೫] ಗಜಬಜಿಸುತ್ತುಂ ೯೮

೧-೧ ಸಂಪದರಿಲ್ಲಾ (ಮ); ಸಂಪದವಿಲ್ಲಂ (ಅ); ಸಂಗಡವಿಲ್ಲಾ (ದಾ). ೨-೨ ಕೆಯ್ಯೊಳ್ ಕೊಡರ್ಚುತೆ (ಮ ಕ); ಕೆಯ್ಯೊಳೊಡರಿಚಿ (ಬ ಯ ದಾ ಗೊ ಡ). ೩-೩ ನೋಡುತೆ ಬೇಗ (ಅ). ೪-೪ ಹರ್ಷಮುಖಮೇಕಾದುದೆಂದು (ಕಾ ಕ). ೫-೫ ಯೊಡನೆ (ಚ ಬ).

ಎಂತಾನುಂ ನಿಜರೂಪಂ
ಸಂತವಿಡುತ್ತಲ್ಲಿ ವಿಪ್ರನತಿಧೈರ್ಯತೆಯಂ
ಮುಂತಿಟ್ಟು ಗಿರಿಜೆಯೊಡನುಸಿ
ರ್ದಂ ತಡಬಡಿಸುತ್ತೆ ಮಿಸುಪ ಪೊಸಪುಸಿವಾತಂ ೯೯

ಈ ಸುಕುಮಾರತೆಯಿಾ ನಿಲ
ವೀ ಸುಕರತೆಯಿಾ ನವೀನಯೌವನಮುದವೀ
ಭಾಸುರತೆಯಿಾ ಸುಧಾಮಯು
ವೀ ಸುಖದೊಳ್‌ ತಪಮಿದೆಂತು ಬಂದುದು ಮುಗ್ಧೇ ೧೦೦

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ ನವಲತೆಯಂ ಸೂ
ರ್ಯನ ಬಿಸಿಲಿಂ ಕೊರಗಿಪ ದು
ಷ್ಟನನೆನಗಱಿಪಬಲೆ ಸೌಕುಮಾರ್ಯಾವರಣೇ ೧೦೧

ಅಂತುಮಲ್ಲದೆಯುಂ,

ಎಳೆಗೆಂಪನುಗುಳ್ವ ಮೃದುಕೋ
ಮಳಪದಕಮಳಂಗಳೀಗಳತಿಕಠಿನಮೆನಿ
ಪ್ಪಿಳೆಯೊಳ್ ಹರಹರ ಕಲ್ನೆಲ
ಕಳವಟ್ಟುವಿವೆಂತು ಬಾಲಹಂಸೀಯಾನೇ ೧೦೨

ಎಳವೆಳ್ದಿಂಗಳ ಸೊಂಕಿಂ
ಗಳವಡದಳ್ಕುವ ಶಿರೀಷಸುಕುಮಾರಾಂಗಂ
ಬಳವತ್‌ಕರ್ಕಶತರದಿಂ
ಬಳಸಿರ್ದೀ ನಾರಸೀಱಿಗಾಂತುದು ಚಿತ್ರಂ ೧೦೩

ಎಳಲತೆಯಂ ಱೋಡಾಡುವ
ನಳಿತೋಳ್ ಕೋಕಂಗಳಂ ವಿಭಂಗಿಪ ಕುಚಮುಂ
ಡಳಗಿಮುಸಿರಲುಪವನಪಥದ
ತುಳಗಿಮಧ್ಯಂ ತಪದ ಕೋಟಲೆಗೆ ಸಂಗಡವೇ ೧೦೪

೧-೧ ವುಂ ಭಸ್ಮೋದ್ಧೂಳಿತ। ಮುಳ (ಅ).

ಮಿಸುಗುವ ಶಶಿವದನಂ ಕಡು
ವಿಸಿಲಿಂ ಕೊರಗಿತ್ತು ಕುಸುಮಮಾಳಿಕೆಯಿಂ ರಾ
ಜಿಸುವ ಕಚಭಾರಮುಯ್ಯೋ
ಪೊಸಜಡೆಯಂ ಪಡೆದುದಕಟ ಘನಯೌವನದೊಳ್ ೧೦೫

ಮತ್ತಮಲ್ಲದೆಯುಂ,

ಬಿಸಿಲೆನ್ನದೆ ಮೞೆಯೆನ್ನದೆ
ಶಿಶಿರಮಿದೆನ್ನದೆ ತೃಷೋನ್ನತಿ ಕ್ಷುಧೆ ನಿದ್ರಾ
ವಿಸರಮುಮಂ ನೆಱೆ ಗೆಲ್ದೀ
ವಸುಮತಿ ಬೆಱಗಾಗೆ ತಪದೊಳಿರ್ಪವರುಂಟೇ ೧೦೬

ವನಜಾನನೆ ಎಱಂಜ
ವ್ವನದೊಳ್ ವನದೊಳ್ [೧]ನಿರೋಧದೊಳ್ ಪೇೞೆಂತಾ[೧]
ವನನುದ್ದೇಶಿಸಿ ತಪಮಿದ
ನೆನಗಱಿಪಿದೊಡೇನೊ ದೋಷಮೋ ಮೃಗ[೨]ನಯನೇ[೨] ೧೦೭

ಎಂದು ಪ್ರೇಮಜನಪ್ರಣಯಕಲಹಲೀಲಾಲೋಲಚಿತ್ತನಪ್ಪ ವಿರೂಪಾಕ್ಷಂ ಪರಮವಟುವೇಷದಿಂ ನುಡಿದ ಮೃದುಕಠಿನಾಕ್ಷೇಪಗರ್ಭಿತವಚೋವಿಳಾಸಮಂ ಶೈಳಜೆ ಕೇಳ್ದು ಚಿಂತೆಯುಂ ತಾಳ್ದು,

ಬೆಸಗೊಂಡಪನಮಳದ್ವಿಜ
ನುಸಿರಲ್ ತಾಂ ಬಾರದುಸಿರದಿರಬಾರದೆನು
ತ್ತಸದೃಶತಪಮಂ ಮನದು
ಬ್ಬಸದಿಂದೆ ಭವಾನಿ [೩]ಮಾನಿ[೩] ಮೆಲ್ಲನೆ ನುಡಿದಳ್ ೧೦೮

ಬಗೆವೆರ್ಚೆ ಕೇಳುತಿರ್ದಪೆ
ಮಿಗೆ ಪೇಳ್ದಪೆನೆಲೆಲೆ ಧೂರ್ತವಿಪ್ರನೆ ಕೇಳ್ ಶಂ
ಭುಗೆ ಕಾರುಣ್ಯಾಬ್ಧಿಗೆ ಶೂ
ಲಿಗೆ ಕರುಣಂ ಪುಟ್ಟುವಂತೆ [೪]ತಪದಿಂದಿರ್ಪೆಂ[೪] ೧೦೯

೧-೧ ನಿರೋಧದಿಂ ಪೇೞೆಂತಾ (ಕೊ). ೨-೨ ಯಾನೇ (ಕ). ೩-೩ ಮಾಣ್ದು (ಕಾ) ೪-೪ ತಪದೊಳ್‌ನಿಂದಂ (ಬ ಅ ಡ ಕೊ).

ಎನುತುಂ ಗದ್ಗದಿಸುತೆ ಪುಳ
ಕನಿಕಾಯಮನಾನುತಶ್ರುವಂ ಕಳೆಯುತ್ತುಂ
ಘನಹರ್ಷಚಿತ್ತೆಯಾಗಿ
ತ್ತೆ ನಗೇಶ್ವರಪುತ್ರಿ ಶಂಕರನ ಪೆಸರ್ಗೊಂಡಳ್ ೧೧೦

ಎಂದು ವಿರೂಪಾಕ್ಷಂಗೆ ತಪಮಿರ್ದಪೆನೆಂಬ ನುಡಿಯಂ ಕೇಳ್ದು ದಂಷ್ಟ್ರ ಧರಾಮರನಟ್ಟಹಾಸದಿಂದಿಂತೆಂದಂ,

[೧]ಅಕ್ಕಕ್ಕ[೧] ಕಾಮಹರನೊಳ್
ಮುಕ್ಕಣ್ಣನೊಳಖಿಳವೇದ[೨]ಶಾಸ್ತ್ರಕ್ರಮಮಂ[೨]
ಮಿಕ್ಕವನೊಳ್ ಪಿತೃವನದೊಳ್
ಪೊಕ್ಕವನೊಳದೆಂತು ಚಿತ್ತವಿಟ್ಟೆ ಲತಾಂಗೀ ೧೧೧

ಉತ್ಪಲ

ಭೀಕರವಪ್ಪ ಶೂಲಿಯಭಿಲಾಷೆಯೊಳೀ ತಪವಾತನೇಕೆ ನೀ
ನೇಕೆ ಕೃಪಾಣವೇಕೆ ಲತೆಯೇಕೆ ಲಸತ್ಕರಿಯೇಕೆ ರಂಭೆ ತಾ
ನೇಕೆ ಕೃಶಾನುವೇಕೆ ಪೊಸಪೂವಿನ ಮಾಲೆಯದೇಕೆ ಭಾನುಮೇ
ಕಾ ಕುಮುದಂ [೩]ದಲೇಕೆ[೩] ಸಿಡಿಲೇಕೆ ಮರಾಳನದೇಕೆ ಲೋಕದೊಳ್ ೧೧೨

ನೀನಿನಿಯಳ್ ವಿಷಮಾತಂ
ನೀನತಿಮೃದು ಕಠಿನಗುಣಗಣಾಶ್ರಯನಾತಂ
ನೀನಬಲೆಯುಗ್ರನಾತಂ
ನೀನುರುತರಭೀರು ಸರ್ಪಭೂಷಣನಾತಂ ೧೧೩

ಪುಲಿದೊವಲುಡುಗೆಯು ಹಾವಿನ
ನೆಲೆದೊಡಿಗೆಯು ನೊಸಲ ಕಣ್ಣ ಖಟ್ವಾಂಗದ ಪಂ
ದಲೆಗಳ ಮಾಲೆಯು ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ ೧೧೪

ಎಂದು ವಿಪ್ರಂ ನುಡಿದ ಶಿವನಿಂದೆಗೆ ಭವಾನಿ ಮುನಿದು ಕನಲ್ದು ಕಿನಿಸಿ ಕಿಡಿಕಿಡಿವೋಗಿ,

---

೧-೧ ಅಕ್ಕಕ್ಕೆ (ಕಾ ಬೆ ಯು). ೨-೨ ಶಾಸ್ತ್ರಾಗಮಮಂ (ಬ). ೩-೩ ಗಳೇಕೆ (ಕಾ ಬೆ ಯು).

ತಪವಂತದಿರ್ಕೆ ಮಾಡುವ
ಜಪವಿರ್ಕೆ ಮೃಗಾಂಕಮೌಳಿಯುಂ ಭರದಿಂ ಧ್ಯಾ
ನಿಪುದಿರ್ಕೆ ಶಂಭುವಂ ನಿಂ
ದಿಪುದಂ ಕೇಳ್ವೊಂದು ಪಾಪಮಿಂದೆನಗಾಯ್ತೇ ೧೧೫

ಘೋರತಪದಲ್ಲಿ ಕೋಪಿಸ
ಬಾರದು ತಾಂ ತಪದ ಕೇಡು ಪತಿನಿಂದೆಯುಮಂ
ಸೈರಿಸಬಾರದೆನುತ್ತ ವಿ
ಚಾರಮನುಳಿದಗಜೆ ಮನದ ಮುಳಿಸಿಂದಾಗಳ್ ೧೧೬

ಆವ ನಿರೋಧದ [೧]ನಿಂದೆಯು[೧]
ನಾಪರಿಸದೆ ಭಸಿತದಿಂದೆ ವಿಪ್ರನನಿಡೆ [೨]ಪೋ[೨]
ಪೋದುದು ವಟುವೇಷಂ ಶಿವ
[೩]ನಾದೊಡದೇಂ[೩] ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ ೧೧೭

ಆಗಳ್,

ಮುಗಿಲ ತೆಱೆ ಸರಿದ ಶಶಿಯುಂ
ತೊಗೆದ ತಮಂ ತೆಗೆದ ತರುಣತರಣಿಯು ತೆಱದಿಂ
ಪೊಗೆ ತಳ್ಗದಗ್ನಿಯಂತಿರೆ
ಮಿಗೆ ವೇಷಂ ತೊಲಗಿ [೪]ಶಂಭು ತೊಳಗುತ್ತಿರ್ದಂ[೪] ೧೧೮

ಜಡೆಮುಡಿ ಪಂಚಮುಖಂ ನೆಗೆ
ದುಡುಪತಿಕಳೆ ದಶಭುಜಂ ತ್ರಿಣೇತ್ರಂ ಗಾತ್ರಂ
[೫]ಬಿಡಿದ ನವಭೂತಿ[೫] ಪುಲಿದೊವ
ಲುಡಿಗೆಗಳಿಂ ಶಂಕರಂ ಕರಂ ಮೆಱೆದಿರ್ದಂ ೧೧೯

ಆ ಸಮಯದೊಳ್,

ಸರಿದುದು [೬]ಪುಸಿ[೬]ವೇಷದ ತೆಱೆ
ಸುರಿದುದು ಕೆಯ್ವಾರ ತೆಱದೆ ಪೂವಳೆ ಸರಿಸಂ
ಬರಿದುದು ಜೀರಿಗೆಬೆಲ್ಲದ
ಪರಿಯಿಂ ಮುಳಿದಿಟ್ಟ ಭಸಿತಮದೆ ಮದುವೆಯುವೋಲ್ ೧೨೦

೧-೧ ಚಿಂತೆಯ (ಅ). ೨-೨ ತಾಂ (ಕಾ ಬೆ ಯ). ೩-೩ ನಾದನದೇಂ (ಕೊ). ೪-೪ ತೊಳಗುತ್ತಿರ್ದಂ ರುದ್ರಂ (ಕಾ ಬೆ). ೫-೫ ಬಿಡದೆಸೆವ ಭೂತಿ (ಕಾ ಬೆ ಯ). ೬-೬ ಪರಿ (ಕಾ).

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರಂ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೨೧

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕ-ರಂದಮಧುಕರಾಯಮಾನಸತ್ಕವೀಶ್ವರ ಹಂಪೆಯ ಹರಿಹರದೇವವಿರಚಿತಮಪ್ಪ

ಶ್ರೀ ಗಿರಿಜಾಕಲ್ಯಾಣಮಹಾಪ್ರಬಂಧದೊಳ್

ಪಾರ್ವತೀತಪೋವರ್ಣನಂ ವಿರೂಪಾಕ್ಷಪ್ರತ್ಯಕ್ಷೀಕರಣವರ್ಣನಂ ನವಮಾಶ್ವಾಸಂ

ದಶಮಾಶ್ವಾಸಂ

ಪಾರ್ವತೀಪರಮೇಶ್ವರವಿವಾಹವರ್ಣನಂ

ಶ್ರೀಗಿರಿಜಾವಲ್ಲಭನಖಿ
ಳಾಗಮದುರ್ಲಭನಪಾರಸುಲಭಂ ಕಾರು
ಣ್ಯಾಗಾರಂ ಭಕ್ತಿಯನೆಮ
ಗೀಗೆ ಸದಾವರದ ಹಂಪೆಯ ವಿರೂಪಾಕ್ಷಂ ೧

ಆಗಳ್ ಕಂಡಗಸುತೆ ಬೆಱ
ಗಾಗುತೆ [೧]ಸರಿವರಿಸಿಕೊಳ್ಳುತೆ[೧] ವಲ್ಕಲವಸನಾ
ಭೋಗಮನತಿಲಜ್ಜಿತೆ ತಲೆ
ವಾಗಿದಳನುರಾಗವೇಱೆ ಪುಳಕಿಸುತಿರ್ದಳ್ ೨

ಅವಳೋಕನದಿಂ ಸೆಳೆದಳ್
ಶಿವನಂ ಮನದಿಂದ [೨]ತೆಗೆದಳಪ್ಪಿದಳತ್ಯು[೨]
ತ್ಸವದಿಂ [೩]ಚಿತ್ತದೊಳ್ಳಸುತೆ[೩]
ತವಕಂ ಮಿಗೆ ಚುಂಬಿಸಿದಳಹಂಕಾರದೊಳಂ ೩

ಆ ಸಮಯದೊಳ್,

---

೧ ಮನದೊಳಗೆ ನಾಣ್ಚಿ (ಮ ಬ ಅ ದಾ ಳ) ೨ ತೆಗೆದು ಬಿಗಿಯಪ್ಪಿದಳು (ಕಾ ಬೆ ಗೊ ಗ) ೩ ಚಿತ್ತದೊಳಗಸುಕೆ (ಕಾ ಗೊ ಗ).

ಚಂಪಕ

ಉಡುಪತಿಬಿಂಬಮಂ ನಗುವ ನಿರ್ಮಳವಕ್ತ್ರಮಂನಾಸೆ ಮಿಕ್ಕು ಧೀಂ
ಕಿಡುವ ಕಟಾಕ್ಷಮಾಲೆಗಳನುನ್ನತಪೀನಪಯೋಧರಂಗಳಂ
ಮೃಡನೊಸೆದೀಕ್ಷಿಸುತ್ತೆ [1]ನಿಲಲಾಱದರ್ಪಣೆಯ[1] ಪುಣ್ಯಹಸ್ತಮಂ
ಪಿಡಿದನಶೇಷದೇವಕುಳಮೌಳಿವಿರಾಜಿತಪಾದಪಂಕಜಂ ೪

ಅಂತು ಕೆಯ್ಯಂ ಪಿಡಿದು,

ಚಂಪಕ

ಗಿರಿಸುತೆಯಳ್ಕಱಿಂ ನಡೆಯು ತಾರಗಿರೀಂದ್ರನಿವಾಸದಲ್ಲಿಗ
ತ್ಯುರುತರಲೀಲೆಯಿಂದಮೆನೆ ದೇವ ಗಿರೀಶ್ವರನಲ್ಲಿಯೆಂನ್ನ ನಾ
ದರದೊಳಗೆ ಬೇಡಿಯಮೂರ್ಜಿತವಿವಾಹಮದಚ್ಚರಿಯಪ್ಪ ಮಾಳ್ಕೆಯಂ
ಕರುಣಿಪುದೆಂದುದಂ ಸಲಿಸವೇಳ್ಪುದು ಬೇಳ್ಪನಿದಂ ಸದಾಶಿವಾ ೫

ಎಂದಗಜೆ ನುಡಿಯೆ ಮಹಿಮಾ
ವೃಂದನೊಡಂಬಡುತೆ ಸುಖದೊಳರ್ಪವಸರದೊಳ್
ಬಂದು ರತಿ ಮುಕುಳಿತಾನನೆ
ನಿಂದುಮ್ಮಳದಿಂದೆ ಮುಂದೆ ಮೆಯ್ಯಿಕ್ಕಿರ್ದಳ್ ೬

ರತಿ ಮೆಯ್ಯಿಕ್ಕಿರ್ದೊಡೆ ಪಾ
ರ್ವತಿ ಬಿನ್ನಯ್ಸಿದಳಧೀಶ ಕೇಳೀ ಲಲನಾ
ಪತಿಯಪ್ಪ ಕಾಮನಂ ಪಶು
ಪತಿ ನಿಮ್ಮಿಂ ಪಡೆದುಕೊಡುವೆನೆಂದಾಂ ನುಡಿದೆಂ ೭

ಎನೆ ಕೇಳ್ದು ಶಂಕರಂ ಗಿರಿ
ತನಯಾಮಧುರಾಸ್ಯಮಂ ನಿರೀಕ್ಷಿಸಿ ನಗುತುಂ
ನೆನೆದಾಗಳ್ [2]ಕಾಮನನಂ
ಗನಾಗಿ ಕುಡುತಿರ್ಕೆ[2] ರತಿಗೆ ಸುಖಸಂಪದಮಂ ೮

---

೧ ನಿಲಲಾಱದೆ ಕನ್ನೆಯ (ಡ). ೨–೨ ಕಾಮನನಿ। ತ್ರನಂಗನಂ ಮಾಡಿ (ಮ ಬ ಡಾ ಕ).

ಎಂದು ಪಾರ್ವತಿಯೊಡನೆ ನುಡಿಯುತ್ತುಂ ರತಿಗೆ ಕಾಮನಂ ಸಂಕಲ್ಪಜನ್ಮನಂ ಮಾಡಿ ಕೊಟ್ಟು ಗಿರಿಜೆಯುಂ ಗಿರಿರಾಜನಲ್ಲಿಗೆ ಪೋಗವೇಳ್ದು ದರ್ಪಕವಿಪಿನದಾವಾನಳಂ ಗಜಾಸುರ ಕುಂಭನಿರ್ಭಿನ್ನ[೧]ಸಿಂಹಂ[೧] ಜಳಂಧರಕುಮುದನಿಲಯಾರ್ಕರೂಪಂ [೨]ಲಾಲಾಸುರಾಭ್ರವಿಲಯಾನಿಲಂ[೨] ಕೀನಾಶವಿನಾಶಕರಂ ತ್ರಿಪುರಭಂಜನಂ ಚತುರ್ದಶಭುವನಚಕ್ರವರ್ತಿ ಸರ್ವಬ್ರಹ್ಮಾಂಡಸಾರ್ವಭೌಮನಾಭೀಳಭಾಳಾಂಬಕಂ ಶೂಲಧರಂ ಕೈಲಾಸಕ್ಕೆ ಬಿಜಯಂಗೆಯ್ದುನಿತ್ತಲ್,

ಗಿರಿಸುತೆ ಜಯೆವಿಜಯೆಗಳೊಡ-
ನುರುತರಪುಷ್ಪಕಮನೇಱಿ ಬರುತಿರ್ದಳ್ ಶಂ-
ಕರನ ವರಮೂರ್ತಿಯಂತಃ-
ಕರಣಪ್ರಭೆಯೊಳಗೆ ತೊಡಗಿ ಬೆಳಗೆ ನಿರಂತಂ ೯

ಇಂತು ಶಿವನಂ ನೆನೆಯುತುಂ [೩]ಹಿಮಾಚಳಮಂ[೩] ಕಳೆದು ನಿಜರಾಜಧಾನಿಯೆನಿಸಿದೋಷಧಿಪ್ರಸ್ಥಪುರವರಮಂ ಪುಗುತರ್ಪಾಗಳ್ ಪಾರ್ವತೀದೇವಿ ಲಬ್ಧವರಪ್ರಸನ್ನಮುಖಿಯಾಗಿ ತಪಮಂ ಬಿಟ್ಟು ಬರುತಿರ್ದಪಳೆಂಬ ಸಂತೋಷವಾರ್ತೆಯಂ ಕರ್ಣಪರಂಪರೆಯಿಂ ಗಿರಿರಾಜಂ ಕೇಳ್ದು ಸಂತಸಮಂ ತಾಳ್ದು,

ಪುಳಕಂ ಮುನ್ನೇಳುತ್ತಿರೆ
ಬಳಕಂ ತಾನೆಳ್ದು ಸಕಳಪರಿಜನಸಹಿತಂ
ಕಳಗೀತವಾದ್ಯನೃತ್ಯಂ-
ಗಳ ಮಂಗಳರವದ ನಡುವೆ ಗಿರಿಪತಿ [೪]ಬರುತುಂ[೪] ೧೦

ಫಳತತಿಗಳ್ [೫]ತುಱುಗಿದ[೫] ಗುಡಿ-
ಗಳ ಸೀಗುರಿಚಾಮರಂಗಳೊಟ್ಟಜೆಗಳ ಮಂ-
ಗಳಕಳಶಂಗಳ ಕನ್ನಡಿ-
ಗಳ ಲಲನೆಯ[೬]ರೊಳಗೆ[೬] ನಡೆದನಗಕುಲರಾಜಂ ೧೧

ತರತರದೆ ನಡೆವ ಹಸ್ತ್ಯ-
ಶ್ವರಥಪದಾತಿಗಳ ಸಂದಣಿಗಳಂ ನೋಡು-
ತ್ತುರಳುತ್ತ[೭]ಬರ್ಪತೆ ಕೊಬರ್ಪ-
ತ್ತುರವಣಿಸುತೆ ನಡೆದು ಬಂದನಗಕುಲರಾಜಂ[೭] ೧೨

---

೧ ಪಂಚಾನನಂ (ಅ.); ಪಂಚಾಸ್ಯಂ (ಗೊ). ೨-೨ ಲಾಲಾಸುರಾರಣ್ಯದಾವಾನಳಂ (ದ). ೩ ಹೇಮಕೂಟಾಚಳಮಂ (ಅ). ೪ ಬಂದಂ (ಅ). ೫ ತೀವಿದ (ಅ). ೬ ರೊಡನೆ (ಬ ಯ). ೭-೭ ತ್ತುಣ್ಯ | ತ್ತುರವಣಿಸುತೆ ನಡೆದನಗಕುಲಾಧಿಪನೊಲವಿಂ (ಕಾ ಬೆ ಬ ಸೆ).

ಅಂತು ನಡೆದು ಬಂದು,

ಮತ್ತೇಭ

ಇದಿರ್ಗೊಂಡಂ ಗಿರರಾಜನೂರ್ಜಿತತಪೋವಿಸ್ತಾರೆಯಂ ಧೀರೆಯಂ
ಸದಲಂಕಾರವನಾಂತ ಪಿಂಗಳಜಟಾಸಂಪನ್ನೆಯಂ ಚೆನ್ನೆಯಂ
ಮುದದಿಂ ವಲ್ಕಲವಸ್ತ್ರವಿಸ್ತರಿತಶೋಭಾಗಾತ್ರೆಯಂ ಸ್ತೋತ್ರೆಯಂ
ಪದೆದಾಹಾ ಗಿರಿಜಾತೆಯಂ ಸಕಳಕಾಂತಿಸ್ತೋಮೆಯಂ ರಾಮೆಯಂ ೧೩

ಅಂತಿದಿರ್ಗೊಂಡು,

ಮತ್ತೇಭ

ಭರದಿಂದಂ ನಡೆತಂದು ರಾಜಗೃಹಮಂ [1]ಸಂತೋಷದಿಂ[1] ಪೊಕ್ಕು ಭಾ-
ಸ್ಕರಕೋಟಿಪ್ರಭೆಯಂ ಸಭಾಸದನದೊಳ್ ಬೀಱುತ್ತುಮಿರ್ಪುದ್ಭವಿ-
ಷ್ಪರಮಂ ತುಷ್ಟಿಯನೇಱಿ ಶೈಳಪತಿಯುಂ [2]ಶರ್ವಾಣಿ[2]ಯುಂ ಸ್ನೇಹದಿಂ-
ದಿರೆ ಮೇನಾವಧು ಬಂದಳೀಕ್ಷಿಸಿದ[3]ಳೀಷದ್[3]ಗಾತ್ರೆಯಂ ಪುತ್ರಿಯಂ ೧೪

ಅಂತು ಬಂದು ಕಟ್ಟಳ್ಕಱಿಂ ಮುಟ್ಟಿ ನೋಡಿ,

ಉತ್ಪಲ

ತಾಯೆ ತಪೋನಿರೋಧದೊಳೆ ಮೆಯ್ ಬಡವಾದುದು ಲೋಚನ[4]ತ್ರಯ[4]
ಚ್ಛಾಯೆ ಬಳಲ್ದುದಾನನಸರೋಜಮುಣಂ ಕಳೆಗುಂದಿತುಜ್ಜ್ವಳ-
ಪ್ರಾಯಕುಚದ್ವಯಂ ಕೊರಗಿದತ್ತು ಕಚಂ ಜಡೆಗಟ್ಟಿತಿಂತದ-
ನ್ಯಾಯಮಿದೇಕೆ ಪೋದೆ ಸುತೆ ಎಂತಳವಟ್ಟುದರಣ್ಯವಿಭ್ರಮಂ ೧೫

ಎಂದು ಮೇನಾದೇವಿ ಪಾರ್ವತಿಯಂ ನೋಡಿ ಕೋಡಿ ಬಾಡಿ ಬಳಲ್ದು ಕನಲ್ದು ಕಳೆಗುಂದಿ ನುಡಿಯುತ್ತಿರ್ಪಾಗಳ್,

ಗಿರಿಪತಿಯನು[5]ಮತಿಯಿಂ[5] ಸೌಂ-
ದರಿಯರ್ ನಡೆತಂದು ಪಾರ್ವತಿಯ ಜಡೆಗಳನೊ-
ಪ್ಪಿರೆ ಬಿಡಿಸಿ ಕಚಭರಮನತಿ-
ಭರದಿಂ ತಿರ್ದುತ್ತುಮಿರ್ದರನ್ನೆಗಮಿತ್ತಲ್ ೧೬

---

೧ ಸಲ್ಲೀಲೆಯಿಂ (ಅ). ೨ ರುದ್ರಾಣಿ (ಮ ಯ ಕ). ೩ ಳಾ ಸದ್ (ಕೊ). ೪ ದ್ವಯ (ಶಾ ಬೆ). ೫ ಮತದಿಂ (ಯ ಬೆ).

ಶ್ರೀಕೈಲಾಸದೊಳಿರ್ದ ಪಿ
ನಾಕಿ ವಿವಾಹಾರ್ಥದಿಂದೆ ವರಮೂರ್ತಿಗಳಂ
ಲೋಕೋತ್ತಮರಂ ಪುಣ್ಯ
ಶ್ಲೋಕರನಾ ಸಪ್ತಋಷಿಯರಂ ನೆನೆಯಲೊಡಂ ೧೭

ನೆನೆಯದ ಮುನ್ನಂ ಬಂದರ್
ವಿನುತಾಶೇಷರ್ ಜಟಾಧರರ್ ಭಸಿತಾಂಗರ್
ಘನಮಹಿ[1]ಮಾರುಂಧತಿ[1] ಬಿ
ನ್ನನೆ ಬರೆವರೆ ಸಪ್ತಋಷಿ[2]ಯರ[2]ತಿಮುದದಿಂದಂ ೧೮

ಬಂದಭವಂಗತಿಸುಖಮುಖ
ದಿಂದಂ ಮೆಯ್ಯಿಕ್ಕಿ ಹರ ಬರ್ಣಂಕಿದೆವೆನುತಂ
ಸಂದಣಿಸಿ ಪುಳಕಮೇಳ್ತರೆ
ನಿಂದಿರ್ದ ಶಶಾಂಕಮೌಳಿ [3]ಬೆಸನೇನೆನುತಂ[3] ೧೯

ಇರೆ ಕಂಡು ಕರುಣದಿಂ ಶಂ
ಕರನಾ ಋಷಿಗಳ್ಗೆ ಬೆಸಸಿದಂ ಪೋಪುದು ಭೂ
ಧರನಾಥನಲ್ಲಿಗತ್ಯಾ
ದರಮಂ ಮಾಡುವುದು ಬೇಡುವುದು ಗಿರಿಸುತೆಯಂ ೨೦

ಎಂದೊಡೆ ಹಸಾದಮೆಂದಾ
ನಂದಂ ಮಿಗೆ ಸಪ್ತಋಷಿಗಳನುನಯದಿಂದೆ
ಯ್ತಂದರ್ ಮಂಡಿತಪುಷ್ಪಕ
ವೃಂದಾರೂಢರ್ ನಗೇಶಪುರಮಂ ಪೊಕ್ಕರ್ ೨೧

ಆ ಸಮಯದೊಳ್,

ಮನದೊಳ್ ಪರಮೋತ್ಸಾಹಂ
ಜನಿಯಿಸಿ ಗಿರಿರಾಜನೆಸೆವ ಋಷಿಗಳನಿದಿರ್ಗೊಂ
ಡನುನಯದಿಂ ತಂದುಚ್ಚಾ
ಸನದೊಳ್ ಕುಳ್ಳಿರಿಸಿ ವಿನಯವಿನಮಿತನಾದಂ ೨೨

---

೧. ಮರರುಂಧತಿ (ಕೊ) ೨. ಗಳತಿ (ಕೊ). ೩. ಬೆಸಸೆನೆ ಮಾತ್ರಂ (ಕಾ).

ಅಂತು ವಿನಯದಿಂದೆಱಗಿ,

ಸುರಲೋಕದಲ್ಲಿ ಸುಖದಿಂ
ದಿರುತುಂ ಬರವೆಂತು ನಿಮಗೆ ದೊರೆಕೊಂಡುದಿದೆ
ಮ್ಮಿರುತರಭಾಗ್ಯಮೆನುತ್ತುಂ
ಗಿರಿರಾಜಂ ಸಪ್ತಋಷಿಗಳಂ ಕೇಳಲೊಡಂ ೨೩

ವರಮುನಿಗಳ್ ಮನದೊಂದಾ
ದರದಿಂ ನುಡಿದರ್ ಶಿವಂ ಶಶಾಂಕಧರಂ ಶಂ
ಕರಸಭವಂ ನಿರ್ಮಾಯಂ
[೧]ಗಿರಿಜೆಯು ಬೇಡುವೊಡೆ[೧] ತಿಳುಪಿ ಕಳುಪಿದನೆಮ್ಮಂ ೨೪

ಆತಂಗೆ ಚಂದ್ರಮೌಳಿಗ
ಜಾತಂಗೆ ನಿರಾಮಯಂಗೆ ನಿತ್ಯಂಗೆ ನತ
ವ್ರಾತಂಗೆ [೨]ಬೇಡೆ[೨] ಬಂದೆವು
ನೂತನಭುವನೈಕ [೩]ಭಾಗ್ಯವತಿ[೩] ಪಾರ್ವತಿಯಂ ೨೫

ಚಂದ್ರಧರಂಗೆ ನತೋತ್ಪಲ
[೪]ಚಂದ್ರಂಗಂ[೪] ಗಣಸಮೂಹನಯನ[೫]ಚಕೋರ[೫]
ಚಂದ್ರಂಗಂ ಮುದದಿಂದಂ
ಚಂದ್ರಾನನೆ ಶಿವೆಯನೊಲ್ದು ಕೊಡು ಗಿರಿರಾಜಾ ೨೬

ಎಂದು ಸಪ್ತಋಷಿಗಳ್ ನುಡಿದಾಪ್ತವಚನಂ ಕರ್ಣರಸಾಯನವಾಗೆ ಗಿರಿರಾಜಂ ಕೇಳ್ದು ಬಾಳ್ದು ಸಂದಣಿಸಿದ ಪುಳಕದಿಂ ದಳವೇಱಿ ಮನಮಲರ್ದು ಬುದ್ಧಿ ಪೆರ್ಚಿಯಹಂಕಾರವಿರ್ಮಡಿಸಿ ಚಿತ್ತಂ ಚಿಗುರ್ತು ಅಳವಿಗಳೆದ ಸಂತಸಮಂ ಸಂತಯ್ಸಲಾಱದೆ ಹೆಚ್ಚಿ ಹಿಗ್ಗಿ ನಚ್ಚಿ ನುಡಿದಂ ಮೇಘಾಗಮನಂ ಮಯೂರಂಗಸಹ್ಯಮೆ, ವಸಂತನ ಬರವು ಹೊಸಬನಕ್ಕೆ ಪೊಲ್ಲದೆ, ಚಂದ್ರೋದಯಂ ಚಕೋರಿಗುಪದ್ರಮೆ, ಅರ್ಕನೇಳ್ಗೆ ಚಕ್ರವಾಕಮಿಥುನಕ್ಕೆ ವಕ್ರಮೆ, ಕಾರ ತೋರವನಿ ಜಾದಗೆಗೆ ಭಾರಮೆ, ಶಿವನ ಕರುಣಮೆನಗಿದಿರ್ವರೆ ವಿಚಾರಮೆ, ಬರ್ದುಂಕಿದೆಂ ಬರ್ದುಂಕಿದೆನೆನ್ನ ಭಾಗ್ಯದ ಬೆಳೆ ತಳಿರ್ತುದು ಎನ್ನ ಪುಣ್ಯಲತೆ ಪೂತುದೆನ್ನ ಕುಲಕಲ್ಪವೃಕ್ಷಂ ಫಲಿತವಾದುದಲ್ಲದೆಯುಂ, ರತ್ನಕ್ಕೆ ಕಾಂತಿಯೆರವೆ, ಚಂದ್ರಂಗೆ ಬೆಳ್ದಿಂಗಳುಪ

೧-೧ ಗಿರಿಜೆಗೆ ಕಳಿದಳುಪಿ (ಬ ಮ); ಗಿರಿಜೆಗೆ ತಿಳಿಪಿದೊಲು (ಅ) ೨-೨ ಬೇಡಿ (ಮ ಬ ಯ) ೩-೩ ಮಾತೆಯಂ (ಕೊ). ೪-೪ ಚಂದ್ರಂಗಾ (ಯ). ೫-೫ ಚಕೋರಾ (ಸ); ಚಕೋರಸು (ಕಾ ಬೆ)

ಚಾರಮೆ, ತರಣಿಗೆ ಕಿರಣಂಗಳ್ ಸಾಧಾರಣಮೆ, ಕುಸುಮಕ್ಕೆ ಪರಿಮಳಂ ಪಡಿಸಣಮೆ, ಅಮೃತಕ್ಕೆ ಸ್ವಾದು ಸಂಕಲ್ಪಮೆ, ಶರ್ವಂಗೆ ಪಾರ್ವತಿಯೆರವೆ, ಪನ್ನಗಾಭರಣನೆನ್ನಂ ಬೇಡಲ್ವೇಳ್ಪುದೆ [೧]ಸುರುಚಿಯಿಂ ಸಾಂಗೀಕಾರದಿಂ[೧] ಕಾಮದಿಂ ಪ್ರೇಮದಿಂ ನಿಷ್ಠೆಯಿಂ ನೆಟ್ಟನೆ ಕೊಟ್ಟೆಂ ಕೊಟ್ಟೆನೆರಡಿಲ್ಲೆಂದು ಸತ್ಯವಚನಮಂ ಸಂತೋಷದಿಂ ನುಡಿದು ಸಪ್ತಋಷಿಗಳ ಚರಣಕ್ಕೆ ಮತ್ತೆ ಮತ್ತೆಱಗುತ್ತೆ ಅವರಂ ಹರಿಸದಿಂ ಕಳುಹಿ ಗಿರಿರಾಜಂ [೨]ಮಹೋತ್ಸಾಹದಿಂ[೨] ಮಹಾವಿವಾಹಮಂಟಪಾದಿ ಸಮಸ್ತವಸ್ತುಗಳಂ ವಿಸ್ತರಿಸುತಿರ್ದನದೆಂತೆಂದೊಡೆ,

ಚಂಪಕ

ಗಿರಿಪತಿ ಚಾರರಂ ಕಳುಪಿ ನಿರ್ಜರಲೋಕದ ವಿಶ್ವಕರ್ಮನಂ
ಬರಿಸಿ ನಯೋಕ್ತಿಯಿಂ ನುಡಿದು ಮನ್ನಿಸಿ ಬೇಳ್ಪುದನಿತ್ತು ಚಂದ್ರಶೇ
ಖರನ ಮದೀಯಪುತ್ರಿಯ ವಿವಾಹ[೩]ಶುಭೋಚಿತ[೩]ಮಂಟಪಾದಿ ಭಾ
ಸುರವರಚಿತ್ರಪತ್ರಕುಳಮಂ ನೆಱೆ ನಿರ್ಮಿಪು[೪]ದಿಂದೆ[೪] ಬೇಗದಿಂ ೨೭

ಎನೆ ನಲಿದು ವಿಶ್ವಕರ್ಮಂ
ನೆನೆಯದ ಮುನ್ನಂ ಸಮುದ್ರಮುದ್ರಿತವಿಶ್ವಾ
ವನಿಪರಿಗತವಿಭವಾಸ್ಪದ
ಘನಮಂಟಪಮೆಸೆದು ಮುಂದೆ ತೋಱಿತ್ತಾಗಳ್ ೨೮

ಅದೆಂತೆಂದೊಡೆ— ಮಹಾಮಂಟಪಂ ನಿರ್ಮಳಚಂದ್ರಕಾಂತಶಿಲಾತಳದೊಳ್ ಮಾರ್ಪೊಳೆದು ಶಿವನ ವಿವಾಹಕ್ಕೆ ನಾಗಲೋಕದಿಂ ನಾಗರ್ಕಳ್ ಕಳುಪಿದ ಅಭಿನವ ಮಂಟಪಮಂ ಪಡೆದಂತಿರ್ದುದು ಮತ್ತಮಲ್ಲದೆಯುಂ ಉದಯಿಸುವ ತರುಣ ತರಣಿಯ ಕಿರಣಸಹಸ್ರಂ ಗಗನಮಂ ಹೊತ್ತೆತ್ತುವಂತೆ ಜಗದಗಲಕ್ಕೆ [೫]ಸಾಲ್ದೆಗೆದು[೫] ನೀಳ್ದು ನಿಱಿಸಿದ ಮಾಣಿಕ್ಯಸ್ತಂಭಕೋಟಿಗಳೆಳಗೆಂಪುಗಳೊಪ್ಪುವ ಚಪ್ಪರದ ಮೇಲ್ಕಟ್ಟಂ ಹೊತ್ತೆತ್ತುತಿರ್ದುವು ಮತ್ತಮಲ್ಲಲ್ಲಿ ಕಟ್ಟಿದ ಪುಲ್ಲೆಯ ಪಟ್ಟೆಗಳ ಮೇಲೆ ಬಳಸಿದ ಮೇಘವಣ್ಣಿಗೆಯ ಚೌಕದ ವಿಳಾಸದ ಕಥಾಯಿಯ ಸುಚ್ಛವಿಯನೀವ ಪಚ್ಚೆಯ ಪಟ್ಟೆಗಳ [೬]ಚೂಳಿಕೆಯ[೬] ಕಾಳಕೆಯ ನುಣ್ಚೆಳಗನೀವ ಪೊಂಬಟ್ಟೆಯ ಬಳ್ಳಿವೆಳಗಂ ಕಱೆವ [೭]ಬೆಳ್ಳುಂಬಟ್ಟೆಯ[೭] ನೀಲದ ನಿರ್ಮಲೋದಕದ ಪಚ್ಚೆಯ ಪಾವಸೆಯ ಪುಷ್ಯರಾಗದ ಕರ್ಣಿಕೆಯ ಪದ್ಮರಾಗದೆಸಳ್ಗಳ ಪಱಿಮೆಗಳೆಱಗ

೧–೧ ಸುರೂಚಿಯಿಂ ಸಾಂಗಿಕದಿಂ (ಮ ಬ); ಸುರುಚಿಯಿಂ ಸಾಂಗೀಕದಿಂ (ಕೊ). ೨–೨ ಪರಮೋತ್ಸಾಹದಿಂ (ಕೊ). ೩–೩ ಸುಖೋಚಿತ (ದೆ ಬ ಯ ಗೊ). ೪–೪ ದೆಂದು (ಶಾ ಬೆ ಯ). ೫–೫ ಸಾಲ್ನೆಗೆದು (ಮ). ೬–೬ ಚೂರ್ಣಿಕೆಯ (ಶಾ ಕೊ). ೭–೭ ಬೆಳ್ಪಟ್ಟೆಯ (ಶಾ ಬೆ ಬ ಯ).

ಲವ್ವಳಿಸುವ ಜಳಜವೀಥಿಯು ಕೀಲಿಸಿದ ಮುತ್ತಿನ ಸೂಸಕದ ಕೆಯ್ಗೊಳಿಸಿದ ಗೋಮೇಧಿಕಸ್ತೋಮದ ಪವಳದ ಪಙ್ಕ್ತಿಯು ಪಜ್ಜಳಪ ವಜ್ರದ ಕೂಡಿದ ವೈಡೂರ್ಯದ ರಂಜಿಸುವ ಲತಾವಳಿಯು ಪಸರಿಸಿದ ಪತ್ರಾವಳಿಯು ಪೊಣ್ಮಿದ ಪುಷ್ಪಾವಳಿಯು ಹವಣಿಸಿದ ಹಂಸಾವಳಿಯು ಸಕಲಸೌಂದರ್ಯಮನೊಳಕೊಂಡ ಮೇಲ್ಕಟ್ಟಿನ ಬೆರಕೆವೆಳಗು ಮಂಟಪದೊಳಗಂ ಪೊಱಗಂ ತೆಕ್ಕನೆ ತೀವೆ ಬಡದೆ ಸುಳಿವ ಉತ್ಸಾಹಪುರುಷರಿಂ [೧]ನಡೆ[೧] ಪಾಡುವ ಲಲನಾವಿಭ್ರಮದಿಂ ಪ್ರಭಾಜಳಧಿ ತೆರೆಮಸಗಿದಂತಿರ್ದುದು ಮತ್ತಂ ಮುಗಿಲನಳ್ಳಿಱಿವ ತೋರಣಸ್ತಂಭಂಗಳೊಳ್ ತೆತ್ತಿಸಿದ ಜಂತ್ರದ ಹಂಸಕೀರಮಯೂರಪಾರಾವತವಾರಣಂಗಳಿಂ ನವರತ್ನರಂಜಿತವಾಗಿ ರವಿಮಂಡಲಮಂ ಮುಂಡಾಡುವ ಸುವರ್ಣಕಳಶದರ್ಪಣಾಳಿಗಳಿಂ ರಯ್ಯಂಬಡೆದು ಸಕಳಜಗಕ್ಕೆ ತನ್ನ ಕಾಂತಿಯೆ ಕಣ್ದೆಱವಿಯೆಂಬಂತಿರ್ದ ಮಹಾತೋರಣದೊಳಮೆಯ್ಯೊಳ್ ನೆರೆದು ಕುಳ್ಳಿರ್ದ ಸೂರ್ಯವಂಶದ[೨]ಸುಕುಮಾರರಿಂ[೨] ಸೋಮವಂಶದ ಭೂಮಿಪರಿಂ ರಾಜಿಸುವ ರಾಜಪುತ್ರರಿಂ ಮಂಡಳಿಕರ ತಂಡದಿಂ ಸಾಮಂತರ ಸ್ತೋಮದಿಂ [೩]ಶಿಷ್ಯರ[೩] ಮಂತಣದಿಂ ಸೇವ್ಯರ ತಿಂತಿಣಿಯಿಂ ಮುತ್ತೈಯ್ದೆಯರೊತ್ತೊತ್ತೆಯಿಂ ಸುವಾಸಿನಿಯರ ಸಂದಣಿಯಿಂ ಸಕಳಾಗಮಕೋವಿದರಿಂ ಸರ್ವಶಾಸ್ತ್ರಪ್ರವೀಣರಿಂ ಸಹಸ್ರವೇದಿಗಳಿಂ ಗಳಿಗೆವಟ್ಟಲಂ [೪]ಪರಿವೇಷ್ಟಿಸಿರ್ದ[೪] ನಕ್ಷತ್ರಪಾಠಕರಿಂ ಏಕಾದಶಕ್ಕೆ ಬಂದ ನವಗ್ರಹಂಗಳಿಂ ತೆಕ್ಕನೆ ತೀವಿರ್ದ ಮಹಾಮಂಟಪಮತಿವಿಸ್ತಾರಮನತಿ-ಗಂಭೀರತೆಯುನತಿಸೌಖ್ಯಮನತ್ಯಾಶ್ಚರ್ಯಮನುರುತರಸಂಪದಮನತಿಸೌಂದರ್ಯ-ಮನತಿಪ್ರಸನ್ನತೆಯುನೊಳಕೊಂಡು ವರನ ಬರವಂ ಬಯಸುತಿರ್ದುದಾ ಪ್ರಸ್ತಾವ-ದೊಳ್,

ಒಳಗೆ ಸುವಾಸಿನಿಯರ್ ಗಿರಿ-
ಕುಳರಾಜತನೂಜೆಗೊಪ್ಪೆ ಸಿಂಗರಮಂ ಕೆಯ್‌-
ಕೊಳಿಸುತ್ತಿರ್ದರ್ ವರಶಶಿ
ಕಳೆಗೆ ಸುಧಾಕಿರಣಜಾಲಮಂ ತುಡಿಸುವವೋಲ್ ೨೯

ಅದೆಂತೆಂದೊಡೆ,

ಭದ್ರಾನನೆಯರ್ ನವಕುಸು
ಮದ್ರವಯುತಜಲದೆ ಮಜ್ಜನಕ್ಕೆಱೆಯುತೆ ಕ
ಲ್ಪದ್ರುಮಶಾಖಾನ್ವಿತೆಗೆ ಹ
ರಿದ್ರಾಪರಿಮಳಮನಂಗದೊಳ್ ಸಮನಿಸಿದರ್ ೩೦

೧-೧ ನಾಡೆ (ದಾ) ೨-೨ ಮಕುಟವರ್ಧನರಿಂ (ಅ.ಕೊ.) ೩-೩ ಶಿಷ್ಟರ (ಅ). ೪-೪ ಪರೀಕ್ಷಿಸುತ್ತಿರ್ದ (ಕಾ. ಬಿ. ಯು.)

ನವಲತೆಯುಂ ಕೌಮುದಿಯಿಂ
ದವೆ ಬಾಸಣಿಪಂತೆ ಕೂಡೆ ಧವಳದ್ಯುತಿಯಂ
ತವೆ ಪಸರಿಪ ದಿವ್ಯದುಕೂ
ಲವನುಡಿಸಿದರಗತನೂಜೆಗಂಗನೆಯರ್ಕಳ್ ೩೧

ಸರಸಿಜದೆಸಳೊಳ್ ತರುಣಿಯ
ತರುಣಾರುಣಕಿರಣ[೧]ವಲಯವುಮಂ[೧] ಕೆಯ್ಕೊಳಪಂ
ತಿರೆ ಚಕ್ರವಾಕಕುಜೆಯರ್
ಗಿರಿಜೆಗೆ ನವರತ್ನಪಾದಮುದ್ರಿಕೆಯಿತ್ತರ್ ೩೨

ವಾರಿರುಹನಾಳಮಂ ಕ್ರೇಂ
ಕಾರರವಂ ಸಹಿತಮಂಜೆ ಮುತ್ತಿದುವೆನೆ ಮಂ
ಜೀರವನಳವಡಿಸಿದರಂ
ಭೋರುಹನೇತ್ರೆಗೆ ಭವಾನಿಗಾ [೨]ಭಾಮಿನಿ[೨]ಯರ್ ೩೩

ಬಾಹುಲತಾಪಲ್ಲವಸಂ
ದೋಹದೊಳಗೆ ಕುಸುಮಮಂ ತೊಡರ್ಚುವ ತೆಱದಿಂ
ದಾಹಾನಿಜಕರಶಾಖಾ
ವ್ಯೂಹಕ್ಕತಿಭದ್ರಮುದ್ರಿಕೆ[೩]ಗಳಂ ತೊಟ್ಟರ್[೩] ೩೪

ಪುರಹರನ ರಾಜಕಟಕಂ
ಗಿರಿಜೆಯ ಕೆಯ್ವತ್ತಿತೆಂಬುದಂ ಸೂಚಿಪವೋಲ್
ವರಹಸ್ತದಲ್ಲಿ ರತ್ನೋ
ತ್ಕರವಿಳಸಿತಕಟಕಯುಗಳಮಂ ರಂಜಿಸಿದರ್ ೩೫

ಒದುವಿದ ನವ್ಯಲತಾಮು
ಧ್ಯದ ಕುಸುಮಾಳಿಯೊಳೆ ಮೊರೆವ ಮರಿದುಂಬಿಗಳಂ
ಮುದದಿಂ ಕೀಲಿಪವೋಲ್ ನೀ
ಲದ ರವೆಯುದ ಬಾಹುಪೂರಕಂಗಳನಿತ್ತರ್ ೩೬

೧-೧ ಜಾಲವುಮಂ (ದಾ) ೨-೨ ಮಾನಿನಿ (ಕೊ). ೩-೩ ಗಳ ತೊಡಸಿದರ್ (ಅ).

ಸುತ್ತ್ರದೆ ನೆಲೆಗೊಂಡಂ ಪರಿ
ವೃತ್ತೋನ್ನತಚಂದ್ರನಗಜೆಯಾಸ್ಯದೊಳೆಂದು
ನ್ಮತ್ತತೆಯೊಳ್ ತಾರಗೆಗಳ್
ಸುತ್ತಿದುವೆನೆ ತೋರಹಾರವಂ ರಂಜಿಸಿದರ್ ೩೭

ಭಾಳಸ್ಥಳದೊಳ್ ಕಣ್ ಗಡ
ಶೂಳಿಗೆ ಪಾರ್ವತಿಗೆ ಕೊರಲೊಳೊಗೆದುದು ನಯನಂ
ಕೇಳೆಂಬಾಳಾಪಂ ಮಿಗೆ
ಮೇಳಯಿಸಿದರ್ಕೈರದಾಳಿಯುಂ ಬಾಳಕಿಯರ್ ೩೮

ಜಳಜಾನನೆಯರ್ [೧]ವಿನಯೋ[೧]
ಜ್ಜ್ವಳಮುಖಿಯರ್ ಸಖಿಯರೊಲ್ದು ಗಿರಿಜಾನನದೊಳ್
ನಳನಳಪಚ್ಚವುಗುಳ್ನಗೆ
ವೊಳೆತುದೆನಲ್ ಮೆಱೆವ ಮೂಗುತಿಯನೊಸೆದಿತ್ತರ್ ೩೯

ಮೃಗಧರಬಿಂಬಂಗಳವೆರ
ಡಗಲದೆ ಕೊಂಡೆಸೆಯುತಿರ್ದಪುವು ಸರಸಿಜದೊಂ
ದಗಣಿತಕರ್ಕಶವ[೨]ನೆನಲ್
ನಗ[೨]ಪುತ್ರಿಗೆ ನೀಲಮುತ್ತಿನೋಲೆಯನಿತ್ತರ್ ೪೦

ಬಿಂಬಾಧರೆಯರ್ ಬಂದಲ
ರಂಬಂ ಕತ್ತುರಿಯ ಸಾಣೆಯಿಕ್ಕುವ ತೆಱದಿಂ
ದಂಬುಜದಳಸದೃಶಾಂಬಕ
ದಂಬಿಕೆಗಂಜನಮನೆಚ್ಚಿದರ್ ಸಂತಸದಿಂ ೪೧

ಸಸಿಯುಂ ತಳೆದೊಡೆ ಮಕುಟದೊ
ಳಸಮಾಕ್ಷಂ ಗಿರಿಜೆ ಪುರುಡಿಸುತ್ತುಂ ತಳೆದಳ್
ನೊಸಲೊಳ್ ಸಸಿಯುಂ ತಾನೆನೆ
ಭಸಿತದ ತಿಲಕಮನಲಂಕರಿಸಿದರ್ [೩]ಸತಿ[೩]ಯರ್ ೪೨

೧–೧ ವಿಮಲೋ (ಅ) ೨–೨ ವನ । ಲ್ಕಗ (ಕಾ). ೩–೩ ಸಖಿ (ಅ).

ನೀಳಾಭ್ರಮನಂಭಃಕಣ
ಜಾಳದೆ ಬಾಸಣಿಸುವಂತೆ ಶಶಿಮುಖಿಯರ್ ಸ
ಲ್ಲೀಳೆಯೊಳಚಳತನೂಜೆಗೆ
ಬಾಳೆಗೆ ಸೂಸಕಮನಿಕ್ಕಿದರ್ ಮುದದಿಂದಂ ೪೩

ಸುರುಚಿರನೀಲಾಂಬುದದೊಳ್
ಸುರಧನುವಂ ನಿರ್ವಿಪಂದದಿಂ ಪೀನಪಯೋ
ಧರೆಯರ್ ಶೈಳತನೂಜೆಗೆ
ವರರತ್ನದ ದಂಡೆ[1]ದೊಂಡಿಲಂ[1] ಸಯ್ತಿಟ್ಟರ್ ೪೪

ಅಂತುಮಲ್ಲದೆಯುಂ,

ಅಂಬಿಕೆಯ ಸುಧಾವಯವಕ
ದಂಬದ ಜೆಲ್ವಿಂಗೆ ದೃಷ್ಟಿಯಾಗದ ತೆಱದಿಂ
ಬಿಂಬಾಧರೆಯರ್ ತೊಡಸಿದ
ರೆಂಬಂತಿರೆ ಪೆೞ್ದುವರರೆ ಭೂಷಣತತಿಗಳ್ ೪೫

ಇಂತು ನನೆಗಣೆಯುನರ್ಚಿಪಂತೆ ಚಂದ್ರಕಳೆಯುಂ ದಳವೇೞ್ವಂತೆ ಪುಣ್ಯಮಂ ಪುಟವಿಡುವಂತೆ ಶಂಕರನ ಪ್ರೇಮಮಂ ಸೀಮೆಗೊಳಿಸುವಂತೆ ಹರನ ಮನೋರಥಮಂ ಮದವೇೞ್ಪಂತೆ [2]ಪಾರ್ವತಿಗೆ[2] ಸುವಾಸಿನಿಯರ್ ಸಿಂಗರಮಂ ಮಾಡಿ ತರುಣ-ತರಣಿಯ ಕಿರಣಂಗಳ್ಗೆರನ್ನಮಪ್ಪಾರತಿಗಳನೆತ್ತಿಯೆತ್ತಿ ಪಿಂಗದೆ ಮಂಗಳೋನ್ನತಿಯಂ ಕೊಂಡಾಡುತ್ತುಮಿರೆಯಿರೆ ಅತ್ತಲ್ ಸಪ್ತಋಷಿಗಳಿಂ ಸಂತೋಷವಾರ್ತೆಯಂ ಶಂಕರಂ ಕೇಳ್ದು ಹರ್ಷಮಂ ತಾಳ್ದು,

ಇತ್ತಲ್ ಕೈಲಾಸಾದ್ರಿಯೊ
ಳುತ್ತಮಗಣನಾಥರೊಳಗೆ ಪೆೞ್ದಿರ್ದಂ [3]ದೇ
ವೋತ್ತುಂಗಂ[3] ಪುಳಕಿತನಾ
ಗುತ್ತುಂ ಮದುವಣಿಗತನಮನುೞಿ ನಟಿಯಿಸುತುಂ ೪೬

ಆ ಪೊಸಮದವಣಿಗನಪ್ಪ ಪಶುಪತಿಯ ಸರ್ವಾವಯವಂಗಳಂ ಬಣ್ಣಿಸಲಳವಲ್ಲದೊಡಂ ಭಕ್ತಿಯಿಂ ಬಲ್ಲಂತೆ ಬಣ್ಣಿಪೆನದೆಂತೆಂದೊಡೆ

೧-೧ ತೊಂಡಲಂ (ಮ ಬ ಅ). ೨-೨ ಸರ್ವಮಂಗಲೆಯಂ (ದಾ); ಪಾರ್ವತೀದೇವಿಯರ್ಗೆ (ಬೆ ಕೊ). ೩-೩ ದೇ। ವೋತ್ತಮನತಿ (ಡ).

ಜಡೆಗಳೊ ಹೊಸಹೊಸಹವಳದ
ಕುಡಿಗಳೊ ನವಕಾಂತಿಜಳದ ಮಡುಗಳೊ ಜಿಲ್ವಿ
ರ್ಪೆಡೆಗಳೊ ಶಿವಶಿವ ಸುಕೃತದ
ಗುಡಿಗಳೊ ಮಹಿಮೆಗಳ ನಟ್ಟನಡುಗಳೊ ಶಿವನಾ ೪೭

ಭಾಳಂ ಸುರುಚಿರಸುಕೃತವಿ
ಶಾಳಂ ವಿಷವಾಕ್ತ[1]ವಿರಥ[1]ಕಾಳಂ ವಿಮಳ
ಸ್ಥೂಳಂ ಶೃಂಗಾರರಸೊ
ದ್ವೇಳಂ ಕಂದರ್ಪಕುಸುಮಬಾಣಾಭೀಳಂ ೪೮

ಪುರ್ಬುಗಳೋ ಗಣನಿಕರದ
ಗುರ್ಬುಗಳೋ ಹರಿವಿರಿಂಚಿಸುರಪದವಿಗಳೊಂ
ದುರ್ಬುಗಳೋ ಪುಣ್ಯಲತಾ
ಪರ್ಬುಗಳೋ ಮದನವಿಭ್ರಮದ ಕೊರ್ಬುಗಳೋ ೪೯

ಈ ಕಣ್ಗಾ ಕಣ್ಣಾಕ
ಣ್ಗೀ ಕಣ್ಣೆರಡಕ್ಕವೆರಡೆ ಪಡಿ ಮತ್ತಿಲ್ಲೀ
ಲೋಕವ್ಯವಹಾರದ ನುಡಿ
ಯಿಾ ಕಣ್ಗುಪಮಾನಮಿಲ್ಲಮಿನ್ನುಂ ಮುನ್ನುಂ ೫೦

ಘ್ರಾಣಂ ಮಂಜುಳಮುಖಕ
ಲ್ಯಾಣಂ ಜಗದೇಕಜೀವನೆನಿಸುವ ಪವನ
ಪ್ರಾಣಂ ಸರ್ವಾವಯುವ
ತ್ರಾಣಂ ಪರಿಮಳಪರೀಕ್ಷೆಗಂತದು ತಾಣಂ ೫೧

ಕರ್ಣಂಗಳ್ ನವ[2]ಕಿರಣ[2]ವಿ
ಕೀರ್ಣಂಗಳ್ ಶರಣಜನಸುಗೀತಾಮೃತಸಂ
ಪೂರ್ಣಂಗಳ್ ಪಂಚಾಕ್ಷರ
ವರ್ಣಂಗಳ್ ಫಣಿವಿತಾನವಿಸ್ತೀರ್ಣಂಗಳ್ ೫೨

---

೧ ವಿತತಿ (ಬ). ೨ ರತ್ನ (ಬೆ).

ವದನಂ ಕಾರುಣ್ಯಾಮೃತ
ಸದನಂ ಪ್ರಣತಪ್ರತಾನ[೧]ಜನನಾ[೧]ವಿದ್ಯಾ
ಕದನಂ ಮಝುಭಾವುರೆ ಜಿತ
ಮದನಂ ಧವಳಪ್ರಕಾಶಮಂಡಿತರದನಂ ೫೩

ಗ್ರೀವಂ ಘನಗರಳೋನ್ನತ
ಭಾವಂ ವಿಮಳಸ್ವಭಾವಮಾನತಜನಸದ್
ಭಾವಂ ಮಧುರ[೨]ರವ[೨]ಪ್ರ
ಸ್ತಾವಂ [೩]ಶಿವಶಿವ[೩] ಸಮಸ್ತಜನತಾಜೀವಂ ೫೪

ತೋಳ್ಗಳ್ ನೆನೆವರ ಚಿತ್ತದ
ಬಾಳ್ಗಳ್ ವರವೀಯಲೆಂದು ಮಿಗೆ ಮತ್ಪರಿಪಾ
ಸೂಳ್ಗಳ್ ರುದ್ರನ [೪]ನಚ್ಚಿನ[೪]
ಬಾಳ್ಗಳ್ ಗಿರಿರಾಜಪುತ್ರಿಯಪ್ಪಿಂಗಾಳ್ಗಳ್ ೫೫

ಪಾಣಿಗಳತ್ಯಧಿಕವರ
ಶ್ರೇಣಿಗಳಂಚಿತಕ್ರಿಯಾವಚೋಗುಣವಿಳಸದ್
ವಾಣಿಗಳಖಿಳಾಧಾರ
ಕ್ಷೋಣಿಗಳಾಹಾ ಸುಪಾಣಿಗಳ್ ಶಂಕರನಾ ೫೬

ಉರವದು ಗಿರಿಜಾಕಾಂತೆಯು
ತೆಱವದು ತತ್ಕುಚಯುಗಂಗಳಿರವದು ಪುಣ್ಯೋ
ತ್ಕರವದು ವರವದು ಸುಖಸಾ
ಗರವದು ಭುವನೈಕಚಾರುತರವದು ಹರನಾ ೫೭

ಮಧ್ಯಂ ಗಿರಿಜಾಲೋಕನ
ಸಾಧ್ಯಂ ನಂಬಿರ್ದ ಸಕಳಗಣಸಂಕುಳಸಂ
[೫]ಚೋದ್ಯಂ[೫] ಪೊರ್ದಿದಜಾಂಡಾ
ಬಾಧ್ಯಂ ಹರಹರ [೬]ಸಮಸ್ತಭುವನಾರಾಧ್ಯಂ[೬] ೫೮

೧-೧ ಜನತಾ (ಅ). ೨-೨ ವಚ (ಬ ಯ). ೩-೩ ಜಗದೀ (ಮ ಬ ಅ ಕ ಗೊ). ೪-೪ ಚಿತ್ತದ (ಬ). ೫-೫ ಬೋಧ್ಯಂ (ಕಾ ಬಿ ಬ ಯ) ೬-೬ ವಿಶಾಲವಿಶ್ವಾರಾಧ್ಯಂ (ಅ ಗೊ ಕೊ).

ತೊಡೆಗಳೊ ಹೈಮವತೆಯ ಕೌ
ಳುಡೆಗಳೊ ನವಕಾಂತಿಲಕ್ಷ್ಮಿ ಸಂತಸದಿಂದಿ
ರ್ಪೆಡೆಗಳೊ ರಂಭಾವಿಭವದ
ತಡೆಗಳೊ ಸಿಂಗರದ ಕಡೆಗಳೋ ಶಶಿಧರನಾ ೫೯

ಮೇಲ್ಗಳೊ ನವಸೌಂದರ್ಯದ
ಸಾಲ್ಗಳೊ ಪಾರ್ವತಿಯ ಚಿತ್ತಮಂ ಸೋಲಿಸುವಾ
ಕೀಳ್ಗಳೋ ಸಲ್ಲೀಲೆಯ ಪೊಂ
ಗೋಲ್ಗಳೊ ಕಣಕಾಲ್ಗಳೋ ಲಲಾಟೇಕ್ಷಣನಾ ೬೦

ಚರಣಂ ಭಕ್ತಜನಾಂತಃ
ಕರಣಂ ನಂಬಿದರ ಹರಣವಿನಕುಲತೇಜಃ
ಕಿರಣಂ ತ್ರಿಲೋಕಶರಣಂ
ಶರಣಾಭರಣಂ [1]ಸಮಸ್ತಮುಕ್ತಾ[1]ವರಣಂ ೬೧

ಎಂಬ ಪೊಗಳ್ತೆಗೆ ಮಿಗಿಲೆನಿಸಿ ನೆಱೆಮೆಱೆವ ಶಿವನ ಪುಣ್ಯಾಗಣ್ಯ ಲಾವಣ್ಯಮಯಸುಕುಮಾರಾವಯವಂಗಳಂ ಕಂಡು ಕೌತುಕಂಗೊಂಡು ನಂದೀಶ್ವರಂ [2]ಬಂದು ಸುರ[2]ಶಿರೋಮಾಲೆಯಂ ಪರಿಹರಿಸಿ ಮಣಿಕಿರೀಟಮಂ ಸಾರ್ಚಿ ಬಿಸುಗಣ್ಣಂ ಭಸಿತದಿಂ ಬಾಸಣಿಸಿ ಬಾಸಿಗಮನಿಕ್ಕಿ ನಾಗಕುಂಡಲಮಂ ಕಳಲ್ಚಿ ಮಾಣಿಕ್ಯಾವತಂಸಮಂ ಕೆಯ್ಗೊಳಿಸಿ ಕೂರ್ಮ[3]ಶಿರಮಂ[3] ತೆಗೆದು ತೋರಹಾರದೊಳ್ ಕೀಲಿಸಿದ ಪದಕಮನಳವಡಿಸಿ ಸರ್ಪೋಪವೀತಮಂ ಸಡಿಲ್ಚಿ ಯಜ್ಞೋಪವೀತಮನವರ್ಜಿ ಕೀರ್ತಿಮುಖಮಂ ಕಳಲ್ಚಿ ಬಾಹುಪೂರಯುಮ[4]ನೆಡೆಗೊಳಿಸಿ[4] ಉರಗಕಂಕಣಮಂ ಕಳೆದು ರತ್ನಕಂಕಣಮಂ ತಿರುಂಪಿ ನೂಂಕಿ ಬ್ರಹ್ಮಕಪಾಲಮಂ ನಿಲಲೀಯದೆ ಪುಣ್ಯಪವಿತ್ರಮ ನಿಟ್ಟು ಖಟ್ವಾಂಗಮಂ ಬಿಡಿಸಿ ಮಾದುಫಲಮನಿಂಬುಗೊಳಿಸಿ ಗಜಚರ್ಮಮನೋಸರಿಸಿ [5]ನಿರ್ಮಳೋ[5]ತ್ತರೀಯಮಂ ಪೊದೆಯಿಸಿ ಪುಲಿದೊವಲಂ ನಿವಾರಿಸಿ ದಿವ್ಯದುಕೂಲಮನುಡಿಸಿ ದೇವಕುಲಮೆಳಲ್ವ ಬಾವುಲಿಯ ತೊಡರಂ ಸಡಿಲ್ಚಿ ಸಹಜಸೌಂದರ್ಯಮನಿರಿಸಿ ಇಂತು ಶಿವಯೋಗಕ್ಕೆ ಮುಕ್ತಿಯಂ ಮುಕ್ತಿಗೆ ವೈರಾಗ್ಯಮಂ ವೈರಾಗ್ಯಕ್ಕೆ ಶಿವಜ್ಞಾನಮಂ ಶಿವಜ್ಞಾನಕ್ಕೆ ಭಕ್ತಿಯಂ ಭಕ್ತಿಗೆ ಪುಣ್ಯಮಂ ಪುಣ್ಯಕ್ಕೆ ಸತ್ಕ್ರಿಯೆಯಂ ಸತ್ಕ್ರಿಯೆಗೆ ಪಾವನಜನ್ಮಮನಲಂಕರಿಸುವಂತೆ ಪರಬ್ರಹ್ಮ-

---

೧-೧ ಸಮಸ್ತಮುಖ್ಯಾ (ಕೊ); ಪ್ರಸನ್ನಮುಖ್ಯಾ (ಡ). ೨-೨ ಬಂದಸುರರ (ಬೆ ಯ ಕೊ). ೩-೩ ಹಾರಮಂ (ಕೂ). ೪-೪ ನಳವಡಿಸಿ (ದಾ). ೫-೫ ಧವಲೋ (ಬ ಯು).

ಜಯರ್ಗಾಲಂ[೧]ಕೃತಿ[೧] ಬ್ರಾಹ್ಮಣೋತ್ತಮೋತ್ತಮನಪ್ಪ ವಿರೂಪಾಕ್ಷಂಗೆ ಪರಮೈಶ್ವರ್ಯಪೂಜಿತಂಗೆ ನಾದಮೂರ್ತಿಗೆ ಶಿವಜ್ಞಾನಿಗೆ [೨]ವೇದ[೨]ಶಿಖಾಮಣಿಗೆ ಸತ್ಯಜ್ಞಾನಾಭರಣಂಗೆ ನಿತ್ಯಕಾಯಂಗೆ ವಿಶ್ವಾರಾಧ್ಯಂಗೆ ಶಾಶ್ವತಪ್ರತಾಪನಿಧಿಯೆನಿಪ ಶಂಕರಂಗೆ ನಂದೀಶಾದಿಗಣನಾಯಕರ್ ಸಿಂಗರಮಂ ಮಾಡಿ ಹೆಱಸಾರ್ದು ನಿಂದು ನೋಡ[೩]ಲಂಜಿ[೩] ಕಣ್ಮುಚ್ಚಿ ಭಯದಿಂ ಶಿವಶಿವ ಜಯಜಯಯೆನುತ್ತುಮಿರೆ ದಧೀಚಿ ದುರ್ವಾಸ ವಸಿಷ್ಠ ವಾಮದೇವ ಭೃಗು[೪]ಕಶ್ಯಪಾದಿ[೪] ಮುನಿಜನಂಗಳ್ ಶಿವನ ಕಾಂತಿಯುಂ ಕಂಡು ನಿರೀಕ್ಷಿಸಲಣ್ಮದೆ ಚೇತೋದೃಷ್ಟಿಯಿಂ ನೋಡಿ,

ಮಹಾಸ್ರಗ್ಧರೆ

ಮಿಗಿಲೆತ್ತಂ ಜ್ಯೋತಿಗಂ ಪಾವಕರುಚಿ ಎಸೆವಾ ಜ್ಯೋತಿಗಂ ಪಾವಕಂಗಂ
ಮೃಗಲಕ್ಷ್ಮಜ್ಯೋತ್ಸ್ನೆಯೆಂತುಂ ಕರಮಸದಳಮಾ ಜ್ಯೋತಿಗಂ ಪಾವಕಂಗಂ
ಮೃಗಲಕ್ಷ್ಮಜ್ಯೋತ್ಸ್ನೆಗಂ ಭಾಸ್ಕರರುಚಿ ಪಿರಿದಾ ಜ್ಯೋತಿಗಂ ಪಾವಕಂಗಂ
ಮೃಗಲಕ್ಷ್ಮಜ್ಯೋತ್ಸ್ನೆಗಂ ಭಾಸ್ಕರರುಚಿಗಮತರ್ಕ್ಯಂ ವಿರೂಪಾಕ್ಷತೇಜಂ ೬೨

ಎಂದು ಪೊಗಳುತ್ತಿರ್ಪ ಸಮಯದೊಳ್ ಶಿವನ ವಿವಾಹಕ್ಕೆ ಸಕಲ[೫]ದೇವಕುಲಂ[೫] ಹರ್ಷದಿಂ ಬರುತಿರ್ಪಲ್ಲಿ,

ಚಂಪಕ

ಸುರಪತಿಯಾನೆಯುಂ ಹುತವಹಂ ತಗರಂ ಸಮವರ್ತಿ ಕೋಣನಂ
ನಿರೃತಿ ಮನುಷ್ಯನಂ ಜಳಧಿಪಂ ನೆಗಳಂ ಪವಮಾನನೇಣನಂ
ಹರಸಖನಶ್ವಮಂ ಶಶಿಧರಂ [೬]ವೃಷನಂ ನಲಿದೇಱಿ[೬] ಬಂದರ
ತ್ಯುರತರನಂದಿವಾಹನವಿವಾಹಮಹೋತ್ಸವದೇಳ್ಗೆಗಳ್ಕಱಿಂ ೬೩

ಲೋಕೈಕಬಂಧುವೆನಿಪ ಪಿ
ನಾಕಿಯ ಪರಿಣಯ[೭]ನದುತ್ಸವ[೭]ಕ್ಕತಿಮುದಮಂ
ಕೈಕೊಂಡುಕೊಂಡುಕೊನೆಯು
ತ್ತೇಕಾದಶರುದ್ರ[೮]ರಳ್ಕ್ಱಯಿಂ[೮] ನಡೆತಂದರ್ ೬೪

೧-೧ ಕೃತನಪ್ಪ (ಕೊ). ೨-೨ ದೇವ (ದಾ ಕೊ). ೩-೩ ಲಣ್ಮದೆ (ದಾ ಡ ಕೊ). ೪-೪ ಅಗಸ್ತ್ಯಾದಿ (ಯು). ೫-೫ ದೇವನಿಕಾಯಂ (ಬ). ೬-೬ ವೃಷಭೇಂದ್ರನನೇಱಿ (ಬೆ ಬ ಅ ಕೊ). ೭-೭ ಮಹೋತ್ಸವ (ಕಾ). ೮-೮ ರಳ್ಕಱಿಂ (ಕಾ ಬೆ ಬ).

ಮೇದಿನಿಯುಮನಂಬರಮುಮ
ನಾ ದಿಕ್ಚಕ್ರಮುಮನಂಶುಕುಳದಿಂ ಬೆಳಗು
ತ್ತಾದಂ ಸಂತಸದಿಂದಂ
ದ್ವಾದಶರವಿಗಳ್ ಮಹೋಜ್ಜ್ವಳರ್ ನಡೆತಂದರ್ ೬೫

ದೇವರ ದೇವನ ಗರಳ
ಗ್ರೀವನ ಭಕ್ತೈಕಬಾಂಧವನ ಸಕಳಜಗ
ಜ್ಜೀವನ ಮದುವೆಗೆ ನೆರೆದ
ಷ್ಟಾವಸುಗಳ್ ನಡೆದು ಬಂದ೧ರತ್ಯುನ್ನತಿಯಿಂ೧ ೬೬

ವರತೇಜದಿಂ ಪವಿತ್ರಾ
೨ಜರಣೆಯಿಂ೨ನತಿಕಮನವಿಮಳಸಾಮರ್ಥ್ಯತೆಯಿಂ
ಕರಮೆಸೆದನುನಯದಿಂ ರಾ
ಜರುಷಿ ಬ್ರಹ್ಮಋಷಿ ದೇವಋಷಿಗಳ್ ಬಂದರ್ ೬೭

ಅವರಾರೆಂದೊಡೆ,

ಮತ್ತೇಭ

ವರದುರ್ವಾಸನಗಸ್ತ್ಯ ಜಹ್ನು ಕಪಿಲಂ ೩ಕೌಂಡಿನ್ಯ೩ ಮಾಂಡವ್ಯ ಭಾ
ಸುರಶಾತಾತಪ ವಾಮದೇವ ಮುನಿವಿಶ್ವಾಮಿತ್ರ ಮೈತ್ರೇಯ ಬಂ
ಧುರಮಾರ್ಕಂಡೇಯ ದೇವಲಾಖ್ಯನನಿಳಾದಂ ಸೂತನಾ ವ್ಯಾಸನಾ
ತ್ವರಿತಂ ಚಿತ್ರಶಿಖಂಡಿ ಗಾಲವವೃಷಂ ಜಾಬಾಲಿ ವಾಲ್ಮೀಕಿಗಳ್ ೬೮

ಚಂಪಕ

ಪರಮದಧೀಚಿ ರೋಮಜ ಪುಲಸ್ತ್ಯ ಪರಾಶರ ಯಾಜ್ಞವಲ್ಕ್ಯಯಂ
ಗಿರ ಭೃಗು ಪುಂಡರೀಕ ಋಷಿಕಶ್ಯಪ ಕೌಶಿಕ ಗಾರ್ಗ್ಯ ಗೌತಮಂ
ವರಸನಕಂ ಸನಂದನ ೪ಸನತ್ಸು೪ ಭಗೀರಥ ಕುತ್ಸ ವತ್ಸ ೫ಭಾ
ಸುರ೫ಜಮದಗ್ನಿ ಜೈಮಿನಿ ವಸಿಷ್ಠ ಮತಂಗ ಮರೀಚಿಯತ್ರಿಗಳ್ ೬೯

ಮತ್ತಮನಂತರದಲ್ಲಿ,

೧-೧ ರತ್ಯುತ್ಸವದಿಂ (ಶಾ ದಾ ಕ). ೨-೨ ಭರಣದಿ (ಬ). ೩-೩ ಶಾಂಡಿಲ್ಯ (ಯ). ೪-೪ ಸನತ್ಸ (ಶಾ). ೫-೫ ಭಾ। ಸ್ಕರ (ಕೊ).

ಸಂಗಡಿಸಿದ್ದ ಶಂಖಂ ಚ
ಕ್ರಂ ಗದೆ ಶಾರ್ಙ್ಗಂಗಳೆಸೆಯೆ ಗರುಡಾಸನದೊಳ್
ಪಿಂಗದೆ ಬಂದಂ ಯುತಚತು
ರಂಗಂ ಮಾಧವನುಮಾಧವಂ ಮಚ್ಚುವಿನಂ ೭೦

ಭರದಿಂದಂ ತನ್ನ ಬಲಂ
ಬೆರಸೊಲವಿಂ ಹಂಸೆಯೇಱ ತೊಳತೊಳಗುತ್ತುಂ
[೧]ಸರಭಸದಿಂ[೧] ನಡೆತಂದಂ
ಸರಸಿಜಭವನಭವ[೨]ನಭಯುಮಿಾಯೆ[೨] ಸರಾಗಂ ೭೧

ಅಂತುಮಲ್ಲದೆಯುಂ,

ಸುರರ ಬಲಂ ಹರಹರ ಖೇ
ಚರರ ಬಲಂ ಭಾಪು ಕಿನ್ನರರ ಬಲವಾಹಾ
ಗರುಡರ ಬಲವರರೇ ಸಿ
ದ್ಧರ ಬಲವಮ್ಮಮ್ಮ ಭಲರೆ ಗಂಧರ್ವಬಲಂ ೭೨

ಅಂತು ಬಂದ ಬಲಮಂ ಕಂಡು ಮದನಮರ್ದನಂ ನೋಡುತಿರ್ಪಾಗಳ್ ಬರುದಿನಗ್ಗದ ಗಣಂಗಳ್ ಬರುತಿರ್ದರದೆಂತೆಂದೊಡೆ,

ತಮತಮಗುಗ್ರರುದಗ್ರರ್
ತಮತಮಗೆ ವಿಚಾರಸಾರರಭವರ್ ವಿಭವರ್
ತಮತಮಗಾಪ್ತರ್ ಗುಪ್ತರ್
ತಮತಮಗೆ ಸಮಸ್ತಲೋಕವಂದ್ಯರನಿಂದ್ಯರ್ ೭೩

ಮತ್ತೇಭ

ಸಿಡಿಲಂ ನುಗುರ್ವ ಶೇಷನಂ ಪೊಸೆವ ದಿಙ್ನಾಗಂಗಳಂ ಪೊಯ್ದು ಘೀ
ಳಿಡಿಪೇಳಂ ಕಡಲಂ ತುಳುಂಕುವ ಕುಲಾದ್ರಿಸ್ತೋಮಮಂ ಕಿಳ್ತಿಣಂ
ಪೊಡೆಸೆಂಡಾಡುವ ಭೂಮಿಯಂ ಹಿಳಿವ ಚಂದ್ರಾದಿತ್ಯರಂ ಮಿಾಂಟುತಿ
ರ್ಪುಡುಸಂತಾನಮನಾರ್ದುದಿರ್ಚುವ ಗಣಗಳ್ ಬಂದರಾನಂದದಿಂ ೭೪

ಮತ್ತಮಲ್ಲಿ,

೧–೧ ಭರವಸದಿಂ (ಕಾ ಯು ಅ ದಾ). ೨–೨ ಸಭೆಯೊಳಿಳಿಯೆ (ಡ).

ಸ್ರಗ್ಧರೆ

ನಂದೀಶಂ ವೀರಭದ್ರಂ ಘನ[೧]ರವ[೧] [೨]ನಚಲಂ[೨] ಪುಷ್ಪದಂತಂ ಶುಭಂ ಸಾ
ನಂದಂ ಭೃಂಗೀಶನುಗ್ರಂ [೩]ಪಿಕ[೩]ಮುಖನಸಿತಗ್ರೀವಸುಗ್ರೀವನತ್ಯಾ
ನಂದಂ ದಿವ್ಯಾಂಗನಂಧಾಸುರಮಥನನನೇಕಾಸ್ಯನೋಂಕಾರಿ [೪]ಶರ್ವಾಂ[೪]
ಗಂ ದಕ್ಷಧ್ವಂಸಿ ಲಂಬೋದರನತುಳಬಳಂ ಹಸ್ತಿಕರ್ಣಂ ವಿಕರ್ಣಂ ೭೫

ಮತ್ತೇಭ

ಗರಳಂ [೫]ಭದ್ರ[೫]ಮುಖಂ ಶುಭೋದಯನಭಂಗಂ [೬]ಶಂಕು[೬]ಕರ್ಣಂ ಷಡ
ಕ್ಷರನುತ್ತುಂಗತಿರಂ ವೃಕೋದರನಟವ್ಯಂ ದಾರುಕಂ ಸಿಂಹಕೇ
ಸರಿ ಸಿದ್ಧಾಂತಿಯುದಾರನೇಕಜಟಿ ವಿದ್ಯುನ್ಮಾಲಿ ತಾರಾಕ್ಷನಂ
ಬರಕಾಯಂ ಘನಕಾಯನಪ್ರತಿಮಕಾಯಂ ವಿಸ್ತರಂ ಕುಂಭಜಂ ೭೬

ಮಹಾಸ್ರಗ್ಧರೆ

ಹಳ[೭]ನುತ್ತುಂಗಂ[೭] ವಿಚಿತ್ರಂ ತ್ರಿಶಿರನಸುರಕೋಳಾಹಳಂ ಯಜ್ಞಕೋಳಾ
ಹಳನುದ್ಯತ್ ಕಾಲಕೋಳಾಹಳನತನುಹರಂ ಮಂಗಳಂ ಮೃತ್ಯುಕೋಳಾ
ಹಳನೀಶಾನಂ ಪ್ರಘೋಷಂ ವಿಜಯನನಲಕಾಯಂ ಗಂಭೀರಸುಗಂಡ
ಸ್ಥಳನೂರ್ಧ್ವಾಂಗಂ [೮]ಪ್ರಜಿಹ್ವಂ[೮] ವಿಷಸರಣಿ ಪುರಧ್ವಂಸಿ ಸರ್ವಾಂಗಜಿಹ್ವಂ ೭೭

ಇಂತಿವರ್ ಮೊದಲಾದ ಗಣೇಶ್ವರಬಲಸಹಿತಂ ಇಳಾತಳಮಂ ದಿಕ್ಚಕ್ರಮಂ ನಭೋಭಾಗಮಂ ತೆಕ್ಕನೆ ತೀವಿ ಬ್ರಹ್ಮಾಂಡಮಿಂಬಿಲ್ಲೆಂಬ ಸಂಭ್ರಮಮಿಂಬುವಡೆಯೆ ಬಂದು ನಿಂದ ಸಕಲಸುರಸಮೂಹಮಂ ವಿರೂಪಾಕ್ಷಂ ಕಂಡು ಮನಂಗೊಂಡು ಮುಂದಿರ್ದ [೯]ನಂದೀಶ್ವರನ್[೯] ಮುಖಮಂ ನೋಡಿದಾಗಳ್,

ಮತ್ತೇಭ

ನಯದಿಂದೆಳ್ದು ನತಾಸ್ಯನಾಗಿ ವಿಪುಳಶ್ವಾಸಂಗಳೊಳ್ ದೇವಕೋ
ಟಿಯನಾಂದೋಳಮನಾಡಿಸುತ್ತೆ ನಡೆತಂದುಚ್ಚಪ್ರಭಂ ಧರ್ಮಸಂ
ಚಯನಾನಂದಮಯಂ ಮಹೇಶನ ಸುಖಾವಾಸಾನ್ವಿತಂ ದಿಟ್ಟವಾ
ರಿಯ ಧೀರಂ ವೃಷಭೇಂದ್ರನಪ್ರತಿಮಕಾಯಂ ಮುಂದೆ ನಿಂದಿರ್ಪುದುಂ ೭೮

೧-೧ ತರ (ಗ). ೨-೨ ನನಲಂ (ಅ). ೩-೩ ಕಪಿ (ಕಾ ಯ ಆ ದಾ ದ). ೪-೪ ಸರ್ವಾಂ । ಗಂ (ಬೆ ಮ ಬ) ೫-೫ ವ್ಯಾಘ್ರ (ಅ). ೬-೬ ಶಂಖ (ಅ). ೭-೭ ನುತ್ತಾಂಗಂ (ಯ); ನರ್ಧಾಂಗಂ (ಬ ಅ); ನಂತಾಂಗಂ (ಮ). ೮-೮ ದ್ವಿಜಿಹ್ವಂ (ಕಾ ಬೆ). ೯-೯ ವೃಷಭರಾಜನ (ಬೆ ಬ ಯ ಗೊ ಗ).

ಚಂಪಕ

ಹರಿ ಜಯಜೀಯ ಜೀಯೆನೆಯಜಂ ಮಝುಭಾಪೆನೆ ದೇವವೀಥಿ ದೇ
ವುರೆ ಸುರರಾಜರಾಜಧಿರುರೇ ಎನೆ ಸನ್ಮುನಿಗಳ್ ಸರಾಗದಿಂ
ಹರಿಹರ ರುದ್ರ ಭದ್ರಯೆನೆ ನಿಂದ ಗಣಾವಳಿಯುಳ್ಕಱಿಂ ಮದೀ
ಶ್ವರ ಭಲರೇ ಕಪರ್ದಿಯೆನೆ ನಂದಿಯನೇಱಿದ[1]ನೆಮ್ಮ[1] ಶಂಕರಂ ೭೯

ಇಂತು ವೃಷಭಾರೂಢನಾಗಿ ಕೂಡೆ ನೆರೆದ ಗರುಡರ ಗಡಣದ ಗಂಧರ್ವರ ಸಂದಣಿಯ ಸಿದ್ಧರ ಪದ್ಧತಿಯ ವಿಧ್ಯಾಧರರ ವೀಧಿಯ ಕಿನ್ನರರ ವ್ರಜದ ಪನ್ನಗ ಪ್ರಕರದ ಕಿಂಪುರುಷಸ್ತೋಮದ ಯಕ್ಷರ ಪಙ್ಕ್ತಿಯ ರಾಕ್ಷಸರ ತಿಂತಿಣಿಯ ಮಯೂರರ ಮಂತಣದ ಗುಹ್ಯಕರ ಯೂಥದ ಖೇಚರರ ತೆಕ್ಕೆಯ ಮನುಗಳ ವಂಗಡದ ಮುನಿಗಳ ಗೊಂದಣದ ಸುರರ ನೆರವಿಯ ದೇವಕಾಮಿನೀನಿಕರದ ದಿಕ್ಪಾಲನಿಕಾಯದ ಹರಿವಿರಿಂಚಿಗಳ ಪರಿವಿಡಿಯ ಬಿರುದುಗಣಂಗಳ ತೆರಳ್ಕೆಯ ರವಿ ಮಂಡಲದ ಹಿಂಡುಗಳ ಶಶಿಮಂಡಲದ ಸಾಲ್ಗಳ ಕುಂಜರನಿಕರದ ತುರಂಗಸಂಘದ ರಥಪ್ರತಾನದ ಪದಾತಿಬಲದಿರ್ಕೆಲದೊಳ್ ದಿಕ್ಕರಿಗಳ ಮೇಲೆ ಮಿಕ್ಕು ಬರ್ಪ ದೇವಾಂಗವಸ್ತ್ರವಿತಾನದ ಪಟ್ಟೆಗಳೊಟ್ಟಜೆಯ ಸಾದಿನ ಪೆಟ್ಟಿಗೆಗಳ ಮೃಗಮದದ ಕೊಂಬುಗಳ ಕರ್ಪೂರಕರಂಡಕಾನಿಕರದ ಪನಿನೀರ ಭಾಜನಂಗಳ ಕಸ್ತೂರಿಯ ಭಾಂಡಂಗಳ ಬಾವನ್ನದೊಟ್ಟಿಲ್ಗಳ ರತ್ನಾಭರಣರಾಶಿಗಳ ಚಿಂತಾಮಣಿಯ [2]ಮುಡಿಪುಗಳ[2] ಪರುಷದ ಕಣಿಯ ತನತನಗೆ ಪಿಡಿದು ಬರ್ಪ ಬಿಳಿಯ ಕರ್ಬಿನ ನಡೆವನದ ಪುಣ್ಯಫಲವ್ರಾತದ ಸುರತರುವಿನಾರವೆಗಳ ಸುರಭಿಗಳೊಯ್ಯಾರದ ಮುಂದಣ ವೃಷಭ ಧ್ವಜದ ದರ್ಪಣದ ತಳಿರ್ಗಳ ಕಳಶಂಗಳಂ ಪಿಡಿದು ಮೆಲ್ಲಮೆಲ್ಲನಡಿಯಿಡುವರುಂಧತಿ ಯನಸೂಯಾದೇವಿಯ ಗಾಯತ್ರಿ ಸಾವಿತ್ರಿ ಸರಸ್ವತಿ ಶಚಿದೇವಿ ಲಕ್ಷ್ಮಿ ರೋಹಿಣಿ ಯರಾದಿಯಾದ ಪರಮಪತಿವ್ರತಾವಿತಾನದ ಪೊಡೆವ ಭೇರಿಯ ಸೂಳಯ್ಪ ನಿಸ್ಸಾಳದ ಪೂರಯಿಪ ಶಂಖದ ಬಿರುದೆತ್ತಿ ಕರೆವ ಕಹಳೆಗಳ ಮೊಳಗುವ ಮದ್ದಳೆಯ ಸುಗತಿಯ ನುಗಳ್ವ ಕರಡೆಗಳ ಮೇಳಯ್ಪ ಕಂಸಾಳದ ಗರ್ಗರಿಪ ಗಿರ್ಗಟಂಗಳ ಪೊಣ್ಮುವ ತಾಳದ ಉಣ್ಮುವ ಗಾನದ ಭೃಂಗಿಯ ನರ್ತನದ ಭೋರೆಂಬ ರವದ ಸಮಸ್ತವಸ್ತುವಿಸ್ತರದ ನಡುವೆ ಧವಳಾತಪತ್ರದ ಭುವನಾಶ್ರಯಂ ಜಡೆಮುಡಿಯ ಬೆಡಂಗಂ ಮಕುಟದ ಮನೋಹರಂ ಶಶಿಕಳೆಯ ಸೊಬಗಂ ಬಾಸಿಗದ ಭಾಗ್ಯನಿಧಿ ಕರ್ಣಾವತಂಸದ ಕಮನೀಯಂ ಕಪೋಳದ ವಿಪುಳಂ ಭ್ರೂಲತೆಯ ಭಾವಕಂ ಅಲರ್ಗಣ್ಗಳ ಸುಲಲಿತಂ ಶ್ರೀವದನದ ಪಾವನಂ ಭೂರಿಭುಜದ ಮಾರಾರಿ ನಳಿತೋಳ್ಗಳ ನಾಯಕಂ ಕರತಳದ ಕಾಮಧೇನು ಕಂಕಣದ ಕಳಾವಿಧಂ ಹಸ್ತಪವಿತ್ರದ ಸುಲಭಂ ಮಾದೂಫಲದ ಮಹಾ ನಿಧಿ ಹಾರದ ಹರ್ಷಮಯಂ ಪದಕದ ಸದಮಳಂ ಜಾಹ್ನವಿಸನ್ಮಕುಟಂ ಜನ್ನದಾರದ

೧-೧ ನೊಲ್ದು (ಅ). ೨-೨ ಸಂತತಿಯ (ಅ).

ಪನ್ನಗಭೂಷಣಂ ಪವಿತ್ರದ ಪರಮಾತ್ಮಂ ಧವಳೋತ್ತರೀಯದ ೧ವಿರಳಂ೧ ಪರಿವಸನದ ಪುಣ್ಯಾಧಿಕಂ ನಂದಿವಾಹನದ ನವೀನಂ ಭಸಿತದ ಹೊಸಮದುವಣಿಗನೆನಿಪ ಶ್ರೀ ಪಂಪಾವಿರೂಪಾಕ್ಷಂ ತನ್ನ ಕಾರುಣ್ಯಕಟಾಕ್ಷಕ್ಕೆ ಕೆಯ್ಮುಗಿವ ನಾಲ್ಕುಂ ದೆಸೆಯ ದೇವಕುಲಕ್ಕೆ ಕರುಣಿಸುತ್ತುಂ ಪ್ರಸನ್ನಮುಖಂ ಸುಖಾವರಣಂ ಶರ್ವಂ ಸರ್ವಸಂಭ್ರಮದಿಂ ಬರೆ ನಡೆತಂದಿದಿರ್ಗೊಳ್ವ ಸುವಾಸಿನಿಯರೊಯ್ಯಾರದಿಂ ನಿವಾಳಿಗಳಂ ಪಿಡಿದು ನಿವಾಳಿಸಲ್ ಮತ್ತಮಲ್ಲಿಂ ಮುಂದೆ ಕುಲಾಂಗನೆಯರ್ ಸೂಸುವ ಮುತ್ತಿನ ಸೇಸೆಗಳನಾದರದೊಳಾನುತ್ತುಂ ನಂದೀಶ್ವರನ ಬೆನ್ನಿಂದವನಿತಳಕ್ಕವತರಿಸುತ್ತುಂ ಪ್ರಮಥಗಣಂಗಳ್ ಕೆಯ್ಮೆಯಿಂ ಕೆಯ್ಗುಡೆ ಮಹಾವಿವಾಹಮಂಟಪಮಂ ಪುಗುತರ್ಪಾಗಳ್ ಕಂಡು 'ಹರ್ಷಮನೆಲೆಗೊಂಡು ಮೆಯ್ಯಿಕ್ಕಿ ನಿಂದ ಮೇನಾದೇವಿಗಂ ಮಾವನಪ್ಪ ಗಿರಿರಾಜಂಗಂ ಕಾರುಣ್ಯಮನೀಯುತ್ತುಂ ಸಿಂಹವಿಷ್ಟರಮನವಷ್ಟಂಭಿಸಿ ಸಮಯೋಚಿತಾನ್ನಮನುಂಡು ಮಹಾವಿಭವಮಂ ಕಂಡು ಮಧುಪರ್ಕಮಂ ಕೆಯ್ಕೊಂಡು,

ಇರೆ ಹರಿಯಜರನುಮಿಸುತುಂ
ಪರಮ೨ಶುಭಾಕರ೨ ಮುಹೂರ್ತಮೆಲೆಲೆ ಸಮೀಪಂ
ಕರುಣಿಪುದೆನೆ ಮಂಗಳವಾ
ಗ್ವಿರಚನೆಯಂ ಕೇಳ್ದು ಭೋಂಕನೆಳ್ದಂ ರುದ್ರಂ ೮೦

ಅಮಮ ವರಮೂರ್ತಿ ನವವಿ
ಭ್ರಮ ವಿಸ್ತರನಮೃತಶೀಲನಾನಂದಮಯಂ
೩ಮಮಕರ್ತಂ ಮಮಭರ್ತಂ೩
ಸುಮಹೂರ್ತಂ ೪ಪತ್ತೆ೪ಸಾರ್ವವೋಲ್ ನಡೆತಂದಂ ೮೧

ಅಂತು ನಡೆತಂದು ವಿವಾಹಗೇಹದೊಳಪೊಕ್ಕು,

ಮುತ್ತಯ್ದೆಯರೊತ್ತೊತ್ತೆಯ
ನೊತ್ತರಿಸುತೆ ಬೆಳಗಿನೊಳಗೆ ಹೊಸಬೆಳಗಂ
ಸುತ್ತುಂ ಸವಿನೋಟಮ೫ನೀ
ಯುತ್ತುಂ೫ ಜವನಿಕೆಯ ನೆಲೆಗೆ ಶಿವನೆಯ್ತಂದಂ ೮೨

೧-೧ ಸುವಿಮಲಂ (ಅ); ವಿಮಳಂ (ದಾ). ೨-೨ ಶುಖಾಕರ (ಬೆ ಬ ಯ). ೩-೩ ಕಮನೀಯಂ ಮಮಕರ್ತಂ (ಬೆ ಬ ಯ). ೪-೪ ಹತ್ತೆ (ಕಾ. ಅ.) ೫-೫ ನೀ। ಸುತ್ತುಂ (ಮ).

ಆ ಸಮಯದೊಳ್ ಪಾರ್ವತೀದೇವಿ ನಿಟ್ಟಯ್ದು ಮೆಟ್ಟಕ್ಕಿಯಂ ಮೆಟ್ಟಿ ತೆಱೆಯಂ ಮಱೆಯಂ ಮಱೆಗೊಂಡು ನಿಂದಿರ್ಪಲ್ಲಿ,

ನಲ್ಲರ ನಡುವುಪಚಾರಂ
ಸಲ್ಲಲಿತೇಕ್ಷಣದ ನಡುವೆ ಪಕ್ಷ್ಮಪುಟಂ ಸಂ
ಪುಲ್ಲರದಮಧ್ಯದೊಳ್ ಮಿಗೆ
ಸೊಲ್ಲಿರ್ಪಂತಿರ್ದುದಲ್ಲಿ ತೆಱೆ ಹರನಿದಿರೊಳ್ ೮೩

ಅಂತಿರ್ಪ ಜವನಿಕೆಯನತಿಸ್ನೇಹದಿಂ ನೋಡಿ,

[೧]ಅವಿಭೇದ[೧]ಪ್ರಕೃತಿಗಳೆನಿ
ಪವಯವದಿಂದೊಪ್ಪುವರ್ಧನಾರೀಶ್ವರರೊಳ್
ಜವನಿಕೆ ನಡುವೊಡ್ಡಿತು ಕಾ
ಲವಶದಿನಾವಂಗವಾವುದಾಗದು ಧರೆಯೊಳ್ ೮೪

ಇಂತೆಂಬ ನಾಣ್ನುಡಿಗೆ ನೆಲೆಯಾಗಿ,

ಬೆಳಗಿನ ಬೀಜಾವಳಿಯೊ
ಬ್ಬುಳಿಯೋ ನಕ್ಷತ್ರರಾಶಿಯೋ ನವಪುಣ್ಯಂ
ಗಳ ಪುದುವೊ ಚಂದ್ರಿಕಾತಂ
ಡುಳವೋ ಎನೆ ತೊಳಗಿ ತೋರ್ಪ ಮೆಟ್ಟಕ್ಕಿಗಳಂ ೮೫

ಕಾಂತಿಮಯಂ ಶಶಿಚೂಡಂ
ಶಾಂತಂ ನವಭೋಗಿಯೆನಿಪ ಲೀಲಾವಾಸಂ
ಸಂತಂ ಸುರುಚಿರಹರ್ಷಮ
ಯಂ ತಡೆಯದೆ ಮೆಟ್ಟಿ ನಿಂದ ಸಮನಂತರದೊಳ್ ೮೬

ಹರಿಯುಂ ಸರಸಿಜಭವನುಂ
ಪುರುಹೂತನುಮೆಸೆವ ಋಷಿಗಳುಂ ಗಣಕುಲಮುಂ
ಗಿರಿಜೇಶನ ಗಿರಿಜೆಯ ಭಾ
ಸುರಪರಿಧಾನದ ಸಮೀಪದೊಳ್ ನಿಂದಾಗಳ್ ೮೭

---

೧ ಅವಿಭಿತ (ಡ).

ಚಂಪಕ

ಕಳಕಳಮಂ ನಿವಾರಿಸುತುಮಾಯುತಮೋ ಎನಲಾಯುತಂ ಲಸದ್
ಗಳಬಳಮಂ [1]ವಿವರ್ಜಿಸು[1]ತುಮಾಯುತಮೋ ಎನಲಾಯುತಂ ನಿರಾ
ಕುಳಿತಮನಂ ಬೃಹಸ್ಪತಿ ಸಮಾಯುತಮೋ ಎನಲಾಯುತಂ ಮನಂ
ಗೊಳಿಪ ಮಹಾಮುಹೂರ್ತದೊಳಗಾಯುತಮೋ ಎನೆ ತಪ್ಪದಾಯುತಂ ೮೮

ಅಮರಗುರು ಸಕಳವೇದಾ
ಗಮಕೋವಿದನೊಲ್ದು ಭಕ್ತಿಯಿಂದಂ ಪುಣ್ಯಾ
ಹಮೆನುತ್ತುಮಿತ್ತ ರಾಜತ್
ಸುಮುಹೂರ್ತಂ ಬಂದು ತೆಱೆಯನೋಸರಿಸಲೊಡಂ ೮೯

ಕರಡೆಗಳ ರವಂ ನಿಸ್ಸಾ
ಳರವಂ ಭೇರೀರವಂ ಮೃದಂಗರವಂ ದೇ
ವರ ಹೂಮಳೆಗಳ ಭೋರೆಂ
ಬರವಂ ಮಂಗಳರವಂಗಳುಣ್ಮಿದುವಾಗಳ್ ೯೦

ಆನಿರೆ ಮತ್ತೊರ್ವಳ್ ಗಡ
ತಾನಿರ್ಪಳ್ ಜಡೆಯೊಳೆನುತೆ ಮುಳಿದಿಡುವಂತಾ
ಮಾನಿನಿ ಜೀರಿಗೆ ಬೆಲ್ಲದೊ
ಳಾನುತೆ ಶಿವನುತ್ತಮಾಂಗಮಂ ಪದೆದಿಟ್ಟಳ್ ೯೧

ಮೃಡನಾಗಳ್ ಗಿರಿಜೆಯ ಜೆ
ಲ್ವಿಡಿದ ಮೊಗಂಗಂಡು ಸಾತ್ತ್ವಿಕಂ ಕೆಯ್ಕೊಂಡೊ
ಲ್ದಿಡುವಾ ಜೀರಿಗೆ ಬೆಲ್ಲಂ
ಸಡಿಲ್ದು ಕಂಪನದೆ ಬಿಳ್ದುವಗಜೆಯ ಪದದೊಳ್ ೯೨

ಅನಂತರದಲ್ಲಿ,

ಆಱಿಸುತ್ತಿರೆ ಪಲಕಾಲದೊ
ಳುಱೆ ನಿನ್ನನೆನುತ್ತೆ ಶಿವನ ಮಕುಟೇಂದುಗೆ ತಾಂ
ತುಱುಗಿದ [2]ತಾರೆಗೆಯೆಂಬಾ[2]
ತೆಱದಿಂ ತಂಡುಲಮನಗಜೆ ಸುರಿದಳ್ ಶಿರದೊಳ್ ೯೩

೧-೧ ವಿಸರ್ಜಿಸು (ಅ). ೨-೨ ತಾರೆಗಳುದುರ್ವಾ (ಅ).

ಆಗಳ್,

ಪರಮತಪೋನಿಧಿ[೧]ಯೆನಿಸಿದ
ಗಿರಿಜೆಗೆ ಪುಣ್ಯಾಂಬುವಿಂದಲ[೧]ಭಿಷೇಕಮನೊ
ಪ್ಪಿರೆ ಮಾಡುವ ತೆಱದಿಂ[೨]ದಂ
ಗಿರಿಶಂ ನವ[೨]ತಂಡುಲಂಗಳಂ ತವೆ ಸುರಿದಂ ೯೪

ಆ ಸಮಯದೊಳ್,

ನಲಿನಲಿದು ಬಂದು ಗಿರಿಪತಿ
ಯೊಲವಿಂದಂ ಗಿರಿಜೆಸಹಿತಮುಂ ನಾವೆಲ್ಲಮುಂ
ನೆಲೆದೊಳ್ತರ್ ಬಳೆದೊಳ್ತರ್
ಸಲೆದೊಳ್ತರ್ ನಿಮಗೆನುತ್ತೆ ಧಾರೆಯನೆಱೆದಂ ೯೫

ಗಿರಿಜಾತೆಯ ಸಕಲಗುಣಂ
ಹರನಿಮ್ಮಂ [೩]ಸುತ್ತುಗೀ ತೆಱದೊಳೆಂಬಂತೊ
ಪ್ಪಿರೆ[೩] ಸುತ್ತಿದರತಿಮೃದುತರ
ಸುರುಚಿರನವಕಾಂತಿಯೆಸೆವ ಗುಣಮಂ ಗುಣಮಂ ೯೬

ಅಯ್ದುಂ ವದನನ ಕಾಂತೆಯ
ನೆಯ್ದೆ ಪತಿವ್ರತೆಯರಧಿಕತರಮುದದಿಂ ಮು
ತ್ತಯ್ದೆಯೆ [೪]ನಿಟ್ಟಯ್ದೆಯೆ ನೆಱೆ[೪]
ಯಯ್ದೆಯೆ ಸಲೆಯಯ್ದೆಯೆಂದು[೪]ಪರಸುತ್ತಿರ್ದರ್ ೯೭

ಇಂತು ವಿವಾಹವಿಭ್ರಮಮಂ ಕೆಯ್ಕೊಂಡು ಗಿರಿಜೆಯ ಕರತಳಮಂ ಪಿಡಿದು ಸೋಮಂ ಸೋಮಧರಂ ವ್ಯೋಮ[೫]ಕೇಶ[೫] ಹೋಮಸ್ಥಳಕ್ಕೆ ನಡೆತಂದಿಕ್ಕಿದ ಹಸೆಯ ಮೇಲೆ ಪಶುಪತಿ ಕುಳ್ಳಿರೆ ಮಂತ್ರತಂತ್ರಯಂತ್ರಸಿದ್ಧನಪ್ಪ ಪರಮೇಷ್ಠಿ[೬]ಹರನನುಜ್ಞೆಯಿಂ[೬] ಸ್ಥಂಡಿಲಮನಲಂಕರಿಸಿ ಮೆಲ್ಲಮೆಲ್ಲನುಲ್ಲೇಖನಂಗೆಯ್ದಗ್ನಿಯಂ ಪ್ರತಿಷ್ಠೆಯಂ ಮಾಡಿ ಬ್ರಹ್ಮರ್ಷಿ ದೇವರ್ಷಿ ವಿಪ್ರೋತ್ತಮರನುಮತದಿಂ ಪ್ರಾಣಾಯಾಮಂ ಮಂತ್ರಿಸಿ ಸಮಿತ್ಪರಿಸ್ತರಣಂ ಪಾತ್ರಾಸಾಧನಂ ಆಜ್ಯಸಂಸ್ಕಾರಂ

೧-೧ ಗಿರಿಜೆಗೆ।ಹರುಷಂ ಮಿಗೆ ಪುಣ್ಯತತಿಯುನ (ಅ); ಯೆನಿಸಿದ । ಗಿರಿಜೆಗೆ ಪುಣ್ಯಂಗಳಿಂದಲ (ಮ ಬ). ೨-೨ ಶಂ । ಕರನವುಲಿನ (ಕಾ ದಾ). ೩-೩ ಸುತ್ತಿಮುತ್ತುಗೀತೆಱನೆಂಬಂತಿರೆ (ಬ). ೪-೪ ನೆಱೆಯಯ್ದೆಯೆ ಸಲೆ । ಯಯ್ದೆಯೆ ನಿಟ್ಟಯ್ದೆಯೆಂದು (ಕಾ ಬೆ ಸ). ೫-೫ ಶಿಖಂ (ಕಾ); ಕೇಶಂ (ಅ). ೬-೬ ಹರನನುಜ್ಞೆಯಂ ತಳೆದು (ಅ).

ಸ್ರುಕ್‌ಸ್ರುವಸಮ್ಮಾರ್ಜನಂ [೧]ದೂರ್ವಾಯುವ[೧]ಹಸ್ತಬಂಧನಾದಿ ಸತ್ಕ್ರಿಯೆಗಳಿಂ ಹೋಮಮಂ ಮಾಡುತ್ತಿರ್ದು,

ಭಾವಿಸಿ ಮಂತ್ರಾವಳಿಯಿಂ
ದೋವುತೆ ಹುತವಹನೊಳೆಸೆವ ಲಾಜಾಹುತಿಯಂ
ತೀವಿದನಂತರಮಗಸುತೆ
ದೇವನ ಬಲದಿಂದೆಡಕ್ಕೆ ಬಂದಳನೂನಂ ೯೮

ಅಂತು ಬರೆ ಪೂರ್ಣಾಹುತಿಯಂ ಕೊಟ್ಟು ಹೋಮಸಮಾಪ್ತಿಯೊಳಾಪ್ತನಪ್ಪ ಕಮಳಜಂ ಸಪ್ತಪದಿಯಂ ಕಟ್ಟಳ್ಕಱಿಂ ಮೆಟ್ಟಿಸಿ ತದನಂತರಂ ದೇವದಂಪತಿಗಳಂ ಸಿಂಹಾಸನದೊಳಲಂಕರಿಸೆ ಸಖನೆನಿಪ ನಿಮಿತ್ತಂ ಕುಬೇರಂಗೆ ನಿರೂಪಮಂ ಕೊಟ್ಟು ನಾರದಾದಿ ಋಷಿಗಳಂ ಕಳಪೆ ದಿಟ್ಟಮೂಱರಸಂ ನಾರಾಯಣಪ್ರಿಯಂ ಕಾಮಾರಿಯಾ-ರೋಗಣೆಗೆ ನಡೆತಂದೆಡೆಮಾಡಿದೆಡೆಯೊಳಿಕ್ಕಿರ್ದಜಿತಾಸನಮನವಷ್ಟಂಭಿಸೆ ನಂದೀ-ಶ್ವರವೀರಭದ್ರಾದಿಯಾದ [೨]ಗಣಂಗಳ್[೨] ಹರಿವಿರಿಂಚಿ ಪುರಂದರಾದಿ ಸಮಸ್ತಸುರ-ಸಮೂಹಂ ಪಙ್ಕ್ತಿಯೊಳ್ ಕುಳ್ಳಿರೆ ಪಾರ್ವತಿಯೊಡನಮೃತಾನ್ನಮನಾರೋಗಿಸಿ ಕೆಯ್ಪುಟ್ಟಿಗೊಂಡು ತಾಂಬೂಲಮನಾದರಿಸುತ್ತುಮಂತಿಂತು ಕಂತುಮದಮರ್ದನಂ ನತಾಶೇಷಂ ಚತುರ್ಥಿಯಂ ಕಳೆದು ಸಾಕಾರನಿಧಿಯೋಕುಳಿಯಾಡಿ ಗಿರಿರಾಜಂಗೆ ಕರುಣಿಸುತ್ತುಂ ಮೇನಾ[೩]ದೇವಿಯರ[೩] ಮನ್ನಿಸುತ್ತುಂ ಗಿರಿಜೆಯನಾಲಂಗಿಸುತ್ತುಂ ವೃಷಭಸಮಾರೂಢಂ ದಶಭುಜ ಪ್ರಖ್ಯಾತಂ ಮಹಿಮಾನಿಧಿ ಮಹಾದೇವನುರಗಾ-ಭರಣಂ ಗಜಾಜಿನಾವರಣಂ ಶರಣಕುಲಕಲ್ಪವೃಕ್ಷಂ ಸಕಲದೇವಗಣಪರಿವೃತಂ ಶೈಳಜಾವರಂ ಶೂಳಧರಂ ಭಾಳೇಂದು ಮೌಳಿ ಕೈಲಾಸಾಭಿಮುಖನಾಗಿ,

ಚಂಪಕ

ಬಳುವಳಿಯಾನೆಯಂ ಬಳಿಯ ರತ್ನಮುಮಂ ಬಳಿಯಶ್ವವೀಥಿಯಂ
ಬಳುವಳಿಯರ್ಥಮಂ ಬಳಿಯ ನಾಣೆಯುಮಂ ಬಳಿಯಾಪ್ತವರ್ಗಮಂ
ಬಳುವಳಿಯಂಗನಾನಿಕರಮಂ ಪಡೆಪಿಂದವಳೋಕಿಸುತ್ತೆ ಕೋ
ಮಳ[೪]ಪುಳಕಂ[೪]ಗಳೀಳ್ಗೆಯನೊಡಂಬಡುತುಂ ನಡೆತಂದನೀಶ್ವರಂ ೯೯

ಆ ಸಮಯದೊಳ್,

೧-೧ ದುರ್ವಾಲಯ (ಅ). ೨-೨ ಗಣಂಗಳು (ಕಾ); ಗಣತತಿ (ಅ). ೩-೩ ದೇವಿಯಂ (ಕಾ); ದೇವಿಯ (ಅ). ೪-೪ ವಶನಂ (ಅ).

ಹರನೀ ಬಂದನೆ ಗಿರಿಜಾ
ವರನೀ ಬಂದನೆ ಮಹೇಶನೀ ಬಂದನೆ ಶಂ
ಕರನೀ ಬಂದನೆನುತ್ತುಂ
ಪರೆದುವು ದೆಸೆದೆಸೆಗೆ ಬಹಳಕಹಳಾನಾದಂ ೧೦೦

ಅಂತು ಕರೆವ ಕಹಳಾನಾದಮಂ ಕೇಳುತ್ತುಂ ನಡೆತಂದು ಕೈಲಾಸಪುರದ್ವಾರ [1]ವಲಯದೊಳ್[1] ಪುಗುತರ್ಪಾಗಳ್,

ಕಟ್ಟಿದ ಗುಡಿಗಳ ಮುಗಿಲಂ
ಮುಟ್ಟಿದ ತೋರಣದ ನೆರೆದು ನೋಳ್ಪಬಲೆಯರೊಂ
ದೊಟ್ಟಜೆಗಳ ಲಾವಣ್ಯಮ
ದಿಟ್ಟಣಮೆನಿಸಿತ್ತು ಶಿವನ ಕಣ್ಗಂ ಮನಕಂ ೧೦೧

ಅಂತುಮಲ್ಲದೆಯುಂ,

ಮತ್ತೇಭ

ತರದಿಂ ವೇದಿಕೆಯೇಱಿ ಭದ್ರಚಯಮಂ ಬಂದೇಱಿಯುತ್ಸಾಹದಿಂ
ಕರುಮಾಡಂಗಳನೇಱಿ ವೃಕ್ಷಕುಲಮಂ ಸಾರ್ದೇಱಿಯೊಪ್ಪಿರ್ಪ ಗೋ
ಪುರವೃಂದಗಳನೇಱಿ ಶೀತಕರಬಿಂಬವ್ರಾತಮೇಳ್ತಂದವೋ
ಲರವಿಂದಾಕರಮೇಳ್ದವೋಲ್ ತುಱುಗಿ ನೋಡಿತ್ತಲ್ಲಿ ಕಾಂತಾಜನಂ ೧೦೨

ಅಂತು ನೋಡುವ ಕಾಂತೆಯರೊಳೊರ್ವಳ್,

ಚಂಪಕ

ನಡುವೆ ವಿಳಾಸದಿಂ ವೃಷಭರಾಜನನೇಱಿದವಂ ಶಿವಂ ಸಮಂ-
ತೊಡನೆ ಮಹೇಶನಂ ಪ್ರಿಯದೊಳಪ್ಪಿದಳ್ ಗಿರಿಜಾತೆಯಾಹ ಜಿ-
ಲ್ಪೊಡರಿಸಿತಾಹ ದಂಪತಿಗಳಾಹ ಜಗತ್ಪ್ರಭುಗಳ್ ಸುಭಾಗ್ಯರೆ-
ನ್ನೊಡೆಯರೆನುತ್ತೆ ಕೆಯ್ಮುಗಿದು ಬಣ್ಣಿಸುತಿರ್ದಳತಿಪ್ರಮೋದದಿಂ ೧೦೩

ಮತ್ತಮೊರ್ವಳುಮಾಮಹೇಶ್ವರರಂ ಕಂಡು ಕೊಂಡುಕೊನೆಯುತ್ತಿರ್ದ-
ಳದೆಂತೆಂದೊಡೆ,

೧-೧ ವಲಯುಮಂ (ಕಾ ಅ).

ಸ್ಥಿರದಂಪತಿಗಳ್ ಮಂಗಳ
ಕರದಂಪತಿಗಳ್ ಭಾ
ಸುರದಂಪತಿಗಳ್ ವಸುಧಾ
ವರದಂಪತಿಗಳ್ ಮನೋಜಹರದಂಪತಿಗಳ್ ೧೦೪

ಎಂದು ಪೊಗಳುತ್ತುಮಿರೆಯಿರೆ,

ಇಂತಿಂತೊಪ್ಪುವ ಸಂಭ್ರಮ
ಮಂ ತವೆ ನೋಡುತ್ತೆ ಪಡೆದು ಕೊಂಡಾಡುತ್ತುಂ
ಕಂತುಹರಂ ಸಂತಸದಿಂ
ಮುಂತಣ ಕೈಲಾಸದರಮನೆಗೆ ನಡೆತಂದಂ ೧೦೫

ಅಂತೊಳಪೊಕ್ಕು ಬಂದಾಗಳ್,

ಉತ್ಪಲ

ಆರತಿಯೆತ್ತೆ ರುದ್ರಗಣಿಕಾನಿಕರಂ [೧]ಸರಸೀಜನಾಭನುಂ[೧]
[೨]ನೀರಜ[೨]ಪುತ್ರನುಂ ಹೊಗಳೆ ದೇವಗಣಾಳಿಯುಳ್ಕುಱಿಂದೆ ಕೆಯ್
ವಾರಿಸೆ ನಂದಿಯಿಂದುಮಿಳಿದುನ್ನತಸನ್ನುತಸಿಂಹಪೀಠಮಂ
ತಾರಗಿರೀಂದ್ರನಾಥನೊಸೆದೇಱಿದನದ್ರಿಸುತಾಸಮನ್ವಿತಂ ೧೦೬

ಅಂತು ಸಿಂಹವಿಷ್ಟರಮನೇಱಿ,

ಗಿರಿಪತಿಯುಂ ಮೇನೆಯುನಾ
ದರದಿಂ ಬೀಳ್ಕೊಟ್ಟು ಮುಕುಟರತ್ನಪ್ರಕರ
ಸ್ಫುರಿತಪ್ರದ್ಯೋತಪ್ರೋ
ತ್ಕರವಿಳಸಿತ[೩]ವಳಯ[೩]ದೊಳಗೆ ಶಿವನೆಸೆದಿರ್ದಂ ೧೦೭

ಆಗಳ್ ಗಿರಿರಾಜನುಂ ಮೇನೆಯುಂ ಬೀಳ್ಕೊಳುತುಂ ಪಾರ್ವತಿಯುಂ ನೋಡಿ.

ಉತ್ಪಲ

ಮಾತೆ ಶಿವಂ ಪಿತಂ ಶಿವನನಂತಬಲಂ ಶಿವನೂರ್ಜಿತಂ ಶಿವಂ
ನೀತಿ ಶಿವಂ ಸ್ಥಿರಾಯು ಶಿವನೊಳ್ಪು ಶಿವಂ ಸುಕೃತಂ ಘನ
ಖ್ಯಾತಿ ಶಿವಂ ಧವಂ ಶಿವನಪಾರಸುಖಂ ಶಿವನದ್ರಿಜಾತೆ ಸಂ
ಪ್ರೀತಿ ಶಿವಂ ಶಿವಂ ನಿನಗೆ ಚಿಂತಿಸದಿರ್ ಮಱೆದೆಮ್ಮನೊರ್ವೆಯುಂ ೧೦೮

೧-೧ ಸರಸೀರುಹಾಕ್ಷನುಂ (ಅ) ೨-೨ ವಾರಿಜ (ದಾ. ಕಾ.) ೩-೩ ನಿಳಯ (ಕಾ ಬಿ ಯು).

ಎಂದುಳ್ಳುದನುಪಚಾರವಿಲ್ಲದೆ ನುಡಿದು [೧]ಸಾದರಂ[೧] ಪೋದರಿತ್ತಲ್ ಚಂಡಕೀರ್ತಿಗಳ್ ಮೆಯ್ಯಿಕ್ಕಿ ನಿಂದು ಕೆಯ್ಯಂ ಮುಗಿದು,

ಚಂಪಕ

ಅತುಳಕಪಾಲಿ ಪಾಲಿಪುದುಮಾಪತಿ ಮಾಪತಿರಾಜ ರಾಜಭೂ
ಷಿತ ಸಿತಭಸ್ಮಭಸ್ಮಮಯಮನ್ಮಥ[೨]ವಿಗ್ರಹವಿಗ್ರಹ[೨] ಪ್ರಜಾ
ನತ ನತಸಿದ್ಧ ಸಿದ್ಧಸಕಳಾತ್ಮ ಕಳಾತ್ಮ ವಿಶೇಷಶೇಷಭೂ
ಷಿತ ಜಿತಕಾಲ ಕಾಲವಿಲಸದ್ಗಳ ಸದ್ಗಳ ಹಂಪೆಯಾಳ್ದನೇ ೧೦೯

ಕರುಣಿಸು ನಾಥ ನಾಥಕುಲಸೇವಿತ ಸೇವಿತಕಾಲ ಕಾಲಸಂ
ಹರಣ ರಣಾಗ್ರರಂಜಿತಜಿತಾಮರತಾಮರಸಾಕ್ಷ[೩]ಸಾಕ್ಷಸಂ[೩]
ಸ್ಮರ ನಿಜದರ್ಪದರ್ಪಕವಿನಾಶ ವಿನಾಶನಿಕಾಯಕಾಯವಿ
ಸ್ತ್ರರಿತಭುಜಂಗ ಜಂಗಮಕೃಪಾ[೪]ವನ[೪]ಪಾವನ ಹಂಪೆಯಾಳ್ದನೇ *೧೧೦

ಎಂದಿಂತು ಸಂತಸದಿಂ ಕೆಯ್ವಾರಂ ಮಾಡೆ ಕೇಳ್ದು ದಂಡಧರಗರ್ವಪರ್ವತಕುಲಿಶಂ ಕುಸುಮಕೋದಂಡಕುಮುದಮಾರ್ತಂಡಂ ಪುರತ್ರಯಮೇಘ[೫]ಮಹಾನಿಲಂ[೫] ಶತಪತ್ರಪುತ್ರಶಿರಚ್ಛೇದನಕರಂ ಸರೋಜನಯನನಯನಸರೋಜಪೂಜಿತಪದಂ ಜಲಂಧರಮರಾಳಮೇಘ[೬]ಗರ್ಜಿತಂ[೬] ಅಂಧಕಾಸುರಾರಣ್ಯದಾವಾನಳಂ ಲಾಲಾಸುರೇಭಪಂಚಾನನಂ ದುರಿತಪಂಚಾನನಶರಭಮೂರ್ತಿ ದಕ್ಷಮಖನಿರ್ಧೂಮಧಾಮಂ ಚತುರ್ದಶಭುವನಚಕ್ರಭಾಸ್ಕರಂ ಬ್ರಹ್ಮಾಂಡಭರಿತಕೀರ್ತಿಮಯಂ ಸರ್ವಬ್ರಹ್ಮಾಂಡಫಳಭರಿತಮಹಾಮಹೀರುಹಂ ವರನಿಜಯರಚಿತಪ್ರಶಸ್ತಹಸ್ತಂ ಸೋಮಧರಂ ಸೋಮಂ [೭]ಸಾಮಗೇಯ[೭]ಪ್ರಿಯಂ ವಿಮಳತ್ರಿಣೇತ್ರಂ ಕಮಲಜಶಿರಃಪಾತ್ರಂ ಸುರರಾಜರಾಜಂ ಶರಣಸುರಭೂಜಂ ದೇವಗಣಸಮಾಜಂ ರವಿಕೋಟಿತೇಜಂ ಶೃಂಗಾರಸಾರಂ ವೀರರಸಪೂರಂ ರೌದ್ರಪ್ರತಾಪಂ ಭಯಾನಕರೂಪಂ ಪಿನಾಕಚಾಪಂ ಸಜ್ಜನಸವಿಾಪಂ ಅದ್ಭುತಶೀಲಂ ಶೈಲಜಾಲೋಲಂ ಘನಘನಸ್ಥೂಲಂ ವಿಶ್ವಲೋಕಪಾಲಂ ನತಜನವಿತತಸಂಪದಂ ಪ್ರೇಮಜನಕಾಮದುಘಂ ಭಕ್ತಜನಭಾಗ್ಯೋದಯಂ ಮುಕ್ತಿಪ್ರದಾಯಕಂ [೮]ಪ್ರಮಥಗಣ[೮]ಪುಣ್ಯ[೯]ಫಲಾಕಾರಂ[೯] ಕೃಪಾಮೇರು ದಯಾನಿಧಿ ಪಾರ್ವತೀಪ್ರಾಣನಾಥನೆನಿಪ ಪಂಪಾಪುರಾಧಿಪ ಶ್ರೀವಿರೂಪಾಕ್ಷಂ ಚಂಡಕೀರ್ತಿಗಳ್ಗೆ ಮಚ್ಚಿ ಪಸಾಯನಮನಿತ್ತು,

---

೧-೧ ಶಾರದಿಂ (ಅ). ೨-೨ ಮನ್ಮಥವಿಗ್ರಹೋ। ನ್ನತ (ಕಾ ಬೆ); ಮನ್ಮಥವಿಗ್ರಹಪ್ರಜೋ। ನ್ನತ (ಬ). ೩-೩ ಸಾ। ಕ್ಷರ (ಅ). ೪-೪ ಕರ (ಅ). * ೧೧೦ನೆಯ ಪದ್ಯವು ಕ ಡ ಪ್ರತಿಗಳಲ್ಲಿಲ್ಲ. ೫-೫ ಮಹಾಬಲಂ (ದಾ). ೬-೬ ಗರ್ಜಿತಮಹಾಮೇರುನಿಲಯಂ (ಅ ದಾ). ೭-೭ ಸಾಮಗಾನ (ಅ). ೮-೮ ಪ್ರಮಥಜನ (ಕಾ ಗೊ). ೯-೯ ಫಲಪ್ರಕಾನಂ ಕಾರುಣ್ಯಪಾರಾವಾರಂ (ಅ).

ಮತ್ತೇಭ

ಹರನುದ್ಯದ್ಗಿರಿಜಾಮನೋಹರಸುಖಾಂಭೋರಾಶಿಚಂಚತ್ಸುಧಾ
ಕಿರಣಂ ತತ್ಸುಖದಿಂದಮಿರ್ದುದಯಿಸಿರ್ದಾ ಸ್ಕಂದನಿಂ ತಾರಕಾ
ಸುರನಂ ತೀರ್ಚಿ ಸಮಸ್ತಲೋಕಜನತಾಸಂತುಷ್ಟಿಯಂ ಮಾಡಿ ಶಂ
ಕರನೊಪ್ಪಿರ್ದ[೧]ನುದಾರಿ ಹಂಪೆಯ ವಿರೂಪಾಕ್ಷಂ ಲಲಾಟೇಕ್ಷಣಂ[೧] ೧೧೧

ಹರಿಸಂ ಮಿಗೆ ಕೈಲಾಸದ
ಪುರದೊಳಗೊಪ್ಪಿರ್ದನಭವನದ್ವಯರೂಪಂ
ವರಶರಣಾಳಿಗೆ ಬೇಡಿದ
ವರ[೨]ವಂ ಕರುಣಿಸುತೆ[೨] ಹಂಪೆಯ ವಿರೂಪಾಕ್ಷಂ ೧೧೨

ಶಾರ್ದೂಲ

ಎಂದಿಂತೊಪ್ಪಿರೆ [೩]ಮಚ್ಚಿ ಮಚ್ಚಿ[೩] ಹರಿದೇವಂ ಪೇಳ್ದ ಸತ್ಕಾವ್ಯಮಂ
ಚೆಂದಂಬೆತ್ತಿರಲೋದುವಾರ್ಸುಖದಿಂ ಕೇಳ್ದಾದರಿಪ್ಪರ್ಗೆ ಸಾ
ನಂದಂ ಮಾಡುಗೆ ಪುಣ್ಯಭೋಗಚಯಮಂ ನಿತ್ಯಾಯುಮಂ ಶ್ರೀಯುಮಂ
ನಂದೀಶಾದಿಗಣಪ್ರತಾನದೊಡೆಯಂ ಪಂಪಾಪುರಾಧೀಶ್ವರಂ ೧೧೩

ಮಹಾಸ್ರಗ್ಧರೆ

ತರದಿಂದಂ ಶಬ್ದಮರ್ಥಂ ರಸವಿಸರಮಲಂಕಾರದಿಂ ತೀವುತೊಳ್ಪಂ
ಧರೆಯೊಳ್ ಕೆಯ್ಕೊಂಡು ಪಂಪಾ[೪]ಪುರದರಸ[೪]ವಿರೂಪಾಕ್ಷನಿತ್ತಾಜ್ಞೆಯಿಂದಂ
ಹರಿದೇವಂ ಭಕ್ತಿಯಿಂದಂ ಗುರುಕರುಣದಿನುತ್ಸಾಹದಿಂ ಮಚ್ಚಿ ಪೇಳ್ದಾ
ಗಿರಿಜಾಕಲ್ಯಾಣ[೫]ಮಿಂತೀ[೫] [೬]ಶಶಿರವಿಧರೆಗಳ್ ನಿಲ್ವಿನಂ[೬] ನಿಲ್ಕೆ ಸಂತಂ ೧೧೪

ಮತ್ತೇಭ

ಇಳೆಯೊಳ್ ಪೆರ್ಮೆಯುಂ ಸಮಸ್ತಫಲಮುಂ ಸಂತೋಷಮುಂ[೭] ಧರ್ಮಸಂ-
ಕುಳಮುಂ [೭]ಸತ್ಯಮುಮಿಷ್ಟರಾರ್ಚನೆಯ ಸೊಂಪುಂ ಶ್ರೀಯುಮಾಯುಂ ನಿರಾ
ಕುಳಮೆಂದುಂ ನೆಲಸಿರ್ಪುದೊಂದು ತೆಱನಂ ತಾಂ ಮಾಳ್ಕೆ ಸರ್ವೇಶ್ವರೀ
ವಿಳಸತ್ಸಂಗಸುಖಾಬ್ಧಿಶೀತಕಿರಣಂ ಪಂಪಾಪುರಾಧೀಶ್ವರಂ *೧೧೫

೧-೧ ನನೂನ ಸಂಪದಕರಂ ಪಂಪಾಪುರಾಧೀಶ್ವರಂ (ಬೆ ಬ ಗ ಅ). ೨-೨ ವರವಂ। ಕರುಣದೆ (ಕ). ೩-೩ ನಚ್ಚಿಮಚ್ಚಿ (ಶಾ ಅ). ೪-೪ ಪುರದಧಿಪ (ಶಾ ಬೆ ಗ). ೫-೫ ಕಾವ್ಯಂ (ಶಾ ಬೆ ಬ ಯ ಅ ಡ ಗ) ೬-೬ ರವಿಶಶಿರಸೆಗಳ್ ನಿಲ್ವಿನಂ (ಶಾ ಬೆ ಬ ಡ ಗ); ಶಶಿರವಿಧರೆ ನಿಲ್ವನ್ನೆಗಂ (ಅ) ೭-೭ ಧರ್ಮಮುಂ। ಕಳೆಯುಂ (ಶಾ). * ೧೧೪ ನೆಯ ಪದ್ಯದ ಮುಂದೆ ದಾ. ಪ್ರತಿಯಲ್ಲಿ:—"ನುತಿಯಿಂ ಸಕಲಗುಣಂಗಳ। ಶ್ರುತಿಗುಣದ ಕೀರ್ತಿಯಿಂ ಸಮಸ್ತ ಮಹೀಶ್ವರಾ॥ ಮತಿಯಾರಾಧನೆಯಿಂ ಪಾ। ರ್ವತಿಯೊಡನೀಶ್ವರನುರೆ ಮೆಚ್ಚಿವ ಪ್ರಸ್ತಾವದೊಳುಂ॥" ಎಂಬ ಪದ್ಯವಿದೆ.

ಮತ್ತೇಭ

ಪರಮಸ್ವಾಮಿ ಜಟಾಧರಂ ಶಶಿಧರಂ ಗಂಗಾಧರಂ ಕಾಲಸಂ
ಹರನಜ್ಞಾನಹರಂ ಪುರತ್ರಯಹರ ಸೌಖ್ಯಾಕರಂ ಶಂಭು ಶಂ
ಕರನಾನಂದಕರಂ ಸಮಂತೆನಗೆ ಭಕ್ತಿಜ್ಞಾನವೈರಾಗ್ಯಮಂ
ಕರುಣಂಗೆಯ್ಗೊಲವಿಂದೆ ಹಂಪೆಯ ವಿರೂಪಾಕ್ಷಂ ಶಿವಾವಲ್ಲಭಂ ೧೧೬

ಗದ್ಯ

ಇದು ಸಮಸ್ತಸುರಾಸುರನಿಕರಮಕುಟಖಚಿತದಿನಕರಕರಾಧಿಕ್ಯಮಾಣಿಕ್ಯ ಪ್ರಭಾಪುಂಜರಂಜಿತಚರಣನೆನಿಪ ಪಂಪಾವಿರೂಪಾಕ್ಷಶ್ರೀಪಾದಕಮಲಮಕರಂದಮಧುಕರಾಯಮಾನಸತ್ಕವೀಶ್ವರಹಂಪೆಯಹರಿಹರದೇವವಿರಚಿತಮಪ್ಪ

ಶ್ರೀ ಗಿರಿಜಾಕಲ್ಯಾಣಮಹಾಪ್ರಬಂಧದೊಳ್

ಪಾರ್ವತೀಪರಮೇಶ್ವರವಿವಾಹವರ್ಣನಂ ದಶಮಾಶ್ವಾಸಂ

ಗಿರಿಜಾಕಲ್ಯಾಣಂ ಸಮಾಪ್ತಂ

ಪರಿಶಿಷ್ಟ ೧

ಮಹಾಕಾವ್ಯದ ಲಕ್ಷಣಗಳು

(೧)

सर्गबन्धो महाकाव्यं तत्रैको नायकः सुरः ।
सद्वंशः क्षत्रियो वापि धीरोदात्तगुणान्वितः ॥

एकवंशभवा भूपाः कुलजा बहवोऽपि वा ।
शृङ्गारवीरशान्तानामेकोऽङ्गी रस इष्यते ॥

अङ्गानि सर्वेऽपि रसाः सर्वे नाटकसन्धयः ।
इतिहासोद्भवो वृत्तमन्यद्वा सज्जनाश्रयम् ॥

चत्वारस्तस्य वर्गाः स्युस्तेष्वेकं च फलं भवेत् ।
आदौ नमस्क्रियाशीर्वा वस्तुनिर्देश एव वा ॥

क्वचिन्निन्दा खलादीनां सतां च गुणकीर्तनम् ।
एकवृत्तमयैः पद्यैरवसानेऽन्यवृत्तकैः ॥

नातिस्वल्पा नातिदीर्घाः सर्गा अष्टाधिका इह ।
नानावृत्तमयः क्वापि सर्गः कश्चन दृश्यते ॥

सर्गान्ते भाविसर्गस्य कथायाः सूचनं भवेत् ।
सन्ध्यासूर्येन्दुरजनीप्रदोषध्वान्तवासराः ॥

प्रातर्मध्याह्नमृगयाशैलर्तुवनसागराः ।
सम्भोगविप्रलम्भौ च मुनिस्वर्गपुराध्वराः ॥

रणप्रयाणोपायमन्त्रपुत्रोदयादयः ।
वर्णनीयाः यथायोगं साङ्गोपाङ्गा अमी इह ॥

कवेर्वृत्तस्य वा नाम्ना नायकस्येतरस्य वा ।
नामास्य सर्गोपादेयकथाया सर्गनाम तु ॥

'ಸಾಹಿತ್ಯದರ್ಪಣ' ಉಲ್ಲಾಸ ೬ ಶ್ಲೋ. ೩೧೫-೩೨೪
Saradaranjan Ray's Edition, Page 427.

(೨)

सर्गबन्धो महाकाव्यमुच्यते तस्य लक्षणम् ।
आशीर्नमस्क्रियावस्तुनिर्देशो वापि तन्मुखम् ॥

इतिहासकथोद्भूतमितरद्वा सदाश्रयम् ।
चतुर्वर्गफलोपेतं चतुरोदात्तनायकम् ॥

नगरार्णवशैलर्तुचन्द्रार्कोदयवर्णनैः ।
उद्यानसलिलक्रीडामधुपानरतोत्सवैः ॥

विप्रलम्भैर्विवाहैश्च कुमारोदयवर्णनैः ।
मन्त्रदूतप्रयाणाजिनायकाभ्युदयैरपि ॥

अलङ्कृतमसंक्षिप्तं रसभावनिरन्तरम् ।
सर्गैरनतिविस्तीर्णैः श्रव्यवृत्तैः सुसन्धिभिः ॥

सर्वत्रमित्रवृत्तान्तैरुपेतं लोकरञ्जकम् ।
काव्यं कल्पान्तस्थायि जायते सदलङ्कृति ॥

न्यूनमप्यत्र यैः कैश्चिदङ्गैः काव्यं न दूष्यति ।
यद्युपात्तेषु सम्पत्तिराधायति तद्विदः ॥

गुणतः प्रागुपन्यस्य नायकं तेन विद्विषाम् ।
निराकरणमित्येष मार्गः प्रकृतिसुन्दरः ।

वंशवीर्यश्रुतादीनि वर्णयित्वा रिपोरपि ।
तज्जायान्नायकोत्कर्षवर्णनञ्च धिनोति नः ॥

ದಂಡಿಯ ಕಾವ್ಯಾದರ್ಶ, ಪ್ರಥಮ ಪರಿಚ್ಛೇದ ಶ್ಲೋಕ ೧೪-೨೨.

(೩)

ಮಹಾಕಾವ್ಯದ ಹದಿನೆಂಟು ಅಂಗಗಳು

(೧)

ವಾರಿಧಿ ಪರ್ವತಂ ಪುರಮಧೀಶ್ವರನುದ್ವಹನಂ ಕುಮಾರನಂ
ಭೋರುಹವೈರಿಮಿತ್ರರುದಯಂ ಋತುನಂದನಮಂಬು ಸೀಧು ಕಾಂ |
ತಾರತಿ ಚಿಂತೆ ಮಂತ್ರ ಚರಯಾನ ವಿರೋಧಿಜಯಂಗಳೆಂಬಿವಂ
ಸೂರಿಗಳಂಗಮೆಂದು ಕೃತಿಯೊಳ್ ಪದಿನೆಂಟುಮನೆಯ್ದೆ ಬಣ್ಣಿಪರ್ ||

(೨)

ಪುರವಾರಾಶಿನಗರ್ತುಚಂದ್ರತಪನೋದ್ಯಾನಾಂಬುಕೇಳೀಸುರಾ
ಸುರತಕ್ರೀಡನ ವಿಪ್ರಲಂಭ ಲಲನಾಕಲ್ಯಾಣಪುತ್ರೋದಯಂ |
ಸ್ಫುರಿತಾಳೋಚನ ಮಂತ್ರ ದೂತಗಮನಾಜಿ ಸ್ತ್ರೀಸುಖವ್ಯಾಪ್ತಿಗಳ್
ದೊರೆಕೊಳ್ಗುಂ ಕವಿವರ್ಣನಕ್ಕೆ ಪದಿನೆಂಟಂಗಂ ಮಹಾಕಾವ್ಯದೊಳ್ ||

(೩)

ಉದಧಿ ಪುರಾಧಿಪಸುತ ಮಂ
ತ್ರದೂತಗಮನಾಜಿ ವಿರಹ ಪರಿಣಯ ಸುರತ |
ರ್ತುದಿನೇಶ ಚಂದ್ರಮಧು ಕುಭೃ
ದುದಕ ವನಸ್ಪತಿಯೆ ಕೃತಿಗೆ ಪದಿನೆಂಟಂಗಂ ||

ಸೂಕ್ತಿಸುಧಾರ್ಣವ, ಅಶ್ವಾಸ ೧. ಪದ್ಯಗಳು ೬೬, ೬೭, ೬೮

ಪರಿಶಿಷ್ಟ ೨

ಛಂದಸ್ಸು

ವಿಸ್ತಾರವಾದ ವಿಷಯಗಳನ್ನು ಸ್ವಲ್ಪಾಕ್ಷರಗಳಲ್ಲಿ ರಸವತ್ತಾಗಿ ಸಾರವತ್ತಾಗಿ ಮತ್ತು ಪರಿಣಾಮಕಾರಿಯಾಗಿ ತಿಳಿಸಲು ಪದ್ಯಗಳು ಬಹಳ ಅನುಕೂಲವಾದುವು. ಪದ್ಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಲು ಬರುವಂತೆ ಅವುಗಳಲ್ಲಿ ಅಕ್ಷರಗಳ ಮಿತಿ ಮತ್ತು ಕ್ರಮವಿದೆ. ಪದ್ಯಗಳ ಸ್ವರೂಪವನ್ನು ತಿಳಿಸುವ ಶಾಸ್ತ್ರಕ್ಕೆ ಛಂದಸ್ಸೆಂದು ಹೆಸರು. ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು, ಜ್ಯೋತಿಷಗಳೆಂಬ[೧] ಆರು ವೇದಾಂಗಗಳಲ್ಲಿ ಛಂದಸ್ಸು ಒಂದು. 'ಛದಿ ಆಹ್ಲಾದೇ' 'ಚಂದೇರಾದೇಶ್ಚ ಛಃ|ಛಂದಃ'[೨] ಎಂಬ ಸೂತ್ರದಿಂದ ಛಂದಸ್ಸು ಶಬ್ದವು ನಿಷ್ಪನ್ನವಾಗಿ "ಚಂದತಿ ಆಹ್ಲಾದಯತಿ ವೈದಿಕಾನಿತಿ ಛಂದಃ ವೇದಃ ಇತಿ ಯಾವತ್" "ಛಾದಯತಿ ಪಾಪಾನೀತಿ ಛಂಧಃ" ವೈದಿಕರನ್ನು ಆಹ್ಲಾದಪಡಿಸುವುದರಿಂದ, ಪಠಿಸುವವರ ಪಾಪವನ್ನು ಕಳೆಯುವುದರಿಂದ ವೇದಕ್ಕೆ ಛಂದಸ್ಸೆಂದು ಹೆಸರು.

ಛಂದಶ್ಶಾಸ್ತ್ರವು ಅತಿ ಪ್ರಾಚೀನತಮವಾದುದು. ಶಿವನು ಆದಿಯಲ್ಲಿ ಅದನ್ನು ಷಣ್ಮುಖನಿಗೆ ಅರುಹಿದನು. ಗುಹನು ನಂದಿಗೆ, ನಂದಿ ಸನತ್ಕುಮಾರನಿಗೆ, ಅವನು ಸುರಗುರುವಿಗೆ, ಬೃಹಸ್ಪತಿಯು ಇಂದ್ರನಿಗೆ, ಇಂದ್ರನು ಫಣಿಪತಿಗೆ, ಅವನು ಪಿಂಗಳನಿಗೆ ಹೀಗೆ ಕ್ರಮವಾಗಿ ಅದನ್ನು ಉಪದೇಶಿಸಿದರು. ಗುರು ಪಿಂಗಳನಿಂದ ಪಡೆದ ಈ ಶಾಸ್ತ್ರವನ್ನು ಮಹಾತ್ಮರಾದ ಆತನ ಶಿಷ್ಯರು ಭೂಮಿಯಲ್ಲಿ ಪ್ರಸಾರ ಮಾಡಿದರು[೩]

ಕನ್ನಡದಲ್ಲಿರುವ ಛಂದಶ್ಶಾಸ್ತ್ರಗಳಲ್ಲಿ ಅತಿ ಪ್ರಾಚೀನವಾದ ಛಂದೋಂಬುಧಿಯಲ್ಲಿ ನಾಗವರ್ಮನು "ಇಂದುಧರನು ಉಮೆಗೆ ಪೇಳ್ದಾ ಛಂದಶ್ಶಾಸ್ತ್ರವು ಪಿಂಗಳನಿಂದ ಅವನಿಯೊಳ್ಪರಿಪಿ"[೪]ತೆಂದು ಉಲ್ಲೇಖಿಸಿರುವನು. ಈ ಶಾಸ್ತ್ರದ ಉಗಮ ಮತ್ತು ಗುರುಪರಂಪರೆ ಇಷ್ಟು ಘನವಾದುದು.

ಕನ್ನಡ ಛಂದಸ್ಸು ಸಂಸ್ಕೃತ ಛಂದಸ್ಸನ್ನೊಳಗೊಂಡು ಅತಿ ವಿಶಾಲವಾಗಿ ಬೆಳೆದಿರುವುದು. ಛಂದಶ್ಶಾಸ್ತ್ರಾಧ್ಯಯನಕ್ಕೆ ಮೂಲಪೀಠಿಕೆ ವಿಶೇಷವಾಗಿ ಗಣ, ಪ್ರಾಸ, ಯತಿಗಳೆಂದು ಹೇಳಬಹುದು. ಪ್ರಾಸ ಅಥವಾ ಅನುಪ್ರಾಸ ಕನ್ನಡದ ವೈಶಿಷ್ಟ್ಯ.

ಗಣ:— ಕೆಲವು ನಿಯಮಗಳಗನುಸರಿಸಿ ಜೋಡಿಸಿದ ಅಕ್ಷರ (ವರ್ಣ)ಗಳ ಗುಂಪಿಗೆ ಗಣವೆಂದು ಹೆಸರು. ಗಣಗಳು ವರ್ಣ ಮಾತ್ರಾ ಎಂದು ಎರಡು ವಿಧ.

ವರ್ಣ (ಅಕ್ಷರ) ಗಳು ಲಘು ಗುರುವೆಂದು ಎರಡು ಪ್ರಕಾರ. ಹ್ರಸ್ವಸ್ವರ ದಿಂದ ಕೂಡಿದ ವರ್ಣಗಳು ಲಘುವೆಂತಲೂ, ದೀರ್ಘಸ್ವರ, ಅನುಸ್ವಾರ, ವಿಸರ್ಗ ಪ್ಲುತಸ್ವರ ಇವುಗಳಿಂದ ಕೂಡಿದ ಅಕ್ಷರ, ಸಂಯುಕ್ತಾಕ್ಷರದ ಹಿಂದಿನ ಅಕ್ಷರ ಇವುಗಳಿಗೆ ಗುರುವೆಂತಲೂ ಸಂಜ್ಞೆ. ಲಘುವನ್ನು ಸಂಕ್ಷೇಪವಾಗಿ 'ಲ' ಎಂದೂ ಗುರುವನ್ನು 'ಗ' ಎಂದೂ ಸಂಕೇತಿಸುವರು. ಶಿಥಿಲವರ್ಣದ ಹಿಂದಿನ ಸ್ವರ ಲಘು ವೆನಿಸುವುದು. ಪಾದಾಂತ್ಯದ ಲಘು ವಿಕಲ್ಪದಿಂದ ಗುರುವೆನಿಸುವುದು. ಲಘುವನ್ನು '◡' ಈ ಚಿಹ್ನದಿಂದ ಗುರುವನ್ನು '—' ಈ ಚಿಹ್ನದಿಂದ ಸೂಚಿಸುವರು.

ಗುರುಲಘುವರ್ಣಗಳನ್ನು ಮೂರು ಮೂರಾಗಿ ಗುಂಪುಮಾಡಿದರೆ ಎಂಟು ಗುಂಪುಗಳಾಗುವವು. ಅವು ಎಂಟು ಗಣಗಳು. ಅವುಗಳನ್ನು ಎಂಟು ವರ್ಣ (ಅಕ್ಷರ) ಗಳಿಂದ ಗುರುತಿಸುವರು.

ಮೂರು ಗುರುಗಳು	— — —	ಮಗಣ	ಕಲ್ಲೆಲ್ಲಂ
ಮೂರು ಲಘುಗಳು	◡ ◡ ◡	ನಗಣ	ಅಮರ
ಆದಿ ಲಘು	◡ — —	ಯಗಣ	ತರಂಗಂ
ಮಧ್ಯಲಘು	— ◡ —	ರಗಣ	ಬೀಣೆಯಂ
ಅಂತ್ಯಲಘು	— — ◡	ತಗಣ	ಪೂಮಾಲೆ
ಆದಿಗುರು	— ◡ ◡	ಭಗಣ	ಕೋಮಲ
ಮಧ್ಯಗುರು	◡ — ◡	ಜಗಣ	ಮಯೂಖ
ಅಂತ್ಯಗುರು	◡ ◡ —	ಸಗಣ	ಗಿಳಿಯಂ

ಈ ವರ್ಣ ಗಣಗಳ ನಿಯಮಕ್ಕೆ ಬದ್ಧವಾಗಿ ಇವುಗಳನ್ನೊಳಗೊಂಡ ಪದ್ಯಗಳಿಗೆ ವರ್ಣ ವೃತ್ತಗಳೆಂದು ಹೆಸರು.

ಒಂದು ಲಘುವಿಗೆ ಒಂದು ಮಾತ್ರೆ. ಒಂದು ಗುರುವಿಗೆ ಎರಡು ಮಾತ್ರೆಗಳು. ಮೂರು ಮೂರು, ನಾಲ್ಕು ನಾಲ್ಕು, ಐದೈದು ಮಾತ್ರೆಗಳನ್ನು ಕೂಡಿಸಿ ಮಾತ್ರಾ ಗಣಗಳನ್ನು ಮಾಡುವರು. ಅವು ಸಾಮಾನ್ಯವಾಗಿ ಮೂರು ಮಾತ್ರೆಗಳ, ನಾಲ್ಕು ಮಾತ್ರೆಗಳ, ಐದು ಮಾತ್ರೆಗಳ ಗಣಗಳೆಂದು ಮೂರು ವಿಧವಾಗಿರುವವು. ಮೂರು ಮೂರು ಮಾತ್ರೆಗಳ ಗಣಗಳು ಮೂರು ವಿಧ, ನಾಲ್ಕು ನಾಲ್ಕು ಮಾತ್ರೆಗಳ ಗಣಗಳು ಐದು ವಿಧ, ಐದೈದು ಮಾತ್ರೆಗಳ ಗಣಗಳು ಎಂಟು ವಿಧ, ಹೀಗೆ ಮಾತ್ರಾಗಣಗಳಲ್ಲಿ ಹದಿನಾರು ವಿಧಗಳುಂಟು. ಮಾತ್ರಾಗಣಗಳಲ್ಲಿ ಬರುವ ಒಂದು ಗುರುವಿನ ಎರಡು ಮಾತ್ರೆಗಳನ್ನು ಒಡೆದು ಬೇರೆ ಬೇರೆ ಗಣಗಳಿಗೆ ಹಂಚಕೂಡದು. ಮಾತ್ರಾಗಣಗಳ ನಿಯಮಕ್ಕನುಸರಿಸಿರುವ ಪದ್ಯಗಳು ಮಾತ್ರಾವೃತ್ತಗಳು.

ಪ್ರಾಸ:— ಪದ್ಯಗಳ ಪ್ರತಿಪಾದದಲ್ಲಿ ಎರಡನೆಯ ಅಕ್ಷರವು ಅಥವಾ ಸ್ವರದಿಂದ ಕೂಡಿದ ಎರಡನೆಯ ವ್ಯಂಜನವು ಒಂದೇ ವಿಧವಾಗಿರುವುದು ಪ್ರಾಸದ ಸಾಮಾನ್ಯ ಲಕ್ಷಣ. ದಂಡಿ ಇದಕ್ಕೆ ಅನುಪ್ರಾಸವೆಂದು ಕರೆಯುವನು. ಪಾದಗಳಲ್ಲಿ ಆಗಲಿ ಪದಗಳಲ್ಲಿ ಆಗಲಿ, ವರ್ಣವೃತ್ತಿಯು ಅನುಪ್ರಾಸವು.[೫] ಪದ್ಯಗಳ ಪಾದಗಳಲ್ಲಿ ಎರಡನೆಯ ವರ್ಣವು ಒಂದೇ ವಿಧವಾಗಿದ್ದರೆ ಅದು ಆದಿಪ್ರಾಸ. ಆದಿ ಪ್ರಾಸದಲ್ಲಿ ಆರು ವಿಧಗಳು. ಅವು:—

(೧) ಸಿಂಹಪ್ರಾಸ: ಪ್ರಾಸಾಕ್ಷರದ ಹಿಂದಿನ ಸ್ವರವು ಹ್ರಸ್ವವಿದ್ದರೆ

(೨) ಗಜಪ್ರಾಸ: ಪ್ರಾಸಾಕ್ಷರದ ಹಿಂದಿನ ಸ್ವರವು ದೀರ್ಘವಿದ್ದರೆ

(೩) ವೃಷಭಪ್ರಾಸ: ಪ್ರಾಸಾಕ್ಷರದ ಹಿಂದೆ ಅನುಸ್ವಾರವಿದ್ದರೆ

(೪) ಅಜಪ್ರಾಸ: ಪ್ರಾಸಾಕ್ಷರದ ಹಿಂದೆ ವಿಸರ್ಗವಿದ್ದರೆ

(೫) ಶರಭಪ್ರಾಸ: ಪ್ರಾಸಾಕ್ಷರ ಸಂಯುಕ್ತವ್ಯಂಜನವಿದ್ದರೆ ಆದರೆ ಅದರ ಹಿಂದೆ ಅನುಸ್ವಾರ ವಿಸರ್ಗಗಳಿರಬಾರದು.

(೬) ಹಯಪ್ರಾಸ: ಪ್ರಾಸಾಕ್ಷರ ಸಜಾತೀಯ ಸಂಯುಕ್ತಾಕ್ಷರವಿದ್ದರೆ

ಕವಿಗಳು ಪ್ರಾಸಿನ ನಿಯಮಗಳನ್ನು ಅಲ್ಲಲ್ಲಿ ಮೀರಿದ್ದುಂಟು. ಪದ್ಯಗಳಲ್ಲಿ ಅಂತ್ಯ ಪ್ರಾಸ ಬರುವುದೂ ಉಂಟು. ಆ ಸಂದರ್ಭದಲ್ಲಿ ಕಡೆಯ ಅಕ್ಷರದ ಸ್ವರ ಒಂದೇ ಇದ್ದು ಅದರ ಹಿಂದೆ ಇರುವ ದೀರ್ಘ ಹ್ರಸ್ವ ಸ್ವರಗಳಲ್ಲಿ ಸಾಮ್ಯವಿರಬೇಕು.

ಯತಿ:— ಪದ್ಯಗಳನ್ನು ಓದುವಾಗ ಅರ್ಥ ಮತ್ತು ಸ್ಫೂರ್ತಿ ಕೆಡದಂತೆ ಪದ್ಯಗಳ ಪಾದಗಳಲ್ಲಿ ನಿಯತವಾದ ಕಡೆಗಳಲ್ಲಿ ನಿಲ್ಲುವುದಕ್ಕೆ ಯತಿಯೆನ್ನುವರು.[೬] ಅದು ಶ್ರುತಿಸುಭಗವಾಗಿರಬೇಕು; ಗಣನಿಯಮಪ್ರತೀತವಾಗಿರಬೇಕು. ಸಂಸ್ಕೃತ ದಲ್ಲಿ ಯತಿಭಂಗ ದೋಷವಾಗುವುದು. ಕನ್ನಡ ಕವಿಗಳು ಅದನ್ನು ನಿಯತವಾಗಿ ಪಾಲಿಸಿಲ್ಲ. ಕೇಶಿರಾಜನು 'ಯತಿ ವಿಲಂಘನದಿಂದರಿದಲ್ತೆ ಕನ್ನಡಂ'[೭] ಎಂದು ಹೇಳಿರುವನು. ಆದುದರಿಂದ ಕನ್ನಡದಲ್ಲಿ ಯತಿಯು ಐಚ್ಛಿಕವಾಗಿರುವುದು.

ವರ್ಣವೃತ್ತಗಳು:— ವರ್ಣವೃತ್ತಗಳು ಸಾಮಾನ್ಯವಾಗಿ ಸಮ, ಅರ್ಧಸಮ ವಿಷಮವೆಂದು ಮೂರುವಿಧವಾಗಿರುವವು. ನಾಲ್ಕು ಪಾದಗಳಲ್ಲಿಯೂ ಒಂದೇ ಲಕ್ಷಣವಿರುವುದು ಸಮವೃತ್ತ; ಒಂದನೆಯ ಮತ್ತು ಮೂರನೆಯ ಪಾದಗಳೂ ಎರಡನೆಯ ಮತ್ತು ನಾಲ್ಕನೆಯ ಪಾದಗಳೂ ಸಮವಾಗಿರುವುದು ಅರ್ಧ ಸಮವೃತ್ತ. ನಾಲ್ಕೂ ಪಾದಗಳಲ್ಲಿ ಬೇರೆ ಬೇರೆ ಲಕ್ಷಣಗಳಿರುವುದು ವಿಷಮವೃತ್ತ.[೮] ವಿಷಮ ವೃತ್ತಗಳು ಸಂಸ್ಕೃತದಲ್ಲಿ ವಿಶೇಷವಾಗಿ ಬರುತ್ತವೆ. ಕನ್ನಡದಲ್ಲಿ ಕಂಡು ಬರುವುದಿಲ್ಲ.

ಸಮವೃತ್ತಗಳು:— ಸಂಸ್ಕೃತದಲ್ಲಿ ಪಾದವೊಂದಕ್ಕೆ ಒಂದಕ್ಷರದಿಂದ ಇಪ್ಪತ್ತಾರು ಅಕ್ಷರಗಳವರೆಗೆ, ಪ್ರತಿಪಾದದ ಅಕ್ಷರಸಂಖ್ಯೆಯನ್ನನುಸರಿಸಿ ಸಮವೃತ್ತಗಳು ಇಪ್ಪತ್ತಾರು ಗುಂಪುಗಳಾಗಿರುವವು.

